
# ವೇದಾಂತ ಸಂದೇಶಗಳು

## ಸಂಪುಟ-೧

## ಪರಮಾರ್ಥ ಚಿಂತನೆ



ಅಧ್ಯಾತ್ಮ ಪ್ರಕಾಶ ಕಾರ್ಯಾಲಯ
ಹೊಳೆನರಸೀಪುರ - 573211
08175-273820

## ಶ್ರೀ ಶ್ರೀಗಳವರ ಕೃತಿಗಳು

(ಅ. ಪ್ರ. ಪತ್ರಿಕೆಯ ಆಯ್ದ ಲೇಖನಗಳ ಸಂಗ್ರಹ)

### ಪ್ರಕಾಶನಗೊಂಡಿರುವ ಕೃತಿಗಳ ಕಿರುಪರಿಚಯ

**1. ಋಗ್ವೇದೀಯ ಪುರುಷಸೂಕ್ತ : (ಮಂತ್ರಾರ್ಥ ವಿವೇಚನ)** ಅ.ಪ್ರ. ಮಾಸ ಪತ್ರಿಕೆಯ 24ನೆಯ ಸಂಪುಟದ (ಸೆಪ್ಟೆಂಬರ್ 1954ರಿಂದ ಆಗಸ್ಟ್ 1955) 12 ಲೇಖನಗಳ ಸಂಕಲನ. ನಿಜವಾದ ಅರ್ಥವು ತಾತ್ತ್ವಿಕವಾಗಿ ಹೇಗೆ ವಿಸ್ತೃತವಾಗಿದೆ ಮತ್ತು ಕೇವಲ ಕರ್ಮಪರವಾಗಿರದೆ, ಭಕ್ತಿ, ಉಪಾಸನೆ, ಜ್ಞಾನಪರಂಪರೆಯಾಗಿದೆ ಎಂಬುದನ್ನು ಹೃದಯಕ್ಕೆ ತಾಗುವ ಹಾಗೆ ಶ್ರೀ ಶ್ರೀಗಳವರು ಪ್ರತಿಪಾದಿಸಿದ್ದಾರೆ. ಎಲ್ಲಾ ವೇದದವರಿಗೂ ಮತ್ತು ಆಸ್ತಿಕ ಮಹಾಶಯರೆಲ್ಲರಿಗೂ ಉಪಯುಕ್ತವಾದ ಗ್ರಂಥ.

**(2ನೆಯ ಮುದ್ರಣ 2011, ಡೆಮ್ಮಿ 1/8, ಪುಟ–115, ಬೆಲೆ 30 ರೂ.)**

**2. ವೇದಾಂತ ಸಂದೇಶಗಳು : ಸಂಪುಟ 1 (ಪರಮಾರ್ಥ ಚಿಂತನೆ) :** 1946 ಸೆಪ್ಟೆಂಬರ್‌ನಿಂದ 1949 ಆಗಸ್ಟ್‌ರವರೆಗೆ "**ಈ ತಿಂಗಳ ಸಂದೇಶ**" ಎಂಬ ಶೀರ್ಷಿಕೆಯಲ್ಲಿ ಪ್ರಕಟಿಸಿದ್ದ 36 ಲೇಖನಗಳ ಸಂಗ್ರಹ. "ಭಗವಂತನಿಗೆ ಯಾವ ಹೆಸರು, ಪರಮಾತ್ಮನನ್ನು ಎಲ್ಲಿ ಕಾಣಬೇಕು, ಸ್ತೋತ್ರ ಮತ್ತು ಪ್ರಾರ್ಥನೆಗಳನ್ನು ಹೇಗೆ ಮಾಡಬೇಕು, ದುಃಖ, ಕಷ್ಟ ಪರಿಹಾರಕ್ಕೆ ಭಗವಂತನನ್ನೇ ಶರಣು ಹೊಂದಬೇಕು" ಎಂಬಿವೇ ಮುಂತಾದ ಭಕ್ತಿ, ಜ್ಞಾನ, ವೈರಾಗ್ಯ ಇತ್ಯಾದಿ ವಿಚಾರಗಳಿಂದ ತುಂಬಿದೆ. ಸಂಸ್ಕೃತ ಬಾರದವರಿಗೂ ಸರಿಯಾದ ಗುರುಗಳು ದೊರಕದವರಿಗೂ ಮಾರ್ಗದರ್ಶನವಾಗಿದೆ.

**(2ನೆಯ ಮುದ್ರಣ 2011, ಡೆಮ್ಮಿ 1/8, ಪುಟ–218, ಬೆಲೆ ರೂ. 50)**

**3 ವೇದಾಂತ ಸಂದೇಶಗಳು : ಸಂಪುಟ 2 (ಉಪನಿಷತ್ತು) :** 8, 9, 21, 26, 27 ಸಂಪುಟಗಳಲ್ಲಿ ಪ್ರಕಟಿಸಿದ್ದ 52 ಲೇಖನಗಳ ಸಂಗ್ರಹ. ಮೊದಲು ದಶಶಾಂತಿ ಮಂತ್ರದ ಅರ್ಥ ಮತ್ತು ವಿವರಣೆ, ಅನಂತರ (1) ಇಂದಿನ ಅರಿವು (2) ಆನಂದ ಸ್ವರೂಪವಾದ ಆತ್ಮವಿಚಾರ (3) ಆಧ್ಯಾತ್ಮ ಸಾಧನೆ (4) ಜ್ಞಾನ ಸಾಧನಗಳು (5) ಸಾಧನ ಕ್ರಮ ಎಂಬ ಐದು ಅಧ್ಯಾಯಗಳಲ್ಲಿ ಲೇಖನಗಳನ್ನು ಅಳವಡಿಸಿದೆ. ಮುಮುಕ್ಷುಗಳಿಗೆ ಕೈಪಿಡಿಯಾಗಿರುವಂಥ ಗ್ರಂಥ.

**(1ನೆಯ ಮುದ್ರಣ 2010, ಡೆಮ್ಮಿ 1/8, ಪುಟ, 247, ಬೆಲೆ 50 ರೂ.)**

....... ರಕ್ಷಾಕವಚದ ಮರುಹಾಳೆಯಲ್ಲಿ ಮುಂದುವರೆದಿದೆ.

ಅಧ್ಯಾತ್ಮ ಗ್ರಂಥಾವಳಿ :

# ವೇದಾಂತ ಸಂದೇಶಗಳು : ಸಂಪುಟ–1

## (ಪರಮಾರ್ಥ ಚಿಂತನೆ)


ಅನುವಾದಕರು :

ಶ್ರೀ ಶ್ರೀಸಚ್ಚಿದಾನಂದೇಂದ್ರ ಸರಸ್ವತೀ ಸ್ವಾಮಿಗಳು

ಪೂರ್ವಾಶ್ರಮದ ಯಲ್ಲಂಬಳಸೆ ಸುಬ್ರಹ್ಮಣ್ಯ ಶರ್ಮ,

(ವೈ. ಸುಬ್ಬರಾವ್)



ಕ್ರಮಾಂಕ : 241

ಪ್ರಕಾಶಕರು :

ಅಧ್ಯಾತ್ಮ ಪ್ರಕಾಶ ಕಾರ್ಯಾಲಯ

ಪಬ್ಲಿಕ್ ಛಾರಿಟಬಲ್ ಟ್ರಸ್ಟ್

ಹೊಳೆನರಸೀಪುರ – 573211

ದೂರವಾಣಿ : 08175 – 273820

2011

ಮೊದಲನೆಯ ಮುದ್ರಣ : 2009 – 1000 ಪ್ರತಿಗಳು
ಎರಡನೆಯ ಮುದ್ರಣ : 2011 – 1000 ಪ್ರತಿಗಳು

ಇದರ ಹಕ್ಕುಗಳೆಲ್ಲವೂ ಅಧ್ಯಾತ್ಮ ಪ್ರಕಾಶ ಕಾರ್ಯಾಲಯದವು

ಪುಟಗಳು : 8 + 210
ಬೆಲೆ : 50 ರೂ.

ಅಕ್ಷರ ಜೋಡಣೆ : arka ಕ್ರಿಯೇಶನ್ಸ್
98807 25199

ಮುದ್ರಕರು :
ಪರಿಮಳ ಮುದ್ರಣಾಲಯ
ನಂ. 4/1, "ಎ" ಅಡ್ಡರಸ್ತೆ,
ಬ್ಯಾಟರಾಯನಪುರ, ಮೈಸೂರು ರಸ್ತೆ,
ಬೆಂಗಳೂರು–560 026
ದೂರವಾಣಿ : 26758058

# ವೇದಾಂತ ಪ್ರತಿಪಾದ್ಯ ಮಹಿಮರು

**ಶ್ರೀ ಶ್ರೀ ಸಚ್ಚಿದಾನಂದೇಂದ್ರ ಸರಸ್ವತೀ** ಸ್ವಾಮಿಗಳವರಿಗೆ ವೇದಾಂತವೇ ಉಸಿರು, ವೇದಾಂತ ಪ್ರಸಾರವೇ ಜೀವನದ ಏಕೈಕ ಧ್ಯೇಯವಾಗಿತ್ತು ಎನ್ನುವುದು ಅತಿಶಯವಲ್ಲದ ಸಂಪೂರ್ಣ ಸತ್ಯ. ವಿದ್ಯಾರ್ಥಿ ದೆಸೆಯಲ್ಲಿಯೇ ವೇದಾಂತದಲ್ಲಿ ಆಸಕ್ತಿ, ಒಲವನ್ನು ರೂಢಿಸಿಕೊಂಡು, ಅದನ್ನು ಆಸ್ಥೆಯಿಂದ ಬೆಳೆಸಿ, ಸತತವಾದ ಅಧ್ಯಯನ ಚಿಂತನೆಗಳಿಂದ ಗಳಿಸಿದ ವೇದಾಂತಜ್ಞಾನವನ್ನು ತಮ್ಮಲ್ಲೇ ಬಚ್ಚಿಟ್ಟುಕೊಳ್ಳದೆ, ಸುತ್ತಲಿನ ಜನಸ್ತೋಮಕ್ಕೆ ಹಂಚುವದಕ್ಕೆ ಅವಿರತವಾದ ಪ್ರಯತ್ನ ಮಾಡಿದರು. ತಮ್ಮ ಜ್ಞಾನ ಪ್ರಸಾರ ಕಾಯಕಕ್ಕೆ ಕೇಂದ್ರವಾಗಿ 1920ರಲ್ಲಿ ಆಧ್ಯಾತ್ಮ ಪ್ರಕಾಶ ಕಾರ್ಯಾಲಯವನ್ನು ಸ್ಥಾಪಿಸಿ, ಪ್ರಸಾರ ಮಾಧ್ಯಮವಾಗಿ 1923ರಲ್ಲಿ "**ಅಧ್ಯಾತ್ಮ ಪ್ರಕಾಶ**" ಮಾಸಪತ್ರಿಕೆಯನ್ನು ಮುಖ್ಯವಾಗಿ ಪ್ರಸ್ಥಾನತ್ರಯಭಾಷ್ಯವನ್ನೂ, ಅವುಗಳ ಅಭಿಪ್ರಾಯವನ್ನೂ ಹೊರಡಿಸುವ ಲೇಖನಗಳನ್ನು ಸರ್ವಸಮ್ಮತವಾದ ಆಧ್ಯಾತ್ಮ ವಿಚಾರಗಳನ್ನು ಪ್ರಕಟಿಸುವುದೇ ಪತ್ರಿಕೆಯ ಮುಖ್ಯಗುರಿಯಾಗಿ ಪತ್ರಿಕೆಯಲ್ಲಿ ತಮ್ಮದೇ ಬಹುಭಾಗದ ಲೇಖನಗಳನ್ನು ಬರೆದು ಪ್ರಾರಂಭಿಸಿದರು, ಬೇರೆಯವರ ಉತ್ಕೃಷ್ಟ ಲೇಖನಗಳನ್ನೂ ಪ್ರಕಟಿಸಿದರು. ಪ್ರಾರಂಭದಲ್ಲಿ ಎದುರುಬಂದ ಅನೇಕ ತೊಡರುಗಳನ್ನು ಧೃತಿಯಿಂದ ಪರಿಹರಿಸಿಕೊಂಡು ಸುಮಾರು 44 ಸಂಪುಟಗಳನ್ನು (1975 ಫೆಬ್ರವರಿವರೆಗೆ, ಮುಕ್ತರಾದದ್ದು **5–08–1975**) ಹೊರತಂದರು; ಪತ್ರಿಕೆಯು ಯಶಸ್ವಿಯಾಗಿ ಬಹುಜನಮಾನ್ಯವಾಗಲು ಅವರೇ ಕಾರಣರು.

ಅವರ ಜ್ಞಾನ, ತಪಸ್ಸು ಮತ್ತು ಅದರ ಫಲವನ್ನು ಸಾಕಷ್ಟು ರೀತಿಯಲ್ಲಿ ಹೆಚ್ಚು ಹೆಚ್ಚು ಆಧ್ಯಾತ್ಮ ಪ್ರಿಯರಿಗೆ ತಲಪಿಸುವ ಮತ್ತು ಸಾಮಾನ್ಯರನ್ನೂ ಆಧ್ಯಾತ್ಮದೆಡೆಗೆ ತಿರುಗಿಸುವ ಕಾತರತೆಯ ಪರಿಣಾಮವಾಗಿ ಅವರ ಜೀವಿತಕಾಲದಲ್ಲಿ ಕನ್ನಡ, ಇಂಗ್ಲೀಷ್, ಸಂಸ್ಕೃತ ಭಾಷೆಗಳಲ್ಲಿ ಸುಮಾರು 200ಕ್ಕೂ ಮೀರಿದ ಸಂಖ್ಯೆಯ ಗ್ರಂಥಗಳನ್ನು, 1923ರಿಂದ 1975ರ ಫೆಬ್ರವರಿಯವರೆಗೆ ಸುಮಾರು 44 ಸಂಪುಟಗಳ, ಅಂದರೆ 500 ಕ್ಕೂ ಹೆಚ್ಚಿನ ಸಂಚಿಕೆಗಳಲ್ಲಿ ಪುಟಸಂಖ್ಯೆ ಐದಾರು ಸಾವಿರವನ್ನು ದಾಟಿದ ಲೇಖನಗಳನ್ನೂ ಬರೆದರು. ಇವುಗಳ ವೈವಿಧ್ಯತೆ ಅಸದೃಶವಾದದ್ದು–ಶ್ರೀ ಶಂಕರರ ಸಿದ್ಧಾಂತ, ಭಾಷ್ಯಗಳು ಮತ್ತು ಇತರ ಕೃತಿಗಳು, ವೇದಾಂತ ಕಥಾವಳಿ, ಸ್ತೋತ್ರಗಳು, ಸ್ವತಂತ್ರ ಗ್ರಂಥಗಳು, ವೇದಾಂತ ವಿಚಾರದ ಇತಿಹಾಸ ಮತ್ತು **ವೇದಾಂತ ಪ್ರಕ್ರಿಯಾ ಪ್ರತ್ಯಭಿಜ್ಞ**ದಂತಹ ಮೇರು ಕೃತಿ, ಜಿಜ್ಞಾಸುಗಳಿಗೆ ಮಾರ್ಗದರ್ಶನ ನೀಡುವ ಪ್ರಶ್ನೋತ್ತರಗಳು, ಉಪನ್ಯಾಸಗಳು ಹೀಗೆ ವಿಸ್ತಾರವಾಗಿ ಹರಡಿರುವ ಫಲಪುಷ್ಪ ಭರಿತ ವೃಕ್ಷ– ಇದರಲ್ಲಿ ಸಾಮಾನ್ಯ ಎನ್ನುವುದು ಯಾವುದೂ ಇಲ್ಲ. ಕೇವಲ ವ್ಯಾವಹಾರಿಕ ವೆಂದೆನಿಸುವಲ್ಲಿಯೂ ಅಂತರಂಗದ ಮೂಲ ಎಳೆ ಆಧ್ಯಾತ್ಮವೇ. ಗಹನವಾದ ವಿಚಾರಗಳನ್ನು ಅವುಗಳ ಮರೆಯಲ್ಲಡಗಿರುವ ತತ್ತ್ವಗಳನ್ನು ಸರಳವಾದ ರೀತಿಯಲ್ಲಿ ತಿಳಿಯಾದ ಭಾಷೆಯಲ್ಲಿ, ವಿಷಯಸ್ಪಷ್ಟನೆಗೆ ಅವಶ್ಯವಾದಲ್ಲಿ ಹೊಸಪದಗಳನ್ನಿಟ್ಟು ಸೂಕ್ತ ಉದಾಹರಣೆಗಳೊಡನೆ ವಿವರಿಸುವ ಅವರ ಬರವಣಿಗೆಯ ರೀತಿ ಇವೆಲ್ಲವೂ ಅತಿ ವಿಶೇಷ. ಬಹುಶಃ ಕನ್ನಡ ವೇದಾಂತ ವಾಙ್ಮಯದಲ್ಲಿ ಒಬ್ಬರೇ ಬರೆದ ಇಷ್ಟು ವಿಸ್ತಾರವಾದ ಬಹುರೂಪದ ಸಾಹಿತ್ಯ ಮತ್ತೊಂದಿಲ್ಲ ಎನ್ನಬಹುದು.

ಅವರು ಪ್ರಾಜ್ಞರೂ, ಬಹುಶ್ರುತರೂ ಆದಂತೆ ವೇದಾಂತ ಪ್ರಸಾರದ ವಿಷಯದಲ್ಲಿಯೂ ಅಷ್ಟೇ ಲೌಕಿಕ ಚತುರರು, ವ್ಯಾವಹಾರಿಕ ಪರಿಣತರು. ಪತ್ರಿಕೆಯನ್ನು ನಡೆಸಲು ಚಂದಾದಾರರಿಗೆ ಒಪ್ಪಾಗುವ ವಿವಿಧ ವಿಷಯಗಳನ್ನು, ಆಧ್ಯಾತ್ಮ ತತ್ತ್ವಗಳನ್ನು ವಿವರಿಸುವ ಲೇಖಕರು ಬಹಳ ಸಂಖ್ಯೆಯಲ್ಲಿರಲಿಲ್ಲ. ಆದ್ದರಿಂದ ತಾವೇ ಕೆಲವು ಸ್ಥಿರ ಶೀರ್ಷಿಕೆಗಳನ್ನು (ಶಂಕರನ ಪತ್ರಗಳು, ಜಿಜ್ಞಾಸುಗಳ ಪತ್ರಗಳಿಗೆ ಉತ್ತರಗಳು) ಆರಿಸಿಕೊಂಡರು. (ವಿವಿಧ ಹೆಸರುಗಳಲ್ಲಿ–ಯ. ಸು; ಸುಬ್ರಹ್ಮಣ್ಯ, ಓನಾಮ, ತಿಳಿದದ್ದು ನುಡಿಯಪ್ಪ....) ಶಂಕರ ಸಾಹಿತ್ಯ, ಉಪನಿಷತ್ತುಗಳು, ಸಂಸ್ಕೃತ ಅಥವಾ ಇಂಗ್ಲೀಷ್ ಗ್ರಂಥಗಳ ಕನ್ನಡಾನುವಾದಗಳನ್ನು ಸ್ವತಂತ್ರ ಪುಟಗಳೆಂದು ಸೇರಿಸಿ, ಅನಂತರ ಗ್ರಂಥವಾಗಿ ಪ್ರಕಟಿಸಿದರು; ಈ ಸ್ವತಂತ್ರ ಪುಟಗಳನ್ನು ಒಟ್ಟುಮಾಡಿ, ಅದಕ್ಕೆ ಹೊಲಿಗೆ ಹಾಕಿಸುವುದೊಂದೇ ಬಾಕಿ ಎನ್ನುವವರೆಗೆ ಶೀರ್ಷಿಕೆಯ ಮುಖಪುಟ, ಮುನ್ನುಡಿ ಎಲ್ಲವನ್ನೂ ಪತ್ರಿಕೆಯ ಪುಟಗಳಲ್ಲಿ ಒದಗಿಸಿದರು. ಇದರಿಂದ ಚಂದಾದಾರರಿಗೆ ದ್ವಿವಿಧ ಸೌಲಭ್ಯ–ಪತ್ರಿಕೆಯ ಚಂದಾಖರ್ಚಿನಲ್ಲಿ ಪತ್ರಿಕೆಯೂ ಬಂತು, ಗ್ರಂಥವೂ ಕೈಸೇರಿತು, ಕಾರ್ಯಾಲಯಕ್ಕೂ ಪ್ರತ್ಯೇಕ ಗ್ರಂಥ ಪ್ರಕಟಣೆ ಖರ್ಚು ಮಿತವಾಯಿತು. ಇವುಗಳಲ್ಲದೆ ಸರಣಿರೂಪದ (ಧಾರಾವಾಹಿ ಎನ್ನುವಂತೆ) ಲೇಖನಗಳೂ ಬಂದವು. ಆಯಾಯ ಪತ್ರಿಕಾವರ್ಷದ (ಸೆಪ್ಟೆಂಬರ್–ಆಗಸ್ಟ್) ಅಗ್ರ ಲೇಖನಗಳೂ ಒಂದೇ ವಿಷಯಕ್ಕೆ ಸಂಬಂಧಪಟ್ಟುದಾಗಿ ಮಾತ್ರ ಕೆಲವು ಮೂರು ವರ್ಷಗಳವರೆಗೂ ಒಂದೇ ಸಂಕಲನವಾಗಿವೆ. ಇವುಗಳಲ್ಲಿ ಕೆಲವು ಶ್ರೀ ಶ್ರೀ ಗಳವರ ಕಾಲದಲ್ಲೇ ಪುಸ್ತಕ ರೂಪದಲ್ಲಿ ಬಂದವು. ಅವರ ನಂತರ ಅವರ ಶಿಷ್ಯರಾದ ಪಂಡಿತ ಶ್ರೀಲಕ್ಷ್ಮೀನರಸಿಂಹಮೂರ್ತಿಗಳು ಈ ಲೇಖನಗಳಿಂದಲೇ ಉಪನಿಷತ್ ಮಂಜರಿಗಳೇ ಮೊದಲಾದ ಪುಸ್ತಕಗಳನ್ನು ಹೊರತಂದರು. ಆದರೆ ಇಲ್ಲಿಯ ವಿಪುಲವಾದ ವೇದಾಂತಸಾಹಿತ್ಯದ ಸಂಗ್ರಹದಲ್ಲಿಂದ ಆಯ್ಕೆಯಾಗಿ ಬಂದಿರುವ ಪುಸ್ತಕಗಳ ಸಂಖ್ಯೆ ಕಡಿಮೆಯೇ; ಹೆಚ್ಚಿನ ಭಾಗ ಮುದ್ರಿತವಾಗಬೇಕಾಗಿದೆ ಎಂಬುದನ್ನು ಮನಗಂಡು ಕಾರ್ಯಾಲಯ ವಿಶ್ವಸ್ತ ಸಮಿತಿಯು 2002ರಲ್ಲಿ ಇಂತಹ ಪ್ರಕಟಣೆಯ ಕಾರ್ಯವನ್ನು ಕೈಗೊಳ್ಳಲು ನಿರ್ಧರಿಸಿತು; ಕೆಲವು ಪುಸ್ತಕಗಳು ಬಂದವು. ಉಳಿದವುಗಳೆಲ್ಲವನ್ನೂ ಹಾಗೂ ಕ್ರಮಬದ್ಧವಾಗಿ ಜೋಡಿಸಿ ಗ್ರಂಥರೂಪದಲ್ಲಿ ತಂದರೆ ಹಲವಾರು ಸಂಪುಟಗಳಾಗಬಹುದು. ಈ ಪ್ರಯತ್ನದ ಪರಿಣಾಮವಾಗಿ ಈ ಸಂಪುಟವೂ ಸೇರಿ ನಾಲ್ಕು ಸಂಪುಟಗಳು ಹೊರಬಂದಿವೆ. ಐದನೆಯ ಸಂಪುಟವು ಶೀಘ್ರದಲ್ಲೇ ಹೊರಬರಲಿದೆ. ಮುಂದಿನ ಸಂಪುಟಗಳಿಗೆ ಶ್ರೀ ಶ್ರೀ ಗಳವರ ಆಶೀರ್ವಾದದೊಡನೆ, ಭಗವಂತನ ಇಚ್ಛೆಯೂ ಬೇಕಾಗಿದೆ, ಅದಕ್ಕಾಗಿ ಪ್ರಾರ್ಥನೆ.

# ಪ್ರಕಾಶಕರ ಅರಿಕೆ (ಮೊದಲನೆಯ ಮುದ್ರಣಕ್ಕೆ)

'ಅಧ್ಯಾತ್ಮ ಪ್ರಕಾಶ' ಮಾಸ ಪತ್ರಿಕೆಯಲ್ಲಿ ಶ್ರೀ ಶ್ರೀ ಗಳವರು ಬರೆದ ಅಗ್ರಲೇಖನಗಳಲ್ಲಿರುವ ಸಾಮಗ್ರಿಯು ಒಂದು ವಿಶೇಷವೇ. ಹಾಗಿರುವ ಲೇಖನಗಳ ಸಂಕಲನಗಳಲ್ಲಿ ಪುಸ್ತಕರೂಪದಲ್ಲಿ ಪ್ರಕಟವಾಗದ ಸಮುಚ್ಚಯಗಳನ್ನು ಒಂದೆಡೆ ಸೇರಿಸಿ, ತಂದರೆ ಅಧ್ಯಾತ್ಮ ವಿಷಯಗಳಲ್ಲಿ ಆಸಕ್ತಿಯಿರುವವರಿಗೆ ಅನುಕೂಲವಾದೀತು, ಸಹಾಯವಾದೀತು ಎನ್ನುವ ಉದ್ದೇಶದಿಂದ ಈಚಿನ ಪುನಃ ಪ್ರಯತ್ನದ ಮೊದಲೆರಡು ಗ್ರಂಥಗಳಲ್ಲಿ ಇದೂ ಒಂದು.

ಸೆಪ್ಟೆಂಬರ್ 1946 ರಿಂದ ಮುಂದೆ ಜುಲೈ 1948ರ ವರೆಗೆ ಇಂತಹ ಅಗ್ರಲೇಖನಗಳು "**ಸಂಪಾದಕರ ಸಂದೇಶ**' ಎಂದಿದ್ದುದು; ಸಂಪಾದಕರು ಸಂನ್ಯಾಸ ಸ್ವೀಕರಿಸಿ ಶ್ರೀ ಶ್ರೀ ಸಚ್ಚಿದಾನಂದೇಂದ್ರಸರಸ್ವತೀ ಸ್ವಾಮಿಗಳು ಎಂದಾದಾಗ ಈ ಶೀರ್ಷಿಕೆ 'ಈ ತಿಂಗಳ ಸಂದೇಶ' ಎಂದು, ಬದಲಾವಣೆಯಾಗಿದ್ದು 1948ರ ಆಗಸ್ಟ್‌ನಿಂದ; ಹಾಗೇ ಅದು ಅವರು ಮುಕ್ತರಾಗುವ ಮೊದಲಿನ ಆರು ತಿಂಗಳವರೆಗೂ (1975 ಫೆಬ್ರವರಿವರೆಗೆ) ಬಂದವು. ಇವುಗಳಿಂದ ಆಯ್ದ ಮೂರು ಸಂಪುಟಗಳ–16, 17, 18 (1946 ಸೆಪ್ಟೆಂಬರ್ ನಿಂದ 1949 ಆಗಸ್ಟ್ ವರೆಗೆ) 36 ಸಂದೇಶಗಳು ಈ ಗ್ರಂಥದ ವಸ್ತುವಾಗಿವೆ.

ಸಂದೇಶಗಳೆಲ್ಲವೂ ಬಿಡಿಯಾದ ಸ್ವತಂತ್ರ ಲೇಖನಗಳಂತೆಯೆ ಕಾಣುತ್ತಿದ್ದರೂ, ಓದುತ್ತಾ ಹೋದಂತೆ ಅವುಗಳ ಅಂತರಂಗದಲ್ಲಿ ಹುದುಗಿರುವ ಏಕತಾನತೆ ಸ್ಪಷ್ಟವಾಗುತ್ತದೆ. ಶ್ರೀ ಗಳವರ ಬರವಣಿಗೆಯಲ್ಲಿನ ಉತ್ತೇಜನದ ಧ್ವನಿ, ಆಕರ್ಷಣೆಯಿಂದಾಗಿ ಈ ವಿಷಯಗಳನ್ನು ಅರಿತವರಿಗೂ ಹೊಸ ಬೆಳಕಿನ ಕಿಡಿಗಳನ್ನು ಕಾಣಿಸುವ ಮತ್ತು ಅಡಕವಾದ ಆಚರಣೆಗೆ ಯೋಗ್ಯ ವಸ್ತುಗಳಾಗಿ, ಹೊಸದಾಗಿ ಪ್ರಾರಂಭಿಸುವವರಿಗೆ ಆಸಕ್ತಿಯನ್ನುಂಟುಮಾಡಿ, ಈ ಕ್ಷೇತ್ರಕ್ಕೆ, ಅನುಷ್ಠಾನ ಪ್ರಯತ್ನಕ್ಕೆ ಸೆಳೆಯುವ ಸ್ವಭಾವವುಳ್ಳ ಪ್ರಬಂಧಗಳಾಗಿವೆ. ಅದರಿಂದ ಈ ಪುಸ್ತಕ ಬಹಳಷ್ಟು ಓದುಗರಿಗೆ ಸಹಕಾರಿಯಾಗಿದೆ ಎಂದು ಪ್ರಕಾಶಕರಿಗೆ ವಿಶ್ವಾಸವಿದೆ. ಮನೆಮಾತಿನಂತಿರುವ ಅವರ ಸಹಜ ಸರಳ ಶೈಲಿ, ಅಲ್ಲಲ್ಲಿ ನೀಡುವ ತಿಳಿಯಾದ ವಿಷಯ ವಿಸ್ತಾರಗಳು, ನೆನಪಿಗೆ ತರುವ ಉತ್ತಮವಾಕ್ಯಗಳು, ಬಳಕೆಯ ಪರಿಚಿತ ಉದಾಹರಣೆಗಳ ಜೊತೆಗೆ, ಘನತೆಯ ಹೆಚ್ಚಳವನ್ನು ಮೈಗೂಡಿಸಿಕೊಂಡಿರುವದು.

ಈ ಪುಸ್ತಕಕ್ಕೆ, ಅದರ ಸರಳ ಸೊಗಸಿಗೆ ಅನುಗುಣವಾದ ಮುನ್ನುಡಿಯನ್ನು ಬರೆದಿರುವ ವಿದ್ವಾಂಸರೂ, ಶ್ರೀ ಶ್ರೀಗಳವರ ಅಭಿಮಾನಿಗಳೂ, ಸ್ವತಃ ಉತ್ತಮ ಲೇಖಕರೂ ವಾಗ್ಮಿಗಳೂ ಆದ ಶ್ರೀ ರಾಮಚಂದ್ರ ಶಾಸ್ತ್ರಿಗಳು ನಿವೃತ್ತ ಸಂಸ್ಕೃತ ಪ್ರಾಧ್ಯಾಪಕರು, ವಿದ್ವತ್ತಿನಲ್ಲಿ ಎಷ್ಟು ಹಿರಿಯರೋ ಅಷ್ಟೇ ಸರಳಸಂಪನ್ನರು. ಕಾರ್ಯಾಲಯದ ವಿಷಯದಲ್ಲಿ ಅಭಿಮಾನ, ಶ್ರೀ ಶ್ರೀ ಗಳವರಲ್ಲಿನ ಭಕ್ತಿಯಿಂದ ಕಾರ್ಯಾಲಯದ ಕೆಲಸಗಳ ಬಗ್ಗೆ ಕೋರಿಕೆಯನ್ನು ಸಲ್ಲಿಸಿದಾಗಲೆಲ್ಲ, ಸಹಾಯ ನೀಡುವಲ್ಲಿ ಸಿದ್ಧಹಸ್ತರು. ಈ ಪುಸ್ತಕವನ್ನು ಸಂಪೂರ್ಣವಾಗಿ ಕರಡನ್ನು ತಿದ್ದಿ, ಶೀರ್ಷಿಕೆಗಳನ್ನು ಪರಿಶೀಲಿಸಿ ಪುಸ್ತಕವನ್ನು ಉತ್ತಮ ರೂಪಕ್ಕೆ ತರುವಲ್ಲಿ ಅವರ ಮಾರ್ಗದರ್ಶನವಿತ್ತು. ಕಾರ್ಯಾಲಯವು ಅವರಿಗೆ ವಿಶ್ವಾಸಪೂರ್ವಕವಾದ ಕೃತಜ್ಞತೆಗಳನ್ನು ಅರ್ಪಿಸುತ್ತದೆ.

ಕೋಡಿಹಳ್ಳಿ ಶ್ರೀ ಲಕ್ಷ್ಮೀನಾರಾಯಣರಾವ್ ಟ್ರಸ್ಟ್‌ನ ಪರವಾಗಿ ಶ್ರೀ ಕೆ. ಎಲ್. ನಾಗರಾಜರಾಯರು, (ಪ್ರಧಾನರಾಗಿ), ಹಾಗೆಯೇ ಶ್ರೀ ಯಾಜ್ಞವಲ್ಕ್ಯ ಟ್ರಸ್ಟ್‌ನವರು ತಮ್ಮ ಆಶ್ರಮದಲ್ಲಿ ವೇದಾಂತ ಕಾರ್ಯಗಳನ್ನು ನಡೆಸಲು ನೆರವಾಗಿದ್ದಾರೆ. ಇವರೆಲ್ಲರಿಗೂ ಕೃತಜ್ಞತೆಗಳು.

ಅಂದವಾಗಿ ಅಕ್ಷರಜೋಡಣೆ, ರಕ್ಷಾಕವಚವನ್ನು ಮಾಡಿಕೊಟ್ಟ ಶ್ರೀ ಸುರೇಶ್ ದಂಪತಿಗಳಿಗೂ, ಎಂದಿನ ಶ್ರದ್ಧೆಯಿಂದ ಶೀಘ್ರದಲ್ಲಿ ಪುಸ್ತಕವನ್ನು ಅಚ್ಚುಮಾಡಿಕೊಟ್ಟ ಸ್ಟಾಂಡರ್ಡ್ ಪ್ರಿಂಟರ್ಸ್‌ನ ಶ್ರೀ ನಾಗರಾಜ್‌ರಿಗೂ ವಿಶ್ವಾಸಪೂರ್ವಕ ವಂದನೆಗಳು.

ಈ ಪುಸ್ತಕಗಳನ್ನು (ಪುರುಷಸೂಕ್ತ ಮತ್ತು ವೇದಾಂತ ಸಂದೇಶಗಳು) ಬಿಡುಗಡೆ ಮಾಡಲು ದಯಮಾಡಿ, ಒಪ್ಪಿ, ಈ ಕಾರ್ಯವನ್ನು ಹರಸಿರುವ ಮೈಸೂರು ಶ್ರೀ ರಾಮಕೃಷ್ಣ ಆಶ್ರಮದ ಅಧ್ಯಕ್ಷರು ಶ್ರೀ ನಿತ್ಯಸ್ಥಾನಂದ ಜಿ ಮಹರಾಜ್ ಅವರಿಗೆ ನಮಸ್ಕಾರಪೂರ್ವಕ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ.

15–11–2009 ಪ್ರಕಾಶಕರು

# ಎರಡನೆಯ ಮುದ್ರಣಕ್ಕೆ ಪ್ರಕಾಶಕರ ಬಿನ್ನಹ

ವೇದಾಂತ ಸಂದೇಶ ಸಂಪುಟ 1 ಎಂಬುದು ಕೇವಲ ಎರಡೇ ವರ್ಷದಲ್ಲಿ ಎಂದರೆ ಹಿಂದೆ 2009ರಲ್ಲಿ ಮುದ್ರಿತವಾಗಿದ್ದು, ಈಗಾಗಲೇ ಪ್ರತಿಗಳೆಲ್ಲಾ ಮುಗಿದುಹೋಗಿದೆ ಎಂದರೆ ನೀವೇ ಯೋಚಿಸಿಕೊಳ್ಳಿ ಈ ಗ್ರಂಥದ ಮಹತ್ವವನ್ನು! ಇದರಲ್ಲಿರುವ ಲೇಖನಗಳು ಒಬ್ಬರ ಕೇವಲ ಅನಿಸಿಕೆಯಾಗಿರದೇ ಸಂಪೂರ್ಣ ವೇದಾಂತ ಶಾಸ್ತ್ರಕ್ಕೆ ಒಪ್ಪಾದ ವಿಚಾರಗಳ ಗುಚ್ಛವಾಗಿದೆ. ಇದನ್ನು ಓದುವಾಗಲೂ ಸಹ ವಾಚಕವೃಂದದವರು ಕೇವಲ ಕಥಾ ಕಾದಂಬರಿ ಗ್ರಂಥಗಳಂತೆ ಓದದೇ ತಮ್ಮ ಯುಕ್ತ್ಯನುಭವಕ್ಕೆ ಹೊಂದಿಸಿಕೊಂಡು ಓದಿ ಇದರ ಪೂರ್ಣ ಲಾಭವನ್ನು ಪಡೆದಂತಾಗುತ್ತದೆ ಎಂಬುದರಲ್ಲಿ ಸಂಶಯವಿಲ್ಲ. ಈ ಗ್ರಂಥದಲ್ಲಿರುವ ವಿಚಾರಗಳು ಚಿಕ್ಕ ಹುಡುಗರಿಂದ ಮೊದಲುಗೊಂಡು ವಿದ್ವತ್ಪೂರ್ಣರಾದ ವಿದ್ವಾಂಸರವರೆಗೂ ಸಂಬಂಧಪಟ್ಟ ಮತ್ತು ಉಪಯುಕ್ತವಾದ ವಿಚಾರಗಳಿಂದ ತುಂಬಿ ತುಳುಕಾಡುತ್ತಿದ್ದು ಸರ್ವಜನ ಚೇತೋಹಾರಿಯಾಗಿದೆ. ಹೆಚ್ಚಿನ ಶಾಸ್ತ್ರದ ಪಾರಿಭಾಷಿಕ ಪದಗಳನ್ನು ಬಳಸದೇ ಸರ್ವಸಾಧಾರಣವಾದ ಪದಗಳ ಮತ್ತು ವಾಕ್ಯಗಳ ಪ್ರಯೋಗವನ್ನೇ ಮಾಡಿರುವುದು ಸರ್ವರಿಗೂ ಇದರಲ್ಲಿ ಪ್ರವೇಶವಾಗುವುದಕ್ಕೆ ಅವಕಾಶವಾಗಿದೆ. ಒಮ್ಮೆ ಆಮೂಲಾಗ್ರದವರೆಗೆ ನೀವೂ ಓದಿ ನಿಮ್ಮ ಸ್ನೇಹಿತರಿಗೂ, ಬಂಧುಬಾಂಧವರಿಗೂ ತಿಳಿಸಿ ಅವರನ್ನೆಲ್ಲಾ ಓದುವಂತೆ ಪ್ರೇರಿಸಿರಿ, ಒಮ್ಮೆ ಇದರ ರಸಾಸ್ವಾದಕ್ಕೆ ನೀವು ಸಿಲುಕಿದವರಾದರೆ ನೀವೇ ಇದನ್ನು ಎಲ್ಲರಿಗೂ ತಿಳಿಸುವುದರ ಜೊತೆಗೆ ಇದನ್ನು ಎಂದೆಂದಿಗೂ ಕೈಬಿಡದೇ ಇದ್ದವರಾಗುತ್ತೀರಾ! ಅವಶ್ಯವಾಗಿ ನೀವು ಇದನ್ನು ಕೊಂಡುಕೊಂಡು ನಿಮ್ಮ ಮಿತ್ರ ಬಂಧುವೃಂದಕ್ಕೆಲ್ಲ ತಿಳಿಸಿ ಇದರ ಪೂರ್ಣ ಪ್ರಯೋಜನವನ್ನು ಪಡೆಯುವಂತಾಗಲಿ. ಸರ್ವಾತ್ಮನಾದ ನಾರಾಯಣನು ತಮಗೆಲ್ಲರಿಗೂ ತತ್ತ್ವಾರ್ಥವು ಮನವರಿಕೆಯಾಗುವಂತೆ ಅನವರತ ಅನುಗ್ರಹವನ್ನುಂಟು ಮಾಡಲಿ ಎಂದು ಆಶಿಸೋಣ.

**28–7–2011** **ಪ್ರಕಾಶಕರು**

# ವಿಷಯಾನುಕ್ರಮಣಿಕೆ

## ಅಧ್ಯಾಯ – 1 : ಪರಮಾರ್ಥ ಸ್ವರೂಪ


1. ಶ್ರೀಕೃಷ್ಣ ಭಗವಂತನಿಗೆ ನಮಸ್ಕಾರ 01

2. ಓಂ ನಮೋ ಭಗವತೇ ವಾಸುದೇವಾಯ 07

3. ಭಗವಂತನೆಂಬ ಹೆಸರು 11

4. ಪರಮೇಶ್ವರನಿಗೆ ಯಾವ ಹೆಸರು 14

5. ಪರಮಾತ್ಮನನ್ನು ಕಾಣುವುದೆಲ್ಲಿ? 19

6. ಭಗವಂತನ ಸ್ಮರಣೆ 25

7. ನಾಗರಿಕತೆಯ ದುಷ್ಪರಿಣಾಮ 30

8. ಅಂತಃಕರಣ 37

9. ಪರಮಾತ್ಮ ಭಾವನೆಯ ಅಭ್ಯಾಸ–ಯೋಗ 44

10. ಮನಸ್ಸನ್ನು ಪರಮಾತ್ಮನಿಗೆ ಸಂಬಂಧಿಸುವದು 52

11. ಎಲ್ಲ ಕಾಮಗಳ ಪರಿಪೂರ್ಣತೆ ಭಗವಂತನಿಂದಲೇ 60

12. ಒಳನೋಟಕ್ಕೆ ತಕ್ಕ ಅಂತಃಕರಣ 67


## ಅಧ್ಯಾಯ – 2 : ಪರಮಾರ್ಥದೆಡೆಗೆ ಪ್ರಥಮ ಸೋಪಾನಗಳು


13. ಪ್ರಾರ್ಥನೆ 72

14. ಸ್ತೋತ್ರ 77

15. ನಾಮೋಚ್ಚಾರಣೆ 85

16. ನಾಮಸ್ಮರಣೆ 91

17. ನಾಮದ ಆರಾಧನೆ 98

18. ಭಗವದಾರಾಧನೆ 102

19. ವ್ಯಕ್ತಾವ್ಯಕ್ತ ಅರ್ಚನೆ 106

20. ಅವ್ಯಕ್ತಾರ್ಚನೆ 111

21. ಬ್ರಹ್ಮ ಸಂಸ್ಪರ್ಶ 117

22. ಧ್ಯಾನಯೋಗ 122

23. ಆತ್ಮ ಚಿಂತನೆ 127

24. ಅಧ್ಯಾತ್ಮ ವಿದ್ಯೆ 132

## ಅಧ್ಯಾಯ – 3 : ಪರಮಾರ್ಥದ ಅರಿವು

25. ನಿಜವಾದ ಆತ್ಮನು ಕೂಟಸ್ಥನೇ 138

26. ಚಿತ್ತಜನಯ್ಯನ ಚಿಂತೆಯೆಂಬ ಚಿಂತಾಮಣಿ 143

27. ಭಗವಚ್ಚಿಂತನೆಯಿಂದಲೇ ಶಾಂತಿಸುಖಗಳು 149

28. ಭಗವಂತನ ಪ್ರೇಮಪ್ರವಾಹದ ಹರಿವು 156

29. ಪರಮಾತ್ಮನ ಹಾದಿ 161

30. ಉಪಾಸನೆ 168

31. ಸತ್ಪುರುಷರ ಸಂಗ 174

32. ಹೃದಯ ಕಮಲದಲ್ಲಿರುವ ಪರಮಾತ್ಮನು 179

33. ಪರಮಾರ್ಥ ಸ್ವರೂಪ 186

34. ಸರ್ವಾತ್ಮ ಭಾವನೆ 192

35. ಅನಿಷ್ಟ ಪರಿಹಾರಕ್ಕೆ ಪರಮಾತ್ಮನಲ್ಲಿ ಶರಣಾಗತಿ 196

36. ಸಾಧನದ ಸಾಫಲ್ಯತೆಗೆ ಭಗವಂತನನ್ನೇ ಬೇಡಬೇಕು 204

* ಲೇಖನ 13 ರಿಂದ 16ಕ್ಕೆ ಪೂರಕವಾಗಿರುವ ಇದೇ ಶೀರ್ಷಿಕೆಯ ಬರಹಗಳನ್ನು ಶ್ರೀ ಶ್ರೀ ಗಳವರ "**ಅನುಭವಗಮ್ಯ ವೇದಾಂತ**' ಗ್ರಂಥದಲ್ಲಿ ಓದಬಹುದು.

* "**ಈ ತಿಂಗಳ ಸಂದೇಶ**' ಗಳಲ್ಲಿ ಹಾಗೆಯೇ ಬಂದಿರುವ ಲೇಖನಗಳಿಗೆ ಪ್ರತ್ಯೇಕವಾದ ಶೀರ್ಷಿಕೆಯನ್ನು ಮತ್ತು ಪುಸ್ತಕಕ್ಕೆ ಹೆಸರನ್ನು ಕೊಡಲಾಗಿದೆ.

****

## ವೇದಾಂತ ಸಂದೇಶಗಳು-1, ಪರಮಾರ್ಥ ಚಿಂತನೆ

## ಅಧ್ಯಾಯ 1 : ಪರಮಾರ್ಥ ವಿಷಯ / ಸ್ವರೂಪ

# 1. ಶ್ರೀಕೃಷ್ಣ ಭಗವಂತನಿಗೆ ನಮಸ್ಕಾರ

* ಶ್ರೀಕೃಷ್ಣಭಗವಂತನಿಗೆ ನಮಸ್ಕಾರ! ವಾಚಕವೃಂದ ! ಅಧ್ಯಾತ್ಮಪ್ರಕಾಶವು ಕಣ್ಣಿಗೆ ಬೀಳುವದು ನಿಂತು ಎರಡು ವರ್ಷಗಳಾದವು. ಆ ಎರಡು ವರ್ಷಗಳಲ್ಲಿ ಪ್ರಪಂಚವು ಎಷ್ಟು ಮಾರ್ಪಾಡುಗಳನ್ನು ಹೊಂದಿಬಿಟ್ಟಿರುತ್ತದೆ ! ಭೂಮಂಡಲವೆಲ್ಲವನ್ನೂ ಆವರಿಸಿಕೊಂಡಿದ್ದ ಯುದ್ಧಾಗ್ನಿಯ ಜ್ವಾಲೆಯು ಈಗತಾನೆ ನಿಂತಿದೆ. ಯುದ್ಧದಲ್ಲಿ ಪಾತ್ರವನ್ನು ವಹಿಸಿದ್ದ ಕೆಲವು ರಾಷ್ಟ್ರಗಳು ನೆಲಕ್ಕುರುಳಿದವು; ಇನ್ನು ಕೆಲವು ರಾಷ್ಟ್ರಗಳು ಜಯಶೀಲವೆಂದು ಹೇಳಿಕೊಳ್ಳುತ್ತಿವೆಯಾದರೂ ತಮ್ಮ ಜನ, ಧನ, ಆಹಾರಸಾಮಗ್ರಿ, ಸ್ಥಾನಮಾನಗಳು-ಇವುಗಳನ್ನು ಅಮಿತವಾಗಿ ಕಳೆದುಕೊಂಡು ಸತ್ತ್ವಹೀನವಾಗಿವೆ! ಭೂಲೋಕದಲ್ಲಿ ಅಶಾಂತಿಯು ಇನ್ನೂ ಆರಿರುವದೆಂದು ಹೇಳುವದಕ್ಕೆ ಆಗುವಂತಿಲ್ಲ. ಬಹುಭಾಗಗಳ ಜನರಿಗೆ ಹೊಟ್ಟೆಗೆ ಅನ್ನವಾಗಲಿ ಮೈಗೆ ಬಟ್ಟೆಯಾಗಲಿ ಸಾಕಾದಷ್ಟು ಸಿಕ್ಕುತ್ತಲಿಲ್ಲ. ರಾಜ್ಯಭಾರವನ್ನು ಹೊತ್ತಿರುವವರು ತಲೆಯಮೇಲಿನ ಹೊರೆಯನ್ನು ಕೆಳಕ್ಕಿಳಿಸಿ ಕೃತಕೃತ್ಯರಾದೇವೆಯೇ!-ಎಂದು ಹಾತುವರಿಯುತ್ತಿದ್ದಾರೆ. ಆದರೆ ಅವರ ಸ್ಥಾನವನ್ನು ಆಕ್ರಮಿಸುವದಕ್ಕೆ ಬರುವವರು ಇದನ್ನು ಹೊರುವ ಸಾಮರ್ಥ್ಯವು ನಮಗಿದೆಯೆ! ಎಂದು ತಮ್ಮನ್ನು ತಾವೇ ಕೇಳಿಕೊಳ್ಳುತ್ತಿದಾರೆ. ಇಂಥ ಪರಿಸ್ಥಿತಿಯಲ್ಲಿ ನಮಗೆ ಶ್ರೀಕೃಷ್ಣಭಗವಂತನಲ್ಲದೆ ಮತ್ತೆ ಯಾರು ಶರಣು? ಆತನ ಸ್ಮರಣೆಯಲ್ಲದೆ ಮತ್ತೆ ಯಾವದು ತಾನೆ ನಮ್ಮನ್ನು ಪಾರುಮಾಡೀತು?

ನಮ್ಮಗಳಿಗೆ ಜೀವನವೆಂಬುದು ಈಗ ಒಂದು ದೊಡ್ಡ ಸಾಗರವಾಗಿದೆ. ಅದರ ಈಚೆಯ ದಡವನ್ನು ಬಿಟ್ಟು ನಾವು ಅದರೊಳಕ್ಕೆ ಧುಮುಕಿಬಿಟ್ಟಿರುತ್ತೇವೆ. ಸಾಗರದ ಆಳವು ಇಂತಿಷ್ಟೆಂಬುದು ಯಾರೊಬ್ಬರಿಗೂ ತಿಳಿಯದು. ಆಚೆಯ ದಡವನ್ನು ಯಾವಾಗ ಎಲ್ಲಿ ಕಾಣುವೆವೆಂಬುದು ಮನಸ್ಸಿಗೆ ಹೊಳೆಯುವ ಹಾಗಿಲ್ಲ. ನಮ್ಮ ಸುತ್ತಲೂ ಸಮುದ್ರದ ದೊಡ್ಡ ದೊಡ್ಡ ಅಲೆಗಳೇ ಗೋಚರಿಸುತ್ತಿರುವವು ! ಎಷ್ಟೋ ಜನರಿಗೆ ತಮ್ಮಲ್ಲಿರುವ ಅಲ್ಪ ಸ್ವತ್ತಿಗೆ ರಕ್ಷಣೆಯೇನೆಂಬ ತಳಮಳವು ಹತ್ತಿಕೊಂಡಿರುತ್ತದೆ. ಗಲಭೆಯಲ್ಲಿ ನುಗ್ಗಿ ಸಿಕ್ಕಿದ್ದನ್ನು ಲೂಟಿಮಾಡಿಕೊಂಡುಹೋಗಿ ಸುಖವಾಗಿ ಅನುಭವಿಸಿಕೊಂಡಿರೋಣವೆಂಬ ದುರಾಶೆಯು ಹಲವರನ್ನು ಆವರಿಸಿಕೊಂಡಿರುತ್ತದೆ! ಯಾರನ್ನಾದರೂ ವಂಚಿಸಿ ಹೇಗಾದರೂ ಮಾಡಿ ನಮಗೆ ಬೇಕಾದದ್ದನ್ನು ಸಂಪಾದಿಸಿಕೊಳ್ಳಬೇಕೆಂಬ ಹವಣಿಕೆಯುವರು ಎಲ್ಲಿಲ್ಲಿಯೂ ಇರುವರೆಂಬ ಅಂಜಿಕೆಯು ನಮ್ಮನ್ನು ಹಿಡಿದು ಕೊಂಡಿರುವದು. ಹೀಗೆ ನಿರಾಶೆಯ ವಾತಾವರಣದಲ್ಲಿ ಸಿಕ್ಕಿರುವ ನಾವು ಈಗ ಏನುಮಾಡಬೇಕು?

---

* ಸಂಪುಟ 16, ಸಂಚಿಕೆ 1-ಸೆಪ್ಟೆಂಬರ್ 1946, ಪುಟ 1-6

ದೇಹಬಲವಾಗಲಿ, ಜನಬಲವಾಗಲಿ, ಆಸ್ತಿಯ ಬಲವಾಗಲಿ, ತಿಳಿವಳಿಕೆಯ ಬಲವಾಗಲಿ ನಮ್ಮನ್ನು ಪಾರುಮಾಡೀತೆಂಬ ನಂಬಿಕೆಯು ಸಡಿಲವಾಗುತ್ತಿರುವ ಈ ಕಾಲಕ್ಕೆ ನಮಗೆ ಗತಿ ಯಾವದು?

**ಭವಾಂಬೋಧಿನಿಮಗ್ನಾನಾಂ ಮಹಾಪಾಪೋರ್ಮಿಪಾತಿನಾಮ್ ।**
**ನ ಗತಿರ್ಮಾನವಾನಾಂ ಚ ಶ್ರೀಕೃಷ್ಣಸ್ಮರಣಂ ವಿನಾ ॥**

'ಸಂಸಾರವೆಂಬ ಕಡಲಿನಲ್ಲಿ ಮುಳುಗಿರುವ, ಮಹಾಪಾಪಗಳೆಂಬ ಹೆದ್ದೆರೆಗಳ ಹೊಡೆತಕ್ಕೆ ಸಿಕ್ಕಿರುವ ಜನರಿಗೆ, ಶ್ರೀಕೃಷ್ಣನ ಸ್ಮರಣೆಯ ಹೊರತು ಬೇರೆಯ ಗತಿ ಇರುವದಿಲ್ಲ' ಎಂಬ ಸ್ಕಂದಪುರಾಣದ ವಾಕ್ಯವನ್ನು ನಾವು ಸ್ಮರಿಸಿಕೊಳ್ಳಬೇಕು. ಸಂಸಾರದ ಕಡಲಿಗೆ ಆಳವು ಎಷ್ಟೆಂಬುದು ನಮಗೆ ತಿಳಿಯದೆ ಇರಬಹುದು, ನಮ್ಮ ಮೇಲೆ ಹಾಯ್ದು ಬರುತ್ತಿರುವ ಪಾಪದ ಹೆದ್ದೆರೆಗಳು ಅಮಿತವಾಗಿಯೂ ಇರಬಹುದು, ಆದರೇನು? ಇದಕ್ಕೆ ಅಂಜದಿರಿ! ಶ್ರೀಕೃಷ್ಣಸ್ಮರಣೆಯೆಂಬ ಉತ್ತಮವಾದ ಉಪಾಯವೊಂದಿರುವದು. ಅದರಿಂದ ಈ ಆಳವಾದ ಕಡಲೇ ಕಾಲುಹೊಳೆಯಾಗುವದು, ಲೆಕ್ಕವಿಲ್ಲದ ಇದರ ಅಲೆಗಳು ತಮ್ಮ ಕರಾಳರೂಪವನ್ನು ಮರೆಮಾಡಿಕೊಳ್ಳುವವು. ಜೀವನವು ಸುಪಥವಾಗುವದು. ಈಗ ನಮಗೆ ಹಗೆಗಳಾಗಿ ವಂಚಕರಾಗಿ ಕಾಣುವವರೇ ನೆಚ್ಚಿನ ಗೆಳೆಯರಾಗುವರು, ಎಲ್ಲೆಲ್ಲಿಯೂ ನಿರಾಶೆಯೇ ಕಾಣುತ್ತಿರುವ ನಿಮ್ಮ ಸುತ್ತುವಳೆಯವು ಸುಖಮಯವಾಗಿ ಸ್ವಾಗತವನ್ನು ಕೊಡುವದು. ನೀವು ಯಾವ ಕಾರ್ಯವನ್ನು ಕೈಕೊಂಡರೂ ಹೂವಿನ ಸರವನ್ನು ಎತ್ತಿದಷ್ಟು ಹಗುರವಾಗಿ ಅದು ಕೈಗೂಡುವದು.

ಇನ್ನೊಂದು ವಿಷಯ, ಮಾನವರಾದ ನಾವುಗಳು ಸ್ವಭಾವದಿಂದಲೇ ಮರ್ತ್ಯರು. ಹಸಿವುನೀರಡಿಕೆಗಳ ತಾಪವು ಹೆಚ್ಚಿದರೆ ಸಾವು, ಉಂಡನ್ನವು ಅಥವಾ ಕುಡಿದ ನೀರು ಹೆಚ್ಚಾದರೆ ಸಾವು! ಕಾಡಿನಲ್ಲಿ ಹುಲಿ, ಕರಡಿ, ಸಿಂಹ ಮುಂತಾದ ಹಿಂಸ್ರಮೃಗಗಳು ಮೈಮೇಲೆ ಬಿದ್ದರೆ ಸಾವು ! ಊರಿನಲ್ಲಿ ಕಳ್ಳರುಕಾಕರು ಅಥವಾ ದುರಾಶೆಯ ದರೋಡೆಯವರು, ಇಲ್ಲವೆ ದಾಳಿಯಿಡುವ ದಂಡಿನವರು ನುಗ್ಗಿದರೆ ಸಾವು! ಮೈಯಲ್ಲಿ ಬಿರುಸಾದ ಬೇನೆಯು ಕಾಣಿಸಿಕೊಂಡರೆ ಸಾವು, ಆರೋಗ್ಯವಾಗಿದ್ದರೂ ಏನಾದರೂ ಅಪಾಯದಿಂದ ಅಥವಾ ಆಯುಸ್ಸು ಮುಗಿದದ್ದರಿಂದ ಸಾವು! ಕ್ಷಾಮಡಾಮರಗಳು, ಯುದ್ಧಗಳು, ಕಡಲು ಮೇರೆದಪ್ಪುವದು, ನೆಲಗುಡುಗುವದು– ಮುಂತಾದ ಉತ್ಪಾತಗಳು– ಇವುಗಳು ಬಂದೊದಗಿದರಂತೂ ಸಾವು ಯಾವಾಗ ಎಷ್ಟು ಜನರಿಗೆ ಒಮ್ಮೆಗೇ ಕಾಣಿಸಿಕೊಳ್ಳುವದೋ ಯಾರು ಬಲ್ಲರು? ಸಂಸಾರದಲ್ಲಿ ಮೈನೋವೂ ಮನಸ್ಸಿನ ನೋವೂ ಬೇಡಬೇಡವೆಂದರೂ ಹೇಗೆ ಕಾಣಿಸಿಕೊಳ್ಳುತ್ತಿರುವವೋ ಹಾಗೆಯೇ ಸಾವು ಬೇಡ ಎಂದು ಎಷ್ಟೇ ಅಂಜಿಕೊಂಡು ಎಲ್ಲಿಯೇ ಅವಿತುಕೊಂಡಿರಲಿ, ಮೃತ್ಯುವು ಹೆಡತಲೆಯಲ್ಲಿಯೇ ಕಾಣಿಸಿಕೊಳ್ಳುತ್ತಿರುವನು! ಇಂಥ ಮೃತ್ಯುವಿನ ಆಕ್ರಮಣದ ಭೀಕರಕೃತ್ಯದಿಂದ ನಮ್ಮನ್ನು ಪಾರುಮಾಡುವವರು ಯಾರು?

ಜೀವವಿಮೆಯ ಕಂಪೆನಿಯವರು ನಾವು ಸತ್ತರೆ ನಮ್ಮ ವಾರಸುದಾರರಿಗೆ ಹಣವನ್ನು ಸಲ್ಲಿಸುವೆವೆಂದು ಭರವಸೆಕೊಡುತ್ತಾರೆ. ಆದರೆ ಸಾವಿನ ವಿಮೆಯ ಕಂಪೆನಿಯು ಎಲ್ಲಿರುವದು? ಇದೂ ಅಲದೆ, ಸತ್ತಬಳಿಕ ನಾವು ಯಾವ ಲೋಕಕ್ಕೆ ಹೋಗುವೆವೋ, ಮತ್ತೆ ಯಾವ ಜನ್ಮವನ್ನು ಪಡೆಯುವೆವೋ ಹೇಳಬಲ್ಲವರು ಯಾರಿದಾರೆ? ಈ ಲೋಕದಲ್ಲಿ ವಾಸಕ್ಕೆ ಕಟ್ಟಡಗಳನ್ನು ಕಟ್ಟಿಕೊಳ್ಳುವವರಿಗೆ ಸಹಾಯಮಾಡಲು ಗೃಹನಿರ್ಮಾಣಸಂಘಗಳು ಏರ್ಪಟ್ಟಿರುತ್ತವೆ. ಆದರೆ ಸತ್ತಬಳಿಕ ಜನರು ವಾಸಮಾಡುವದಕ್ಕೆ ಅನುಕೂಲವಾದ ಶರೀರಗೃಹಗಳನ್ನು ಕಟ್ಟಿಕೊಳ್ಳುವದಕ್ಕೆ ಸಹಾಯಕವಾಗಿರುವ ಸಂಘಗಳು ಎಲ್ಲಿರುವವು?

ಇಂಥ ಯೋಚನೆಯ ತೆರೆಗಳು ತಲೆದೋರಿರುವಾಗ ನಾವು ಎದೆಗೆಡದಂತೆ ಧೈರ್ಯವನ್ನು ಕೊಡುವ ಋಷಿವಾಕ್ಯವೊಂದುಂಟು:–

**ಮೃತ್ಯುಕಾಲೇಽಪಿ ಮರ್ತ್ಯಾನಾಂ ಪಾಪಿನಾಂ ತದನಿಚ್ಛತಾವವ್ ।**
**ಗಚ್ಛತಾಂ ನಾಸ್ತಿ ಪಾಥೇಯಂ ಶ್ರೀಕೃಷ್ಣಾನುಸ್ಮರಣಂ ವಿನಾ ॥**

'ಪಾಪಗಳನ್ನೇ ಮಾಡುತ್ತಿರುವ, ಈ ಲೋಕವನ್ನು ಬಿಟ್ಟು ತೆರಳುವದು ತಮಗೆ ಬೇಡವಾದರೂ ಎಲ್ಲವನ್ನೂ ಬಿಟ್ಟು ತಾವರಿಯದೆಡೆಗೆ ಹೊರಟೇ ಹೋಗಬೇಕಾಗಿರುವ, ಮರ್ತ್ಯರಿಗೆ ಶ್ರೀಕೃಷ್ಣನ ಸ್ಮರಣೆಯನ್ನು ಬಿಟ್ಟರೆ ಮತ್ತೆ ಯಾವ ದಾರಿಯಬುತ್ತಿಯೂ ಇರುವದಿಲ್ಲ.' ಮೃತ್ಯುವೆಂಬ ಹೆಬ್ಬಾವಿನ ವಿಷದ ಹಲ್ಲನ್ನು ಮುರಿಯುವದಕ್ಕೆ ಶ್ರೀಕೃಷ್ಣಾನುಸ್ಮರಣವೇ ಉಪಾಯವು. ಸಾವಿನ ನಿರೀಕ್ಷಣೆಯ ಅಂಜಿಕೆಯಿಂದ ಬದುಕಿರುವಾಗಲೇ ಸಾವಿರಾರುಸಲ ಸತ್ತ ಸಂಕಟವನ್ನು ಅನುಭವಿಸುವ ಮನೋರೋಗವನ್ನು ಪರಿಹರಿಸಿಕೊಳ್ಳುವದಕ್ಕೆ ಶ್ರೀಕೃಷ್ಣಾನುಸ್ಮರಣವೇ ಉಪಾಯವು. ಪಾಪಕರ್ಮದ ಪರಿಪಾಕದಿಂದ ಪರಲೋಕದಲ್ಲಿ ಅಥವಾ ಮರುಹುಟ್ಟಿನಲ್ಲಿ ದುಃಖವನ್ನನುಭವಿಸುವ ಯಾತನಾಶರೀರವು ನಿರ್ಮಾಣ ವಾಗದಂತೆ ತಡೆಯುವದಕ್ಕೆ ಈ ದೇಹದಲ್ಲಿ ಇರುವಾಗಲೂ ಇದನ್ನು ಬಿಟ್ಟು ತೆರಳುವಾಗಲೂ ಆನಂದದ ಅಮೃತದ ಮಡುವಿನಲ್ಲಿ ಹಾಯಾಗಿ ಈಜಾಡುವದಕ್ಕೂ ಶ್ರೀಕೃಷ್ಣಾನುಸ್ಮರಣವೇ ಉಪಾಯವು.

ಶ್ರೀಕೃಷ್ಣನೆಂದರೆ ಯಾರು ? ಆತನ ಸ್ಮರಣೆಯನ್ನು ಹೇಗೆ ಮಾಡಬೇಕು ? ಆ ಸ್ಮರಣೆಯಿಂದ ಸಂಸಾರದ ದುಃಖಗಳು ಹೇಗೆ ತೊಲಗುವವು? ಈ ಪ್ರಶ್ನೆಗಳಿಗೆ ನಾವು ಉತ್ತರವನ್ನು ಮೊದಲು ಕಂಡುಕೊಳ್ಳಬೇಕು. ಏಕೆಂದರೆ ಈ ವಿಷಯದಲ್ಲಿ ಈಗ ಭಾರಿಭಾರಿಯ ತಪ್ಪುಕಲ್ಪನೆಗಳು ನಮ್ಮನ್ನು ಪೀಡಿಸುತ್ತಿರುವವು. ಕೃಷ್ಣಜನ್ಮಾಷ್ಟಮಿಯು ವರ್ಷ ವರ್ಷವೂ ಬಂದುಹೋಗುತ್ತಿದೆ. ಆದರೆ ಅದು ನಮ್ಮಗಳಲ್ಲಿ ಉಂಡೆ, ಚಕ್ಕುಲಿ, ಕೋಡುಬಳೆ,

ಕೋಸುಂಬರಿ ಮುಂತಾದ ತಿಂಡಿಗಳನ್ನು ನೆನಪಿಗೆ ತರುವ ಹಬ್ಬವಾಗಿಬಿಟ್ಟಿರುತ್ತದೆ! ಕೃಷ್ಣನೆಂದರೆ ದ್ವಾಪರಯುಗದಲ್ಲಿ ವಸುದೇವನ ಮಗನಾಗಿ ಹುಟ್ಟಿ, ನಂದಗೋಕುಲದಲ್ಲಿ ಬೆಳೆದು, ಗೋಪಗೋಪಿಯರೊಡನೆ ಬಾಲಲೀಲೆಯನ್ನು ಅನುಭವಿಸಿ, ಕಂಸನನ್ನು ಕೊಂದು, ಕೌರವರನ್ನು ಕೊಲ್ಲಿಸಿ, ಪಾಂಡವರಿಗೆ ರಾಜ್ಯವನ್ನು ಕೊಡಿಸಿ, ಯಾದವರ ನಾಶಕ್ಕೆ ಹಂಚಿಕೆಯನ್ನು ಮಾಡಿ, ತನ್ನ ಈ ಲೋಕದ ವ್ಯಾಪಾರವನ್ನು ಕೊನೆಗೊಳಿಸಿದ ಒಂದಾನೊಂದು ವ್ಯಕ್ತಿಯೆಂದು ನಮ್ಮಗಳ ಭಾವನೆ! ಇಂಥದ್ದೊಂದು ವ್ಯಕ್ತಿಯನ್ನು ಐದುಸಾವಿರ ವರ್ಷಗಳಾದಮೇಲೆ ನೆನಪಿಗೆ ತಂದುಕೊಳ್ಳುವದರಿಂದ ಸಂಸಾರ ಸಾಗರವನ್ನು ದಾಟುವಮಾರ್ಗವಾಗಲಿ, ಮರಣದ ಅಂಜಿಕೆಯು ತಪ್ಪುವ ಬಗೆಯಾಗಲಿ ಪರಲೋಕಕ್ಕೆ ಪಾಥೇಯವಾಗಲಿ ಸಿಕ್ಕುವದೆಂದು ಯೋಚಿಸುವದು ತೀರ ಹಾಸ್ಯಾಸ್ಪದವೆಂಬುದನ್ನು ಹೇಳಬೇಕಾಗಿಯೇ ಇಲ್ಲ. ಆದರೆ ವ್ಯಾಸಾದಿ ಮಹರ್ಷಿಗಳು ವರ್ಣಿಸಿರುವ ಶ್ರೀಕೃಷ್ಣ ಸ್ವರೂಪವು ಹೇಗಿರುವದು? ಭಗವದ್ಗೀತೆಯಲ್ಲಿ ಶ್ರೀಕೃಷ್ಣನೇ ಹೇಳಿಕೊಂಡಿರುವ ಆತನ ಸ್ವರೂಪವು ಯಾವದು? ಅದನ್ನು ನೋಡೋಣ.

**ಅಜೋಽಪಿ ಸನ್ನವ್ಯಯಾತ್ಮಾ ಭೂತಾನಾಮೀಶ್ವರೋಽಪಿಸನ್ ।**
**ಪ್ರಕೃತಿಂ ಸ್ವಾಮಧಿಷ್ಠಾಯ ಸಂಭವಾಮ್ಯಾತ್ಮಮಾಯಯಾ ॥**
**ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ ।**
**ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಮ್ ॥**
**ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಮ್ ।**
**ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ ॥**
**ಜನ್ಮ ಕರ್ಮ ಚ ಮೇ ದಿವ್ಯಮೇವಂ ಯೋ ವೇತ್ತಿ ತತ್ತ್ವತಃ ।**
**ತ್ಯಕ್ತ್ವಾ ದೇಹಂ ಪುನರ್ಜನ್ಮ ನಯತಿ ಮಾಮೇತಿ ಸೋಽರ್ಜುನ ॥**

'ನಾನು ಜನ್ಮರಹಿತನು, ವ್ಯಯವಾಗದ ಸ್ವರೂಪವುಳ್ಳವನು, ಭೂತಗಳೆಲ್ಲಕ್ಕೂ ಈಶ್ವರನು ಇಂಥ ಸ್ವರೂಪದವನಾದರೂ ನನ್ನ ಪ್ರಕೃತಿಯನ್ನು ವಶದಲ್ಲಿಟ್ಟುಕೊಂಡು ನನ್ನ ಮಾಯೆಯಿಂದ ಹುಟ್ಟುತ್ತಿರುವೆನು, ಯಾವಯಾವಾಗ ಧರ್ಮವು ಮಂಕಾಗುವದೋ, ಅಧರ್ಮವು ಎದ್ದುಕೊಳ್ಳುವದೋ, ಆಗಾಗ ನನ್ನನ್ನು ನಾನು ಹೊರಕ್ಕೆ ತಂದುಕೊಳ್ಳುವೆನು. ಸಾಧುಗಳನ್ನು ಎಲ್ಲಾ ಬಗೆಯಿಂದಲೂ ಕಾಪಾಡುವದಕ್ಕೂ ಪಾಪಿಗಳನ್ನು ನಾಶಗೊಳಿಸುವದಕ್ಕೂ ಧರ್ಮವನ್ನು ನೆಲೆನಿಲ್ಲಿಸುವದಕ್ಕೂ ಯುಗಯುಗದಲ್ಲಿಯೂ ಉಂಟಾಗುತ್ತಿರುವೆನು. ನನ್ನ ದಿವ್ಯಜನ್ಮವನ್ನೂ ಕರ್ಮವನ್ನೂ ಹೀಗೆಂದು ಯಾವನು ಅದು ಇದ್ದಂತೆಯೇ ಅರಿತುಕೊಳ್ಳುವನೋ ಅವನು ದೇಹವನ್ನು ಬಿಟ್ಟಬಳಿಕ ಮತ್ತೆ ಜನ್ಮವನ್ನು ಪಡೆಯುವದಿಲ್ಲ, ನನ್ನನ್ನೇ ಸೇರುತ್ತಾನೆ.

ಶ್ರೀಕೃಷ್ಣನ ಸ್ವರೂಪವನ್ನು ಇಲ್ಲಿ ವರ್ಣಿಸಿರುವ ಬಗೆಯನ್ನು ಸ್ವಲ್ಪ ಮನಸ್ಸಿನಲ್ಲಿ ಹೊರಳಾಡಿಸೋಣ. ಶ್ರೀಕೃಷ್ಣನ ಸ್ವರೂಪವು **ಅವ್ಯಯವು**, ಅದು ತನ್ನಿಂದಲೇ ಆಗಲಿ ಮತ್ತೊಂದರಿಂದಾಗಲಿ ಸವೆಯುವದಲ್ಲ, ನಾಶವಾಗುವದಲ್ಲ. ಅವನು ಅಜನು ಜನ್ಮವೆಂಬ ಮೊಟ್ಟಮೊದಲನೆಯ ವಿಕಾರವು ಇಲ್ಲದವನು. ವಸ್ತುವು ಹುಟ್ಟಿದ ಮೇಲಲ್ಲವೆ, ಅದರಲ್ಲಿ ಬೆಳೆಯುವದು, ಮಾರ್ಪಡುವದು, ಸೊರಗುವದು ಮುಂತಾದ ವಿಕಾರಗಳು ಉಂಟಾಗಿ ಅದು ಸವೆದುಹೋಗುತ್ತದೆ? ಆದರೆ ಯಾವದು ಹುಟ್ಟಿಯೇ ಇಲ್ಲವೋ ಅದು ಅವಯವಗಳಿಂದಲಾಗಲಿ ಗುಣಗಳಿಂದಲಾಗಲಿ ಮತ್ತೆ ಏತರಿಂದಲಾಗಲಿ ಬೆಳೆಯುವದು ಕೃಶವಾಗುವದೂ ಅಸಂಭವ. ಶ್ರೀಕೃಷ್ಣನು ಅಜನಾಗಿರುತ್ತಾನೆ; ಆದ್ದರಿಂದ ಅವನಲ್ಲಿ ವಿಕಾರವನ್ನಾಗಲಿ ನಾಶವನ್ನಾಗಲಿ ಕಲ್ಪಿಸುವಂತಿಲ್ಲ. ಇಷ್ಟೇ ಅಲ್ಲ ಅವನು ಎಲ್ಲಾ ಭೂತಗಳಿಗೂ ಈಶ್ವರನು. ಭೂತಗಳು ಎಂದರೆ ಇರುವ ವಸ್ತುಗಳು. ಜಡವಸ್ತುಗಳೂ ಚೇತನವಸ್ತುಗಳೂ ಅವು ಎಲ್ಲಿ ಯಾವ ಕಾಲದಲ್ಲಿ ಇದ್ದರೂ ಅನೀಶ್ವರವಾಗಿರುತ್ತವೆ, ಅಸ್ವತಂತ್ರವಾಗಿರುತ್ತವೆ. ಭೂತವೆಂಬ ಹೆಸರಿನಿಂದ ಕರೆಯಿಸಿಕೊಳ್ಳುವ ವಸ್ತು ಎಷ್ಟೇ ಮಹತ್ತ್ವದ್ದಾಗಿರಲಿ, ಅದು ಒಂದು ಕಾಲದಲ್ಲಿ ಒಂದು ದೇಹದಲ್ಲಿ ಹುಟ್ಟಿ, ಕಾರ್ಯಕಾರಣ ನಿಯಮಕ್ಕೆ ಒಳಪಟ್ಟು ಅಸ್ವತಂತ್ರವಾಗಿಯೇ ಬಾಳಬೇಕು. ದೇಶಕಾಲಗಳ ಅಳತೆಗೆ ಸಿಕ್ಕಿರುವ ವಸ್ತುವು ಕಡೆಗೆ ದೇಶಕಾಲಗಳ ಆಸರೆಯಲ್ಲಿಯೇ ಕಣ್ಮರೆಯಾಗಬೇಕು. ಹೀಗೆ ಹುಟ್ಟಿ, ಬೆಳೆದು, ಮಾರ್ಪಟ್ಟು, ಮೈಗರೆಯುವದನ್ನು ವಸ್ತುಗಳು ತಮ್ಮ ಧರ್ಮವಾಗಿರಲೆಂದು ತಾವೇ ಆರಿಸಿಕೊಂಡಿರುವದಿಲ್ಲ. ತಾವು ಬೇಡವೆಂದರೂ ಯಾವದೋ ಒಂದು ನಿಯಮಕ್ಕೆ ಕಟ್ಟುಬಿದ್ದು ಅವಶವಾಗಿ ಸೂತ್ರದ ಬೊಂಬೆಗಳಂತೆ ಧರಿಸಿರುವ ವೇಷವದು. ಅವುಗಳ ಆಟಕ್ಕೆಲ್ಲ ಸೂತ್ರಧಾರನಾಗಿ ತೋರಿ, ಆಡಿ, ಕಣ್ಮರೆಯಾಗುವ ಬೊಂಬೆಗಳ ಹಿಂದುಮುಂದನ್ನೂ ಆಗುಹೋಗುಗಳನ್ನೂ-ಸ್ವರೂಪವನ್ನೂ ಸ್ಥಿತಿಯನ್ನೂ ಪ್ರವೃತ್ತಿಯನ್ನೂ-ಗೊತ್ತುಪಡಿಸುತ್ತಿರುವ ಶಕ್ತಿಯೇ ಈಶ್ವರನು. ಅವನೇ **ಶ್ರೀಕೃಷ್ಣನು**.

ಹೀಗೆ ಶ್ರೀಕೃಷ್ಣನು ಯಾವ ಕಾಲದ ಕಟ್ಟೂ ಇಲ್ಲದ, ಯಾವ ದೇಶದ ಕಟ್ಟೂ ಇಲ್ಲದ, ಯಾವ ಕಾರ್ಯಕಾರಣದ ಕಟ್ಟೂ ಇಲ್ಲದ ತತ್ತ್ವವಾಗಿರುವದರಿಂದ ಅವನಿಗೆ ಒಂದು ದೇಶದಲ್ಲಿ, ಒಂದು ಕಾಲದಲ್ಲಿ, ಒಂದು ನಿಯಮದಿಂದ, ಜನ್ಮವಾಗುವ ಹಾಗಿಲ್ಲ. ಆಟದ ಬೊಂಬೆಯಂತೆ ಮತ್ತೊಬ್ಬರ ವಶವಾಗಿ ಕುಣಿದಾಡುವದೆಂಬ ಕರ್ಮವೂ ಅವನಿಗೆ ಇಲ್ಲ. ಕಾಲದೇಶಗಳ ಕಟ್ಟಿಗೆ ಒಳಪಟ್ಟಿರುವ, ಪಾಪಪುಣ್ಯಗಳೆಂಬ ಕರ್ಮಗಳನ್ನು ಮಾಡಿ ಅವುಗಳ ಫಲವನ್ನು ಉಣ್ಣುವದಕ್ಕಾಗಿ ಮತ್ತೆ ಮತ್ತೆ ಶರೀರಗಳನ್ನು ಅವಶರಾಗಿ ಧರಿಸುತ್ತಿರುವ, ನಮ್ಮಗಳ ಮನಸ್ಸಿಗೆ ಪರಮಾರ್ಥವನ್ನು ಮನದಟ್ಟುಮಾಡಿಕೊಟ್ಟು ನಮ್ಮನ್ನು ತನ್ನ

ಆನಂದಸ್ವರೂಪದ ಕಡೆಗೆ ಸೆಳೆದುಕೊಳ್ಳುವದಕ್ಕಾಗಿ ಆತನು ಯಾವಾಗಲೆಂದರೆ ಆಗ, ಎಲ್ಲಿ ಎಂದರೆ ಅಲ್ಲಿ, ಹೇಗೆ ಎಂದರೆ ಹಾಗೆ, ಯಾವ ರೂಪದಿಂದ ಎಂದರೆ ಆ ರೂಪದಿಂದ, ಯಾವ ಕಾರ್ಯಕಾರಣದ ನಿಯಮಕ್ಕೂ ಒಳಪಡದೆ, ದಿವ್ಯವಾದ ಜನ್ಮಗಳನ್ನು ತನ್ನ ಸ್ವಾತಂತ್ರ್ಯದಿಂದಲೇ ತಳೆಯುತ್ತಿರುವನು. ಇದೇ ಆತನ **ಅವತಾರವು.** ಜನ್ಮವಿಲ್ಲದೆ ಜನಿಸುವ, ಕರ್ಮದ ಕಟ್ಟಿಲ್ಲದೆ ಕರ್ಮಗಳನ್ನು ಮಾಡುವ, ಆ ಭಗವಂತನ ಈ ಲೀಲೆಯು ಎಲ್ಲರನ್ನೂ ಸ್ವಭಾವದಿಂದಲೇ ತನ್ನ ಕಡೆಗೆ ಎಳೆದುಕೊಳ್ಳುವದು. ಮಾಯಾವಿಯೊಬ್ಬನು ಒಂಟಿಗನಾಗಿ ಬಂದು ನೋಟಕರಿಗೆ ಕಾಣುವಂತೆ ಅನ್ನ, ವಸ್ತ್ರ, ಕ್ರೀಡಾಮೃಗಗಳು, ಸುಂದರವಾದ ಪಕ್ಷಿಗಳು, ವಾಹನಗಳು, ದಾಸದಾಸಿಯರು, ದಿವ್ಯಭವನಗಳು, ಉದ್ಯಾನಗಳು, ಹೂಹಣ್ಣುಗಳ ವೃಕ್ಷಗಳು–ಮುಂತಾದ ದೃಶ್ಯಗಳನ್ನು ಕ್ಷಣಮಾತ್ರದಲ್ಲಿ ನಿರ್ಮಿಸಿ ಎಲ್ಲರನ್ನೂ ಬೆರಗುಗೊಳಿಸುವಂತೆ ಈ ಮಹಾಮಾಯಾವಿಯಾದ ಶ್ರೀಕೃಷ್ಣನು ಚರಾಚರ ಪ್ರಪಂಚವೆಲ್ಲವನ್ನೂ ತನ್ನ ಅಚಿಂತ್ಯಾದ್ಭುತಶಕ್ತಿಯಿಂದ ನಿರ್ಮಿಸಿ, ಇದರೊಳಗೆ ವಿವಿಧ ಭೋಗ್ಯವಸ್ತುಗಳನ್ನು ಇಟ್ಟು ಅನಂತವಾದ ಆಕಾರಗಳ ಶರೀರದಲ್ಲಿ ಬಗೆಬಗೆಯಾದ ಜೀವರುಗಳು ಇಡಿಯ ಜಗತ್ತಿನ ತಿರುಳಾಗಿರುವ ಆ ಶ್ರೀಕೃಷ್ಣನ ಸ್ವರೂಪವನ್ನು ಮರೆತು ಶರೀರಾದಿಗಳೇ ತಾವೆಂಬ ಭ್ರಾಂತಿಯಿಂದ ಧರ್ಮವನ್ನು ಬಿಟ್ಟು ಅಧರ್ಮವನ್ನು ಆಚರಿಸಿ ಅದರ ದುಷ್ಫಲವಾಗಿ ಬಗೆಬಗೆಯಾದ ದುಃಖಗಳಿಗೆ ಪಕ್ಕಾಗಿರುವರು. ಅಂಥವರನ್ನು ಉದ್ಧಾರ ಮಾಡುವದಕ್ಕಾಗಿ ತನ್ನ ಮಾಯಾಶಕ್ತಿಯಿಂದ ಅತ್ಯದ್ಭುತಲೀಲಾರೂಪವಾಗಿರುವ ನಾಮರೂಪಕರ್ಮಗಳನ್ನು ಪ್ರಕಟಿಸುವ ದಿವ್ಯದೇಹಗಳನ್ನು ಹೊರತೋರಿಸಿಕೊಂಡು ಎಲ್ಲರನ್ನೂ ಧರ್ಮಪರರನ್ನಾಗಿ ಮಾಡಿ, ಭಕ್ತಿವೈರಾಗ್ಯಗಳನ್ನೂ ತತ್ತ್ವಪರಮಾತ್ಮವನ್ನೂ ಕೊಟ್ಟು ಅನುಗ್ರಹಿಸುತ್ತಿರುವನು.

ಇಂಥ ಶ್ರೀಕೃಷ್ಣಪರಮಾತ್ಮನನ್ನು ನಾವು ನೆನಪಿಗೆ ತಂದುಕೊಂಡಹಾಗೆಲ್ಲ ಅಮಂಗಲವಾಗಿರುವ ದೇಹವಾಸನೆಯು ಸಡಿಲವಾಗುವದು; ಸ್ವಾರ್ಥಬುದ್ಧಿಯು ಅತ್ತ ಸರಿಯುವದು; ವಿಷಯಗಳ ದುರಾಸೆಯ ಹುಟ್ಟಡಗುವದು; ದುಷ್ಕರ್ಮಗಳನ್ನು ಮಾಡಿ ದುರಂತವಾದ ದುಃಖಗಳಿಗೆ ಈಡಾಗುವ ಹಂಬಲು ಹರಿದುಹೋಗುವದು; ಈ ಲೋಕದಲ್ಲಿ ಸುಖಜೀವನದ ಸುಮ್ಮಾನವು ಸುಳಿದಾಡುವದು; ಪರಲೋಕದಲ್ಲಿ ಸದ್ಗತಿಯಾಗುವದಕ್ಕೆ ಧರ್ಮದ ಬುತ್ತಿಯು ಗಂಟಾಗುವದು. ಎಲ್ಲೆಲ್ಲಿಯೂ ಮಂಗಲಸ್ವರೂಪನಾದ ಶ್ರೀಕೃಷ್ಣನ ಸ್ವರೂಪವನ್ನೇ ಕಾಣುತ್ತಾ ಆನಂದದಲ್ಲಿ ತಾನೂ ಮುಳುಗಿ ಇತರರಿಗೂ ಮಾರ್ಗದರ್ಶಕರಾಗುವ ಸುಯೋಗವು ಲಭಿಸುವದು. ಶ್ರೀಕೃಷ್ಣಪರಮಾತ್ಮನ ಅನುಗ್ರಹದಿಂದ ನಮ್ಮೆಗಳಿಗೆಲ್ಲ ಈ ಫಲವು ಲಭಿಸಲೆಂದು ಹಾರೈಸೋಣ ! ಶ್ರೀಕೃಷ್ಣಭಗವಂತನಿಗೆ ನಮಸ್ಕಾರ !

# 2. ಓಂ ನಮೋ ಭಗವತೇ ವಾಸುದೇವಾಯ

* ವಾಸುದೇವಭಗವಂತನಿಗೆ ನಮಸ್ಕಾರ! ಪಾಠಕಮಹೋದಯರೆ, ಈಶ್ವರನಿಗೆ ವಾಸುದೇವನೆಂಬ ಹೆಸರು ಸುಪ್ರಸಿದ್ಧವಾಗಿದೆ. ಆದರೆ ಈ ಹೆಸರಿನ ಪೂರ್ಣಾರ್ಥವನ್ನು ಕುರಿತು ನಾವುಗಳೆಲ್ಲರೂ ಸಾಕಾದಷ್ಟು ಮನನಮಾಡಿಲ್ಲವೆಂದು ಹೇಳಬಹುದು. ಈ ತಿಂಗಳು ಆ ಕೆಲಸಕ್ಕೆ ಮನಸ್ಸುಮಾಡೋಣ.

ಶ್ರೀಕೃಷ್ಣನು ವಸುದೇವನ ಮಗನಾದ್ದರಿಂದ ಅವನಿಗೆ ವಾಸುದೇವನೆಂಬ ಹೆಸರು ಬಂದಿತೆಂದು ನಮ್ಮಗಳಲ್ಲಿ ಕೆಲವರು ನಂಬಿರುತ್ತಾರೆ. ಭಗವಂತನ ಕೃಷ್ಣಾವತಾರದ ವಿಷಯಕ್ಕೆ ಇದೇನೋ ಹೊಂದುತ್ತದೆ. ವಸುದೇವನ ಮಗನಾಗಿ ಭಗವಂತನು ಅವತರಿಸುವನೆಂದೂ ಭೂಭಾರವನ್ನು ಕಳೆದು ಲೋಕಕ್ಕೆ ಕಲ್ಯಾಣವನ್ನುಂಟು ಮಾಡುವನೆಂದೂ ದೇವತೆಗಳು ನಂಬಿದ್ದರು; ಆದ್ದರಿಂದ ವಸುದೇವನು ಹುಟ್ಟಿದಾಗಲೆ ಅವರು ಸಂತಸದಿಂದ ಸ್ವರ್ಗದಲ್ಲಿ ನಗಾರಿಯನ್ನು ಬಾರಿಸಿದರು-ಎಂದು ಪುರಾಣದಲ್ಲಿ ಕಥೆಯಿದೆ. ಆದ್ದರಿಂದ ಪ್ರಖ್ಯಾತನಾದ ವಸುದೇವನ ಮಗನಿಗೆ ವಾಸುದೇವನೆಂಬ ಹೆಸರು ಬಂದದ್ದು ಸ್ವಾಭಾವಿಕವಾಗಿರುತ್ತದೆ.

ಆದರೆ ವಾಸುದೇವನೆಂಬ ಹೆಸರಿನ ನಿರ್ವಚನವನ್ನು ತಿಳಿಸುವ ವಾಕ್ಯವೊಂದು ನಮ್ಮೆಲ್ಲರ ಕಿವಿಗೂ ಬಿದ್ದಿರುತ್ತದೆ:-

**ವಾಸನಾದ್ವಾಸುದೇವಸ್ಯ ವಾಸಿತಂ ತೇ ಜಗತ್ತ್ರಯಮ್ ।**
**ಸರ್ವಭೂತನಿವಾಸೋಽಸಿ ವಾಸುದೇವ ನಮೋಸ್ತು ತೇ ॥**

'ವಾಸುದೇವನಾದ ನಿನ್ನ ವಾಸನದಿಂದ ಮೂರು ಲೋಕವೂ ವಾಸಿತವಾಗಿರುತ್ತದೆ. ಸರ್ವಭೂತಗಳಲ್ಲಿಯೂ ನಿವಾಸವುಳ್ಳವನು ನೀನು. ವಾಸುದೇವನೆ, ನಿನಗೆ ನಮಸ್ಕಾರ!' ಈ ಶ್ಲೋಕದ ದೃಷ್ಟಿಯಿಂದ ನೋಡಿದರೆ ಭಗವಂತನು ವಸುದೇವನ ಮಗನಾಗಿ ವಾಸುದೇವನೆನಿಸಿದ್ದು ಈಚೆಗೆ ಕಾಕತಾಳೀಯವಾಗಿ ನಡೆಯಿತೆಂದೂ, ಭಗವಂತನಿಗೆ ವಾಸುದೇವನೆಂಬ ಹೆಸರು ಅನಾದಿಯಾಗಿಯೇ ಇದ್ದುಕೊಂಡಿರುವದೆಂದೂ ಹೇಳಬೇಕಾಗುತ್ತದೆ. ಈ ಶ್ಲೋಕವು ಯಾವ ಗ್ರಂಥದಲ್ಲಿರುವದೆಂದು ನಮಗೆ ನಿಶ್ಚಿತವಾಗಿ ಗೊತ್ತಾಗಲಿಲ್ಲ. ಆದರೆ ಎಲ್ಲೆಲ್ಲಿಯೂ ಸುಪ್ರಸಿದ್ಧವಾಗಿದ್ದು ಹಲವರು ಇದನ್ನು ನಿತ್ಯವೂ ಸಂಧ್ಯಾವಂದನೆಯಲ್ಲಿ ಹೇಳಿಕೊಳ್ಳುತ್ತಿರವದರಿಂದ ಇದು ಯಾವದೋ ಒಂದು ಪುರಾಣದಲ್ಲಿ ಇರಬೇಕೆಂದು ತೋರುತ್ತದೆ. ಇದು ಹೇಗಾದರೂ ಇರಲಿ. ಈ ಶ್ಲೋಕದ ಅಭಿಪ್ರಾಯವನ್ನೇ ಒಳಗೊಂಡಿರುವ ಮತ್ತೊಂದು ಶ್ಲೋಕವು ಮಹಾಭಾರತದಲ್ಲಿ ಸಿಕ್ಕುತ್ತದೆ.

---

* ಸಂಪುಟ 16, ಸಂಚಿಕೆ 2, ಅಕ್ಟೋಬರ್ 1946

**ಛಾದಯಾಮಿ ಜಗದ್ವಿಶ್ವಂ ಭೂತ್ವಾ ಸೂರ್ಯ ಇವಾಂಶುಭಿಃ ।**
**ಸರ್ವಭೂತಾಧಿವಾಸಶ್ಚ ವಾಸುದೇವಸ್ತತೋಽಹ್ಯಹಮ್ ॥**

(ಶಾಂತಿಪರ್ವ 3, 41–41)

ಈ ಎರಡು ಶ್ಲೋಕಗಳಿಗೂ ಅರ್ಥವು ಒಂದೇ. ಪರಮಾತ್ಮನು ಇಡಿಯ ಜಗತ್ತನ್ನೇ ತನ್ನ ವಾಸನೆಯಿಂದ ಮುಚ್ಚಿಹಾಕಿರುತ್ತಾನೆ. ಸೂರ್ಯನು ತನ್ನ ಕಿರಣಗಳಿಂದ ಸುತ್ತಲಿರುವ ಎಲ್ಲವನ್ನೂ ವ್ಯಾಪಿಸಿಕೊಂಡಿರುವಂತೆ ಜಗತ್ತೆಲ್ಲವನ್ನೂ ಒಳಗೂ ಹೊರಗೂ ಎಲ್ಲೆಲ್ಲಿಯೂ ಭಗವಂತನು ಮುಸುಕಿಕೊಂಡಿರುತ್ತಾನೆ. ವಸ್ ಎಂಬ ಸಂಸ್ಕೃತಧಾತುವಿಗೆ ಮುಸುಕು, ಮುಚ್ಚಿಹಾಕು ಎಂದರ್ಥ. ಹೇಗೆ ಚಂದನ, ಅಗಿಲು– ಮುಂತಾದವುಗಳನ್ನು ಸಾಣೆಯಕಲ್ಲಿನ ಮೇಲೆ ತೇದರೆ ಅವುಗಳ ವಾಸನೆಯು ಎಲ್ಲೆಲ್ಲಿಯೂ ಮುಸುಕಿಕೊಳ್ಳುವದೋ, ಸುತ್ತಲೂ ಇರಬಹುದಾದ ವಸ್ತುಗಳ ಕೆಟ್ಟನಾತವನ್ನೂ ತೀರ ಮುಚ್ಚಿಹಾಕಿಬಿಡುವದೋ, ಹಾಗೆ ಪರವಾತ್ಮನ ಇರವು ಎಲ್ಲೆಲ್ಲಿಯೂ ಇದ್ದುಕೊಂಡಿದೆ. ಸರಿಯಾಗಿ ನೋಡುವವರ ಕಣ್ಣಿಗೆ ಆತನ ಕಾಂತಿಯೇ ಎಲ್ಲೆಲ್ಲಿಯೂ ಇದ್ದುಕೊಂಡಿದೆ. ಸರಿಯಾಗಿ ನೋಡುವವರ ಕಣ್ಣಿಗೆ ಆತನ ಕಾಂತಿಯೇ ಎಲ್ಲೆಲ್ಲಿಯೂ ಝಗಝಗಿಸುತ್ತಿರುತ್ತದೆ. ಸೂರ್ಯ, ಚಂದ್ರ, ನಕ್ಷತ್ರಗಳು, ಮಿಂಚು, ಬೆಂಕಿ– ಮುಂತಾದ ಕಾಂತಿಯುತವಾದ ವಸ್ತುಗಳು ತೋರುವದು ಕೂಡ ಯಾವಾತನ ಬೆಳಕಿನಿಂದಲೋ ಆ ಮಹಾತ್ಮನ ಕಾಂತಿಯನ್ನು ವರ್ಣಿಸುವದೇನು? ವಾಸು (ಎಲ್ಲೆಲ್ಲಿಯೂ ಮುಸುಕಿಕೊಂಡಿರುವ), ದೇವ (ಕಾಂತಿಯಿಂದ ಕೂಡಿದ) ಸ್ವಯಂ ಜ್ಯೋತಿಯಾದ್ದರಿಂದ ಪರಮೇಶ್ವರನಿಗೆ ವಾಸುದೇವ ಎಂಬ ಘನವಾದ ಹೆಸರು ಬಂದಿದೆ.

ಇಲ್ಲಿಯವರೆಗೆ ವರ್ಣಿಸಿರುವದು ಪೂರ್ವಾರ್ಧದ ಅಭಿಪ್ರಾಯವು. ಇದರ ಬಗ್ಗೆ ಒಂದು ಸಂಶಯವುಂಟಾಗುವ ಸಂಭವವಿದೆ. ಪರವಾತ್ಮನು ಎಲ್ಲಕ್ಕಿಂತಲೂ ಕಾಂತಿಯುತನಾಗಿದ್ದರೆ, ಅಗಿಲು ಮುಂತಾದವುಗಳ ಪರಿಮಳದಂತೆ ಆತನ ಪರಿಮಳವೇ ಎಲ್ಲೆಲ್ಲಿಯೂ ಮುಸುಕಿಕೊಂಡಿರುವದು ನಿಜವಾಗಿದ್ದರೆ, ನಮಗೇಕೆ ಆತನ ಕಿರಣಗಳು ಕೂಡ ಕಣ್ಣಿಗೆ ಬೀಳುವದಿಲ್ಲ? ಎಲ್ಲೆಲ್ಲಿ ನೋಡಿದರೂ ಈ ಸಂಸಾರದಲ್ಲಿ ಹುಟ್ಟುಸಾವುಗಳು, ಮುಪ್ಪಿನ ಸಂಕಟಗಳು, ದುಗುಡದುಮ್ಮಾನಗಳು– ಇವುಗಳ ದುರ್ಗಂಧವೇ ಮುಸುಕಿ ಕೊಂಡಿರುವಂತೆ ಕಾಣುತ್ತಿರುವದಲ್ಲ, ಇದೇಕೆ?

ಇದಕ್ಕೆ ಉತ್ತರವು ಶ್ಲೋಕದ ಎರಡನೆಯ ಅರ್ಧದಲ್ಲಿರುತ್ತದೆ. ನಾವು ವಾಸುದೇವ ಭಗವಂತನ ವಾಸುದೇವತ್ವದ ಕಡೆಗೆ ಕಣ್ಣುಹಾಕದೆ ಇರುವೆವು, ಆದ್ದರಿಂದ ಆತನ ದಿವ್ಯಕಾಂತಿಗೆ ಯಾವದೋ ಒಂದು ಕಾರ್ಮುಗಿಲು ಕವಿದಿರುವಂತೆ ನಮಗೆ ತೋರುತ್ತಿರುವದು.

ಬಹುಕಾಲ ನೀರಿನಲ್ಲಿ ನೆನೆಯ ಹಾಕಿದ ಅಗಿಲುಚಂದನಗಳ ಕೊರಡು ಕೂಡ ಕೆಟ್ಟ ನಾತವನ್ನು ಕೊಡುತ್ತಿರುತ್ತದೆ. ಆದರೆ ಅದು ಆ ಕೊರಡಿನ ಹುಟ್ಟುಗುಣವಲ್ಲ, ನೀರೆಂಬ ಉಪಾಧಿಯಿಂದ ಬಂದದ್ದು. ಭಗವಂತನು ಸರ್ವಭೂತಗಳಲ್ಲಿಯೂ ಮನೆಮಾಡಿ ಕೊಂಡಿರುತ್ತಾನೆ. ದೇವತೆಗಳು, ಋಷಿಗಳು-ಮುಂತಾದ ಮೇಲ್ತರದ ಜೀವರಲ್ಲಿಯೂ, ಮನುಷ್ಯರೆಂಬ ನಡುತರದ ಜೀವರಲ್ಲಿಯೂ, ಪಶುಪಕ್ಷಿಕ್ರಿಮಿಕೀಟವೇ ಮುಂತಾದಿ ಸ್ಥಾವರಾಂತವಾಗಿರುವ ಕೀಳ್ತರದ ಜೀವರಲ್ಲಿಯೂ ಒಂದೇ ಸಮವಾಗಿ ಆತನು ವಾಸಮಾಡಿಕೊಂಡಿರುತ್ತಾನೆ. ಆದರೆ ನಾವು ಇದನ್ನು ಕಡೆಗಣಿಸಿರುತ್ತೇವೆ. ದೇವತೆಗಳನ್ನು ಆರಾಧನೆಮಾಡುವದು ನಮ್ಮ ಮನಸ್ಸಿಗೆ ಒಗ್ಗುವ ಹಾಗಿಲ್ಲ; ಋಷಿಗಳಿಂದ ತತ್ತ್ವಾರ್ಥವನ್ನು ಅರಿತುಕೊಳ್ಳಬೇಕೆಂದು ಅವರನ್ನು ಪೂಜ್ಯ ಬುದ್ಧಿಯಿಂದ ಸೇವಿಸುವದು ನಮ್ಮ ಅಂತರಂಗಕ್ಕೆ ಸೇರುವ ಹಾಗಿಲ್ಲ; ಪಶುಪಕ್ಷ್ಯಾದಿ ಆದ ಕೀಳುಪ್ರಾಣಿಗಳಲ್ಲಿ ಸಹಾನುಭೂತಿಯೂ ಕನಿಕರವೂ ಮುಂತಾದವೂ ಎಂದಿಗೂ ಹುಟ್ಟುವ ಹಾಗಿಲ್ಲ. ಪರಮೇಶ್ವರನು ಸರ್ವಭೂತಾಧಿವಾಸನು, ಆತನ ದಿವ್ಯತೇಜಸ್ಸನ್ನು ಕಾಣುವದಕ್ಕೆ ನಾವು ದಿವ್ಯದೃಷ್ಟಿಯನ್ನು ಸಂಪಾದಿಸಿಕೊಳ್ಳಬೇಕು; ಘಮಘಮಿಸುವ ಆತನ ಅಂತಃಕರಣವನ್ನು ಚೆನ್ನಾಗಿ ತೇಯಬೇಕು. ಆಗ ವಾಸುದೇವನೆಂಬ ಹೆಸರು ಭಗವಂತನಿಗೆ ಅನ್ವರ್ಥವಾದದ್ದೆಂದು ನಮಗೆ ಮನದಟ್ಟಾಗುತ್ತದೆ.

ವಾಚಕಮಹಾಶಯರಿರಾ, ಈಗ ನಾವು ಹೇಳುತ್ತಿರುವದೇನೂ ಕಟ್ಟುಕಥೆಯಲ್ಲ, ಈಗಲೇ ಇಲ್ಲಿಯೇ ನಾವೆಲ್ಲರೂ ಮನಗಾಣಬಹುದಾದ ಒಂದು ತತ್ತ್ವ. ವಾಸುದೇವ ತತ್ತ್ವವು ಇಡಿಯ ಜಗತ್ತಿಗೇ ಮೂಲವು. ಇಂದು ಅದು ನಮ್ಮ ಪಾಲಿಗೆ ಅವ್ಯಕ್ತವಾಗಿದೆ. ಕುರುಡರಿಗೆ ಕಾಣಿಸದ ಬೆಳಕಿನಂತೆ ಅದರ ಪ್ರಕಾಶವು ನಮಗೆ ಗೋಚರಿಸದೆ ಇದೆ. ನಮ್ಮ ಮುಂದೆ ಕಾಣುವ ಜಗತ್ತು ನಿಜವಾಗಿ ಈಶ್ವರನ ಇರವಿನ ಮಹಿಮೆಯಿಂದ ತುಂಬಿ ತುಳುಕುತ್ತಿದೆ, ಅದೇ ಪರಮಾರ್ಥವು. ಈಗ ನಮಗೆ ಕಾಣುವ ಜಗತ್ತು ಅಪರಮಾರ್ಥವು. ಮಹಾವಿಷ್ಣುವು ಜಗತ್ತನ್ನು ವ್ಯಾಪಿಸಿಕೊಂಡಿರುವನೆಂಬುದಿಷ್ಟೇ ಅಲ್ಲ, ಆತನು ಜಗತ್ತೂ ಆಗಿರುತ್ತಾನೆ-ಎಂದು ವಿಷ್ಣುಪುರಾಣದಲ್ಲಿ ಹೇಳಿರುತ್ತದೆ, ನಾವು ಕಾಣುವ ಕುರೂಪದಲ್ಲಿಯೇ ಸೌಂದರ್ಯವು ಅಡಗಿರುತ್ತದೆ, ರೋಗದಲ್ಲಿಯೇ ಸ್ವಾಸ್ಥ್ಯವು ಅಡಗಿರುತ್ತದೆ, ಅಜ್ಞಾನದಲ್ಲಿಯೇ ಜ್ಞಾನವು ಅಡಗಿರುತ್ತದೆ, ಅಪೂರ್ಣತೆಯಲ್ಲಿಯೇ ಪೂರ್ಣತೆಯು ಅಡಗಿರುತ್ತದೆ. ಈ ಜಗತ್ತಿನಲ್ಲಿ ನಿಜವಾಗಿ ಬಡತನವಾಗಲಿ, ಸಂಕಟವಾಗಲಿ, ಬೇನೆಯಾಗಲಿ, ದುಃಖವಾಗಲಿ ಇಲ್ಲೇ ಇಲ್ಲ. ಚಂದನದಲ್ಲಿ ಸಹಜವಾಗಿಲ್ಲದ ದುರ್ಗಂಧವು ನಮ್ಮ ಮೂಗಿಗೆ ಬಡಿಯುತ್ತಿದೆ; ವೀಣೆಯಲ್ಲಿಲ್ಲದ ಕರ್ಕಶಧ್ವನಿಯು ನಮ್ಮ ಕಿವಿಗೆ ಬೀಳುತ್ತಿದೆ.

ಆದ್ದರಿಂದ ನಾವು ಮಾಡಬೇಕಾದದ್ದು ಇಷ್ಟೇ; ಚಂದನವನ್ನು ತೇಯಬೇಕು, ವೀಣೆಯನ್ನು ಸರಿಯಾಗಿ ಶ್ರುತಿಮಾಡಬೇಕು, ನಮ್ಮ ಜೀವನಕ್ಕೆಲ್ಲ ಆಧಾರವಾಗಿರುವ ವಾಸುದೇವತತ್ತ್ವಕ್ಕೆ ತಿರುಗುವ ಪ್ರಯತ್ನವನ್ನು ಮನಮುಟ್ಟಿ ಮಾಡಬೇಕು. ಕೂಡಲೆ ನಮ್ಮ ಕಡೆಗೆ ಅದರ ತಂಗಾಳಿಯು ನರುಗಂಪನ್ನು ಹೊತ್ತು ಮೆಲ್ಲಮೆಲ್ಲಗೆ ಬೀಸುವದಕ್ಕೆ ಹತ್ತುತ್ತದೆ. ಅದಕ್ಕೆ ಮುಸುಕಿಕೊಂಡಿರುವಂತೆ ತೋರುತ್ತಿರುವ ಕಾರ್ಮೋಡವು ಅತ್ತ ಸರಿಯುವದಕ್ಕೆ ಮೊದಲುಮಾಡುತ್ತದೆ, ಅದರ ದಿವ್ಯಕಾಂತಿಯ ಕಿರಣಗಳು ನಮ್ಮ ಹೃದಯದ ಕತ್ತಲೆಯನ್ನು ಚದರಿಸುವದಕ್ಕೆ ಆರಂಭಿಸುತ್ತದೆ.

ಹಾಗಾದರೆ ಈ ತತ್ತ್ವವನ್ನು ಮುಟ್ಟುವದಕ್ಕೆ ನಾವು ಮಾಡಬೇಕಾದ ಸಾಧನವು ಯಾವದು? ಚಂದನವನ್ನು ಹೇಗೆ ತೇಯಬೇಕು? ಪರಿಮಳವನ್ನು ಮೂಸುವದಕ್ಕೆ ಯಾವ ಸನ್ನಿವೇಶವನ್ನು ಬದಲಾಯಿಸುವ ಪ್ರಯತ್ನಕ್ಕೆ ಕೈಹಾಕಬೇಡಿರಿ. 'ಹೀಗಿದ್ದರೆ ಚೆನ್ನಾಗಿತ್ತು, ಇಂಥಿಂಥ ಕಷ್ಟಗಳು ಪರಿಹಾರವಾಗಿದ್ದರೆ ನಾವು ಸುಖವಾಗಿರಬಹುದಾಗಿತ್ತು' ಎಂದು ಬಗೆದು ಸುತ್ತುವಳೆಯವನ್ನು ಸರಿಪಡಿಸುವದಕ್ಕೆ ಹೋಗುತ್ತಿರುವದೇ ನಮ್ಮ ವ್ಯವಹಾರದಲ್ಲಿರುವ ದೋಷವು. ನೀವು ಈ ಪ್ರಯತ್ನವನ್ನು ಬಿಟ್ಟುಬಿಡಿರಿ. ಸುಮ್ಮನೆ ಪರಮಾರ್ಥವಾದ ವಾಸುದೇವತತ್ತ್ವವನ್ನು ಮನಸ್ಸಿಗೆ ಹತ್ತಿಸಿಕೊಳ್ಳಿರಿ. ಎಲ್ಲೆಲ್ಲಿಯೂ ಎಲ್ಲಾ ಗಿಡಮರಗಳಲ್ಲಿಯೂ, ಎಲ್ಲಾ ಪಶುಪಕ್ಷಿಗಳಲ್ಲಿಯೂ, ಎಲ್ಲಾ ಮನುಷ್ಯರಲ್ಲಿಯೂ, ನಿಮ್ಮಲ್ಲಿಯೂ, ಆ ವಾಸುದೇವನು ನಿತ್ಯವಾಗಿ ಇರುತ್ತಿರುವನು. ಆತನಲ್ಲಿ ಅಜ್ಞಾನವಿಲ್ಲ, ಜ್ಞಾನದ ಗಟ್ಟಿಯು ಆತನು; ಆತನಲ್ಲಿ ದುಃಖವಿಲ್ಲ, ಆನಂದದ ಮುದ್ದೆ ಆತನು; ಆತನಿಗೆ ನಾಶವೇ ಇಲ್ಲ, ಅಮೃತಸ್ವರೂಪನು ಆತನು. ಈ ಇಡಿಯ ಜಗತ್ತಿನಲ್ಲಿ ವಾಸುದೇವನು ತುಂಬಿರುವನು; ಈ ದೇಶದಲ್ಲಿ, ಈವೂರಿನಲ್ಲಿ, ಈ ನಮ್ಮ ಮನೆಯಲ್ಲಿ, ಈಗ ನಾನು ಕುಳಿತಿರುವ ಸ್ಥಳದಲ್ಲಿ, ಈ ನನ್ನ ಹೃದಯುದಲ್ಲಿ ಆ ಸಚ್ಚಿದಾನಂದಸ್ವರೂಪನು ಇದ್ದುಕೊಂಡಿರುತ್ತಾನೆ ಎಂಬ ಮಂಗಲಕರವಾದ ನೆನಹನ್ನು ಮನಸ್ಸಿಗೆ ತಂದುಕೊಳ್ಳಿರಿ, ಇಷ್ಟೇ ನೀವು ಮಾಡಬೇಕಾದದ್ದು.

'ವಾಸುದೇವನು ಸರ್ವಭೂತಗಳಲ್ಲಿಯೂ ಇರುವನು. ಶತ್ರುಗಳಲ್ಲಿ, ಮಿತ್ರರಲ್ಲಿ, ಮಧ್ಯಸ್ಥರಲ್ಲಿ, ನೆಂಟರಲ್ಲಿ, ಇಷ್ಟರಲ್ಲಿ, ನಮಗಿಂತ ಮೇಲಿನ ಅಂತಸ್ತಿನವರಲ್ಲಿ, ಕೀಳು ಅಂತಸ್ತಿನವರಲ್ಲಿ, ಎಲ್ಲರಲ್ಲಿಯೂ ಇರುವನು. ನಾನು ನೋಡುವವರಲ್ಲೆಲ್ಲ ಆತನನ್ನು ಕಾಣಲು ಮೊದಲು ಮಾಡುವೆನು; ಯಾರೊಬ್ಬರನ್ನೂ ಹಗೆಮಾಡದೆ, ಯಾರೊಬ್ಬರನ್ನೂ ಕಡೆಗಣಿಸದೆ, ಎಲ್ಲರಲ್ಲಿಯೂ ಆತನನ್ನೇ ಆರಾಧಿಸುವೆನು. ಎಲ್ಲಾ ಪ್ರಾಣಿಗಳಲ್ಲಿಯೂ, ಆತನೇ ಇರುವನು. ಸರ್ವಪ್ರಾಣಿಗಳನ್ನೂ ನಾನು ಆದಮಟ್ಟಿಗೂ ದಯೆಯಿಂದಲೂ ಪ್ರೇಮದಿಂದಲೂ ಕಂಡು ಆತನನ್ನೇ ಆರಾಧನೆಮಾಡುವೆನು. ವಾಸುದೇವನೆ, ನಿನ್ನ

ಇರವನ್ನೂ ಮಹಿಮೆಯನ್ನೂ ಎಲ್ಲರಲ್ಲಿಯೂ ಕಾಣುವ, ಎಲ್ಲರಲ್ಲಿಯೂ ಪ್ರೇಮವನ್ನು ಮಾಡುತ್ತಾ ನಿನ್ನನ್ನು ಆರಾಧಿಸುವ, ಶಕ್ತಿಯನ್ನು ಕೊಡು' ಎಂದು ಮನಃಪೂರ್ವಕವಾಗಿ ಪ್ರಾರ್ಥನೆ ಮಾಡಿಕೊಳ್ಳಿರಿ. ವಾಸುದೇವನು ವಾಸಮಾಡದ ಸ್ಥಲವಿಲ್ಲ ಎಂದು ನಂಬಿರಿ.

ನಿಮ್ಮ ಮನಸ್ಸಿನಲ್ಲಿ ಭಾವನೆಯು ಮೂಡಿದಂತೆಲ್ಲ, ಈ ಸಾಧನವು ಬಲಿತಂತೆಲ್ಲ, ನಿಮ್ಮ ನಡೆನುಡಿಗಳು ಬದಲಾಗುವವು. ಆ ಬಳಿಕ ನಿಮ್ಮ ಸನ್ನಿವೇಶವು ನಿಮಗೆ ತಕ್ಕಂತೆ ತಾನೇ ಮಾರ್ಪಡುವದು. ನಿಮ್ಮ ಸುತ್ತಲೂ ಇರುವ ಕಷ್ಟಪರಂಪರೆಗಳ ನಿಮಿತ್ತಗಳೂ ಶೀತೋಷ್ಣಾದಿವೇದನೆಗಳೂ ಹಾಗೆಯೇ ಇರುವವು; ಅವೇನೂ ಯಾವದೋ ಒಂದು ಇಂದ್ರಜಾಲದಿಂದ ಕಣ್ಮರೆಯಾಗುವದಿಲ್ಲ. ಆದರೆ ವಾಸುದೇವ ಧ್ಯಾನವೆಂಬ ಮಹೇಂದ್ರ ಜಾಲದಿಂದ ಆ ಕಷ್ಟಗಳು ನಿಮಗೆ ಕಷ್ಟಗಳೇ ಆಗುವದಿಲ್ಲ. ಯಾವ ಸನ್ನಿವೇಶವೂ ನಿಮಗೆ ಅಡಚಣೆಯಾಗುವದಿಲ್ಲ. ಎಂದೆಂದಿಗೂ ಎಲ್ಲೆಲ್ಲಿಯೂ ನಿಮಗೆ ಆನಂದದ ಸುಗ್ಗಿಯಾಗಿ ಬಿಡುತ್ತದೆ! ಆದ್ದರಿಂದ ಈ ಒಂದು ಮಂತ್ರವನ್ನು ಮನದಲ್ಲಿ ಬಿಡದೆ ಜಪಿಸಿರಿ:

**"ಓಂ ನಮೋ ಭಗವತೇ ವಾಸುದೇವಾಯ"**

# 3. ಭಗವಂತನೆಂಬ ಹೆಸರು

* ಭಗವಂತನಿಗೆ ನಮಸ್ಕಾರ! ಪ್ರಿಯವಾಚಕರಿರಾ ! ಹಿಂದಿನ ತಿಂಗಳ ಸಂದೇಶದಲ್ಲಿ ಪರಮೇಶ್ವರನು ಎಲ್ಲೆಲ್ಲಿಯೂ ಇರುವದರಿಂದ 'ವಾಸುದೇವ' ನೆನಸಿಕೊಂಡಿರುತ್ತಾನೆಂದು ತಿಳಿಸಿದ್ದಾಗಿರುತ್ತದೆ. ಈ ತಿಂಗಳು ಭಗವಂತನೆಂಬ ಹೆಸರನ್ನು ಕುರಿತು ಸ್ವಲ್ಪ ವಿಚಾರಿಸೋಣ.

ಭಗವಂತನೆಂದರೆ ಭಗ ಎಂಬ ಹೆಸರಿನ ಆರು ಗುಣಗಳುಳ್ಳವನು. ಮಿಗಿಲಿಲ್ಲದ ಐಶ್ವರ್ಯ, ಮಿಗಿಲಿಲ್ಲದ ಧರ್ಮ, ಮಿಗಿಲಿಲ್ಲದ ಯಶಸ್ಸು, ಮಿಗಿಲಿಲ್ಲದ ಶ್ರೀ, ಮಿಗಿಲಿಲ್ಲದ ವೈರಾಗ್ಯ-ಇವುಗಳು ಯಾವನಲ್ಲಿರುವವೋ ಅವನು ಭಗವಂತನು ಎಂದು ವಿಷ್ಣುಪುರಾಣದಲ್ಲಿ ವರ್ಣಿಸಿದೆ. ಲೋಕದಲ್ಲಿ ಯಾರು ಯಾರಿಗೆ ಹೆಚ್ಚಿನ ಸ್ವಾತಂತ್ರ್ಯವಿರುವದೋ, ಯಾರು ಯಾರು ಹೆಚ್ಚು ಧರ್ಮಪರರಾಗಿರುವರೋ, ಯಾರ ಯಾರ ಹೆಸರು ಎಲ್ಲೆಲ್ಲಿಯೂ ಹರಡಿರುವದೋ, ಯಾರ ಯಾರ ಸಿರಿಯು ಅಪರಿಮಿತವಾಗಿರುದೋ ಯಾರ ಯಾರ ತಿಳಿವಳಿಕೆಯು ಮಿಕ್ಕವರಿಗಿಂತ

---

* ಸಂಪುಟ 16, ಸಂಚಿಕೆ 3, ನವೆಂಬರ್ 1946, ಪುಟ 49-51

ಹೆಚ್ಚಾಗಿರುವದೋ, ಯಾರು ಯಾರಿಗೆ ವಿಷಯಗಳಲ್ಲಿ ವೈರಾಗ್ಯವಿರುವದೋ, ಅವರನ್ನೆಲ್ಲ 'ಭಗವಾನ್' ಎಂಬ ಹೆಸರಿನಿಂದ ಕರೆಯುವದು ಸಂಸ್ಕೃತ ಭಾಷೆಯ ರೂಢಿ. ಋಷಿಗಳೂ, ದೇವತೆಗಳೂ ಈ ಅರ್ಥದಲ್ಲಿ 'ಭಗವಂತ' ಎಂಬ ಹೆಸರಿಗೆ ತಕ್ಕವರೇ ಆಗಿರುತ್ತಾರೆ. ಆದರೆ ಯಾವಾತನಿಗೆ ಈ ಆರು ಗುಣಗಳೂ ಇನ್ನಿಲ್ಲವೆಂಬಷ್ಟು ಇವೆಯೋ ಆ ಪರಮೇಶ್ವರನಿಗೆ 'ಭಗವಾನ್' ಎಂಬ ಹೆಸರು ಮುಖ್ಯಾರ್ಥದಲ್ಲಿ ಸಲ್ಲುತ್ತದೆ.

ಇಲ್ಲಿ ಹೇಳಿರುವ ಆರು ಗುಣಗಳು ಮಾತ್ರವೇ ಭಗವಂತನಲ್ಲಿರುತ್ತವೆ ಎಂದು ತಿಳಿಯಬಾರದು. ವಿಷ್ಣುಪುರಾಣದಲ್ಲಿಯೇ ಹೇಳಿರುವಂತೆ ಆತನು ಸಮಸ್ತಕಲ್ಯಾಣ ಗುಣಗಳಿಗೂ ಆಕರ ವಾಗಿರುತ್ತಾನೆ. ತನ್ನ ಶಕ್ತಿಯ ಒಂದಂಶದಿಂದ ಸಮಸ್ತ ಭೂತಗಳನ್ನೂ ವ್ಯಾಪಿಸಿಕೊಂಡಿರುತ್ತಾನೆ. ತನ್ನ ಇಚ್ಛೆಯಿಂದಲೇ ಯಾವ ರೂಪವನ್ನಾದರೂ ತೆಗೆದು ಕೊಳ್ಳಬಲ್ಲನು. ಜಗತ್ತಿನಲ್ಲಿ ಸಮಸ್ತಪ್ರಾಣಿಗಳ ಹಿತವನ್ನೂ ಸಾಧಿಸುವುದಕ್ಕೆ ಶಕ್ತನು; ಪರಮದಯಾಳು.

ಮನುಷ್ಯರು ಸೂರ್ಯನ ಹತ್ತಿರಕ್ಕೆ ಹೋಗಿ ಅವನು ಇದ್ದಂತೆ ನೋಡಿ ಅರಿತುಕೊಳ್ಳಲಾರರು. ಹಾಗೆ ನೋಡುವದಕ್ಕೆ ಪ್ರಯತ್ನಿಸಿದರೆ ಅವರ ಕಣ್ಣುಗಳು ಸೀದುಹೋದಾವು! ದೂರದಲ್ಲಿ ನಿಂತು ಎವೆಯಿಕ್ಕದೆ ನೋಡುವದಕ್ಕೆ ಯತ್ನಿಸಿದರೂ ಅವರ ಕಣ್ಣುಗಳು ಮಂಜಾಗುವವು. ಆದ್ದರಿಂದ ಸೂರ್ಯನನ್ನು ದಿಟ್ಟಿಸಿ ನೋಡಲಾರದವರೇ ಬಹಳ ಮಂದಿ. ಆದರೆ ಸೂರ್ಯನು ಇರುವನೆಂಬ ಬಗ್ಗೆ ಯಾರೊಬ್ಬರಿಗೂ ಸಂಶಯವಿರುವದಿಲ್ಲ. ಜನರು ಎಲ್ಲೆಲ್ಲಿಯೂ ಸೂರ್ಯನ ಬೆಳಕಿನಲ್ಲಿಯೇ ಜೀವಿಸುತ್ತಿರುವರು. ಆತನ ಕಿರಣಗಳ ಶಾಖದ ಶಕ್ತಿಯಿಂದಲೇ ಮಳೆಬೆಳೆಗಳು ಉಂಟಾಗಿ ಲೋಕದ ಕಲ್ಯಾಣವುಂಟಾಗುತ್ತಿರುವದೆಂಬುದನ್ನು ಎಲ್ಲರೂ ಬಲ್ಲವರಾಗಿರುತ್ತಾರೆ. ಇದರಂತೆ ಪರಮೇಶ್ವರನನ್ನು ಆತನ ಸ್ವಸ್ವರೂಪದಿಂದ ಅರಿತುಕೊಳ್ಳುವುದಕ್ಕೆ, ಅಲ್ಪಜ್ಞರಾದ ನಮ್ಮಗಳಿಗೆ ಆಗದೆ ಇರಬಹುದು. ಆದರೆ ಅಷ್ಟುಮಾತ್ರದಿಂದ ಅವನ ಇರುವಿಕೆಯನ್ನು ನಾವು ಮರೆಯುವದಕ್ಕೆ ಕಾರಣವಿಲ್ಲ. ಲೋಕದಲ್ಲಿರುವ ಜ್ಞಾನ, ಶಕ್ತಿ, ದಯೆ ಮುಂತಾಗಿ ಕಲ್ಯಾಣಗುಣಗಳೆಲ್ಲ ಆತನ ಕಿರಣಗಳೇ. ಆ ಗುಣಗಳ ಬೆಳಕೂ ಶಾಖವೂ ನಮ್ಮ ಜೀವನವಾಗಿವೆ. ನಮ್ಮ ಬಾಳಿನ ಗಿಡಕ್ಕೆ ಕಾಲಕಾಲಕ್ಕೆ ಹೊಯ್ನೀರೆರೆದು ಅದನ್ನು ಬೆಳೆಯಿಸುತ್ತವೆ. ಅವುಗಳಿಂದಲೇ ಅದು ಹೂಬಿಟ್ಟು, ಹಣ್ಣನ್ನೂ ಕಾಲಾನುಕಾಲಕ್ಕೆ ಬಿಟ್ಟು ನಮ್ಮಗಳನ್ನು ನಂದನವನದ ಪಾರಿಜಾತವೃಕ್ಷಗಳಾಗಿ ಮಾಡುವದು.

ಆದ್ದರಿಂದ ಪರಮೇಶ್ವರನು ಎಲ್ಲೆಲ್ಲಿಯೂ ಇದಾನೆಂಬುದರ ಜೊತೆಗೆ ಆತನ ಕಲ್ಯಾಣ ಗುಣಗಳು ಎಲ್ಲೆಲ್ಲಿಯೂ ಹರಡಿಕೊಂಡಿವೆ ಎಂಬುದನ್ನು ಭಾವಿಸುವ ಅಭ್ಯಾಸವನ್ನು ನಾವು ಮಾಡಿಕೊಳ್ಳಬೇಕು. ಸಣ್ಣಮಗುವೊಂದು ತನ್ನ ಮನಬಂದಂತೆ ಆಡಿಕೊಂಡಿರುತ್ತದೆ.

ಆದರೆ ತನಗೆ ಏನಾದರೂ ತೊಂದರೆಯುಂಟಾದರೆ ಕೂಡಲೆ 'ಅವಮ್ಮಾ' ಎಂದು ಆರ್ತಸ್ವರದಿಂದ ಕೂಗಿಕೊಳ್ಳುತ್ತದೆ. ಅದರ ಮನಸ್ಸಿನ ಭಾವನೆ ಏನು? 'ನಮ್ಮ ತಾಯಿಯು ನನ್ನನ್ನು ಯಾವಾಗಲೂ ಕಾಪಾಡುವದಕ್ಕೆ ಸಿದ್ಧಳಾಗಿರುತ್ತಾಳೆ. ಆಕೆ ನನ್ನನ್ನು ಯಾವಾಗಲೂ ಪ್ರೇಮದಿಂದ ಮುದ್ದಾಡುತ್ತಾಳೆ. ನನಗೆ ಹಸಿವಾದರೆ ಕೊಡುವದಕ್ಕೆ ತಿಂಡಿಯನ್ನು ಸಿದ್ಧವಾಗಿ ಇಟ್ಟುಕೊಂಡಿರುತ್ತಾಳೆ: ಚಳಿಯಾದರೆ ಬಟ್ಟೆಗಳನ್ನು ಉಡಿಸುತ್ತಾಳೆ; ನಿದ್ರೆ ಬಂದರೆ ಮೆತ್ತನೆಯ ಹಾಸಿಗೆಯನ್ನು ಹಾಕಿ ಮಲಗಿಸುತ್ತಾಳೆ. ನಮ್ಮ ತಾಯಿ ಇರುವದರಿಂದ ನನಗೆ ಯಾವ ಅಂಜಿಕೆಯೂ ಇಲ್ಲ.' ಹೀಗೆಂದು ಆ ಮಗು ತರ್ಕವನ್ನು ಮಾಡುತ್ತಿರುವದಿಲ್ಲ, ಯಾರಿಗಾದರೂ ಹೀಗೆಂದು ಉಪನ್ಯಾಸವನ್ನೂ ಹೇಳುತ್ತಿರುವದಿಲ್ಲ. ಆದರೆ ತಾಯಿಯ ಜಾಗರೂಕತೆ, ದೂರದೃಷ್ಟಿ, ದಯೆ, ಪ್ರೇಮ–ಮುಂತಾದ ಕಲ್ಯಾಣಗುಣಗಳಲ್ಲಿ ಮಾತ್ರ ಅದಕ್ಕೆ ಸ್ವಲ್ಪವೂ ಕದಲದ ನಂಬಿಕೆಯಿದ್ದುಬಿಟ್ಟಿರುತ್ತದೆ. ಇದರಂತೆಯೇ ನಾವುಗಳೂ ನಮ್ಮಗಳ ತಾಯಿಯಾಗಿಯೂ ತಂದೆಯಾಗಿಯೂ ಇರುವ ಪರಮೇಶ್ವರನ ಕಲ್ಯಾಣ ಗುಣಗಳನ್ನೂ ಅಚಲಶ್ರದ್ಧೆಯಿಂದ ನಂಬಿಕೊಂಡು ನಡೆಯುತ್ತಿರಬೇಕು. ಆತನ ಪ್ರೇಮಾಲಿಂಗನದಲ್ಲಿ ನಾವು ಸುಖವಾಗಿ ಬಾಳಿಕೊಂಡಿರಬಹುದು. ಸರ್ವಜ್ಞನಾದ ಆತನಿಗೆ ನಮ್ಮ ಹಿತವು ಏತರಿಂದಾಗುವದೆಂಬುದು ತಿಳಿಯದೆ ಇಲ್ಲ; ಸರ್ವಶಕ್ತನಾದ ಆತನಿಂದ ಆಗದೆ ಇರುವ ಕಾರ್ಯವು ಯಾವದೊಂದೂ ಇಲ್ಲ; ದಯಾಳುವಾದ ಆತನು ನಮಗೆ ಕೊಡುವದಕ್ಕೆ ಹಿಂಜರಿಯುವ ವಸ್ತುವೇ ಇಲ್ಲ; ನಮ್ಮ ಇರವೂ ಪೋಷಣೆಯೂ ಅಭ್ಯುದಯವೂ ಶ್ರೇಯಸ್ಸೂ ಆತನನ್ನೇ ಅವಲಂಬಿಸಿದೆ. ಆತನನ್ನು ನಂಬಿರುವವರೆಗೆ ಯಾವ ಅಂಜಿಕೆಯೂ ಇಲ್ಲ. ನಮ್ಮ ಶರೀರದ ಆರೋಗ್ಯ, ನಮ್ಮ ಮನಸ್ಸಿನ ನೆಮ್ಮದಿ, ನಮ್ಮ ವ್ಯವಹಾರದಲ್ಲಿ ಮುನ್ನಡೆ, ನಮ್ಮ ಸುತ್ತುವಳೆಯದ ಆನಂದ–ಎಲ್ಲವೂ ಆತನ ಛತ್ರಛಾಯೆಯಲ್ಲಿ ನಮಗೆ ನಿಶ್ಚಿತವಾಗಿ ಸಿಕ್ಕುವ ಸೌಭಾಗ್ಯಗಳು. ಆತನೇ ನಮಗೆ ತಾಯಿ, ಆತನೇ ನಮಗೆ ತಂದೆ, ಆತನೇ ನಮ್ಮ ಗೆಳೆಯನು, ಆತನೇ ನಮ್ಮ ನೆಂಟನು, ಆತನೇ ನಮ್ಮ ದ್ರವ್ಯವು, ಆತನೇ ನಮ್ಮ ಸರ್ವಯೋಗ ಕ್ಷೇಮಗಳಿಗೂ ಒಡೆಯನು, ಎಂಬ ಬಲವಾದ ಭಾವನೆಯನ್ನು ನಮ್ಮ ಹೃದಯದಲ್ಲಿ ತುಂಬಿಕೊಳ್ಳಬೇಕು. ಭಗವಂತನಲ್ಲಿ ಶ್ರದ್ಧಾಭಕ್ತಿಗಳಿರಬೇಕೆಂಬ ಹಿರಿಯರ ಉಪದೇಶಕ್ಕೆ ಇದೇ ಅರ್ಥ.

ಪರಮೇಶ್ವರನ ಕಲ್ಯಾಣಗುಣಗಳು ಇಲ್ಲದ ತಾಣವೇ ಇಲ್ಲ, ಇಲ್ಲದ ಕಾಲವೇ ಇಲ್ಲ. ನೀರು, ನೆಲ, ಬೆಂಕಿ, ಗಾಳಿ, ಆಕಾಶ– ಎಲ್ಲೆಲ್ಲಿಯೂ ಆತ್ಮನಿರುತ್ತಾನೆ, ಆತನ ಗುಣಗಳು ಅಲ್ಲೆಲ್ಲ ತುಂಬಿಕೊಂಡಿರುತ್ತವೆ. ನಾವು ಮನೆಯಲ್ಲಿರುವಾಗ ಹೇಗೋ ಹಾಗೆ ಕಾಡಿನಲ್ಲಿರುವಾಗಲೂ, ಸುಖಕಾಲದಲ್ಲಿ ಹೇಗೋ ಹಾಗೆ ಕಷ್ಟಕಾಲದಲ್ಲಿಯೂ, ನಡುಹಗಲಿನಲ್ಲಿ ಹೇಗೋ ಹಾಗೆ ಕಗ್ಗತ್ತಲೆಯ ಸರಿಹೊತ್ತಿನಲ್ಲಿಯೂ, ನೆಂಟರ ನಡುವೆ

ಇರುವಾಗ ಹೇಗೋ ಹಾಗೆ ಕಳ್ಳರ ನಡುವೆ ಇರುವಾಗಲೂ, ಐಸಿರಿಯಲ್ಲಿ ಹೊರಳಾಡುತ್ತಿರುವಾಗ ಹೇಗೋ ಹಾಗೆ ಕಡುಬಡತನದಲ್ಲಿ ಮುಳುಗಿರುವಾಗಲೂ, ನಲಿದಾಡುವ ಹುಡುಗತನದಲ್ಲಿ ಹೇಗೋ ಹಾಗೆ ನೆರೆಗೂದಲಿನ ನಡುಗುದಲೆಯ ಸುಕ್ಕುಚರ್ಮದ ಸೋಲುಕೈಕಾಲಿನ ಮುದುಕ ತನದಲ್ಲಿಯೂ ಆತನ ದಯೆಯು ನಮ್ಮನ್ನು ಕಾಪಾಡುವದಕ್ಕೆ ಸಿದ್ಧವಾಗಿರುವದು; ಆತನ ಸೌಂದರ್ಯವು ನಮ್ಮ ಚಿತ್ತವನ್ನು ಸೆಳೆದುಕೊಂಡು ತನ್ನಲ್ಲಿ ನೆಟ್ಟುಕೊಳ್ಳುವದಕ್ಕೆ ಹೊಂಚು ಹಾಕುತ್ತಿರುವದು; ಆತನ ಜ್ಞಾನದ ಬೆಳಕು ನಮ್ಮ ಅಜ್ಞಾನದ ಕತ್ತಲೆಯ ಹಾವಳಿಯನ್ನು ತಪ್ಪಿಸುವದಕ್ಕೆಂದು ಎಲ್ಲೆಲ್ಲಿಯೂ ಹರಡಿಕೊಂಡಿರುವದು; ಆತನ ಪ್ರೇಮದ ಬಳ್ಳಿಯು ತನ್ನ ಕೋಮಲವಾದ ತೋಳುಗಳಿಂದ ಬಿಗಿದಪ್ಪುವದಕ್ಕೆಂದು ನಮ್ಮನ್ನು ಸುತ್ತುವರಿಯುತ್ತಿರುವದು. ನಾವೆಲ್ಲರೂ ಅಮೃತ ಸ್ವರೂಪನಾದ ಆ ಭಗವಂತನ ಮಕ್ಕಳೇ; ಸತ್ಯಕಾಮನೂ ಸತ್ಯಸಂಕಲ್ಪನೂ ಸರ್ವಜ್ಞನೂ ಸರ್ವಶಕ್ತನೂ ದಯಾಘನನೂ ಪ್ರೇಮದ ಖನಿಯೂ ಆಗಿರುವ ಆತನು ತನ್ನ ಪರಮ ಸಾಮ್ಯವನ್ನು ನಮಗೆ ಅನುಗ್ರಹಿಸುವದಕ್ಕೆ ಎಂದೆಂದಿಗೂ ಸಿದ್ಧನಾಗಿರುವನು, ಉತ್ಸುಕನಾಗಿರುವನು ಎಂಬುದನ್ನು ನಾವುಗಳು ನೆನಪಿನಲ್ಲಿಡಬೇಕು.

## 4. ಪರಮೇಶ್ವರನಿಗೆ ಯಾವ ಹೆಸರು

* ಪರಮೇಶ್ವರನಿಗೆ ಯಾವ ಹೆಸರು ಸಲ್ಲುವದು? ಆತನನ್ನು ಯಾವ ಹೆಸರಿನಿಂದ ಕರೆಯುವದು ಸರಿ? ಶಿವನೆಂದು ಶೈವರು, ವಿಷ್ಣುವೆಂದು ವೈಷ್ಣವರು, ಶಕ್ತಿಯೆಂದು ಶಾಕ್ತೇಯರು, ಸೂರ್ಯನೆಂದು ಸೌರರು, ಗಣಪತಿಯೆಂದು ಗಾಣಾಪತ್ಯರು, ಅರ್ಹಂತನೆಂದು ಜೈನರು, ಬುದ್ಧನೆಂದು ಬೌದ್ಧರು, ಅಹುರಮಜ್ದನೆಂದು ಪಾರ್ಸಿಯರು, ಅಲ್ಲಾಹನೆಂದು ಮುಸಲ್ಮಾನರು, ಯಹೋವನೆಂದು ಯಹೂದಿಯರು, ತಂದೆ ಅಥವಾ ಕರ್ತ ಎಂದು ಕ್ರೈಸ್ತರು- ಹೀಗೆ ಬಗೆಬಗೆಯಾಗಿ ಕರೆದಿರುತ್ತಾರೆ. ಇವುಗಳಲ್ಲಿ ಯಾವದನ್ನು ಇಟ್ಟಕೊಳ್ಳುವದು ಸರಿ?

ಈ ಪ್ರಶ್ನೆಗೆ ಉತ್ತರವನ್ನು ಹೇಳುವದರಲ್ಲಿ ಕೆಲವರು ತಮ್ಮ ತಮ್ಮ ಧರ್ಮವನ್ನು ಎತ್ತಿ ಹಿಡಿದು 'ನಾವು ಇಟ್ಟುಕೊಂಡಿರುವ ಹೆಸರೇ ಸರಿ. ಮಿಕ್ಕವರದು ಸರಿಯಲ್ಲ; ಅಥವಾ ನಮ್ಮ ಹೆಸರಿನಷ್ಟು ಉತ್ತಮವಲ್ಲ' ಎಂಬ ಅಭಿಪ್ರಾಯವನ್ನು ಹೊರಪಡಿಸಿರುತ್ತಾರೆ. ಆದರೆ ಪ್ರಪಂಚದಲ್ಲಿರುವ ಧಾರ್ಮಿಕವಾಙ್ಮಯದಲ್ಲೆಲ್ಲ ಅತ್ಯಂತ ಪುರಾತನವಾದ ಋಗ್ವೇದದಲ್ಲಿ ಒಂದು ಋಷಿವಾಕ್ಯವು ಕಂಡುಬರುತ್ತದೆ? 'ಏಕಂ ಸದ್ವಿಪ್ರಾ ಬಹುಧಾ ವದನ್ತಿ'-ಇರುವದು

* ಸಂಪುಟ 16, ಸಂಚಿಕೆ 4, ಡಿಸೆಂಬರ್ 1946, ಪುಟ 73-76

ಒಂದು; ಅರಿತವರು ಅದನ್ನು ಹಲವು ಬಗೆಯಾಗಿ ಕರೆಯುತ್ತಿರುವರು. ಇಂದ್ರ, ಮಿತ್ರ, ವರುಣ, ಅಗ್ನಿ, ಸುಪರ್ಣ, ಯಮ, ಮಾತರಿಶ್ವ– ಎಲ್ಲಾ ಆತನ ಹೆಸರುಗಳೇ (ಋ. ಮಂ. 1–23–164). ಈ ಋಷಿವಾಕ್ಯದ ಅಭಿಪ್ರಾಯುವನ್ನು ಸ್ವಲ್ಪ ಒಳಹೊಕ್ಕು ನೋಡುವದಕ್ಕೆ ಪ್ರಯತ್ನಿಸೋಣ.

ಇರುವದೆಲ್ಲ ಒಂದೇ. ನಮ್ಮ ಇಡಿಯ ಜಗತ್ತಿಗೆ ಕಾರಣವಾಗಿ, ಇದರ ತಿರುಳಾಗಿ, ಇದಕ್ಕೆ ಆಸರೆಯಾದ ನೆಲೆಯಾಗಿ, ಇದರ ಇರವಿಗೂ ಚಟುವಟಿಕೆಗಳಿಗೂ ಬೆಳವಣಿಗೆಗೂ ಆಗುಹೋಗುಗಳಿಗೂ ಮೂಲವಾಗಿ, ಇರುವದೆಲ್ಲ ಒಂದೇ ಒಂದು ವಸ್ತು. ನಮ್ಮ ಎದುರಿಗೆ ತೋರುತ್ತಿರುವ ದೃಶ್ಯಗಳಲ್ಲಿ ಯಾವದೊಂದೂ ನಿತ್ಯವಲ್ಲ. ಇದೆಲ್ಲ ಹರಿಯುತ್ತಿರುವ ನದಿಯಂತೆ, ತೋರಿ ಹಾರುತ್ತಿರುವ ಚಲನಚಿತ್ರದೃಶ್ಯದಂತೆ, ಕನ್ನಡಿಯಲ್ಲಿ ಕಾಣುವ ಪಡಿನೆಳಲಿನಂತೆ, ಇರುವದು. ಆದರೂ ಇದು ನಮ್ಮಗಳ ಮೇಲೆ ಬಲವಾದ ಪರಿಣಾಮ ವನ್ನುಂಟುಮಾಡುತ್ತಾ ನಿತ್ಯವಾಗಿ ಇದ್ದುಕೊಂಡೇ ಇರುವ, ಸುಖದುಃಖಗಳನ್ನು ಕೊಡಬಲ್ಲ, ವಸ್ತುವೆಂದೇ ಕಾಣುತ್ತಿರುವದು. ಹೀಗಾಗುವದರ ಕಾರಣವು ಯಾವದು? ಇದರ ಇರವಿನ ಮೂಲವು ಯಾವದು? ಇದರ ಓಡಾಟಕ್ಕೆ ಕಾರಣವಾದ ಕೀಲು ಎಲ್ಲಿದೆ ? ಇದರ ಸೌಂದರ್ಯವನ್ನು ಚಿತ್ರಿಸಿರುವ ಕುಂಚವು ಯಾರದು? ಇಲ್ಲಿ ಕಾಣಿಸುವ ಜ್ಞಾನ ಕಿರಣಗಳ ಸೂರ್ಯನು ಯಾರು? ಇದರಲ್ಲಿ ತೋರುವ ಸುಖದುಃಖಾದಿಗಳ ಬುಗ್ಗೆಯ ಉದ್ಗಮಸ್ಥಾನವು ಯಾವದು? ನಮಗೆ ಕಾಣುವ ನೋಟಗಳಿಗೆಲ್ಲ ಮೂಲವು ಒಂದೇ ಒಂದು. ಅದೇ ಪರಮಾರ್ಥಸದ್ರೂಪವಾದ ತತ್ತ್ವವು. ಅದನ್ನೇ ನಾವು ಪರಮೇಶ್ವರನು, ದೇವರು–ಎನ್ನುತ್ತಿರುವದು.

ಈ ಪ್ರಪಂಚದ ನಾಟಕಮಂದಿರದಲ್ಲಿರುವಾಗ ನಾವುಗಳೆಲ್ಲರೂ ಸಾಮಾನ್ಯವಾಗಿ ಇಲ್ಲಿ ನಿತ್ಯವಾಗಿರುವೆವೆಂದೇ ಭಾವಿಸಿಕೊಂಡಿರುವೆವು. ನಾಟಕವನ್ನು ನೋಡುವಾಗ ನಮಗೆ ಕಾಣುವ ದೇಶಗಳೂ ಕಾಲವೂ ಪಾತ್ರಗಳೂ ಅವರ ನಡೆನುಡಿಗಳೂ ನಿಜವಾಗಿ ಈಗಲೇ ನಮಗೆ ಅನುಭವಗೋಚರವಾಗುತ್ತಿರುವವೆಂದು ನಮ್ಮ ಭಾವನೆ. ನಾಟಕದ ಸೊಬಗನ್ನು ಅನುಭವಿಸುವದಕ್ಕೂ ಅಲ್ಲಿಯ ಗಾನವನ್ನು ಕೇಳಿ ಆನಂದಿಸುವದಕ್ಕೂ, ಪಾತ್ರಗಳ ಅಭಿನಯವನ್ನು ಮೆಚ್ಚುವದಕ್ಕೂ ಈ ನಿತ್ಯತ್ವಬುದ್ಧಿಯು ಅವಶ್ಯವೇ ಸರಿ. ಆದರೆ ಆಗಾಗ್ಗೆ ಅಂಕಪರದೆಯು ಬಿದ್ದು ಸ್ವಲ್ಪವಿರಾಮವಿರುವಾಗ 'ಇದೆಲ್ಲ ನಾಟಕವು; ಈಗಾಗಲೆ ಇಂತಿಷ್ಟು ಅಂಕಗಳು ಆದವು; ಇನ್ನೂ ಇಂತಿಷ್ಟು ಘಂಟೆಯು ಆಟವು ಮಾತ್ರ ಉಳಿದಿದೆ' ಎಂದುಕೊಳ್ಳುವೆವು. ಆಗ ಮಾತ್ರ ಈ ನಾಟಕವನ್ನು ನಾವು ನೋಡುತ್ತಿದ್ದರೂ ಇದೆಲ್ಲವೂ ಮುಗಿದುಹೋಗಲಿದೆಯೆಂದೂ ನಾವು ಇಷ್ಟರಲ್ಲಿಯೇ ನಮ್ಮ ನಿಜವಾದ ಮನೆಗೆ ಹೋಗಬೇಕಾಗುವದೆಂದೂ ನಮ್ಮ ನೆನಪಿಗೆ ಬರುತ್ತದೆ. ಈ ಪ್ರಪಂಚದಲ್ಲಿ ಎಲ್ಲವೂ

ಬದಲಾಯಿಸುತ್ತಲೇ ಇರುತ್ತದೆ. ನಮ್ಮ ಸುತ್ತುವಳೆಯ ಎಲ್ಲವೂ ಮಾರ್ಪಡುತ್ತಲೇ ಇರುತ್ತದೆ, ನಾವೂ ಬದಲಾಯಿಸುತ್ತಿರುವೆವು. ಆದರೆ ಪರಮಾರ್ಥವೊಂದು ಮಾತ್ರ ಬದಲಾಯಿಸುವದಿಲ್ಲ. ಅದರಲ್ಲಿ ಯಾವ ಮಾರ್ಪಾಡುಗಳೂ ಆಗುತ್ತಿರುವದಿಲ್ಲ. ಇದನ್ನು ಮನಸ್ಸಿಗೆ ಚೆನ್ನಾಗಿ ಹತ್ತಿಸಿಕೊಂಡಿರುವವರೇ ಋಷಿಗಳು. ಅಂಥವರು ಹೇಳುವ ವಾಕ್ಯವಿದು. ಇರುವದೆಲ್ಲ ಒಂದೇ, ಇರುವ ಆ ಒಂದು ಪರಮಾರ್ಥವು ಎಂದಿಗೂ ಬೇರೆಯಾಗುವದಿಲ್ಲ. ಈ ಇರವೇ, ಈ ಪರಮಾರ್ಥವೇ, ದೇವರು, ಪರಮೇಶ್ವರನು, ಭಗವಂತನು.

ಇರುವದೆಲ್ಲ ಒಂದೇ. ಆದರೆ ಅದನ್ನು ಅರಿತವರು ಬಗೆಬಗೆಯಾದ ಹೆಸರುಗಳಿಂದ ಕರೆಯುತ್ತಿರುವರು. ದೇವರನ್ನು ಕಂಡ ಋಷಿಗಳು, ಮಹನೀಯರು, ಮಹಾತ್ಮರು– ತಮ್ಮ ಅನುಭವವನ್ನು ಜನರಿಗೆ ತಿಳಿಸುವದಕ್ಕೆಂದು ಆ ದೇವರಿಗೆ ಕೆಲವು ಹೆಸರುಗಳನ್ನು ಇಟ್ಟುಕೊಂಡಿರುತ್ತಾರೆ. ಆದರೆ ಈ ಹೆಸರುಗಳು ಒಂದೇ ಆಗಿರುವದಿಲ್ಲ; ಬಗೆಬಗೆಯಾಗಿರುತ್ತವೆ, ಲೆಕ್ಕವಿಲ್ಲದಷ್ಟು ಇರುತ್ತವೆ. ಯಾವ ಯಾವ ಭಕ್ತರು ಯಾವ ಯಾವ ಹೆಸರಿನಿಂದ ಭಗವಂತನನ್ನು ಮೊದಲು ಕರೆದರೋ ಅವರವರ ಅನುಯಾಯಿಗಳು ಆಯಾ ಹೆಸರನ್ನೇ ಆ ದೇವದೇವನಿಗೆ ಇಟ್ಟುಕೊಂಡಿರುತ್ತಾರೆ. ಹೀಗಿರುವದರಿಂದ ಬೇರೆಬೇರೆಯ ಆಚಾರ್ಯರುಗಳ ಶಿಷ್ಯರು ಬೇರೆಬೇರೆಯ ಹೆಸರುಗಳಿಂದ ಭಗವಂತನನ್ನು ಕರೆದರೆ, ತಮ್ಮ ಮೂಲಗುರುಗಳು ಕರೆದ ಹೆಸರಿನಿಂದಲೇ ಈಶ್ವರನನ್ನು ಕರೆಯುವದು ಅವರವರಿಗೆ ಮೆಚ್ಚಿಗೆಯಾದರೆ, ಆಶ್ಚರ್ಯವಿಲ್ಲ. ಶ್ರೀರಾಮಕೃಷ್ಣಪರಮಹಂಸರು ಹೇಳಿರುವಂತೆ ಒಂದು ಭಾಷೆಯಲ್ಲಿ ನೀರಿಗೆ ಪಾಣಿ ಎಂದು ಹೆಸರು, ಮತ್ತೊಂದರಲ್ಲಿ ಆಕ್ವಾ ಎಂದು ಹೆಸರು, ಇನ್ನೊಂದರಲ್ಲಿ ವಾರಿ ಎಂದು ಹೆಸರು; ಆದರೆ ಜನರು ಬೇರೆಬೇರೆಯ ಹೆಸರುಗಳಿಂದ ಕರೆಯುತ್ತಿರುವದು ನೀರೆಂಬ ಒಂದೇ ವಸ್ತುವನ್ನೇ. ಹೀಗೆಯೇ ಬೇರೆಬೇರೆಯ ಮತದವರು ಒಬ್ಬನೇ ದೇವರಿಗೆ ಬೇರೆಬೇರೆಯ ಹೆಸರನ್ನಿಟ್ಟುಕೊಂಡಿರುವರು. ಇಷ್ಟುಮಾತ್ರದಿಂದ ದೇವರುಗಳು ಅನೇಕರೆಂದಾಗುವದಿಲ್ಲ. ಇರುವದೆಲ್ಲ ಒಂದೇ; ಅದನ್ನೇ ಹಲವು ಹೆಸರುಗಳಿಂದ ಕರೆಯುತ್ತಿರುವೆವು.

ಈಗ ಒಂದು ಶಂಕೆಯು ಬರುವದು. ನೀರಿಗೆ ಬೇರೆಬೇರೆಯ ಭಾಷೆಯಲ್ಲಿ ಬೇರೆಬೇರೆಯ ಹೆಸರುಗಳಿದ್ದರೆ ಆಶ್ಚರ್ಯವಲ್ಲ. ಆದರೆ ಒಂದೇ ಭಾಷೆಯಲ್ಲಿ ಒಬ್ಬನೇ ದೇವರಿಗೆ ಅನೇಕ ಹೆಸರುಗಳಿರುವದೇತಕ್ಕೆ? ಒಂದು ಸಂಸ್ಕೃತಭಾಷೆಯಲ್ಲಿಯೇ ನೋಡಿದರೆ ಪರಮೇಶ್ವರನಿಗೆ ಸಾವಿರಾರು ಹೆಸರುಗಳಿರುತ್ತವೆ. ಹೀಗೆಯೇ ಅರಬ್ಬಿ ಮುಂತಾದ ಭಾಷೆಗಳಲ್ಲಿಯೂ ಇರುತ್ತವೆ ಎಂದು ಹೇಳುತ್ತಾರೆ. ಈ ಹೆಸರುಗಳೆಲ್ಲ ಪರ್ಯಾಯಶಬ್ದಗಳೆ? ಈ ಎಲ್ಲಾ ಹೆಸರುಗಳಿಗೆ ಒಂದೇ ಅರ್ಥವಾದರೆ, ಒಂದು ಹೆಸರನ್ನು ಬಿಟ್ಟು ಮಿಕ್ಕವು ವ್ಯರ್ಥವಾಗುವದಿಲ್ಲವೆ? ಈ ಶಂಕೆಗೆ ಪರಿಹಾರವೇನೆಂದರೆ, ದೇವರು ಒಬ್ಬನೇ ಆದರೂ

ಆತನ ಗುಣಗಳು ಅನಂತವಾಗಿರುತ್ತವೆ. ಸೂರ್ಯನಿಗೂ ಕಿರಣಗಳಿಗೂ ಅಭೇದ ವಿರುವಂತೆ ಭಗವಂತನ ಗುಣಗಳಿಗೂ ಭಗವಂತನಿಗೂ ಅಭೇದವೇ ಇದ್ದರೂ ಒಂದೊಂದು ಗುಣಕ್ಕೂ ಆಯಾ ಒಂದೊಂದು ವಿಶೇಷವನ್ನು ತಿಳಿಸುವ ಹೆಸರುಗಳನ್ನು ಕೊಟ್ಟಿರುವದು ವ್ಯರ್ಥವಲ್ಲ. ಆದ್ದರಿಂದಲೇ ವಿಷ್ಣುಸಹಸ್ರನಾಮದಲ್ಲಿ ಹೀಗೆಂದು ಹೇಳಿರುತ್ತದೆ:-

**ಯಾನಿ ನಾಮಾನಿ ಗೌಣಾನಿ ವಿಖ್ಯಾತಾನಿ ಮಹಾತ್ಮನಃ ।**
**ಋಷಿಭಿಃ ಪರಿಗೀತಾನಿ ತಾನಿ ವಕ್ಷ್ಯಾಮಿ ಭೂತಯೇ ॥**

ಮಹಾತ್ಮನಾದ ಪರಮೇಶ್ವರನಿಗೆ ಗುಣಸಂಬಂಧದಿಂದ ಯಾವ ಯಾವ ಹೆಸರುಗಳು ಪ್ರಸಿದ್ಧವಾಗಿರುವವೋ ಯಾವಾವದನ್ನು ಋಷಿಗಳು ಹಾಡಿ ಹೊಗಳಿರುತ್ತಾರೋ ಅಂಥವುಗಳನ್ನು ಹೇಳುವೆನು. ಅವುಗಳನ್ನು ಹೇಳಿಕೊಳ್ಳುವವರಿಗೆ ಅಭ್ಯುದಯ ವುಂಟಾಗುತ್ತದೆ-ಎಂದು ಶ್ಲೋಕದ ಅರ್ಥ.

ಈಗ ನಾವು ಮೊದಲು ಹಾಕಿಕೊಂಡಿರುವ ಪ್ರಶ್ನೆಗೆ ಉತ್ತರವೇನೆಂಬುದು ವಾಚಕರಿಗೆ ಸ್ಪಷ್ಟವಾಗಿರುತ್ತದೆಯೆಂದು ನಂಬಬಹುದು. ಶಿವ, ವಿಷ್ಣು, ಶಕ್ತಿ, ಆದಿತ್ಯ, ಗಣಪತಿ, ಅರ್ಹಂತ, ಬುದ್ಧ, ಅಹುರಮಜ್ದ, ಅಲ್ಲಾಹ, ಯಹೋವ, ಕರ್ತ- ಮುಂತಾದ ಹೆಸರುಗಳಲ್ಲಿ ಯಾವ ಹೆಸರನ್ನು ದೇವರಿಗೆ ಇಟ್ಟುಕೊಳ್ಳುವದು ಸರಿ?- ಎಂಬುದೇ ಪ್ರಶ್ನೆ. ಈ ಪ್ರಶ್ನೆಗೆ ಉತ್ತರವಾಗಿ ಮತ್ತೊಂದು ಪ್ರಶ್ನೆಯನ್ನು ಹಾಕಬಹುದು. ನಮ್ಮ ಸ್ನೇಹಿತನನ್ನು ಅವರ ಮನೆಯವರಲ್ಲಿ ಕೆಲವರು ಅಪ್ಪ ಎನ್ನುತ್ತಾರೆ; ಕೆಲವರು ಮಾವ ಎನ್ನುತ್ತಾರೆ; ಇನ್ನೂ ಕೆಲವರು ಭಾವ ಎನ್ನುತ್ತಾರೆ; ಕೆಲವರು ಅಣ್ಣ ಎನ್ನುತ್ತಾರೆ; ಮತ್ತೆ ಕೆಲವರು ತಮ್ಮ ಎನ್ನುತ್ತಾರೆ. ಇವುಗಳಲ್ಲಿ ಯಾವದು ಸರಿ? ಮಗನಿಗೆ ಅಪ್ಪನಾದವನು ಅಳಿಯನಿಗೆ ಮಾವನಾಗುವದೂ ಮೈದುನನಿಗೆ ಭಾವನಾಗುವದೂ ವಿರುದ್ಧವಾಗುವದೇನು? ಒಬ್ಬ ಮನುಷ್ಯನು ಅಣ್ಣನಿಗೆ ತಮ್ಮನಾದರೆ ತಮ್ಮನಿಗೆ ಅಣ್ಣನಾಗಬಾರದೇನು? ಈ ಪ್ರಶ್ನೆಗೆ ಉತ್ತರವು ಸ್ಪಷ್ಟವಾಗಿರುತ್ತದೆ. ಬಂಧುತ್ವದ ಅಪೇಕ್ಷೆಯಿಂದ ಅಪ್ಪ, ಮಾವ, ಭಾವ- ಮುಂತಾದ ಹೆಸರುಗಳು ಒಬ್ಬನಿಗೆ ಬಂದರೆ ಆಶ್ಚರ್ಯವೇನೂ ಇಲ್ಲ. ಇದರಂತೆಯೇ ದೇವರ ಹೆಸರುಗಳನ್ನೂ ತಿಳಿಯಬೇಕು.

**ಶಿವನು** ಎಂದರೆ ಮಂಗಲಸ್ವರೂಪನು; ಪ್ರಪಂಚದಲ್ಲಿರುವ ಮಂಗಲವೆಲ್ಲ ಪರಮಾತ್ಮನಿಂದಲೇ ಬಂದಿರುತ್ತದೆ. ಆತನ ಸಂಬಂಧವಿಲ್ಲದಿರುವದು ಅಶಿವವು; ಆದ್ದರಿಂದ ದೇವರಿಗೆ **ಶಿವನು** ಎಂದು ಹೆಸರು. **ವಿಷ್ಣು** ಎಂದರೆ ವ್ಯಾಪಕನು. ದೇವರು ಇಲ್ಲಿರುವನು, ಅಲ್ಲಿಲ್ಲ ಎಂಬುದಿಲ್ಲ. ಮೇಲೆ, ಕೆಳಗೆ, ಎಡಕ್ಕೆ ಬಲಕ್ಕೆ, ಹಿಂದಕ್ಕೆ ಮುಂದಕ್ಕೆ, ಆಗ, ಈಗ, ಎಲ್ಲೆಲ್ಲಿಯೂ ಎಂದೆಂದಿಗೂ ಆತನು ಇಲ್ಲದ ಸ್ಥಲವಿಲ್ಲ. ಆದ್ದರಿಂದ ದೇವರಿಗೆ **ವಿಷ್ಣು** ಎಂದು ಹೆಸರು ಬಂದಿದೆ. **ಶಕ್ತಿ** ಎಂದರೆ ಬಲವು, ಜಗತ್ತಿನಲ್ಲಿ ವಸ್ತುವಿನಲ್ಲಿ, ಯಾವ

ಪ್ರಾಣಿಯಲ್ಲಿ, ಯಾವ ಮನುಷ್ಯನಲ್ಲಿ, ಯಾವ ದೇವತೆಯಲ್ಲಿ, ಅಥವಾ ಯಾವ ಸತ್ತ್ವವಿಶೇಷದಲ್ಲಿ, ಎಷ್ಟು ಬಲವಿರುವದೋ ಅದೆಲ್ಲ **ಶಕ್ತಿ** ಎಂಬ ಹೆಸರು ಸಲ್ಲುತ್ತದೆ. ಎಲ್ಲರ ಪ್ರಾಣಶಕ್ತಿಗಳನ್ನೂ ಸ್ವೀಕರಿಸಿ ತನ್ನ ವಶದಲ್ಲಿಟ್ಟುಕೊಂಡಿರುವದರಿಂದ **ಸೂರ್ಯ**ನೆಂದು ಆತನಿಗೆ ಹೆಸರು. ಜನರಿಗೆ ಒಳ್ಳೆಯದನ್ನು ಮಾಡುವ ದೇವಗಣಗಳಿಗೆಲ್ಲ ಒಡೆಯನಾದ್ದರಿಂದ ಆತನು **ಗಣಪತಿ** ಎನಿಸಿರುವನು. ಎಲ್ಲರ ಪೂಜೆಗೂ ಅರ್ಹನಾದ್ದರಿಂದ ಆತನು **ಅರ್ಹಂತ**ನಾಗಿರುವನು. ತತ್ತ್ವವನ್ನು ಎಂದಿಗೂ ಬಲ್ಲವನಾಗಿ ಜ್ಞಾನದ ಎಚ್ಚರದಲ್ಲಿರುವನಾದ್ದರಿಂದ ಆತನು **ಬುದ್ಧ**ನು. ಹೀಗೆಯೇ **ಅಹುರಮಜ್ದ** ಎಂದರೆ ಸರ್ವಜ್ಞನಾದ ಮಹಾಪ್ರಭುವು; **ಅಲ್ಲಾಹ**ನೆಂದರೆ ಎಲ್ಲಾ ಸರ್ವೋತ್ತಮ ಗುಣಗಳಿಂದಲೂ ಕೂಡಿರುವ ಸರ್ವಸ್ವತಂತ್ರನು; **ಯಹೋವ**ನೆಂದರೆ ಸನ್ಮಾತ್ರನು; **ಪರಲೋಕದ ತಂದೆ** ಎಂದರೆ ಎಲ್ಲರನ್ನೂ ಮಕ್ಕಳಂತೆ ಪ್ರೇಮದಿಂದ ನೋಡುವಾತನು, ಇತ್ಯಾದಿ, ಇತ್ಯಾದಿ.

ಪರಮೇಶ್ವರನಿಗೆ ಎಷ್ಟು ಹೆಸರುಗಳು?– ಎಂಬ ಪ್ರಶ್ನೆಗೆ ಉತ್ತರವು ಈಗ ಸುಲಭವಾಗಿ ಹೊಳೆಯುತ್ತದೆ. ಪರಮೇಶ್ವರನ ಗುಣಗಳು ಎಷ್ಟೋ ಆತನ ಹೆಸರುಗಳೂ ಅಷ್ಟೇ. ಆತನ ಗುಣಗಳು ಅನಂತವಾಗಿವೆ. ಅವುಗಳು ಇಷ್ಟೇ ಎಂದು ಎಣಿಸುವದು ಯಾರಿಂದಲೂ ಆಗಲಾರದು. ಪುಷ್ಪದಂತಾಚಾರ್ಯನು ಹೇಳಿರುವಂತೆ:–

**ಅಸಿತಗಿರಿಸಮಂ ಸ್ಯಾತ್ ಕಜ್ಜಲಂ ಸಿನ್ಧುಪಾತ್ರೇ**
**ಸುರತರುವರಶಾಖಾ ಲೇಖಿನೀ ಪತ್ರಮುರ್ವೀ**
**ಲಿಖತಿ ಯದಿ ಗೃಹೀತ್ವಾ ಶಾರದಾ ಸರ್ವಕಾಲಂ**
**ತದಪಿ ತವ ಗುಣಾನಾಮೀಶ ಪಾರಂ ನ ಯಾತಿ ॥**

ಅಂಜನಪರ್ವತದಷ್ಟು ಕಾಡಿಗೆ, ಸಮುದ್ರದಂಥ ಆಳವಾದ ಮಸಿಯ ದೌತಿ, ಕಲ್ಪತರುವಿನ ರೆಂಬೆಯಂತೆ ಎಂದೆಂದಿಗೂ ಸವೆಯದ ಲೇಖಿನಿ, ನೆಲದಂತೆ ವಿಶಾಲವಾಗಿರುವ ಕಾಗದ– ಇಷ್ಟು ಸಾಮಗ್ರಿಗಳನ್ನು ದೊರಕಿಸಿಕೊಂಡು ಸರ್ವಜ್ಞಕಲ್ಪಳೆನಿಸಿಕೊಂಡಿರುವ ಶಾರದೆಯು ಎಂದೆಂದಿಗೂ ಬಿಡದೆ ಬರೆಯುತ್ತಿದ್ದರೂ ಈಶ್ವರನ ಗುಣಗಳು ಮುಗಿಯುವ ಹಾಗಿಲ್ಲ. ಹೀಗಿರುವದರಿಂದ ಒಂದೊಂದು ಗುಣವನ್ನು ತಿಳಿಸುವದಕ್ಕೆ ಒಂದೊಂದು ಹೆಸರನ್ನು ಇಡುತ್ತಾ ಹೋದರೂ ದೇವರ ಹೆಸರುಗಳು ಇಂತಿಷ್ಟೆಂಬ ಲೆಕ್ಕವು ಸಿಕ್ಕುವಹಾಗಿಲ್ಲ. ಇನ್ನು ಗುಣಗಳ ಒಳಭೇದಗಳನ್ನು ಲೆಕ್ಕಕ್ಕೆ ತೆಗೆದುಕೊಂಡರೆ ಹೆಸರುಗಳ ಸಂಖ್ಯೆಯು ಎಷ್ಟಾಗಬೇಕಾದೀತು? ಭೂಮಿಯ ಮಣ್ಣಿನಲ್ಲಿರುವ ಧೂಳಿನ ಕಣಗಳನ್ನು ಎಣಿಸಿದರೂ ಎಣಿಸಬಹುದು; ಆದರೆ ಆ ಭಗವಂತನ ಕಲ್ಯಾಣಗುಣಗಳನ್ನು ಎಣಿಸುವದಕ್ಕಾಗಲಿ ಆ ಗುಣಗಳ ದೃಷ್ಟಿಯಿಂದ ಆತನಿಗೆ ಕೊಡಬಹುದಾದ ಹೆಸರುಗಳ ಲೆಕ್ಕದ ಕೊನೆಯನ್ನು ಕಾಣುವದಕ್ಕಾಗಲಿ ಆಗಲಾರದು.

ದೇವರಿಗೆ ಹೀಗೆ ಅನಂತ ನಾಮಗಳಿರುವವಾದ್ದರಿಂದ ನಾವು ನಮಗೆ ಯಾವ ಹೆಸರಿನಲ್ಲಿ ಸವಿ ಹತ್ತುವದೋ ಆ ಹೆಸರಿನಿಂದ ಆತನನ್ನು ಕರೆಯಬಹುದು. ಆದರೆ ಯಾವ ಹೆಸರಿನಿಂದಲೇ ದೇವರನ್ನು ಕರೆಯಿರಿ, ಒಂದು ವಿಷಯವನ್ನು ಮರೆಯಬಾರದು. ಎಲ್ಲಾ ಹೆಸರುಗಳೂ ಪರಮಪವಿತ್ರವಾಗಿರುತ್ತವೆ, ಆ ಸರ್ವೇಶ್ವರನ ಅನುಗ್ರಹವನ್ನು ಪಡೆದು ಸಂಸಾರಸಾಗರದ ದುಃಖಪರಂಪರೆಯನ್ನು ದಾಟುವದಕ್ಕೆ ಆತನ ಹೆಸರುಗಳೆಲ್ಲವೂ ಉತ್ತಮವಾದ ಜಹಜುಗಳಾಗಿರುತ್ತವೆ. ಆದ್ದರಿಂದ ಯಾವದೊಂದು ಹೆಸರನ್ನೂ ಅನಾದರದಿಂದ ಕಾಣಬಾರದು. ಒಂದೊಂದು ನಾಮವೂ ಒಂದೊಂದು ಅಮೃತ ಘುಟಿಕೆಯೆಂದು ಭಾವಿಸಬೇಕು. ಪರಮಾತ್ಮನ ನಾಮವನ್ನು ಭಕ್ತಿಪೂರ್ವಕವಾಗಿ ಉಚ್ಚರಿಸುವದರಿಂದಲೂ ಅದರ ಅರ್ಥವನ್ನು ಮನನಮಾಡುವದರಿಂದಲೂ ಹಿಂದಿನ ಕಾಲದಲ್ಲಿ ಎಷ್ಟೋ ಜನರು ಕೃತಾರ್ಥರಾಗಿರುತ್ತಾರೆ. ಈಗಲೂ ನಾವುಗಳು ಯಾವದಾದರೊಂದು ಭಗವನ್ನಾಮವನ್ನು ಆಶ್ರಯಿಸಿ ಸರ್ವಾನರ್ಥಗಳಿಂದಲೂ ಮುಕ್ತರಾಗಿ ಪರಮಾನಂದವನ್ನು ಹೊಂದಬಹುದು.

## 5. ಪರಮಾತ್ಮನನ್ನು ಕಾಣುವದೆಲ್ಲಿ?

* ಪರಮೇಶ್ವರನನ್ನು ಎಲ್ಲಿ ಕಾಣಬೇಕು? ಪರಮೇಶ್ವರನು ಸರ್ವವ್ಯಾಪಿಯು. ಆತನು ಇಲ್ಲದೆಡೆಯೇ ಇಲ್ಲ. ಎಡಕ್ಕೆ ಬಲಕ್ಕೆ, ಮೇಲೆ ಕೆಳಗೆ, ಹಿಂದೆ ಮುಂದೆ, ಅಂದು ಇಂದು- ಹೀಗೆ ಎಲ್ಲೆಲ್ಲಿಯೂ ಎಂದೆಂದಿಗೂ ಪರಮೇಶ್ವರನು ಇರುವನೆಂದು ಎಲ್ಲಾ ಧಾರ್ಮಿಕ ಗ್ರಂಥಗಳೂ ಸಾರುತ್ತಿರುವವು. ಆದರೂ ಪ್ರತಿಯೊಂದು ಧರ್ಮದವರೂ ಒಂದೊಂದು ಸ್ಥಲವನ್ನು ಪರಮೇಶ್ವರನ ಪವಿತ್ರಸ್ಥಾನವೆಂದು ಬಗೆದಿರುತ್ತಾರೆ. ಕೆಲವು ತೀರ್ಥಸ್ಥಲಗಳಲ್ಲಿ, ಕೆಲವು ಬೆಟ್ಟಗಳ ಮೇಲೆ, ಕೆಲವು ಪವಿತ್ರ ನದಿಗಳಲ್ಲಿ, ಕೆಲವು ದೇವಾಲಯಗಳಲ್ಲಿ ಈಶ್ವರನ ಸನ್ನಿಧಿಯು ಹೆಚ್ಚಿನ ಪರಿಮಾಣದಲ್ಲಿರುವದೆಂದು ಜನರ ನಂಬಿಕೆಯು ಬಲವಾಗಿ ಬಿಟ್ಟಿರುತ್ತದೆ. ಕಾಶಿ, ಜೆರೂಸಲೆಂ, ಮೆಕ್ಕಾ-ಮುಂತಾದ ಸ್ಥಲಗಳು ಯಾತ್ರಾಸ್ಥಲಗಳಾಗಿರುವದೂ, ದೇವಾಲಯಗಳೂ ಮಸೀದಿಗಳೂ ಚರ್ಚು (ಇಗರ್ಜಿ) ಗಳೂ ಪರಮೇಶ್ವರನ ಸ್ತೋತ್ರಾದಿಗಳಿಗೆ ವಿಶೇಷವಾಗಿ ಯೋಗ್ಯವಾದ ಸ್ಥಲಗಳೆಂದು ಆಯಾ ಮತದವರು ಭಾವಿಸಿರುವದೂ ಸುಪ್ರಸಿದ್ಧವಾಗಿದೆ. ಆಯಾ ಸ್ಥಲಗಳಲ್ಲಿ ಶ್ರದ್ಧೆಯುಳ್ಳವರು ಭಕ್ತಿಯಿಂದ ಭಗವಂತನಲ್ಲಿ ಮೊರೆಯಿಟ್ಟವರಿಗೆ ಭಗವಂತನು ಅಲ್ಲಿ ಪ್ರಸನ್ನನಾಗಿರುತ್ತಾನೆಂದು ಎಲ್ಲಾ ಮತದವರೂ ಹೇಳಿಕೊಳ್ಳುತ್ತಿರುವದೂ ಕಂಡಿದೆ. ಆದರೆ ಈ ದೃಷ್ಟಿಯಿಂದ

* ಸಂಪುಟ 16, ಸಂಚಿಕೆ 5, ಜನವರಿ 1947, ಪುಟ 97-102

ಮಾತನಾಡುವಾಗ ಎಲ್ಲಾ ಪಂಥದವರೂ ಏಕಕಂಠದಿಂದ ಒಪ್ಪಿರುವ ಭಗವದ್ದರ್ಶನ ಸ್ಥಾನವು ಯಾವದು?–ಎಂಬುದು ನಾವು ವಿಚಾರಮಾಡಬೇಕಾದ ವಿಷಯವು.

ಪರಮಾತ್ಮನು ಎಲ್ಲೆಲ್ಲಿಯೂ ಇರುತ್ತಿದ್ದರೂ ನಮ್ಮ ಮನಸ್ಸು ಸಾಮಾನ್ಯವಾಗಿ ಪರಮಾತ್ಮನಲ್ಲಿರುವದಿಲ್ಲ. ನಮ್ಮಲ್ಲಿರುವ 'ನಾನು' ಎಂಬ ತೋರಿಕೆಯ ಆತ್ಮನಿಗೇ ಈ ಮನಸ್ಸೆಂಬ ಕರಣವು ಗಂಟು ಬಿದ್ದಿರುವದು. ಕಣದಲ್ಲಿರುವ ಮೇಟಿಯ ಕಂಬದ ಸುತ್ತಲೂ ಸುತ್ತುತ್ತಿರುವ ಎತ್ತಿನಂತೆ ಈ ನಾನೆಂಬ ವಸ್ತುವಿನ ಸುತ್ತಲೂ ಮನಸ್ಸು ತಿರುಗುತ್ತಿರುವದು. ಮನಸ್ಸು ನಿಂತಲ್ಲಿ ನಿಲ್ಲುವದಿಲ್ಲ, ತನ್ನ ಅನುಭವಕ್ಕೆ ಬರುವ ವಿಷಯವನ್ನೆಲ್ಲ ಈ ನಾನೆಂಬ ವಸ್ತುವಿಗೆ ಸಲ್ಲಿಸುತ್ತಿರುವದು. ಈ ಸ್ವಭಾವದ ಚದರುವ ಮನಸ್ಸಿಗೆ ಎಲ್ಲಿಯೂ ಪರಮಾತ್ಮನು ಗೋಚರಿಸುವಹಾಗಿಲ್ಲ. ಪರಮೇಶ್ವರನನ್ನು ನಾವು ನೋಡದೆ ಇರುವದಕ್ಕೆ ಆತನು ಇಲ್ಲದಿರುವದು ಕಾರಣವಲ್ಲ. ನಮ್ಮ ಮನಸ್ಸು ನಿಂತಲ್ಲಿ ನಿಲ್ಲದೆ ಚದರುತ್ತಾ ನಾನೆಂಬ ಅಭಿಮಾನಾತ್ಮನ ಸೇವೆಯಲ್ಲಿ ನಿರತವಾಗಿರುವದೇ ಕಾರಣ. ಆದ್ದರಿಂದ ಎಲ್ಲಿ ಮನಸ್ಸನ್ನು ಚದರಿಸುವ ವಿಷಯಗಳಿಲ್ಲವೋ, ಎಲ್ಲಿ ಸ್ಥಾನಮಾಹಾತ್ಮ್ಯದಿಂದಲೇ ಮನಸ್ಸು ಚದರದೆ ಶಾಂತಿಯನ್ನು ಹೊಂದುವದೋ ಅಂಥ ಏಕಾಂತಸ್ಥಾನವು ಪರಮಾತ್ಮನ ಧ್ಯಾನಕ್ಕೂ ದರ್ಶನಕ್ಕೂ ಅನುಕೂಲವಾದದ್ದೆಂದು ಧಾರ್ಮಿಕ ಗ್ರಂಥಗಳಲ್ಲಿ ಸಾರಿರುತ್ತದೆ.

ಸನಾತನಾರ್ಯರ ಮಾನ್ಯಗ್ರಂಥವೆನಿಸಿರುವ ಉಪನಿಷತ್ತುಗಳಲ್ಲಿ ಹೀಗೆಂದು ಉಪದೇಶಿಸಿದೆ: 'ಆತ್ಮನು ಅತ್ಯಂತ ಅಣುವಾಗಿರುವದಕ್ಕಿಂತಲೂ ಅಣುವಾಗಿರುತ್ತಾನೆ. ಅತ್ಯಂತ ದೊಡ್ಡದೆನಿಸಿಕೊಂಡಿರುವದಕ್ಕಿಂತಲೂ ದೊಡ್ಡವನೆನಿಸಿರುತ್ತಾನೆ. ಆತನು ಈ ಜೀವನ ಹೃದಯಗುಹೆಯಲ್ಲಿರುತ್ತಾನೆ' (ಕ. 1–2–20) 'ಆತನು ಹೃದಯದಲ್ಲಿರುವನೆಂದು ಅರಿತುಕೊಂಡವನ ಅವಿದ್ಯೆಯ ಗಂಟು ಬಿಚ್ಚಿಕೊಳ್ಳುತ್ತದೆ', (ಮುಂ. 2–1–10), 'ಸಕಲ ಕಾಮಗಳೂ ಪೂರ್ತಿಯಾಗುತ್ತವೆ' (ತೈ. 2–1), 'ಪರಮಾತ್ಮನು ಹೃದಯದಲ್ಲಿರುತ್ತಾನೆ. ಇವನು ಅಲ್ಲಿರುತ್ತಾನೆಂಬುದನ್ನು ತಿಳಿಸುವದಕ್ಕಾಗಿಯೇ (ಹೃದಿ ಅಯಮ್–ಹೃತ್ತಿನಲ್ಲಿ ಅವನು) ಹೃದಯಮ್ ಎಂಬ ಹೆಸರು ಸಂಸ್ಕೃತದಲ್ಲಿ ಹುಟ್ಟಿರುತ್ತದೆ. ಇದನ್ನು ಅರಿತುಕೊಂಡವನು ಪ್ರತಿದಿನವೂ ಸ್ವರ್ಗವನ್ನು ಸೇರುತ್ತಾನೆ. ಸರ್ವಕಾಮಗಳನ್ನೂ ಅನುಭವಿಸುತ್ತಾನೆ.' (ಛಾಂ.8–2–3).

ದೇವರನ್ನು ಚಿಂತಿಸುವಾಗ ಯಾರೂ ಇಲ್ಲದ ಏಕಾಂತಸ್ಥಲವನ್ನು ಹುಡುಕುವದಲ್ಲದೆ, ತಾವು ಇರುವ ಕೋಣೆಯ ಬಾಗಿಲನ್ನು ಮುಚ್ಚುವದೂ ಕೆಲವರಲ್ಲಿ ವಾಡಿಕೆಯಾಗಿದೆ. ಮತ್ತೆ ಕೆಲವರು ಕಣ್ಣನ್ನು ಮುಚ್ಚಿಕೊಂಡು ಧ್ಯಾನವನ್ನು ಮಾಡುವರು. ಇದೆಲ್ಲವೂ ಮನಸ್ಸು ವಿಷಯಗಳಿಂದ ಚದರದಂತೆ ಮಾಡುವದಕ್ಕೂ ಶಾಂತಿಯಿಂದ ನೇರಾಗಿ ಪರಮಾತ್ಮನ ಚಿಂತೆಯನ್ನು ಸಂಪಾದಿಸಿಕೊಳ್ಳುವದಕ್ಕೂ ಸಹಾಯವೇ ಸರಿ. ಆದ್ದರಿಂದಲೇ

ದೇವರನ್ನು ಪ್ರಾರ್ಥಿಸುವಾಗ ರಹಸ್ಯವಾಗಿ ನಮ್ರತೆಯಿಂದ ಪ್ರಾರ್ಥಿಸಬೇಕೆಂದು ಧಾರ್ಮಿಕಗ್ರಂಥಗಳಲ್ಲೆಲ್ಲ ಹೇಳಿರುತ್ತದೆ. ಆದರೆ ನಮ್ಮ ಹೃದಯಕ್ಕಿಂತಲೂ ವಿಜನವಾದ, ವಿಕ್ಷೇಪರಹಿತವಾದ, ಪ್ರಶಾಂತವಾದ- ಸ್ಥಲವು ಎಲ್ಲಿ ತಾನೆ ದೊರೆಯುವದು? ಹೀಗಿರುವದರಿಂದ ಪರಮೇಶ್ವರನನ್ನು ಕಾಣಬೇಕೆಂಬ ಹಂಬಲು ಹೆಚ್ಚಾಗಿರುವವರು ವಿಷಯಗಳನ್ನು ಭೋಗ್ಯದೃಷ್ಟಿಯಿಂದ ಕಾಣುವ ಚಟವನ್ನು ಮೊದಲು ತಪ್ಪಿಸಿಕೊಳ್ಳಬೇಕು. ಆಗ ದೇವರ ಪ್ರಾರ್ಥನೆಗೆ ವಿಶಾಲವಾದ ಬಯಲಿನಲ್ಲಿಯೇ ಕುಳಿತಿದ್ದರೂ ಮನೆಯಬಾಗಿಲ ಕದವನ್ನು ಮುಚ್ಚಿದಂತೆ ಆಗುವದು. ಇದಾದ ಮೇಲೆ ಹೃದಯದ ಬಾಗಿಲನ್ನು ತೆಗೆಯುವದಕ್ಕೆ ಪ್ರಯತ್ನಿಸಬೇಕು. ಅದನ್ನು ಮುಚ್ಚಿರುವ ಕದವನ್ನು ಹಾರ ಹೊಡೆಯಬೇಕು. ಇದೇ ಪರಮಾತ್ಮನಲ್ಲಿ ಪಡೆಯಬೇಕಾದ ಸಮಾಧಿಗೆ ದ್ವಾರವು.

ವಿಶ್ವವ್ಯಾಪಕವಾದ ಧರ್ಮವನ್ನು ಬೋಧಿಸುವ ಗ್ರಂಥಗಳಲ್ಲಿ ಅಗ್ರಸ್ಥಾನವನ್ನು ಪಡೆದಿರುವ ಭಗವದ್ಗೀತೆಯಲ್ಲಿ ಹೇಳಿರುವ ಒಂದು ವಾಕ್ಯವನ್ನು ನಾವು ಇಲ್ಲಿ ನೆನಪಿಗೆ ತಂದುಕೊಳ್ಳಬಹುದು:

**ಈಶ್ವರಃ ಸರ್ವಭೂತಾನಾಂ ಹೃದ್ದೇಶೇಽರ್ಜುನ ತಿಷ್ಠತಿ ।**
**ಭ್ರಾಮಯನ್ ಸರ್ವಭೂತಾನಿ ಯನ್ತ್ರಾರೂಢಾನಿ ಮಾಯಯಾ ॥**
**ತಮೇವ ಶರಣಂ ಗಚ್ಛ ಸರ್ವಭಾವೇನ ಭಾರತ ।**
**ತತ್ಪ್ರಸಾದಾತ್ ಪರಾಂ ಶಾನ್ತಿಂ ಸ್ಥಾನಂ ಪ್ರಾಪ್ಸ್ಯಸಿ ಶಾಶ್ವತಮ್ ॥62॥**

ಈಶ್ವರನು ಎಲ್ಲಾ ಭೂತಗಳ ಹೃದಯದಲ್ಲಿಯೂ- ಬರಿಯ ಮನುಷ್ಯರ ಹೃದಯದಲ್ಲಿ ಮಾತ್ರವಲ್ಲ, ಸ್ಥಾವರಜಂಗಮಾತ್ಮಕವಾದ, ಎಲ್ಲಾ ಸಸ್ಯಗಳ ಮತ್ತು ಪ್ರಾಣಿಗಳ ಹೃದಯದಲ್ಲಿಯೂ ಇರುತ್ತಾನೆ. ಆದರೆ ಪ್ರಾಣಿಗಳು ಸಾಮಾನ್ಯವಾಗಿ ಬಹಿರ್ಮುಖವಾಗಿಯೇ ಇರುವವು; ಅವು ದೇಹಯಂತ್ರವನ್ನೇರಿಕೊಂಡು ಹೊರಗಿನ ಮಾಯಾವಿಷಯಗಳ ಪ್ರೇರಣೆಯಿಂದ ಚಂಚಲವಾಗಿ ನಡೆದುಕೊಳ್ಳುತ್ತಿರುವವು. ಮಾಯಾವಶರಾಗಿರುವ ಜೀವರುಗಳು ಪಶುಪಕ್ಷಿಕ್ರಿಮಿಕೀಟಾದಿಗಳಾಗಿರುವಾಗ ಹೇಗೋ ಹಾಗೆ ಮನುಷ್ಯರಾಗಿರುವಾಗಲೂ ತಮ್ಮೆಲ್ಲರ ಹೃದಯದಲ್ಲಿರುವ ಸರ್ವೇಶ್ವರನನ್ನು ಕಾಣದೆ ಇರುವವು. ಅವುಗಳಿಗೆ ಬೇಕಾದವರು, ಬೇಡವಾದವರು- ಎಂಬ ತಾರತಮ್ಯವು ಕಾಣಿಸುತ್ತಿರುವದು; ಆದ್ದರಿಂದ ರಾಗದ್ವೇಷಗಳ ಸೆಳೆತಕ್ಕೆ ಸಿಕ್ಕಿಕೊಂಡು ನೋವನ್ನು ನಿತ್ಯವೂ ಅನುಭವಿಸುತ್ತಿರುವವು. ಆದರೆ ಮೇಲೆಮೇಲೆ ಕಾಣುವ ಮಾಯೆಯ ಮುಸುಕನ್ನು ತೆರೆದು ಕೆಳಕ್ಕೆ ಇಣಿಕಿ ನೋಡುವದಕ್ಕೆ ಪ್ರಾರಂಭಿಸಿದರೆ ಎಲ್ಲಾ ಜೀವರುಗಳಲ್ಲಿಯೂ ಒಬ್ಬನೇ ಸರ್ವೇಶ್ವರನು ಕಾಣಿಸುವನು. ಆತನೇ ಎಲ್ಲರಿಗೂ ಆತ್ಮನೆಂದು ನಮಗೆ ಮನದಟ್ಟಾಗಿ ಬಿಡುವದು.

ಹೃದಯದೊಳಕ್ಕೆ ಆಳವಾಗಿ ಇಳಿಯುವ ಈ ಅಧ್ಯಾತ್ಮಯೋಗವನ್ನು ನಾವುಗಳು ಅಭ್ಯಾಸಮಾಡಬೇಕು ಮಾಡುವಷ್ಟು ಕೆಲಸಗಳನ್ನು ಭಗವಂತನ ಸ್ಮರಣೆಯ ಪೂರ್ವಕವಾಗಿ ಮಾಡಿ, ನಮ್ಮ ನಡೆನುಡಿಗಳನ್ನು ಶುದ್ಧಿಗೊಳಿಸಿಕೊಂಡು, ಇಂದ್ರಿಯಗಳು ಹೊರಗಿನ ವಿಷಯಗಳ ಇಂದ್ರಜಾಲಕ್ಕೆ ವಶವಾಗಿ ಕುಣಿಯದಂತೆ ಮಾಡಿಕೊಂಡು, ಮನಸ್ಸನ್ನು ಒಂದಿಷ್ಟು ಶಾಂತಿಗೊಳಿಸಿ ಆ ಪರಮಾತ್ಮನ ದರ್ಶನಕ್ಕೆ ಸಜ್ಜುಗೊಳಿಸಬೇಕು. ಈ ಕಾರ್ಯದಲ್ಲಿ ನಾವು ಜಯಶೀಲರಾದಂತೆಲ್ಲ ಸಮಸ್ತ ಭೂತಗಳ ಆತ್ಮನೇ ನಮ್ಮ ಆತ್ಮನು, ಆತನೇ ಪರಮೇಶ್ವರನು–ಎಂಬ ಆತ್ಮಾನುಭವಿಗಳಾದ ಋಷಿಗಳ ದೃಷ್ಟಿಯು ನಮಗೆ ಅಳವಡುತ್ತಾ ಹೋಗುವದು. ಪರಮೇಶ್ವರನ ಸಾಕ್ಷಾತ್ಕಾರವಾಗಿರುವವರು ಯಾವ ಧರ್ಮದವರೇ ಆಗಿರಲಿ, ಅವರಿಗೆಲ್ಲ ಸಾಧಾರಣವಾದ ಒಂದು ಅನುಭವವಿರುತ್ತದೆ. ಅವರುಗಳ ಆಚಾರ ಭೇದಗಳೂ ದೀಕ್ಷಾಮಂತ್ರತಂತ್ರಭೇದಗಳೂ, ಸಿದ್ಧಾಂತ ಭೇದಗಳೂ, ಎಷ್ಟೇ ಅನಂತವಾಗಿರಲಿ, ಈ ಹೃದಯಕುಹರದಲ್ಲಿರುವ ಪರಮೇಶ್ವರನ ಸ್ಪರ್ಶವನ್ನು ಪಡೆದ ಬಳಿಕ, ಎಲ್ಲರೂ ಒಬ್ಬರಿಗೊಬ್ಬರು ಪರಮಮಿತ್ರರಾಗಿ ಬಿಡುವರು.

ಭೂಲೋಕದಲ್ಲಿ ಜನರಲ್ಲಿರುವ ಜಾತಿಮತಕುಲವರ್ಣಾದಿಕೃತವಾದ ಭೇದಗಳೂ ದೇಶವೇಷಭಾಷಾವ್ಯವಹಾರಾದಿಭೇದಗಳೂ, ಸಾಮಾಜಿಕರಾಜಕೀಯಾದಿ ಮತಭೇದಗಳೂ ಈ ವಿವಿಧಭೇದಗಳಿಂದ ಉಂಟಾಗಿರುವ ರಾಗದ್ವೇಷಾದಿಗಳೂ, ನಮ್ಮೆಲ್ಲರ ಹೃದಯದಲ್ಲಿ ಒಬ್ಬನೇ ಪರಮೇಶ್ವರನು ಇರುತ್ತಾನೆಂಬ ಅರಿವು ಇಲ್ಲದಿರುವದರಿಂದಲೇ ದಾಟಲಾಗದ ದುರ್ಗಗಳಾಗಿ ಕಾಣಿಸುತ್ತಿವೆ. ಈ ದಿವ್ಯದರ್ಶನವು ಲಭಿಸದೆ ಇರುವ ಮಾನವರೇ ಮೂರೂಮುಕ್ಕಾಲುಪಾಲು. ಆದ್ದರಿಂದಲೇ ನಾವೆಲ್ಲರೂ ಒಂದು ಕುಟುಂಬಕ್ಕೆ ಸೇರಿದವರೆಂಬ ನಂಬಿಕೆಯು ನಮ್ಮಲ್ಲಿ ಅನೇಕಜನರಿಗೆ ಉಂಟಾಗಿರುವದಿಲ್ಲ; ಮತ್ತೊಬ್ಬರಿಗೆ ಮಾಡುವ ಉಪಕಾರವು ನಮಗೇ ಮಾಡಿಕೊಂಡ ಉಪಕಾರವೆಂಬುದಾಗಲಿ ಮತ್ತೊಬ್ಬರಿಗೆ ಮಾಡಿದ ಅಪಕಾರವು ನಮಗೇ ಮಾಡಿಕೊಂಡ ಅಪಕಾರವೆಂಬುದಾಗಲಿ, ಮನಸ್ಸಿಗೆ ಹೊಳೆದಿರುವದಿಲ್ಲ.

ಯಾರು ತಮ್ಮ ಹೃದಯದಲ್ಲಿ ಮೊದಲು ಪರಮೇಶ್ವರನನ್ನು ಕಂಡುಕೊಂಡಿರುವರೋ, ಅಂಥವರು ಸಕಲ ಮಾನವರನ್ನೂ ಒಡಹುಟ್ಟಿದವರೆಂಬ ಭಾವದಿಂದ ಕಾಣುವರೆಂಬುದಿಷ್ಟೇ ಅಲ್ಲ. ಅವರಿಗೆ ಮನುಷ್ಯನಿಗಿಂತ ಕೀಳುಮಟ್ಟದ ಅಂತಃಕರಣವುಳ್ಳ ಪ್ರಾಣಿಗಳೂ ಆ ಪರಮೇಶ್ವರನ ಸೃಷ್ಟಿಗೇ ಸೇರಿರುತ್ತವೆಯೆಂದೂ, ಆ ಪರಮಾತ್ಮನೇ ನಮ್ಮ ಆತ್ಮನಾಗಿರುವಂತೆ ಅವುಗಳ ಆತ್ಮನೂ ಆಗಿರುವನೆಂದೂ, ಮನದಲ್ಲಿ ನಿಶ್ಚಯವಾಗಿಬಿಟ್ಟಿರುತ್ತದೆ. ಆದ್ದರಿಂದ ಅವರು ಎಲ್ಲಾ ಪ್ರಾಣಿಗಳನ್ನೂ ಪ್ರೀತಿಯಿಂದಲೇ ಕಾಣುತ್ತಾ, ಎಲ್ಲಾ ಪ್ರಾಣಿಗಳಿಗೂ ಹಿತವನ್ನೇ ಮಾಡುವದರಲ್ಲಿ ನಿರತರಾಗಿರುವರು. 'ಭಗವದ್ಭಕ್ತನು ಯಾವ ಪ್ರಾಣಿಯನ್ನೂ ದ್ವೇಷಿಸುವದಿಲ್ಲ; ಎಲ್ಲಾ ಪ್ರಾಣಿಗಳಲ್ಲಿಯೂ ಮಿತ್ರಭಾವದಿಂದ ವರ್ತಿಸುತ್ತಾನೆ; ಎಲ್ಲಾ

ಪ್ರಾಣಿಗಳಲ್ಲಿಯೂ ಕರುಣೆಯನ್ನು ತೋರಿಸುತ್ತಾನೆ' (ಗೀ. 12–13) ಎಂಬ ಗೀತಾವಚನಕ್ಕೆ ಇದೇ ಅಭಿಪ್ರಾಯ.

ಹೊರಗಣ್ಣಿನಿಂದ ನೋಡುವಾಗ ಲೋಕದಲ್ಲಿ ಜನರಿಗೆ ಮೂಗಜಂತುಗಳ ವಿಷಯದಲ್ಲಿ ಕರುಣೆಯೇ ಇಲ್ಲವೆಂದು ಕಾಣುತ್ತಿರುವದು. ಜನರು ಪಶುಪಕ್ಷಿಗಳನ್ನು ಹಿಂಸೆಮಾಡುತ್ತಿರುವ ಪ್ರಕಾರಗಳನ್ನೂ ಅವುಗಳ ಯೋಗಕ್ಷೇಮದಲ್ಲಿ ತೋರುತ್ತಿರುವ ಅನಾದರವನ್ನೂ ಮನದಂದರೆ ಯಾರಿಗಾದರೂ ಮೈಜುಮ್ಮೆನ್ನುತ್ತದೆ. ಮನುಷ್ಯರು ಒಬ್ಬರಲ್ಲೊಬ್ಬರು ತೋರಿಸುವ ದ್ವೇಷಾಸೂಯೆಗಳನ್ನೂ, ಒಬ್ಬರನ್ನೊಬ್ಬರು ಹಿಂಸಿಸುತ್ತಿರುವದನ್ನೂ ಕಂಡರೆ ಮನುಷ್ಯನು ಎಂಥ ನಿರ್ಘೃಣನು?– ಎಂಬ ಭಾವನೆಯು ಎದ್ದುಕೊಳ್ಳುವದು. ಆದರೆ ಈ ಭಾವನೆಯನ್ನು ನಾವು ಬಲಗೊಳಿಸಿಕೊಳ್ಳುವದನ್ನು ಬಿಟ್ಟು ನಮ್ಮಷ್ಟಕ್ಕೆ ನಾವು ನಮ್ಮ ನಡೆನುಡಿಗಳಲ್ಲೆಲ್ಲ ಮೈತ್ರಿಯನ್ನೂ ಕರುಣೆಯನ್ನೂ ಹೊರಪಡಿಸುವದಕ್ಕೆ ಪ್ರಯತ್ನಮಾಡಿದರೆ ಸಾಕು, ಕೂಡಲೆ ಈ ಲೋಕದಲ್ಲಿ ಎಲ್ಲೆಲ್ಲಿಯೂ ಪ್ರೇಮವೇ ತುಂಬಿತುಳುಕುತ್ತಿರುವದೆಂಬುದು ಮನವರಿಕೆ ಯಾಗಿಬಿಡುವದು. **ಹೃದಯದಲ್ಲಿ ಪ್ರೇಮಭಾವನೆಯು ಮೂಡುವದಕ್ಕೆ ಪ್ರಾಣಿಹಿಂಸಾ ನಿರೋಧಕಸಂಘ, ಯುದ್ಧ ನಿರೋಧಕಸಂಘ– ಮುಂತಾದ ಸಂಘಗಳನ್ನು ಏರ್ಪಡಿಸುವದು ಉಪಾಯವಲ್ಲ;** ನಮ್ಮ ಹೃದಯದಲ್ಲಿರುವ ಸರ್ವೇಶ್ವರನಾದ ಸರ್ವಾತ್ಮನಾದ ಆ ಪರದೇವನನ್ನು ಕಂಡುಕೊಳ್ಳುವದೇ ಇದಕ್ಕೆ ಮುಖ್ಯಸಾಧನ. ಪರಮೇಶ್ವರನು ಎಲ್ಲರನ್ನೂ ಸಮವಾಗಿಯೇ ಪ್ರೀತಿಸುತ್ತಿರುವನು. ಆತನನ್ನು ತನ್ನ ಹೃದಯದಲ್ಲಿ ಸಾಕ್ಷಾತ್ಕರಿಸಿಕೊಂಡವನು ಎಲ್ಲರಲ್ಲಿಯೂ ಆ ಪ್ರೇಮಮೂರ್ತಿಯೇ ಇರುವನೆಂಬುದನ್ನು ಬಲುಬೇಗನೆ ಕಂಡುಕೊಳ್ಳುವನು.

ಈ ಲೋಕದಲ್ಲಿ ಬೇರೆಬೇರೆಯ ಧರ್ಮಪಂಥಗಳಿಗೆ ಸೇರಿಕೊಂಡವರೆಂದು ಹೇಳಿ ಕೊಳ್ಳುವವರು ಧರ್ಮದ ಹೆಸರಿನಲ್ಲಿ ರಕ್ತದ ಕೋಡಿಯನ್ನೇ ಹರಿಯಿಸಿರುತ್ತಾರೆ. ಇತ್ತೀಚೆಗೆ ಜನರಿಗೆ ಮತಾಂಧತೆಯ ಹುಚ್ಚು ಹೋಗಿದ್ದರೂ ರಾಜಕೀಯ ಕಾರಣಗಳಿಂದ ಧರ್ಮಾ ಚರಣೆಯ ಭೇದಗಳ ನೆಪವನ್ನು ಒಡ್ಡಿ ಏನೂ ಅರಿಯದ ಜನರನ್ನು ರೇಗಿಸಿ ಒಬ್ಬರ ತಲೆಯನ್ನೊಬ್ಬರು ಕಡಿಯುವಂತೆ ಎತ್ತುಗಟ್ಟುತ್ತಿರುವದು ಕಂಡುಬಂದಿದೆ. ಬಂಗಾಲ ಬೀಹಾರ ಪ್ರಾಂತಗಳಲ್ಲಿ ಮೊನ್ನೆಮೊನ್ನೆ ಆಗಿರುವ ಅತ್ಯಾಚಾರಗಳನ್ನು ನೋಡಿ ಹಿಂದೂಮುಸಲ್ಮಾನರ ಪರಸ್ಪರದ್ವೇಷದ ಬಾಹ್ಯರೂಪವಿದೆಂದು ಕೆಲವರು ತಪ್ಪಾಗಿ ಕಲ್ಪಿಸಿಕೊಂಡಿರುತ್ತಾರೆ. ಆದರೆ ಸರಿಯಾಗಿ ನೋಡಿದರೆ ಸನಾತನಾರ್ಯರ ಮತದಲ್ಲಾಗಲಿ ಇಸ್ಲಾಂ ಮತದಲ್ಲಾಗಲಿ ಇಂಥ ದ್ವೇಷಗಳಿಗೆ ಯಾವ ಆಧಾರವೂ ಇಲ್ಲ; ನಿಜವಾದ ಸನಾತನಧರ್ಮೀಯರೂ ನಿಜವಾದ ಮುಸಲ್ಮಾನರೂ ಒಬ್ಬರನ್ನೊಬ್ಬರು ಅಣ್ಣತಮ್ಮಂದಿರಂತೆಯೇ ಭಾವಿಸುತ್ತಿರುವರೆಂಬುದು ಬಂಗಾಲ ಬೀಹಾರಗಳ ಗಲಭೆಯಲ್ಲಿಕೂಡ ಕಂಡುಬಂದಿರುತ್ತದೆ.

ಈ ಮತಗಳಲ್ಲಿ ಅಥವಾ ಮತ್ತೆ ಯಾವ ಧಾರ್ಮಿಕಪಂಥದಲ್ಲಿ ಭಗವದ್ಭಕ್ತಿಪರಾಯಣ ರಾಗಿದ್ದವರೆಂದು ಪ್ರಸಿದ್ಧರಾದವರನ್ನು ಯಾರನ್ನು ಉದಾಹರಣೆಗೆ ತೆಗೆದುಕೊಂಡರೂ ಅವರು ಮತ್ತೊಬ್ಬರಿಗೆ ಎಳ್ಳಷ್ಟೂ ಉದ್ವೇಗವಾಡದೆ ಮತ್ತೊಬ್ಬರಿಂದ ತಾವೂ ಉದ್ವೇಗವನ್ನು ಹೊಂದದೆ ಇಡಿಯ ಭೂಮಂಡಲವನ್ನೇ ಪ್ರೇಮರಸದಲ್ಲಿ ಅದ್ದುವ ಕಾರ್ಯದಲ್ಲಿಯೇ ನಿರತರಾಗಿದ್ದರೆಂದು ನಿಯತವಾಗಿ ಕಂಡುಬರುತ್ತದೆ.

ಆದ್ದರಿಂದ ಅಣ್ಣಗಳಿರ, ಮೊಟ್ಟಮೊದಲು ನಿಮ್ಮ ನಡೆನುಡಿಗಳಲ್ಲಿ ಪ್ರೇಮವನ್ನು ಬೆರೆಯಿಸಿಕೊಳ್ಳುವದಕ್ಕೆ ಪ್ರಯತ್ನವನ್ನು ಮಾಡಿರಿ; ನಿಮ್ಮ ಹೃದಯದಲ್ಲಿ ಭಗವಂತನ ದರ್ಶನಕ್ಕೆ ದ್ವಾರವು ತೆರೆದುಕೊಳ್ಳುವದು. ನಿಮ್ಮ ಹೃದಯುದಲ್ಲಿ ಭಗವಂತನು ಇರುವನೆಂಬುದನ್ನು ಚಿತ್ತಸಮಾಧಾನದಿಂದ ಮೊದಲು ಅರಿತುಕೊಳ್ಳಿರಿ; ಆಮೇಲೆ ಅದೇ ಭಗವಂತನು ಎಲ್ಲಾ ಮಾನವರ ಹೃದಯದಲ್ಲಿಯೂ–ಅವರು ಯಾವ ಬಣ್ಣದವರಾಗಲಿ, ಯಾವ ಜಾತಿಯವರಾಗಲಿ, ಯಾವ ಕುಲದವರಾಗಲಿ, ಯಾವ ಧರ್ಮಪಂಥದವರಾಗಲಿ, ಯಾವ ಸಾಮಾಜಿಕ ಅಥವಾ ರಾಜಕೀಯ ನೀತಿಯನ್ನನುಸರಿಸಿದವರಾಗಲಿ, ಅವರೆಲ್ಲರ ಹೃದಯದಲ್ಲಿಯೂ ಇರುತ್ತಾನೆಂದು ನಿಮಗೆ ಮನವರಿಕೆಯಾಗಿಬಿಡುವದು. ಇಷ್ಟೇ ಅಲ್ಲ, ಅದೇ ಭಗವಂತನು ಎಲ್ಲಾ ಸ್ಥಾವರಜಂಗಮ ಪ್ರಾಣಿಗಳ ಹೃದಯದಲ್ಲಿಯೂ ಇರುವನೆಂದು ನಿಮ್ಮ ಮನದಲ್ಲಿ ಮಿಂಚುವದು. ಆ ದಿವ್ಯದೃಷ್ಟಿಯಿಂದ ನೋಡುವಾಗ ನೀವು ಎಲ್ಲಾ ಮಾನವರ ಮತ್ತು ಎಲ್ಲಾ ಪ್ರಾಣಿಗಳ ಹಿತ ಚಿಂತಕರಾಗಿರುವಿರೆಂದು ನಿಮಗೆ ಮನದಟ್ಟಾಗುವದು; ಮತ್ತು ಆ ಎಲ್ಲಾ ಮಾನವರೂ ಎಲ್ಲಾ ಪ್ರಾಣಿಗಳೂ ನಿಮ್ಮ ಮಿತ್ರಮಂಡಲಿಯವರೆಂದೂ ನಿಮಗೆ ಖಚಿತವಾಗಿ ತಿಳಿದುಬರುವದು, 'ಉದಾರಚರಿತಾನಾಂ ತು ವಸುಧೈವ ಕುಟುಂಬಕವ್' ಉದಾರವಾದ ನಡತೆಯ ಸಾಧುಗಳಿಗೆ ಇಡಿಯ ಭೂಲೋಕವೇ ತಮ್ಮ ಕುಟುಂಬವಾಗಿರುವದು– ಎಂಬ ಮಹಾತ್ಮರ ವಚನದ ಪೂರ್ಣಾಭಿಪ್ರಾಯವು ಆಗ ನಿಮಗೆ ಗೊತ್ತಾಗುವದು.

# 6. ಭಗವಂತನ ಸ್ಮರಣೆ

* ಭಗವಂತನನ್ನು ನಿರಂತರವಾಗಿ ಸ್ಮರಿಸುವದೇ ಸಂಸಾರದ ಸಕಲ ಕ್ಲೇಶಗಳಿಗೂ ಚಿಕಿತ್ಸೆಯು. ನಮ್ಮ ಬಡತನವು ಹಿಂಗಿ ಜೀವನವು ಸುಖಮಯವಾಗುವದಕ್ಕೆ, ಬೇಕಾದಷ್ಟು ಆವಶ್ಯಕ ಸಾಮಗ್ರಿಯು ದೊರೆಯುವದಕ್ಕೆ, ಶರೀರದ ಅನಾರೋಗ್ಯವು ಹೋಗಿ ಸ್ವಾಸ್ಥ್ಯವು ಲಭಿಸುವದಕ್ಕೆ, ಮನಸ್ಸಿನ ಅಶುಭವಾಸನೆಗಳು ತೊಲಗಿ ಶುಭವಾಸನೆಗಳಿಂದ ನಲಿಯುವಂತಾಗುವದಕ್ಕೆ, ಹೆಚ್ಚೇಕೆ? ಅನಿಷ್ಟವಾದದ್ದೆಲ್ಲ ಪರಿಹಾರವಾಗಿ ಇಷ್ಟವಾದದ್ದು ಸಲೀಸಾಗಿ ಕೈಸೇರುವದಕ್ಕೆ, ಒಂದೇ ಒಂದು ಉಪಾಯವಿರುತ್ತದೆ; ಭಗವಂತನನ್ನು ಸಂತತವಾಗಿ ಸ್ಮರಿಸುತ್ತಿರಬೇಕು, ಭಗವಂತನ ವಿಸ್ಮರಣೆಯು ಎಂದಿಗೂ ನಮ್ಮ ಮನದಲ್ಲಿ ಸುಳಿದಾಡಬಾರದು.

ನಮಗೆ ಕಾಣುವ ಸಂಸಾರಮಂಡಲದಲ್ಲಿ ಎಲ್ಲೆಲ್ಲಿಯೂ ಅವ್ಯವಸ್ಥೆಯೇ ಕಾಣಿಸುತ್ತಿರುವದು. ನಾವೂ ನಮ್ಮ ಸುತ್ತುವಳೆಯದಲ್ಲಿರುವವರೂ ಸ್ವಾರ್ಥಪರರಾಗಿ, ಪಾಪಕರ್ಮಿಗಳಾಗಿ, ಅಪೂರ್ಣರಾಗಿ, ಅಲ್ಪಜ್ಞರಾಗಿ, ಅಲ್ಪಶಕ್ತರಾಗಿ, ದುಃಖಮಯರಾಗಿ ಕಾಣಿಸುತ್ತಿರುವೆವು. ಆದರೂ ಇದೇ ಜಗತ್ತಿನಲ್ಲಿ ಪ್ರೇಮಮಯನಾದ, ನಿತ್ಯಶುದ್ಧನಾದ, ಪರಿಪೂರ್ಣನಾದ, ಸರ್ವಜ್ಞನಾದ, ಸರ್ವಶಕ್ತನಾದ, ಆನಂದಮಯನಾದ ಪರಮೇಶ್ವರನ ಸತ್ತೆಯು ತುಂಬಿತುಳುಕಾಡುತ್ತಿರುವದೆಂದು ಶಾಸ್ತ್ರಗಳು ಮೊಳಗುತ್ತಿರುವವು; ದೊಡ್ಡವರೂ ಹಾಗೆಂದು ಉಪದೇಶಿಸುತ್ತಿರುವರು; ನಮ್ಮ ಹೃದಯದೊಳಗೆ ಯಾವದೋ ಒಂದು ಗಂಭೀರವಾದ ಕಿರುದನಿಯು ಅದೇ ನಿಜವೆಂದು ಹೇಳುತ್ತಿರುವದು.

ಮಾನವನ ಮನಸ್ಸಿಗೆ ಎರಡು ಮಾರ್ಗಗಳು ಸಾಧ್ಯವಾಗಿರುವವು. ಒಂದೋ, ಅವನು ತನಗೆ ಮೇಲುಮೇಲೆ ಕಾಣುತ್ತಿರುವ ಅಪೂರ್ಣವಾದ, ಪಾಪಮಯವಾದ, ದುಃಖಮಯವಾದ ಸಂಸಾರವೇ ಸತ್ಯವೆಂದು ನಂಬಿ ಅದರಲ್ಲಿಯೇ ತನ್ನ ಅಲ್ಪಬುದ್ಧಿಗೆ ತೋರಿದಂತೆ ವ್ಯವಹಾರವನ್ನು ಮಾಡುತ್ತಾ ಅದರ ಫಲವಾಗಿ ಸುಖದುಃಖಗಳ ಏರಿಳಿತಗಳನ್ನು ಅನುಭವಿಸುತ್ತಿರಬೇಕು. ಇಲ್ಲವೆ, ಪರಿಪೂರ್ಣವಾದ, ವಿಶುದ್ಧವಾದ, ಆನಂದಸ್ವರೂಪವಾದ ಪರಮಾತ್ಮನ ಹಬ್ಬುವಿಕೆಯು ಜಗತ್ತಿನಲ್ಲೆಲ್ಲ ಇರುವದೆಂಬುದೇ ಪರಮಾರ್ಥವೆಂಬ ನಂಬಿಕೆಯನ್ನು ಬಲಪಡಿಸಿಕೊಂಡು ಹೊರಗಿನ ಸಂಸಾರದ ಬಾಧೆಯನ್ನು ತಪ್ಪಿಸಿಕೊಂಡು ಆನಂದದಿಂದ ಬಾಳುತ್ತಿರುಬೇಕು. ಈ ಎರಡರಲ್ಲಿ ಮೊದಲನೆಯದು ಸಾಮಾನ್ಯಜನರ ವ್ಯವಹಾರವು; ಎರಡನೆಯದು ಋಷಿಗಳ ವ್ಯವಹಾರವು.

---

* ಸಂಪುಟ 16, ಸಂಚಿಕೆ 6, ಫೆಬ್ರವರಿ 1947, ಪುಟ 121–125

ಪರಮಾತ್ಮನನ್ನೇ ಕಾಣಬೇಕು; ಅದಕ್ಕಾಗಿ ಪರಮಾತ್ಮನ ವಿಚಾರವನ್ನೇ ಶ್ರವಣ ಮಾಡುತ್ತಿರಬೇಕು, ಆ ವಿಚಾರವನ್ನೇ ಮನಸ್ಸಿನಲ್ಲಿ ಹೊರಳಾಡಿಸುತ್ತಿರಬೇಕು, ಅದನ್ನೇ ಮೆಲುಕುಹಾಕುತ್ತಾ ಮನದಟ್ಟುಮಾಡಿಕೊಳ್ಳಬೇಕು–ಎಂಬುದು ಉಪನಿಷತ್ತುಗಳ ಉಪದೇಶವು. ಪರಮಾತ್ಮನನ್ನು ಕಂಡುಕೊಂಡರೆ, ಸರ್ವವನ್ನೂ ಅರಿತಂತಾಯಿತು. ಮಾಡಬೇಕಾದದ್ದನ್ನೆಲ್ಲ ಮಾಡಿದಂತಾಯಿತು–ಎಂದು ಅಡಿಗಡಿಗೆ ಶ್ರುತಿಗಳಲ್ಲಿ ಹೇಳಿರುತ್ತದೆ. ಯಾರು ಪರಮಾತ್ಮನನ್ನು ಅರಿತುಕೊಳ್ಳುವರೋ ಅವರಿಗೆ ಸಕಲ ಕಾಮಗಳೂ ಪ್ರಾಪ್ತವಾದಂತೆ ಎಂದು ಆತ್ಮಜ್ಞಾನವನ್ನು ಕೊಂಡಾಡಿರುತ್ತದೆ. ಉಪನಿಷತ್ತುಗಳ ಉಪದೇಶದ ಸಾರವನ್ನು ಹಿಂಡಿಟ್ಟಿರುವ ಗೀತೆಯಲ್ಲಿ ಶ್ರೀಕೃಷ್ಣಭಗವಂತನು ತನ್ನ ಉಪದೇಶವನ್ನು ಉಪಸಂಹಾರಮಾಡುವ ವೇಳೆಯಲ್ಲಿ ಮಾಡಿರುವ ಕಟ್ಟಕಡೆಯ ಉಪದೇಶವೇನೆಂದರೆ 'ಯಾವಾಗಲೂ ನನ್ನಲ್ಲಿಯೇ ಚಿತ್ತವನ್ನಿಟ್ಟುಕೊಂಡಿರು; ಹಾಗಾದರೆ ನನ್ನ ಅನುಗ್ರಹದಿಂದ ಎಲ್ಲಾ ಕಷ್ಟಗಳನ್ನೂ ದಾಟುವೆ.'

ಭಗವಂತನನ್ನು ಸ್ಮರಣೆಮಾಡಿದ ಮಾತ್ರದಿಂದ ನಮ್ಮ ಕಷ್ಟಗಳು ಹೇಗೆ ಪರಿಹಾರ ವಾಗುವವು?–ಎಂದು ಯಾರಾದರೂ ಯೋಚಿಸಿಕೊಳ್ಳಬಹುದು. ಈ ಶಂಕೆಗೆ ಪರಿಹಾರವು ಇಷ್ಟೇ. ಈ ಜಗತ್ತಿನ ಹುಟ್ಟಿಗೂ ಇರವಿಗೂ ಭಗವಂತನೇ ಕಾರಣನು. ಆತನೇ ಇಡಿಯ ಜಗತ್ತಿನ ಪರಮಾರ್ಥವು. ಜಗತ್ತೆಂಬುದು ಪರಮಾತ್ಮನ ನೆರಳಿನಂತೆ ಇರುತ್ತದೆ. ವಸ್ತುವಿಗೆ ನೆರಳು ಯಾವಾಗಲೂ ಅಧೀನವಾಗಿಯೇ ತೋರುತ್ತಿರುವದು; ನೆರಳಿಗೆ ಬರಿಯ ತೋರಿಕೆಯಲ್ಲದೆ ವಸ್ತುವಿಗಿಂತ ಬೇರೆಯಾದ ಇರವೇ ಇರುವದಿಲ್ಲ. ಆದರೆ ವಸ್ತುವು ನೆರಳಿಗಿಂತ ವಿಲಕ್ಷಣವಾಗಿರುತ್ತದೆ. ಸ್ವತಂತ್ರವಾದ ಇರವನ್ನುಳ್ಳದ್ದಾಗಿರುತ್ತದೆ. ವಸ್ತುವನ್ನು ಹಿಡಿದವನಿಗೆ ನೆರಳು ವಶವಾಗಿಬಿಡುವದು. ವಸ್ತುವಿನ ನಿಜವನ್ನರಿಯದವರು ಮಾತ್ರವೇ ನೆರಳಿಗೆ ಇಲ್ಲದ ಇರವನ್ನು ಹುಟ್ಟುಗಟ್ಟಿಕೊಂಡು ಅದಕ್ಕೆ ಅಂಜುವರು; ಆದರೆ ವಸ್ತುವನ್ನು ಕಂಡುಕೊಂಡವರಿಗೆ ನೆರಳಿನ ಅಂಜಿಕೆಯು ಒಂದಿಷ್ಟೂ ಉಳಿಯುವದಿಲ್ಲ. ಇದರಂತೆ ಈ ಸಂಸಾರಮಂಡಲದಲ್ಲಿ ಕಾಣಬರುತ್ತಿರುವದೆಲ್ಲಕ್ಕೂ ತಿರುಳು ಪರಮಾತ್ಮನು. ನಮ್ಮ ಸುತ್ತುವಳೆಯವು ಎಷ್ಟೇ ದುಃಖಮಯವಾಗಿ ತೋರುತ್ತಿರಲಿ, ಅದರ ನಿಜವು ಆ ತೋರಿಕೆಯಲ್ಲ, ಪರಮಾತ್ಮನೇ. ಪರಮಾರ್ಥಸತ್ಯವಾಗಿರುವ ಪರಮಾತ್ಮನನ್ನು ಕಂಡುಹಿಡಿದು ಕೊಂಡವನಿಗೆ ಸಂಸಾರದ ದುಃಖವು ನೆರಳಿನಂತೆ ಅವಸ್ತುವಾಗಿಬಿಡುತ್ತದೆ. ನಾನು ಪಾಪಿಷ್ಠನು, ಅಪೂರ್ಣನು, ಅಲ್ಪಶಕ್ತನು, ದುಃಖಮಯನು–ಎಂದು ಮೇಲೆಮೇಲೆ ತೋರುವದನ್ನೇ ನಿಜವೆಂದು ನಂಬಿ ಮೋಸಹೋಗದಿರಿ. ನಾವೆಲ್ಲರೂ ಪರಿಶುದ್ಧವಾದ, ಪರಿಪೂರ್ಣನಾದ, ಸರ್ವಜ್ಞನಾದ, ಪರಮಾತ್ಮನ ಮಕ್ಕಳು–ಎಂಬ ಉತ್ತಮ ಭಾವನೆಯನ್ನು ಪ್ರಯತ್ನಪೂರ್ವಕವಾಗಿ ಮನಸ್ಸಿನಲ್ಲಿ ತುಂಬಿಕೊಳ್ಳಿರಿ. ನಿಮ್ಮ ಕಷ್ಟಗಳು ಎಷ್ಟೇ

ದುರ್ಗಮವಾಗಿ ತೋರುತ್ತಿರಲಿ, ಅವು ಎಷ್ಟೇ ನಿಜವೆಂದು ನಿಮಗೆ ಈಗ ನಂಬಿಕೆಯಾಗಿರಲಿ, ಪರಮಾತ್ಮನ ಸ್ಮರಣೆಯಿಂದಲೇ ಅವು ದಿಕ್ಕಾಪಾಲಾಗಿ ಓಡಿಹೋಗುವವು. ಅವು ಯಾವಾಗಲೂ ಇರಲೇ ಇಲ್ಲವೆಂದು ನಿಮಗೆ ಅರಿಕೆಯಾಗಿಬಿಡುವದು!

ಈ ತಿಂಗಳ ಸಂದೇಶವೆಲ್ಲ ಒಂದೇ ವಾಕ್ಯದಲ್ಲಿ ಅಡಗಿರುವದೆಂದು ಹೇಳಬಹುದು. ಇರುವ ತತ್ತ್ವವು ಒಂದೇ; ಅದನ್ನೇ ಜನರು ಒಂದಕ್ಕೊಂದು ಅತ್ಯಂತ ವಿರುದ್ಧವಾದ ಎರಡು ಬೇರೆಬೇರೆಯ ದೃಷ್ಟಿಗಳಿಂದ ಕಾಣುತ್ತಿರುವರು. ಇವುಗಳಲ್ಲಿ ಒಂದು ಲೋಕದ ಜನರ ಸ್ವಾಭಾವಿಕವಾದ ತಪ್ಪು ತಿಳಿವಳಿಕೆಯ ದೃಷ್ಟಿ; ಇದನ್ನು ನಾವು **ಲೌಕಿಕದೃಷ್ಟಿ**ಯೆಂದು ಕರೆಯಬಹುದು. ಲೌಕಿಕದೃಷ್ಟಿಯಿಂದ ನೋಡಿದರೆ ಜಗತ್ತೆಲ್ಲವೂ ಅತ್ಯಂತ ಅವ್ಯವಸ್ಥಿತವಾಗಿ ಕಾಣುತ್ತದೆ. ಅದರಲ್ಲಿ ಸ್ವಾರ್ಥತೆ, ಪಾಪ, ದುಃಖ–ಇವುಗಳು ತುಂಬಿರುವಂತೆ ಕಾಣುತ್ತಿರುವದು. ಈ ದೃಷ್ಟಿಯಿಂದಲೇ ಸಾಮಾನ್ಯವಾಗಿ ಜನರೆಲ್ಲರೂ ವ್ಯವಹಾರಮಾಡುತ್ತಿರುವರು; ಆದ್ದರಿಂದ ಅದನ್ನು **ವ್ಯಾವಹಾರಿಕದೃಷ್ಟಿ** ಎಂದೂ ಕರೆಯಬಹುದು. ಆದರೆ ಇದಕ್ಕಿಂತ ತೀರ ವಿಲಕ್ಷಣವಾದ ದೃಷ್ಟಿಯೊಂದಿದೆ; ಅದು ತತ್ತ್ವವನ್ನು ಇದ್ದಂತೆ ಕಂಡುಕೊಂಡಿರುವ ಅಲ್ಪ ಸಂಖ್ಯೆಯ ಮಹಾತ್ಮರುಗಳ ದೃಷ್ಟಿ. ಅದನ್ನೇ **ಋಷಿಗಳ ದೃಷ್ಟಿ**ಯೆಂದು ಕರೆಯಬಹುದು. ಋಷಿಗಳಿಗೆ ಮೇಲುಮೇಲೆ ಕಾಣುವ ಹುಸಿತೋರಿಕೆಗಳ ಮೇಲೆ ವಿಶ್ವಾಸವಿಲ್ಲ ಅವರು ನಿಜವನ್ನು ಕಂಡುಕೊಂಡು ಅದರ ಆಧಾರದ ಮೇಲೆಯೇ ತಮ್ಮ ನಡೆನುಡಿಗಳನ್ನು ರೂಪಿಸಿ ಕೊಳ್ಳುತ್ತಾರೆ. ಆದ್ದರಿಂದ ಅವರದು ಬರಿಯ ವ್ಯಾವಹಾರಿಕದೃಷ್ಟಿಯಲ್ಲ, ಅದು **ಪರಮಾರ್ಥದೃಷ್ಟಿ.**

ಇರುವ ತತ್ತ್ವವು ಒಂದೇ ಆದರೆ ಅದನ್ನು ಸರಿಯಾಗಿ ನೋಡುವ ಋಷಿಗಳ ದೃಷ್ಟಿಯೂ, ತಪ್ಪಾಗಿ ಕಾಣುವ ಲೌಕಿಕರ ದೃಷ್ಟಿಯೂ ಅತ್ಯಂತವಾಗಿ ಬೇರೆಬೇರೆಯಾಗಿರುತ್ತವೆ. ದೃಷ್ಟಿಭೇದದಿಂದ ವಸ್ತುವು ಬೇರೆಯಾಗಿ ಕಾಣುವದಕ್ಕೂ ಫಲವೂ ಬೇರೆಯಾಗುವದಕ್ಕೂ ಒಂದು ದೃಷ್ಟಾಂತವನ್ನು ಕೊಡಬಹುದು. ಒಬ್ಬನು ಒಂದು ಪಾವು ಚಿನ್ನದಲ್ಲಿ ಒಂದು ಬಳೆಯನ್ನು ಮಾಡಿಸಿಕೊಂಡಿದಾನೆಂದು ಇಟ್ಟುಕೊಳ್ಳಿರಿ. ಅವನು ಅದನ್ನು ಕೈಯಲ್ಲಿ ಹಾಕಿಕೊಂಡು ಇರುವಾಗಲೆಲ್ಲ ಅದು ಬರಿಯ ಬಳೆಯೇ ಆಗಿರುತ್ತದೆ; ಬಳೆಯ ಅಂದವನ್ನು ನೋಡಿ ಮನಸ್ಸಿನಲ್ಲಿ ಹಿಗ್ಗುವ ಭರದಲ್ಲಿ, ಅವನು ಅದು ಚಿನ್ನವೆಂಬುದನ್ನು ಮರೆತೇ ಬಿಟ್ಟಿರುತ್ತಾನೆ. ಆದರೆ ಯಾವದಾದರೊಂದು ನಿಮಿತ್ತದಿಂದ ಅದನ್ನು ಮಾರಬೇಕಾಗಿ ಬಂದರೆ? ಆಗ ಅವನೂ ಕೊಳ್ಳುವವನೂ ಅದನ್ನು ಹೇಗೆ ಕಾಣುತ್ತಾರೆ? ತೂಕ, ಬಣ್ಣ–ಮುಂತಾದವುಗಳ ಮೂಲಕ ಅದು ಎಂಥ ಚಿನ್ನವೆಂಬುದನ್ನೇ ಅವರಿಬ್ಬರೂ ಗೊತ್ತುಪಡಿಸಿಕೊಳ್ಳಬೇಕಾಗುತ್ತದೆ. ಆಗ ಅವರಿಗೆ ಅದು ಮುಖ್ಯವಾಗಿ ಚಿನ್ನವೇ ಆಗಿರುತ್ತದೆ; ಅದು ಬಳೆಯೆಂಬುದನ್ನು ಅವರಿಬ್ಬರೂ ಮರೆತರೂ ಅಡ್ಡಿಯಿಲ್ಲ, ಚಿನ್ನವೆಂಬುದನ್ನು

ಮಾತ್ರ ಅಲಕ್ಷ್ಯಮಾಡುವ ಹಾಗಿರುವದಿಲ್ಲ. ಈಗ ದೃಷ್ಟಿಭೇದದಿಂದ ವಸ್ತುಸ್ವರೂಪವು ಹೇಗೆ ಬದಲಿಸಿತೆಂಬುದನ್ನು ನೋಡಿರಿ. ಅದು ಒಡವೆ ಎಂಬುದನ್ನು ಮನಸ್ಸಿಗೆ ತಂದುಕೊಂಡಾಗ ಬಳೆಯಲ್ಲಿ ಚಿನ್ನವು ಅಡಗಿಹೋಗಿತ್ತು; ಅದು ಚಿನ್ನವೆಂಬುದನ್ನು ನೆನಸಿಕೊಂಡಕೂಡಲೆ ಚಿನ್ನದಲ್ಲಿ ಬಳೆಯು ಮರೆಯಾಗಿ ಬಿಟ್ಟಿತು. ಅಲ್ಲವೆ? ಶೆಟ್ಟಿಯ ಮಗನು ತಾನು ಕೈಯಲ್ಲಿಟ್ಟುಕೊಂಡಿರುವ ಬಳೆಯನ್ನು ನೋಡುತ್ತಾ ಚಿನ್ನವನ್ನು ಮರೆತಿರುತ್ತಾನೆ; ಆದರೆ ವಿವೇಕಿಯಾದ ಶೆಟ್ಟಿಯು ಬಳೆಯನ್ನು ಕಾಣುವಾಗಲೂ, ಅದರಲ್ಲಿ ಚಿನ್ನವನ್ನೇ ನೋಡುತ್ತಿರುತ್ತಾನೆ. ಇದರಂತೆ ಲೋಕದ ಸಾಮಾನ್ಯ ಜನರು ವಸ್ತುಗಳಿಂದ ತಮಗೆ ಆಗುವ ಸದ್ಯಃಫಲವನ್ನೇ ನೋಡುತ್ತಾ ಅವುಗಳ ತಿರುಳಾದ ಪರಮಾತ್ಮನನ್ನು ಮರೆತಿರುತ್ತಾರೆ. ತತ್ತ್ವವನ್ನು ಬಲ್ಲ ಋಷಿಗಳು ಪರಮಾತ್ಮನನ್ನೇ ನೆನಪಿನಲ್ಲಿಟ್ಟು ಅವನಲ್ಲಿ ಕಲ್ಪಿತವಾಗಿರುವ ಸುಖದುಃಖಗಳ ಸಂಸಾರವನ್ನು ಎಂದಿಗೂ ಕಾಣದೆ ಇರುತ್ತಾರೆ.

ಮನುಷ್ಯರು ತಮ್ಮ ಬಡತನವನ್ನು ಕುರಿತು ಆಗಾಗ್ಗೆ ಚಿಂತಿಸುತ್ತಿರುವರು; ಆದರೆ ಲಕ್ಷ್ಮೀಪತಿಯಾದ ಭಗವಂತನನ್ನು ಚಿಂತಿಸುವದಕ್ಕೆ ಕಾಲವನ್ನು ಉಪಯೋಗಿಸುವದು ಕಡಿಮೆ. ಮಾನವನಿಗೆ ಆಗುವ ರೋಗಗಳನ್ನು ಕುರಿತು ಯೋಚಿಸುವವರು ಹಲವರು ಇರುತ್ತಾರೆ; ಆದರೆ ಸ್ವಾಸ್ಥ್ಯಕ್ಕೆ ಮೂಲವಾಗಿರುವ ಪರಿಪೂರ್ಣನಾದ ಪರಮಾತ್ಮನನ್ನು ಕುರಿತು ಮನನಮಾಡುವವರು ವಿರಳ. ಮನುಷ್ಯನು ಪಾಪವನ್ನು ಮಾಡುತ್ತಾ ಪಾಪಕ್ಕೆ ಪರಿಹಾರವೇನೆಂಬುದನ್ನು ಕುರಿತು ಯೋಚಿಸುತ್ತಿರುವನು; ಆದರೆ ಸ್ಮರಣಮಾತ್ರದಿಂದ ಪಾಪಗಳನ್ನೆಲ್ಲ ಸುಟ್ಟು ಬೂದಿಗೈಯುವ ಪರಮಮಂಗಲನಾದ ಪರಮಾತ್ಮನನ್ನು ಧ್ಯಾನಿಸುವವರು ಎಲ್ಲಿಂಯೋ ಕೆಲವು ಜನರು ಮಾತ್ರ ಇರುತ್ತಾರೆ. ನಮ್ಮ ದಾರಿದ್ರ್ಯವೆಂಬುದಾಗಲಿ, ಅನಾರೋಗ್ಯವೆಂಬುದಾಗಲಿ, ಪಾಪವೆಂಬುದಾಗಲಿ ಪರಮಾರ್ಥವಾಗಿರುದಿಲ್ಲ. ಬೆಳಕಿಲ್ಲದಾಗ ತೋರುತ್ತಿರುವ ಕತ್ತಲೆಯಂತೆ, ಮನುಷ್ಯನು ಬಿಸಿಲಿಗೆ ಅಡ್ಡಲಾದಾಗ ಕಾಣಿಸಿಕೊಳ್ಳುವ ನೆರಳಿನಂತೆ, ಹಗ್ಗದ ನಿಜವನ್ನು ಅರಿಯದಾಗ ಹೆದರಿಸುವ ಹುಸಿಹಾವಿನಂತೆ, ಅವೆಲ್ಲವೂ ಅಸತ್ತಾಗಿರುವವು, ಹುಸಿಯಾಗಿರುವವು. ಪರಮಾರ್ಥಸದ್ರೂಪನಾಗಿರುವ ಪರಮಾತ್ಮನ ಚಿಂತನೆಯನ್ನು ಬಲಪಡಿಸಿಕೊಂಡಂತೆಲ್ಲ ಅವು ಬೆಳಕು ಬಂದಾಗ ಹಾರುವ ಕತ್ತಲೆಯಂತೆಯೂ ಬಿಸಿಲುಬಲವಾಗಿರುವೆಡೆಯಲ್ಲಿ ಮರೆಯಾಗುವ ನೆರಳಿನಂತೆಯೂ ಹಗ್ಗದ ನಿಜದರಿವಿನ ಮುಂದೆ ಮೈಗರೆಯುವ ಹುಸಿಹಾವಿನಂತೆಯೂ ಸಹಜವಾಗಿ ತೀರ ಇಲ್ಲವಾಗುವವು.

ವಿಷ್ಣುಪುರಾಣದಲ್ಲಿ ಒಂದು ವಚನವಿರುತ್ತದೆ. ಮನುಷ್ಯನು ಒಂದು ಮುಹೂರ್ತದವರೆಗೆ, ಕಡೆಗೆ ಒಂದು ಕ್ಷಣದವರೆಗೆ, ಭಗವಂತನನ್ನು ಸ್ಮರಿಸದೆ ಇದ್ದರೆ, ಆಗಲೆ ದುಃಖಕ್ಕೆ ಅವಕಾಶವನ್ನು ಕೊಟ್ಟಂತೆ ಆಯಿತೆಂದು ತಿಳಿಯಬೇಕು. ಭಗವಂತನನ್ನು

ಚಿಂತಿಸದೆ ಇರುವದರಿಂದ ಆಗುವ ಹಾನಿಯು ಅಷ್ಟಿಷ್ಟಲ್ಲ. ಮನುಷ್ಯನು ಸ್ವಾಭಾವಿಕವಾಗಿ ಪರಮಾತ್ಮನಲ್ಲಿದ್ದವನು ಹೇಗೋ ಅವಿದ್ಯೆಯಿಂದ, ತಪ್ಪುತಿಳಿವಳಿಕೆಯಿಂದ, ಆತನನ್ನು ಬಿಟ್ಟು ಬಹುದೂರವಾಗಿ ಬಂದುಬಿಟ್ಟಿರುತ್ತಾನೆ. ಒಂದು ಹಸುಗೂಸು ತನ್ನನ್ನು ಮುದ್ದಿಸುವ ತಂದೆಯನ್ನು ಅಥವಾ ತಾಯಿಯನ್ನು ಬಿಟ್ಟು ಆಡುತ್ತಾಡುತ್ತಾ ಮನೆಗೆ ದೂರವಾಗಿ ಬಂದು ತನಗೆ ಪರಿಚಯವಿಲ್ಲದವರ ನಡುವೆ ಇರುವಂತೆ, ಕತ್ತಲೆಯಲ್ಲಿ ಅದು ಮುಂಗಾಣದೆ ಗಟ್ಟಿಯಾಗಿ ಅಳುತ್ತಿರುವಂತೆ, ನಾವುಗಳು ಸಾವಿರ ತಂದೆತಾಯಿಗಳಿಗಿಂತಲೂ ಹೆಚ್ಚಾದ ಪ್ರೇಮದ ಗಣಿಯಾಗಿರುವ ಭಗವಂತನಲ್ಲಿರುವದನ್ನು ಬಿಟ್ಟು ವಿಷಯಚಿಂತನೆಯ ಪ್ರಪಂಚಕ್ಕೆ ಬಂದುಬಿಟ್ಟಿರುವೆವು. ವಿಷಯಗಳ ಚಿಂತನೆಯು ನಮಗೆ ಮೊದಮೊದಲು ಪ್ರಿಯವಾಗಿ ಕಾಣುತ್ತಿದ್ದು ಈಗ ಕಗ್ಗತ್ತಲೆಯು ಕವಿದಿರುವ ಕಾಡಿನೊಳಕ್ಕೆ ನುಗ್ಗಿಸಿಬಿಟ್ಟಿರುತ್ತದೆ. ಈಗ ನಾವು ಎಲ್ಲಿಗೆ ಹೋಗಬೇಕೆಂಬುದು ತಿಳಿಯದು, ಇಲ್ಲಿಗೆ ನಾವು ಎಂದು ಏಕೆ ಬಂದೆವೆಂಬುದು ತಿಳಿಯದು, ಇಲ್ಲಿಂದ ಹೇಗೆ ಪಾರಾಗಬೇಕೆಂಬುದು ತಿಳಿಯದು! ಇಂಥ ದುರವಸ್ಥೆಯಲ್ಲಿ ಸಿಕ್ಕಿಬಿದ್ದು ಒದ್ದಾಡುತ್ತಿರುವೆವು, ನಾವು!

ಪ್ರಪಂಚದ ಎಲ್ಲಾ ಧರ್ಮಗ್ರಂಥಗಳಿಗೂ, ಎಲ್ಲಾ ಆಪ್ತವಚನಗಳಿಗೂ, ಎಲ್ಲಾ ಸ್ತೋತ್ರಗಳಿಗೂ, ಒಂದೇ ಒಂದು ಉದ್ದೇಶವಿರುವದು. ನಮ್ಮ ಅಜ್ಞಾನದ ಸ್ಥಿತಿಯಲ್ಲಿ ಈಗ ನಾವು ಪರಮಾತ್ಮನನ್ನು ಬಿಟ್ಟು ಬಹುದೂರ ಬಂದಂತೆ ನಮಗೆ ತೋರುತ್ತಿರುವದಾದರೂ ಆತನು ಈಗಲೂ ನಮ್ಮ ಬಳಿಯಲ್ಲಿಯೇ ಇದ್ದುಕೊಂಡಿರುವನು. ಈಗಲೂ ಆಗನಿಗೂ ನಮಗೂ ನಿಕಟವಾದ ಸಂಬಂಧವು ಇದ್ದುಕೊಂಡಿರುವದು. ಈಗಲೂ ಆತನ ದಯೆಯ ಕಿರಣವು ನಮ್ಮ ಕಡೆಗೆ ಪಸರಿಸುತ್ತಲೇ ಇರುವದು. ಈಗಲೂ ಆತನ ಮಕ್ಕಳೇ ಆಗಿ, ಆತನ ಅಂಶವಾಗಿ ನಾವುಗಳಿರುವೆವು. ನಮ್ಮಲ್ಲಿ ಕಾಣುತ್ತಿರುವ ದೋಷಗಳನ್ನು ಕುರಿತು ಚಿಂತಿಸುವದರ ಬದಲು ಆತನ ಮಹಿಮೆಯನ್ನೂ ಆ ಮಹಿಮೆಗೂ ನಮಗೂ ಇರುವ ಹತ್ತಿರದ ಸಂಬಂಧವನ್ನೂ ನೆನಪುಕೊಡುವಂತೆ ಆತನ ಚಿಂತೆಯಿಂದ ಮೇಲಕ್ಕೇರಿಸುವದೇ ಧರ್ಮಗ್ರಂಥಗಳಿಗೆ, ಸದ್ಗುರುಗಳ ಉಪದೇಶಕ್ಕೆ, ಇರುವ ಪರಮೋದ್ದೇಶವು.

ಭಗವಂತನ ಸ್ಮರಣೆಯನ್ನು ಹೇಗಾದರೂ ಮನಸ್ಸಿಗೆ ಹತ್ತಿಸಿಕೊಳ್ಳಿರಿ, ವಿಷಯ ಚಿಂತನೆಯೂ ಅದರಿಂದಾಗಿರುವ ಅನರ್ಥಗಳೂ ಕೂಡಲೆ ಸಮೂಲವಾಗಿ ನಾಶವಾಗಿಬಿಡುವವು.

# 7. ನಾಗರಿಕತೆಯ ದುಷ್ಪರಿಣಾಮ

* ಮನುಷ್ಯನಿಗೆ ಎರಡು ಶರೀರಗಳಿರುವವೆಂದು ಆರ್ಯರ ಧರ್ಮಗ್ರಂಥಗಳಲ್ಲಿ ಹೇಳಿರುತ್ತದೆ. ನಮಗೆ ಹೊರಗೆ ಕಾಣುತ್ತಿರುವದು, ನಾವೆಲ್ಲರೂ ಶರೀರವೆಂದು ಕರೆಯುವ ಕಣ್ಣು, ಮೂಗು, ಕಿವಿ, ಕೈಕಾಲುಗಳ ಗುಂಪು, ಸ್ಥೂಲಶರೀರವು, ಎಂದರೆ ದಪ್ಪನಾಗಿರುವ ಬುದ್ಧಿಯ ಸಾಮಾನ್ಯ ಜನರಿಗೂ ತಿಳಿದಿರುವ ಶರೀರವು. ಇದರೊಳಗೆ ಇರುವ, ನಮಗೆ ಹೊರಗಿನ ಅರಿವನ್ನೂ ಒಳಗೆ ಸುಖದುಃಖ ಜ್ಞಾನಾಜ್ಞಾನಾದಿಗಳ ಅರಿವನ್ನೂ ಉಂಟು ಮಾಡುವ ಕರಣಗಳ ಗುಂಪು ಸೂಕ್ಷ್ಮಶರೀರವು, ಎಂದರೆ ಒಳಹೊಕ್ಕು ವಿಚಾರಮಾಡಬಲ್ಲ ಜಾಣರಿಗೆ ಮಾತ್ರವೇ ತಿಳಿಯಬರುವ ಶರೀರವು. ಈ ಸೂಕ್ಷ್ಮಶರೀರದ ಸ್ವರೂಪವನ್ನೂ, ಅದರ ಪ್ರವೃತ್ತಿಯನ್ನೂ ಅದರ ಸ್ವಾಸ್ಥ್ಯದ ಮತ್ತು ಬೆಳವಣಿಗೆಯ ನಿಯಮಗಳನ್ನೂ ತಿಳಿದವರಿಗೆ ಅಧ್ಯಾತ್ಮವಿದ್ಯೆಯ ಪ್ರಯೋಜನವು ದೊರಕುವದು.

ಸೂಕ್ಷ್ಮಶರೀರದಲ್ಲಿ ಅಂತಃಕರಣವೆಂದೂ ಬಹಿಃಕರಣಗಳೆಂದೂ ಎರಡು ವಿಭಾಗವುಂಟು. ಬಹಿಃಕರಣಗಳೆಂದರೆ ಕಣ್ಣು, ಕಿವಿ, ಮೂಗು– ಮುಂತಾದವುಗಳ ಮೂಲಕ ಹೊರಗಿನ ವಿಷಯಗಳನ್ನು ಅರಿಯುವ ಇಂದ್ರಿಯಗಳು. ಹೊರಗೆ ಕಾಣುವ ಕಣ್ಣು, ಕಿವಿ– ಮುಂತಾದವುಗಳೇ ಇಂದ್ರಿಯಗಳಲ್ಲ; ಅವುಗಳ ಮೂಲಕವಾಗಿ ಕೆಲಸಮಾಡುವ ಸೂಕ್ಷ್ಮವಾದ ಭಾಗಗಳು ಬೇರೆಯಿವೆ. ಹೊರಗೆ ನಮಗೆ ಕಾಣುತ್ತಿರುವದು ಇಂದ್ರಿಯಗಳ ಗೋಳಕಗಳು, ಅಥವಾ ಸ್ಥಾನಗಳು. ನಲ್ಲಿ[1]ಯ ಬಾಯಿಂದ ನೀರು ಬರುತ್ತಿದ್ದರೂ ಕಬ್ಬಿಣದ ನಲ್ಲಿಯೇ ನೀರನ್ನು ಕೊಡುವದೆಂದು ನಾವು ಯಾರೂ ಭಾವಿಸುವದಿಲ್ಲ. ನಲ್ಲಿಯ ಮೂಲಕವಾಗಿ ಒಳಗಿಂದ ನೀರು ಹೊರಕ್ಕೆ ಬರುತ್ತದೆ. ನೀರು ಮೊದಲು ಯಾವದೋ ಒಂದು ಕೆರೆಯಲ್ಲಿ ಅಥವಾ ಹೊಳೆಯಲ್ಲಿ ಇರುತ್ತದೆ; ಅಲ್ಲಿಂದ ಯಂತ್ರದ ಮೂಲಕವಾಗಿ ನೀರನ್ನು ಎತ್ತಿ ಒಂದು ಕಡೆ ಕೂಡಿಟ್ಟುಕೊಂಡಿದ್ದು ಅದನ್ನು ನಲ್ಲಿಗಳ ಮೂಲಕವಾಗಿ ಬೇಕಾದ ಕಡೆಗೆ ಒಯ್ಯುತ್ತಾರೆ. ಇದರಂತೆಯೇ ಅಂತಃಕರಣದಲ್ಲಿರುವ ಬೇರೆಬೇರೆಯ ಶಕ್ತಿವಿಶೇಷಗಳು, ನೋಡುವದು, ಕೇಳುವದು–ಮುಂತಾದ ಕೆಲಸವನ್ನು ಮಾಡುವದಕ್ಕೆ ಉಪಯೋಗವಾಗುತ್ತದೆ. ಆ ಶಕ್ತಿವಿಶೇಷಗಳೇ ಇಂದ್ರಿಯಗಳು. ಆ ಇಂದ್ರಿಯಗಳು ಕಣ್ಣು, ಕಿವಿ–ಮುಂತಾದ ಗೋಳಕಗಳ ಮೂಲಕ ಹೊರಹೊಮ್ಮಿ ವಿಷಯಗಳ ಅರಿವನ್ನು ನಮಗೆ ಮಾಡಿಕೊಡುತ್ತವೆ–ಎಂದು ಪ್ರಾಚೀನಶಾಸ್ತ್ರಕಾರರು ಹೇಳುತ್ತಾರೆ.

---

1. ನಲ್ಲಿಯನ್ನು ಉತ್ತರಕರ್ಣಾಟಕದವರು 'ನಳ' ಎನ್ನುತ್ತಾರೆ; 'ನಳಿಕಾ' ಎಂಬ ಸಂಸ್ಕೃತಮಾತಿನಿಂದ ಈ ಎರಡು ಶಬ್ದಗಳೂ ಬಂದಿರಬಹುದೆಂದು ತೋರುತ್ತದೆ.

* ಸಂಪುಟ 16, ಸಂಚಿಕೆ 7, ಮಾರ್ಚ್ 1947, ಪುಟ 145–152

ನಮಗೆ ಇಂದ್ರಿಯಗಳು ನೇರಾಗಿ ತಿಳಿಯದಿದ್ದರೂ ಅವುಗಳು ಮಾಡುವ ಕೆಲಸಗಳು ಸುಪ್ರಸಿದ್ಧವಾಗಿರುತ್ತವೆ. ಮನುಷ್ಯನಿಗೆ ನೋಡುವದು, ಕೇಳುವದು, ಮೂಸುವದು, ಸವಿಯುವದು, ವಿಷಯಗಳನ್ನು ಮುಟ್ಟುವದು–ಈ ಶಕ್ತಿಗಳು ಸಹಜವಾಗಿರುತ್ತವೆ ಎಂದು ನಮಗೆಲ್ಲರಿಗೂ ಚೆನ್ನಾಗಿ ಗೊತ್ತಿದೆ. ಚಿಕ್ಕಂದಿನಿಂದಲೂ ನಾವು ಇಂದ್ರಿಯಗಳ ನೆರವಿನಿಂದಲೇ ವ್ಯವಹಾರವಮಾಡುತ್ತಿರುವೆವು. ಅವುಗಳ ಕೆಲಸವು ಸುಲಭವಾಗಿ, ವೇಗವಾಗಿ ಕಾರ್ಯಕಾರಿಯಾಗುವಂತೆ ಅನೇಕ ಯಂತ್ರಗಳನ್ನು ಮಾಡಿಕೊಂಡಿರುವೆವು. ಮನುಷ್ಯನು ಎಷ್ಟರಮಟ್ಟಿಗೆ ಈ ಕರಣಗಳನ್ನೂ ಉಪಕರಣಗಳನ್ನೂ ಉಪಯೋಗಿಸುತ್ತಾನೋ ಅಷ್ಟರಮಟ್ಟಿಗೆ ನಾಗರಿಕತೆಯಲ್ಲಿ ಮುನ್ನಡೆದಿರುತ್ತಾನೆಂದು ನಾವೆಲ್ಲರೂ ಭಾವಿಸುವೆವು. ಭೌತಿಕವಿಜ್ಞಾನದ ಸಹಾಯದಿಂದ ರೈಲು, ವರ್ತಮಾನದ ತಂತಿ, ರೇಡಿಯೊ, ಹಡಗುಗಳು, ಜಹಜುಗಳು, ವಿಮಾನಗಳು, ವ್ಯವಹಾರಕ್ಕೆ ಬೇಕಾಗುವ ಕೆಲಸಗಳನ್ನು ಮಾಡುವ ಇನ್ನೂ ಹಲವು ಯಂತ್ರಗಳು– ಇವೆಲ್ಲವನ್ನೂ ನಾವು ಉಪಯೋಗಿಸಿ ಕೊಳ್ಳುತ್ತಿರುವೆವು. ಯಾವ ಜನಾಂಗದವರು ಈ ಯಂತ್ರಗಳನ್ನೂ ಉಪಕರಣಗಳನ್ನೂ ಹೆಚ್ಚಿನ ಪ್ರಮಾಣದಲ್ಲಿ ಉಪಯೋಗಿಸಬಲ್ಲವರಾಗಿರುವರೋ ಅವರು ವ್ಯವಹಾರದಲ್ಲಿ ಚತುರರಾಗಿ, ಉದ್ಯೋಗ ಶೀಲರಾಗಿ, ವಾಣಿಜ್ಯದಲ್ಲಿ ಮುಂದಾಳುಗಳಾಗಿ, ರಾಜಕಾರಣಪಟುಗಳಾಗಿ, ತಮ್ಮ ಸುಖ ಸಾಮಗ್ರಿಗಳನ್ನು ಹೇರಳವಾಗಿ ರಾಶಿಹಾಕಿಕೊಂಡು ತಮ್ಮಷ್ಟು ಸಹಾಯಸಂಪತ್ತಿಲ್ಲದ ಹಿಂದುಳಿದ ಜನಾಂಗದವರ ಮೇಲೆ ತಮ್ಮ ಪ್ರಭಾವವನ್ನು ಕೂರಿಸುತ್ತಿರುವರು.

ಸೂಕ್ಷ್ಮಶರೀರದ ಒಂದು ಭಾಗವಾದ ಇಂದ್ರಿಯಗಳ ಮಹಿಮೆಯು ಮಾನವನಿಗೆ ಇಷ್ಟುಮಟ್ಟಿಗೆ ಅರಿವಾಗಿದೆಯಾದರೂ ಇನ್ನೊಂದು ಭಾಗವಾದ ಅಂತಃಕರಣದ ವಿಷಯಕ್ಕೆ ಅವನಿಗೆ ಇರುವ ತಿಳಿವಳಿಕೆಯು ತೀರ ಸ್ವಲ್ಪ ಅಳತೆಯದಾಗಿರುತ್ತದೆ. ಅಂತಃಕರಣವನ್ನು ಸಾಮಾನ್ಯವಾಗಿ ಮನಸ್ಸು, ಬುದ್ಧಿ, ಚಿತ್ತ–ಎಂಬ ಹೆಸರುಗಳಿಂದ ಕರೆಯುವರು. ಇಂದ್ರಿಯಗಳ ವ್ಯಾಪಾರಗಳು ಯಾವವೇ ಆದರೂ ಮನಸ್ಸಿನ ಸಹಾಯವಿಲ್ಲದೆ ನಡೆಯುವಹಾಗಿಲ್ಲವೆಂಬುದು ನಮ್ಮಲ್ಲಿ ಅನೇಕರಿಗೆ ತಿಳಿದಿರುತ್ತದೆ. ಈ ಮನಸ್ಸಿನಲ್ಲಿ ಇಂದ್ರಿಯಗಳ ವ್ಯಾಪಾರಕ್ಕೆ ಒತ್ತಾಸೆಯನ್ನು ಕೊಡುವ ಶಕ್ತಿಯೇ ಅಲ್ಲದೆ, ಇಂದ್ರಿಯಗಳಿಂದ ರಾಶಿಹಾಕಿಕೊಂಡಿರುವ ತಿಳಿವಳಿಕೆಯನ್ನು ಪರೀಕ್ಷಿಸುವದು, ಕೆಲವು ಅಭಿಪ್ರಾಯಗಳನ್ನು ಏರ್ಪಡಿಸಿಕೊಳ್ಳುವದು, ಆ ಅಭಿಪ್ರಾಯಗಳನ್ನು ವಿಂಗಡಿಸಿ ವ್ಯವಸ್ಥೆಗೊಳಿಸಿಕೊಂಡು ಮುಂದಕ್ಕೆ ವ್ಯವಹಾರವನ್ನು ಮಾಡುವಾಗ ಉಪಯೋಗಿಸು ವದಕ್ಕೆ ಬೇಕಾದ ಶಾಸ್ತ್ರಗಳನ್ನು ಏರ್ಪಡಿಸುವದು– ಇಂಥ ಶಕ್ತಿಗಳು ಇವೆ ಎಂಬುದು ನಮ್ಮಲ್ಲಿ. ಅನೇಕರಿಗೆ ಮನವರಿಕೆಯಾಗುತ್ತಾ ಬಂದಿದೆ. ಮನಸ್ಸಿಗೆ ತಿಳಿವಳಿಕೆಯನ್ನು ಕೊಡುವದಕ್ಕಾಗಿ ನಾವು ವಿದ್ಯಾಶಾಲೆಗಳನ್ನು ಏರ್ಪಡಿಸಿರುತ್ತೇವೆ. ಓದುಬರಹಗಳ ಮೂಲಕವಾಗಿ ಜ್ಞಾನದ

ರಾಶಿಯನ್ನು ಸೂರೆಮಾಡಿಕೊಂಡು ನಮಗೆ ಬೇಕಾದವರಿಗೆ ಹಂಚಬಹುದೆಂದು ನಮ್ಮಲ್ಲಿ ಕೆಲವರು ತಿಳಿದುಕೊಂಡಿರುತ್ತಾರೆ. ಆದರೆ ಅಂತಃಕರಣಕ್ಕೆ ಅಥವಾ ಮನಸ್ಸಿಗೆ ಇರುವ ಶಕ್ತಿಗಳು ಎಲ್ಲಿಯವರೆಗೆ ನಮಗೆ ಉಪಕಾರವನ್ನು ಮಾಡಬಹುದು? ಮನುಷ್ಯನು ಮನುಷ್ಯನಾಗಿ ಹುಟ್ಟಿದ್ದು ಸಾರ್ಥಕವೆನಿಸಬೇಕಾದರೆ ಮನಸ್ಸಿನ ಯಾವ ಯಾವ ಶಕ್ತಿಗಳನ್ನು ಎಷ್ಟರಮಟ್ಟಿಗೆ ಬೆಳೆಯಿಸಿಕೊಂಡು ಉಪಯೋಗಿಸಿಕೊಳ್ಳಬೇಕು? ಈ ವಿಷಯಕ್ಕೆ ಮಾನವಜಾತಿಯ ಬಹುಭಾಗದಲ್ಲಿ ಅಜ್ಞಾನದ ಕಾರ್ಮೋಡವೇ ಆವರಿಸಿಕೊಂಡು ಬಿಟ್ಟಿದೆ. ಅಂತಃಕರಣವೆಂಬುದೊಂದು ವಿಶಾಲವಾದ, ದೀರ್ಘವಾದ ಕಗ್ಗತ್ತಲೆಯ ಗವಿಯು. ಅದರೊಳಗೆ ಹೊಕ್ಕು, ಅಲ್ಲಿ ಏನೇನಿದೆ ಎಂಬುದನ್ನು ತಿಳಿಯುವದಕ್ಕೆ ಪ್ರಯತ್ನಮಾಡಿರುವವರ ಸಂಖ್ಯೆಯು ಅತ್ಯಲ್ಪವಾಗಿರುತ್ತದೆ.

ಅಂತಃಕರಣದ ವಿಷಯಕ್ಕೆ ನಮ್ಮಗಳಿಗೆ ಇರುವ ಈ ಅಜ್ಞಾನಕ್ಕೆ ಹಲವು ಕಾರಣಗಳಿವೆ. ಅವುಗಳಲ್ಲಿ ಮುಖ್ಯವಾದದ್ದು ಈಗಿನ ನವನಾಗರಿಕತೆಯು. ಈ ನಾಗರಿಕತೆಯಲ್ಲಿ ಪ್ರತಿದಿನದ ಆವಶ್ಯಕತೆಗಳ ವಿಚಾರದಿಂದ ಜನರಿಗೆ ಹೊಸಹೊಸ ತೊಡಕುಗಳು ತಲೆದೋರುತ್ತಿರುವವು. ನೂರಕ್ಕೆ ತೊಂಬತ್ತೊಂಬತ್ತು ಜನರಿಗೆ ಹೊಟ್ಟೆ-ಬಟ್ಟೆಗೆ ನೆರವಾಗಿರುವದಕ್ಕೆ ಏನು ಮಾಡಬೇಕೆಂಬುದೇ ತಿಳಿಯದಾಗಿದೆ. ಈ ನಾಗರಿಕತೆಯಲ್ಲಿ ಯಂತ್ರಗಳ ಪ್ರಭಾವವೇ ಹೆಚ್ಚಿರುತ್ತದೆಯಾದ್ದರಿಂದ ಯಂತ್ರಗಳ ನೆರವಿನಿಂದ ಮನುಷ್ಯನ ಜೀವನಕ್ಕೆ ಬೇಕಾದ ಭೋಗ ಸಾಮಗ್ರಿಗಳನ್ನು ಮಿಂಚಿನ ವೇಗದಿಂದ ತಯಾರುಮಾಡಬಲ್ಲ ಸಂಘಗಳು ಹಲವು ಏರ್ಪಟ್ಟಿವೆಯಾದರೂ ಜನರಿಗೆ ಬೇಕಾದ ಆವಶ್ಯಕತೆಗಳು ಅದಕ್ಕಿಂತಲೂ-ವೇಗದಿಂದ, ಇನ್ನೂ ಹೆಚ್ಚಿನ ಪ್ರಮಾಣದಿಂದ ಹೆಚ್ಚುತ್ತಿರುವವು. ಇಂಥ ಸಂದರ್ಭದಲ್ಲಿ ಅಂತಃಕರಣದ ಶಕ್ತಿಗಳಂಥ ಸೂಕ್ಷ್ಮವಿಷಯಗಳನ್ನು ತಿಳಿದುಕೊಳ್ಳಬೇಕೆಂಬ ತವಕವಿದ್ದರೂ ಜನರ ಕಾಲವೂ ಲಕ್ಷ್ಯವೂ ಸಂಪೂರ್ಣವಾಗಿ ದಿನದಿನದ ಜೀವನದ ಆವಶ್ಯಕತೆಗಳ ಪೂರೈಕೆಗೇ ಪೂರ್ತಿಯಾಗಿ ವಿನಿಯೋಗವಾಗಬೇಕಾಗಿರುತ್ತದೆ.

ಈಗಿನ ನಾಗರಿಕತೆಯಲ್ಲಿ ಇರುವ ದೊಡ್ಡ ದೋಷವೇನೆಂದರೆ, ಅದು ಮಾವನ ಜೀವನದ ಅಧ್ಯಾತ್ಮವಿಭಾಗವನ್ನೂ ಆಧಿಭೌತಿಕವಿಭಾಗವನ್ನೂ ಸಮತೂಕವಾಗಿಟ್ಟು ಕೊಂಡಿರುವದಿಲ್ಲ. ನಮ್ಮ ಹೊರಗೆ ಇಂದ್ರಿಯಗಳಿಗೆ ಗೋಚರವಾಗುವ ವಿಷಯಗಳ ಪ್ರಪಂಚವೊಂದಿರುವದು; ಅದನ್ನು **ಆಧಿಭೌತಿಕ**ವೆಂದು ಕರೆಯಬಹುದು. ನಮ್ಮ ಒಳಗಡೆಯಲ್ಲಿ ಇಂದ್ರಿಯಗಳಿಗೆ ಗೋಚರವಾಗದೆ ಇರುವ ಸೂಕ್ಷ್ಮವಾದ ಪ್ರಪಂಚದ ಒಂದು ವಿಭಾಗವಿರುವದು; ಅದನ್ನು **ಆಧ್ಯಾತ್ಮಿಕ**ವೆಂದು ಕರೆಯಬಹುದು. ನಮ್ಮ ಜೀವನವನ್ನೆಲ್ಲ ಹೊರಗಿನ ವಿಭಾಗಕ್ಕೆ ಧಾರೆಯೆರೆದು ಒಳಗಿನ ವಿಭಾಗವನ್ನು ಕಡೆಗಣಿಸಿರುವದೇ ನಮ್ಮ ಈಗಿನ ನಾಗರಿಕತೆಯಲ್ಲಿರುವ ದೊಡ್ಡ ಕೊರತೆ. ಒಂದು ಜನಾಂಗವು

ಹೆಸರಾಂತದ್ದೆನಿಸಬೇಕಾದರೆ, ಆ ಜನಾಂಗಕ್ಕೆ ಸೇರಿದ ಜನರು ಹೆಸರಾಂತವರಾಗಿರಬೇಕು. ಜನರು ಮೇಲುಗೈಯೆನಿಸಬೇಕಾದರೆ ಅವರು ತಮ್ಮ ಹೊರಗಿನ ವ್ಯವಹಾರದ ಪ್ರಪಂಚವನ್ನೂ ಒಳಗಿನ ಆಧ್ಯಾತ್ಮಿಕಪ್ರಪಂಚವನ್ನೂ ಸಮತೂಕದಲ್ಲಿಟ್ಟುಕೊಂಡಿರುವದನ್ನು ಕಲಿತವರಾಗಿರಬೇಕು. ಆದರೆ ಈಗಿನ ನಾಗರಿಕತೆಯಲ್ಲಿರುವ ವಿಶೇಷಗಳೇನೆಂದರೆ ಜನರು ದಕ್ಷರಾಗಿ, ಮಹಾಮಹಾ ಉದ್ಯೋಗಗಳನ್ನು ಕೈಕೊಳ್ಳುವದು, ಅದಕ್ಕೆ ತಕ್ಕಂತೆ ಸಂಘಗಳನ್ನು ಏರ್ಪಡಿಸಿಕೊಳ್ಳುವದು, ಎಲ್ಲಾ ಪೇಟೆಗಳನ್ನೂ ಹಿಡಿಯುವದು, ಪ್ರಭುಶಕ್ತಿಯನ್ನು ತೋರ್ಪಡಿಸಿಕೊಳ್ಳುವದು, ಮಿಕ್ಕವರನ್ನು ಅಧೀನರಾಗಿ ಮಾಡಿಕೊಳ್ಳುವದು. ಈ ಉದ್ದೇಶವು ನೆರವೇರಬೇಕಾದರೆ ಮೊಟ್ಟಮೊದಲು ಆಧ್ಯಾತ್ಮಿಕ ಪ್ರಪಂಚವನ್ನು ಅಲಕ್ಷಿಸ ಬೇಕಾಗುವದು, ಮನುಷ್ಯತ್ವದ ಮಟ್ಟದಿಂದ ಕೆಳಕ್ಕೆ ಇಳಿಯಬೇಕಾಗುವದು. ಸಂಘಶಕ್ತಿಯಿಲ್ಲದೆ, ಸಂಘಕ್ಕೆ ಸೇರಿದ ವ್ಯಕ್ತಿಗಳೆಲ್ಲರೂ ಮೂಗುಜಂತುಗಳಂತೆ ಕೆಲಸಮಾಡಿದಲ್ಲದೆ, ಈಗಿನ ನಾಗರಿಕತೆಯ ಮಹೋದ್ದೇಶವು ನೆರವೇರುವದಿಲ್ಲ. ಜೇನುನೊಣಗಳೂ ಇರುವೆಗಳೂ ಸಂಘವನ್ನು ಮಾಡಿಕೊಂಡು ತಮ್ಮ ಕಾರ್ಯವನ್ನು ನೆರವೇರಿಸಿಕೊಳ್ಳುವದನ್ನು ನಾವು ನೋಡಿರುತ್ತೇವೆ. ಮಾನವರು ಹೀಗೆಯೇ ಸಂಘಗಳನ್ನು ಏರ್ಪಡಿಸಿಕೊಂಡು ಭೋಗ ಸಾಮಗ್ರಿಗಳನ್ನು ಕೂಡಿಹಾಕಿಕೊಂಡರೆ, ಹಾಗೆ ಕೂಡಿಹಾಕಿಕೊಳ್ಳುವದಕ್ಕೆ ಅಡ್ಡಲಾಗಿ ಬಂದವರನ್ನು ಹೊಡೆದು ಬಡಿದು ಕೊಂದುಹಾಕಿದರೆ, ಅವರನ್ನು ಕೀಳು ಪ್ರಾಣಿಗಳ ಸಾಲಿಗೆ ಸೇರಿಸಬಹುದು; ಅವರನ್ನು ನಾಗರಿಕರೆಂಬ ಗೌರವದ ಹೆಸರಿನಿಂದ ಕರೆಯುವದು ನ್ಯಾಯವಾದೀತೆ?

ಭೂಲೋಕದ ಈಗಿನ ನಾಗರಿಕತೆಗೆ ಪಾಶ್ಚಾತ್ಯರೇ ಆಚಾರ್ಯರು. ಅವರು ಭೌತಿಕ ವಿಜ್ಞಾನದ ಸಹಾಯದಿಂದ ಹಸ್ತಕೌಶಲವನ್ನು ಅತ್ಯಂತವಾಗಿ ಕಡಿಮೆಮಾಡುವ ಅದ್ಭುತವಾದ ಯಂತ್ರಗಳನ್ನು ಕಂಡುಹಿಡಿದರು. ಅವುಗಳಿಂದ ಮನುಷ್ಯನಿಗೆ ಬೇಕಾದವೆಂದು ತೋರುವ ಸಾಮಾನುಗಳೆಲ್ಲವನ್ನೂ ತಯಾರುಮಾಡಿದರು. ಮನುಷ್ಯನಿಗೆ ಬೇಕಾಗಲಿ ಬೇಡವಾಗಲಿ, ಅವು ಬೇಕಾದವುಗಳೇ ಎಂದು ಸಾರುವ ಪ್ರಕಟನೆಗಳನ್ನು ಹರಡಿದರು. ಅವುಗಳಲ್ಲಿ ಇರುವ ಅಥವಾ ಇಲ್ಲದಿರುವ ಗುಣಗಳನ್ನು ಕೊಂಡಾಡುವ ವ್ಯಾಪಾರಿಗಳನ್ನೂ ದಲ್ಲಾಳಿಗಳನ್ನೂ ಸೃಷ್ಟಿಸಿದರು. ಜನರಿಗೆಲ್ಲ ಮಂಕುಬೂದಿಯನ್ನು ತಳಿದು ಸಾಮಾನು ಗಳನ್ನು ಮೂರಕ್ಕೆ ಆರಾದ ಬೆಲೆಯನ್ನು ಕಟ್ಟಿಮಾರಿದರು. ಇಂದ್ರಭವನಗಳಂಥ ಮನೆ ಗಳನ್ನೂ ನಂದನಗಳಂಥ ಉದ್ಯಾನಗಳನ್ನೂ, ಗಂಧರ್ವಲೋಕದ ಸ್ಥಾನಗಳಂಥ ನೃತ್ಯಗೀತ ಶಾಲೆಗಳನ್ನೂ ನಿರ್ಮಿಸಿದರು. ಮಾನವನ ಕಲ್ಪನೆಗೂ ಅತೀತವಾದ ಭೋಗ ಸಾಮಗ್ರಿಗಳನ್ನು ಕಲ್ಪಿಸಿಕೊಂಡು ಮೆರೆದರು. ಬ್ಯಾಂಕುಗಳೆಂಬ ಕೋಶಾಗಾರಗಳನ್ನು ನಿರ್ಮಿಸಿ ಕೋಟಿಗಟ್ಟಲೆಯಾಗಿ ಹಣವನ್ನು ಗಳಿಸಿ ಕುಬೇರನನ್ನು ಮರೆಯುವಂತೆ ಮಾಡಿದರು.

ಆದರೆ ಅವರು ಅಲಕ್ಷಿಸಿದ್ದ ಅಧ್ಯಾತ್ಮಿಕ ಪ್ರಪಂಚದಲ್ಲಿ ನಡೆದ ಮಾರ್ಪಾಡುಗಳಿಂದ ತಮ್ಮ ತಮ್ಮಲ್ಲಿಯೇ ಹಲವು ಪಂಗಡಗಳಾಗಿ ಒಡೆದುಕೊಂಡರು. ಅವರಲ್ಲಿ ಪೈಪೋಟಿ, ಅಸೂಯೆ, ದ್ವೇಷ–ಇವುಗಳು ಹೆಚ್ಚಿದವು. ಸಣ್ಣಪುಟ್ಟ ಕಾಳಗಗಳಿಗೆ ಅವರ ಮನಸ್ಸು ಬೇಸತ್ತಿತು. ಯುದ್ಧಮಾಡುವ ಸೇನಾವಿಭಾಗ, ಲೌಕಿಕವ್ಯವಹಾರದಲ್ಲಿ ನಿರತರಾಗಿರುವ ಸಾಮಾನ್ಯ ಜನರ ವಿಭಾಗ–ಎಂದು ಹಿಂದಿನಿಂದ ರಾಜರುಗಳು ಮಾಡಿಕೊಂಡಿದ್ದ ವಿಂಗಡವನ್ನು ಮುರಿದರು. ಜನರೆಲ್ಲರೂ ಯುದ್ಧಕ್ಕೆ ಸಜ್ಜಾಗಬೇಕೆಂದು ಬಲಾತ್ಕರಿಸುವದಕ್ಕೆ ಮೊದಲು ಮಾಡಿದರು. ಆದರೆ ಅದೂ ಅವರಿಗೆ ತೃಪ್ತಿಯನ್ನು ಕೊಡಲಿಲ್ಲ. ಆದ್ದರಿಂದ ಒಟ್ಟೊಟ್ಟಿಗೆ ಸಾವಿರಗಟ್ಟಲೆಯಾಗಿ ಜನರು ಸಾಯುವ ಹಾಗೆ, ನೂರುಗಟ್ಟಲೆಯಾಗಿ ಮನೆಗಳು ಉರುಳುವ ಹಾಗೆ, ಮೈಲುಗಟ್ಟಲೆಯಾಗಿ ಪೈರುಪಚ್ಚೆಗಳು ಒಣಗಿಗರಗಾಗುವ ಹಾಗೆ, ನದಿಗಳ ಅಣೆಗಟ್ಟುಗಳೂ ಸೇತುವೆಗಳೂ ಮುರಿದು ನೀರಿನ ಪ್ರವಾಹವು ಜಲ ಪ್ರಲಯವನ್ನು ಏರ್ಪಡಿಸುವ ಹಾಗೆ, ಊರುಗಳು ಲೆಕ್ಕವಿಲ್ಲದಂತೆ ಭುಗಿಲೆಂಬ ಬೆಂಕಿಯ ಉರಿನಾಲಗೆಗೆ ಉಪ್ಪಿನಕಾಯಿಯಾಗುವ ಹಾಗೆ, ಅದ್ಭುತವಾದ, ಭಯಂಕರವಾದ, ಮಾರಣಾಸ್ತ್ರ ಗಳನ್ನು ಕಂಡುಹಿಡಿದರು. ಇಡಿಯ ಭೂಮಂಡಲವೇ ತಲ್ಲಣಿಸುವಂತೆ ಎರಡು ಮಹಾಯುದ್ಧಗಳನ್ನು ರೂಪಿಸಿದರು. ಎಲ್ಲರೂ ಅದಕ್ಕೆ ತುತ್ತಾದರು. ಈಗ ನವನಾಗರಿಕತೆಯ ಅಧಿದೇವತೆಯು 'ಅಯ್ಯೋ, ಕುಯ್ಯೋ, ಮೊರೆಯೋ!' ಎಂದು ಗೋಳಿಡುವದಕ್ಕೆ ಪ್ರಾರಂಭಿಸಿದಾಳೆ! ಈಗ ನಮಗೆಲ್ಲರಿಗೂ ಒದಗಿರುವ ದುಃಖಕ್ಕೆ ಯಾರೋ ಕೆಲವರು ದುಷ್ಟವ್ಯಕ್ತಿಗಳು, ಅಥವಾ ಒಬ್ಬರಿಗೊಬ್ಬರಿಗೆ ಪ್ರತಿಕಕ್ಷಿಗಳಾದ ರಾಷ್ಟ್ರಾಧಿಪರು ಕಾರಣರೆಂದು ಭಾವಿಸುವದಕ್ಕಿಲ್ಲ. ಆಧ್ಯಾತ್ಮಿಕ ಪ್ರಪಂಚವನ್ನು ಮರೆತು ಬರಿಯ ಆಧಿಭೌತಿಕವೇ ಸರ್ವವೆಂದು ನಂಬಿನಡೆದ ಅಪೂರ್ಣವಾದ ನಾಗರಿಕತೆಯ ದುಷ್ಪರಿಣಾಮವೇ ಇದು!

ಮನುಷ್ಯನು ಇಂದ್ರಿಯಗಳ ಸಹಾಯದಿಂದ ವ್ಯವಹಾರವನ್ನು ಮಾಡುತ್ತಿರುವ ಪ್ರಪಂಚದಲ್ಲಿ ನಿರ್ಮಿಸಬಹುದಾದ ಯಂತ್ರಗಳಲ್ಲಿ ಎಂಥ ಅದ್ಭುತ ಶಕ್ತಿಯಿರಲಿ, ಅವನ ಅಂತಃಕರಣದಲ್ಲಿ ಅದಕ್ಕಿಂತಲೂ ನೂರುಮಡಿಯಾಗಿ, ಸಾವಿರಪಟ್ಟು, ಅಥವಾ ಲೆಕ್ಕಕ್ಕೆ ಸಿಕ್ಕದಷ್ಟು ಹೆಚ್ಚಾಗಿರುವ ಅದ್ಭುತ ಶಕ್ತಿಗಳು ಇರುತ್ತವೆ. ಮನುಷ್ಯನ ಮನುಷ್ಯತ್ವಕ್ಕೆ ಆ ಶಕ್ತಿಗಳ ಉಪಯೋಗವೂ–ಅಥವಾ ಮುಖ್ಯವಾಗಿ ಆ ಶಕ್ತಿಗಳ ಉಪಯೋಗವೇ–ಅವಶ್ಯವಾಗಿರುತ್ತದೆ. ಮನುಷ್ಯನು ಉಣ್ಣಬಲ್ಲ, ತಿನ್ನಬಲ್ಲ, ಸಂಘವಾಗಿ ಸೇರಬಲ್ಲ, ಕಾದಾಡಬಲ್ಲ ಪ್ರಾಣಿಮಾತ್ರನಲ್ಲ. ಅವನು ಅರಿಯಬಲ್ಲ, ಪ್ರೀತಿಸಬಲ್ಲ, ಮುಂದಕ್ಕೆ ಒಳ್ಳೆಯದನ್ನು ಕೋರಬಲ್ಲ, ಪರಮಾರ್ಥತತ್ತ್ವವನ್ನು ಆರಾಧಿಸಬಲ್ಲ, ಮಹಾತ್ಮನೂ ಆಗಿರುತ್ತಾನೆ. ಅವನು ಹೊರಗಿನ ವಿಷಯಗಳ ಕಾಮರಾಜ್ಯಕ್ಕೆ ಬಲಿಯಾಗಿ ತನ್ನ

ಆಯುಷ್ಯವನ್ನು ವ್ಯರ್ಥಮಾಡಿಕೊಳ್ಳಬೇಕಾಗಿರುವ ಪ್ರಾಣಿಯಲ್ಲ; ಒಳಗಿನ ದಿವ್ಯಶಕ್ತಿಗಳ ರಾಮರಾಜ್ಯವನ್ನೂ ಪ್ರತಿಷ್ಠಿಸಿಕೊಂಡು ನಲಿಯುವದಕ್ಕೆ ತಕ್ಕ ಯೋಗ್ಯತೆಯುಳ್ಳವನು. ಅಂತಃಕರಣದ ಸ್ವರೂಪವನ್ನೂ ಅದರಲ್ಲಿರುವ ದಿವ್ಯಶಕ್ತಿಗಳನ್ನೂ ಆ ಶಕ್ತಿಗಳು ಪ್ರಕಟವಾಗಿ ಕೆಲಸಮಾಡುವದಕ್ಕೆ ಅನುಸರಿಸುವ ನಿಯಮಗಳನ್ನೂ ತಿಳಿದುಕೊಳ್ಳುವದರಿಂದಲೂ ಆ ನಿಯಮಗಳಿಗನುಗುಣವಾಗಿ ಪ್ರಯತ್ನಮಾಡುವದರಿಂದಲೂ ಈ ಯೋಗ್ಯತೆಯನ್ನು ಕಂಡುಕೊಳ್ಳಬೇಕಾಗಿದೆ.

ಮನುಷ್ಯನು ಹೊರಗಿನ ವಿಷಯಗಳ ಭೋಗಕ್ಕಾಗಿ ನಿರ್ಮಿಸಿಕೊಂಡಿರುವ ಯಂತ್ರಗಳಿಂದ ಆಗುವ ಅಪಾಯವನ್ನು ಸ್ವಲ್ಪಮಟ್ಟಿಗೆ ವರ್ಣಿಸಿದ್ದಾಯಿತು. ಆ ಯಂತ್ರಗಳು ಸಾವಿರಾರು ಕೈಕಾಲುಗಳಿಂದ ಕೆಲಸಮಾಡುವ ರಾಕ್ಷಸರಂತೆ ಇರುತ್ತವೆ. ಅವುಗಳನ್ನು ಸಾಕಿಕೊಂಡಿರುವವರು ಅವಕ್ಕೆ ಎಷ್ಟು ಕೆಲಸವನ್ನು ಒದಗಿಸಿದರೂ ಅತ್ಯಲ್ಪ ಕಾಲದಲ್ಲಿ ಎಲ್ಲವನ್ನೂ ಮಾಡಿಬಿಡುತ್ತವೆ. ಅವಕ್ಕೆ ತಕ್ಕಷ್ಟು ಕೆಲಸವನ್ನು ಒದಗಿಸಬೇಕಾದರೆ ಎಷ್ಟೋ ಜನರನ್ನು ನಿರುದ್ಯೋಗಿಗಳಾಗಿ ಮಾಡಬೇಕಾಗುತ್ತದೆ. ಅವುಗಳಿಂದ ತಯಾರುಮಾಡಿದ ಸಾಮಾನುಗಳನ್ನು ಮಾರುವದಕ್ಕೆ ಮಾಡಬಾರದ ಅನ್ಯಾಯಗಳನ್ನೂ ಹಿಂಸೆಗಳನ್ನೂ ಮಾಡಬೇಕಾಗುತ್ತದೆ. ಕೊನೆಗೆ ಯಂತ್ರವನ್ನು ಸಾಕಿದ ಯಜಮಾನರುಗಳೂ ಒಬ್ಬರೊಡನೊಬ್ಬರು ಕಾದಾಡಬೇಕಾಗುತ್ತದೆ; ಕೊನೆಗೆ ಒಂದು ಅವಾಂತರ ಪ್ರಲಯವನ್ನೇ ಏರ್ಪಡಿಸಬೇಕಾಗುತ್ತದೆ-ಎಂಬುದನ್ನು ಸಂಕ್ಷಪ್ತವಾಗಿ ವರ್ಣಿಸಿ ತಿಳಿಸಿದ್ದೂ ಆಯಿತು. ಈ ಹೊರಗಿನ ಯಂತ್ರಗಳು ಇಂಥ ಅಪಾಯಕರವಾಗಿರುವದರಿಂದ ನಮ್ಮೊಳಗಿನ ಅಂತಃಕರಣದಲ್ಲಿ ಅಡಗಿರುವ ಸೂಕ್ಷ್ಮಶಕ್ತಿಗಳನ್ನು ಸರಿಯಾಗಿ ಉಪಯೋಗಿಸಿ ಸುಖವನ್ನು ಸೂರೆಗೊಳ್ಳುವದೇ ಮಾನವನಿಗೆ ಗುರಿಯಾಗಿರಬೇಕಾಗುವದೆಂಬುದನ್ನೂ ಸ್ವಲ್ಪ ಮಟ್ಟಿಗೆ ತಿಳಿಸಿದ್ದಾಯಿತು. ಆದರೆ ಈ ಅಂತಃಕರಣವೆಂಬುದೂ ಒಂದು ಬಗೆಯ ಯಂತ್ರವೆಂಬುದನ್ನು ನಾವು ಮರೆಯಬಾರದು. ಹೊರಗಿನ ಯಂತ್ರಗಳ ಶಕ್ತಿಯು ಇಂತಿಷ್ಟೆಂದು ಭೌತಿಕವಿಜ್ಞಾನಶಾಸ್ತ್ರದಲ್ಲಿ ನಿರ್ಣಯವಾಗಿಬಿಟ್ಟಿರುತ್ತದೆ. ಆದರೆ ಅಂತಃಕರಣಯಂತ್ರದ ಶಕ್ತಿಗಳನ್ನು ಹಾಗೆ ಅಳತೆಮಾಡುವದಕ್ಕೆ ಬರುವದಿಲ್ಲ. ಏಕೆಂದರೆ ಅಂತಃಕರಣಕ್ಕೆ ಉದ್ದ, ಅಗಲ, ದಪ್ಪ, ತೂಕ-ಮುಂತಾದ ಹೊರಗಿನ ಯಂತ್ರಗಳ ಧರ್ಮಗಳು ಇರುವದಿಲ್ಲ; ಅದು ಅತ್ಯಂತ ಸೂಕ್ಷ್ಮವಾಗಿದ್ದೂ ಎಷ್ಟು ಬೇಕಾದರೂ ಹಿಗ್ಗಬಲ್ಲದು, ಎಷ್ಟು ಬೇಕಾದರೂ ಕೆಲಸ ಮಾಡಬಲ್ಲದು! ಹೊರಗಿನ ಯಂತ್ರಗಳು ಅವುಗಳನ್ನು ಇಟ್ಟಲ್ಲಿ ಬಿದ್ದಿರುತ್ತವೆ; ಅವುಗಳಿಗೆ ಕೀಲುಕೊಟ್ಟಾಗ ಕೆಲಸಮಾಡುತ್ತವೆ. ಆದರೆ ಅಂತಃಕರಣಯಂತ್ರವು ತಾನೇ ಯಾವಾಗಲೂ ಕೆಲಸಮಾಡುತ್ತಲೇ ಇರುತ್ತದೆ. ಅದು ತೆಪ್ಪನೆ ಇದೆ ಎಂದು ಕಾಣುವಾಗಲೂ ಏನಾದರೂ ಕೆಲಸವನ್ನು ನಮಗೆ ಅರಿಯದಂತೆಯೇ ಮಾಡುತ್ತಿರುತ್ತದೆ.

ಯಾವ ಯಂತ್ರವೇ ಆಗಲಿ, ಅದರ ರಚನೆ, ಅದು ಕೆಲಸಮಾಡುವದಕ್ಕೆ ಅನುಸರಿಸುವ ನಿಯಮಗಳು–ಇವುಗಳನ್ನು ತಿಳಿದುಕೊಂಡವರಿಗಲ್ಲದೆ ಮಿಕ್ಕವರಿಗೆ ಉಪಯೋಗಕ್ಕೆ ಬರುವದಿಲ್ಲ. ಅಷ್ಟೇ ಅಲ್ಲ, ಅದನ್ನು ಸಿಕ್ಕಸಿಕ್ಕ ಹಾಗೆ ಉಪಯೋಗಿಸುವದರಲ್ಲಿ ಅಪಾಯವೂ ಇರುತ್ತದೆ. ಹೀಗಿರುವಲ್ಲಿ ಅಂತಃಕರಣದಂಥ ಸೂಕ್ಷ್ಮವಾದ, ವ್ಯಾಪಕವಾದ, ನಿತ್ಯವಾಗಿ ಕೆಲಸಮಾಡುತ್ತಲೇ ಇರುವ ಯಂತ್ರವನ್ನು ಉಪಯೋಗಿಸುವವರಿಗೆ ಅದರ ಸ್ವರೂಪವೂ ಅದು ಕೆಲಸಮಾಡುವ ಕ್ರಮವೂ ಸರಿಯಾಗಿ ತಿಳಿಯದೆ ಇದ್ದರೆ ಆಗುವ ಅಪಾಯವನ್ನು ಎಷ್ಟೆಂದು ವರ್ಣಿಸುವದು? ಆಟಂಬಾಂಬಿನ ಪ್ರಯೋಗದಿಂದ ಆದ ಅನರ್ಥವನ್ನು ಜನರು ನೆನೆನೆನೆದು ಆಶ್ಚರ್ಯದಿಂದಲೂ ಅಂಜಿಕೆಯಿಂದಲೂ ಬೆರಗಾಗುತ್ತಿರುವರು. ಆದರೆ ಅಂತಃಕರಣಪ್ರಯೋಗದಿಂದ ಜನರು ತಮಗೆ ಮಾಡಿಕೊಳ್ಳುತ್ತಿರುವ ಅನರ್ಥಗಳನ್ನು ಯಾವ ಆಟಂಬಾಂಬೂ ಎಂದಿಗೂ ಮಾಡಲಾರದು! 'ಹ್ಯಾಮಿಲ್ಟನ್' ಎಂಬ ಪಾಶ್ಚಾತ್ಯ ತರ್ಕಶಾಸ್ತ್ರಜ್ಞನು 'ಪ್ರಪಂಚದಲ್ಲಿ ಮನುಷ್ಯನಿಗಿಂತ ಹೆಚ್ಚಿನ ವಸ್ತುವಿಲ್ಲ; ಮನುಷ್ಯನಲ್ಲಿ ಮನಸ್ಸಿಗಿಂತ ಹೆಚ್ಚಿನ ವಸ್ತುವಿಲ್ಲ' ಎಂದು ಹೇಳಿರುತ್ತಾನಂತೆ. ಮನಸ್ಸು ನಮ್ಮೊಳಗಿರುವ ಅತ್ಯಂತ ಮಹತ್ತ್ವದ ಕರಣವೆಂಬುದರಲ್ಲಿ ಯಾವ ಸಂಶಯವೂ ಇಲ್ಲ. ಅದರ ತತ್ತ್ವವನ್ನು ಸರಿಯಾಗಿ ಅರಿತುಕೊಂಡು ಉಪಯೋಗಿಸಿದರೆ ಎಲ್ಲಕ್ಕೂ ಹೆಚ್ಚಿನ ಪುರುಷಾರ್ಥವನ್ನೇ ಪಡೆಯುಬಹುದು. ಆದರೆ ಅದನ್ನು ತಪ್ಪಾದ ಕ್ರಮದಿಂದ ಬಳಸಿದರೆ ಎಂದಿಗೂ ತಪ್ಪಿಸಿಕೊಳ್ಳುವದಕ್ಕಾಗದ ಅತ್ಯಂತ ಭಯಂಕರವಾದ ಅಂಧಂತಮಸ್ಸಿಗೂ ಬೀಳಬಹುದು!

ಪ್ರಪಂಚವನ್ನು ಆಧ್ಯಾತ್ಮವೆಂದೂ ಅಧಿಭೂತವೆಂದೂ ಎರಡು ಪಾಲಾಗಿ ವಿಂಗಡಿಸಿ ನಾವು ಹೇಳಿರುವದು ಓದುಗರ ಸೌಕರ್ಯಕ್ಕಾಗಿಯೇ ಹೊರತು ಪ್ರಪಂಚವು ನಿಜವಾಗಿಯೂ ಎರಡು ಭಾಗವಾಗಿ ಹರಡಿಕೊಂಡಿರುವದೆಂದು ತಿಳಿಸುವದಕ್ಕಲ್ಲ. ಸಮುದ್ರದ ನೀರು ಅತ್ಯಂತ ಶೀತಪ್ರದೇಶಗಳಲ್ಲಿ ಮೇಲೆ ಹೆಪ್ಪುಕಟ್ಟಿಕೊಂಡು ಮಂಜಿನ ಗಡ್ಡೆಯಾಗಿರುವದು; ಆದರೆ ತೀರ ಕೆಳಗೆ ನೀರು ದ್ರವವಾಗಿಯೇ ಇರುತ್ತದೆ. ಇಂಥ ಸಂದರ್ಭದಲ್ಲಿ ಕೆಳಗಿನ ಮಟ್ಟದಲ್ಲಿ ನೀರು ಇದೆಯೆಂದೂ ಮೇಲಿನ ಮಟ್ಟದಲ್ಲಿ ಮಂಜು ಇದೆಯೆಂದೂ ನಾವು ಹೇಳಿದರೂ ನಿಜವಾಗಿ ಎಲ್ಲವೂ ನೀರೇ ಆಗಿರುತ್ತದೆ. ಅಲ್ಲವೆ? ಇದರಂತೆ ಒಂದೇ ಪ್ರಪಂಚವು ಒಳಗೆ ಸೂಕ್ಷ್ಮವಾದ ಅಧ್ಯಾತ್ಮಭಾಗವಾಗಿಯೂ ಹೊರಗೆ ಸ್ಥೂಲವಾದ ಅಧಿಭೂತಭಾಗವಾಗಿಯೂ ಇರುತ್ತದೆ. ಇಷ್ಟೇ ಅಲ್ಲ. ಅಧ್ಯಾತ್ಮಭಾಗದ ಅಧೀನವಾಗಿಯೇ ಅಧಿಭೂತವು ಬಹುಮಟ್ಟಿಗೆ ರೂಪಿಸಿಕೊಳ್ಳುತ್ತಲೂ ಇರುವದು. ನಮ್ಮಲ್ಲಿರುವ ಅಧ್ಯಾತ್ಮದ ಅಂಶವನ್ನು ಕ್ರಮವಾಗಿ ಉಪಯೋಗಿಸಿಕೊಂಡು ನಮ್ಮ ಜೀವನವನ್ನೆಲ್ಲ ಸುಖಮಯವಾಗಿ ಹೇಗೆ ಮಾಡಿಕೊಳ್ಳಬಹುದು?– ಎಂಬುದನ್ನು ತಿಳಿಸುವದೇ **ಅಧ್ಯಾತ್ಮವಿದ್ಯೆ.** ಈ ವಿದ್ಯೆಯನ್ನು ನಾವೆಲ್ಲರೂ ಸಂಪಾದಿಸಬೇಕು.

# 8. ಅಂತಃಕರಣ

* ಅಂತಃಕರಣವೆಂಬುದೊಂದು ಜಟಿಲವಾದ ಯಂತ್ರವು. ಮನುಷ್ಯನು ಮಾಡಿರುವ ಬತ್ತವನ್ನು ಕುಟ್ಟುವ ಯಂತ್ರ, ನೀರನ್ನು ಎತ್ತುವ ಯಂತ್ರ, ರೈಲನ್ನು ಎಳೆಯುವ ಯಂತ್ರ, ಕಾಲವನ್ನು ತಿಳಿಸುವ ಗಡಿಯಾರದ ಯಂತ್ರ, ಅಕ್ಷರವನ್ನು ಅಚ್ಚುಮಾಡುವ ಯಂತ್ರ–ಇಂಥ ಯಂತ್ರಗಳಲ್ಲಿಯೇ ಚಕ್ರಗಳು, ಕೀಲುಗಳು–ಮುಂತಾದ ಹಲವು ಅವಯವಗಳಿರುತ್ತವೆ. ಸಾಮಾನ್ಯವಾದ ಜನರಿಗೆ ಆ ಯಂತ್ರಗಳ ರಚನಾಕ್ರಮವು ಮನಸ್ಸಿಗೆ ಹತ್ತುವ ಹಾಗೆಯೇ ಇರುವದಿಲ್ಲ. ಅವುಗಳ ಅವಯವಗಳು ಒಟ್ಟುಗೂಡಿ ಪರಸ್ಪರವಾಗಿ ಉಪಕಾರ್ಯೋಪ ಕಾರಕವಾಗಿದ್ದುಕೊಂಡು ಸಾಧಿಸುವ ಅದ್ಭುತಕಾರ್ಯಗಳು ಅತ್ಯಂತ ಆಶ್ಚರ್ಯಕರವಾಗಿರುತ್ತವೆ. ಆದರೆ ಅಂತಃಕರಣಯಂತ್ರಕ್ಕೆ ಹೋಲಿಸಿದರೆ ಅವುಗಳು ಬಹಳ ಸಾಧಾರಣವಾಗಿ ಕಾಣುತ್ತವೆ. ಈ ಹೊರಗಿನ ಯಂತ್ರಗಳ ಜೋಡುಗಿರಿಯನ್ನು ಕುಶಲಮತಿಯಾದವನು ಒಬ್ಬ ಯಾಂತ್ರಿಕನ ಸಹಾಯದಿಂದ ತಿಳಿದುಕೊಂಡು ಅವುಗಳನ್ನು ಬಿಚ್ಚಬಹುದು ಮತ್ತೆ ಸಂಹತವಾದ ಯಂತ್ರವಾಗುವಂತೆ ಜೋಡಿಸಲೂಬಹುದು. ಆದರೆ ಅಂತಃಕರಣದ ವಿಮರ್ಶವು ಹಾಗಲ್ಲ. ಅದರಲ್ಲಿ ಅನಂತವಾಗಿ ಅದ್ಭುತಕಾರ್ಯಗಳನ್ನು ಮಾಡುವ ಶಕ್ತಿವಿಶೇಷಗಳಿರುತ್ತವೆ; ಆದರೂ ಆ ಶಕ್ತಿಗಳು ಯಾವದಾದರೊಂದು ಅವಯವದಿಂದ ಆಗಿರುವದಿಲ್ಲ. ಅಂತಃಕರಣವು ಸಾವಯವಯಂತ್ರವಲ್ಲ. ಅಪರಿಮಿತವಾದ ವ್ಯಾಪಾರಗಳನ್ನು ಮಾಡುವ ಶಕ್ತಿಗಳಿಂದ ಕೂಡಿ ಮನುಷ್ಯನಿಗೆ ಉಪಯೋಗವಾಗುವಂತೆ ಪರಮೇಶ್ವರನು ಅನುಗ್ರಹಿಸಿರುವ ಪರಮಸೂಕ್ಷ್ಮವಾದ ಯಂತ್ರವದು!

ಅಂತಃಕರಣದ ಕೆಲವು ವ್ಯಾಪಾರಗಳನ್ನು ಈಗ ಮನಸ್ಸಿಗೆ ತಂದುಕೊಳ್ಳಬಹುದು. ಹೊರಗಿನ ವಿಷಯಗಳನ್ನು ಇಂದ್ರಿಯಗಳು ಗ್ರಹಿಸುವಾಗ ಅದಕ್ಕೆ ಸಹಾಯ ಮಾಡುವದು ಅಂತಃಕರಣವು. ನಾವು ಯಾವದಾದರೊಂದು ವಸ್ತುವನ್ನು ನೋಡುವಾಗ ನಮ್ಮ ನೋಡುವ ಇಂದ್ರಿಯಕ್ಕೆ ಅದರ ಬೆಂಬಲವು ಬೇಕೇ ಬೇಕು; ಇಲ್ಲದಿದ್ದರೆ ಬರಿಯ ಇಂದ್ರಿಯವು ನೋಡಲಾರದು. ಹೀಗೆಯೇ ವಿಷಯವನ್ನು ಕೇಳುವ, ಮುಟ್ಟುವ, ಮೂಸುವ, ಸವಿಯುವ, ಇಂದ್ರಿಯಗಳಿಗೂ ಈ ಅಂತಃಕರಣದ ಹಿಮ್ಮೇಳವು ಬೇಕು. ಅಂತಃಕರಣದ ನೆರವಿಲ್ಲದ ಕಣ್ಣು ಕಣ್ಣಲ್ಲ, ಕಿವಿ ಕಿವಿಯಲ್ಲ, ನಾಲಗೆಯು ನಾಲಗೆಯಲ್ಲ. ಹೀಗೆ ನೋಡಿದರೆ ಅಂತಃಕರಣವೇ ಕೇಳುವ, ಮುಟ್ಟುವ, ನೋಡುವ, ಸವಿಯುವ, ಮತ್ತು ಮೂಸುವ ವ್ಯಾಪಾರಗಳನ್ನು ಮಾಡುತ್ತಿರುವದೆಂದು ಹೇಳಬಹುದು.

---

* ಸಂಪುಟ 16, ಸಂಚಿಕೆ 8, ಏಪ್ರಿಲ್ 1947, ಪುಟ 169–176

ಅಂತಃಕರಣವು ಹೊರಗಿನ ವಿಷಯಗಳನ್ನು ಗ್ರಹಿಸುವದು ಮಾತ್ರವೇ ಅಲ್ಲ, ನಮ್ಮೊಳಗೇ ಇದ್ದುಕೊಂಡು ಹಲವು ರೂಪಗಳನ್ನು ತಳೆಯುತ್ತಿರುವದು, ಆ ರೂಪಗಳನ್ನು ತಳೆದೆನೆಂಬ ಅರಿವನ್ನೂ ಮಾಡಿಕೊಳ್ಳುತ್ತಿರುವದು. ಹೇಗೆಂದರೆ ವಸ್ತುಗಳನ್ನು ಬಯಸುವದು, ಹೀಗೆ ಮಾಡುವೆನೆಂದು ಸಂಕಲ್ಪಿಸುವದು, ಹೆದರುವದು, ನಾಚುವದು, ಹೆಮ್ಮೆಪಡುವದು, ಸಿಟ್ಟಾಗುವದು, ಉದಾರಭಾವವನ್ನು ತಳೆಯುವದು, ಜಿಪುಣತನವನ್ನು ಪಡೆಯುವದು, ಉಬ್ಬುವದು, ಕುಸಿಯುವದು, ಸುಖವನ್ನು ಅನುಭವಿಸುವದು, ದುಃಖಿಸುವದು–ಇವೇ ಮುಂತಾದ ವ್ಯಾಪಾರಗಳೆಲ್ಲವೂ ಈ ಅಂತಃಕರಣಕ್ಕೇ ಸೇರಿರುತ್ತವೆ. ಈಗ ನನಗೆ ಹೆದರಿಕೆಯಾಗಿದೆ, ನಾಚಿಕೆಯಾಗಿದೆ, ಸಿಟ್ಟುಬಂದಿದೆ, ಇಚ್ಛೆಯುಂಟಾಗಿದೆ, ಬೇಸರವಾಗಿದೆ– ಎಂದು ಮುಂತಾಗಿ ಅರಿತುಕೊಳ್ಳುವದೂ ಈ ಅಂತಃಕರಣವೇ. ಈ ಒಂದೊಂದು ವ್ಯಾಪಾರವನ್ನೂ ಅಂತಃಕರಣದ ವೃತ್ತಿ ಎಂದು ಕರೆಯುತ್ತಾರೆ.

ಅಂತಃಕರಣದ ವೃತ್ತಿಗಳನ್ನು ದೊಡ್ಡ ದೊಡ್ಡ ವರ್ಗಗಳಾಗಿ ವಿಂಗಡಿಸಿಕೊಂಡು ವಿಚಾರಮಾಡಬೇಕಾಗುವದು. ಅರಿಯುವ ವೃತ್ತಿಗಳು ಎಂಬುದು ಒಂದು ವರ್ಗ; ಸಂಕಲ್ಪಿಸುವ ವೃತ್ತಿಗಳು ಎಂಬುದು ಮತ್ತೊಂದು ವರ್ಗ. ಈ ಒಂದೊಂದು ವರ್ಗದಲ್ಲಿಯೂ ಹಲವು ವಿಭಾಗಗಳಿರುತ್ತವೆ. ಉದಾಹರಣೆಗೆ ಗ್ರಹಿಸುವದು, ಸಂಶಯಪಡುವದು, ಊಹಿಸುವದು, ಮನನಮಾಡುವದು, ನಿಶ್ಚಯಮಾಡುವದು, ನೆನಪಿಸಿಕೊಳ್ಳುವದು, ಮರೆಯುವದು–ಮುಂತಾದವುಗಳು ಅರಿಯುವ ವರ್ಗಕ್ಕೆ ಸೇರಿರುತ್ತವೆ. ದುಃಖಿಸುವದು, ಸುಖಿಸುವದು, ಅಂಜುವದು, ಧೀರನಾಗಿರುವದು, ಇಚ್ಛಿಸುವದು, ವಿರಕ್ತನಾಗುವದು– ಇವೇ ಮುಂತಾದವು ವೇದನೆಯ ವೃತ್ತಿಗಳ ವರ್ಗಕ್ಕೆ ಸೇರಿರುತ್ತವೆ.

ಮನುಷ್ಯನ ಅಂತಃಕರಣದಲ್ಲಿ ಯಾವದಾದರೊಂದು ಬಗೆಯ ಚಿಂತೆಯು ಇದ್ದುಕೊಂಡೇ ಇರುವದು. ಹೊರಗಿನ ವಿಷಯಗಳಿಂದಾಗುವ ಪ್ರೀತಿ, ಅಸಮಾಧಾನ, ತೃಪ್ತಿ, ಸಂತೋಷ, ದುಃಖ ಮುಂತಾದವುಗಳಲ್ಲಿ ಕೆಲಕೆಲವು ಭಾವಗಳು ಅಂತಃಕರಣವನ್ನು ಆವರಿಸಿಕೊಂಡುಬಿಟ್ಟಿರುತ್ತವೆ. ಯಾವ ಮನುಷ್ಯನ ಅಂತಃಕರಣದಲ್ಲಿ ಎಂಥ ಭಾವನೆಗಳಿರುವವೋ, ಆ ಮನುಷ್ಯನ ಸ್ವಭಾವವು ಅದಕ್ಕೆ ಅನುಗುಣವಾಗಿರುತ್ತವೆ. ಕೆಲವು ಜನರು ಸಿಡುಕರು, ಕೆಲವರು ನಿತ್ಯಸಂತುಷ್ಟರು, ಕೆಲವರು ಯಾವಾಗಲೂ ಸಂಶಯಗ್ರಸ್ತರು, ಕೆಲವರು ಅಂಜು ಪುರುಕರು, ಕೆಲವರು ಧೀರರು, ಕೆಲವರು ಸ್ವಾರ್ಥಪರರು, ಕೆಲವರು ಪರೋಪಕಾರಿಗಳು–ಇತ್ಯಾದಿ, ಇತ್ಯಾದಿ. ಮನುಷ್ಯರ ಒಳಗಿನ ಅಂತಃಕರಣವು ಅವರ ಹೊರಗಿನ ನಡತೆಯ ಮೇಲೂ ಪರಿಣಾಮವನ್ನು ಮಾಡಿಬಿಟ್ಟಿರುತ್ತದೆ. ನಾವು ಕೆಲವರನ್ನು ನಮಗೆ ಬೇಕಾದವರೆಂದೂ ಮತ್ತೆ ಕೆಲವರನ್ನು ನಮ್ಮ ಹಗೆಗಳೆಂದೂ ಇನ್ನೂ ಕೆಲವರನ್ನು ಅಲ್ಪರೆಂದೂ ಔದಾಸೀನ್ಯತೆಗೆ ಅರ್ಹರೆಂದೂ ಎಣಿಸುವೆವಷ್ಟೆ. ಇದಕ್ಕೆ ನಮ್ಮ ಮತ್ತು ಅವರ ಅಂತಃಕರಣಭಾವಗಳೇ ಕಾರಣವಾಗಿರುತ್ತವೆ.

ನಮ್ಮ ಅಂತಃಕರದಲ್ಲಿರುವ ಭಾವನೆಗಳು ನಮ್ಮ ನಡತೆಯಮೇಲೆ ಮಾತ್ರವೇ ಅಲ್ಲ, ನಮ್ಮ ಸುತ್ತುವಳೆಯದ ಮೇಲೂ ಪರಿಣಾಮವನ್ನು ಉಂಟುಮಾಡುತ್ತಿರುವವು. ಇದು ನಮ್ಮಲ್ಲಿ ಅನೇಕರಿಗೆ ತಿಳಿಯದು. ನಮ್ಮ ಹೊರಗಿನ ಸನ್ನಿವೇಶವು ದುಃಖಮಯವಾಗಿ, ದಾರಿದ್ರ್ಯಮಯವಾಗಿ, ಅನಾರೋಗ್ಯಮಯವಾಗಿ, ಕಂಡುಬಂದರೆ ನಮ್ಮ ಒಳಗಿನ ಭಾವನೆಗಳೇ ಬಲುಮಟ್ಟಿಗೆ ಈ ಸನ್ನಿವೇಶಕ್ಕೆ ಕಾರಣವೆಂದು ತಿಳಿಯಬೇಕು. ಹೊರಗಿನ ತೋರಿಕೆಗಳು ಅನಿಷ್ಟವಾಗಿದ್ದರೆ ಅವುಗಳನ್ನು ಬದಲಾಯಿಸಬೇಕೆಂದೇ ನಾವುಗಳು ಸಾಮಾನ್ಯವಾಗಿ ಪ್ರಯತ್ನಿಸುತ್ತಿರುವೆವು. ಆದರೆ ನಮ್ಮ ಅಂತಃಕರಣದ ಭಾವನೆಗಳನ್ನು ಮಾರ್ಪಡಿಸುವದು ಉತ್ತಮ ಸನ್ನಿವೇಶದ ಸೃಷ್ಟಿಗೆ ಕಾರಣವಾಗುವದೆಂಬುದು ನಮಗೆ ಹೊಳೆಯುವದೇ ಇಲ್ಲ. ನಮ್ಮ ಸನ್ನಿವೇಶವು ಉತ್ತಮವಾಗಿ ನಮಗೆ ಸಂಬಂಧಪಟ್ಟ ವಸ್ತುಗಳೂ ಪ್ರಾಣಿಗಳೂ ಮನುಷ್ಯರೂ ಸುಖದಾಯಕವೇ ಆಗಿರಬೇಕಾದರೆ ಮೊದಲು ನಮ್ಮ ಅಂತಃಕರಣದ ಭಾವನೆಗಳು ಉತ್ತಮ ಭಾವನೆಗಳಾಗಬೇಕು. **ನಿಜವಾದ ಕಾರ್ಯಕಾರಣಭಾವವು ಹೊರಗಿನ ತೋರಿಕೆಗಳಲ್ಲಿಲ್ಲ; ನಮ್ಮ ಭಾವನೆಗಳೇ ಕಾರಣ, ಹೊರಗಿನ ಸನ್ನಿವೇಶವು ಕಾರ್ಯ. ನಮ್ಮ ಇಹಪರಗಳು ಎಲ್ಲಾ ಬಗೆಯಿಂದಲೂ ಸುಖಮಯವಾಗಬೇಕಾದರೆ ಮೊಟ್ಟಮೊದಲು ನಮ್ಮ ಅಂತಃಕರಣದಲ್ಲಿ ಶುಭವೃತ್ತಿಗಳು ಏರ್ಪಡಬೇಕು.**

ಮನಸ್ಸಿನಲ್ಲಿ ಆಗುವ ವೃತ್ತಿಗಳನ್ನು ಪರಸ್ಪರವಿರುದ್ಧವಾದ ಜೋಡಿಗಳಾಗಿ ವಿಂಗಡಿಸ ಬಹುದಾಗಿದೆ. ಹೊರಗಿನ ಸನ್ನಿವೇಶದಲ್ಲಿ ಕೆಲಕೆಲವಸ್ತುಗಳು, ಪ್ರಾಣಿಗಳು, ಅಥವಾ ಮನುಷ್ಯರು ನಮಗೆ ಇಷ್ಟವೆಂದು ತೋರುವದು; ಮತ್ತೆ ಕೆಲವು ಅನಿಷ್ಟವೆಂದು ತೋರುವದು. ಇಷ್ಟವಾದದ್ದರಲ್ಲಿ ನಮಗೆ ರಾಗವೂ ಅನಿಷ್ಟವಾಗಿದದ್ದರಲ್ಲಿ ನಮಗೆ ದ್ವೇಷವೂ ಎದ್ದುಕೊಳ್ಳುವವು. ಇಷ್ಟವಾದದ್ದರಿಂದ ನಮಗೆ ಸುಖವೂ ಅನಿಷ್ಟವಾದದ್ದರಿಂದ ನಮಗೆ ದುಃಖವೂ ಆಗುವದು. ಸುಖವಾಗುವ ವೇದನೆಗಳನ್ನು ಬರಮಾಡಿಕೊಳ್ಳುವದಕ್ಕೂ ದುಃಖಪ್ರದವಾದ ವೇದನೆಗಳನ್ನು ತೊಲಗಿಸುವದಕ್ಕೂ ನಾವು ಹವಣಿಸುತ್ತಲಿರುವೆವು. ಆದ್ದರಿಂದ ನಮ್ಮ ಜೀವನವೆಲ್ಲ ಈ ಪರಸ್ಪರವಿರುದ್ಧವಾದ ಜೋಡಿಗಳ ಹೋರಾಟವೇ ಆಗಿರುವದೆಂದೂ ಹೇಳಬಹುದಾಗಿದೆ. ಶೀತ, ಉಷ್ಣ; ಸೋಲು, ಗೆಲವು; ಬಡತನ, ಸಿರಿತನ; ಬೇನೆ, ಸ್ವಾಸ್ಥ್ಯ; ಮುಪ್ಪು ಸಾವುಗಳು ಯೌವನ; ಅಂಜಿಕೆ, ದಿಟ್ಟತನ; ನಂಬದಿರುವದು, ನಂಬುವದು; ಜ್ಞಾನ, ಅಜ್ಞಾನ–ಹೀಗೆ ಹಲವು ಪರಸ್ಪರ ವಿರುದ್ಧವಾದ ಜೋಡಿಗಳು ನಮ್ಮ ಅಂತಃಕರಣದಲ್ಲಿ ತಮ್ಮ ತಮ್ಮ ವೃತ್ತಿಗಳನ್ನು ಏರ್ಪಡಿಸುತ್ತಿರುವವು. ಈ ಜೋಡಿಗಳಿಗೆ ದ್ವಂದ್ವಗಳು ಎಂದು ಹೆಸರು. ದ್ವಂದ್ವಗಳು ಹೊರಗಿನ ವಸ್ತುಗಳಾಗಿರಲಿ, ಒಳಗಿನ ವೇದನೆಗಳಾಗಿರಲಿ, ದ್ವಂದ್ವಗಳೇ. ಆಧಿ ಭೌತಿಕವಾದ ಎಂದರೆ ಹೊರಗಿನ

ದ್ವಂದ್ವಗಳಾಗಲಿ, ಆಧ್ಯಾತ್ಮಿಕವಾದ ವೇದನಾ ರೂಪವಾದ ಒಳಗಿನ ದ್ವಂದ್ವಗಳಾಗಲಿ, ನಮ್ಮ ಅಂತಃಕರಣದಲ್ಲಿ ತಮಗೆ ಅನುಗುಣವಾದ ವೃತ್ತಿಗಳನ್ನು ಎಬ್ಬಿಸದೆ ಇರುವದೇ ಇಲ್ಲ. ಆದ್ದರಿಂದ ನಮ್ಮ ಅಂತಃಕರಣದಲ್ಲಿ ದ್ವಂದ್ವವೃತ್ತಿಗಳ ಹೋರಾಟವೇ ನಡೆದಿರುವದೆಂದು ಹೇಳಿದರೆ ತಪ್ಪಾಗದು.

ಈಗಿನ **ಅಂತಃಕರಣಶಾಸ್ತ್ರಜ್ಞರು** ಈ ತತ್ತ್ವವನ್ನು ಲಕ್ಷ್ಯಕ್ಕೆ ತಂದುಕೊಂಡು ಬೆಳೆಯಿಸಿಕೊಳ್ಳಬೇಕಾದ **ಯುಕ್ತವೃತ್ತಿ**ಗಳೆಂದೂ ಪರಿಹರಿಸಿಕೊಳ್ಳಬೇಕಾದ **ಅಯುಕ್ತವೃತ್ತಿ**ಗಳೆಂದೂ ಎರಡು ಪಂಗಡಗಳಾಗಿ ವಿಂಗಡಿಸಿರುತ್ತಾರೆ. ಆಯುಸ್ಸು, ಆರೋಗ್ಯ, ಐಶ್ವರ್ಯ, ಜಯ, ನಂಬಿಕೆ, ಧೈರ್ಯ–ಮುಂತಾದವು **ಯುಕ್ತವೃತ್ತಿ**ಗಳು; ಅಪಮೃತ್ಯು, ಬೇನೆ, ಬಡತನ, ಸೋಲು, ವಿಶ್ವಾಸವಿಲ್ಲದಿರುವದು, ಅಂಜಿಕೆ– ಮುಂತಾದವು ಅಯುಕ್ತವೃತ್ತಿಗಳು. ಜೀವನವನ್ನು ಸುಖಮಯವಾಗಿ ಮಾಡಿಕೊಳ್ಳಬೇಕೆಂಬ ಮಾನವನು ಯುಕ್ತವೃತ್ತಿಗಳನ್ನೇ ಭಾವಿಸುತ್ತಿರಬೇಕು; ಅಯುಕ್ತ ವೃತ್ತಿಗಳನ್ನು ಮನಸ್ಸಿಗೆ ಹತ್ತಿಸಿಕೊಳ್ಳಬಾರದು–ಎಂಬುದು ಅಂತಃಕರಣ ವಿಜ್ಞಾನ ಶಾಸ್ತ್ರದ ಉಪದೇಶವು. ಈ ವಾದವು ಭರತಖಂಡದವರಿಗೇನೂ ಹೊಸದಲ್ಲ. ಏಕೆಂದರೆ ಯೋಗಶಾಸ್ತ್ರದಲ್ಲಿ 'ಚಿತ್ತವೆಂಬ' ಹೆಸರಿನಿಂದ ಕರೆದಿರುವ ಅಂತಃಕರಣದ ವೃತ್ತಿಗಳನ್ನು ಕುರಿತ ವಿಸ್ತಾರವಾದ ಪ್ರತಿಪಾದನೆಯಿದೆ. ಯೋಗಶಾಸ್ತ್ರದಲ್ಲಿ ಚಿತ್ತವೃತ್ತಿಗಳನ್ನೆಲ್ಲ ನಿರೋಧಮಾಡಿ ಸಮಾಧಿಯನ್ನು ಪಡೆಯುವದರಿಂದ ಪರಮಪುರುಷಾರ್ಥವು ದೊರೆಯಬೇಕೆಂದು ಪ್ರತಿಪಾದಿಸುತ್ತದೆ ಯಾದರೂ ಆ ಪ್ರಸಂಗದಿಂದ **'ಪ್ರತಿಪಕ್ಷಭಾವನೆ'** ಎಂಬ ಹೆಸರಿನಿಂದ ಯುಕ್ತವೃತ್ತಿಗಳ ಭಾವನೆಯನ್ನೂ ಉಪದೇಶಿಸಿರುತ್ತದೆ. ಭಗವದ್ಗೀತೆಯಲ್ಲಿ ಅಜ್ಞಾನದಿಂದ ಬಂಧವೂ ಜ್ಞಾನದಿಂದ ಮೋಕ್ಷವೂ ಆಗುವದೆಂದು ತಿಳಿಸುವ ಸಂದರ್ಭದಲ್ಲಿ ಮಾನಿತ್ವ, ದಂಭಿತ್ವ, ಹಿಂಸಾ, ವಕ್ರತೆ–ಮುಂತಾದ ಅಯುಕ್ತವೃತ್ತಿಗಳನ್ನು ಬಿಟ್ಟು ಅಮಾನಿತ್ವ, ಅದಂಭಿತ್ವ, ಅಹಿಂಸಾ, ಆರ್ಜವ–ಮುಂತಾದ ಯುಕ್ತವೃತ್ತಿಗಳ ಭಾವನೆಯನ್ನು ಮಾಡುವದು ತತ್ತ್ವಜ್ಞಾನಕ್ಕೆ ಕಾರಣವಾಗುವದೆಂದು ಹೇಳಿರುತ್ತದೆ. ಹೀಗೆಯೇ ಪುರಾಣಾದಿಗಳಲ್ಲಿ ಅಯುಕ್ತ ಭಾವನೆಯಿಂದ ಆಗುವ ದುಷ್ಫಲವನ್ನೂ ಯುಕ್ತಭಾವನೆಯಿಂದಾಗುವ ಸತ್ಫಲವನ್ನೂ ಹೇರಳವಾಗಿ ವರ್ಣಿಸಿರುತ್ತದೆ.

'ಅಂತಃಕರಣದಲ್ಲಿ ಯುಕ್ತವೃತ್ತಿಗಳೂ ಅಯುಕ್ತವೃತ್ತಿಗಳೂ ಎದ್ದುಕೊಂಡು ಕಾಣುವದಲ್ಲದೆ ಈ ವೃತ್ತಿಗಳು ಹೊರಬೀಳದೆ ಇರುವಾಗಲೂ ವಾಸನಾರೂಪದಿಂದ ಅವ್ಯಕ್ತವಾಗಿ ಅದರಲ್ಲಿ ಬೀಡುಬಿಟ್ಟುಕೊಂಡೇ ಇರುತ್ತವೆ. ಅಂತಃಕರಣದಲ್ಲಿ ಅರಿವಿನ ಭಾಗವಲ್ಲದೆ, ಅರೆಯರಿವಿನ, ವಾಸನೆಗಳ ಬೀಡೊಂದು ಇರುತ್ತದೆ. ಇದನ್ನು ಈಗಿನ ವಿಜ್ಞಾನವಾದಿಗಳು 'ಅಸಂವಿಜ್ಞಾನ' 'ಅಧಃಸಂವಿಜ್ಞಾನ' ದ ಅಂತಃಕರಣ (Unconscious,

Sub-conscious Mind) ಎಂದು ಕರೆಯುತ್ತಾರೆ. ಅದನ್ನು ನಾವು **ವಾಸನೆಗಳ ಆಶಯು**ವೆಂದು ಕರೆಯಬಹುದು. ಆಶಯುವೆಂದರೆ ವೃತ್ತಿಗಳು ವಾಸನೆಗಳ ರೂಪದಿಂದ ಮಲಗಿರುವ ಅಂತಃಕರಣಭಾಗವು. ನೆಲದಮೇಲೆ ಬೆಳೆಯುತ್ತಿರುವ ಗಿಡದ ಬೇರು ನೆಲದ ಕೆಳಗೆ ನಾನಾ ಮುಖವಾಗಿ ಹರಡಿಕೊಂಡಿರುವಂತೆ, ಅಂತಃಕರಣ ವೃತ್ತಿಗಳು ವಾಸನಾರೂಪದಿಂದ ಈ ಆಶಯದಲ್ಲಿದ್ದುಕೊಂಡಿರುತ್ತವೆ. ಬೇರುಗಳು ನೆಲದಿಂದ ಹೀರಿಕೊಂಡ ಆಹಾರವೇ ಮೇಲೆ ಗಿಡವು ಬೆಳೆದುಕೊಳ್ಳುವದಕ್ಕೆ ಕಾರಣವಾಗಿರುವಂತೆ, ಆಶಯದಲ್ಲಿ ಆಗುವ ವಾಸನೆಗಳ ವ್ಯಾಪಾರವೇ ನಮ್ಮ ವೃತ್ತಿಗಳು ಹಲವು ರೂಪಗಳಿಂದ ಹೊರಬೀಳುವದಕ್ಕೆ ಕಾರಣವಾಗಿರುವದು. ನಾವು ಯಾವ ಯೋಚನೆಯನ್ನೂ ಮಾಡುತ್ತಿಲ್ಲವೆಂದು ನಾವು ತಿಳಿದುಕೊಂಡಿರುವಾಗಲೂ ಈ ಆಶಯವೆಂಬ ಅಂತಃಕರಣದ ಭಾಗದಲ್ಲಿ ವಾಸನೆಗಳ ವ್ಯಾಪಾರವು ನಡೆಯುತ್ತಲೇ ಇರುವದು. ಯಾವದಾದರೊಂದು ವಿಚಾರವನ್ನು ಒಮ್ಮೆ ಮನಸ್ಸಿಗೆ ತಂದುಕೊಂಡು ನಾವು ಬೇರೊಂದು ಕೆಲಸಕ್ಕೆ ಕೈಹಾಕಿರುವಾಗಲೂ ಆ ವಿಚಾರದ ಅಡಿಗೆಯು ಆಶಯದಲ್ಲಿ ನಡೆಯುತ್ತಲೇ ಇರುತ್ತದೆ. ನಾವು ತಿಂದ ಆಹಾರವು ಅರಗಿ ಶರೀರಕ್ಕೆ ಹೊಂದುಗೆಯಾಗಿ ಸೇರಿಕೊಳ್ಳುವ ಮುಂಚೆ, ಹೊರಗಿನ ಕೈ ಬಾಯಿ ಹಲ್ಲು ನಾಲಗೆ ಗಂಟಲುಗಳ ವ್ಯಾಪಾರವೇ ಅಲ್ಲದೆ ಶರೀರದೊಳಗೆ ನಮಗೆ ಅರಿವಾಗದಂತೆ ಹೃದಯ, ಪಿತ್ತಕೋಶ, ನಾಡಿಗಳು– ಮುಂತಾದ ಸ್ಥಾನಗಳಲ್ಲಿ ಬಗೆಬಗೆಯ ಪರಿಣಾಮವನ್ನು ಹೊಂದುವದೆಂಬುದು ಶರೀರಶಾಸ್ತ್ರವನ್ನು ಓದಿರುವವರ ತಿಳಿವಳಿಕೆಗೆ ಬಂದಿರುತ್ತದೆ. ಅದರಂತೆ ನಾವು ಮಾಡುವ ಆಲೋಚನೆಗಳು ನಮ್ಮ ಅಂತಃಕರಣದಲ್ಲಿ ನಮಗೆ ತಿಳಿದುಬರುವಂತೆ ಒಂದಕ್ಕೊಂದು ಸೇರಿಕೊಂಡು ವಿವಿಧವಾದ ಆಕಾರಗಳನ್ನು ಹೊಂದುತ್ತಿರುವದಲ್ಲದೆ ಆ ವೃತ್ತಿಗಳ ವಾಸನೆಗಳು ಅಂತಃಕರಣದ ಆಶಯದಲ್ಲಿಯೂ ನಮಗೆ ಅರಿಯದಂತೆಯೇ ಹಲವು ಮಾರ್ಪಾಡುಗಳನ್ನು ಹೊಂದುತ್ತಿರುವವು.

ಆಶಯದಲ್ಲಿ ಯಾವ ವಾಸನೆಯು ಪ್ರಬಲವಾಗಿರುವದೋ ಅದೇ ಅಂತಃಕರಣದಲ್ಲಿ ಹೊರತೋರಿಕೊಂಡು ನಮ್ಮ ಅಂತಃಕರಣದ ಪ್ರಧಾನವೃತ್ತಿಯಾಗುವುದು. ಆ ವೃತ್ತಿಗನು ಗುಣವಾದ ಸಂಕಲ್ಪವೂ ನಡೆನುಡಿಗಳೂ ನಮ್ಮಲ್ಲಿ ಒಡೆದುಮೂಡುವವು; ಅ ನಡೆನುಡಿಗಳಿಗೆ ತಕ್ಕಂತೆ ನಮ್ಮ ಜೀವನವೂ ಸನ್ನಿವೇಶವೂ ಏರ್ಪಡುವವು. 'ಪುರುಷನು ಶ್ರದ್ಧಾಮಯನು; ಯಾವನು ಯಾವದರಲ್ಲಿ ಶ್ರದ್ಧೆಯುಳ್ಳವನೋ ಅವನು ಅದೇ ಆಗಿಬಿಡುತ್ತಾನೆ' ಎಂಬ ಗೀತೋಕ್ತಿಗೆ ಈ ಅಭಿಪ್ರಾಯವನ್ನು ಕಲ್ಪಿಸಬಹುದು. ನಾವು ಯಶಸ್ವಿಯಾದ ಜೀವನವನ್ನು ನಡೆಯಿಸಬೇಕಾದರೆ, ನಮ್ಮ ಸುತ್ತು ಮುತ್ತಲಿನ ದೃಶ್ಯಗಳು ಯಾವಾಗಲೂ ಪ್ರೋತ್ಸಾಹಕವಾಗಿ ಉಲ್ಲಾಸದಾಯಕವಾಗಿರಬೇಕಾದರೆ, ನಾವು ಯಶಸ್ವಿಯಾದ ಜೀವನದ ಭಾವನೆಯನ್ನು

ಮನಸ್ಸಿನಲ್ಲಿ ತುಂಬಿಕೊಳ್ಳಬೇಕು; ಆ ಭಾವನೆಯು ನಮ್ಮ ಮನಸ್ಸಿಗೆ ಹತ್ತಿಕೊಂಡು ವಾಸನಾಶಯಕ್ಕೆ ಇಳಿಯುವಂತೆ ಮಾಡುತ್ತಾ ಅದೇ ನಮ್ಮ ಆಶಯದಲ್ಲಿ ಪ್ರಬಲವಾಗಿರುವಂತೆ ಮಾಡಿಕೊಳ್ಳಬೇಕು. 'ನಮ್ಮ ಜೀವನವು ಆನಂದಮಯವಾಗಬೇಕು' ಎಂಬ ಸಂಕಲ್ಪವನ್ನು ಬಲವಾಗಿ ಮಾಡಿಕೊಳ್ಳಿರಿ. ನಿಮ್ಮ ಸಂಕಲ್ಪವು ಹೇಗಿರುವದೋ ಅಂಥ ಮನೋನಿಶ್ಚಯವು ಏರ್ಪಡುತ್ತದೆ; ಮನಸ್ಸಿನಲ್ಲಿ ಎಂಥ ನಿಶ್ಚಯವಿರುತ್ತದೆಯೋ ನಿಮ್ಮ ನಡೆನುಡಿಗಳು ಹಾಗೇ ಆಗುತ್ತವೆ. ನಿಮ್ಮ ನಡೆನುಡಿಗಳಿಗೆ ಅನುಗುಣವಾಗಿಯೇ ನಿಮ್ಮ ವ್ಯವಹಾರದ ಪ್ರಪಂಚವು ರೂಪಿಸಿಕೊಳ್ಳುತ್ತದೆ.

ಅಂತಃಕರಣದಲ್ಲಿರುವ ವಾಸನೆಗಳು ಕೆಲವು ಸುಮ್ಮನೆ ಗುಡ್ಡೆಗುಡ್ಡೆಯಾಗಿ ಬಿದ್ದಿರುವವು. ಅವುಗಳು ವೃತ್ತಿರೂಪದಿಂದ ಎದ್ದುಕೊಂಡು ನಮ್ಮ ಆಲೋಚನೆಯಲ್ಲಿ ಭಾಗವನ್ನು ತೆಗೆದುಕೊಳ್ಳುವದಕ್ಕೆ ಇನ್ನೂ ಅವಕಾಶವು ದೊರೆತಿರುವದಿಲ್ಲ. ಇನ್ನೂ ಕೆಲವು ನಮ್ಮ ಜೀವನದಲ್ಲಿ ವ್ಯಕ್ತರೂಪದಿಂದ ತೋರಿಕೊಳ್ಳುತ್ತಲೂ ಆಶಯದಲ್ಲಿ ಅವ್ಯಕ್ತವಾಗಿ ವ್ಯಾಪಾರಮಾಡುತ್ತಲೂ ಇರುವವು. ಈ ಎರಡನೆಯ ವರ್ಗದ ವಾಸನೆಗಳೇ ನಮ್ಮ ಈಗಿನ ಜೀವನವನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡಿರುವವು. ಅಂತಃಕರಣಕ್ಕೆ ಯಾವ ಭಾವನೆಗಳನ್ನು ಸೂಚಿಸುತ್ತಾ ಅದರ ಭಾವನಾಕ್ರಮವನ್ನು ಮಾರ್ಪಡಿಸಿಕೊಂಡರೆ ನಮ್ಮ ವ್ಯವಹಾರವು ಮಂಗಲಮಯವಾಗುವದು ಎಂಬುದನ್ನು ತಿಳಿಸುವದೇ ಈಗಿನ ಅಂತಃಕರಣಶಾಸ್ತ್ರಜ್ಞರ ಕೆಲಸವಾಗಿದೆ. ನಮ್ಮ ಅಂತಃಕರಣದಲ್ಲಿರುವ ಭಾವನೆಗಳು ಆಶಯಕ್ಕೆ ಇಳಿದು, ಅಂತಃಕರಣದ ವ್ಯಾಪಾರವನ್ನು ತೋರಿಸುತ್ತವೆ. ಅಂತಃಕರಣದ ವ್ಯಾಪಾರಕ್ಕೆ ಅನುಗುಣವಾಗಿಯೇ ನಮ್ಮ ಶರೀರದ ಸ್ಥಿತಿಯೂ ಹೊರಗಿನ ಸನ್ನಿವೇಶಗಳೂ ಮಾರ್ಪಡುತ್ತವೆ ಎಂದು ಅಂತಃಕರಣಶಾಸ್ತ್ರಜ್ಞರು ಬೋಧಿಸುತ್ತಾರೆ. ಅಂತಃಕರಣದ ಶಕ್ತಿಗಳು ಇಷ್ಟೇ ಎಂಬ ಪರಿಮಿತಿಯಿಲ್ಲ. ಅದು ಹೇಗೆ ಸಂಕಲ್ಪಿಸಿದರೆ ಹಾಗೆ ಹೊರಗಿನ ಪರಿಸ್ಥಿತಿ ಏರ್ಪಡುತ್ತದೆ ಎಂದೂ ಅವರಲ್ಲಿ ಕೆಲವರು ಹೇಳುತ್ತಿದ್ದಾರೆ.

ಅಂತಃಕರಣ ಶಕ್ತಿಗಳ ವಿಚಾರವಾಗಿ ಆಧುನಿಕರು ಬಹಳವಾಗಿ ಗ್ರಂಥಗಳನ್ನು ಬರೆದಿರುತ್ತಾರೆ. ನಮ್ಮ ಅಂತಃಕರಣದ ಭಾವನೆಗಳು ನಮ್ಮ ಮೇಲೆಯೇ ಅಲ್ಲದೆ, ನಮ್ಮ ಸುತ್ತುಮುತ್ತಿನವರ ಮನಸ್ಸಿನ ಮೇಲೆಯೂ ಪರಿಣಾಮವನ್ನು ಮಾಡುವವೆಂದು ಅವರು ಹೇಳುತ್ತಿದಾರೆ. ಮೋಹನವಿದ್ಯೆ, ವಶೀಕರಣವಿದ್ಯೆ ಮುಂತಾದವುಗಳೆಲ್ಲವೂ ಅಂತಃಕರಣದ ಶಕ್ತಿವಿಶೇಷಗಳನ್ನು ಪಯೋಗಿಸುವ ಬೇರೆಬೇರೆಯ ಪ್ರಕಾರಗಳಾಗಿರುತ್ತವೆ. ಆದರೆ ಆ ವಿದ್ಯೆಗಳನ್ನು ತಮ್ಮ ಸ್ವಾರ್ಥಕ್ಕೇ ಉಪಯೋಗಿಸುವ ಜನರು ಹೆಚ್ಚಿರುವದರಿಂದ ಮನಃಶಕ್ತಿಗಳ ದುರುಪಯೋಗವೇ ಬಹಳವಾಗಿ ಆಗುತ್ತಿರುತ್ತದೆ. ಮನಃಶಕ್ತಿಗಳನ್ನುಪಯೋಗಿಸಿ ಜನರನ್ನು ಸರಿಯಾದ ಮಾರ್ಗಕ್ಕೆ ಹಚ್ಚುವೆನೆಂಬುದೂ ಒಂದು ಬಗೆಯ ಹುಚ್ಚು. ಆದರೆ ಆ

ಶಕ್ತಿಗಳನ್ನುಪಯೋಗಿಸಿ ಜನರನ್ನು ವಶಗೊಳಿಸಿಕೊಂಡು ತನ್ನ ಪ್ರಯೋಜನಕ್ಕೆ ಉಪಕರಣವಾಗಿ ಮಾಡಿಕೊಳ್ಳುವದೆಂಬುದು ಒಂದು ಬಗೆಯ ಮಾಟವಾಗಿರುತ್ತದೆ. ಮನಃಶಕ್ತಿಯಿಂದ ಮತ್ತೊಬ್ಬರನ್ನು ತನ್ನ ಕಡೆಗೆ ಎಳೆದುಕೊಳ್ಳುವದಕ್ಕೆ ಪ್ರಯತ್ನಿಸುವದು ಬಹಳ ಅಪಾಯಕರವಾಗಿರುತ್ತದೆ; ಮತ್ತೊಬ್ಬರ ಪ್ರಯೋಜನಕ್ಕಾಗಿ ಮನಃಶಕ್ತಿಗಳನ್ನು ಉಪಯೋಗಿಸಿದರೆ ತಾತ್ಕಾಲಿಕವಾದ ಪ್ರಯೋಜನವಾಗ ಬಹುದಾದರೂ ಕೊನೆಯಲ್ಲಿ ಅದೆಲ್ಲ ನಿರರ್ಥಕವಾಗುತ್ತದೆ. ಇಷ್ಟೇ ಅಲ್ಲ. ಹೀಗೆ ಮನಃಶಕ್ತಿಗಳನ್ನು ಪ್ರಯೋಗಿಸಿದವರಿಗೂ ಕೊನೆಗೆ ಅಪಾಯವಿರುತ್ತದೆ. ಇನ್ನು ಕೆಲವರು ಈ ಶಕ್ತಿಗಳನ್ನು ಇಷ್ಟಾರ್ಥಸಿದ್ಧಿಗೆಂದು ಉಪಯೋಗಿಸುತ್ತಾರೆ. ನಿಧಿಯನ್ನು ಮಂತ್ರಶಕ್ತಿಯಿಂದ ಕಂಡು ಹಿಡಿಯುವ ವಿದ್ಯೆ, ರೋಗವನ್ನು ನಿವಾರಣೆ ಮಾಡುವದಕ್ಕೆ ಉಪಯೋಗಿಸುವ ಸಂಕಲ್ಪ ಶಕ್ತಿಯ ವಿದ್ಯೆ- ಇಂಥವುಗಳೆಲ್ಲ ಮನಃ ಶಕ್ತಿಯನ್ನು ದುರುಪಯೋಗಪಡಿಸಿಕೊಳ್ಳುವ ಕ್ರಮಗಳೇ ಎಂಬುದನ್ನು ಮರೆಯದೆ ಇರಬೇಕು.

ಅಂತಃಕರಣದಲ್ಲಿ ಹಲವು ಗುಪ್ತಶಕ್ತಿಗಳಿರುವವೆಂಬುದು ನಿಜ. ಅವುಗಳನ್ನು ಸರಿಯಾಗಿ ಉಪಯೋಗಿಸಿದರೆ ಜೀವನಕ್ಕೆ ಹೆಚ್ಚಿನ ಸಹಾಯವಾಗುವದೆಂಬುದೂ ನಿಜ. ಆದರೆ ಸ್ಥೂಲಶರೀರವು ಹೇಗೆ ಪರಿಮಿತವಾದ ಶಕ್ತಿಯುಳ್ಳದ್ದೋ ಹಾಗೆಯೇ ಅಂತಃಕರಣವೂ ಪರಿಮಿತವಾದ ಶಕ್ತಿಯುಳ್ಳದ್ದೆಂಬುದನ್ನು ನಾವು ಮರೆಯುವ ಹಾಗಿಲ್ಲ. ಮನುಷ್ಯನು ತನ್ನ ಶರೀರದ ಬಲದ ಪರಿಮಿತಿಯನ್ನು ಅರಿಯದೆ ತನ್ನ ಕೈಯಲ್ಲಾಗದ್ದನ್ನೂ ಮಾಡುವೆನೆಂದು ಪ್ರಯತ್ನಪಟ್ಟರೆ, ಶರೀರದ ಅವಯವಗಳು ಎಂದೆಂದಿಗೂ ಊನವಾಗಿ ಬಿಡಬಹುದು; ಅದರಂತೆ ಮನಃಶಕ್ತಿಗಳನ್ನೂ ಅಳತೆಗೆಟ್ಟು ದುರುಪಯೋಗಪಡಿಸಿದರೆ ಆ ಮಹಾಪರಾಧಕ್ಕೆ ಆಗುವ ದುಷ್ಫಲದ ಪರಿಮಾಣವನ್ನು ಅಳತೆ ಮಾಡಿ ಇಷ್ಟೆಂದು ನಿಶ್ಚಯಿಸುವದು ಕಷ್ಟ. ಈ ಜನ್ಮದಲ್ಲಿಯೇ ಅಲ್ಲದೆ ಹಲವು ಜನ್ಮಾಂತರಗಳಲ್ಲಿಯೂ ಈ ಕುಕೃತ್ಯದ ಫಲವನ್ನು ಅನುಭವಿಸುತ್ತಾ ನಮ್ಮ ಅಭ್ಯುದಯದ ಮಾರ್ಗಕ್ಕೆ ಅಡ್ಡಲಾಗಿ ನಾವೇ ಕಲ್ಲುಮುಳ್ಳುಗಳನ್ನು ಎಳೆದುಕೊಂಡಂತೆ ಆಗುವದರಲ್ಲಿ ಸಂಶಯವಿಲ್ಲ. ಪ್ರತಿಯೊಬ್ಬನೂ ತನ್ನ ಅಂತಃಕರಣವನ್ನು ಒಳ್ಳೆಯ ಸಂಸ್ಕಾರದಿಂದ ಉತ್ತಮ ಭಾವನಾಯುತವಾಗಿ ಮಾಡಿಕೊಳ್ಳುವದಕ್ಕೆ ಅವಕಾಶವಿದೆ. ಅಂತಃಕರಣದ ಶಕ್ತಿಗಳು ಪರಿಮಿತವಾದರೂ ಅನಂತವಾದ ಅಮಿತಾನಂದವನ್ನು ಕೊಡುವ ಪರಮಪುರುಷಾರ್ಥವನ್ನೇ ಅವು ಸಾಧಿಸಿಕೊಡುವಂತೆ ಮಾಡಿಕೊಳ್ಳುವದಕ್ಕೂ ಅವಕಾಶವಿರುತ್ತದೆ. ಅಂತಃಕರಣವನ್ನು ಅಲಕ್ಷಿಸುವದರಿಂದಲಾಗಲಿ ಅದರ ಶಕ್ತಿಗಳನ್ನು ದುರುಪಯೋಗಪಡಿಸಿ ಕೊಳ್ಳುವದರಿಂದಲಾಗಲಿ ಆಗುವ ಅಪಾಯವನ್ನು ತೊಲಗಿಸಿಕೊಂಡು ಇಹಪರಗಳನ್ನು ಆನಂದಮಯವಾಗಿ ಮಾಡಿಕೊಳ್ಳುವದು ಹೇಗೆಂಬುದನ್ನು ನಾವೆಲ್ಲರೂ ಅರಿತುಕೊಳ್ಳಬೇಕು.

# 9. ಪರಮಾತ್ಮ ಭಾವನೆಯ ಅಭ್ಯಾಸ-ಯೋಗ

ನಮ್ಮ ಅಂತಃಕರಣದಲ್ಲಿ ಕಾಣಿಸಿಕೊಳ್ಳುವ ಆಲೋಚನೆಗಳು ನಮ್ಮ ಶರೀರದ ಆರೋಗ್ಯ ಸ್ಥಿತಿ, ನಮ್ಮ ನಡೆನುಡಿಗಳು, ನಮ್ಮ ಸುತ್ತುವಳೆಂಬುದಲ್ಲಿ ಕಾಣಬರುವ ಎಲ್ಲಾ ಜೀವನಸಾಮಗ್ರಿಗಳು-ಇವುಗಳ ಸ್ವಭಾವವನ್ನು ಗೊತ್ತುಪಡಿಸುವದಕ್ಕೆ ಮೂಲಕಾರಣ ವಾಗಿರುವವೆಂದು ಹಿಂದಿನ ತಿಂಗಳು ತಿಳಿಸಿರುತ್ತೇವೆ. ಅಂತಃಕರಣದಲ್ಲಿ ಯಾವಾಗಲೂ ಯುಕ್ತವಾದ ಭಾವನೆಗಳನ್ನೇ ಸಾಕಿ ಕೊಂಡಿರಬೇಕು. ಅಯುಕ್ತವೃತ್ತಿಗಳನ್ನು ಮನಸ್ಸಿಗೆ ಹತ್ತಿಸಿಕೊಳ್ಳಬಾರದು-ಎಂದು ಹೇಳಿರುತ್ತೇವೆ. ಅಂತಃಕರಣದ ಆಶಯದಲ್ಲಿ ನಮ್ಮ ವೃತ್ತಿಗಳ ವಾಸನೆಗಳು ಅಡಗಿಕೊಂಡಿದ್ದು ನಮಗೆ ಕಾಣದಂತೆಯೇ ಬೇರೆ ಬೇರೆಯ ಮಾರ್ಪಾಡುಗಳನ್ನು ಮಾಡುತ್ತಿರುವವೆಂದೂ ಹೇಳಿರುತ್ತೇವೆ. ಹೋದ ತಿಂಗಳಿನ ಸಂದೇಶವನ್ನು ಇನ್ನೊಮ್ಮೆ ಓದಿ ಮನಸ್ಸಿನಲ್ಲಿ ಅದರ ಸಾರವನ್ನು ಹೊರಳಾಡಿಸಿಕೊಳ್ಳಬೇಕು. ಅದರಿಂದ ಈ ತಿಂಗಳಿನ ಸಂದೇಶವನ್ನು ಹಿಡಿಯುವ ಶಕ್ತಿಯು ಓದುಗರಿಗೆ ಬಲಪಡುತ್ತದೆ.

ಪ್ರತಿಯೊಂದು ತಿಂಗಳಿನಲ್ಲಿಯೂ ಇರುವ ಸಂಪಾದಕರ ಸಂದೇಶಗಳಿಂದ ಆಗುವ ಪೂರ್ಣಪ್ರಯೋಜನವನ್ನು ಪಡೆಯಬೇಕಾದರೆ, ಅವುಗಳನ್ನು ಒಂದೊಂದು ಸಲ ಓದಿ ಕೈ ಬಿಟ್ಟರೆ ಸಾಲದು. ಅವುಗಳಿಂದ ಆಗುವ ಪ್ರಯೋಜನವು ಸ್ಥಿರವಾಗಿ ನಿಲ್ಲಬೇಕಾದರೆ ಒಂದೊಂದು ಲೇಖನವನ್ನೂ ಹಲವು ಸಾರಿ ಓದಬೇಕು. ಒಂದೊಂದು ತಿಂಗಳಿನ ಸಂದೇಶವನ್ನೂ ಮುಂದಿನ ತಿಂಗಳಿನ ಸಂಚಿಕೆಯು ಕೈಸೇರುವವರೆಗೂ ಪ್ರತಿದಿನವೂ ಒಮ್ಮೆ ಓದಿ, ಅದರ ಉಪದೇಶವನ್ನು ಮನಸ್ಸಿನಲ್ಲಿಯೇ ಮೆಲುಕುಹಾಕುತ್ತಿರಬೇಕು. ಹಾಗಾದರೆ ಹೊಸಹೊಸ ಅಭಿಪ್ರಾಯಗಳು ಓದುಗರ ತಿಳಿವಳಿಕೆಗೆ ಬರುತ್ತವೆ. ಮೊದಮೊದಲು ಅರ್ಥವಾಗದೆ ಇರುವ ಎಷ್ಟೋ ವಿಷಯಗಳು ಕಾಲಕ್ರಮದಲ್ಲಿ ಮಾಗಿಹಣ್ಣಾಗಿ ಅನುಭವ ಗೋಚರವಾಗುವವು. ನಮ್ಮಲ್ಲಿ ಬಹುಜನರಿಗೆ ಹೊರಗಿನ ವಿಷಯಗಳನ್ನು ಕುರಿತು ಚಿಂತಿಸುವ ಅಭ್ಯಾಸವೇ ಬಲವಾಗಿರುತ್ತದೆ. ಆದರೆ ಅಧ್ಯಾತ್ಮವಿಚಾರವೆಂಬುದು ಆ ವಿಷಯಗಳನ್ನು ಚಿಂತಿಸುವ ಅಂತಃಕರಣಕ್ಕೆ ಸಂಬಂಧಪಟ್ಟಿರುತ್ತದೆ. ಅಂತಃಕರಣವೆಂಬುದು ಒಳಗಿರುವ ಕರಣ ಎಂದಿಷ್ಟೇ ತಿಳಿದುಕೊಳ್ಳಬಾರದು; ಅದು ನಮ್ಮ ಒಳಗೇ ನಮಗೂ ತಿಳಿಯದಂತೆ ಇದ್ದುಕೊಂಡಿರುವ, ನಮ್ಮ ಇಡಿಯ ಜೀವನಕ್ಕೇ ಆಧಾರವಾಗಿರುವ ತತ್ತ್ವಗಳನ್ನು ತಿಳಿಸಿಕೊಡಬಲ್ಲ ಕಾರಣವಾಗಿರುತ್ತದೆ. ಆದ್ದರಿಂದ ಮನಸ್ಸನ್ನು ಯಾರು ಅಂತರ್ಮುಖವಾಗಿ ಮಾಡಬಲ್ಲರೋ, ಯಾರು ಅಂತಃಕರಣದ ವಾಸನೆಗಳ ಆಶಯದ ಸಹಾಯವನ್ನು ಪಡೆಯಬಲ್ಲರೋ ಅವರೇ ಅಧ್ಯಾತ್ಮವಿಚಾರಕ್ಕೆ ಅಧಿಕಾರಿಗಳು.

---

* ಸಂಪುಟ 16, ಸಂಚಿಕೆ 9, ಮೇ 1947, ಪುಟ 191-201

ಅಂತಃಕರಣದ ಆಶಯವು ಅದಕ್ಕೆ ಕೊಡುವ ಸೂಚನೆಗಳನ್ನು ಅವಲಂಬಿಸಿ ಆಯಾ ವಾಸನೆಗಳನ್ನು ಮೇಲಕ್ಕೆತ್ತಿ ಹಿಡಿಯುತ್ತದೆ. ಯುಕ್ತವಾದ ಭಾವನೆಗಳನ್ನು ಆಗಾಗ್ಗೆ ಅಂತಃಕರಣಕ್ಕೆ ಹತ್ತಿಸುತ್ತಿದ್ದರೆ, ಆಶಯವು ಅಂಥ ವಾಸನೆಗಳನ್ನೇ ಮೇಲಕ್ಕೆ ಕಳುಹಿಸುತ್ತದೆ. ಈ ಸಾಧನದಿಂದ ಅಯುಕ್ತಭಾವನೆಗಳನ್ನು ಆಡಿಸುವ ಪದ್ಧತಿಯೇ ತಪ್ಪಿಹೋಗುತ್ತದೆ ಎಂಬುದನ್ನು ನಾವು ನೆನಪಿಡಬೇಕು. ಆಶಯವು ನಮಗೆ ವಾಸನೆಗಳನ್ನು ವೃತ್ತಿಗಳಾಗಿ ರೂಪಿಸಿಕೊಡುವದೆಂಬುದಿಷ್ಟೇ ಅಲ್ಲ; ಅವುಗಳನ್ನು ಕ್ರಮಗೊಳಿಸಿ ಹೊಂದಿಸಿ ವ್ಯವಹಾರದಲ್ಲಿ ಉಪಯೋಗಿಸಿಕೊಳ್ಳುವದಕ್ಕೂ ಅನುಕೂಲವಾಗಿ ಕೆಲಸಮಾಡಿಕೊಡುತ್ತದೆ. ಉದಾಹರಣೆಗೆ: ನಾಳೆ ಇಂತಿಷ್ಟು ಘಂಟೆಗೆ ಏಳಬೇಕು ಎಂದು ಸಂಕಲ್ಪಿಸಿ ಮಲಗಿಕೊಂಡರೆ, ಆ ಸಂಕಲ್ಪದ ಸೂಚನೆಯು ಆಶಯಕ್ಕೆ ಇಳಿದುಕೊಂಡು ಅಲ್ಲಿಯೇ ನಮಗೆ ತಿಳಿಯದಂತೆ ಕೆಲಸಮಾಡುತ್ತಿದ್ದು ಹೊತ್ತಿಗೆ ಸರಿಯಾಗಿ ನಮಗೆ ಎಚ್ಚರವನ್ನುಂಟುಮಾಡಿಬಿಡುತ್ತದೆ. ಇಂಥದ್ದೊಂದು ದಿನ ನಾನೊಂದು ಉಪನ್ಯಾಸವನ್ನು ಮಾಡಬೇಕೆಂದು ಒಬ್ಬ ಭಾಷಣಕಾರನು ಸಂಕಲ್ಪಿಸಿ, ಅದಕ್ಕೆ ಬೇಕಾದ ವಿಷಯಗಳನ್ನು ಕುರಿತು ಆಲೋಚನೆಮಾಡಿರುತ್ತಾನೆಂದು ಇಟ್ಟುಕೊಳ್ಳಿರಿ. ಈ ಆಲೋಚನೆಯು ಅವನ ಆಶಯಕ್ಕೆ ಇಳಿದುಕೊಂಡು ಬಿಟ್ಟು, ಅವನು ಬೇರೊಂದು ಕೆಲಸದಲ್ಲಿ ವ್ಯಾಪೃತನಾಗಿರುವಾಗಲೂ ಅವನ ಭಾಷಣಕ್ಕೆ ಬೇಕಾದ ಸಾಮಗ್ರಿಯನ್ನು ಕೂಡಿಹಾಕುತ್ತಿರುತ್ತದೆ. ಇಷ್ಟೇ ಅಲ್ಲ. ಇವನು ಈಗ ಆಲೋಚನೆಗೆ ತಂದುಕೊಳ್ಳದೆ ಇದ್ದರೂ ಹಿಂದೆ ಓದಿ ಕೇಳಿದ್ದು ಎಷ್ಟೋ ಇಂಥ ಭಾವನೆಗಳು ವಾಸನಾರೂಪದಲ್ಲಿ ಅವ್ಯಕ್ತವಾಗಿ ಆಶಯದಲ್ಲಿದ್ದುಕೊಂಡಿರುತ್ತವೆಯಲ್ಲ, ಅವನ್ನೂ ಆಯ್ದುಕೊಳ್ಳುತ್ತದೆ; ಅವುಗಳನ್ನು ಒಂದು ಗೊತ್ತಾದ ಕ್ರಮದಲ್ಲಿ ಜೋಡಿಸಿಟ್ಟಿರುತ್ತದೆ. ಆಮೇಲೆ ಸಮಯಬಂದಾಗ ಆತನು ಭಾಷಣಮಾಡುವದಕ್ಕೆ ನಿಂತರೆ ಸಾಕು, ನಾಟಕದಲ್ಲಿ ವೇಷವನ್ನು ಹಾಕಿರುವವನಿಗೆ ಅವನ ಮಾತುಗಾರಿಕೆಯನ್ನು ತೆರೆಯ ಹಿಂದುಗಡೆಯಿಂದ ನೆನಪಿಗೆ ತರುವ ಮಿತ್ರನಂತೆ ಉಪನ್ಯಾಸಕ್ಕೆ ಬೇಕಾಗುವ ಕಡೆಗಳಲ್ಲಿ ಆಯಾ ವಿಷಯದ ವೃತ್ತಿಗಳನ್ನು ಎಬ್ಬಿಸಿಕೊಟ್ಟು ಉತ್ತಮವಾದ ಭಾಷಣವನ್ನೇ ಮಾಡಿಸಿಬಿಡುತ್ತದೆ. ಎಷ್ಟೋ ಜನ ಗ್ರಂಥಕಾರರೂ, ಕವಿಗಳೂ ಸಂಗೀತಗಾರರೂ ತಮಗೂ ಅರಿಯದೆಯೇ ಆಶಯದಿಂದ ಈ ಬಗೆಯ ನೆರವನ್ನು ಹೊಂದಿ ತಮ್ಮ ತಮ್ಮ ಕಲೆಯಲ್ಲಿ ನೈಪುಣ್ಯವನ್ನು ಪ್ರದರ್ಶಿಸಿರುತ್ತಾರೆ. ಅಂಥ ಸಂದರ್ಭದಲ್ಲಿ ತಮ್ಮ ಕೃತಿಯು ಅಷ್ಟು ಸುಲಭವಾಗಿ ಯಶಸ್ವಿಯಾದ ಪರಿ ಹೇಗೆಂಬುದು ಅವರಿಗೂ ಗೊತ್ತಾಗಿ ತಿಳಿದುಬರುವದಿಲ್ಲ.

ಹೀಗೆ ಯುಕ್ತಭಾವನೆಗಳನ್ನು ಅಂತಃಕರಣದಲ್ಲಿ ತುಂಬಿಕೊಳ್ಳುವದರಿಂದಲೂ ಆಯಾ ಸಮಯಕ್ಕೆ ಬೇಕಾಗಿರುವ ಅಂಥ ಉತ್ತಮಭಾವನೆಗಳ ಸೂಚನೆಗಳನ್ನು ಆಶಯಕ್ಕೆ ಕೊಡುವದರಿಂದಲೂ ಅಂತಃಕರಣಕ್ಕೆ ಅಯುಕ್ತಭಾವನೆಗಳ ಕಾಟವು ತಪ್ಪುವಂತೆ

ಮಾಡಿಕೊಳ್ಳಬಹುದು; ಆಶಯವು ತಮಗೆ ಬೇಕಾದ ಸಹಾಯವನ್ನು ಒದಗಿಸಿ ಕೊಡುವಂತೆ ಮಾಡಿಕೊಳ್ಳಬಹುದು; ಅಂತಃಕರಣದಲ್ಲಿ ಅಡಗಿಕೊಂಡಿರುವ ಎಷ್ಟೋ ಹೊಸ ಶಕ್ತಿವಿಶೇಷಗಳನ್ನು ನಾವು ಬಳಸಿಕೊಳ್ಳಬಹುದು. ಈ ರೀತಿಯಲ್ಲಿ ಉತ್ತಮ ಭಾವನೆಗಳನ್ನು ಬಿತ್ತಿ, ಬೆಳೆದು, ಬಲಪಡಿಸಿಕೊಳ್ಳುತ್ತಾ ಬರುವ ಅಭ್ಯಾಸದಿಂದ ವ್ಯವಹಾರದಲ್ಲಿ ನಮಗೆ ಇಷ್ಟವಾದ ಸನ್ನಿವೇಶವನ್ನು ಏರ್ಪಡಿಸಿಕೊಳ್ಳುವದು ಸಾಧ್ಯವಾಗುತ್ತದೆ. ನಮಗೆ ಬೇಕಾದ ಭೋಗಸಾಮಗ್ರಿಗಳು ತಮಗೆ ತಾವೇ ಹೇಗೋ ಎಲ್ಲಿಂದಲೋ ಬಂದು ನಮ್ಮನ್ನು ಆರಾಧಿಸುವಂತೆ ಮಾಡಿಕೊಳ್ಳಬಹುದು. ನಮ್ಮ ಸುತ್ತಲೂ ಇರುವ ಪ್ರಾಣಿಗಳೂ ಮನುಷ್ಯರೂ ನಮ್ಮ ಸೂಚನೆಗೆ ಒಳಪಟ್ಟು, ನಮ್ಮ ಇಚ್ಛೆಯಂತೆಯೇ ನಡೆಯುವ ಹಾಗೆ ಮಾಡಿಕೊಳ್ಳುವದೂ ಇದರಿಂದ ಸಾಧ್ಯವಾಗುತ್ತದೆ. ಅಂತಃಕರಣವೆಂಬುದು ಇಂಥ ಅದ್ಭುತವಾದ ಶಕ್ತಿಗಳಿಂದೊಡಗೂಡಿದ ಒಂದು ವಿಚಿತ್ರಾಯುಧವಾಗಿರುತ್ತದೆ!

ಆದರೆ ಒಂದು ಎಚ್ಚರಿಕೆಯ ಮಾತನ್ನು ಆಡುವದು ಇಲ್ಲಿ ಅವಶ್ಯವಾಗಿರುತ್ತದೆ. ಮನಸ್ಸಿನಲ್ಲಿರುವ ಈ ಅದ್ಭುತಶಕ್ತಿಯನ್ನು ಉಪಯೋಗಿಸುವ ಕ್ರಮವನ್ನು ತಿಳಿದುಕೊಳ್ಳದೆ ಇದ್ದರೆ ಬಹಳ ಅಪಾಯವುಂಟು. ಒಬ್ಬ ಕೆಲಸಗಾರನಲ್ಲಿ ಉತ್ತಮವಾದ ಆಯುಧಗಳು ಇರಬಹುದು. ಆದರೆ ಆ ಉಪಕರಣಗಳನ್ನು ಸರಿಯಾಗಿ ಉಪಯೋಗಿಸದೆ ಇದ್ದರೆ, ಅವುಗಳಿಂದ ಸತ್ಫಲವನ್ನು ಹೊಂದುವದಕ್ಕೆ ಆಗಲಾರದು. ಒಳ್ಳೆಯ ಬಣ್ಣಗಳೂ ಬಣ್ಣದ ಕುಂಚಿಕೆಯೂ ಇದ್ದ ಮಾತ್ರದಿಂದ ಯಾವನಾದರೂ ಚಿತ್ರವನ್ನು ಬರೆಯುವದಕ್ಕೆ ಆಗಲಾರದು; ವೀಣೆ, ಪಿಟೀಲು, ತಬಲ-ಮುಂತಾದ ಒಳ್ಳೊಳ್ಳೆಯ ವಾದ್ಯಗಳು ಇದ್ದ ಮಾತ್ರದಿಂದ ಇಂಪಾದ ಸಂಗೀತವನ್ನು ಏರ್ಪಡಿಸುವದು ಎಲ್ಲರಿಗೂ ಸಾಧ್ಯವಾಗಲಾರದು; ಹರಿತವಾದ ಉಳಿ, ಬಾಚಿ-ಮುಂತಾದವುಗಳಿದ್ದ ಮಾತ್ರದಿಂದ ಯಾರೆಂದರೆ ಅವರು ಮರದ ಸಾಮಾನುಗಳನ್ನು ಮಾಡುವದಾಗಲಾರದು. ಇಂಥ ಉಪಕರಣಗಳನ್ನು ಮನಸ್ಸುಬಂದಂತೆ ಉಪಯೋಗಿಸಿದರೆ ಆಗತಕ್ಕ ಒಳ್ಳೆಯ ಫಲವು ಆಗುವ ಬದಲು ದುಷ್ಫಲವೂ ಆಗಬಹುದು. ಯಾವದಾದರೊಂದು ಸೀಸೆಯಲ್ಲಿರುವ ಔಷಧಿಯನ್ನು ಬಗ್ಗಿಸಿ ರೋಗಿಗೆ ಕೊಡುವ ವೈದ್ಯ ಬಾಲಕನಂತೆ, ಯಾವದಾದರೊಂದು ಮಂತ್ರವನ್ನು ತನಗೆ ತಿಳಿದ ವಿಧಾನದಿಂದ ಪ್ರಯೋಗಿಸುವ ಅಜ್ಞ ಮಾಂತ್ರಿಕನಂತೆ ಮನಸ್ಸಿನ ಶಕ್ತಿಗಳನ್ನು ತನಗೆ ತಿಳಿದಂತೆ ಉಪಯೋಗಿಸುವಾತನು ತನಗೂ ತನಗೆ ಸಂಬಂಧಿಸಿದ ಜನರಿಗೂ ಅಪಾಯವನ್ನೇ ಮಾಡಿಕೊಳ್ಳಬಹುದು. ಆದ್ದರಿಂದ ಅಂತಃಕರಣದ ಶಕ್ತಿವಿಶೇಷಗಳನ್ನು ತಿಳಿಸುವ ಮನಶ್ಶಾಸ್ತ್ರದ ತಿಳಿವಳಿಕೆಯು ಮಾತ್ರವಿದ್ದರೆ ಸಾಲದು. ಅಂತಃಕರಣದ ಶಕ್ತಿಗೆ ಮೂಲವು ಯಾವದು, ಅವನ್ನು ಯಾವಾಗ ಹೇಗೆ ಉಪಯೋಗಿಸಿದರೆ ತನಗೂ ಲೋಕಕ್ಕೂ ಕಲ್ಯಾಣವಾದೀತು-ಎಂಬುದನ್ನು ಅರಿತುಕೊಳ್ಳುವದಕ್ಕೆ ಪ್ರಯತ್ನಮಾಡಬೇಕು. ಇದನ್ನು ನಿಜವಾದ ಅಧ್ಯಾತ್ಮವಿದ್ಯೆಯ ಸಹಾಯದಿಂದ ಮಾತ್ರವೇ ಕಲಿತುಕೊಳ್ಳ ಬಹುದಾಗಿರುತ್ತದೆ.

ಅಂತಃಕರಣದಲ್ಲಿ ಆಶ್ಚರ್ಯಕರವಾದ ಹಲವು ಶಕ್ತಿಗಳಿರುವದು ನಿಜ. ಆದರೆ ಆ ಶಕ್ತಿಗಳು ಅದರ ಸ್ವಭಾವಕ್ಕೆ ಸಂಬಂಧಪಟ್ಟವಲ್ಲ. ಅದಕ್ಕೂ ಮೂಲವಾದ ಪರಮಾತ್ಮ ಚೈತನ್ಯದಿಂದ ಬಂದವುಗಳಾಗಿರುತ್ತವೆ. ಅಂತಃಕರಣವು ಎಷ್ಟೇ ಜೀವಂತವಾದ ಉಪಕರಣವಾಗಿ ತೋರುತ್ತಿರಲಿ, ಅದರ ಜೀವಾಳವು ಅದಕ್ಕಿಂತ ವಿಲಕ್ಷಣನಾದ ಪರಮಾತ್ಮನಲ್ಲಿರುತ್ತದೆ. ಅದರ ಶಕ್ತಿಗಳು ಪರಮಾತ್ಮನ ಅನುಗ್ರಹದಿಂದಲೇ ತೋರಿ ಕೊಳ್ಳುತ್ತಿರುತ್ತವೆ. ಭಗವದ್ಗೀತೆಯಲ್ಲಿ ಶ್ರೀಕೃಷ್ಣ ಭಗವಂತನು ಹೇಳಿರುವ ಒಂದು ವಾಕ್ಯವನ್ನು ಇಲ್ಲಿ ನಾವು ನೆನಪಿಗೆ ತಂದುಕೊಳ್ಳಬೇಕು:

**ಬುದ್ಧಿರ್ಜ್ಞಾನಮಸಮ್ಮೋಹಃ ಕ್ಷಮಾ ಸತ್ಯಂ ದಮಃ ಶಮಃ ।**
**ಸುಖಂ ದುಃಖಂ ಭವೋಽಭಾವೋ ಭಯಂ ಚಾಭಯಮೇವ ಚ ॥**
**ಅಹಿಂಸಾ ಸಮತಾ ತುಷ್ಟಿಸ್ತಪೋ ದಾನಂ ಯಶೋಽಯಶಃ ।**
**ಭವನ್ತಿ ಭಾವಾ ಭೂತಾನಾಂ ಮತ್ತ ಏವ ಪೃಥಗ್ವಿಧಾಃ ॥**

ಬುದ್ಧಿ, ಜ್ಞಾನ, ಅಸಮ್ಮೋಹ, ಕ್ಷಮಾ–ಮುಂತಾದ ಭಾವಗಳೆಲ್ಲವೂ ಪರಮಾತ್ಮನಿಂದಲೇ ಪ್ರಾಣಿಗಳಿಗೆ ಉಂಟಾಗುವವೆಂಬುದು ವಾಕ್ಯದ ಅಭಿಪ್ರಾಯವು. ಮಾನವನು ಶರೀರ, ಮನಸ್ಸು–ಇವುಗಳಿಂದ ಆಗಿರುವ ಒಟ್ಟೆಂದು ಭಾವಿಸುವದು ತಪ್ಪು. ಇವು ಅವನ ಸ್ಥೂಲಶರೀರ, ಸೂಕ್ಷ್ಮಶರೀರ–ಎಂಬ ಹೊರಹೊದಿಕೆಗಳು ಮಾತ್ರವಾಗಿರುತ್ತವೆ. ಈ ಶರೀರಗಳೊಳಗೆ ಮಾನವನ ನಿಜವಾದ ಸ್ವರೂಪವಿರುತ್ತದೆ. ಈ ಸ್ವರೂಪವು ಪರಮೇಶ್ವರನೆಂಬ ಬೆಂಕಿಯ ಕಿಡಿಯು, ಪರಮೇಶ್ವರನೆಂಬ ಸೂರ್ಯನ ಕಿರಣವು, ಅಥವಾ ಪರಮೇಶ್ವರನೆಂಬ ಅಮೃತಸಾಗರದ ಒಂದು ತೊಟ್ಟು ಆಗಿರುತ್ತದೆ. ಕಿಡಿಯು ಬೆಂಕಿಯನ್ನು ಬಿಟ್ಟು ಬೇರೆ ಯಿರುವದಿಲ್ಲ; ಕಿರಣವು ಸೂರ್ಯಮಂಡಲವನ್ನು ಬಿಟ್ಟು ಸ್ವತಂತ್ರವಾಗಿರುವದಿಲ್ಲ; ಸಮುದ್ರದ ನೀರಿನ ತೊಟ್ಟು ಸಮುದ್ರವನ್ನು ಬಿಟ್ಟು ತಾನೇ ಬೇರೆಯಾಗಿರುವದಿಲ್ಲ. ಆದ್ದರಿಂದ ಮಾನವನ ಸ್ವರೂಪವು, ಪರಮಾತ್ಮನ ಸ್ವಭಾವವುಳ್ಳದ್ದಾಗಿ ಪರಮಾತ್ಮನಿಗೆ ನಿತ್ಯಸಂಬದ್ಧವಾಗಿರುತ್ತದೆ. ಈ ಸ್ವರೂಪದಿಂದಲೇ, ಪರಮಾತ್ಮನೆಂಬ ಮೂಲಕೇಂದ್ರದಿಂದಲೇ, ಮಾನವನ ಅಂತಃಕರಣದಲ್ಲಿ ಉತ್ತಮವಾದ ಬುದ್ಧಿ, ಉತ್ತಮವಾದ ಜ್ಞಾನ, ಕ್ಷಮಾಶಕ್ತಿ, ಶಮ, ದಮ–ಮುಂತಾದವುಗಳು ಬಂದಿರುತ್ತವೆ. ಈ ಗುಟ್ಟನ್ನು ತಿಳಿಸಿಕೊಡುವದೇ ಅಧ್ಯಾತ್ಮವಿದ್ಯೆಯ ಮುಖ್ಯೋದ್ದೇಶವು.

ನಮ್ಮಲ್ಲಿ ಪ್ರತಿಯೊಬ್ಬನಿಗೂ ಪರಮಾತ್ಮನೆಂಬ ಒಂದು ಕೇಂದ್ರವಿರುವದು. ಆ ಕೇಂದ್ರದಿಂದಲೇ ನಮ್ಮ ಜೀವನದ ದೃಶ್ಯಗಳೆಲ್ಲವೂ ಹೊರಹೊಮ್ಮಿರುತ್ತವೆ; ಅದರಿಂದಲೇ ನಮ್ಮ ಅಂತಃಕರಣದ

ಅದ್ಭುತವಾದ ಶಕ್ತಿಗಳೂ ಅಮೋಘವಾದ ವ್ಯಾಪಾರಗಳೂ ಉಂಟಾಗುತ್ತಿರುವವು. ಆದರೆ ಇದನ್ನು ನಾವು ಅರಿಯೆವು. ನಮ್ಮಲ್ಲಿ ಬಹುಜನರು ಈ ಕೇಂದ್ರವನ್ನು ಬಿಟ್ಟು **'ಅಹಂತೆ'** (ನಾನು) ಎಂಬ ಒಂದು ಸುಳ್ಳು ಕೇಂದ್ರವನ್ನೇ ನಮ್ಮ ಜೀವನ ವೃತ್ತದ ಕೇಂದ್ರವೆಂದು ಭಾವಿಸಿಕೊಂಡಿರುವೆವು. ಈ ತಪ್ಪುತಿಳಿವಳಿಕೆಯಿಮದಲೇ ನಮ್ಮ ವ್ಯವಹಾರವೆಲ್ಲ ತಪ್ಪುಹಾದಿಯಲ್ಲಿ ಸಾಗಿರುತ್ತದೆ. ರಾಜಬೀದಿಯನ್ನು ಬಿಟ್ಟು ಸೀಳುಹಾದಿಗೆ ಹೋದವನು ತನ್ನ ಗುರಿಯಾದ ಸ್ಥಾನಕ್ಕೆ ತಲಪುವ ಬದಲಾಗಿ ಎತ್ತೆತ್ತಲೋ ಸುತ್ತಿ ಆಯಾಸವನ್ನು ಹೊಂದುತ್ತಿರುವಂತೆ ನಾವೂ ನಮ್ಮ ಕೇಂದ್ರವಾದ ಪರಮಾತ್ಮನನ್ನು ಗುರಿಯಾಗಿಟ್ಟುಕೊಳ್ಳದೆ ಸೀಳುಹಾದಿಗಳನ್ನು ಹಿಡಿದು ಅವು ಕವಲುಕವಲಾಗಿ ಒಡೆದುಕೊಂಡಂತೆಲ್ಲ ಸಿಕ್ಕಿದ ದಾರಿಯನ್ನೇ ಸರಿಯಾದ ದಾರಿಯೆಂದು ಭಾವಿಸಿಕೊಳ್ಳುತ್ತಾ ಎತ್ತೆತ್ತಲೋ ಸುತ್ತಾಡುತ್ತಿರುವೆವು. ಈ ರೀತಿಯಲ್ಲಿ ಸುತ್ತುತ್ತಿರುವದೇ **ಸಂಸಾರವು**. ಸಂಸಾರದ ಆಯಾಸದಿಂದ ಬಳಲಿ ಬೆಂಡಾಗಿರುವ ಹಾದಿ ಹೋಕರನ್ನು ಸರಿಯಾದ ಹಾದಿಗೆ ಹತ್ತಿಸಿ ರಾಜಮಾರ್ಗಕ್ಕೆ ತಂದು ಬಿಡುವದೇ ಸಾಧುಗಳು, ಸಂತರು, ನಮಗೆ ಮಾಡಿಕೊಡುವ ಉಪಕಾರವು. ನಮ್ಮ ಕೇಂದ್ರವಾಗಿ ಪರಮಾತ್ಮನನ್ನು ಕಾಣುವದಕ್ಕೆ ನಮಗೆ ನೆರವಾಗುವ ಅಧ್ಯಾತ್ಮವಿದ್ಯೆಯನ್ನು ಉಪದೇಶಿಸುವಾತನೇ ಸದ್ಗುರುವೆನಿಸುವನು.

ನಮ್ಮ ಕೇಂದ್ರವಾಗಿರುವ ಪರಮಾತ್ಮತತ್ತ್ವವನ್ನು ಮತ್ತೆ ಸೇರಬೇಕಾದರೆ ನಮ್ಮ ಈಗಿನ ನಡೆನುಡಿಗಳು ಬದಲಾಯಿಸಬೇಕು; ನಮ್ಮ ಅಂತಃಕರಣದ ವೃತ್ತಿಗಳೂ ಬದಲಾಯಿಸಬೇಕು. ಮುಖ್ಯವಾಗಿ ನಮ್ಮ ಅಂತಃಕರಣದಲ್ಲಿರುವ ಭಾವನೆಗಳು ಯುಕ್ತವಾದ ಭಾವನೆಗಳಾಗಬೇಕು. ಇಂಥ ಭಾವನೆಗಳಲ್ಲೆಲ್ಲ ಮುಖ್ಯವಾದದ್ದು ನಮ್ಮ ಕೇಂದ್ರವು ಪರಮಾತ್ಮನೆಂಬುದನ್ನು ಮತ್ತೆಮತ್ತೆ ಚಿಂತಿಸುತ್ತಿರುವದೇ ಆಗಿದೆ. ನಮ್ಮ ಅಂತಃಕರಣದಲ್ಲಿ 'ನಾನು' ಎಂಬ ಸುಳ್ಳು ಕೇಂದ್ರದ ವಿಚಾರಗಳು ಆಗಾಗ್ಗೆ ಮುನ್ನುಗ್ಗುತ್ತಲೇ ಇರುವವು. ನನ್ನ ಹೆಂಡಿರು ಮಕ್ಕಳು, ನನ್ನ ದನಕರುಗಳು, ನನ್ನ ಹೊಲಮನೆಗಳು, ನನ್ನ ಹಣ, ನನ್ನ ಕೀರ್ತಿ; ನನ್ನ ಶರೀರದ ಸೌಂದರ್ಯ, ಯೌವನ, ಆರೋಗ್ಯ, ಬಲ ಮುಂತಾದವು; ನನ್ನ ಜಾಣತನ, ನನ್ನ ಪಾಂಡಿತ್ಯ, ನನ್ನ ಬುದ್ಧಿ-ಎಂದು ಯಾವಾಗಲೂ ಹೊರಗಿನ ಮತ್ತು ಒಳಗಿನ ದೃಶ್ಯಗಳನ್ನು ಈ 'ನಾನು' ಎಂಬ ಹುಸಿಕೇಂದ್ರಕ್ಕೇ ಸಂಬಂಧಿಸಿಕೊಳ್ಳುತ್ತಿರುವೆವು. ಇದೇ ಎಲ್ಲಾ ಅನರ್ಥಗಳಿಗೂ ಕಾರಣವಾಗಿರುತ್ತದೆ. ಆದ್ದರಿಂದ ಈ ಹುಸಿ ಕೇಂದ್ರವನ್ನು ಬಿಟ್ಟು ಪರಮಾರ್ಥವಾದ ಕೇಂದ್ರವನ್ನೇ ಚಿಂತಿಸುವ ಅಭ್ಯಾಸವನ್ನು ಮಾಡುವದಕ್ಕೆ ನಾವು ಮೊದಲುಮಾಡಬೇಕು.

ನಾನು ಎಂಬ ಬುದ್ಧಿಯು ನಮ್ಮನ್ನು ಹೊರಮುಖವಾಗುವಂತೆ ಮಾಡುತ್ತದೆ. ನಾನು, ನನ್ನದು; ನಾನು, ನೀನು, ಅವರು; ನಾನು, ನನ್ನವರು, ನನ್ನವರಲ್ಲದ ಅನ್ಯರು; ನಾನು,

ನನಗೆ ಇಷ್ಟವಾದದ್ದು, ನನಗೆ ಅನಿಷ್ಟವಾದದ್ದು–ಎಂಬೀ ಭಾವನೆಗಳು ನಮ್ಮಗಳನ್ನು ಹಿಡಿದುಕೊಂಡು ನಮ್ಮ ವ್ಯವಹಾರವನ್ನೆಲ್ಲ ತಪ್ಪು ದಿಕ್ಕಿನಲ್ಲಿ ನಡೆಯಿಸುತ್ತಿರುವವು. ತಪ್ಪು ವ್ಯವಹಾರವು ಹೆಚ್ಚಿದಂತೆಲ್ಲ ರಾಗ, ದ್ವೇಷ, ಕ್ರೋಧ, ಮದ, ಮಾತ್ಸರ್ಯ, ಮೋಹ–ಮುಂತಾದ ಅಯುಕ್ತಭಾವನೆಗಳು ಬೆಳೆದುಕೊಳ್ಳುತ್ತಿರುವವು. ಇಂಥ ಭಾವನೆಗಳು ಬೆಳೆದುಕೊಂಡಂತೆಲ್ಲ ನಾನು ಎಂಬ ಹುಸಿಕೇಂದ್ರವೇ ನಮ್ಮ ನಿಜವಾದ ಕೇಂದ್ರವೆಂದು ಭಾವನೆಯೂ ಬಲಿತು–ಕೊಳ್ಳುತ್ತಾ ಹೋಗುತ್ತದೆ. ನಾನು ಎಂಬುದು ಬಲಿತುಕೊಂಡ ಹಾಗೆಲ್ಲ, ನಮ್ಮ ಸುತ್ತುವಳೆಯದಲ್ಲಿ ದುಃಖದ ಕಾರ್ಮೋಡಗಳು ಕವಿದುಕೊಳ್ಳುತ್ತವೆ; ಅಶಕ್ತಿ, ಅಪಜಯ, ಅಯಶಸ್ಸು, ಅನಾರೋಗ್ಯ, ಸಂಶಯ, ಭಯ, ಸಂಕಟ–ಮುಂತಾದ ಭಾವನೆಗಳು ಎದ್ದುಕೊಳ್ಳುತ್ತವೆ. ಈ ರೀತಿಯಲ್ಲಿ 'ನಾನು' ಬಲಿತುಕೊಂಡರೆ ಸಂಸಾರದ ದುಃಖವೂ ಹೆಚ್ಚುತ್ತದೆ; 'ನಾನು' ಬಡಕಲಾದರೆ ದುಃಖವೂ ಬಡಕಲಾಗುತ್ತದೆ. ಆದ್ದರಿಂದ 'ನಾನು' ಎಂಬುದೇ ಸಂಸಾರದ ದುಃಖಗಳಿಗೆಲ್ಲ ಮೂಲವೆಂದು ಸ್ಪಷ್ಟವಾಗಿರುತ್ತದೆ.

ಇದರಂತೆ ನಮ್ಮ ನಿಜವಾದ ಕೇಂದ್ರವು ಪರಮೇಶ್ವರನೇ ಎಂಬುದನ್ನು ಅಡಿಗಡಿಗೂ ಚಿಂತಿಸಿಕೊಳ್ಳುವದರಿಂದ ನಾವು ಒಳಮುಖರಾಗುವೆವು. ನಾನಲ್ಲ, ಪರಮೇಶ್ವರನು, ನನಗೂ ನಿನಗೂ ಅವರಿಗೂ ಪರಮೇಶ್ವರನೇ ಕೇಂದ್ರವು; ಪರಮೇಶ್ವರನಲ್ಲಿ ನಿಂತವರಿಗೆ ನನ್ನವರು, ಅನ್ಯರು ಎಂಬ ಭೇದವಿಲ್ಲ; ಪರಮೇಶ್ವರನಲ್ಲಿ ನಿಂತವರಿಗೆ ಇಷ್ಟಾನಿಷ್ಟಗಳಲ್ಲ, ಎಲ್ಲವೂ ಇಷ್ಟವೇ ಆಗುತ್ತದೆ–ಎಂಬೀ ತೆರನಾದ ಭಾವನೆಗಳನ್ನು ನಾವು ಅಂತಃಕರಣದಲ್ಲಿ ತುಂಬಿಕೊಂಡ ಹಾಗೆಲ್ಲ, ನಮ್ಮ ಆಶಯಕ್ಕೆ ಈ ಬಗೆಯ ಸೂಚನೆಗಳನ್ನು ಕೊಡುತ್ತಾ ಬಂದಂತೆಲ್ಲ, ನಮ್ಮ ವ್ಯವಹಾರವು ಸರಿಯಾದ ದಿಕ್ಕಿನಲ್ಲಿ ನಡೆಯುತ್ತಾ ಹೋಗುವದು. ಸರಿಯಾದ ವ್ಯವಹಾರವು ಹೆಚ್ಚಿದಂತೆಲ್ಲ ಪ್ರೇಮ, ದಯ, ಅಮಾನಿತ್ವ, ಸಂತೋಷ–ಮುಂತಾದ ಭಾವನೆಗಳು ಬೆಳೆದು ಕೊಳ್ಳುವವು. ಇಂಥ ಭಾವನೆಗಳು ಬೆಳೆದುಕೊಂಡಂತೆಲ್ಲ ನಾನು ಎಂಬುದು ನಮ್ಮ ನಿಜವಾದ ಕೇಂದ್ರವಲ್ಲವೆಂದು ಮನದಟ್ಟಾಗುತ್ತಾ ಹೋಗುವದು, ನಾನು ಎಂಬುದು ಬಡಕಲಾಗುತ್ತಾ ಹೋಗುವದು. ನಾನು ಎಂಬುದರ ಸ್ಥಾನದಲ್ಲಿ ಪರಮಾತ್ಮನು ತೋರುವದಕ್ಕೆ ಮೊದಲಾಗುತ್ತಲೂ ನಮ್ಮ ಸುತ್ತುವಳೆಯದಲ್ಲಿ ಸುಖದ ನಿರ್ಮಲ ವಾತಾವರಣವು ಏರ್ಪಡುತ್ತಾ ಹೋಗುವದು. ಶಕ್ತಿ, ಜಯ, ಆರೋಗ್ಯ, ನಂಬಿಕೆ, ಕೆಚ್ಚೆದೆ, ಹರ್ಷ–ಮುಂತಾದವುಗಳ ಭಾವನೆಗಳು ಎದ್ದುಕೊಳ್ಳುವವು. ಪರಮಾತ್ಮ ಭಾವನೆಯು ಇಲ್ಲದಿರುವಾಗ ಅಥವಾ ಮಸುಕಾಗಿರುವಾಗ ಕಾಣಿಸಿಕೊಳ್ಳುತ್ತಿದ್ದ ದುಃಖಗಳು ಪರಮಾತ್ಮಭಾವನೆಯು ಬಲಿತುಕೊಂಡಂತೆಲ್ಲ ಮಾಯವಾಗಿ ನಮ್ಮ ಜೀವನವು ಆನಂದಮಯವಾಗುತ್ತದೆ.

ಸಂಸಾರವು ದುಃಖಮಯವಾಗಿರುತ್ತದೆ ಎಂಬುದು ನಮ್ಮಲ್ಲಿ ಬಲುಮಂದಿಗೆ ಮನದಟ್ಟಾಗಿರುತ್ತದೆ. ಆದರೆ ಆ ದುಃಖಗಳಿಗೆ ಕಾರಣವು ನಮ್ಮ ಹೊರಗೇ ಇರುತ್ತದೆ ಎಂಬ ತಪ್ಪುತಿಳಿವಳಿಕೆಯು ನಮ್ಮಗಳನ್ನು ಕಾಡುತ್ತಿರುತ್ತದೆ; ಈ ತಪ್ಪುತಿಳಿವಳಿಕೆಯಿಂದಲೇ ನಾವು ದುಃಖಗಳ ಕಾರಣವನ್ನು ತೆಗೆದುಬಾಕಿ ಸುಖದ ಕಾರಣವನ್ನು ಹೊಂದಿಸಿಕೊಂಡರೆ ಸಂಸಾರದ ದುಃಖವು ಕಣ್ಮರೆಯಾಗಿ ಸುಖದ ಸೂರೆಯಾಗುವದೆಂದು ತಿಳಿದುಕೊಂಡಿರುವೆವು. ಆದರೆ ಈ ದೃಷ್ಟಿಯಿಂದ ನೋಡುವಾಗ ದುಃಖಗಳು ಅನಂತವಾಗಿರುತ್ತವೆ; ಅವುಗಳಿಗೆ ಕಾರಣವೆಂದು ನಾವು ಕಲ್ಪಿಸಿರುವ ದೃಶ್ಯಗಳೂ ಅನಂತವಾಗಿರುತ್ತವೆ. ದುಃಖಗಳನ್ನು ಒಂದೊಂದಾಗಿ ಕಾರಣಗಳ ನಿವೃತ್ತಿಯಿಂದ ತೊಲಗಿಸಿಕೊಳ್ಳುವದೆಂಬುದು ಆಗದ ಕೆಲಸವು. ಏಕೆಂದರೆ ದುಃಖಗಳು ಅನಂತವಾಗಿಯೂ ಇವೆ; ಅವುಗಳಿಗೆ ಕಾರಣವೆಂದು ನಾವು ಎಣಿಸಿಕೊಂಡಿರುವವು ನಿಜವಾದ ಕಾರಣವೂ ಅಲ್ಲ. ಸುಖಪ್ರಾಪ್ತಿಗಾಗಿ ಭೋಗ್ಯರಾಶಿಯನ್ನು ಕೂಡಿಹಾಕಿ ಕೊಳ್ಳುತ್ತಿರುವದೂ ಹೀಗೆಯೇ ವ್ಯರ್ಥಪ್ರಯಾಸವಾಗಿರುತ್ತವೆ. ಅಂತಃಕರಣದ ಶಕ್ತಿಯನ್ನುಪಯೋಗಿಸಿಕೊಂಡು ಆಯಾ ದುಃಖಗಳನ್ನು ಆಯಾ ಕಾಲಕ್ಕೆ ಪರಿಹಾರಮಾಡಿ ಕೊಳ್ಳಬೇಕೆಂದು ಕೆಲವರು ಬೋಧಿಸುತ್ತಾರೆ. ಆದರೆ ಮನಶ್ಶಕ್ತಿಯು ಹೇಗೆ ಬಳಸಬೇಕೆಂಬುದನ್ನು ತಿಳಿಸದೆ ಇರುವವರೆಗೆ ಆ ಬೋಧನೆಯು ಯಾವ ಪ್ರಯೋಜನವನ್ನೂ ಮಾಡಿಕೊಡಲಾರದು. ಮಾನವನ ಮನಸ್ಸು ಸ್ವಾಭಾವಿಕವಾಗಿ ದುರ್ಬಲವಾಗಿಯೇ ಇರುತ್ತದೆ. ಅದರಲ್ಲಿ ಒಂದು ಒಳ್ಳೆಯ ಭಾವನೆಯಿದ್ದರೆ, ಹತ್ತು ಕೆಟ್ಟಭಾವನೆಗಳು ಇರುತ್ತವೆ. ಇಂಥ ಸಂದರ್ಭದಲ್ಲಿ ಮನಸ್ಸಿಗೆ ಯುಕ್ತಭಾವನೆಯಾದರೂ ಹೇಗೆ ದೊರಕಬೇಕು? ಆದ್ದರಿಂದ 'ಮನಶ್ಶಕ್ತಿ ಯನ್ನುಪಯೋಗಿಸಿ' ಎಂದು ಹೇಳುವದು ಫಲಕಾರಿಯಾಗಲಾರದು. ಇಷ್ಟೇ ಅಲ್ಲ, ಮಾನವನ ಸಹಜವಾದ ಮನಸ್ಸನ್ನು ಉಪಯೋಗಿಸುವಾಗ ಅದನ್ನು ಸ್ವಾರ್ಥಕ್ಕೆ ಉಪಯೋಗಿಸುವ ಸಂಭವವೇ ಹೆಚ್ಚಾಗಿರುತ್ತದೆ. ಏಕೆಂದರೆ, ಸ್ವಾಭಾವಿಕವಾದ ಅಸಂಸ್ಕೃತವಾದ ಮನಸ್ಸಿಗೆ ನಾನೆಂಬುದೇ ಕೇಂದ್ರವಾಗಿ ತೋರುತ್ತಿರುತ್ತದೆ. ಆದ್ದರಿಂದ ಮನಶ್ಶಕ್ತಿಯನ್ನು ಪಯೋಗಿಸಿ ದುಃಖವನ್ನು ತೊಲಗಿಸಿಕೊಳ್ಳುವ ಪ್ರಯತ್ನದಲ್ಲಿ ಅಪಾಯವೂ ಇರುತ್ತದೆ. ನಿದ್ರೆಮಾಡುತ್ತಿರುವ ಹುಲಿಯನ್ನು ಕೋಲಿನಿಂದ ತಿವಿದೆಬ್ಬಿಸುವ ಅವಿವೇಕಿಯಂತೆ ಮನಸ್ಸಿನ ಸುಪ್ತಶಕ್ತಿಯನ್ನು ಎಬ್ಬಿಸಿದವನು ಅದರಿಂದಾಗುವ ಅನರ್ಥಕ್ಕೂ ತಲೆಯನ್ನು ಕೊಡಬೇಕಾಗುತ್ತದೆ.

ಆದ್ದರಿಂದ ನಮ್ಮ ಅಂತಃಕರಣದಲ್ಲಿರುವ ದಿವ್ಯಶಕ್ತಿಗಳನ್ನು ನಾವು ಸಪ್ರಯೋಜನವಾಗಿ ಉಪಯೋಗಿಸಿಕೊಳ್ಳಬೇಕಾದರೆ, ಯುಕ್ತಭಾವನೆಗಳನ್ನು ಮಾಡಬೇಕು, ಅಂತಃಕರಣದ ಅಶಯಕ್ಕೆ ಉತ್ತಮಸೂಚನೆಗಳನ್ನೂ ಕೊಡಬೇಕು-ಎಂಬುದಿಷ್ಟೇ ಸಾಲದು. ಅಂತಃಕರಣದ

ವೃತ್ತಿಗಳ ಮೂಲಸ್ಥಾನವೆಲ್ಲ ಪರಮಾತ್ಮನೇ ಎಂಬ ತತ್ತ್ವವನ್ನು ತಿಳಿದುಕೊಂಡು ಮುಖ್ಯವಾಗಿ ಈ ಭಾವನೆಯನ್ನೇ ಮತ್ತೆ ಮತ್ತೆ ಜಪಿಸುವ ಅಭ್ಯಾಸವನ್ನು ಮಾಡುತ್ತಿರಬೇಕು. ಮನಸ್ಸಿನಲ್ಲಿ ಪರಮಾತ್ಮ ಭಾವನೆಯು ಬೇರೂರಿದರೆ, ನಮ್ಮ ಮತ್ತು ಇಡಿಯ ವಿಶ್ವದ ಕೇಂದ್ರವನ್ನೇ ಹಿಡಿದಂತೆ ವಸ್ತುವಿನ ಆಕರ್ಷಣ ಶಕ್ತಿಕೇಂದ್ರವನ್ನು ಹಿಡಿದರೆ ವಸ್ತುವನ್ನೇ ನಿಲ್ಲಿಸಿಕೊಳ್ಳುವಂತೆ ಸರ್ವಾಧಾರನಾದ ಪರಮಾತ್ಮನಲ್ಲಿ ಮನಸ್ಸು ನಿಂತರೆ ನಿತ್ಯವಾದ ಪರಶಾಂತಿಯು ದೊರಕುತ್ತದೆ. 'ಈಶ್ವರನು ಸರ್ವಭೂತಗಳ ಹೃದಯದಲ್ಲಿಯೂ ಇರುತ್ತಿರುವನು; ಆತನನ್ನು ಬಿಟ್ಟು ಹೊರಗಿನ ಮಾಯೆಗೆ ಸಿಕ್ಕಿಕೊಂಡು ಸಂಸಾರಿಗಳು ದುಃಖ ಮಂಡಲದಲ್ಲಿ ತೊಳಲುತ್ತಿರುವದು. ಆತನನ್ನೇ ಸರ್ವಭಾವದಿಂದಲೂ ಶರಣುಹೊಂದಬೇಕು; ಹಾಗಾದರೆ ಆತನ ಪ್ರಸಾದದಿಂದ ಶಾಶ್ವತವಾದ ಶಾಂತಿಯು ದೊರಕುವದು' ಎಂದು ಭಗವಂತನು ಅರ್ಜುನನಿಗೆ ಹೇಳಿರುವ ವಾಕ್ಯವನ್ನು ನಾವು ನೆನಪಿಟ್ಟರಬೇಕು. ಈ ಪರಮ ಶಾಂತಿಯು ನಮಗೆ ದಕ್ಕಿತೊ ಇಲ್ಲವೊ, ಕೂಡಲೆ ನಮ್ಮ ಜೀವನವು ಉಲ್ಲಾಸ ಯುಕ್ತವಾಗುವದು; ನಮ್ಮ ಅಂತಃಕರಣದಲ್ಲಿ ದಿವ್ಯಶಕ್ತಿಗಳು ತೋರಿಕೊಳ್ಳುವವು; ನಮ್ಮ ಸನ್ನಿವೇಶವು ಸುಂದರವಾಗಿ, ಸುಖಮಯವಾಗಿ, ತೃಪ್ತಿಕರವಾಗಿ ಮಾರ್ಪಡುವದು.

ಆಧ್ಯಾತ್ಮವಿದ್ಯೆಯ ಅಭ್ಯಾಸವು ಸಫಲವಾಗುವದಕ್ಕೆ ಅದರಲ್ಲಿ ನಮಗೆ ಆದರವಿರಬೇಕು. ಸುಮ್ಮನೆ ಯಾವಾಗಲಾದರೊಮ್ಮೆ ಅದನ್ನು ಕುತೂಹಲದಿಂದ ಅನುಷ್ಠಾನ ಮಾಡಿದರೆ ಸಾಲದು. ನಿರಂತರವಾಗಿ, ಎಡೆಬಿಡದೆ ಅದನ್ನು ಅಭ್ಯಾಸಮಾಡುತ್ತಿರಬೇಕು. ಈ ಅಭ್ಯಾಸಕ್ಕೆ ಬೇಕಾದ ಅಂಗಗಳು ಯಾವವೆಂಬುದನ್ನು ತಿಳಿದುಕೊಂಡು ಎಲ್ಲವನ್ನೂ ಉಪಯೋಗಿಸಬೇಕು. ಇದನ್ನು ಕ್ಲಿಪ್ತಕಾಲದಲ್ಲಿ ಪ್ರತಿದಿನವೂ ತಪ್ಪದೇ ಅಭ್ಯಾಸಮಾಡಬೇಕು. ನಮ್ಮ ಜೀವನವನ್ನೇ ಈ ಅಭ್ಯಾಸಕ್ಕೆ ಮೀಸಲಾಗಿರಿಸಬೇಕು. ಹಾಗಾದೆ ಮಾತ್ರ ಅಧ್ಯಾತ್ಮವಿದ್ಯೆಯು ನಮಗೆ ದಕ್ಕುತ್ತದೆ.

ಅಧ್ಯಾತ್ಮವಿದ್ಯೆಯ ಅಭ್ಯಾಸದ ಮೆಟ್ಟಲುಗಳು ಮುಖ್ಯವಾಗಿ ಕರ್ಮ, ಧ್ಯಾನ, ಭಕ್ತಿ ಎಂಬ ಮೂರು ಮಾತುಗಳಲ್ಲಿ ಅಡಕವಾಗಿದೆ. ಈ ಮೆಟ್ಟಿಲುಗಳನ್ನು ಸಾಧಕನಾದವನು ಯಾವ ಅಂತಸ್ತಿನ ಚಿತ್ತದವನಾಗಿರುವನೋ ಅವನು ಆ ಅಂತಸ್ತಿಗೆ ತಕ್ಕ ಮೆಟ್ಟಲನ್ನು ಮೊದಲುಮಾಡಿ ಅಲ್ಲಿಂದ ಮೇಲಕ್ಕೆ ಏರಬೇಕಾಗುವದು. ಆದರೆ ಯಾವ ಮೆಟ್ಟಲಿನಲ್ಲಿಯೇ ಇರಲಿ, ಸಾಧನೆಯೆಲ್ಲ ಪರಮೇಶ್ವರನಿಗೆ ಸಂಬಂಧಪಟ್ಟಿರಬೇಕೆಂಬುದನ್ನು ಮರೆಯಬಾರದು. ಯಾವ ಸಾಧನೆಯನ್ನೇ ಮಾಡಲಿ, ಸ್ವಾರ್ಥದ ಅಶುದ್ಧವಾದ ಕಾಮನೆಗಳನ್ನು ಸಂಪೂರ್ಣವಾಗಿ ಬಿಟ್ಟುಬಿಡಬೇಕು. ಕಾಮಕಾಮರಿಗೆ ಅಧ್ಯಾತ್ಮವಿದ್ಯೆಯ ಸವಿಯು ಎಂದಿಗೂ ಗೊತ್ತಾಗಲಾರದು. ಎಲ್ಲಾ ಕಾಮಗಳನ್ನೂ ಬಿಟ್ಟು ಇಂದ್ರಿಯಗಳನ್ನು ಬಿಗಿಹಿಡಿದು ಮಾಡುವ ಕರ್ಮ, ಧ್ಯಾನ, ಭಕ್ತಿ ಇವುಗಳೆಲ್ಲವೂ **ಯೋಗ** ಎಂಬ ಹೆಸರಿನಿಂದ ಕರೆಯಲ್ಪಡುತ್ತವೆ,

ಅದ್ಯಾತ್ಮವಿದ್ಯೆಯ ಅಭ್ಯಾಸವನ್ನು ಅಧ್ಯಾತ್ಮಯೋಗವೆಂದು ಕರೆಯುಬಹುದು. ಈ ಯೋಗದಲ್ಲಿ ಕರ್ಮ ಯೋಗ, ಧ್ಯಾನಯೋಗ, ಭಕ್ತಿಯೋಗ,-ಎಂಬ ಮೂರು ಭೂಮಿಕೆಗಳು ಇರುತ್ತವೆ. ಈ ಎಲ್ಲಾ ಭೂಮಿಕೆಗಳೂ ಅಂತಃಕರಣವನ್ನು ಭಗವಂತನಿಗೆ ಸಂಬಂಧಿಸಿಕೊಳ್ಳುವದರಿಂದಲೇ ವಶವಾಗುತ್ತವೆ. ಕರ್ಮಯೋಗಿಯು ತನ್ನ ಮನೋಬುದ್ಧಿಗಳನ್ನು ಭಗವಂತನಿಗೇ ಅರ್ಪಿಸಿ ತನ್ನ ಕರ್ಮಗಳನ್ನು ಮಾಡುತ್ತಿರುತ್ತಾನೆ; ಧ್ಯಾನಯೋಗಿಯು ಭಗವಂತನಲ್ಲಿಯೇ ತನ್ನ ಚಿತ್ತವನ್ನು ನಿಲ್ಲಿಸಿಕೊಂಡಿರುತ್ತಾನೆ; ಭಕ್ತಿಯೋಗಿಯು ಎಲ್ಲೆಲ್ಲಿಯೂ ಭಗವಂತನ ವಿಭೂತಿಯನ್ನೇ ಕಾಣುತ್ತಿರುತ್ತಾನೆ.

ಈಗ ನಾವು ಹೇಳುತ್ತಿರುವದು ಎರಡನೆಯ ಮೂರನೆಯ ಭೂಮಿಕೆಗಳ ವಿಚಾರವಾಗಿ. ಒಂದೊಂದು ದಿನವೂ ಭಗವಂತನಲ್ಲಿ ಚಿತ್ತವನ್ನು ನಿಲ್ಲಿಸುವ ಧ್ಯಾನಕ್ರಮವನ್ನು ಅಭ್ಯಾಸಮಾಡಿರಿ. ಹಾಗಾದರೆ ಆ ಭಗವಂತನಲ್ಲಿಯೇ ನೆಲೆನಿಲ್ಲುವದನ್ನು ಕಲಿತುಕೊಳ್ಳಬಹುದು. ಭಗವಂತನಲ್ಲಿಯೇ ವಾಸವಾಗಿರುವದಕ್ಕೆ ಈ ಅಭ್ಯಾಸಯೋಗವೇ ಸಾಧನವು- ನಮ್ಮೊಳಗೆ ನಮ್ಮ ಅಂತಃಕರಣದ ಅಡಿಯಲ್ಲಿ ಪರಮಾತ್ಮನ ಶಾಂತಿಯು ಸಹಜವಾಗಿರುತ್ತದೆ. ಅಂತಃಕರಣದ ಮೇಲುಗಡೆಯಲ್ಲಿ ಮಾತ್ರ ವೃತ್ತಿಗಳ ಅಲೆಗಳು ಹೊಡೆದಾಡುತ್ತಿರುವವು. ಅಂತಃಕರಣದಲ್ಲಿ ಆಳವಾಗಿ ಇಳಿಯುವ ಅಭ್ಯಾಸವನ್ನು ಮಾಡಬೇಕು; ಅಲ್ಲಿ ಪರಮಾತ್ಮನಲ್ಲಿಯೇ ಚಿತ್ತವನ್ನು ನಿಲ್ಲಿಸಿಕೊಳ್ಳುವ ಅಭ್ಯಾಸವನ್ನು ಮಾಡಬೇಕು. ಈ ಆತ್ಮಾನ್ವೇಷಣೆಯಲ್ಲಿ ನಿರತರಾಗಿರುವವರು ಕಾಲಕ್ರಮದಲ್ಲಿ ಇಡಿಯ ವಿಶ್ವಕ್ಕೇ ಆಧಾರವಾಗಿರುವ ಪರಮಶಾಂತಿಯನ್ನು ಪಡೆದುಕೊಳ್ಳಬಹುದು. ಅದರಿಂದ ಪರಮಪುರುಷಾರ್ಥವೇ ದೊರೆಯುವದೆಂದು ಶಾಸ್ತ್ರಗಳು ಸಾರುತ್ತಿವೆ. ಹೀಗಿರುವಲ್ಲಿ ಹೊರಗಿನ ಕಷ್ಟ ಪರಂಪರೆಗಳೂ ಅವ್ಯವಸ್ಥೆಯೂ ರಾಗದ್ವೇಷಾದಿಗಳಿಂದಾಗುವ ಹಾವಳಿಯೂ ಮಾಯವಾಗುವವೆಂಬುದನ್ನು ಹೇಳಬೇಕಾದದ್ದೇ ಇಲ್ಲ.

# 10. ಮನಸ್ಸನ್ನು ಪರಮಾತ್ಮನಿಗೆ ಸಂಬಂಧಿಸುವದು

*ಮನಸ್ಸನ್ನು ಅಂತಃಕರಣವೆಂಬ ಹೆಸರಿಗೆ ತಕ್ಕಂತೆ ಮಾಡಿಕೊಳ್ಳುವದು ಒಂದು ಕುಶಲವಿದ್ಯೆ. ಮನಸ್ಸು ನಮ್ಮ ಒಳಗೆ ಕೆಲಸಮಾಡುತ್ತಿರುವದರಿಂದ ಮಾತ್ರವೇ ಅಂತಃಕರಣವೆನಿಸಿರುವದಿಲ್ಲ; ನಮ್ಮ ಒಳಗೆ ಮಾತ್ರವೇ ಸಿಕ್ಕಬಲ್ಲ, ನಮ್ಮ ಜೀವನಕ್ಕೆಲ್ಲ ಆಧಾರವಾಗಿರುವ ತತ್ತ್ವಗಳನ್ನು ಗ್ರಹಿಸುವದರಿಂದಲೇ ಮನಸ್ಸಿಗೆ ಅಂತಃಕರಣವೆಂಬ

* ಸಂಪುಟ 16, ಸಂಚಿಕೆ 10, ಜೂನ್ 1947, ಪುಟ 217-224

ಹೆಸರು ಅನ್ವರ್ಥವಾಗಿರುತ್ತದೆ. ಆದ್ದರಿಂದ ಮನಸ್ಸನ್ನು ಅಂತರ್ಮುಖವಾಗಿ ಮಾಡಿಕೊಂಡು ಅಲ್ಲಿ ಕಾಣುವ ತತ್ತ್ವಗಳನ್ನು ಮನನಮಾಡಬಲ್ಲ ಮುನಿಗಳೇ ನಿಜವಾದ ಮಾನವರು.

ಅಂತಃಕರಣದಲ್ಲಿ ಎಂಥ ಭಾವನೆಗಳಿರುತ್ತವೆಯೋ ಅಂಥ ವಾಸನೆಗಳು ಆಶಯದಲ್ಲಿ ಮನೆಮಾಡಿ ಅವಿತುಕೊಂಡಿರುತ್ತವೆ. ಅಂತಃಕರಣದಲ್ಲಿ ಯುಕ್ತಭಾವನೆಗಳನ್ನು ಅಭ್ಯಾಸಮಾಡಿದಂತೆಲ್ಲ ಆಶಯಕ್ಕೆ ಉತ್ತಮಸೂಚನೆಗಳನ್ನು ಕೊಟ್ಟಂತೆ ಆಗುತ್ತದೆ. ಆ ಸೂಚನೆಗಳನ್ನು ಅವಲಂಬಿಸಿ ಆಶಯವು ವಾಸನೆಗಳನ್ನು ವೃತ್ತಿಗಳಾಗಿ ರೂಪಿಸಿಕೊಡುತ್ತದೆ; ಅವುಗಳನ್ನು ವ್ಯವಹಾರದಲ್ಲಿ ಸದುಪಯೋಗಮಾಡಿಕೊಳ್ಳುವದಕ್ಕೂ ನೆರವಾಗುತ್ತದೆ.

ಅಂತಃಕರಣದಲ್ಲಿ ಅದ್ಭುತವಾದ ಹಲವು ಶಕ್ತಿಗಳಿರುತ್ತವೆ. ಆ ಶಕ್ತಿಗಳಿಗೆ ಮೂಲವನ್ನರಿತುಕೊಳ್ಳದೆ ವ್ಯವಹರಿಸುವವರು ಸಂಸಾರದಲ್ಲಿ ದುಃಖವನ್ನು ಹೊಂದುವರು. ಅದನ್ನು ಅರಿತುಕೊಂಡು ವ್ಯವಹರಿಸುವವರು ಹತ್ತು ದಿಕ್ಕುಗಳನ್ನೂ ಸುಖಮಯವಾಗಿ ಮಾಡಿಕೊಳ್ಳುವರು.

ಇದಿಷ್ಟೂ ನಾವು ಬೇರೆಬೇರೆಯ ಸಂದೇಶಗಳಲ್ಲಿ ತಿಳಿಸಿರುವ ವಿಷಯಗಳು. ಆ ಸಂದೇಶಗಳನ್ನು ವಾಚಕರು ಮತ್ತೆ ಮತ್ತೆ ಮನಮುಟ್ಟಿ ಓದಬೇಕು; ಓದಿದ ವಿಷಯಗಳನ್ನು ಮೆಲುಕುಹಾಕಬೇಕು. ನಮ್ಮ ಅಭಿಪ್ರಾಯವನ್ನು ತಮ್ಮ ಅನುಭವಕ್ಕೆ ಹೊಂದಿಸಿನೋಡಿಕೊಳ್ಳುತ್ತಿರಬೇಕು. ಇದೊಂದು ಉತ್ತಮವಾದ ಅಧ್ಯಾತ್ಮ ಸಾಧನವಾಗುವದು. ಆದರೆ ನಾವು ಹಿಂದೆ ಹೇಳಿರುವ ವಿಷಯಗಳಲ್ಲೆಲ್ಲ ಪರಮಮುಖ್ಯವಾಗಿರುವದು ಒಂದಿದೆ. ಅದನ್ನು ಓದುಗರು ಯಾವಾಗಲೂ ನೆನಪಿನಲ್ಲಿಟ್ಟುಕೊಂಡಿರಬೇಕು. ಆದ್ದರಿಂದ ಅದನ್ನು ಇನ್ನೊಮ್ಮೆ ಇಲ್ಲಿ ಅನುವಾದಮಾಡಿಕೊಂಡೇ ಮುಂದಕ್ಕೆ ಸಾಗುವೆವು. **ನಮ್ಮಲ್ಲಿ ಪ್ರತಿಯೊಬ್ಬನಿಗೂ ಪರಮಾತ್ಮನೆಂಬ ಒಂದು ಕೇಂದ್ರವಿರುವದು; ಆ ಕೇಂದ್ರದಿಂದಲೇ ನಮ್ಮ ಜೀವನದ ದೃಶ್ಯಗಳೆಲ್ಲವೂ ಹೊರಹೊಮ್ಮಿರುತ್ತವೆ, ಅದರಿಂದಲೇ ನಮ್ಮ ಅಂತಃಕರಣದ ಅದ್ಭುತವಾದ ಶಕ್ತಿಗಳೂ ಅಮೋಘವಾದ ವ್ಯಾಪಾರಗಳೂ ಉಂಟಾಗುತ್ತಿರುವವು.** ಆದರೆ ನಮ್ಮಲ್ಲಿ ಬಲುಮಂದಿ ಇದನ್ನರಿತುಕೊಳ್ಳದೆ **ಅಹಂತೆ** (ನಾನು) ಎಂಬ ಒಂದು ಸುಳ್ಳುಕೇಂದ್ರವನ್ನೇ ನಮ್ಮ ಜೀವನವೃತ್ತದ ಕೇಂದ್ರವೆಂದು ತಪ್ಪಾಗಿ ಭಾವಿಸಿಕೊಂಡಿರುವೆವು. ಈ ತಪ್ಪುಭಾವನೆಯಿಂದಲೇ ನಮ್ಮ ಜೀವನದಲ್ಲಿ ಇಷ್ಟೊಂದು ತೊಡರುಗಳು ತೋರಿಕೊಳ್ಳುತ್ತಿರುವವು.

ನಮ್ಮ ಜೀವನದಲ್ಲಿ ಕಾಣುವ ಎಡರುಗಳು ಮಾಯವಾಗಬೇಕಾದರೆ, ನಮ್ಮ ನಿತ್ಯವ್ಯವಹಾರವು ದುಃಖಮಯವಾಗಿ ತೋರುವದು ಹೋಗಿ ಎಲ್ಲೆಲ್ಲಿಯೂ ಸುಖವೇ ಸುಳಿದಾಡುತ್ತಿರಬೇಕಾದರೆ, ನಮ್ಮ ಅಂತಃಕರಣದ ಭಾವನೆಗಳೆಲ್ಲ ನಮ್ಮ ನಿಜವಾದ

ಕೇಂದ್ರನಾದ ಪರಮಾತ್ಮನಿಗೆ ಸಂಬಂಧಿಸಿಕೊಳ್ಳಬೇಕು. ನಮ್ಮಲ್ಲಿ ಒಬ್ಬೊಬ್ಬನಿಗೂ ಒಂದೊಂದು ಕೇಂದ್ರವಿರುವದೆಂದು ತಿಳಿಯುವದು ತಪ್ಪು. ನಾನು ಎಂಬ ಹುಸಿಕೇಂದ್ರವನ್ನು ನಾವು ಭಾವಿಸಿರುವವರೆಗೂ ನಮ್ಮಗಳಲ್ಲಿ ಒಬ್ಬೊಬ್ಬರ ಧ್ಯೇಯವು ಒಂದೊಂದು ಬೇರೆಬೇರೆಯಾಗಿರುವಂತೆ ತೋರುತ್ತಿರುವದು. ಒಬ್ಬರ ಸುಖಕ್ಕೆ ಕಾರಣವಾದದ್ದು ಮತ್ತೊಬ್ಬರ ದುಃಖಕ್ಕೆ ಕಾರಣವಾಗಿರುವಂತೆ ತೋರುತ್ತಿರುವದು. ಆಸೆ, ಸಿಟ್ಟು, ಅಂಜಿಕೆ, ಕಿರಿಕಿರಿ, ಗುಟ್ಟಿನ ಆಲೋಚನೆಗಳು, ಪೈಪೋಟಿ, ಮಾಯೆ, ಮೋಸ, ಕೇಡುಬಗೆಯುವದು, ಕಳವಳ, ದುಃಖ–ಇವೆಲ್ಲವೂ **ನಾನು** ಎಂಬ ಹುಸಿಕೇಂದ್ರವನ್ನೇ ನಮ್ಮ ಕೇಂದ್ರವೆಂದು ತಪ್ಪಾಗಿ ನೆಚ್ಚಿಕೊಂಡಿರುವದರ ಫಲವಾಗಿರುತ್ತವೆ. ಆದರೆ ಪರಮಾರ್ಥವೇನೆಂದರೆ ಮಾನವರೆಲ್ಲರಿಗೂ–ಅಥವಾ ಮಾನವರಿಗೇ ಏಕೆ? ಜೀವರೆಲ್ಲರಿಗೂ–ಒಂದೇ ಒಂದು ನಿಜವಾದ ಕೇಂದ್ರವಿರುತ್ತದೆ. ಈ ಭೂತಗಳೆಲ್ಲವೂ ಆ ಕೇಂದ್ರದಿಂದಲೇ ಬಂದಿರುತ್ತವೆ; ಆ ಕೇಂದ್ರವನ್ನೇ ಅವಲಂಬಿಸಿಕೊಂಡು ಜೀವಿಸುತ್ತಿವೆ; ಆ ಕೇಂದ್ರವನ್ನೇ ಸೇರಿ ಅದರಲ್ಲಿ ಒಂದಾಗಿ ನಲಿಯುವದೇ ಅವುಗಳ ಕಟ್ಟಕಡೆಯ ಗತಿಯಾಗಿರುತ್ತದೆ. ಆ ಕೇಂದ್ರವು ಆನಂದಸ್ವರೂಪವಾಗಿರುತ್ತದೆ. ಇದನ್ನರಿತರೆ ಸಂಸಾರದ ಅನರ್ಥಗಳೆಲ್ಲ ಕಣ್ಮರೆಯಾಗಿ ಬಿಡುತ್ತವೆ. ಆನಂದವು ನಮ್ಮ ಸ್ವಾಭಾವಿಕವಾದ ಸ್ವರೂಪವೆಂಬ ಅರಿವು ನಿಶ್ಚಿತವಾಗಿ ಉಂಟಾಗಿಬಿಡುತ್ತದೆ.

ಇಡಿಯ ಸೃಷ್ಟಿಯೆಲ್ಲವೂ ಆನಂದರೂಪನಾದ ಪರಮಾತ್ಮನಿಂದಲೇ ಹೊರ ಹೊಮ್ಮಿರುತ್ತದೆ. ಆದ್ದರಿಂದಲೇ ಸೃಷ್ಟಿಯೆಲ್ಲವೂ ಆನಂದಮಯವಾಗಿರುತ್ತದೆ. ಇಲ್ಲಿ ಯಾವ ದುಃಖಕ್ಕೂ ಅವಕಾಶವೇ ಇರುವದಿಲ್ಲ. ಹಾಗಾದರೆ ನಮ್ಮ ಹೊರಗಿನ ಜೀವನದಲ್ಲಿ ಅವ್ಯವಸ್ಥೆಯೂ ದುಃಖವೂ ಕಾಣುತ್ತಿರುವವಲ್ಲ, ಇದಕ್ಕೆ ಕಾರಣವೇನು? ಎಂದು ಯಾರಾದರೂ ಕೇಳಬಹುದು. ಅದಕ್ಕೆ ತಿಳಿದವರೆಲ್ಲರೂ ಒಂದೇ ಉತ್ತರನ್ನು ಕೊಟ್ಟಿರುತ್ತಾರೆ. ನಾವು ನಮ್ಮ ಕೇಂದ್ರವು ಯಾವದೆಂಬುದರ ಕಡೆಗೆ ಚಿತ್ತವಿಟ್ಟಿಲ್ಲ; ಅದಕ್ಕೆ ಹೊಂದಿಕೆಯಾಗಿ ನಮ್ಮ ಅಂತಃಕರಣದಲ್ಲಿ ವೃತ್ತಿಗಳು ಏಳುತ್ತಿರುವದಿಲ್ಲ. ಹಾಡುವವನು, ಮದ್ದಳೆಯನ್ನು ಬಾರಿಸುವವನು, ಪಿಟೀಲುಬಾರಿಸುವವನು, ಕುಣಿಯುವವನು–ಇವರೆಲ್ಲರೂ ರಾಗತಾಳಗಳ ಹೊಂದಿಕೆಯಿಂದ ತಮ್ಮತಮ್ಮ ಭಾಗದ ಕೆಲಸವನ್ನು ನೆರವೇರಿಸಿದರೆ ಮನ ಮೋಹಕವಾದ ಆಹ್ಲಾದಕರವಾದ ಪ್ರದರ್ಶನವಾಗುವದು. ಉತ್ತಮವಾದ ಕಂಠದಿಂದ ಇಂಪಾಗಿ ಹಾಡುತ್ತಿರುವದು, ಆ ಕಂಠದ ಶ್ರುತಿಗೆ ತಕ್ಕಂತೆ ಪಿಟೀಲು ಧ್ವನಿಗೈಯುತ್ತಿರುವದು, ಹಾಡುಗಾರಿಕೆ ಮತ್ತು ಪಿಟೀಲು–ಇವುಗಳನ್ನನುಸರಿಸಿಯೇ ಶ್ರುತಿಗೂಡಿ ತಾಳಕ್ಕೆ ಕೂಡುವಂತೆ ಮೃದಂಗವನ್ನು ಬಾರಿಸುವದು, ಇವೆಲ್ಲವನ್ನೂ ಅನುಸರಿಸಿಯೇ ನರ್ತನಮಾಡುವದು– ಹೀಗೆ ನಡೆಯುತ್ತಿರುವ ಸಂಗೀತವು ಸಭಿಕರಿಗೆ ಸ್ವರ್ಗಸುಖದ ಸ್ಮರಣೆಯನ್ನು

ತಂದುಕೊಡುತ್ತಿರುವದು. ಆದರೆ ಈ ಕೂಟದಲ್ಲಿ ಶ್ರುತಿಯು ತಪ್ಪಿದರೆ, ತಾಳವು ಹೊಂದಿಕೆಯಾಗದಿದ್ದರೆ, ಯಾರಿಗೂ ಈ ಪ್ರದರ್ಶನವು ಬೇಕಿಲ್ಲವಾಗುವದು. ಅಲ್ಲವೆ? ಇದರಂತೆ ನಮ್ಮಗಳ ಜೀವನವು ಪರಮಾತ್ಮನ ಸೃಷ್ಟಿಯ ನಿಯಮಕ್ಕೆ ಹೊಂದುಗೆಯಾಗಿರುವವರೆಗೂ ಆನಂದಮಯವಾಗಿರುತ್ತದೆ. ಆದರೆ ತಾಳಮೇಳವಿಲ್ಲದ ಜೀವನವು ಅವ್ಯವಸ್ಥಿತವಾಗಿರುವದರಿಂದ ನಮಗಾಗಲಿ ನಮ್ಮ ಸುತ್ತಲಿನವರಿಗಾಗಲಿ ಒಪ್ಪಾಗದೆ ಇರುತ್ತದೆ. ಇದನ್ನೇ ನಾವು ಸಂಸಾರದ ಅನರ್ಥಗಳು ಎಂದು ಕರೆಯುವೆವು.

ನಮ್ಮ ಜೀವನವು ಪರಮಾತ್ಮನ ಸೃಷ್ಟಿನಿಯಮಕ್ಕೆ ಹೊಂದುಗೆಯಾಗಿರಲಿ ಇಲ್ಲದಿರಲಿ, ಸೃಷ್ಟಿಯ ನಿಯಮವೇನೋ ವ್ಯವಸ್ಥೆಯಿಂದಲೇ ನಡೆಯುತ್ತಿರುವದು. ಬೆಂಕಿಯು ಸುಡುತ್ತದೆ ಎಂಬ ನಿಯಮವನ್ನು ಅರಿತು ಮಾನವನು ಅದನ್ನು ಸದುಪಯೋಗ ಮಾಡಿಕೊಂಡರೂ ಅದನ್ನು ಅರಿತುಕೊಳ್ಳದೆ ದುರುಪಯೋಗಮಾಡಿಕೊಂಡು ದುಃಖ ಪಡುತ್ತಿದ್ದರೂ ಬೆಂಕಿಯು ಒಂದೇ ಸಮನಾಗಿ ಸುಡುತ್ತಲೇ ಇರುತ್ತದೆ. ಅಲ್ಲವೆ? ಇದರಂತೆ ನಾವು ಸೃಷ್ಟಿನಿಯಮಗಳನ್ನು ಅರಿತುಕೊಂಡು ಅದಕ್ಕೆ ತಕ್ಕಂತೆ ನಮ್ಮ ಮನಃಸ್ಥಿತಿಯನ್ನು ಮಾಡಿಕೊಂಡರೂ ಮಾಡಿಕೊಳ್ಳದೆ ಇದ್ದರೂ ನಿಮಯಗಳೇನೋ ವ್ಯವಸ್ಥೆಯಿಂದಲೇ ಸಾಗಿರುತ್ತವೆ. ಪ್ರಪಂಚದಲ್ಲಿ ನಾವೇನೂ ಹೊಸದಾಗಿ ವ್ಯವಸ್ಥೆಯನ್ನು ಸೃಷ್ಟಿಮಾಡಬೇಕಾಗಿರುವದಿಲ್ಲ; ಅನಾದಿಕಾಲದಿಂದಲೂ ಇದ್ದುಕೊಂಡಿರುವ, ಈಗಲೂ ಇರುವ, ಮುಂದೆಯೂ ಎಂದೆಂದಿಗೂ ಇದೇ ರೀತಿಯಿಂದ ಇರುವ, ದೈವ ನಿಯಮಕ್ಕೆ ನಾವು ಹೊಂದಿಕೆಯಾಗಿ ವರ್ತಿಸುವದನ್ನು ಕಲಿತುಕೊಳ್ಳಬೇಕು. ಅಷ್ಟೆ

ನಮ್ಮ ಪರಮಾರ್ಥಕೇಂದ್ರಕ್ಕೆ ನಾವು ಸೇರಿಕೊಳ್ಳುವದಕ್ಕೆ ಒಂದೇ ಒಂದು ಉಪಾಯವಿರುತ್ತದೆ. ನಮ್ಮ ಅಂತಃಕರಣದಲ್ಲಿರುವ ದುರ್ಭಾವನೆಗಳು ಹೋಗಿ ಸದ್ಭಾವನೆಗಳು ಮೂಡುವಂತೆ ಪ್ರಯತ್ನವನ್ನು ಮಾಡುತ್ತಿರಬೇಕು. ಸದ್ಭಾವನೆಗಳೆಂದರೆ ಸತ್ಯ, ಧರ್ಮ, ದಾನ, ಪರೋಪಕಾರ–ಮುಂತಾದ ನೈತಿಕಭಾವನೆಗಳು. ಈ ಭಾವನೆಗಳಿಗೆಲ್ಲ ಮೂಲವು ಪರಮಾತ್ಮನೇ ಆಗಿರುವದರಿಂದ ಪರಮಾತ್ಮ ವಿಷಯಕವಾದ ಭಾವನೆಗಳನ್ನು ಬಿಡದೆ ಅಂತಃಕರಣದಲ್ಲಿ ನೆಲೆಗೊಳಿಸುವ ಪ್ರಯತ್ನವನ್ನು ನಾವು ತಪ್ಪದೆ ಮಾಡಬೇಕು.

ಅಮಾನ್ವಿತ, ಅದಂಭಿತ್ವ, ಅಹಿಂಸಾ, ಕ್ಷಾಂತಿ, ಆರ್ಜವ–ಮುಂತಾದ ಯುಕ್ತ ಭಾವನೆಗಳನ್ನು ನಾವು ಅಂತಃಕರಣದಲ್ಲಿಟ್ಟುಕೊಂಡಂತೆಲ್ಲ ಹೆಮ್ಮೆ, ದಂಭ, ಹಿಂಸೆ, ಸೇಡುತೀರಿಸಿಕೊಳ್ಳುವದು, ಕಪಟ–ಮುಂತಾದ ಅಯುಕ್ತಭಾವನೆಗಳು ಹಾರಿಹೋಗುವವು; ಆಶಯದಲ್ಲಿ ಯುಕ್ತಭಾವನೆಗಳು ಬೇರೂರಿಕೊಳ್ಳುವವು. ನಮ್ಮ ಹೊರಗಿನ ಜೀವನದಲ್ಲಿಯೂ ಧೈರ್ಯ, ಉಲ್ಲಾಸ–ಮುಂತಾದವುಗಳು ತೋರಿಕೊಳ್ಳುವವು. ಆದರೆ ನಾವು ಯುಕ್ತಭಾವನೆಗಳನ್ನು ಮಾಡಿಕೊಳ್ಳಬೇಕಾದರೆ ನಮ್ಮ ಅಂತಃಕರಣಕ್ಕೆ ಆ ಭಾವನೆಗಳನ್ನು

ಬಿಡದೆ ಅಭ್ಯಾಸಮಾಡುವಷ್ಟು ಬಲವು ಬರಬೇಕು. ಅಂಥ ಬಲವು ನಮಗೆ ಮೂಲಕೇಂದ್ರವಾಗಿರುವ ಪರಮಾತ್ಮನಿಂದಲೇ ಬರಬೇಕು. ಆದ್ದರಿಂದ ಅಂತಃಕರಣಕ್ಕೆ ಆ ಭಾವನೆಗಳನ್ನು ಬಿಡದೆ ಅಭ್ಯಾಸ ಮಾಡುವಷ್ಟು ಬಲವು ಬರಬೇಕು. ಆದ್ದರಿಂದ ನಮಗೆ ಮೂಲಕೇಂದ್ರವಾಗಿರುವ ಪರಮಾತ್ಮನಿಂದಲೇ ಬರಬೇಕು. ಆದ್ದರಿಂದ ಅಂತಃಕರಣಕ್ಕೆ ಪರಮಾತ್ಮಭಾವನೆಯ ಸವಿಯನ್ನು ಹತ್ತಿಸುವದೇ ಎಲ್ಲಕ್ಕೂ ಮೊಟ್ಟಮೊದಲು ನಾವು ಮಾಡಬೇಕಾದ ಅಧ್ಯಾತ್ಮಸಾಧನವೆಂದು ಏರ್ಪಡುತ್ತದೆ. 'ತನ್ಮೇ ಮನಃ ಶಿವಸಂಕಲ್ಪಮಸ್ತು' (ಆದ್ದರಿಂದ ನನ್ನ ಮನಸ್ಸು ಶಿವಸಂಕಲ್ಪವುಳ್ಳದ್ದಾಗಲಿ) ಎಂದು ಅಡಿಗಡಿಗೂ ಹೇಳಿಕೊಳ್ಳಿರಿ. ನಿಮ್ಮ ಮನಸ್ಸು ಶಿವಸಂಕಲ್ಪಗಳನ್ನು-ಯುಕ್ತಭಾವನೆಗಳನ್ನು ಮಾಡಿಕೊಳ್ಳಬೇಕಾದರೆ ಮೊಟ್ಟಮೊದಲು ಅದು ಶಿವ ಸಂಕಲ್ಪವನ್ನು-ಶಿವರೂಪನಾದ ಪರಮಾತ್ಮನೇ ನಮ್ಮೆಲ್ಲರ ಕೇಂದ್ರವು ಎಂಬ ಸಂಕಲ್ಪವನ್ನು-ಅಭ್ಯಾಸಮಾಡಲಿ.

ಅಂತಃಕರಣದಲ್ಲಿ ವಸ್ತುವನ್ನು ಅರಿಯುವ ಶಕ್ತಿ, ವಸ್ತುವನ್ನು ಕಲ್ಪಿಸಿಕೊಂಡು ಭಾವಿಸುವ ಶಕ್ತಿ-ಎಂದು ಮುಖ್ಯವಾಗಿ ಎರಡು ಬಗೆಯ ಶಕ್ತಿಗಳಿರುತ್ತವೆ. ವಸ್ತುವನ್ನು ವಿಚಾರ ಪೂರ್ವಕವಾಗಿ ಅರಿತು ನಿಶ್ಚಯಿಸುವದು, ನಿಶ್ಚಯಿಸಿದ್ದನ್ನು ಮತ್ತೆಮತ್ತೆ ನೆನಪಿಗೆ ತಂದುಕೊಂಡು ಅದನ್ನೇ ಹೊರಳಿಸುತ್ತಿರುವದು, ಮುಂದೆ ಸಂಭವಿಸಬಹುದಾದದ್ದನ್ನು ಕಲ್ಪಿಸಿಕೊಂಡು ಅದರ ಚಿಂತೆಯನ್ನು ಹತ್ತಿಸಿಕೊಳ್ಳುವದು-ಇವೆಲ್ಲವನ್ನೂ ಈ ಎರಡು ಶಕ್ತಿಗಳಲ್ಲಿಯೇ ಅಡಕಮಾಡಿಬಿಡಬಹುದಾಗಿ ರುತ್ತದೆ. ವಿಷಯಗಳನ್ನು ಇಂದ್ರಿಯಗಳ ಮೂಲಕವಾಗಿ ಅರಿಯುವದು, ಅರಿತ ವಿಷಯಗಳ ಸ್ವಭಾವವನ್ನು ಕುರಿತು ಚಿಂತಿಸುತ್ತಿರುವದು, ಅವುಗಳು ಹೀಗಿದ್ದರೆ ಸರಿ, ಹೀಗಿದ್ದರೆ ಸರಿಯಲ್ಲ ಎಂದು ಕಲ್ಪಿಸಿಕೊಳ್ಳುತ್ತಿರುವದು, ಮುಂದಕ್ಕೆ ನಮಗೆ ಇಂಥಿಂಥ ವಿಷಯಗಳ ಸಂಯೋಗವಾದೀತು ಅಥವಾ ವಿಯೋಗವಾದೀತು ಎಂದು ನಿರೀಕ್ಷಿಸಿಕೊಂಡು ಹಿಗ್ಗುವದು ಅಥವಾ ಕುಗ್ಗುವದು-ಈ ಬಗೆಯ ಮನೋವ್ಯಾಪಾರಗಳು ನಮ್ಮೆಲ್ಲರ ಅನುಭವದಲ್ಲಿಯೂ ಇರುತ್ತವೆ. ಆದರೆ ನಮ್ಮೊಳಗೆ ಒಂದು ಕೇಂದ್ರರೂಪವಾದ ಪರಮಾರ್ಥತತ್ತ್ವವು ಇದೆಯೆಂದೂ ಅದನ್ನು ಅರಿತುಕೊಂಡರೇ ಎಲ್ಲವನ್ನೂ ಅರಿತಂತೆ ಆಯಿತೆಂದೂ ತಿಳಿಯುವವರಾಗಲಿ, ಅದನ್ನು ಕುರಿತು ಸತತವಾಗಿ ಚಿಂತಿಸುವ ಹಂಬಲುಳ್ಳವರಾಗಲಿ, ತೀರ ವಿರಳರಾಗಿರುತ್ತಾರೆ. ಇದಕ್ಕೆ ಕಾರಣವೇನೆಂದರೆ ನಾವು ಹಿಂದೆ ಹೇಳಿರುವ ಅಹಂತೆಯೇ. ಅಹಂತೆಯಿಂದಲೇ ನಾವು ಶರೀರಕ್ಕೆ ಬೇಕಾದ ಭೋಗಸಾಮಗ್ರಿಗಳ ಚಿಂತೆಯನ್ನು ಹತ್ತಿಸಿಕೊಂಡು ಪರಮಾರ್ಥವನ್ನು ಅರಿಯದೆ ಇರುವೆವು.

ಮನಸ್ಸು, ಬುದ್ಧಿ, ಚಿತ್ತ, ಅಹಂಕಾರ ಇವೆಲ್ಲವೂ ಅಂತಃಕರಣಕ್ಕೆ ಹೆಸರುಗಳು. ಮನನ ಮಾಡುತ್ತಿರುವದರಿಂದ ಮನಸ್ಸೆಂದೂ ಮನನಮಾಡಿದ ಬಳಿಕ ವಿಷಯವನ್ನು

ಹೀಗೆಂದು ಅರಿತುಕೊಳ್ಳುವದರಿಂದ ಬುದ್ಧಿಯೆಂದೂ ಇದಕ್ಕೆ ಹೆಸರುಗಳು ಬಂದಿರುತ್ತವೆ. ಸಾಮಾನ್ಯವಾಗಿ ಅರಿಯುವದರಿಂದ ಮತ್ತು ಅರಿಯುವದಕ್ಕೆ ಬಗೆಬಗೆಯ ವೃತ್ತಿಗಳನ್ನು ಎಬ್ಬಿಸುತ್ತಿರುವದರಿಂದ ಇದನ್ನು ಚಿತ್ತವೆಂದು ಕರೆಯುತ್ತಾರೆ. 'ನಾನು' ಎಂಬ ಅಭಿಮಾನದ ರೂಪವನ್ನು ತಾಳುವದರಿಂದ ಇದನ್ನು ಅಹಂಕಾರವೆನ್ನುವರು. ಈ ಯಾವ ಹೆಸರುಗಳನ್ನಾದರೂ ನಾವು ಸಂದರ್ಭಾನು ಸಾರವಾಗಿ ಉಪಯೋಗಿಸುತ್ತಿರುವೆವು. ಈ ಶಬ್ದಗಳಿಗೆಲ್ಲ ಅಂತಃಕರಣವೆಂದೇ ಅರ್ಥವನ್ನು ಮಾಡಿಕೊಳ್ಳಬೇಕೆಂದು ಇಲ್ಲಿ ನೆನಪಿಗೆ ತಂದು ಮುಂದಿನ ವಿಚಾರಕ್ಕೆ ಪ್ರವೇಶವನ್ನು ಮಾಡಿಸುವೆವು. ಮನಸ್ಸೆಂಬುದು ಇಂದ್ರಿಯಗಳ ಅರಿವನ್ನು ತನ್ನಲ್ಲಿಯೇ ಹೊರಳಿಸುತ್ತಿರುವದರಿಂದ ಅದರ ಚಿಂತೆಯೇ ಅದಕ್ಕೆ ಹೆಚ್ಚಾಗಿ ಇರುತ್ತದೆ. ಆದರೆ ಪರಮಾರ್ಥತತ್ತ್ವದ ಚಿಂತೆಯನ್ನು ಬಿಟ್ಟರೆ 'ಅಹಂತೆ'ಯ ಚಿಂತೆಯೇ ಅದಕ್ಕೆ ಸ್ವಾಭಾವಿಕ ವಾಗಿರುವದರಿಂದ ಪರಮಾರ್ಥಚಿಂತೆಯಿಂದ ಮೇಲಕ್ಕೇರುವದಕ್ಕಾಗಲಿ ವಿಷಯಚಿಂತೆಯಿಂದ ಕೆಳಕ್ಕೆ ಇಳಿಯುವದಕ್ಕಾಗಲಿ ಮಾನವನಿಗೆ ಮನಸ್ಸು ಒಂದು ನಿಚ್ಚಣಿಗೆಯಂತಾಗಿರುವದೆಂದು ಹೇಳಬಹುದಾಗಿದೆ. ಪರಮಾತ್ಮನನ್ನು ಚಿಂತಿಸಿ ಉದ್ಧಾರವಾಗುವದೂ ಅವನನ್ನು ಅಸಡ್ಡೆಮಾಡಿ ನಾಶವಾಗುವದೂ ನಮ್ಮ ಕೈಯಲ್ಲಿರುತ್ತದೆ. ವಿಷಯಗಳ ಚಿಂತೆಯನ್ನು ಮಾಡಿದಹಾಗೆಲ್ಲ ಮನಸ್ಸು ಭಾರವಾಗಿ ನಮ್ಮನ್ನು ಕರೆಕರೆಯ, ಅವ್ಯವಸ್ಥೆಯ, ದುಃಖದ ಬೀಡಿಗೆ ಎಳೆದುಕೆಡುಹುತ್ತದೆ. ಪರಮಾತ್ಮನ ಚಿಂತೆಯನ್ನು ಮಾಡಿದಂತೆಲ್ಲ, ನಾವೂ ಪರಮಾತ್ಮನ ಸಾಮೀಪ್ಯವನ್ನೂ ಸಾರೂಪ್ಯವನ್ನೂ ಹೊಂದುತ್ತಾ ಈಶ್ವರನಲ್ಲಿ ಪರಿಪೂರ್ಣವಾಗಿರುವ ಧರ್ಮ, ಜ್ಞಾನ, ವೈರಾಗ್ಯ, ಆನಂದ-ಮುಂತಾದವುಗಳಲ್ಲಿ ಹೆಚ್ಚು ಹೆಚ್ಚು ಭಾಗಕ್ಕೆ ಪಾಲುದಾರರಾಗುತ್ತಾ ಹೋಗುವೆವು. ನಮ್ಮ ಮನಸ್ಸು ಭಗವಂತನಿಗೆ ಸಂಬಂಧಪಟ್ಟಂತೆಲ್ಲ ಸ್ವಚ್ಛವಾಗುತ್ತಾ ಹೋಗುವದು. ಮನಸ್ಸು ಸ್ವಚ್ಛವಾದಂತೆಲ್ಲ ನಮಗೆ ಅಧ್ಯಾತ್ಮ ಪ್ರಪಂಚದ ತತ್ತ್ವಗಳು ಹೆಚ್ಚುಹೆಚ್ಚು ವಿಶದವಾಗುವವು, ಬ್ರಹ್ಮಾನಂದದ ಅನುಭವವೂ ಹೆಚ್ಚು ಹೆಚ್ಚಾಗಿ ವಶವಾಗುವದು.

ಮನಸ್ಸನ್ನು ಪರಮಾತ್ಮನಿಗೆ ಸಂಬಂಧಿಸುವದು ಹೇಗೆ ? ಎಂದರೆ ಅದಕ್ಕೆ ಅನೇಕ ಉಪಾಯಗಳಿವೆ. ಎಲ್ಲಕ್ಕೂ ಮೊದಲು ಪ್ರತಿದಿನವೂ ಕ್ಲಿಪ್ತಕಾಲದಲ್ಲಿ ಭಗವಂತನನ್ನು ಪ್ರಾರ್ಥನೆ, ಸ್ತೋತ್ರ, ಕೀರ್ತನೆ-ಇವುಗಳಿಂದ ಆರಾಧಿಸಬೇಕು. ಹೊರಗೆ ಅರ್ಚನೆ, ಭಗವತ್ಕರ್ಮ-ಇವುಗಳಿಂದ ಆರಾಧಿಸಬೇಕು. ಕೆಲವು ದಿನಗಳ ತರುವಾಯ ಮಾನಸಪೂಜೆ, ಮಂತ್ರಜಪ, ನಾಮಸ್ಮರಣೆ-ಮುಂತಾದವುಗಳನ್ನ ಅವಲಂಬಿಸಬಹುದು. ಇವುಗಳೂ ವಶವಾದರೆ ದೀರ್ಘ ಕಾಲದವರೆಗೆ ಭಗವನ್ನಾಮವನ್ನು ಮಾಡುವ ಪದ್ಧತಿಯನ್ನು ಇಟ್ಟುಕೊಳ್ಳಬಹುದು. ಆಮೇಲೆ ಹೊರಗೆ ಕಾಣುವದರಲ್ಲೆಲ್ಲ ಭಗವದ್ವಿಭೂತಿಯನ್ನು ಚಿಂತಿಸುವ ಪದ್ಧತಿಯನ್ನು ಆಚರಣೆಗೆ ತರಬಹುದು. ಇಲ್ಲಿ ಹೇಳಿರುವ ಸಾಧನಗಳನ್ನು ಹೀಗೆ ಒಂದೊಂದಾಗಿ ಮಾಡುವದಕ್ಕೆ

ಬೇಸರವಾದವರು ಒಂದೇ ಸಲಕ್ಕೆ ಇವುಗಳೆಲ್ಲವನ್ನೂ ಯಥಾ ಶಕ್ತಿಯಾಗಿ ಬರೆಯಿಸಿಕೊಂಡು ಸಾಧನವನ್ನು ಮಾಡಲೂ ಬಹುದು. ಹೇಗೇ ಆಗಲಿ, ನಮ್ಮಲ್ಲಿರುವ ಅಹಂತೆ ಎಂಬ ಹುಸಿ ಕೇಂದ್ರವನ್ನು ಬಿಟ್ಟು ನಿಜವಾದ ಪರಮಾತ್ಮ ಕೇಂದ್ರವನ್ನು ಮುಟ್ಟುವದೇ ಗುರಿ ಎಂಬುದನ್ನು ಮಾತ್ರ ಮರೆಯಬಾರದು. ಮನಸ್ಸು, ವಾಕ್ಕು, ಕರ್ಮ–ಇವುಗಳು ಮೂರರ ವ್ಯಾಪಾರವೂ ಎಂದಿಗೆ ಪರಮಾತ್ಮನಿಗೇ ಸಂಬಂಧಪಡುವವೋ, ಪರಮಾತ್ಮನ ಚಿಂತೆಯಿಲ್ಲದ ಲೌಕಿಕಜೀವನ ವೆಂಬುದೇ ನಮ್ಮ ಭಾಗಕ್ಕೆ ಎಂದಿಗೆ ಇಲ್ಲವಾಗುವದೋ, ಆಗ್ಗೆ ಮನಸ್ಸು ಸಂಪೂರ್ಣವಾಗಿ ಪರಮಾತ್ಮನಿಗೆ ಸಂಬಂಧಿಸಿದಂತೆ ಆಯಿತು. ಸಾಮಾನ್ಯವಾಗಿ ಯಾವನೊಬ್ಬ ಸಾಧಾರಣ ಜೀವನೂ ನನ್ನ ಮನಸ್ಸು ಸಂಪೂರ್ಣವಾಗಿ ಪರಮಾತ್ಮನಿಗೆ ಸಂಬಂಧಿಸಿದಂತೆ ಆಯಿತು. ಸಾಮಾನ್ಯವಾಗಿ ಯಾವನೊಬ್ಬ ಸಾಧಾರಣಜೀವನೂ ನನ್ನ ಮನಸ್ಸು ಸಂಪೂರ್ಣವಾಗಿ ಪರಮಾತ್ಮನಿಗೇ ಸಂಬಂಧಿಸಿಬಿಟ್ಟಿದೆಯೆಂದು ಹೇಳುವ ಎದೆಯುಳ್ಳವನಾಗಲಾರನು. ಎಲ್ಲಿಯೋ ಕೆಲವರು ಮಹಾತ್ಮರು ಮಾತ್ರ ಈ ಭೂಮಿಕೆಗೆ ಏರಬಹುದು. ಆದ್ದರಿಂದಲೇ ಶಾಸ್ತ್ರದಲ್ಲಿ ಪರಮಾತ್ಮನ ಧ್ಯಾನವನ್ನು ಉಪಾಸಕರು ಶರೀರದಲ್ಲಿ ಪ್ರಾಣವಾಯುವಿರುವವರೆಗೂ ಮಾಡುತ್ತಲೇ ಇರುವರೆಂದು ಹೇಳಿರುತ್ತದೆ.

ವ್ಯವಹಾರದೃಷ್ಟಿಯಿಂದ ನೋಡಿದರೆ ನಾವೆಲ್ಲರೂ ಜೀವಾತ್ಮರು, ಪ್ರಾಣ ಧಾರಣೆಯನ್ನು ಮಾಡಿಕೊಂಡು ಶರೀರದಲ್ಲಿ ವ್ಯವಹಾರವನ್ನು ಮಾಡುತ್ತಿರುವ ಜಂತುಗಳು. ಶಾಸ್ತ್ರದೃಷ್ಟಿಯಿಂದ ನೋಡಿದರೆ ಪರಮಾತ್ಮನೊಬ್ಬನೇ ಈ ಜಗತ್ತೆಲ್ಲವನ್ನೂ ಸೃಷ್ಟಿಸಿ ಇದರೊಳಗಿರುವ ಪ್ರಾಣಿಗಳಲ್ಲೆಲ್ಲ ಪ್ರವೇಶಮಾಡಿರುತ್ತಾನೆ. ಆಕಾಶದಲ್ಲಿ ಬೆಳಗುತ್ತಿರುವ ಸೂರ್ಯನೇ ಭೂಮಿಯಲ್ಲಿ ಬೇರೆಬೇರೆಯ ಕಡೆಗಳಲ್ಲಿರುವ ಕೆರೆ, ಕುಂಟೆ, ನದಿ, ಸರೋವರ, ಕೊಲ್ಲಿ, ಖಾರಿ, ಸಮುದ್ರ–ಮುಂತಾದ ಜಲಾಶಯಗಳಲ್ಲಿ ಬಗೆಬಗೆಯಾಗಿ ಪ್ರತಿಬಿಂಬಿಸಿರುವಂತೆ ಅತ್ಯಂತ ಸ್ವಚ್ಛನಾದ, ಅಸಂಗನಾದ, ಸತ್ಯಜ್ಞಾನಾನಂದಸ್ವರೂಪನಾದ ಪರಮಾತ್ಮನೇ ಜೀವರುಗಳ ಅಂತಃಕರಣಗಳಲ್ಲೆಲ್ಲ ಪ್ರತಿಬಿಂಬಿಸಿರುತ್ತಾನೆಂದು ಶಾಸ್ತ್ರಗಳು ಸಾರುತ್ತಿವೆ. ಸಾರದೃಷ್ಟಿಯಿಂದ ನೋಡಿದರೆ ಜೀವನೂ ಪರಮಾತ್ಮನೂ ಒಂದೇ ಒಂದು ತತ್ತ್ವವಾಗಿದ್ದರೂ ಈಗಿರುವ ದೃಷ್ಟಿಯಿಂದ ಜೀವನಿಗೂ ಪರಮಾತ್ಮನಿಗೂ ಬಹಳ ಅಂತರವಿರುತ್ತೆ. ಜೀವನು ತನ್ನ ಪರಮಾರ್ಥವಾದ ಆತ್ಮನಾಗಿರುವ ಪರಮಾತ್ಮನನ್ನು ಸೇರಿ ಸುಖಿಸಬೇಕಾದರೆ ಅವನಿಗೆ ಸಿಕ್ಕಿರುವ ಒಂದೇ ಒಂದು ಉಪಾಯವೆಂದರೆ ಪರಮಾತ್ಮನ ವಿಷಯದ ವಾಕ್ಯಗಳನ್ನು ಶಾಸ್ತ್ರದಿಂದಲೂ ದೊಡ್ಡವರಿಂದಲೂ ಕೇಳಿ ತಿಳಿದುಕೊಂಡು ಅವುಗಳ ಅರ್ಥವನ್ನೇ ಚಿಂತಿಸುತ್ತಿರುವದು. ಈ ಉಪಾಯದಿಂದ ಅವನು ಪರಮಾತ್ಮನನ್ನು ಜ್ಞಾನದಿಂದ ಈ ಜನ್ಮದಲ್ಲಿಯೇ ಇಲ್ಲಿಯೇ ತನ್ನ ಆತ್ಮನೆಂದು ಕಂಡುಕೊಳ್ಳಲೂ ಬಹುದು. ಅಥವಾ ಅದಾಗದಿದ್ದರೆ ಪರಮಾತ್ಮಭಾವನೆಯಿಂದ

ಜೀವನವನ್ನೆಲ್ಲ ಸುಖಮಯವಾಗಿ ಮಾಡಿಕೊಂಡು ಬಾಳಿ ಕೊನೆಗೂ ಪರಮಾತ್ಮ ಸಾಯುಜ್ಯವನ್ನೇ ಹೊಂದಲೂಬಹುದು. ಬ್ರೌನಿಂಗ್ ಎಂಬ ಆಂಗ್ಲಕವಿಯೊಬ್ಬನು ಹಾಡಿರುವದನ್ನು ಕೇಳಿ :

Truth is within ourselves ; it takes no rise
From outward things whate'er you may believe.
There is an inmost centre in us all,
Where truth abides in fulness ; and around
Wall upon wall, the gross flesh hems it in,
This perfect, clear perception-which is truth
A baffling and perverting carnal mesh
Binds it, and makes all error ; and to know
Rather consists in opening out a way
Whence the imprisoned splendour may escape,
Than in effecting entry for a light
Supposed to be without.

'ಪರಮಾರ್ಥವು ನಮ್ಮೊಳಗೇ ಇದೆ ; ನೀವು ಏನೇ ಹೇಳಿರಿ, ಅದು ಬಾಹ್ಯ ವಸ್ತುಗಳಿಂದ ಉಂಟಾಗುವದಿಲ್ಲ. ನಮ್ಮೊಳಗೆಲ್ಲ ಒಂದು ಸರ್ವಾಂತರ ಕೇಂದ್ರವಿದೆ; ಅದರಲ್ಲಿ ಪರಮಾರ್ಥವು ಪೂರ್ಣವಾಗಿ ನೆಲಸಿರುತ್ತದೆ. ಈ ಪರಮಾರ್ಥವೆಂಬ ಪೂರ್ಣಜ್ಞಾನವನ್ನು ಸುತ್ತಲೂ ಕೋಟೆಕೋಟೆಯಾಗಿ ಮಾನವನ ಸಾಂಸಾರಿಕ ಭಾವನೆಯು ಮುಚ್ಚಿಕೊಂಡಿರುತ್ತದೆ. ಮಹಾ ಮೋಹಕವಾದ ವಿಪರೀತಜ್ಞಾನವಾದ ವೈಷಯಿಕ ಜಾಲವೊಂದು ಅದನ್ನು ಬಂಧನದಲ್ಲಿಟ್ಟು ಕೊಂಡಿರುವದರಿಂದಲೇ ಅನರ್ಥವೆಲ್ಲವೂ ಆಗುತ್ತದೆ. ತತ್ತ್ವವನ್ನು ಅರಿತುಕೊಳ್ಳುವದೆಂದರೆ ಹೊರಗೆ ಎಲ್ಲಿಯೋ ಇದೆಯೆಂದು ಕಲ್ಪಿಸಿಕೊಂಡಿರುವ ಬೆಳಕು ಒಳಕ್ಕೆ ಬರುವದಕ್ಕೆ ದ್ವಾರವನ್ನು ಕಲ್ಪಿಸುವದಲ್ಲ; ಒಳಗೆ ಬಂಧನದಲ್ಲಿರುವ ಜ್ಞಾನಪ್ರಕಾಶವು ಹೊರಕ್ಕೆ ಬರುವದಕ್ಕೆ ಬಾಗಿಲನ್ನು ತೆರೆಯುವದೇ ಆಗಿರುತ್ತದೆ'.

# 11. ಎಲ್ಲ ಕಾಮಗಳ ಪರಿಪೂರ್ತಿ ಭಗವಂತನಿಂದಲೇ

* ನಮ್ಮ ನಡೆ, ನುಡಿ, ಮನಸ್ಸು–ಈ ಮೂರೂ ನಮ್ಮ ಇರವಿನ ಕೇಂದ್ರವಾದ ಪರಮಾತ್ಮನಿಗೆ ಸಂಬಂಧಿಸಿಕೊಳ್ಳುವಂತೆ ಪ್ರಯತ್ನಿಸುತ್ತಿರಬೇಕು. ಇದೇ ಅಧ್ಯಾತ್ಮ ಸಾಧನದ ಪರಮರಹಸ್ಯ. ಪರಮೇಶ್ವರನು ಈ ಜಗತ್ತಿಗೆ ಒಡೆಯನು ಎಂಬ ಭಾವನೆಯೊಂದೇ ಸಾಲದು; ಅವನು ಸರ್ವಜ್ಞನು, ಸರ್ವಶಕ್ತನು ಎಂಬ ಭಾವನೆಯೂ ಸಾಲದು; ಪರಮೇಶ್ವರನು ನಮ್ಮೆಲ್ಲರ ಆತ್ಮನು, ತತ್ತ್ವದೃಷ್ಟಿಯಿಂದ ನಾವುಗಳೆಲ್ಲರೂ ಆತನ ಅಂಶವೇ ಆಗಿರುವೆವು; ಆತನಿಗೂ ನಮಗೂ ಯಾವ ಅಂತರವೂ ಇಲ್ಲ ಎಂಬುದನ್ನು ಕಂಡುಕೊಂಡು ನಲಿಯುವದೇ ಜೀವನದ ಗುರಿ.

ಆದರೆ ನಾವು ಈಗಿರುವ ಸ್ಥಿತಿಯಲ್ಲಿ ನಾನು ಎಂಬುದೊಂದು ಹುಸಿಕೇಂದ್ರವನ್ನು ಪಟ್ಟಿನಿಂದ ಹಿಡಿದುಕೊಂಡು ಬಿಟ್ಟಿರುವೆವು. ಇದರಿಂದ ನಮಗೆ ಸಂಸಾರದ ಅನರ್ಥಗಳೆಲ್ಲ ಆಗುತ್ತಿರುವವು. ಈ ಹುಸಿಕೇಂದ್ರವನ್ನು ಕೈಬಿಟ್ಟಲ್ಲದೆ ನಮಗೆ ಪರಮಾತ್ಮನಲ್ಲಿ ಆಸರೆ ದೊರೆಯಲಾರದು; ಪರಮಾತ್ಮನಲ್ಲಿ ಇಂಬು ದೊರೆತ ಹೊರತು ನಮಗೆ ಹುಸಿಕೇಂದ್ರದ ಕಾಟವು ತಪ್ಪಲಾರದು. ಈ ಸ್ಥಿತಿಯಲ್ಲಿ ನಾವು ಏನು ಮಾಡಬೇಕು? ಸಾಧನವನ್ನು ಎಲ್ಲಿಂದ ಪ್ರಾರಂಭಿಸಬೇಕು?

ಈ ಪ್ರಶ್ನೆಗೆ ಉತ್ತರವನ್ನು ಋಷಿಗಳು ನಮಗೆ ಹೇಳಿರುವದೇನೆಂದರೆ– ಭಗವಂತನನ್ನು ಶರಣುಹೋಗುವದೇ ಎಲ್ಲಾ ಅನರ್ಥಗಳಿಗೂ ಪರಿಹಾರೋಪಾಯವು. ಭಗವಂತನಿಗಾಗಿಯೇ ಕರ್ಮವನ್ನು ಮಾಡಿರಿ, ಭಗವಂತನನ್ನೇ ಅರ್ಚಿಸಿರಿ, ಭಗವಂತನನ್ನೇ ನಮಸ್ಕರಿಸಿರಿ, ಭಗವಂತನ ನಾಮವನ್ನೇ ಸ್ಮರಿಸಿರಿ. ಹೀಗಾದರೆ ನಾನು ಎಂಬ ಹುಸಿ ಕೇಂದ್ರವು ಕ್ರಮಕ್ರಮವಾಗಿ ಕರಗಿಹೋಗುವದು, ಪರಮಾತ್ಮನ ಆನಂದವು ನಿಮ್ಮ ಹೃದಯದಲ್ಲಿ ಉಕ್ಕುವದು. ನಿಮ್ಮ ಜೀವನವು ಎಲ್ಲಾ ದೃಷ್ಟಿಯಿಂದಲೂ ಸುಖಮಯವಾಗುವದು.

ಆದರೆ ನಮ್ಮಲ್ಲಿ ಅನೇಕರಿಗೆ ವಿಷಯಗಳ ಆಶೆಯು ಪ್ರಬಲವಾಗಿರುವದು. ನಮಗೆ ಆರೋಗ್ಯವು ಬೇಕು, ಧನವು ಬೇಕು, ವಿದ್ಯೆಯು ಬೇಕು, ಪ್ರಜಾಸಂತತಿಯು ಬೇಕು, ಕೀರ್ತಿಯು ಬೇಕು. ಇಷ್ಟೆಲ್ಲ ಬೇಕುಗಳ ನಡುವೆ ನಮಗೆ ಭಗವಂತನ ಸ್ಮರಣೆಯು ಮನಸ್ಸಿಗೆ ಹತ್ತುವಹಾಗಿಲ್ಲ. ಕಸದಗುಡ್ಡೆಯ ಸುತ್ತಲೂ ಹಾರಾಡುವ ನೊಣಗಳಂತೆ ನಮ್ಮ ಮನಸ್ಸಿನ ವೃತ್ತಿಗಳು ಯಾವಾಗಲೂ ಒಂದೊಂದು ಇಷ್ಟ ವಿಷಯದ ಸುತ್ತಲೂ

* ಸಂಪುಟ 16, ಸಂಚಿಕೆ 11, ಜುಲೈ 1947, ಪುಟ 241–248

ಸುಳಿದಾಡುತ್ತಿರುವವು. ಹೀಗಿರುವಾಗ ನಾವು ಭಗವಂತನ ಕಡೆಗೆ ತಿರುಗುವದು ಹೇಗೆ? ಎಂಬ ಪ್ರಶ್ನೆಯು ಸಹಜವಾಗಿ ಎದ್ದುಕೊಳ್ಳುತ್ತದೆ. ಅದಕ್ಕೂ ಋಷಿಗಳು ಉತ್ತರವನ್ನು ಕೊಟ್ಟಿರುತ್ತಾರೆ. ನಮಗೆ ಜೀವನಕ್ಕೆ ಬೇಕಾಗುವ ವಿಷಯಗಳು, ಭೋಗಸಾಮಗ್ರಿಗಳು, ಬಹಳವಾಗಿಲ್ಲ. ಅವುಗಳು ಈಶ್ವರನ ಅನುಗ್ರಹದಿಂದ ದೊರೆಯುತ್ತಲೇ ಇರುವವು. ಆದರೆ ನಮ್ಮಲ್ಲಿ ಕೆಲವರು ದುರಾಶೆಯಿಂದ ಭೋಗಸಾಮಗ್ರಿಗಳನ್ನು ರಾಶಿಹಾಕಿ ಕೊಳ್ಳಬೇಕೆಂದು ಹವಣಿಸುತ್ತಿರುವೆವು. ಮನುಷ್ಯನಿಗೆ ಒಂದು ದಿನಕ್ಕೆ, ಒಂದು ತಿಂಗಳಿಗೆ, ಅಥವಾ ಇಡಿಯ ಒಂದು ಜನ್ಮದಲ್ಲಿ ಬೇಕಾಗುವ ಆಹಾರವು ಇಷ್ಟೇ ಎಂಬ ನಿಯಮವಿರುತ್ತದೆ; ಅದಕ್ಕಿಂತ ಹೆಚ್ಚಾಗಿ ತಿಂದರೆ ಅಜೀರ್ಣವೂ ರೋಗವೂ ನಮ್ಮನ್ನು ಗೋಳುಗುಟ್ಟಿಸುವವು. ನಾವು ಹಾಕಿಕೊಳ್ಳಬೇಕಾದ ಬಟ್ಟೆಗಳು ಇಂತಿಷ್ಟೆಂಬ ನಿಯಮವಿರುತ್ತದೆ; ಹೆಚ್ಚುಸಂಖ್ಯೆಯ ಬಟ್ಟೆಗಳನ್ನು ತೊಟ್ಟುಕೊಳ್ಳುವವರು, ಅವುಗಳನ್ನು ಕೊಳ್ಳುವದಕ್ಕೂ ತೊಟ್ಟುಕೊಳ್ಳುವದಕ್ಕೂ, ಬಿಚ್ಚಿ ಭದ್ರವಾಗಿಸಿಕೊಳ್ಳುವದಕ್ಕೂ, ಚೊಕ್ಕಟವಾಗಿರಿಸಿಕೊಳ್ಳುವದಕ್ಕೂ ವೃಥಾ ಶ್ರಮವನ್ನು ವಹಿಸಬೇಕಾಗುತ್ತದೆ, ಅಷ್ಟೆ. ನಮಗೆ ವಾಸಮಾಡುವದಕ್ಕೆ ಒಂದು ಮನೆಯು ಬೇಕು; ಹೆಚ್ಚು ಸ್ಥಲದಲ್ಲಿ ನಾವು ಒಂದೇ ಕಾಲದಲ್ಲಿರುವದು ಎಂದಿಗೂ ಆಗಲಾರದು. ನೂರಾರು ಕೋಣೆಗಳ ಭವನವನ್ನು ಕಟ್ಟಿಸಿಕೊಂಡವನು, ಕೋಣೆಗಳಿಗೆ ಬೀಗವನ್ನು ಹಾಕಿದೆಯೋ ಇಲ್ಲವೋ ನೋಡಿ ಕೊಳ್ಳುವದಕ್ಕೆ ಕೂಡ ವಿರಾಮವಿಲ್ಲದೆ ಪೇಚಾಡುವನು. ಮನೆಗಳನ್ನು ಹೆಚ್ಚಾಗಿ ಕಟ್ಟಿಕೊಂಡಿರುವವರಿಗಂತೂ ಅವುಗಳನ್ನು ಆಗಾಗ್ಗೆ ದುರಸ್ತು ಮಾಡಿಸುವದು, ಬಾಡಿಗೆಯನ್ನು ವಸೂಲುಮಾಡುವದು, ಕೋರ್ಟುಕಚೇರಿಗಳ ವ್ಯವಹಾರವನ್ನು ಕಟ್ಟಿಕೊಳ್ಳುವದು– ಮುಂತಾದ ವ್ಯರ್ಥಕಾಲಕ್ಷೇಪಮಾರ್ಗಗಳನ್ನು ಹೆಚ್ಚಿಸಿಕೊಂಡಂತೆಯೇ. ನೂರಾರು ಬೈಸಿಕಲ್ಲುಗಳನ್ನಿಟ್ಟುಕೊಳ್ಳುವದು, ಸಾವಿರಾರು ಮೋಟಾರುಗಳನ್ನು ಸಂಗ್ರಹಿಸುವದು– ಇವೆಲ್ಲ ಹುಚ್ಚುತನವೆಂದು ತಿಳಿಯುವದಕ್ಕೆ ಬಹಳ ಕಷ್ಟವಿಲ್ಲ. ಅವೆಲ್ಲ ಬಹುಬೇಗನೆ ತುಕ್ಕುಹಿಡಿದುಬಿಡುವವು. ಕೆಲವೇ ದಿನಗಳಲ್ಲಿ ಭೂಮಿಯ ಸುತ್ತಲೂ ಸಂಚರಿಸಿ ಬಂದಿರುವನೆಂದು ವೃತ್ತಾಂತಪತ್ರಿಕೆಗಳಲ್ಲಿ ಸುದ್ದಿಯನ್ನು ಪ್ರಕಟಿಸಿ ಹೆಸರುವಾಸಿಯಾಗ ಬೇಕೆನ್ನುವವನು ಯಾವ ದೇಶವನ್ನು ತಾನೆ ಸರಿಯಾಗಿ ನೋಡಿರುತ್ತಾನೆ? ಲಕ್ಷಗಟ್ಟಲೆಯ ಹಣವನ್ನು ಬ್ಯಾಂಕುಗಳಲ್ಲಿ ಇಟ್ಟುಕೊಂಡು ವಾರ್ಷಿಕ ವರದಿಗಳನ್ನು ನೋಡಿ ಹಿಗ್ಗುವದನ್ನು ಮಾತ್ರವೇ ಜೀವನದ ಉದ್ದೇಶವಾಗಿಟ್ಟುಕೊಂಡಿರುವವನು ಹಣದ ಸದುಪಯೋಗವನ್ನು ಮಾಡಿಕೊಂಡವನೆಂದು ಹೇಳಬಹುದೆ? ಅವನಿಗೆ ಅಂಕೆಗಳನ್ನು ಕೂಡುವ ಕಳೆಯುವ ಲೆಕ್ಕದ ಹುಚ್ಚು ಹಿಡಿದಿರುತ್ತದೆ, ಅಷ್ಟೆ. ಭೋಗ ಸಾಮಗ್ರಿಗಳನ್ನು ರಾಶಿಹಾಕಿಕೊಳ್ಳುವದಕ್ಕೇ ಕಾಲವನ್ನು ಕಳೆಯುವವರು ತಮ್ಮ ನಿಜವಾದ ಜೀವನದಲ್ಲಿ ಅಷ್ಟು ಭಾಗವನ್ನು ವ್ಯರ್ಥಮಾಡಿಕೊಂಡಂತೆ. ನಮ್ಮ ನಿಜವಾದ ಜೀವನವು ಭೋಗರಾಶಿಯಲ್ಲಿರುವದಿಲ್ಲ,

ನಮ್ಮ ಮನೋಬುದ್ಧಿಗಳನ್ನು ಸದುಪಯೋಗ ಮಾಡಿಕೊಳ್ಳುವದರಲ್ಲಿರುತ್ತದೆ. ಆದ್ದರಿಂದ ವಿಷಯದ ಹಂಬಲು ಹೆಚ್ಚಾಗಿರುವವರು ಅದರಿಂದಾಗುವ ಅಪಾಯವನ್ನು ಮನಸ್ಸಿನಲ್ಲಿ ಹೊರಳಿಸಿ ನೋಡಬೇಕು; ಹೇಗಾದರೂ ಮಾಡಿ ಆಧ್ಯಾತ್ಮಿಕಜೀವನದಲ್ಲಿ ಅಭಿರುಚಿಯನ್ನು ಸಂಪಾದಿಸಿಕೊಳ್ಳಬೇಕು.

ನಮ್ಮ ಹೇಳಿಕೆಯನ್ನು ಓದುಗರು ತಪ್ಪಾಗಿ ತಿಳಿದುಕೊಳ್ಳುವ ಸಂಭವವಿದೆ. ಆದ್ದರಿಂದ ವಿಷಯಾನುಭವದ ವಿಚಾರವನ್ನು ಇನ್ನಷ್ಟು ವಿಸ್ತರಿಸಿ ತಿಳಿಸುವದರಿಂದ ಪ್ರಯೋಜನವುಂಟು. ಮನುಷ್ಯರಲ್ಲಿ ಕೆಲವರು ಮಾತ್ರ–ಸಾಧುಗಳು, ಸಂನ್ಯಾಸಿಗಳು, ಬೈರಾಗಿಗಳು ಮುಂತಾದವರು ಮಾತ್ರ–ಹೊರಗಿನ ಭೋಗ್ಯವಸ್ತುಗಳನ್ನು ಸಂಪೂರ್ಣವಾಗಿ ತೊರೆದು ಇರಬಲ್ಲರು. ಕೌಪೀನಮಾತ್ರದಿಂದ ತೃಪ್ತರಾಗಿ, ಭಿಕ್ಷಾನ್ನವನ್ನು ಕೈಯಲ್ಲಿಯೇ ಉಂಡು, ಯಾವದೋ ಒಂದು ನದಿಯಲ್ಲಿ ಅಥವಾ ಕೆರೆಯಲ್ಲಿ ಸಿಕ್ಕಿದ ನೀರನ್ನು ಕುಡಿದು, ಒಂದು ಹಾಳು ಗುಡಿಯಲ್ಲಿಯೋ ಒಂದು ಮರದ ಕೆಳಗೋ ವಿಶ್ರಾಂತಿಯನ್ನು ತೆಗೆದುಕೊಳ್ಳುತ್ತಿದ್ದು, ತಮ್ಮ ಇಡಿಯ ಜೀವನವನ್ನೇ ಪರಮಾತ್ಮ ಚಿಂತನೆಗೂ ಲೋಕೋಪಕಾರಕ್ಕೂ ಧಾರೆಯೆರೆದಿರುವ ಧೀರರನ್ನು ಬಿಟ್ಟರೆ ಮಿಕ್ಕವರಿಗೆಲ್ಲ ಕೆಲವು ಭೋಗಸಾಮಗ್ರಿಗಳು ಅವಶ್ಯವಾಗಿ ಬೇಕು. ಉಣ್ಣುವದಕ್ಕೆ ಅನ್ನವನ್ನಾಗಲಿ, ಉಡುವದಕ್ಕೆ ಬಟ್ಟೆಯನ್ನಾಗಲಿ, ವಾಸಕ್ಕೆ ಮನೆಯನ್ನಾಗಲಿ ಬಯಸುವದು ತಪ್ಪೆಂದು ಯಾರೂ ಹೇಳಲಾರರು. ಬುದ್ಧಿಗೆ ತಿಳಿವಳಿಕೆಯೂ, ಕುಟುಂಬ ಪೋಷಣೆಗೂ ಜನತಾಸೇವೆಗೂ ಧನವೂ, ಇದಕ್ಕೆಲ್ಲ ಮೂಲವಾಗಿರುವ ದೇಹಾರೋಗ್ಯವೂ, ಮನಸ್ಸಿಗೆ ನೆಮ್ಮದಿಯೂ ಬೇಕೆಂದು ಬಯಸುವದು ಎಂದಿಗೂ ಪಾಪವಲ್ಲ. ನಮ್ಮ ವ್ಯವಹಾರವು ಸಾಗುವದಕ್ಕೆ ಅತ್ಯವಶ್ಯವಾದ ವಿಷಯಗಳನ್ನು ಕೂಡಿಹಾಕುವದಕ್ಕೆ ಬಯಸಬಾರದೆಂದು ಯಾವ ಶಾಸ್ತ್ರದಲ್ಲಿಯೂ ಹೇಳಿರುವದಿಲ್ಲ. ತಮಗೆ ಬೇಕಾಗಿರುವ ವಿಷಯಗಳನ್ನು ಕೂಡಿಹಾಕಿಕೊಳ್ಳುವದೂ ಅವುಗಳನ್ನು ಶೇಖರಿಸಲಾರದ ಮಿಕ್ಕವರಿಗೂ ಒದಗಿಸಿಕೊಡುವದೂ ಪ್ರತಿಯೊಬ್ಬ ಸಭ್ಯಗೃಹಸ್ಥನ ಕರ್ತವ್ಯವೂ ಆಗಿರುತ್ತದೆ. ಆದರೆ ವಿಷಯಗಳಲ್ಲಿಯೇ ಮನಸ್ಸನ್ನಿಟ್ಟು ಮುಖ್ಯ ಜೀವನವನ್ನು ವ್ಯರ್ಥವಾಗಿ ಮಾಡಿಕೊಳ್ಳುವ ಹುಚ್ಚಿಗೆ ಯಾರೂ ಒಳಗಾಗಬಾರದು. ವಿಷಯಗಳನ್ನು ಇಷ್ಟವೆಂದೂ ಅನಿಷ್ಟವೆಂದೂ ವಿಂಗಡಿಸಿಕೊಂಡು, ಇಷ್ಟವಾದವುಗಳಲ್ಲಿ ರಾಗವನ್ನು ಅನಿಷ್ಟವಾದವುಗಳಲ್ಲಿ ದ್ವೇಷವನ್ನೂ ಬೆಳೆಯಿಸಿಕೊಳ್ಳುತ್ತಾ ಜೀವನದ ಉದ್ದೇಶವನ್ನೇ ವ್ಯರ್ಥಗೊಳಿಸಬಾರದು. ಇಷ್ಟೇ ಅಲ್ಲ; ನಮ್ಮ ದೇಹಯಾತ್ರೆಗೆ ಬೇಕಾಗುವ ವಸ್ತುಗಳ ಸಂಪಾದನೆಯನ್ನು ಹೇಗಾದರೂ ಮಾಡಿಕೊಂಡರೆ ಸರಿಯೆಂದು ಭಾವಿಸಬಾರದು. ಅನ್ಯಾಯದಿಂದಲೂ ಅಧರ್ಮದಿಂದಲೂ ಸಂಪಾದಿಸಿದ ವಸ್ತುಗಳು ನಮಗೆ ಭೋಗ್ಯವಾಗುವ ಬದಲು ಅವೇ ನಮ್ಮನ್ನು ಭೋಗಿಸುವವು; ನಮ್ಮ ಜೀವನದ ಗುರಿಯನ್ನೇ ತಪ್ಪಿಸಿ ಪಶ್ಚಾತ್ತಾಪಕ್ಕೆ ನಮ್ಮನ್ನು ಒಪ್ಪಿಸಿಬಿಡುವವು. ಭರ್ತೃಹರಿಯು ಹೇಳಿರುವಂತೆ

**ಭೋಗಾ ನ ಭುಕ್ತಾ ವಯಮೇವ ಭುಕ್ತಾ**
**ಸ್ತಪೋ ನ ತಪ್ತಂ ವಯಮೇವ ತಪ್ತಾಃ ।**
**ಕಾಲೋ ನ ಯಾತೋ ವಯಮೇವ ಯಾತಾ**
**ಸ್ತೃಷ್ಣಾ ನ ಜೀರ್ಣಾ ವಯಮೇವ ಜೀರ್ಣಾಃ ॥**

'ಭೋಗಗಳನ್ನು ಭೋಗಿಸಲಿಲ್ಲ, ನಮ್ಮನ್ನೇ ಅವು ಭೋಗಿಸಿದವು; ತಪಸ್ಸನ್ನು ಮಾಡಲಿಲ್ಲ, ನಾವೇ ತಾಪದಿಂದ ಬೆಂದೆವು; ಕಾಲವು ಹೋಗಲಿಲ್ಲ, ನಾವೇ ಹೋದೆವು; ಬಯಕೆಯು ಮುದಿಯಾಗಲಿಲ್ಲ, ನಾವೇ ಮುದಿಯಾದೆವು.' ಎಂದು ಕಡೆಯಲ್ಲಿ ಕುದಿದುಕೊಳ್ಳದಂತೆ ಈಗಿನಿಂದಲೂ ನಾವು ಭೋಗವಸ್ತುಗಳನ್ನು ನಮ್ಮ ಜೀವನದ ಸಹಾಯಕಸಾಮಗ್ರಿಯಾಗಿ ಮಾಡಿಕೊಳ್ಳಬೇಕು. ಅವುಗಳೇ ನಮ್ಮ ಜೀವನದ ಗುರಿಯಾಗಬಾರದು.

ಇನ್ನೊಂದು ವಿಷಯ. ಯಾರಿಗೆ ಭೋಗಸಾಮಗ್ರಿಗಳು ಬೇಕೋ ಅವರು ಅವನ್ನು ಪರಮೇಶ್ವರನ ಅನುಗ್ರಹವಾಗಿಯೇ ಸಂಪಾದಿಸಿಕೊಳ್ಳುವ ಪ್ರಯತ್ನವನ್ನು ಮಾಡಿದರೆ ಭಗವಂತನ ಸೇವೆಯೂ ಇಷ್ಟಪ್ರಾಪ್ತಿಯೂ ಒಂದೇ ಕಾಲದಲ್ಲಿ ಒದಗುವವು. ಶಾಸ್ತ್ರದಲ್ಲಿ ಇಂಥ ಕರ್ಮಗಳನ್ನು ಮಾಡಿದರೆ ಇಂಥಿಂಥ ಕಾಮಗಳು ನೆರವೇರುವವೆಂದು ಹೇಳಿದೆಯಷ್ಟೆ. ಭಗವಂತನೇ ಎಲ್ಲಾ ಕಾಮಗಳನ್ನೂ ಪರಿಪೂರ್ತಿಗೊಳಿಸುವವನು ಎಂದು ಅದಕ್ಕೆ ಅರ್ಥ. ದಿನಕ್ಕೆ ಇಂತಿಷ್ಟು ಘಂಟೆ ಯಂತೆ ಕೆಲಸಮಾಡಿದರೆ ನಮ್ಮ ಜೀವನವು ಸಲೀಸಾಗಿ ಸಾಗುವದು ಎಂದು ತಿಳಿದುಕೊಂಡಿರುವವರು ಅವಿವೇಕಿಗಳು. ಏಕೆಂದರೆ ನಿಜವು ಹಾಗಿಲ್ಲ. ನಮ್ಮ ಕೆಲಸವನ್ನು ನಿಮಿತ್ತವಾಗಿ ಮಾಡಿಕೊಂಡು ಭಗವಂತನೇ ನಮಗೆ ಬೇಕಾದ ಜೀವನಸಾಮಗ್ರಿಯನ್ನು ಒದಗಿಸುತ್ತಿರುವನು. ಆದ್ದರಿಂದ ಭಗವಂತನನ್ನು ಪ್ರಾರ್ಥಿಸುವದರಲ್ಲಿ ಸಾರ್ಥಕವಾಗಿ ಕಾಲಹರಣ ಮಾಡುವದನ್ನು ಬಿಟ್ಟು 'ಇನ್ನಷ್ಟು ಕೆಲಸಮಾಡಿದರಾಯಿತು' ಎಂಬ ತಪ್ಪು ಭಾವನೆಯನ್ನು ಎಂದಿಗೂ ಮಾಡಿಕೊಳ್ಳಬಾರದು. ನಾವು ಮಾಡುವ ಪ್ರತಿಯೊಂದು ಕೆಲಸಕ್ಕೂ ಫಲವು ಪರಮೇಶ್ವರನಿಂದಲೇ ಆಗುತ್ತಿರುವದು; ಅದು ನಮ್ಮ ಕೆಲಸದ ಪರಿಣಾಮಕ್ಕೆ ತಕ್ಕಂತೆ ಆಗುವದಿಲ್ಲ. ದಿನವೆಲ್ಲ ದುಡಿದು ಯಾವ ಪ್ರತಿಫಲವೂ ಇಲ್ಲದೆ ನರಳುವವರು ಈ ಲೋಕದಲ್ಲಿದಾರೆ, ಕರ್ಮವಿಲ್ಲದೆ ಭಗವಂತನ ಸ್ಮರಣೆಯನ್ನು ಮಾಡುತ್ತಾ ಏನೂಮಾಡದೆ ಸುಮ್ಮಗೆ ಕುಳಿತರೆ ನಮಗೆ ಬೇಕಾದದ್ದೆಲ್ಲ ಹೇಗೋ ಆಕಾಶದಿಂದ ಉದುರಿಬೀಳುವದೆಂದು ನಮ್ಮ ಅಭಿಪ್ರಾಯವಲ್ಲ. ಮನುಷ್ಯನು ಅವಶ್ಯವಾಗಿ ಏನಾದರೊಂದು ಕೆಲಸವನ್ನು ಮಾಡಬೇಕು; ಅದು ಈಶ್ವರನ ನಿಯಮವೇ ಆಗಿದೆ. ಸುಮ್ಮನೆ ಕುಳಿತುಕೊಳ್ಳುವ ಸೋಮಾರಿತನವೂ ಒಂದು ಕೆಲಸವೇ ಆಗಿರುವದರಿಂದ ಅದಕ್ಕೂ ಫಲವು ಉಂಟೇ ಉಂಟು. ಮಾಡಬಾರದ ಕೆಲಸವನ್ನು ಮಾಡಿದರೆ ಆಗಬಾರದ ಫಲವು ಆಗುತ್ತದೆ; ಮಾಡತಕ್ಕದ್ದನ್ನು ಮಾಡಿದರೆ ಉತ್ತಮ ಫಲವೇ ಆಗುತ್ತದೆ. ಆದರೆ ಫಲವನ್ನು ಕೊಡುವದು ಕೆಲಸವಲ್ಲ, ಈಶ್ವರನು. ನಾವು ಇದನ್ನು ಅರಿತಿರಲಿ, ಅರಿಯದಿರಲಿ,

ನಮ್ಮ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಿರು ವವನು ಈಶ್ವರನೇ. ಅಜ್ಞರಾದವರು ತಾವೇ ತಮ್ಮ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಿರು ವೆವೆಂದು ಹೆಮ್ಮೆಯನ್ನು ವಹಿಸಿರುತ್ತಾರೆ. ನಿಜವನ್ನು ಬಲ್ಲವರು ಪರಮೇಶ್ವರನ ಅನುಗ್ರಹದಿಂದಲೇ ತಮ್ಮ ಯೋಗಕ್ಷೇಮಗಳು ಸಾಗುತ್ತಿರುವವೆಂಬುದನ್ನು ಅರಿತುಕೊಡಿರುತ್ತಾರೆ.

ಭಗವಂತನನ್ನು ಸ್ಮರಿಸುವವರಿಗೆ ಅವರವರ ಇಷ್ಟಾರ್ಥಗಳು ಲಭಿಸುವವೆಂದು ಇತಿಹಾಸಪುರಾಣಗಳಲ್ಲಿ ವರ್ಣಿಸಿರುವದಕ್ಕೆ ಇದೇ ಅಭಿಪ್ರಾಯ. ಉದಾಹರಣೆಗೆ ವಿಷ್ಣುಸಹಸ್ರನಾಮದ ಫಲಶ್ರುತಿಯನ್ನು ನೋಡಿರಿ:

**ಯ ಇದಂ ಶೃಣುಯಾನ್ನಿತ್ಯಂ ಯಶ್ಚಾಪಿ ಪರಿಕೀರ್ತಯೇತ್ ।**
**ನಾಶುಭಂ ಪ್ರಾಪ್ನುಯಾತ್ ಕಿಂಚಿತ್ ಸೋಽಮುತ್ರೇಹ ಚ ಮಾನವಃ ॥**

'ಯಾವನು ನಿತ್ಯವೂ ಈ ಸ್ತೋತ್ರವನ್ನು ಕೇಳುವನೋ ಮತ್ತು ಯಾವನು ಗಟ್ಟಿಯಾಗಿ ಹೇಳುತ್ತಿರುವನೋ ಅವನಿಗೆ ಈ ಲೋಕದಲ್ಲಿಯಾಗಲಿ ಪರಲೋಕದಲ್ಲಿಯಾಗಲಿ ಒಂದಿಷ್ಟೂ ಕೆಟ್ಟದ್ದಾಗುವದಿಲ್ಲ' ಎಂದು ಹೇಳಿದ ಬಳಿಕ ಹೀಗೆಂದಿದೆ:

**ವೇದಾನ್ತಗೋ ಬ್ರಾಹ್ಮಣಃ ಸ್ಯಾತ್ ಕ್ಷತ್ರಿಯೋ ವಿಜಯೀ ಭವೇತ್ ।**
**ವೈಶ್ಯೋ ಧನಸಮೃದ್ಧಃ ಸ್ಯಾಚ್ಛೂದ್ರಃ ಸುಖಮವಾಪ್ನುಯಾತ್ ॥**
**ಧರ್ಮಾರ್ಥೀ ಪ್ರಾಪ್ನುಯಾದ್ಧರ್ಮಮರ್ಥಾರ್ಥೀ ಚಾರ್ಥಮಾಪ್ನುಯಾತ್**
**ಕಾಮಾನವಾಪ್ನುಯಾತ್ ಕಾಮೀ ಪ್ರಜಾರ್ಥೀ ಚಾಪ್ನುಯಾತ್ ಪ್ರಜಾಮ್ ॥**

'ಬ್ರಾಹ್ಮಣನು ವೇದಾಂತವನ್ನು ಅರಿತುಕೊಳ್ಳುವನು; ಕ್ಷತ್ರಿಯನು ವಿಜಯವನ್ನು ಪಡೆಯುವನು; ವೈಶ್ಯನು ಧನಸಂಪನ್ನನಾಗುವನು; ಶೂದ್ರನು ಸುಖವನ್ನು ಹೊಂದುವನು. ಧರ್ಮವು ಬೇಕೆನ್ನುವವನು ಧರ್ಮವನ್ನು ಪಡೆಯುವನು; ಅರ್ಥವು ಬೇಕೆನ್ನುವವನು ಅರ್ಥವನ್ನು ಪಡೆಯುವನು; ಕಾಮಗಳು ಬೇಕೆನ್ನುವವನು ಕಾಮಗಳನ್ನು ಪಡೆಯುವನು; ಪ್ರಜೆಯು ಬೇಕೆನ್ನುವವನು ಪ್ರಜಾಸಂತತಿಯನ್ನು ಪಡೆಯುವನು.'–ಎಂದು ಮುಂತಾಗಿ ಹೇಳಿರುತ್ತವೆ. ಯಾವನು ಯಾವ ಸುಖಪದಾರ್ಥವನ್ನು ಬಯಸಿದರೂ ಅದನ್ನು ಕೊಡುವವನು ಪರಮೇಶ್ವರನೇ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಹೀಗೆಯೇ ಕೀರ್ತಿ, ತಿಳಿವಳಿಕೆ, ಅಭಯ, ವೀರ್ಯ, ತೇಜಸ್ಸು, ಆರೋಗ್ಯ, ಕಾಂತಿ, ಬಲ, ರೂಪ–ಮುಂತಾದವುಗಳೆಲ್ಲವೂ ಪರಮೇಶ್ವರನ ಅನುಗ್ರಹದಿಂದಲೇ ಆಗುವವೆಂದು ಮುಂದೆ ಅಲ್ಲಿ ಸ್ಪಷ್ಟವಾಗಿ ಹೇಳಿರುತ್ತದೆ. ಲೋಕದಲ್ಲಿ ಜೀವರುಗಳ ಕಾಮಗಳು ಹಲವು ಬಗೆಯಾಗಿರುವವು; ಅವರವರಿಗೆ ಅವರವರ ಇಷ್ಟವನ್ನು ಒದಗಿಸಿಕೊಡುವ ಶಕ್ತಿಯು ಪರಮೇಶ್ವರನಿಗಲ್ಲದೆ ಮತ್ತೆ ಯಾರಿಗೆ ಇದ್ದೀತು?

ಇಲ್ಲಿ ಒಂದು ಶಂಕೆ; ಪರಮೇಶ್ವರನನ್ನು ಪ್ರಾರ್ಥಿಸಿದವರಿಗೆಲ್ಲ ಅವರ ಇಷ್ಟಾರ್ಥವನ್ನು ಪರಮೇಶ್ವರನು ಸಲ್ಲಿಸುವದಾದರೆ ಪ್ರಕೃತಿನಿಯಮಗಳನ್ನೂ ಅವನು ಮಾರ್ಪಡಿಸುವನೇನು? ಒಬ್ಬನಿಗೆ ಮಳೆ ಬೇಕು, ಮತ್ತೊಬ್ಬನಿಗೆ ಮಳೆ ಬೇಡ. 'ಭಗವಂತ, ಮಳೆಯನ್ನು ಕೊಡು' ಎಂದು ಒಬ್ಬನೂ 'ಭಗವಂತನೆ, ಮಳೆಯನ್ನು ನಿಲ್ಲಿಸು' ಎಂದು ಮತ್ತೊಬ್ಬನೂ ಪ್ರಾರ್ಥಿಸಿದರೆ ದೇವರು ಯಾರಿಗೆ ಒಲಿಯುವನು? ಯುದ್ಧದಲ್ಲಿ ತಮ್ಮ ಶತ್ರುಗಳನ್ನು ಕೊಂದು ತಮಗೆ ಜಯವನ್ನು ಕೊಡಬೇಕೆಂದು ಎರಡು ಪಕ್ಷದವರೂ ಪ್ರಾರ್ಥಿಸಿದರೆ ಭಗವಂತನು ಯಾರಿಗೆ ಜಯವನ್ನು ಕೊಡುವನು? ಹೀಗೆಂದು ಕೆಲವರು ಭಗವತ್ಪ್ರಾರ್ಥನಾವಾದಿಗಳನ್ನು ಹಾಸ್ಯಮಾಡುವರು. ಆದರೆ ಆ ನಾಸ್ತಿಕರಿಗೆ ಪ್ರಾರ್ಥನೆಯ ತತ್ತ್ವವು ತಿಳಿಯದು. ಭಗವಂತನನ್ನು ಪ್ರಾರ್ಥಿಸುವದೆಂಬುದು ಒಬ್ಬ ದೊಡ್ಡ ಹುದ್ದೇದಾರನಿಗೆ ಅರ್ಜಿಯನ್ನು ಹಾಕಿಕೊಳ್ಳುವಂತೆ ಎಂದು ಎಣಿಸಬಾರದು. ಈಶ್ವರನೆಂದರೆ ಮನಬಂದಂತೆ ಪ್ರಕೃತಿನಿಯಮಗಳನ್ನು ಮಾರ್ಪಡಿಸುತ್ತಿರುವ ನಿರಂಕುಶಪ್ರಭುವಲ್ಲ. ಸರ್ವಜ್ಞನಾದ ಭಗವಂತನು ಪ್ರಪಂಚವನ್ನು ಯಾವ ಸ್ಥಿತಿಯಲ್ಲಿ ಇಟ್ಟಿರಬೇಕು ಎಂಬುದನ್ನು ಅಲ್ಪಜ್ಞರಾದ ನಾವುಗಳು ತಿಳಿಸಿಕೊಡುವೆ ವೆಂಬುದು ಹಾಸ್ಯಾಸ್ಪದವಾದ ಮಾತು; ಸತ್ಯಸಂಕಲ್ಪನಾದ ಭಗವಂತನು ತನ್ನ ಸಂಕಲ್ಪವನ್ನು ಮಾರ್ಪಡಿಸಿಕೊಳ್ಳಬೇಕೆಂದು ಬೇಡಿಕೊಳ್ಳುವದು ಹುಚ್ಚುತನವು. ಆದ್ದರಿಂದ ಪ್ರಾರ್ಥನೆಯೆಂದರೆ ನಮ್ಮ ಇಷ್ಟವನ್ನು ನೆರವೇರಿಸೆಂದು, ನಿನ್ನ ಮನಸ್ಸನ್ನು ಬದಲಾಯಿಸಿಕೊ ಎಂದು, ಈಶ್ವರನನ್ನು ಕೇಳಿಕೊಳ್ಳುವದಲ್ಲ. ಕೆಲವು ಪ್ರಾರ್ಥನೆಗಳಲ್ಲಿ 'ದೇವನೆ, ಆಯುಷ್ಯವನ್ನು ಕೊಡು, ಎಂದು ಮುಂತಾಗಿ ಕೇಳಿಕೊಳ್ಳುವದುಂಟು; ಅದರಂತೆ ಅವರ ಇಷ್ಟವು ಪೂರ್ತಿ ಭಗವಂತನು ತನ್ನ ನಿಯಮವನ್ನು ಮಾರ್ಪಡಿಸಿದನೆಂದಲ್ಲ; ಮತ್ತೇನೆಂದರೆ ಪ್ರಾರ್ಥನೆಮಾಡಿದವರ ಮನಸ್ಸೇ ಮಾರ್ಪಟ್ಟಿತೆಂದರ್ಥ. ನಮ್ಮ ಮನಸ್ಸು ತನ್ನ ಸ್ವಾಭಾವಿಕವಾದ ಸ್ಥಿತಿಯಲ್ಲಿದ್ದರೆ ಪರಮೇಶ್ವರನ ಸಂಕಲ್ಪಕ್ಕೆ ಅನುಗುಣವಾದ ಭಾವನೆಗಳೇ ಅದಕ್ಕೆ ಬರುತ್ತಿರುವವು. ಯುಕ್ತವಾದ ಭಾವನೆಗಳಿಂದ ನಮ್ಮ ಶರೀರದಲ್ಲಿ ಆರೋಗ್ಯಾದಿಗಳೂ ನಮ್ಮ ಹೊರವಳೆಯದಲ್ಲಿ ವ್ಯವಸ್ಥೆಯೂ ತೋರಿಕೊಳ್ಳುತ್ತಿರುವವು. ನಮ್ಮ ಅನಾರೋಗ್ಯಕ್ಕೂ ನಮ್ಮ ಜೀವನದ ಮಿಕ್ಕ ಅನರ್ಥಗಳಿಗೂ ನಮ್ಮ ಮನಸ್ಸಿನಲ್ಲಿರುವ ಅಯುಕ್ತಭಾವನೆಗಳೇ ಕಾರಣವಾಗಿರುತ್ತವೆ. ಅಯುಕ್ತ ಭಾವನೆಗಳಿಗೆ ಮನಸ್ಸು ಭಗವಂತನಿಗೆ ಸಂಬಂಧಪಡದೆ ಇರುವದೇ ಕಾರಣವಾಗಿರುತ್ತದೆ. ಪ್ರಾರ್ಥನೆಯೆಂಬುದು ಮನಸ್ಸನ್ನು ಮೇಲಿನ ಮಟ್ಟಕ್ಕೆ ಏರಿಸುತ್ತದೆ, ಅದು ಭಗವಂತನ ನಿಯಮಕ್ಕೆ ಒಳಪಡುವಂತೆ ಮಾಡುತ್ತದೆ; ಅದರಿಂದ ಯುಕ್ತಭಾವನೆಗಳು ಹುಟ್ಟಿ ನಮ್ಮ ಹೊರಗನ್ನೆಲ್ಲ ಸುಖಮಯವಾಗಿ ಮಾರ್ಪಡಿಸುತ್ತದೆ. ಪ್ರಾರ್ಥನೆಯು ಸ್ವಭಾವನಿಯಮಗಳನ್ನು ಮಾರ್ಪಡಿಸುವದಿಲ್ಲ, ಆ ನಿಯಮಗಳು ಇರುವಂತೆಯೇ ಅವನ್ನು ತೋರ್ಪಡಿಸುತ್ತದೆ. ಭಗವಂತನ ದೃಷ್ಟಿಯಿಂದ ಪ್ರಪಂಚವು ಸುವ್ಯವಸ್ಥಿತವಾಗಿರುತ್ತದೆ, ಸುಖಮಯವಾಗಿರುತ್ತದೆ. ನಮ್ಮ ಅಂತಃಕರಣವು

ಆ ದೃಷ್ಟಿಗೆ ಹೊಂದಿಕೊಂಡಿಲ್ಲವಾದ್ದರಿಂದಲೇ ಅವ್ಯವಸ್ಥೆಯೂ ಅಸುಖವೂ ತೋರಿ ಕೊಳ್ಳುತ್ತಿರುವವು. ಆದ್ದರಿಂದ ನಮ್ಮ ಅಜ್ಞಾನದ ಫಲವಾಗಿ ಹೊರತೋರಿಕೊಂಡಿರುವ ಅವ್ಯವಸ್ಥೆಯನ್ನೂ ಅಸುಖವನ್ನೂ ಮರೆಮಾಡಿ ಪರಮಾರ್ಥವಾಗಿರುವ ಜಗತ್ತಿನ ಆನಂದವನ್ನು ಹೊರೆಗೆಡಹುವದೇ ಪ್ರಾರ್ಥನೆಯ ಫಲವು.

ಈಗ 'ಇಬ್ಬರು ವಿರುದ್ಧವಾಗಿ ಪ್ರಾರ್ಥಿಸಿದರೆ ಭಗವಂತನು ಯಾರ ಪ್ರಾರ್ಥನೆಯನ್ನು ನೆರವೇರಿಸುವನು?' ಎಂಬ ಶಂಕೆಗೆ ಪರಿಹಾರವು ಸ್ಫುಟವಾಗುತ್ತದೆ. ಅಜ್ಞನಾದವನು ನಿಜವನ್ನರಿಯದೆ ಮಳೆಯನ್ನು ಕೊಡು ಅಥವಾ ಕೊಡಬೇಡ–ಎಂದು ಪ್ರಾರ್ಥಿಸಬಹುದು. ಭಗವಂತನು ಅವನ ಪ್ರಾರ್ಥನೆಯ ಭಾವವನ್ನು ತೆಗೆದುಕೊಳ್ಳುವನೇ ಹೊರತು ಅಕ್ಷರವನ್ನು ಮುಖ್ಯವಾಗಿಟ್ಟುಕೊಳ್ಳುವದಿಲ್ಲ. ಮಳೆಗಾಲದಲ್ಲಿ ಕೂಡ ಒಂದು ಕಡೆ ಮಳೆಯಾಗಿ ಮತ್ತೊಂದು ಕಡೆ ಆಗದೆ ಇರುವದುಂಟು. ಆದ್ದರಿಂದ ಮಳೆ ಬೇಕೆನ್ನುವವನಿಗೂ ಬೇಡವೆನ್ನುವವನಿಗೂ ಇಬ್ಬರಿಗೂ ಇಷ್ಟಾರ್ಥವು ಪ್ರಾಪ್ತಿಯಾದರೆ ಅದರಲ್ಲಿಯೂ ಸೋಜಿಗವಿಲ್ಲ. ಅದಿರಲಿ, ಮಳೆಬಂದು ಆಗಬೇಕಾದ ಪ್ರಯೋಜನವನ್ನು ಒಬ್ಬನಿಗೂ, ಬಾರದೆ ಇದ್ದು ಆಗಬೇಕಾದ ಪ್ರಯೋಜನವನ್ನು ಮತ್ತೊಬ್ಬನಿಗೂ ಪ್ರಕಾರಾಂತರದಿಂದಲೂ ಉಂಟುಮಾಡಿಕೊಡುವದು ಭಗವಂತನಿಂದ ಆಗಲಾರದೇನು? ಇದರಂತೆ ಎರಡು ಪಕ್ಷದವರೂ ಶತ್ರುಗಳನ್ನು ನಾಶಪಡಿಸೆಂದು ಕೇಳಿಕೊಂಡಾಗಲೂ ಭಗವಂತನು ಇಬ್ಬರಿಗೂ ಮೈತ್ರಿಯನ್ನುಂಟುಮಾಡಿಬಿಟ್ಟರೆ ಶತ್ರುಗಳು ನಾಶವಾದಂತೆ ಅಲ್ಲವೇನು? ಭಗವಂತನನ್ನು ಪ್ರಾರ್ಥನೆಮಾಡುವವರಿಗೆ ತಮ್ಮ ಕಷ್ಟದಿಂದ ಹೇಗಾದರೂ ಪಾರಾಗಬೇಕೆಂಬ ಹವಣಿಕೆಯಿರುತ್ತದೆ, ತಮಗೆ ಸುಖವುಂಟಾಗಬೇಕೆಂಬ ಅಭಿಲಾಷೆಯೂ ಇರುತ್ತದೆ. ಇದೇ ಪ್ರಾರ್ಥನೆಯ ಮುಖ್ಯೋದ್ದೇಶವಾಗಿರುವದರಿಂದ ಭಗವಂತನು ತನ್ನ ಯಾವ ನಿಯಮಕ್ಕೂ ಭಂಗಬಾರದಂತೆ ಭಕ್ತರ ಇಷ್ಟಾರ್ಥಗಳನ್ನು ಈಡೇರಿಸಿಕೊಡುವನೆಂದು ನಂಬುವದಕ್ಕೆ ಯಾವ ಅಡ್ಡಿಯೂ ಇಲ್ಲ. ಏಕೆಂದರೆ ಆತನ ದೃಷ್ಟಿಯಲ್ಲಿ ಯಾರೊಬ್ಬರಿಗೂ ಅನಿಷ್ಟವೇ ಇರುವದಿಲ್ಲ.

ಪ್ರಾರ್ಥನೆಯ ಮುಖ್ಯಫಲವು ಪ್ರಾರ್ಥಿಸುವಾತನ ಮನಸ್ಸು ಭಗವಂತನಿಗೆ ಸಂಬಂಧಿಸಿ ಕೊಂಡು ಯುಕ್ತಭಾವನೆಗಳಿಂದ ಕೂಡುವದೇ ಎಂಬುದನ್ನು ಬಲ್ಲವರು ಹಲವು ಕಡೆಗಳ್ಲಿ ಹೇಳಿರುವರು. ಉದಾಹರಣೆಗೆ ವಿಷ್ಣುಸಹಸ್ರನಾಮದ ಫಲಕೀರ್ತನವನ್ನು ನೋಡಿರಿ:–

**ಇಮಂ ಸ್ತವಮಧೀಯಾನಃ ಶ್ರದ್ಧಾಭಕ್ತಿಸಮನ್ವಿತಃ ।**
**ಯುಜ್ಯೇತಾತ್ಮಸುಖಕ್ಷಾನ್ತಿಶ್ರೀಧೃತಿಸ್ಮೃತಿಕೀರ್ತಿಭಿಃ ॥**
**ನ ಕ್ರೋಧೋ ನ ಚ ಮಾತ್ಸರ್ಯಂ ನ ಲೋಭೋ ನಾಶುಭಾ ಮತಿಃ ।**
**ಭವನ್ತಿ ಕೃತಪುಣ್ಯಾನಾಂ ಭಕ್ತಾನಾಂ ಪುರುಷೋತ್ತಮೇ ॥**

'ಈ ಸ್ತೋತ್ರವನ್ನು ಶ್ರದ್ಧಾಭಕ್ತಿಗಳಿಂದ ಕೂಡಿ ಅಧ್ಯಯನಮಾಡುವಾತನಿಗೆ ಆತ್ಮಸುಖ, ಕ್ಷಮೆ, ಶ್ರೀ, ಧೃತಿ, ಸ್ಮೃತಿ, ಕೀರ್ತಿ-ಇವುಗಳು ಬಂದು ಸೇರುವವು. ಸಿಟ್ಟು, ಹೊಟ್ಟೆಕಿಚ್ಚು, ಜಿಪುಣತನ, ಕೆಟ್ಟಬುದ್ಧಿ-ಇವುಗಳು ಪುರುಷೋತ್ತಮನಾದ ವಾಸುದೇವನ ಭಕ್ತರಿಗೆ ಎಂದಿಗೂ ಆಗುವದಿಲ್ಲ.' ಆದ್ದರಿಂದ ಕೆಟ್ಟಭಾವನೆಗಳಿಂದಾಗುವ ಅನರ್ಥವನ್ನು ನಿವಾರಿಸಿಕೊಂಡು ಶಾಂತಿ, ಪ್ರೇಮ, ಔದಾರ್ಯ, ಸದ್ಬುದ್ಧಿ-ಮುಂತಾದ ಯುಕ್ತಭಾವನೆಗಳನ್ನು ಹೊಂದಿ ಜೀವನವನ್ನು ಸುಖಮಯವಾಗಿ ಮಾರ್ಪಡಿಸಿಕೊಳ್ಳುವದೇ ಪ್ರಾರ್ಥನೆಯ ಉದ್ದೇಶವು. ಮಿಕ್ಕ ಭೋಗ ವಿಷಯಗಳು ಇರಲಿ ಇಲ್ಲದಿರಲಿ, ಇಂಥ ಶುಭಾಂತಃಕರಣವನ್ನು ಹೊಂದಿದವರು ಎಂದೆಂದಿಗೂ ಧನ್ಯರು.

# 12. ಒಳನೋಟಕ್ಕೆ ತಕ್ಕ ಅಂತಃಕರಣ

* ಭಗವಂತನೇ ನಮ್ಮ ಇಷ್ಟಾರ್ಥಗಳನ್ನೆಲ್ಲ ನೆರವೇರಿಸುವವನು. ಆದ್ದರಿಂದ ಯಾರಿಗೆ ಈ ಲೋಕದ ಭೋಗಸಾಮಗ್ರಿಗಳು ಬೇಕೋ ಅವರು ಅವನ್ನು ಪರಮೇಶ್ವರನ ಅನುಗ್ರಹ ರೂಪವಾಗಿಯೇ ಸಂಪಾದಿಸಿಕೊಳ್ಳುವದಕ್ಕೆ ಪ್ರಯತ್ನಿಸಬೇಕು. ಆದರೆ ನಿಜವಾಗಿ ನೋಡಿದರೆ, ಭಗವಂತನನ್ನು ನಾವು ಇಂಥ ಇಷ್ಟಗಳನ್ನು ಒದಗಿಸಿಕೊಡು ಎಂದು, ಅಥವಾ ಇಂಥ ಅನಿಷ್ಟಗಳನ್ನು ನಿವಾರಿಸಿಕೊಡು ಎಂದು, ಕೇಳಿಕೊಳ್ಳಬೇಕಾದ ಅವಶ್ಯಕತೆಯೇ ಇರುವದಿಲ್ಲ. ಸರ್ವಜ್ಞನಾದ ಆತನಿಗೆ ನಮ್ಮಗಳಿಗೆ ಜೀವನದಲ್ಲಿ ಏನೇನು ಬೇಕೆಂಬುದು ತಿಳಿಯದೆ ಇಲ್ಲ. ದಯಾನಿಧಿಯಾದ ಆತನು ಆ ಜೀವನದ ಅವಶ್ಯಕತೆಗಳನ್ನು ಒದಗಿಸಿಕೊಡದೆ ಇರುವದೂ ಇಲ್ಲ. ಆದ್ದರಿಂದ ನಮ್ಮ ಮುಖ್ಯ ಪ್ರಯತ್ನವು ಆ ಭಗವಂತನ ಕಡೆಗೆ ತಿರುಗುವದಕ್ಕೇ ನಡೆಯಬೇಕು. ನಮಗೆ ಬೇಕಾಗಿರುವ ಅನ್ನ, ಬಟ್ಟೆ-ಮುಂತಾದವು ಆತನ ಅನುಗ್ರಹದಿಂದ ಅವಶ್ಯವಾಗಿ ದೊರೆತೇ ತೀರುವವು.

ಯಾವ ವಿವೇಕಿಗಳಿಗೆ ಈ ನಿಜವು ಮನದಟ್ಟಾಗಿರುವದೋ, ಅವರು ತಮ್ಮ ಅಂತಃಕರಣವನ್ನೆಲ್ಲ ಭಗವಂತನಿಗೇ ಅರ್ಪಿಸಿಬಿಟ್ಟಿರುತ್ತಾರೆ. ಅವರು ಭಗವಂತನನ್ನು ಇಂಥದ್ದನ್ನು ಕೊಡು ಎಂದು ಕೇಳುವ ಗೋಜಿಗೇ ಹೋಗುವದಿಲ್ಲ. ಅವರಿಗೆ ಭಗವಂತನೇ ಬೇಕು, ಮತ್ತೇನೂ ಬೇಡ. ಅವರು ಭಗವಂತನ ಅನನ್ಯ ಭಕ್ತರಾಗಿರುತ್ತಾರೆ. ಆದರೆ ಯಾರಿಗೆ ಈ ಗುಟ್ಟು ಇನ್ನೂ ತಿಳಿಯದೆ ಇರುವದೋ ಅವರು ತಮಗೆ ಇದು ಬೇಕು, ಅದು ಬೇಡ-ಎಂಬ ಪ್ರಾರ್ಥನೆಯನ್ನು ದೇವರಲ್ಲಿ ಮಾಡಿಕೊಳ್ಳುತ್ತಲೇ ಇರುವರು.

---

* ಸಂಪುಟ 16, ಸಂಚಿಕೆ 12, ಆಗಸ್ಟ್ 1947, ಪುಟ 245

ಒಬ್ಬ ದೊಡ್ಡ ಸಾಧುಗಳಲ್ಲಿ ಅನೇಕ ಜನ ಶಿಷ್ಯರು ಶುಶ್ರೂಷೆಮಾಡಿಕೊಂಡಿದ್ದರು. ಸಾಧುಗಳು ಸ್ವಭಾವದಿಂದಲೇ ಸಮದರ್ಶಿಗಳಾಗಿದ್ದದ್ದರಿಂದ ಎಲ್ಲರನ್ನೂ ಒಂದೇ ಬಗೆಯ ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದರು. ಆದರೆ ಅವರ ಆಶ್ರಮಕ್ಕೆ ಯಾರಾದರೂ ಅತಿಥಿಗಳು ಬಂದಾಗ ಅವರನ್ನು ವಿಶೇಷಮರ್ಯಾದೆಯಿಂದ ಗೌರವಿಸುತ್ತಿದ್ದರು. ಒಮ್ಮೆ ಒಬ್ಬ ಶ್ರೀಮಂತರು ಆಶ್ರಮವನ್ನು ನೋಡಿಕೊಂಡು ಹೋಗುವದಕ್ಕೆ ಬಂದರು. ಸಾಧುಗಳು ಅವರನ್ನು ತಾವೇ ಎದ್ದು ಹಸ್ತಲಾಘವವನ್ನು ಕೊಟ್ಟು ಕರೆತಂದು ಒರಗುದಿಂಬಿರುವ ಜಮಖಾನೆಯಮೇಲೆ ಕುಳ್ಳಿರಿಸಿದರು. ಮಧ್ಯಾಹ್ನಕ್ಕೆ ಅವರಿಗೆ ವಿಶೇಷ ಭಕ್ಷ್ಯಭೋಜ್ಯಗಳ ಔತಣವನ್ನೂ ಮಾಡಿಸಿದರು. ಶ್ರೀಮಂತರನ್ನು ತಮ್ಮ ಹತ್ತಿರವೇ ಕೂರಿಸಿಕೊಂಡು ಆದರದಿಂದ ಮಾತನಾಡಿಸುತ್ತಿದ್ದರು. ಇಷ್ಟರಲ್ಲಿ ಒಬ್ಬ ಶಿಷ್ಯನು ಊಟಕ್ಕೆ ಬಂದಿಲ್ಲವೆಂಬುದು ಅವರ ಲಕ್ಷ್ಯಕ್ಕೆ ಬಿದ್ದಿತು. ಊಟವಾದಕೂಡಲೆ ಅವರು ಅವನ ಯೋಗಕ್ಷೇಮವನ್ನು ವಿಚಾರಿಸಿದರು. ಅವನ ಮುಖವು ಬಾಡಿತ್ತು. ಅವನ ಹೃದಯದ ಭಾವವನ್ನು ಅರಿತುಕೊಂಡು ಅವರು 'ಅಪ್ಪಾ, ಒಂದೆರಡು ದಿನ ಇಲ್ಲಿರುವ ಆಗಂತುಕರಿಗೆ ದೊರಕುವ ಮಾನಮರ್ಯಾದೆಗಳು ನಿನಗೆ ಬೇಕೊ, ನಮ್ಮ ಆಶ್ರಮದ ಶಿಷ್ಯರಿಗೆ ಮಾತ್ರ ದೊರೆಯುವ ಪ್ರತಿಫಲವು ಬೇಕೊ? ಅಭ್ಯಾಗತರಿಗೆ ಒಂದಿಷ್ಟು ಊಟವೂ ಉಪಚಾರವೂ ದೊರಕಿದರೆ, ಶಿಷ್ಯರಿಗೆ ನನ್ನ ಸರ್ವಸ್ವವೂ ದೊರಕುತ್ತದೆ' ಎಂದರು. ಶಿಷ್ಯನಿಗೆ ತನ್ನ ತಪ್ಪುತಿಳಿವಳಿಕೆಯ ಅರಿವಾಯಿತು. ಕೂಡಲೆ ಅವನು ಎದ್ದು ಎಂದಿನಂತೆ ಪ್ರಸನ್ನತೆಯಿಂದ ತನ್ನ ಗುರುಸೇವೆಯಲ್ಲಿ ತೊಡಗಿಬಿಟ್ಟನು. ಭಗವಂತನಲ್ಲಿ ಅನನ್ಯಭಕ್ತಿಯಿಂದ ಆತನನ್ನೇ ಶರಣುಹೊಕ್ಕವರಿಗೂ, ತಮಗೆ ಬೇಕಾಗಿರುವ ಒಂದೊಂದು ಪದಾರ್ಥವನ್ನೂ ಆತನಲ್ಲಿ ಬೇಡುವವರಿಗೂ ಇದೇ ತಾರತಮ್ಯವಿರುತ್ತದೆ. ಒಂದೊಂದು ವಿಷಯವನ್ನು ಬೇಡುವವರಿಗೆ ಅಷ್ಟುಮಾತ್ರವೇ ದೊರಕುವದು; ಆದರೆ ಭಗವಂತನೇ ತಮಗೆ ಬೇಕೆಂದು ಬಯಸುವವರಿಗೆ ಆತನ ಸರ್ವಸ್ವವೂ ಸೂರೆಯಾಗುವದು.

ಆದರೆ ಇಂಥ ಉನ್ನತದ ಸ್ಥಿತಿಯು ಎಲ್ಲರಿಗೂ ದಕ್ಕಿರುವದಿಲ್ಲ. ಅಂಥವರು ತಮ್ಮ ಅಂತಃಕರಣವನ್ನು ಪ್ರಾರ್ಥನೆ, ಸ್ತೋತ್ರ, ಧ್ಯಾನ, ಪೂಜೆ, ಜಪ–ಮುಂತಾದವುಗಳಿಂದ ಭಗವಂತನಿಗೆ ಸಂಬಂಧಿಸಿಕೊಳ್ಳುವದಕ್ಕೆ ಪ್ರಯತ್ನಿಸುತ್ತಿರಬೇಕು. ಈ ಸಾಧನಗಳ ಬಲದಿಂದ ಅವರೂ ಕ್ರಮಕ್ರಮವಾಗಿ ನಿಜವಾದ ಅನನ್ಯಭಕ್ತರಾಗುವರು.

ಸಾಧನಗಳಿಗೆಲ್ಲ 'ನಾನು' ಎಂಬ ಹುಸಿಕೇಂದ್ರವನ್ನು ಕರಗಿಸಿ ಪರಮಾತ್ಮನಲ್ಲಿ ನಿಲ್ಲುವದೇ ಉದ್ದೇಶವೆಂದು ಹಲವು ಬಾರಿ ಹೇಳಿದ್ದಾಗಿದೆ. ಇದನ್ನು ಎಂದಿಗೂ ಮರೆಯಬಾರದು. ನಮ್ಮ ಅಂತಃಕರಣವು ನಿಜವಾಗಿ ಅಂತಃಕರಣ, ಒಳಗಿನಕರಣ, ಎನಿಸಿಕೊಳ್ಳಬೇಕಾದರೆ, ಅದು ಎಲ್ಲಕ್ಕೂ ಒಳಗಿರುವ ಪರಮಾತ್ಮನ ಕಡೆಗೆ ತಿರುಗಬೇಕು. ಹೊರಗೆ ಕಾಣುವ

ವಿಷಯಗಳುಕೂಡ ಸರ್ವಾಂತರನಾದ ಆ ಪರಮಾತ್ಮನ ಪ್ರಸಾದವೇ ಎಂಬುದನ್ನು ನಾವು ಮನಸ್ಸಿಗೆ ತಂದುಕೊಳ್ಳುತ್ತಲಿರಬೇಕು. ಯಾವದನ್ನು ಕಂಡರೂ ಇದು ನನಗೆ ಬೇಕು. ಇದು ನನ್ನದು-ಎಂಬ ನನ್ನತನದ ಭಾವನೆಯನ್ನು ಚಿಗುಟಿಹಾಕುವದಕ್ಕೆ, 'ಭಗವಂತನೆ, ಇದೆಲ್ಲವೂ ನಿನ್ನ ಅನುಗ್ರಹವು' ಎಂಬ ಭಾವನೆಯು ಉತ್ತಮಸಾಧನೆ ಯಾಗಿರುತ್ತದೆ. ಈ ಆಹಾರವನ್ನು ನಾನು ಸಂಪಾದಿಸಿದೆನು. ಈ ಬಟ್ಟೆಯನ್ನು ನಾನು ಕೊಂಡೆನು, ಈ ಮನೆಯನ್ನು ನಾನು ಕಟ್ಟಿಸಿದೆನು ಅಥವಾ ಬಾಡಿಗೆಗೆ ಗೊತ್ತುಮಾಡಿದೆನು, ಈ ವಾಹನವನ್ನು ಇಂತಿಷ್ಟು ಹಣಕ್ಕೆ ಕೊಂಡಿರುತ್ತೇನೆ, ಈ ಹೊಲವು ನಮ್ಮ ತಂದೆಯವರದು, ಈ ದೇಶವು ನನ್ನದು, ಈ ಶ್ಲೋಕವು ನಾನು ರಚಿಸಿದ್ದು ಅಥವಾ ನನ್ನ ಶಿಷ್ಯನು ಬರೆದದ್ದು- ಎಂದು ಪ್ರತಿಯೊಂದು ವಸ್ತುವಿಗೂ 'ನನ್ನದು' ಎಂಬ ದಪ್ಪಕ್ಷರದ ಚೀಟಿಯನ್ನು ಅಂಟಿಸುತ್ತಿರುವದು ನಮ್ಮ ಅಂತಃಕರಣಕ್ಕೆ ಬಲು ಮೆಚ್ಚಾಗಿರುತ್ತದೆ, ಆದರೆ ನಾವು ಬೆಳೆಯುವ ಆಹಾರ, ನೇಯುವ ಬಟ್ಟೆ, ಕಟ್ಟುವ ಮನೆ, ಸಿದ್ಧಪಡಿಸುವ ವಾಹನ, ಉಳುವ ಹೊಲ, ಏರ್ಪಡಿಸುವ ದೇಶವಿಭಾಗ, ಬರೆಯುವ ಗ್ರಂಥ-ಇವೇ ಮುಂತಾದ ಪ್ರತಿಯೊಂದಕ್ಕೂ ಬೇಕಾಗುವ ದೇಹ, ಬಲ, ಆರೋಗ್ಯ, ಮನಶ್ಶಕ್ತಿ, ಪ್ರತಿಭೆ, ಬುದ್ಧಿಚಾತುರ್ಯ- ಇವು ಯಾವವನ್ನೂ ನಾವು ಸ್ವಂತವಾಗಿ ಸಂಪಾದಿಸಿಕೊಂಡಿರುವದಿಲ್ಲ. ಇವೆಲ್ಲವೂ ಭಗವಂತನು ಸೃಷ್ಟಿಸಿರುವ ಪ್ರಪಂಚದ ಪ್ರಕೃತಿನಿಯಮವನ್ನು ಅನುಸರಿಸಿ ಉಂಟಾದವುಗಳು. ಆದ್ದರಿಂದ ಆತನು ಇತ್ತಿರುವ ದೇಹ, ಕರಣ, ಮನಸ್ಸು, ಬುದ್ಧಿ ಮುಂತಾದವುಗಳನ್ನು ಆತನು ಏರ್ಪಡಿಸಿರುವ ನಿಯಮಗಳಿಗನು ಸಾರವಾಗಿ ನಾವು ಉಪಯೋಗಿಸಿದ್ದರೆ ಇದೆಲ್ಲವೂ ಆತನ ಅನುಗ್ರಹವೇ ಎಂದು ಒಪ್ಪಿಕೊಳ್ಳುವದು ವಸ್ತುಸ್ಥಿತಿಗೆ ಹೆಚ್ಚು ಒಪ್ಪಾಗಿರುತ್ತದೆ, ನಮ್ಮ ಮುನ್ನಡೆಗೆ ಸಹಾಯಕವೂ ಆಗಿರುತ್ತದೆ. ಆದ್ದರಿಂದ 'ನನ್ನದು' ಎಂಬ ಭಾವನೆಯು ಬಳಿದುಕೊಂಡಿರುವ ಚೀಟಿಗಳ ಮುಂದೆ "**ಅಲ್ಲ, ನಿನ್ನದೇ**" ಎಂಬ ಭಾವನೆಯ ಅಕ್ಷರಗಳನ್ನು ಮನಸ್ಸಿನ ಲೇಖನಿಯಿಂದ ಬರೆದಿಡುವ ಪದ್ಧತಿಯನ್ನು ನಾವು ಮೊದಲು ಅಭ್ಯಾಸಮಾಡಬೇಕು.

ಭೋಜನವನ್ನು ಮಾಡುವ ಮುಂಚೆ ಬಡಿಸಿದ ಅನ್ನವನ್ನು ಪರಮೇಶ್ವರನ ನೆನಪಿನಿಂದ ಪ್ರಸಾದವಾಗಿ ಮಾಡಿಕೊಂಡು ಊಟಮಾಡುವದಕ್ಕೆ ವಿಪ್ರರು ಹೇಳುವ ಒಂದು ಮಂತ್ರವಿದೆ. ಅದರ ಅಭಿಪ್ರಾಯವು ಹೀಗಿರುವದು: "**ಪ್ರಜಾಪತೇ ನತ್ವ ದೇತಾನ್ಯನ್ಯೋ ವಿಶ್ವಾ ಜಾತಾನಿ ಪರಿತಾ ಬಭೂವ, ಯತ್ಕಾಮಾಸ್ತೇ ಜುಹುಮನ್ತನ್ನೋ ಅಸ್ತು ವಯಂಸ್ಯಾಮ ಪತಯೋ ರಯೀಣಾಮ್**"- 'ಎಲೈ ಪ್ರಜಾಪತಿಯೆ, ನಿನ್ನನ್ನು ಬಿಟ್ಟರೆ ಮತ್ತೆ ಯಾರೂ ಈ ಹುಟ್ಟಿದ ವಸ್ತುಗಳನ್ನು ಸುತ್ತುಗಟ್ಟಿರುವ ವ್ಯಾಪಕನು ಇರುವದಿಲ್ಲ; ಇದೆಲ್ಲವೂ ನಿನ್ನ ಅನುಗ್ರಹವೇ. ನಾವು ಯಾವದನ್ನು ಬಯಸಿ ನಿನಗೆ ಈ ಅನ್ನವನ್ನು ಹೋಮಮಾಡುವೆವೋ ಅದು ನಮಗೆ ಉಂಟಾಗಲಿ! ನಾವು ಎಲ್ಲಾ ಬಗೆಯ ಸಿರಿಸಂಪತ್ತಿಗಳಿಗೂ ಒಡೆಯರಾಗುವಂತಾಗಲಿ!'

ನಿಜವಾಗಿ ಎಲ್ಲವೂ ಪರಮೇಶ್ವರನಿಂದಲೇ ಬಂದಿರುತ್ತದೆ. 'ಇದು ಯಾವದೂ ನಮ್ಮದಲ್ಲ, ಇದೆಲ್ಲವೂ ಆತನ ಅನುಗ್ರಹವೇ' ಎಂಬ ಭಾವನೆಯು ಬಂದ ಒಡನೆ ಎಲ್ಲವೂ ಆತನಿಗೆ ಅರ್ಪಿತವಾಗುವದು. ಆ ಬಳಿಕ ನಾವು ಸೇವಿಸುವದೆಲ್ಲವೂ ಆತನಿಗೆ ಸಮರ್ಪಿಸಿದ ಯಜ್ಞದ್ರವ್ಯದ ಶೇಷವಾಗಿರುತ್ತದೆಯಾದ್ದರಿಂದ ಅದು ಅಮೃತತುಲ್ಯವಾಗುತ್ತದೆ.

ನಮ್ಮ ಅಂತಃಕರಣಕ್ಕೆ ಒಳನೋಟ, ಹೊರನೋಟ–ಎಂದು ಎರಡು ಬಗೆಯ ನೋಟಗಳಿರುತ್ತವೆ. ಸ್ವಾಭಾವಿಕವಾಗಿ ಜನರ ಅಂತಃಕರಣಕ್ಕೆ ಹೊರನೋಟವೇ ಇರುತ್ತದೆ. ಆದರೆ ಅದನ್ನು ಒಳನೋಟಕ್ಕೆ ತಕ್ಕಂತೆ ಮಾರ್ಪಡಿಸಿಕೊಳ್ಳುವದು ಅವಶ್ಯ ಎಂದು ನಾವು ಆಗಾಗ್ಗೆ ಹೇಳುತ್ತಲೇ ಬಂದಿರುವೆವಷ್ಟೆ. ಇದರ ಅರ್ಥವೇನೆಂದರೆ, ಅಂತಃಕರಣವು ಎಲ್ಲಕ್ಕೂ ಒಳಗಿರುವ ಪರಮಾತ್ಮನಿಗೆ ಸಂಬಂಧಪಟ್ಟರೆ, ಅದು ಒಳನೋಟಕ್ಕೆ ತಕ್ಕದ್ದಾಯಿತೆಂದು ತಿಳಿಯಬೇಕು. ಸುಮ್ಮನೆ ಕಣ್ಣು ಮುಚ್ಚಿಕೊಂಡು ಕುಳಿತಮಾತ್ರದಿಂದ ಹೊರನೋಟವು ತಪ್ಪುವದಿಲ್ಲ. ಕಣ್ಣುಮುಚ್ಚಿಕೊಂಡು ಹೊರಗಿನ ವಿಷಯಗಳನ್ನು ಧ್ಯಾನಿಸುತ್ತಿದ್ದರೆ ಆಗಲೂ ಅಂತಃಕರಣವು ಹೊರನೋಟವನ್ನೇ ಅಭ್ಯಾಸಮಾಡುತ್ತಿದೆ ಎಂದು ತಿಳಿಯಬೇಕು. ಹೊರಗಿನ ವಿಷಯಗಳನ್ನೇ ಸೇವಿಸುತ್ತಿದ್ದರೂ ವಿಷಯಗಳಲ್ಲಿ ನನ್ನದೆಂಬ ಭಾವನೆಯಿಲ್ಲದೆ ಭಗವಂತನಿಗೆ ಸಂಬಂಧಿಸಿ ಕೊಂಡಿದ್ದರೆ, ಕಣ್ಣುಬಿಟ್ಟು ವ್ಯವಹಾರವನ್ನು ಮಾಡುತ್ತಿರುವಾಗಲೂ ಅಂತಃಕರಣಕ್ಕೆ ಒಳನೋಟವಿದ್ದಂತೆ ಆಗುವದು.

ಆದ್ದರಿಂದ ಪರಮಾತ್ಮನಲ್ಲಿ ನಾವು ಪ್ರಾರ್ಥನೆಯನ್ನು ಮಾಡುವಾಗ ಬೇಡಿಕೊಳ್ಳತಕ್ಕ ಉತ್ತಮವಾದ ವರವು ಯಾವದೆಂದರೆ 'ನಮ್ಮ ಅಂತಃಕರಣವು ಈ ಒಳನೋಟಕ್ಕೆ ತಕ್ಕದ್ದು ಆಗಬೇಕು, ಹಾಗೆ ಅನುಗ್ರಹಿಸು'–ಎಂದು ಕೇಳಿಕೊಳ್ಳಬೇಕು. ವಿಷಯಗಳನ್ನು ತೊರೆದು ದೂರವಾಗಿ ಸರಿಯುವದೂ ಉಪಾಯವಲ್ಲ. ಎಷ್ಟೋ ಜನರು ವಿಷಯ ಪ್ರಪಂಚದಲ್ಲಿ ವ್ಯವಹಾರಮಾಡುವದು ಅಪಾಯಕರವೆಂದು ತಪ್ಪಾಗಿ ಎಣಿಸಿಕೊಂಡು, ದೂರವಾಗಿ ಕಾಡಿಗೋ ಮೇಡಿಗೂ ಹೋಗಿ, ಏಕಾಂತವಾದ ಸ್ಥಳದಲ್ಲಿ ಕುಳಿತುಕೊಳ್ಳುವದಕ್ಕೆ ಪ್ರಯತ್ನವನ್ನು ಮಾಡುತ್ತಾರೆ. ಆದರೆ ಕರ್ಮೇಂದ್ರಿಯಗಳನ್ನು ಸುಮ್ಮನೆ ಮಾಡಿಕೊಂಡ ಮಾತ್ರದಿಂದ ಅಂತಃಕರಣಕ್ಕೆ ಒಳನೋಟವು ಬರುವದಿಲ್ಲ. ಸಾಮಾನ್ಯ ಜನರಿಗೆ ವಿಷಯಗಳಿಂದ ದೂರವಾದಷ್ಟೂ ವಿಷಯಗಳ ಚಿಂತನೆಯು ಹೆಚ್ಚುಹೆಚ್ಚಾಗಿ ಹತ್ತಿಕೊಳ್ಳುವದು. ಆದ್ದರಿಂದ ವಿಷಯಗಳನ್ನು ತ್ಯಜಿಸುವ ಅಥವಾ ವಿಷಯ ಭೋಗಗಳನ್ನು ಮಾಡುವದಿಲ್ಲವೆಂದು ಕಠೋರ ಪ್ರತಿಜ್ಞೆಯನ್ನು ಮಾಡುವ ಕಾಷ್ಠತಪಸ್ಸು ಬಹುಜನರಿಗೆ ಪ್ರಯೋಜನಕಾರಿಯಾಗುವದಿಲ್ಲ. ನಮ್ಮ ಮನಸ್ಸು ಯುಕ್ತಭಾವನೆಗಳನ್ನು ಮಾಡುವದಾದರೆ ವ್ಯವಹಾರದ ನಡುವೆಯಲ್ಲಿದ್ದರೂ ನಮಗೆ ಯಾವ ಹಾನಿಯೂ ಆಗುವದಿಲ್ಲ. ಆದ್ದರಿಂದ ಅಂತಃಕರಣದಲ್ಲಿ ಯುಕ್ತವಾದ ಭಾವನೆಗಳೇ ಹರಿದಾಡುತ್ತಿರುವಂತೆ ಅನುಗ್ರಹಿಸೆಂದು ಭಗವಂತನನ್ನು ಬೇಡಿಕೊಳ್ಳುತ್ತಿರಬೇಕು. ಇದು ಪ್ರಾರ್ಥನೆಗಳಲ್ಲೆಲ್ಲ ಉತ್ತಮವಾದದ್ದು.

ಪ್ರಪಂಚದ ಧರ್ಮಾರ್ಥವಾಙ್ಮಯದಲ್ಲೆಲ್ಲ ಅತ್ಯಂತ ಪುರಾತನವೆನಿಸಿರುವ ವೇದದಲ್ಲಿ ಒಂದು ಮಂತ್ರವಿದೆ. ಅದನ್ನು ದ್ವಿಜರು ವೇದವನ್ನು ಕಲಿಸುವದಕ್ಕೆ ಪ್ರಾರಂಭಿಸುವ ಮುಂಚೆ ಹುಡುಗರಿಗೆ ಹೇಳಿಕೊಡುತ್ತಾರೆ. ಆ ಮಂತ್ರವನ್ನು ಉಪದೇಶಿಸುವ ಪದ್ಧತಿಗೆ 'ಉಪನಯನ' ಎಂದು ಹೆಸರು. ಸಂಸ್ಕೃತದಲ್ಲಿರುವ ಆ ಮಂತ್ರವು ಗಾಯತ್ರಿ ಎಂಬ ಛಂದಸ್ಸಿನಲ್ಲಿರುವದರಿಂದ ಅದಕ್ಕೂ ಗಾಯತ್ರೀಮಂತ್ರವೆಂದೇ ಹೆಸರಾಗಿದೆ. ಆ ಮಂತ್ರವನ್ನು ಶ್ರದ್ಧೆಯಿಂದ ಬ್ರಾಹ್ಮಣಾದಿಗಳು ಪ್ರತಿದಿನವೂ ಮೂರು ಹೊತ್ತೂ ಜಪಿಸುತ್ತಿರುತ್ತಾರೆ. ಅದರ ಅರ್ಥವೇನೆಂದರೆ: 'ಯಾವಾತನು ನಮ್ಮ ಬುದ್ಧಿ ವೃತ್ತಿಗಳನ್ನು ಸರಿಯಾದ ಮಾರ್ಗದಲ್ಲಿ ನಡೆಯುವಂತೆ ಪ್ರೇರಿಸುವನೋ ಆ ಜಗತ್ಕಾರಣನಾದ ದೇವನ ತೇಜಸ್ಸನ್ನು ನಾವು ಧ್ಯಾನಿಸುತ್ತೇವೆ'. ಪರಮಾತ್ಮನ ಚಿಂತನೆಯಿಂದ ನಮ್ಮ ಬುದ್ಧಿವೃತ್ತಿಗಳು ಯುಕ್ತಭಾವನೆಗಳಾಗುವವು, ನಮ್ಮ ಇಹಪರ ಜೀವನಕ್ಕೆ ಸುಖದ ಪನ್ನೀರನ್ನು ಚಿಮುಕಿಸುವವು, ಅಧ್ಯಾತ್ಮಿಕವೇ ಮುಂತಾದ ತಾಪಗಳ ಬೇಗೆಯನ್ನು ಆರಿಸುವವು. ಆದ್ದರಿಂದ ನಾವು ಭಗವಂತನನ್ನೇ ಧ್ಯಾನಿಸಬೇಕು, ಆತನನ್ನೇ ಯುಕ್ತಭಾವನೆಗಳನ್ನು ಕೊಡೆಂದು ಬೇಡಬೇಕು– ಎಂಬುದು ಮಂತ್ರದ ಭಾವಾರ್ಥ.

ಯಾವನು ಶ್ರದ್ಧೆಯಿಂದ ಪ್ರತಿದಿನವೂ ಭಗವಂತನನ್ನು–'ದೇವದೇವನೆ, ನಮ್ಮ ಬುದ್ಧಿಯನ್ನು ನಿನ್ನ ಕಡೆಗೇ ತಿರುಗಿಸಿಕೊ. ನಾನು ವ್ಯವಹಾರದಲ್ಲಿ ಏನೇ ಮಾಡುತ್ತಿದ್ದರೂ ನಿನ್ನ ಕಡೆಯ ದೃಷ್ಟಿಯು ತಪ್ಪದಂತೆ ಅನುಗ್ರಹಿಸು' ಎಂದು ಬೇಡಿಕೊಳ್ಳುತ್ತಿರುವನೋ ಅವನಿಗೆ ದಿನದಿನವೂ 'ಉಪನಯನ' (ಭಗವಂತನ ಬಳಿಗೆ ಕೊಂಡೊಯ್ಯುವದು) ಎಂಬ ಪರಮಪ್ರಯೋಜನವನ್ನು ಪ್ರಾರ್ಥನೆಯು ಮಾಡಿಕೊಳ್ಳುತ್ತಿರುವದು. ಅವನ ಅಂತಃಕರಣದಲ್ಲಿ ಯಾವಾಗಲೂ ಯುಕ್ತ ಭಾವಗಳೇ ಹುಟ್ಟಿ ಬಲಿತುಕೊಳ್ಳುತ್ತಿರುವುವು. ಅವನ ಶರೀರಾರೋಗ್ಯವೂ ವಿದ್ಯೆ, ಬುದ್ಧಿ, ಕೀರ್ತಿ, ಸುಖಸಂಪತ್ತು– ಮುಂತಾದವುಗಳೂ ಕಟ್ಟಿಟ್ಟ ಬುತ್ತಿಯಾಗುವವು. ಅವನು ಹೊರಗೆ ವಿಷಯಗಳನ್ನು ಭೋಗಿಸುತ್ತಾ ವ್ಯವಹರಿಸುತ್ತಿರಲಿ, ಒಳಗೆ ಪರಮಾತ್ಮನನ್ನು ಚಿಂತಿಸುತ್ತಾ ವಿಶ್ರಮಿಸುತ್ತಿರಲಿ, ಅವನ ದೃಷ್ಟಿಯಲ್ಲಿ ಎಲ್ಲವೂ ಭಗವಂತನ ಲೀಲೆಗಳ ಆಡುಂಬೊಲವಾಗಿ ತೋರುತ್ತಾ ಜೀವನವನ್ನು ನಿತ್ಯಾನಂದದ ನೆಲೆವೀಡಾಗಿ ಮಾಡಿಬಿಡುವದು.

# ಅಧ್ಯಾಯ–2 : ಪರಮಾರ್ಥದೆಡೆಗೆ ಪ್ರಥಮ ಸೋಪಾನಗಳು

## 13. ಪ್ರಾರ್ಥನೆ

* ನಮ್ಮ ಅಂತಃಕರಣವನ್ನು ಭಗವಂತನಿಗೆ ಸಂಬಂಧಿಸಿಕೊಳ್ಳುವದಕ್ಕೆ ಪ್ರಾರ್ಥನೆ **ಜಪ**, ಸ್ತೋತ್ರ, ಕೀರ್ತನೆ–ಎಂಬ ಬಗೆಬಗೆಯ ಉಪಾಯಗಳುಂಟು. **ಪ್ರಾರ್ಥನೆ** ಎಂದರೆ ಭಗವಂತನನ್ನು ಬೇಡುವದು. ಜಪವೆಂದರೆ ಭಗವಂತನ ನಾಮವನ್ನೋ ಅಥವಾ ಯಾವದಾದರೊಂದು ಪ್ರಾರ್ಥನಾರೂಪವಾದ ಮಂತ್ರವನ್ನೋ ಮತ್ತೆ ಮತ್ತೆ ಭಾವನೆಯಿಂದೊಡಗೂಡಿ ಗಟ್ಟಿಯಾಗಿ ಅಥವಾ ಮನಸ್ಸಿನಲ್ಲಿ ಉಚ್ಚರಿಸುವದು. ಸ್ತೋತ್ರ ಎಂದರೆ ಪರಮಾತ್ಮನ ಗುಣಗಳನ್ನೂ ಕರ್ಮಗಳನ್ನೂ ಹೊಗಳುವದು. ಕೀರ್ತನೆ ಎಂದರೆ ಭಗವಂತನ ಸ್ವರೂಪವನ್ನೂ ಆತನಿಗೂ ನಮಗೂ ಇರುವ ಸಂಬಂಧವನ್ನೂ ಶ್ರದ್ಧಾಭಕ್ತಿಗಳಿಂದೊಡಗೂಡಿ ಗಟ್ಟಿಯಾಗಿ ಗಾನಮಾಡುವದು.

**ಪ್ರಾರ್ಥನೆಯಲ್ಲಾಗಲಿ ಸ್ತೋತ್ರಾದಿಗಳಲ್ಲಾಗಲಿ ಭಗವಂತನ ಮಹಿಮೆಗೆ ಹೆಚ್ಚಿನ ಪ್ರಾಧಾನ್ಯವನ್ನು ಕೊಡಬೇಕೇ ಹೊರತು ನಮ್ಮ ಇಚ್ಛೆಗೆ ಹೆಚ್ಚಿನ ಪ್ರಾಧಾನ್ಯವನ್ನು** ಕೊಡಬಾರದು. ಭಾವನೆಗಳನ್ನು ಯುಕ್ತಭಾವನೆಗಳು, ಅಯುಕ್ತಭಾವನೆಗಳು–ಎಂದು ಎರಡು ಪಂಗಡವಾಗಿ ವಿಂಗಡಿಸಬಹುದಷ್ಟೆ. ಇದರಂತೆಯೇ ಪ್ರಾರ್ಥನೆಗಳನ್ನೂ ಸ್ತೋತ್ರಗಳನ್ನೂ ಯುಕ್ತಪ್ರಾರ್ಥನೆಗಳು, ಅಯುಕ್ತ ಪ್ರಾರ್ಥನೆಗಳು; ಯುಕ್ತಸ್ತೋತ್ರಗಳು, ಅಯುಕ್ತಸ್ತೋತ್ರಗಳು– ಎಂದು ವಿಂಗಡಿಸಬಹುದಾಗಿದೆ. ಯಾವ ಪ್ರಾರ್ಥನೆಯಲ್ಲಿ ಅಥವಾಸ್ತೋತ್ರದಲ್ಲಿ ಭಗವಂತನಿಗೆ ಹೆಚ್ಚಿನ ಸ್ಥಾನವಿರುವದೋ ಅದು ಯುಕ್ತಪ್ರಾರ್ಥನೆಯು, ಯುಕ್ತಸ್ತೋತ್ರವು. ಆದರೆ ಯಾವ ಪ್ರಾರ್ಥನೆಯಲ್ಲಿ ಅಥವಾ ಸ್ತೋತ್ರದಲ್ಲಿ ಭಗವಂತನ ಸಂಕಲ್ಪವನ್ನು ಲೆಕ್ಕಿಸದೆ ನಮ್ಮ ಸಂಕಲ್ಪಕ್ಕೇ ಹೆಚ್ಚಿನ ಸ್ಥಾನವಿರುವದೋ ಅದು ಅಯುಕ್ತಪ್ರಾರ್ಥನೆ, ಅಯುಕ್ತಸ್ತೋತ್ರ.. ನಮಗೆ ಹಿತವಾದದ್ದು ಯಾವದು ಎಂಬುದು ಭಗವಂತನಿಗೆ ಗೊತ್ತು. ಆದ್ದರಿಂದ ಭಗವಂತನ ಸಂಕಲ್ಪವು ನಿರಾತಂಕವಾಗಿ ನಡೆಯುವಂತೆ ನಮ್ಮ ಸಂಕಲ್ಪವನ್ನು ಹಿಮ್ಮೆಟ್ಟಿಸಿ ಪ್ರಾರ್ಥನೆಯನ್ನು ಮಾಡಬೇಕು. ಆಗ ನಮ್ಮ ಸುತ್ತಲಿನ ಕಷ್ಟ ಪರಂಪರೆಗಳು ಎಷ್ಟೇ ಬಲವಾಗಿ ಕಂಡರೂ ಸೂರ್ಯನ ಕಿರಣಕ್ಕೆ ಕರಗಿಹೋಗುವ ಕಾವಳದಂತೆ ಕರಗಿ ಮಾಯವಾಗುವದು. ಹೊರಗೆ ಕಾಣುವ ಹುಸಿತೋರಿಕೆಗಳ ಕಡೆಗೆ ಲಕ್ಷ್ಯ ವಿರಬಾರದು; ಅವುಗಳೆಲ್ಲವನ್ನೂ ತನ್ನ ಅಧೀನದಲ್ಲಿಟ್ಟುಕೊಂಡಿರುವ ಭಗವಂತನ ಕಡೆಗೆ ಲಕ್ಷ್ಯವಿರಬೇಕು.

---

* ಸಂಪುಟ 17, ಸಂಚಿಕೆ 1, ಸೆಪ್ಟೆಂಬರ್ 1947, ಪುಟ 1

**ಪ್ರಾರ್ಥನೆಯನ್ನು ಮನಃಪೂರ್ವಕವಾಗಿ ಮಾಡಬೇಕು, ಶ್ರದ್ಧಾಪೂರ್ವಕವಾಗಿ ಮಾಡಬೇಕು.** ಮನಃಪೂರ್ವಕವಾಗಿ ಪ್ರಾರ್ಥಿಸುವದೆಂದರೆ ಮನಸ್ಸಿನಲ್ಲಿ ನಿಜವಾದ ಭಾವನೆಯು ತುಂಬಿತುಳುಕಾಡುವಂತಿರುವದು. ದುಷ್ಟನಾದ ಹುದ್ದೇದಾರನನ್ನು ಅವನ ನೌಕರನು ಪ್ರಾರ್ಥಿಸುತ್ತಿರುವಾಗ 'ಇವನಿಗೆ ಹೇಗೂ ಕರುಣೆಯಿಲ್ಲ, ಕರುಣೆಯಿದ್ದರೂ ನನ್ನನ್ನು ರಕ್ಷಿಸುವದಕ್ಕೆ ಇವನು ಪ್ರಯತ್ನಮಾಡುವನೆಂಬ ಭರವಸೆಯಿಲ್ಲ; ಒಂದು ವೇಳೆ ಇವನು ಪ್ರಯತ್ನಮಾಡಿದರೂ ಇವನಿಗೆ ನನಗೆ ಉಪಕಾರಮಾಡುವ ಶಕ್ತಿಯೇ ಇಲ್ಲ' ಎಂದು ಒಳಗೆ ತಿಳಿದು ಹೊರಗೆ ತೋರು ಗಾಣಿಕೆಗೆ 'ಮಹಾಸ್ವಾಮಿಯವರಿಂದಲೇ ನಾನು ಬದುಕಬೇಕಾಗಿದೆ; ತಮ್ಮನ್ನು ಬಿಟ್ಟರೆ ನನಗೆ ಮತ್ತಾರು ಗತಿ ಇದ್ದಾರೆ? ತಮಗೆ ನನ್ನನ್ನು ಬದುಕಿಸುವ ಮನಸ್ಸು ಇದ್ದೇ ಇದೆ' ಎಂದು ಪ್ರಾರ್ಥಿಸುವದು ಮನಃಪೂರ್ವಕವಾದ ಪ್ರಾರ್ಥನೆಯಲ್ಲ, ಶ್ರದ್ಧಾಪೂರ್ವಕವಾದ ಪ್ರಾರ್ಥನೆಯೂ ಅಲ್ಲ. ಕೆಲವರಿಗೆ ಭಗವಂತನು ನಮ್ಮ ಇಷ್ಟಾರ್ಥವನ್ನು ನೆರವೇರಿಸುವನೆಂಬ ನಂಬಿಕೆಯಿರುವದರಿಂದ ಅವರಲ್ಲಿ ಶ್ರದ್ಧೆಯಿರುತ್ತದೆ. ಆದರೆ ಅವರು ಯಾರೋ ಬರೆದಿರುವ ಪ್ರಾರ್ಥನೆಗಳನ್ನು ಅಥವಾ ಸ್ತೋತ್ರಗಳನ್ನು ಗಿಣಿಯಂತೆ ಗಟ್ಟಿಮಾಡಿ ದಿನಕ್ಕೆ ಒಂದೆರಡು ಸಲ ಹೇಳಿಕೊಳ್ಳುತ್ತಾರೆ. ಅವರಿಗೆ ಆ ಪ್ರಾರ್ಥನೆಯಲ್ಲಿ ಅಡಗಿರುವ ಭಾವವು ಪ್ರಾರ್ಥನೆ ಯಾಗುವದಿಲ್ಲ. 'ದೀನ ನಾನು ಸಮಸ್ತಲೋಕಕೆ ದಾನಿ ನೀನು' ಎಂಬ ಪದ್ಯವನ್ನು ಒಬ್ಬನು ಪ್ರಾರ್ಥನೆಗೆ ಉಪಯೋಗಿಸುತ್ತಾನೆಂದು ಇಟ್ಟುಕೊಳ್ಳಿ. 'ಭಗವಂತನು ಉದಾರಮನಸ್ಕನಾದ ದಾನಶೂರನಾದ ಮಹಾಮಹಿಮನು, ಆತನು ಎಲ್ಲರಿಗೂ ಅವರವರ ಇಷ್ಟಾರ್ಥವನ್ನು ಕೊಡುತ್ತಾನೆ. ನಾನು ಆತನ ಮುಂದೆ ದೀನನಾಗಿ ಪ್ರಾರ್ಥಿಸುತ್ತಾ ನಿಂತಿರುತ್ತೇನೆ'–ಎಂಬ ಭಾವವು ಹೃದಯದಲ್ಲಿ ಮೂಡಿದ್ದರೆ ಮಾತ್ರ ಅದು ಮನಃಪೂರ್ವಕವಾದ ಪ್ರಾರ್ಥನೆಯಾಗುವದು; ಇಲ್ಲದಿದ್ದರೆ ಬರಿಯ ಪದ್ಯಪಠನೆಯಾಗುವದು, ಮನಃಪೂರ್ವಕವಾದದ್ದಾಗುವದೇ ಇಲ್ಲ.

ಆದ್ದರಿಂದ ಪ್ರಾರ್ಥನೆಯಲ್ಲಿ ಹೃದಯವು ಭಾವಪೂರಿತವಾಗಿ ಶ್ರದ್ಧಾಯುತವೂ ಆಗಿರಬೇಕು. ನಾವು ಹೇಳಿರುವ ಶ್ರದ್ಧೆಯು ಅಂಧಶ್ರದ್ಧೆಯಲ್ಲ; ಏಕೆಂದರೆ ಭಗವಂತನಲ್ಲಿ ನಾವು ಪ್ರಾರ್ಥಿಸುವದು ಈಶ್ವರನ ಸಂಕಲ್ಪವೇ ಈಡೇರಬೇಕೆಂಬುದು. ಅದು ಆಗಲೆ ಈಡೇರಿಯೇ ಬಿಟ್ಟಿರುತ್ತದೆ. ಪ್ರಾರ್ಥನೆ ಎಂದರೆ ಭಗವಂತನನ್ನು ಇಂಥದ್ದೊಂದನ್ನು ಮಾಡಿಕೊಡೆಂದು ಕೇಳುವದಲ್ಲ; ನಮಗೆ ಕಷ್ಟವು ಒದಗಿರುವಾಗ ಇದನ್ನು ಸರಿಪಡಿಸಿಕೊಡು ಎಂದು ಕೇಳಿಕೊಳ್ಳುವದೇ ಯುಕ್ತವೆಂದು ನಮಗೆ ತೋರಿದರೂ ಪ್ರಾರ್ಥನೆಗೆ ಅದೇನೂ ನಿಜವಾದ ಉದ್ದೇಶವಲ್ಲ. ನಮ್ಮ ಮನಸ್ಸನ್ನು ಭಗವಂತನ ಸಂಕಲ್ಪಕ್ಕೆ ಹೊಂದಿಸಿಕೊಳ್ಳುವದೇ ಪ್ರಾರ್ಥನೆಯ ಉದ್ದೇಶವು. ಭಗವಂತನು ಸತ್ಯಸಂಕಲ್ಪನು; ಆತನ ದೃಷ್ಟಿಯಿಂದ ಆತನ

ಸಂಕಲ್ಪವು ನೆರವೇರಿಯೇ ಇರುತ್ತದೆ. ಶ್ರದ್ಧಾಯುತವಾದ ಪ್ರಾರ್ಥನೆಯಿಂದ ಈ ಪರಮಾರ್ಥವು ನಮ್ಮ ಅಂತಃಕರಣದಲ್ಲಿ ಮಿಂಚುತ್ತದೆ. ನಮ್ಮ ಅಂತಃಕರಣವು ಸತ್ಯಸಂಕಲ್ಪನಾದ ಈಶ್ವರನ ಶುದ್ಧಸತ್ತ್ವಯುತವಾದ ಇಚ್ಛೆಗೆ ಹೊಂದಿಕೊಂಡಕೂಡಲೆ ನಮಗೆ ಪರಮಾರ್ಥದ ಅರಿವಾಗುತ್ತದೆ, ನಮ್ಮ ಬಾಹ್ಯ ಸಂನಿವೇಶವು ದಿವ್ಯವಾದ ಈಶ್ವರನ ಇಷ್ಟಕ್ಕೆ ಅನುಗುಣವಾಗಿ ರೂಪಿಸಿಕೊಂಡು ನಮಗೆ ನಿಜವಾದ ಸುಖವನ್ನುಂಟು ಮಾಡುವದಕ್ಕೆ ಮೊದಲುಮಾಡುತ್ತದೆ.

ಭಾವಯುತವಾದ ಶ್ರದ್ಧಾಯುಕ್ತವಾದ **ಪ್ರಾರ್ಥನೆಯನ್ನು ಮಾಡುವ ಅಭ್ಯಾಸವನ್ನು ನಾವು ಎಡೆಬಿಡದೆ ಮಾಡುತ್ತಿರಬೇಕು.** ಈಗಿನ ಸ್ಥಿತಿಯಲ್ಲಿ ನಮ್ಮ ಅಂತಃಕರಣವು ಪರಮಾರ್ಥದ ಮಟ್ಟಕ್ಕಿಂತ ಬಹಳ ಕೆಳಗೆ ಇರುತ್ತದೆ. ನಿಜವಾದ ಪ್ರಾರ್ಥನೆಯನ್ನು ಆದರದಿಂದ ಸರಿಯಾದ ರೀತಿಯಲ್ಲಿ ದೀರ್ಘಕಾಲದವರೆಗೆ ಮಾಡುತ್ತಿದ್ದರೆ ಬರುಬರುತ್ತಾ ನಮ್ಮ ಅಂತಃಕರಣವು ಈಶ್ವರಸಂಕಲ್ಪದ ಮಟ್ಟವನ್ನು ಕಾಣುತ್ತದೆ. ಈಶ್ವರನ ದೃಷ್ಟಿಯಾದ ಪರಮಾರ್ಥದೃಷ್ಟಿಯನ್ನೇ ಅವಲಂಬಿಸಿಬಿಡುತ್ತದೆ. ಈಗಿನ ವಿಕ್ಷೇಪದಿಂದ ಚದರುತ್ತಿರುವ ಮನಸ್ಸು ಏಕಾಗ್ರವಾಗಿ ಅತೀಂದ್ರಿಯವಾದ ದಿವ್ಯಶಾಂತಿಯ ಸುಖವನ್ನು ಕಂಡುಕೊಳ್ಳುತ್ತದೆ. ಆದರೆ ಅಭ್ಯಾಸವು ಎಡೆಬಿಡದೆ ಸಾಗಿದ ಹೊರತು ಈ ಸ್ಥಿತಿಯನ್ನು ಮುಟ್ಟುವದು ಯಾರಿಂದಲೂ ಆಗಲಾರದು. ಸಾಮಾನ್ಯವಾಗಿ ವಿಷಯದಲ್ಲಿಯೇ ಆಸಕ್ತವಾಗಿರುವ ನಮ್ಮ ಅಂತಃಕರಣವು, ವಿಷಯ ಚಿಂತನೆಯನ್ನು ಬಿಟ್ಟು ಮೇಲಕ್ಕೇಳುವದು ಬಹಳ ಕಷ್ಟವಾಗಿರುತ್ತದೆ. ಭಗವಂತನ ಚಿಂತನೆಯನ್ನು ಮನಸ್ಸಿಗೆ ಹತ್ತಿಸಿಕೊಂಡಕೂಡಲೆ, ನಮ್ಮ ಅಂತಃಕರಣಕ್ಕೆ ಹೊಸ ಶಕ್ತಿಯು ಬರುತ್ತದೆ; ಮತ್ತೆ ಮತ್ತೆ ಬಿಡದೆ ಪ್ರಾರ್ಥನೆಯನ್ನು ಮಾಡುತ್ತಿದ್ದರೆ ಆ ದೇವದೇವನ ದಿವ್ಯಶಕ್ತಿಯ ಪ್ರವಾಹವು ಅದರೊಳಕ್ಕೆ ಇಳಿದುಕೊಳ್ಳುತ್ತದೆ; ಅಭ್ಯಾಸವು ತೀರ ಬಲಿತುಕೊಂಡರೆ ಆಗ "**ಬ್ರಹ್ಮಸಂಸ್ಪರ್ಶ**"ವಾಗುತ್ತದೆ. ಎಲ್ಲೆಲ್ಲಿಯೂ ಭಗವಂತನ ಅನುಗ್ರಹದ ಕಿರಣಗಳು ಪರಸರಿಸಿರುವದು ಕಂಡುಬರುತ್ತದೆ. ಇಡಿಯ ಪ್ರಪಂಚವೇ ಭಗವಂತನ ಸಂಕಲ್ಪಕ್ಕೆ ಅನುಗುಣವಾಗಿ ಆತನ ನಿಯಮಕ್ಕೆ ಒಳಪಟ್ಟು ಆನಂದದ ಗಾಳಿಯೇ ಬೀಸುತ್ತಿರುವದೆಂಬುದು ಮನದಟ್ಟಾಗುತ್ತದೆ. 'ಈ ಆಕಾಶದಲ್ಲಿ ಆನಂದವು ಇಲ್ಲದಿದ್ದರೆ, ಯಾರುತಾನೆ ತಮ್ಮ ತಮ್ಮ ವ್ಯವಹಾರವನ್ನು ಮಾಡಿಯಾರು, ಯಾರುತಾನೆ ಬದುಕಿದ್ದಾರು?' ಎಂಬ ಉಪನಿಷತ್ತಿನ ಸಾರವತ್ತಾದ ವಚನದ ಅಭಿಪ್ರಾಯವು ಮನಸ್ಸಿಗೆ ಹಿಡಿಯುತ್ತದೆ.

ಪ್ರಾರ್ಥನೆಯ ಕ್ರಮವನ್ನೂ ಫಲವನ್ನೂ ವಿಶೇಷರೂಪದಿಂದ ಅರಿತುಕೊಳ್ಳುವದಕ್ಕೆ ದ್ವಿಜರು ಜಪಿಸುತ್ತಿರುವ ಗಾಯತ್ರಿಯೆಂಬ ಮಂತ್ರವನ್ನು ಉದಾಹರಣೆಗೆ ತೆಗೆದುಕೊಳ್ಳೋಣ. 'ಯಾವಾತನು ನಮ್ಮ ಬುದ್ಧಿವೃತ್ತಿಗಳನ್ನು ಸರಿಯಾದ ಮಾರ್ಗದಲ್ಲಿ ಪ್ರೇರಿಸುವನೋ ಆ

ಜಗತ್ಕಾರಣನಾದ ದೇವನ ತೇಜಸ್ಸನ್ನು ನಾವು ಧ್ಯಾನಿಸುತ್ತೇವೆ.' ಈ ಪ್ರಾರ್ಥನೆಯಲ್ಲಿ ಅಡಗಿರುವ ಭಾವನೆಗಳನ್ನು ಒಂದೊಂದಾಗಿ ಬಿಡಿಸಿ ನೋಡಿದರೆ ಇಷ್ಟು ಕಾಣುವದು: 'ದೇವನೆ, ನೀನು ಎಲ್ಲವನ್ನೂ ಹಡೆಯುವ ಜಗತ್ಕಾರಣನು; ಈ ಜಗತ್ತಿನಲ್ಲಿರುವದೆಲ್ಲವೂ ನಿನ್ನಿಂದ ಬಂದದ್ದು, ನಿನ್ನ ಅನುಗ್ರಹವು. ನಿನ್ನ ಅತ್ಯಂತ ಶ್ರೇಷ್ಠವಾದ ಬೆಳಕನ್ನು ನಾವು ಚಿಂತಿಸುವೆವು. ನಾವು ಇರುವ ಅಜ್ಞಾನದ ಕಗ್ಗತ್ತಲೆಯು ನಿನ್ನ ಸ್ವರೂಪವಾಗಿರುವ ಮಿಗಿಲಿಲ್ಲದ ಬೆಳಕಿನ ಮಹಿಮೆಯಿಂದಲೇ ಪರಿಹಾರವಾಗಬೇಕಾಗಿದೆ. ನಾವು ಎಷ್ಟು ಕಾಲ ಈ ಕತ್ತಲೆಯಲ್ಲಿರುವೆವೋ ಅಷ್ಟು ಕಾಲವೂ ವ್ಯವಹಾರದಲ್ಲಿ ಮುಂಗಾಣದೆ ನಡೆಯಬೇಕಾಗಿರುತ್ತದೆ. ಅಷ್ಟು ಕಾಲವೂ ನಮ್ಮ ಬಾಳಿನಲ್ಲಿ ಸುಖದ ಸುಳಿವು ಇರುವದಿಲ್ಲ. ಆದರೆ ನಿನ್ನ ಸ್ವರೂಪವಾದ ದಿವ್ಯತೇಜಸ್ಸಿ ನಲ್ಲಿದ್ದುಕೊಂಡು ನೋಡುವದಕ್ಕೆ ಮೊದಲು ಮಾಡಿದವರಿಗೆ ಎಲ್ಲೆಲ್ಲಿಯೂ ಸುವ್ಯವಸ್ಥಿತವಾದ ಸುಖಪ್ರದವಾದ ದೃಶ್ಯಗಳೇ ಕಾಣಿಸುತ್ತಿರುವವು. ಆದ್ದರಿಂದ ನಾವು ನಿನ್ನ ಆ ದಿವ್ಯತೇಜಸ್ಸಿನ ಕಡೆಗೆ ಹರಿಯುವಂತೆ ಅನುಗ್ರಹಿಸು, ಮುಂಗಾಣದ ಈ ಕತ್ತಲೆಯ ಅಜ್ಞಾನ ವೃತ್ತಿಗಳಿಂದ ಮುಗ್ಗರಿಸುವದನ್ನು ನಿಲ್ಲಿಸು.'

ಭಗವಂತನೇ ಜಗತ್ತಿಗೆಲ್ಲಕ್ಕೂ ಕಾರಣನು. ಭಗವಂತನಿಗಿಂತ ಬೇರೆಯಾಗಿ ಸ್ವತಂತ್ರವಾಗಿರುವ, ಭಗವಂತನಷ್ಟೇ ಸ್ವತಂತ್ರವಾಗಿರುವ, ಭಗವಂತನಂತೆಯೇ ನಮ್ಮ ಬಾಳಿಗೆ ಸುಖವನ್ನು ನೀಡುವ, ಯಾವದೊಂದು ವಸ್ತುವೂ ಈ ಜಗತ್ತಿನಲ್ಲಿರುವದಿಲ್ಲ. ಆದ್ದರಿಂದ ಆ ಭಗವಂತನನ್ನೇ ನಾವು ಮನಸ್ಸಿನಲ್ಲಿಟ್ಟುಕೊಳ್ಳಬೇಕೆಂಬುದು ಯುಕ್ತವಾಗಿದೆ. ಆದರೂ ನಮಗೆ ಭಗವಂತನನ್ನು ಮರೆಯಿಸಿ ಭಗವಂತನಿಗಿಂತ ತಾವೇ ಹೆಚ್ಚಿನ ಪರಮಾರ್ಥವೆಂದು, ತಾವೇ ಬಾಳಿನ ತಿರುಳೆಂದು ನಮಗೆ ತೋರುವಂತೆ ಮಂಕುಬೂದಿ ಎರಚುವ ನೂರಾರು ಪದಾರ್ಥಗಳು ನಮಗೆ ಕಾಣಬರುತ್ತಿರುವವು. ಅವುಗಳು ಪರಮಾರ್ಥವೆಂದು, ಅವುಗಳಿಂದಲೇ ನಮ್ಮ ಜೀವನದ ಮುನ್ನಡೆಯಾಗುವದೆಂದು, ಅವುಗಳಿಲ್ಲದಿದ್ದರೆ ನಾವು ಎಂದಿಗೂ ಸುಖದಿಂದ ಬಾಳಲಾರೆವೆಂದು ನಮ್ಮ ಭಾವನೆಯಿರುತ್ತದೆ. ಹೆಂಡಿರು ಮಕ್ಕಳು, ಮನೆ, ಹಣ, ದನಕರು, ಅಧಿಕಾರ, ಕೀರ್ತಿ, ವಿದ್ಯೆ, ಕೌಶಲ-ಮುಂತಾದ ಎಷ್ಟೋ ವಸ್ತುಗಳು ನಮ್ಮ ಮೇಲೆ ಈಗ ಅಧಿಕಾರವನ್ನು ನಡೆಯಿಸುತ್ತಿರುವವು. ಇವುಗಳು ನಮ್ಮ ವ್ಯವಹಾರದಲ್ಲಿ ಎಷ್ಟೇ ಅವಶ್ಯವಾಗಿ, ಎಷ್ಟೇ ನಿಜವಾಗಿ, ಎಷ್ಟೇ ನಿತ್ಯವಾಗಿ, ಕಂಡರೂ ಭಗವಂತನಷ್ಟು ಅವಶ್ಯವಲ್ಲ. ಅಷ್ಟು ನಿಜವಲ್ಲ, ಅಷ್ಟು ನಿತ್ಯವಲ್ಲ. ಇವುಗಳಲ್ಲಿ ಕಾಣುವ ಸುಖವು ಭಗವಂತನಿಂದಲೇ ಬಂದದ್ದು. ಇದನ್ನರಿತುಕೊಂಡು ನಾವು ಭಗವಂತನ ಕಡೆಗೆ ತಿರುಗುವವರೆಗೂ ಇವು ನಮ್ಮನ್ನು ಆಳುತ್ತಿರುವವು. ಆದರೆ ಇವುಗಳ ಜೊಳ್ಳುತನವನ್ನು ಕಂಡುಕೊಂಡು, ಇವುಗಳಿಗಿಂತ ಎಲ್ಲಾ ಬಗೆಯಿಂದಲೂ ಮೇಲುಮಟ್ಟದ ಸತ್ಯವಾಗಿರುವ ಭಗವಂತನ ಕಡೆಗೆ ತಿರುಗುವದೇ ತಡ, ಇವುಗಳ ಆಳಿಕೆಯು ಕೊನೆಗಾಣುವದು.

ಹೀಗೆ ಭಗವಂತನ ಕಡೆಗೆ ತಿರುಗುವದು ಬಹಳ ಕಷ್ಟವೆಂದು ನಮಗೆ ತೋರುವದು ಸಹಜ. ಆದರೆ ನಾವು ಭಗವಂತನ ದಿವ್ಯತೇಜಸ್ಸನ್ನು ಎಡೆಬಿಡದೆ ಶ್ರದ್ಧಾಭಕ್ತಿಗಳಿಂದ ಚಿಂತಿಸುವದನ್ನು ಅಭ್ಯಾಸಮಾಡಬೇಕು. ಭಗವಂತನ ತೇಜಸ್ಸನ್ನು ಚಿಂತಿಸುವದಕ್ಕೆ ಹೆಚ್ಚಿನ ಜಾಣತನವು ಬೇಕಿಲ್ಲ; ಆದರದಿಂದ ಎಡೆಬಿಡದೆ ಅದಕ್ಕಾಗಿ ಮಾಡುವ ಪ್ರಯತ್ನವಿಶೇಷವು ಬೇಕಾಗಿರುತ್ತದೆ; ಎಲ್ಲೆಲ್ಲಿಯೂ ಮುತ್ತಿಕೊಂಡಿರುವ ಸೂರ್ಯನ ಪ್ರಚಂಡಕಿರಣಗಳ ಬೆಳಕಿನಲ್ಲಿಯೇ ಇದ್ದುಕೊಂಡು ಕಣ್ಣು ಮಂಜಾಗಿ ದಿಕ್ಕುಗಾಣದಿರುವ ಗೂಬೆಗಳಂತೆ ಆ ಪರಮಾತ್ಮನ ಬೆಳಕಿನಲ್ಲಿಯೇ ನಾವು ನಿಂತಿದ್ದರೂ ನಮ್ಮ ಕಣ್ಣಿಗೆ ಈಗಿನ ಸ್ಥಿತಿಯಲ್ಲಿ ಅಜ್ಞಾನದ ಮಂಜು ಮುಸುಕಿರುವದು. ಈ ಕಣ್ಣುಮಂಜು ಪರಿಹಾರವಾದರೆ ಆ ದೇವದೇವನ ದಿವ್ಯತೇಜದ ಸಹಾಯದಿಂದ ಪರಮಾರ್ಥವನ್ನು ಇದ್ದದ್ದು ಇದ್ದಹಾಗೆ ಕಾಣುವ ದಿವ್ಯದೃಷ್ಟಿಯು ನಮಗೆ ಬರುವದು.

ಭಗವಂತನನ್ನು ನಮ್ಮ ಬುದ್ಧಿವೃತ್ತಿಗಳನ್ನು ನಿನ್ನ ಕಡೆಗೇ ತಿರುಗಿಸು ಎಂದು ಪ್ರಾರ್ಥಿಸುವದು ನಮ್ಮ ಈಗಿನ ಸ್ಥಿತಿಯಿಂದ ಅವಶ್ಯವಾಗಿದ್ದರೂ ಪರಮಾರ್ಥ ದೃಷ್ಟಿಯಿಂದ ಅದೂ ನಿಜವಾಗಿ ಅನವಶ್ಯ. ಪರಮಾರ್ಥವೇನೆಂದರೆ ಭಗವಂತನೇ ನಮ್ಮೆಲ್ಲರಿಗೂ ತಾನೇ ದಯೆಯಿಂದ ನಮಗೆ ಸನ್ಮಾರ್ಗದಲ್ಲಿ ನಡೆಯುವ ಇಚ್ಛೆಯನ್ನು ಕೊಟ್ಟಿರುತ್ತಾನೆ, ತಾನೇ ಅದನ್ನು ಪರಿಪೂರ್ತಿಮಾಡುತ್ತಿರುತ್ತಾನೆ. ಭಗವಂತನು ಈಗ ನಮಗಾಗಿ ಹೊಸದಾಗಿ ಏನನ್ನೂ ಏರ್ಪಡಿಸಬೇಕಾದದ್ದು ಉಳಿದಿರುವದಿಲ್ಲ; ನಾವು ಮಾತ್ರ ಈ ಪರಮಾರ್ಥವನ್ನು ಅರಿತುಕೊಳ್ಳುವ ಮಟ್ಟಕ್ಕೆ ಏರಬೇಕಾಗಿರುತ್ತದೆ. ಒಂದು ಬರಿಯ ಪಾತ್ರೆಯಲ್ಲಿ ನೀರು ತುಂಬಿದ ಕೂಡಲೆ, ಅದು ಬರಿದೆಂಬ ಅರಿವು ಹೋಗಿಬಿಡುವಂತೆ ನಮ್ಮ ಅಂತಃಕರಣದಲ್ಲಿ ಭಗವಂತನ ಚಿಂತನೆಯು ಬಂದ ಕೂಡಲೆ ಅದರಲ್ಲಿರುವ ವಿಷಯಚಿಂತನೆಯು ಹಾರಿಹೋಗುತ್ತದೆ.

ಸಹಜಸ್ಥಿತಿಯಲ್ಲಿ ಭಗವಂತನ ಚಿಂತೆಯಿಂದಲೇ ತುಂಬಿರಬೇಕಾದ ನಮ್ಮ ಅಂತಃಕರಣವು ಈಗಿನ ಅಶುದ್ಧಸ್ಥಿತಿಯಲ್ಲಿ ವಿಷಯಚಿಂತನೆಯಿಂದ ತುಂಬಿಕೊಂಡಿರುತ್ತದೆ. ಬರಿಯ ಪಾತ್ರೆಯೆಂದು ನಾವು ಕರೆಯುತ್ತಿರುವ ಪಾತ್ರೆಯಲ್ಲಿ ಸಹಜವಾಗಿ ವಾಯುವಿರುತ್ತದೆ, ಆದರೆ ಅದರೊಳಕ್ಕೆ ಯಾವದಾದರೂ ಧಾನ್ಯವನ್ನು ತುಂಬಿದರೆ ಆ ವಾಯು ಹೊರಗೆ ಹೋಗಿಬಿಡುತ್ತದೆ. ಇದರಂತೆ ಭಗವಂತನ ಅನುಗ್ರಹವು ಸಹಜವಾಗಿಯೇ ನಮ್ಮ ಮೇಲೆ ಇರುತ್ತದೆಯಾದರೂ ನಮ್ಮ ಅಂತಃಕರಣದಲ್ಲಿ ವಿಷಯಚಿಂತೆಯು ತುಂಬಿ ಅದನ್ನು ಮರೆಯಿಸಿಬಿಟ್ಟಿರುತ್ತದೆ. ಆದ್ದರಿಂದ ನಾವು ನಿಜವಾಗಿ ಪ್ರಾರ್ಥನೆಯಲ್ಲಿ ಮಾಡಬೇಕಾಗಿರುವದೇನೆಂದರೆ ಸಹಜವಾಗಿರುವ ಭಗವಂತನ ಅನುಗ್ರಹವನ್ನು ಮನಸ್ಸಿಗೆ ತಂದುಕೊಳ್ಳುವದು. ಭಗವಂತನು ನಮ್ಮ ಬುದ್ಧಿವೃತ್ತಿಗಳನ್ನು ತನ್ನ ಕಡೆಗೇ ತಿರುಗಿಸುತ್ತಿದ್ದಾನೆ. 'ನಾನು ಭಗವಂತನನ್ನು ನಂಬಿರುತ್ತೇನೆ. ಆದ್ದರಿಂದ ಇನ್ನು ಮೇಲೆ ನನಗೆ ವಿಷಯಗಳ ಚಿಂತನೆಯು ಯಾವ

ಬಾಧೆಯನ್ನೂ ಉಂಟುಮಾಡಲಾರದು' ಎಂಬ ನೆನಪನ್ನು ಮನಸ್ಸಿಗೆ ಬಲವಾಗಿ ತಂದುಕೊಳ್ಳುವದೇ ಪ್ರಾರ್ಥನೆಯ ಮುಖ್ಯೋದ್ದೇಶ ವಾಗಿರಲಿ. ಆಗ ಪ್ರಾರ್ಥನೆಯ ಫಲವು ಪೂರ್ಣವಾಗಿ ಕೈಗೂಡುತ್ತದೆ. ಪರಮೇಶ್ವರನ ಆಶ್ರಯದಲ್ಲಿರುವವರಿಗೆ ನಷ್ಟವಾಗದ ಅನಿಷ್ಟವಿಲ್ಲ, ಪ್ರಾಪ್ತವಾಗದ ಇಷ್ಟವಿಲ್ಲ ಎಂಬ ತತ್ತ್ವವು ಮನಸ್ಸಿಗೆ ಹಿಡಿಯುವದು, ಪ್ರಾರ್ಥನೆ ಎಂದರೆ ಪರಮಾತ್ಮನನ್ನು ಇಂಥದ್ದನ್ನು ಹೋಗಲಾಡಿಸೆಂದು ಅಥವಾ ಕೊಡಿಸೆಂದು ಕೇಳಿಕೊಳ್ಳುವದಲ್ಲ, ಆತನ ಅನುಗ್ರಹವನ್ನು ಮನಸ್ಸಿಗೆ ಸ್ಫುಟಗೊಳಿಸುವ ಉಪಾಯ ಎಂಬುದೂ ಸ್ಪಷ್ಟವಾಗುವದು.

# 14. ಸ್ತೋತ್ರ

* ಪ್ರಾರ್ಥನೆಯಿಂದ ನಮ್ಮ ಅಂತಃಕರಣವು ಭಗವಂತನಿಗೆ ಸಂಬಂಧಿಸಿಕೊಳ್ಳುತ್ತದೆ. ಅದರಿಂದ ಮನಸ್ಸಿನಲ್ಲಿರುವ ಅಶುಭವಾಸನೆಗಳ ಶಕ್ತಿಯು ಸಡಿಲಾಗುತ್ತದೆ; ಶುಭವಾಸನೆಗಳಿಗೆ ಬಲವು ಬರುತ್ತದೆ. ಮನಸ್ಸಿನಲ್ಲಿ ಉತ್ತಮವಾದ ಭಾವನೆಗಳು ತೋರಿಕೊಳ್ಳುತ್ತವೆ. ನಮ್ಮ ಆಧ್ಯಾತ್ಮಿಕ (ಒಳಗಿನ) ಮತ್ತು ಆಧಿಭೌತಿಕ (ಹೊರಗಿನ) ದೃಶ್ಯಗಳು ಉತ್ತಮವಾದ, ಪ್ರಿಯವಾದ, ಹಿತವಾದ ಅವಸ್ಥೆಯನ್ನು ಪಡೆಯುತ್ತವೆ. ಅಳತೆಯ, ಮಿತಿಯಾದ, ಶಕ್ತಿಗಳುಳ್ಳ ನಮ್ಮ ಮನಸ್ಸು ಅನಂತವಾದ ಸರ್ವಶಕ್ತಿಗಳುಳ್ಳ ಭಗವಂತನ ಸಂಕಲ್ಪಕ್ಕೆ ಹೊಂದಿಕೆಯಾದರೆ ಇಷ್ಟಾರ್ಥವು ಒಂದಿಷ್ಟಾದರೂ ನೆರವೇರುವದೆಂಬುದು ಆಶ್ಚರ್ಯವಲ್ಲ. ಆದರೆ ಸರಿಯಾದ ರೀತಿಯಿಂದ ಪ್ರಾರ್ಥಿಸಿದರೆ ಫಲವು ನಿಯತವಾಗಿ ಕಾಣಿಸಿಕೊಂಡೇ ತೀರುತ್ತದೆ, ಬೇಗನೆ ಕಾಣಿಸಿಕೊಳ್ಳುತ್ತದೆ. ಹೆಚ್ಚಿನ ಪರಿಮಾಣದಲ್ಲಿ ಕಾಣಿಸುತ್ತದೆ. ಅಷ್ಟೇ ಅಲ್ಲ, ಶಾಸ್ತ್ರೀಯವಾದ ರೀತಿಯಿಂದ ಪ್ರಾರ್ಥಿಸಿದಷ್ಟೂ ಅಂತಃಕರಣಕ್ಕೆ ಪ್ರಾರ್ಥನೆಯನ್ನು ಮಾಡುವ ಬಲವು ಹೆಚ್ಚಿಕೊಳ್ಳುತ್ತದೆ. ಪ್ರಾರ್ಥನೆಯ ಆನಂದವು ಹೆಚ್ಚು ಹೆಚ್ಚಾಗಿ ಅನುಭವಕ್ಕೆ ಬರುವದಕ್ಕೆ ಮೊದಲಾಗುತ್ತದೆ.

ಪ್ರಾರ್ಥನೆಯಲ್ಲಿ ನಮ್ಮ ಗೋಳಿನ ಪಟ್ಟಿಯನ್ನು ಈಶ್ವರನ ಮುಂದೆ ಓದುತ್ತಾ ಕುಳಿತುಕೊಳ್ಳುವದು ಸರಿಯಲ್ಲ. ನಮ್ಮ ಬಡತನ, ಬೇನೆ, ಸೋಲು, ನಷ್ಟ, ಅಂಜಿಕೆ, ದುಗುಡ, ದುಮ್ಮಾನ, ಮುಪ್ಪು–ಇವುಗಳನ್ನು ಹೇಳಿಕೊಂಡು ಅಳುವದು ಸರಿಯಾದ ಪ್ರಾರ್ಥನೆಯಾಗಲಾರದು. ಇಂಥ ಭಾವಗಳನ್ನು ನಾವು ವ್ಯವಹಾರದಲ್ಲಿ ಬಳಸಿಕೊಂಡೇ ನಮ್ಮ ಅಂತಃಕರಣವನ್ನು ಹೊಲಸುಮಾಡಿಕೊಂಡಿರುವೆವು. ಯಾವದಾದರೊಂದು

* ಸಂಪುಟ 17, ಸಂಚಿಕೆ 2, ಅಕ್ಟೋಬರ್ 1947, ಪುಟ 26–32

ಸ್ಥಲವನ್ನು ಸಾರಿಸಿ, ಗುಡಿಸಿ, ರಂಗವಲ್ಲಿಯನ್ನಿಟ್ಟು ಬರೋಣವೆಂದು ಸಂಕಲ್ಪಿಸಿಕೊಂಡವನು ಆ ಸ್ಥಲದಲ್ಲಿಯೇ ಇನ್ನಷ್ಟು ಕೆಸರನ್ನೋ, ಕಸಕಡ್ಡಿಗಳನ್ನೋ ತಂದುಹಾಕುವನೇನು? ಇಲ್ಲ. ಅದರಂತೆ ಮನಸ್ಸಿಗೆ ಶಿವಸಂಕಲ್ಪವನ್ನು ಕೊಡುವವನು ಅಶುಭಭಾವನೆಗಳನ್ನು ಮನಸ್ಸಿನಲ್ಲಿ ಹೊರಳಾಡಿಸುವದೇ ಪ್ರಾರ್ಥನೆಯೆಂಬ ತಪ್ಪು ತಿಳಿವಳಿಕೆಯನ್ನು ಮೊದಲು ತೊಲಗಿಸಿಕೊಳ್ಳಬೇಕು. ಇಂಥ ಸಂಕಟಗಳೆಲ್ಲವೂ ಭಗವಂತನ ಸನ್ನಿಧಿಯಲ್ಲಿ ಹಾರಿಹೋಗು ವವೆಂದೂ ಭಗವಂತನ ಸನ್ನಿಧಿಯು ಇವುಗಳ ಪ್ರತಿಪಕ್ಷಭಾವನೆಗಳ ಬೊಕ್ಕಸವೆಂದೂ ದೃಢವಾಗಿ ನಂಬಬೇಕು. 'ನಾನ್ಯಾಕೆ ಪರದೇಶಿ, ನಾನ್ಯಾಕೆ ಬಡವನ್ಯೆ, ನೀನಿರುವ ತನಕ, ಹರಿಯೆ?' ಎಂಬ ಹರಿದಾಸರ ಮನೋಭಾವವನ್ನು ತಂದುಕೊಳ್ಳಬೇಕು. ಒಂದುವೇಳೆ ನಮ್ಮ ಪಾಪವಾಗಲಿ, ದುಃಖವಾಗಲಿ, ಪ್ರಾರ್ಥನೆಯ ಕಾಲಕ್ಕೆ ನಮ್ಮ ಮನಸ್ಸಿಗೆ ಬಂದರೂ 'ಭಗವಂತನೆ ನಿನ್ನ ಮಹಿಮೆಯಿಂದ ಇವೆಲ್ಲವೂ ಮಾಯವಾಗಿ ನಿನ್ನನ್ನು ಶರಣುಹೊಕ್ಕವರು ಹೇಗೆ ಇರಬೇಕೋ ಹಾಗೆ ಮಾಡಿಕೊ' ಎಂದು ಕೇಳಿಕೊಳ್ಳಬೇಕು. ಇದರಿಂದ ಅಶುಭವಿಚಾರಗಳ ಅಂಜಿಕೆಯು ಕೂಡಲೆ ಹರಿಹೋಗುವದು, ಭಗವಂತನ ಅನುಗ್ರಹದ ಫಲದ ಭಾವನೆಯು ಮನಸ್ಸನ್ನು ಆಕ್ರಮಿಸಿಕೊಳ್ಳುವದು. ಆ ಉದಾಹರಣೆಗೆ ಒಬ್ಬ ಸಾಧುಗಳು ಹಾಡಿರುವ ಒಂದು ಪ್ರಾರ್ಥನಾರೂಪವಾದ ಅಭಂಗವನ್ನು ಇಲ್ಲಿ ಕೊಡುವೆವು.

**ಬಹಳ ಪಾಪಿ ನಾನು । ಶರಣು ಬಂದೆ ನಿನಗೆ ।**
**ತಕ್ಕೊಳ್ಳೊ ಪದರೊಳಗೆ । ರಾಮರಾಯ ॥1॥**
**ಸಾಧುಸಂತರಿಂದ । ಮಹಿಮೆ ಕೇಳಿ ಕೇಳಿ ।**
**ನಂಬಿದೆ ಮನದಲ್ಲಿ । ನಿನ್ನ ಪಾದ ॥2॥**
**ನಿನ್ನ ಕೃಪೆಯಿಂದ । ಎಷ್ಟೋ ಪಾಪಿ ಜನರು ।**
**ಆನಂದ ಹೊಂದಿದರು । ಭಕ್ತರಾಗಿ ॥3॥**
**ಹಾಗೆ ಆಗಬೇಕು । ಮಹಾಭಾಗವತ ।**
**ನಿನಗೆ ಶರಣಾಗತ । ಈ ಅನಾಥ ॥4॥**

ಇಲ್ಲಿ ಮಾಡಿರುವ ಪ್ರಾರ್ಥನೆಯನ್ನು ನೋಡಿರಿ; ಭಗವಂತನಲ್ಲಿ ಹೀಗೆಂದು ಸಾಧಕನು ಬೇಡಿಕೊಂಡಿರುತ್ತಾನೆ; ದೇವ, ನಾನು ಬಹಳ ಪಾಪಿ ಎಂಬುದು ನಿಜ; ಆದರೇನು? ಮಹಾಮಹಿಮನಾದ ನಿನ್ನನ್ನು ಶರಣುಹೊಕ್ಕಿದ್ದೇನೆ. ನೀನು ಎಲ್ಲರಿಗೂ ರತಿಯನ್ನುಂಟು ಮಾಡುವ ಆನಂದಸ್ವರೂಪನು; ನನ್ನನ್ನು ನಿನ್ನ ಅನುಗ್ರಹವು ಮೇಲಕ್ಕೆತ್ತಿ ಕಾಪಾಡಲಾರದೆ? ಇಡಿಯ ಬ್ರಹ್ಮಾಂಡವೇ ನಿನ್ನ ಉದರದಲ್ಲಿರುವದು; ನನಗೊಬ್ಬನಿಗೆ ಇಂಬಿಲ್ಲವೆ? ಸತ್ಪುರುಷರಾದ ಮಹನೀಯರು ಶ್ರೀರಾಮನ ಕೃಪೆಯು ಎಂಥ ಪತಿತರನ್ನೂ ಪಾವನಗೊಳಿಸುವದೆಂದು ನಿನ್ನ ಮಹಿಮೆಯನ್ನು ನಿತ್ಯವೂ ಕೊಂಡಾಡುತ್ತಿರುವರು.

ಆದ್ದರಿಂದಲೇ ನನಗೂ ಪೂರ್ಣವಾಗಿ ನಂಬಿಕೆಯಾಗಿಬಿಟ್ಟಿರುವದು. ನಿನ್ನ ಪಾದವನ್ನೇ ನಂಬಿರುವ ನನಗೆ ಯಾವ ಪಾಪದ ಅಂಜಿಕೆ? ಸತ್ಪುರುಷರಿಗೇ ನಿನ್ನ ಅನುಗ್ರಹವಾಗುವದೇ ಹೊರತು ಪಾಪಿಗಳಿಗೆ ಆಗುವದಿಲ್ಲ ಎಂಬ ಭಯವು ನನಗೆ ಎಳ್ಳಷ್ಟೂ ಇಲ್ಲ. ಏಕೆಂದರೆ ಹಲವು ಜನರು ಪಾಪಿಗಳೇ ಆಗಿದ್ದು ನಿನ್ನನ್ನು ನಂಬಿ ಭಜಿಸಿದ ಮಾತ್ರದಿಂದ ನಿನ್ನ ದಯೆಯಿಂದ ಭಕ್ತರಾಗಿ ಲೋಕದಲ್ಲಿ ಪ್ರಸಿದ್ಧರಾಗಿರುತ್ತಾರೆ. ಆದ್ದರಿಂದ ನಾನು ನಿನ್ನನ್ನೇ ಶರಣುಹೊಕ್ಕಿರುವದರಿಂದ ಇನ್ನು ಮೇಲೆ ಎಂದಿಗೂ ಅನಾಥನಲ್ಲ, ನಿನ್ನನ್ನು ನೆನೆದಂದಿನಿಂದ ನಾನು ಪಾಪಿಯಲ್ಲ, ಸಾಧುವೆ, ಮಹಾಭಾಗವತನೇ.'

ಅಂತಃಕರಣವು ಪ್ರಾರ್ಥನೆಯಿಂದ ಅಲ್ಪವಾದ ಈ ಸಂಸಾರದ ಸಂಕಟಗಳನ್ನು ಚಿಂತಿಸುವದನ್ನು ಬಿಟ್ಟು ಅನಂತವಾದ ಭಗವಂತನ ಮಹಿಮೆಯನ್ನು ಚಿಂತಿಸುವದಕ್ಕೆ ಮೊದಲಾಗುತ್ತದೆ. ಆಗ ಅದಕ್ಕೆ ಹೊಸ ಹುರುಪು, ಬಲ, ಉತ್ಸಾಹ-ಇವೆಲ್ಲವೂ ಸೇರಿಕೊಳ್ಳುತ್ತವೆ. ಈ ಹೆಚ್ಚಿನ ಸ್ಥಿತಿಯಲ್ಲಿ ಅಂತಃಕರಣದಲ್ಲಿರುವ ರಜಸ್ತಮೋಗುಣಗಳು ಮರೆಯಾಗಿ ಬರಿಯ ಸತ್ತ್ವಗುಣವೊಂದೇ ಉಳಿದುಕೊಳ್ಳುವದು. ಆಗ ಅಂತಃಕರಣಕ್ಕೆ ಪರಮಾರ್ಥವನ್ನು ಅರಿತುಕೊಳ್ಳುವ ಯೋಗ್ಯತೆಯೂ ಬರುತ್ತದೆ. ಕೆಟ್ಟ ವಾಸನೆಗಳ, ಅಯುಕ್ತಭಾವನೆಗಳ, ಕಾಟವೂ ತಪ್ಪಿಹೋಗುತ್ತದೆ.

ಭಗವಂತನ ಸಂಬಂಧವು ಹೆಚ್ಚಿದಂತೆಲ್ಲ ಮನುಷ್ಯನಿಗೆ ನಾನೆಂಬ ಹುಸಿ ಕೇಂದ್ರದ ಉಪಟಳವು ಕಡಿಮೆಯಾಗುತ್ತಾ ಬರುತ್ತದೆ. ಆದ್ದರಿಂದಲೇ ನಾವು ಪ್ರಾರ್ಥನೆಯಲ್ಲಿ ಭಗವಂತನ ಮಹಿಮೆಗೆ ಹೆಚ್ಚಿನ ಪ್ರಾಧಾನ್ಯವನ್ನು ಕೊಡಬೇಕೆಂದು ಹೇಳುತ್ತಿರುವದು. ಈ ದೃಷ್ಟಿಯಿಂದ ನೋಡಿದರೆ ಪ್ರಾರ್ಥನೆಗಿಂತಲೂ ಸ್ತೋತ್ರವು ಹೆಚ್ಚಿನ ಸಾಧನವಾಗುತ್ತದೆ. ಏಕೆಂದರೆ ಅದರಲ್ಲಿ ಭಗವಂತನಲ್ಲಿರುವ ಕಲ್ಯಾಣಗುಣಗಳ ಭಾವನೆಯೇ ಹೊರತು 'ನಾನು' ಎಂಬ ಭಾವನೆಯು ಒಂದಿಷ್ಟೂ ಸುಳಿದಾಡುವದಕ್ಕೆ ಅವಕಾಶವಿರುವದಿಲ್ಲ. **ಸ್ತೋತ್ರವೆಂದರೇನು? ಪರಮಾರ್ಥ ತತ್ತ್ವವಾದ ಪರಮೇಶ್ವರನ ಮಹಿಮೆಯನ್ನು ಮನಸ್ಸಿಗೆ ತಂದುಕೊಳ್ಳುವದಕ್ಕೆ ಸಹಾಯವಾಗಿರುವ ಗುಣವರ್ಣನೆ.** ಪರಮೇಶ್ವರನ ಕಲ್ಯಾಗುಣಗಳನ್ನು ಕೊಂಡಾಡುವದು. ಯಾವದಾದರೊಂದು ಇಷ್ಟಾರ್ಥವನ್ನು ಪಡೆಯುವದಕ್ಕೆಂದು ಒಬ್ಬ ಸಾಹುಕಾರನನ್ನು ಅಧಿಕಾರಿ ಇಲ್ಲದ ಸಲ್ಲದ ಗುಣಗಳನ್ನು ಆರೋಪಿಸಿ ಮಾಡುವ ಮುಖಸ್ತುತಿಗೆ ಇದನ್ನು ಹೋಲಿಸಬಾರದು. ನಾವು ತಪ್ಪಾಗಿ ಮಾಡಿಕೊಂಡಿರುವ ಅನರ್ಥಕರವಾದ ಭಾವನೆಗಳನ್ನು ಬಿಟ್ಟು ಪರಮಾರ್ಥದಲ್ಲಿ ನಿಜವಾಗಿರುವ ಗುಣಗಳನ್ನು ಒಂದೊಂದಾಗಿ ಮನಸ್ಸಿಗೆ ತಂದುಕೊಳ್ಳುವ ಸಾಧನವಿದು.

ಪರಮಾತ್ಮನು ತಾನಿರುವಂತೆ, ಪ್ರಪಂಚಕ್ಕೆ ಅಥವಾ ಪ್ರಪಂಚದಲ್ಲಿರುವ ಜೀವರುಗಳಾದ ನಮಗೆ ಸಂಬಂಧಿಸದೆ ಇರುವ ನಿರಪೇಕ್ಷಸ್ಥಿತಿಯಲ್ಲಿ, ಹೀಗಿರುವನೆಂದು ಹೇಳುವದು ಯಾರಿಂದಲೂ

ಆಗಲಾರದು. ಸೂರ್ಯನು ಪ್ರಕಾಶಮಯನೆಂಬುದು ಅವನ ಬೆಳಕಿನಿಂದ ಬೆಳಗುವ ವಸ್ತುಗಳ ಅಪೇಕ್ಷೆಯಿಂದ ಆಡುವ ಮಾತೇ ಹೊರತು, ಸ್ವತಃ 'ಸೂರ್ಯನು ಪ್ರಕಾಶಮಯನು' ಎಂಬ ಮಾತುಗಳಿಗೆ ಅರ್ಥವಿಲ್ಲ. ಬೆಂಕಿಯು ಸುಡುವದು ಎಂಬುದು ಅದರಿಂದ ದಾಹ್ಯವಾಗಿರುವ ಪದಾರ್ಥಗಳ ದೃಷ್ಟಿಯಿಂದ. ಇದರಂತೆ ಪರಮೇಶ್ವರನು ದಯಾಮಯನು ಎಂಬುದು ದಯನೀಯರಾದ ಜೀವರ ದೃಷ್ಟಿಯಿಂದಲೇ; ಆತನು ಸೃಷ್ಟಿಸ್ಥಿತಿಲಯಕರ್ತನು ಎನ್ನುವದು ಸೃಷ್ಟವಾಗಿರುವ ಪ್ರಪಂಚದ ದೃಷ್ಟಿಯಿಂದಲೇ ಆಗಿರುತ್ತದೆ. ಆದ್ದರಿಂದ ಪರಮಾರ್ಥತತ್ತ್ವವು ಅಥವಾ ಪರಮೇಶ್ವರನು ತನ್ನ ಸ್ವರೂಪದಿಂದ ಹೇಗಿರುವನು?–ಎಂಬ ಪ್ರಶ್ನೆಗೆ ಉತ್ತರವನ್ನು ಹೇಳುವದು ಕಷ್ಟ. ಆತನು ಈ ಜಗತ್ತಿಗೆಲ್ಲಕ್ಕೂ ನಮಗೂ ಆತ್ಮನಾಗಿರುವನು ಎಂದು ಮಾತ್ರವೇ ಹೇಳಬಹುದೇ ಹೊರತು ಅವನಲ್ಲಿ ಯಾವದೊಂದು ವಿಶೇಷವನ್ನಾದರೂ ಗುರುತಿಸಿ ಹೇಳುವದಕ್ಕೆ ಬರುವದಿಲ್ಲ; ಏಕೆಂದರೆ ಅವನಲ್ಲಿ ಯಾವ ವಿಶೇಷವೂ ಇರುವದಿಲ್ಲವೆಂಬುದೇ ಪರಮಾರ್ಥವಾಗಿರುತ್ತದೆ. ಆದ್ದರಿಂದ ಉಪನಿಷತ್ತುಗಳಲ್ಲಿ 'ಆ ಪರಮಾತ್ಮನನ್ನು ವಾಗಾದಿಯಾದ ಇಂದ್ರಿಯಗಳಾಗಲಿ ಮನಸ್ಸಾಗಲಿ ಗ್ರಹಿಸಲಾರವು', 'ಆತನನ್ನು ಇದಲ್ಲ, ಎಂದು ಮಾತ್ರವೇ ಉಪದೇಶಮಾಡಬಹುದು' ಎಂದು ಸಾರಿರುತ್ತದೆ.

ಆದರೂ ಅದೇ ಪರಮೇಶ್ವರನನ್ನೇ ಉಪಾಸಕರಾದ ನಮ್ಮಗಳ ದೃಷ್ಟಿಕೋನದಿಂದ ನೋಡಿ 'ಮನೋಮಯನು, ಸತ್ಯಕಾಮನು, ಸತ್ಯಸಂಕಲ್ಪನು, ದಯಾಮಯನು ಪ್ರೇಮಮಯನು' ಎಂದು ಉಪನಿಷತ್ತುಗಳಲ್ಲಿಯೂ ಪುರಾಣೇತಿಹಾಸದಲ್ಲಿಯೂ ಹೊಗಳಿರುತ್ತದೆ. ಪ್ರಕೃತಕ್ಕೆ ನಾವು ಈ ಸವಿಶೇಷವಾದ, ಸಗುಣರೂಪವನ್ನೇ ಲೆಕ್ಕಕ್ಕೆ ಇಟ್ಟುಕೊಳ್ಳುವೆವು. ಪರಮೇಶ್ವರನು ಸಗುಣನೆಂದು ಮಾತ್ರವೇ ಅಲ್ಲದೆ ಸಾಕಾರನೆಂದೂ ನಮ್ಮಲ್ಲಿ ಅನೇಕರು ನಂಬುತ್ತಾರೆ. ಉಪನಿಷತ್ತುಗಳಲ್ಲಿಯೂ ಪುರಾಣಗಳಲ್ಲಿಯೂ ಪರಮೇಶ್ವರನನ್ನು ಸಾಕಾರನೆಂದು ಉಪಾಸನೆಮಾಡುವ ವಿಧಾನವನ್ನೂ ತಿಳಿಸಿರುತ್ತದೆ. ಆ ಆಕಾರದ ವಿಷಯದಲ್ಲಿ ಬಹಳ ಚರ್ಚೆಗಳಿರುವದರಿಂದಲೂ ಪ್ರಕೃತವಿಚಾರಕ್ಕೆ ಅದು ಅಷ್ಟಾಗಿ ಬೇಕೂ ಇರುವದಿಲ್ಲವಾದ್ದರಿಂದಲೂ ಈಗ ಅದರ ಚರ್ಚೆಯನ್ನು ಕೈಬಿಟ್ಟು ಸ್ತೋತ್ರದ ವಿಷಯವನ್ನು ಮಾತ್ರ ಇಲ್ಲಿ ವಿಮರ್ಶೆಗೆ ತೆಗೆದುಕೊಳ್ಳುವೆವು.

ಸ್ತೋತ್ರಗಳನ್ನು ಮೊದಮೊದಲು ಹಿಂದಿನ ಭಕ್ತರೂ ಋಷಿಗಳೂ ಸಾಧುಗಳೂ ಪದಪದ್ಯಗಳ ರೂಪದಲ್ಲಿ ರಚಿಸಿ ಸ್ತೋತ್ರವನ್ನು ಮಾಡುವ ವಿಧಾನವನ್ನು ತಿಳಿಸಿ ಕೊಟ್ಟಿರುತ್ತಾರೆ. ಇವು ಸಂಸ್ಕೃತಭಾಷೆಯಲ್ಲಿಯೇ ಅಲ್ಲದೆ ನಮ್ಮ ತಾಯ್ನುಡಿಯಲ್ಲಿಯೂ ಹೇರಳವಾಗಿರುತ್ತವೆ. ಇಂಥ ಕೆಲವು ಸ್ತೋತ್ರಗಳನ್ನು ಆರಿಸಿಕೊಂಡು ಚಿಕ್ಕಂದಿನಿಂಲೂ ನಮ್ಮಲ್ಲಿ ಹಲವರು ಗಟ್ಟಿಮಾಡಿಕೊಂಡು ಹೇಳುತ್ತಾ ಬಂದಿರುತ್ತೇವೆ. ವಿಷ್ಣುಸಹಸ್ರ ನಾಮಸ್ತೋತ್ರ, ಶಿವಕವಚ, ಇಂದ್ರಾಕ್ಷಿ, ಭೀಷ್ಮಸ್ತವರಾಜ,

ಶಿವಮಹಿಮ್ನ ಸ್ತೋತ್ರ, ಉಪಮನ್ಯುಕೃತ ಶಿವಸ್ತೋತ್ರ, ರಾಮಕರ್ಣಾಮೃತ, ಆದಿತ್ಯಹೃದಯ–ಮುಂತಾದ ಪುರಾಣೋಕ್ತಸ್ತೋತ್ರಗಳೂ ಶಂಕರಾಚಾರ್ಯರು, ರಾಮಾನುಜಾಚಾರ್ಯರು, ವೇದಾಂತದೇಶಿಕರು, ಮಧ್ವಾಚಾರ್ಯರು, ವಲ್ಲಭಾಚಾರ್ಯರು–ಮುಂತಾದ ಆಚಾರ್ಯರುಗಳು ಮಾಡಿರುವ ಸಂಸ್ಕೃತ ಸ್ತೋತ್ರಗಳು ಹಲವು ನಮ್ಮಲ್ಲಿ ಬಳಕೆಯಲ್ಲಿರುತ್ತವೆ. ಈಚೆಗೆ ಶಿವಭಕ್ತರೂ ವಿಷ್ಣುಭಕ್ತರೂ ಹಲವು ಭಕ್ತಿಯುತವಾದ ಸ್ತೋತ್ರಗಳನ್ನು ಕನ್ನಡದಲ್ಲಿ ರಚಿಸಿರುತ್ತಾರೆ. ಇವುಗಳಲ್ಲಿ ಪರಮೇಶ್ವರನನ್ನು ಹೇಗೆ ಸ್ತೋತ್ರಮಾಡಬೇಕೆಂಬುದಕ್ಕೆ ಹಲವು ಸೂಚನೆಗಳು ಸಿಕ್ಕುತ್ತವೆ. ನಮ್ಮ ಅಧ್ಯಾತ್ಮ ಪ್ರಕಾಶದಲ್ಲಿಯೂ ಆಗಾಗ್ಗೆ ಇಂಥ ಕೆಲವು ಪದಪದ್ಯಗಳನ್ನು ಭಾವಾರ್ಥ ಸಮೇತವಾಗಿ ಕೊಡುತ್ತಾಬಂದಿರುತ್ತೇವೆ. ಸ್ತೋತ್ರಗಳನ್ನು ರಾಗಯುಕ್ತವಾಗಿಯೂ ಭಾವಯುಕ್ತ ವಾಗಿಯೂ ಹೇಳಿಕೊಳ್ಳುವ ರೂಢಿಯನ್ನಿಡಬೇಕು. ಇದರಿಂದ ನಮ್ಮ ಹೃದಯದಲ್ಲಿ ಸುಪ್ತವಾಗಿದ್ದ ಈಶ್ವರಭಾವನೆಯು ಎಚ್ಚರುತ್ತದೆ. ಭಾವನೆಯು ಎದ್ದುಕೊಂಡಹೊರತು ಯಾವ ಪ್ರಾರ್ಥನೆಗೂ ಯಾವ ಸ್ತೋತ್ರಕ್ಕೂ ಬೆಲೆಯು ಬರುವದಿಲ್ಲವಾದ್ದರಿಂದ ಅನುಭವಿಗಳಾದವರು ಮಾಡಿದ ಆ ಸ್ತೋತ್ರಗಳನ್ನು ಅರ್ಥಾನುಸಂಧಾನ ಪೂರ್ವಕವಾಗಿ ಹೇಳಿಕೊಳ್ಳುವ ಪದ್ಧತಿಯನ್ನು ಇಟ್ಟುಕೊಳ್ಳಬೇಕು.

ಇಲ್ಲಿ ಒಂದು ಎಚ್ಚರಿಕೆಯನ್ನು ಕೊಡುವದು ಅವಶ್ಯವಾಗಿರುತ್ತದೆ. ಶಿವ, ವಿಷ್ಣು, ಸೂರ್ಯ, ದೇವಿ, ಗಣಪತಿ–ಮುಂತಾದ ಬೇರೆಬೇರೆಯ ಹೆಸರುಗಳಿಂದ ಪುರಾಣಗಳಲ್ಲಿ ಸ್ತೋತ್ರಗಳನ್ನು ಬರೆದಿರುತ್ತದೆ. ಬೇರೆಯ ಮತಗಳಲ್ಲಿ ಈಶ್ವರನಿಗೆ ಮತ್ತೆ ಬೇರೆಯ ಕೆಲವು ಹೆಸರುಗಳನ್ನು ಇಟ್ಟುಕೊಂಡಿದೆ. ಯಾವ ಹೆಸರೇ ಆಗಲಿ, ಒಬ್ಬನೇ ಈಶ್ವರನದು ಎಂದು ಇಟ್ಟುಕೊಂಡೇ ಸ್ತೋತ್ರಗಳನ್ನು ಪಠಿಸಬೇಕೇ ಹೊರತು ಹೆಸರುಗಳಲ್ಲಿ ಉಚ್ಚ ನೀಚಭಾವಗಳನ್ನು ಕಲ್ಪಿಸಿಕೊಳ್ಳಬಾರದು. ವ್ಯವಹಾರದಲ್ಲಿ ನಾವು ಉಚ್ಚ, ನೀಚ, ಪ್ರಿಯ, ಅಪ್ರಿಯ–ಎಂದು ಗುಣದೋಷ ಗಳನ್ನು ಕಲ್ಪಿಸಿಕೊಂಡಿರುವದರಿಂದಲೇ ನಮ್ಮ ಅಂತಃಕರಣದಲ್ಲಿ ರಾಗದ್ವೇಷ ಭಾವನೆಗಳು ಮನೆಮಾಡಿಕೊಂಡಿರುವವು. ಅವುಗಳ ಕಾಟವನ್ನು ತಪ್ಪಿಸಿಕೊಂಡು ಸುಖಶಾಂತಿಗಳನ್ನು ಸಂಪಾದಿಸಿಕೊಳ್ಳುವದಕ್ಕೆಂದೇ ಭಗವಂತನ ಸಂಬಂಧದಿಂದ ಮನಃಶುದ್ಧಿಯನ್ನು ಮಾಡಿಕೊಳ್ಳುವದಕ್ಕೆ ಪ್ರಯತ್ನಿಸುವೆವು. ಹೀಗಿರುವಲ್ಲಿ ಒಬ್ಬನೇ ಈಶ್ವರನ ಹೆಸರುಗಳಲ್ಲಿ ಬೇರೆ ಬೇರೆಯ ಅಂತಸ್ತುಗಳನ್ನು ಕಲ್ಪಿಸಿಕೊಂಡರೆ ಮತ್ತು ರಾಗದ್ವೇಷಗಳಿಗೇ ತುತ್ತಾಗುವೆವು. ಯಾವ ಹೆಸರಿನಿಂದ ಕರೆಯಲಿ, ಭಗವಂತನು ಭಗವಂತನೇ. ಸ್ತೋತ್ರಗಳಲ್ಲಿ ಭಗವಂತನನ್ನು ಹೇಗೆ ಕೊಂಡಾಡಿದೆ ಎಂಬುದನ್ನು ತಿಳಿಸುವದಕ್ಕಾಗಿ ಕೆಲವು ಉದಾಹರಣೆಗಳನ್ನು ಇಲ್ಲಿ ಕೊಡುವೆವು :

**1. ಯತೋಽನನ್ತಶಕ್ತೇರನನ್ತಾಶ್ಚ ಜೀವಾ ।**
**ಯತೋ ನಿರ್ಗುಣಾದಪ್ರಮೇಯಾ ಗುಣಾಸ್ತೇ ॥**

**ಯತೋ ಭಾತಿ ಸರ್ವಂ ತ್ರಿಧಾ ಭೇದ ಭಿನ್ನಂ ।**
**ಸದಾ ತಂ ಗಣೇಶಂ ನಮಾಮೋ ಭಜಾಮಃ ॥ –ಗಣೇಶಾಷ್ಟಕ.**

**ಭಾವಾರ್ಥ :** ಲೆಕ್ಕವಿಲ್ಲದಷ್ಟು ಶಕ್ತಿಗಳುಳ್ಳ ಯಾವಾತನಿಂದ ಎಣಿಸಲಳವಲ್ಲದಷ್ಟು ಜೀವರು ಉಂಟಾಗಿರುವರೋ, ಪರಮಾರ್ಥದೃಷ್ಟಿಯಲ್ಲಿ ನಿರ್ಗುಣನೂ ಯಾವ ಪ್ರಮಾಣಗಳಿಗೂ ನಿಲುಕದವನೂ ಆಗಿರುವ ಯಾವಾತನಿಂದ ಪ್ರಸಿದ್ಧವಾದ ಗುಣಗಳೆಲ್ಲವೂ ಹೊರತೋರಿ ಕೊಂಡಿರುವವೋ ಮೂರು ಗುಣಗಳಿಂದಾಗಿರುವ ಈ ಪ್ರಪಂಚವೆಲ್ಲವೂ ಯಾವಾತನ ಮಹಿಮೆಯಿಂದಲೇ ಬೆಳಗುತ್ತಿರುವದೋ ಆ ಗಣೇಶನನ್ನು ಯಾವಾಗಲೂ ನಮಸ್ಕರಿಸುತ್ತೇವೆ, ಯಾವಾಗಲೂ ಭಜಿಸುತ್ತೇವೆ.

**2. ಯೋಽನ್ತಃ ಪ್ರವಿಶ್ಯ ಮಮ ವಾಚಮಿಮಾಂ ಪ್ರಸುಪ್ತಾಂ ।**
**ಸಂಜೀವಯತ್ಯಖಿಲಶಕ್ತಿಧರಃ ಸ್ವಧಾಮ್ನಾ ।**
**ಅನ್ಯಾಂಶ್ಚ ಹಸ್ತಚರಣಶ್ರವಣತ್ವಗಾದೀನ್ ।**
**ಪ್ರಾಣಾನ್ನಮೋ ಭಗವತೇ ಪುರುಷಾಯ ತುಭ್ಯಮ್ ॥**
**–ಭಾಗವತ, ವಿಷ್ಣುಸ್ತೋತ್ರ**

**ಭಾವಾರ್ಥ :** ಯಾವ ಸರ್ವಶಕ್ತನು ನನ್ನ ಒಳಹೊಕ್ಕು, ನಿದ್ರಿಸುತ್ತಿರುವ ನನ್ನ ವಾಕ್ಕನ್ನು ತನ್ನ ತೇಜಸ್ಸಿನಿಂದ ಎಬ್ಬಿಸುವನೋ, ಹಸ್ತ, ಚರಣ, ಶ್ರೋತ್ರ, ತ್ವಕ್ಕು–ಮುಂತಾದ ಮಿಕ್ಕ ಇಂದ್ರಿಯಗಳನ್ನೂ ಎಚ್ಚರಿಸುವನೋ ಅಂಥ ಪುರುಷನಾದ ಭಗವಂತನೆ, ನಿನಗೆ ನಮಸ್ಕಾರ!

**3. ತ್ವದಮಸ್ಮೃತಿರೇವ ಪಾವನೀ । ಸ್ತುತಿಯುಕ್ತಾ ನ ಹಿ ವಕ್ತುಮೀಶ ಸಾ ।**
**ಮಧುರಂ ಹಿ ಪಯಃ ಸ್ವಭಾವತೋ । ನನು ಕೀದೃಕ್ಸಿತಶರ್ಕರಾನ್ವಿತಮ್ ॥**

**ಭಾವಾರ್ಥ :** ಎಲೈ ಈಶ್ವರನೆ, ನಿನ್ನ ಸ್ಮರಣೆಯೇ ಪವಿತ್ರವಾದದ್ದು, ಇನ್ನು ಸ್ತೋತ್ರದಿಂದ ಕೂಡಿದ ಸ್ಮೃತಿಯನ್ನು ಹೇಳುವದಕ್ಕೆ ಬಂದೀತೆ? ಹಾಲು ಸ್ವಭಾವದಿಂದಲೇ ಸಿಹಿ; ಇನ್ನು ಕಲ್ಲುಸಕ್ಕರೆ ಬೆರೆಸಿದ ಹಾಲನ್ನು ಎಂಥದ್ದೆನ್ನಬೇಕು?

**4. ತ್ವಂ ಭಾನೋ ಜಗತಶ್ಚಕ್ಷುಸ್ತ್ವಮಾತ್ಮಾ ಸರ್ವದೇಹಿನಾಮ್ ।**
**ತ್ವಂ ಯೋನಿಃ ಸರ್ವ ಭೂತಾನಾಂ ತ್ವಮಾಚಾರಃ ಕ್ರಿಯಾವತಾಮ್ ॥**
**–ಸೂರ್ಯಸ್ತೋತ್ರ, ಮಹಾಭಾರತ**

**ಭಾವಾರ್ಥ :** ಎಲೈ ಭಾನುವೇ, ನೀನು ಜಗತ್ತಿಗೆಲ್ಲ ಕಣ್ಣು; ನೀನು ಎಲ್ಲಾ ಜೀವರಿಗೂ ಆತ್ಮನು; ನೀನು ಎಲ್ಲಾ ಭೂತಗಳಿಗೂ ಕಾರಣನು; ಕರ್ಮಠರ ಆಚಾರವು ನೀನೇ.

**5. ವಂದೇ ದೇವಂ ವಿಷ್ಣುಮಶೇಷಸ್ಥಿತಿಹೇತುಂ ।**
**ತ್ವಾಮಧ್ಯಾತ್ಮಜ್ಞಾನಿಭಿರನ್ತರ್ಹೃದಿಭಾವ್ಯಮ್ ।**
**ಹೇಯಾಹೇಯದ್ವಂದ್ವವಿಹೀನಂ ಪರಮೇಕಂ ।**
**ಸತ್ತಾಮಾತ್ರಂ ಸರ್ವಹೃದಿಸ್ಥಂ ದೃಶಿರೂಪಮ್ ॥**

**–ರಾಮಸ್ತೋತ್ರ,ಅಧ್ಯಾತ್ಮರಾಮಾಯಣ**

**ಭಾವಾರ್ಥ :** ಎಲ್ಲಾ ಜಗತ್ತಿನ ಸ್ಥಿತಿಗೂ ಕಾರಣನಾಗಿರುವ ವಿಷ್ಣುದೇವನೆ, ಅಧ್ಯಾತ್ಮ ಜ್ಞಾನಿಗಳು ಹೃದಯದಲ್ಲಿ ಯಾರನ್ನು ಭಾವಿಸುತ್ತಿರುವರೋ, ಯಾವನು ಬಿಡುವದು ತೆಗೆದುಕೊಳ್ಳುವದು ಎಂಬ ದ್ವಂದ್ವವಿಲ್ಲದವನಾಗಿ ಸನ್ಮಾತ್ರನಾಗಿ ಸರ್ವರ ಹೃದಯದಲ್ಲಿರುವ ಚೈತನ್ಯರೂಪನೋ ಅಂಥ ನಿನ್ನನ್ನು ವಂದಿಸುತ್ತೇನೆ.

ಸ್ತೋತ್ರಗಳನ್ನು ಗಟ್ಟಿಮಾಡಿಕೊಂಡು ಹೇಳಿಕೊಳ್ಳುವ ಅಭ್ಯಾಸವಿರುವವರು ಇನ್ನೊಂದು ಹೆಜ್ಜೆಯನ್ನು ಮುಂದಿಡಬೇಕು. ತಾವು ಓದಿರುವ ವರ್ಣನೆಗಳಲ್ಲಿ ಯಾವದಾದರೊಂದು ಅವಶ್ಯವಾಗಿ ಬಹಳ ಸವಿಯಾಗಿರುವಂತೆ ಕಂಡೇ ತೀರುತ್ತದೆ. ಪರಮೇಶ್ವರನ ಸ್ವರೂಪವನ್ನೂ ಗುಣಗಳನ್ನೂ ವರ್ಣಿಸಿರುವ ರೀತಿಯಲ್ಲಿ ಯಾವದೊಂದು ತಮಗೆ ಒಪ್ಪಾಗಿ ತೋರುವದೋ ಆ ಹೆಸರಿನ, ಆ ಸ್ವರೂಪದ, ಈಶ್ವರನ, ಸ್ತೋತ್ರ, ಜಪ, ಧ್ಯಾನ, ಅರ್ಚನ, ಪುರಾಣಶ್ರವಣ–ಮುಂತಾದವುಗಳನ್ನು ಏಕಮುಖವಾಗಿ ನಡೆಯಿಸುತ್ತಾ ಹೋಗಬೇಕು. ಇದಕ್ಕೇ **ಇಷ್ಟದೇವತೆಯ ಉಪಾಸನೆ** ಎಂದು ಹೆಸರು. ತನ್ನ ಇಷ್ಟದೇವತೆಯ ಉಪಾಸನೆಯನ್ನು ಎಷ್ಟೇ ಪ್ರಬಲವಾಗಿ ಮಾಡಿದರೂ ಮಿಕ್ಕ ದೇವತೆಗಳಲ್ಲಿ ಕೀಳುಬುದ್ಧಿಯು ಬರಬಾರದು. ಎಲ್ಲವೂ ತನ್ನ ಇಷ್ಟದೇವತೆಯ ರೂಪಗಳೇ ಎಂಬ ಭಾವನೆಯು ನಿಂತುಕೊಳ್ಳುವಂತೆ ನೋಡಿಕೊಳ್ಳಬೇಕು. ಹೀಗಾದರೆ ಮಾತ್ರ ನಮ್ಮಲ್ಲಿ ಅಧ್ಯಾತ್ಮಭಾವನೆಯು ದಿನದಿನಕ್ಕೆ ಬೆಳೆಯುತ್ತಾ ಹೋಗುವದು.

ಭಗವಂತನ ಸ್ತೋತ್ರವನ್ನು ಹೇಳುವಾಗ ನಾನೊಂದು ಕಂಠಪಾಠಮಾಡಿದ ಪದ್ಯವನ್ನು ಅಥವಾ ಪದವನ್ನು ಓದುತ್ತಿದೇನೆ ಎಂಬ ಭಾವನೆಯು ಎಂದಿಗೂ ಬರಬಾರದು. ಸ್ತೋತ್ರವನ್ನು ಹೇಳುವದೆಂದರೆ ಮತ್ತೊಬ್ಬನ ಮಾತಿನ ಅನುವಾದವಾಗುವದು; ಅದು ಸ್ತೋತ್ರವಾಗುವದಿಲ್ಲ. ಅದನ್ನು ಭಾವದಿಂದ ಹೇಳುವದು, ಆ ವಾಕ್ಯಗಳನ್ನು ನಮ್ಮದಾಗಿ ಮಾಡಿಕೊಳ್ಳುವದು, ಅವುಗಳಲ್ಲಿರುವ ಅಭಿಪ್ರಾಯಗಳನ್ನು ನಮ್ಮ ಅಭಿಪ್ರಾಯಗಳಾಗಿ ಮಾಡಿಕೊಳ್ಳುವದು ನಿಜವಾದ ಸ್ತೋತ್ರವು. ಒಂದು ಮುದ್ದು ಮಗುವನ್ನು ಕಂಡರೆ ಅದನ್ನು ಮೆಚ್ಚುವದೂ ಮೆಚ್ಚುವ ಮಾತುಗಳನ್ನಾಡುವದೂ ಎಷ್ಟು ಸ್ವಭಾವವಾಗಿ ನಮ್ಮ ಹೃದಯದಿಂದಲೇ ಬರುವವೋ, ಒಂದು ಇಂಪಾದ ಗಾನವನ್ನು ಕೇಳಿದರೆ ಹೃದಯಂಗಮವಾದ ಒಂದು ಸಂಗತಿಯು ಕಿವಿಗೆ ಬಿದ್ದೊಡನೆ ರಸಿಕನಾದವನಿಗೆ ತನಗೂ

ಅರಿವಿಲ್ಲದೆಯೇ ಹೇಗೆ ತಲೆಯು ತೂಗುವದೋ, ಹಾಗೆಯೇ ಭಗವಂತನು ನಮ್ಮ ಮನದ ಕಣ್ಣಿಗೆ ಕಟ್ಟಿದಂತೆ ಆಗಿ, ಆತನ ಗುಣಗಳಲ್ಲಿ ನಮ್ಮ ಹೃದಯವು ಮಗ್ನವಾಗಿರುವದು ಸ್ತೋತ್ರದಿಂದ ವ್ಯಕ್ತವಾಗಬೇಕು.

ಇಂಥ ಸ್ಥಿತಿಗೆ ಸಾಧಕರು ಯಾವಾಗ ಬರುವರೋ ಆಗ ಭಗವಂತನಿಗೂ ಅವರಿಗೂ ನೇರಾದ ಸಂಬಂಧವುಂಟಾಗುತ್ತದೆ. ಆಗ ಅವರಿಗೆ ಯಾವ ಹೊರಗಿನ ಅವಲಂಬನೆಯೂ ಬೇಕಾಗುವದಿಲ್ಲ. ಶಾಸ್ತ್ರಗಳು, ಕರ್ಮಗಳು, ಮಂತ್ರಗಳು, ದೀಕ್ಷೆಗಳು, ದೇವಾಲಯಗಳು, ತೀರ್ಥಗಳು-ಇವೆಲ್ಲ ಭಗವಂತನ ಸಮೀಪಕ್ಕೆ ಬರುವುದಕ್ಕೆ ಉಪಾಯಗಳಾಗಿರುತ್ತವೆ. ಆದರೆ ಇವನ್ನೇ ನಂಬಿ ದೇವರನ್ನು ಹಿಂದಕ್ಕೆ ತಳ್ಳುವವನು ಮೂರ್ಖನು. ತೆಂಗಿನಕಾಯಿಯ ಸಿಪ್ಪೆಯನ್ನು ಇಟ್ಟುಕೊಂಡು ಒಳಗಿನ ತಿರುಳನ್ನು ಒಗೆಯುವ ಅವಿವೇಕಿಯಂತೆ ಹೊರಗಿನ ಉಪಾಯಗಳಿಗೆ ಬೆಲೆಯನ್ನು ಕೊಟ್ಟು ಅವನು ಎಲ್ಲಕ್ಕೂ ಉಪೇಯನಾಗಿರುವ ಈಶ್ವರನನ್ನೇ ಮರೆಯುವನು. ಅಟ್ಟಕ್ಕೆ ಹತ್ತುವ ಮಟ್ಟಿಗೆ ಏಣಿಯು ಬೇಕಾಗಿರುವಂತೆ ಭಗವಂತನನ್ನು ನೇರಾಗಿ ಭಾವನೆಮಾಡುವ ಹಂತಕ್ಕೆ ಏರುವದಕ್ಕೆ ಮಾತ್ರ ಸ್ತೋತ್ರಪಾಠವೇ ಮುಂತಾದವುಗಳು ಬೇಕಾಗಿರುತ್ತವೆ. ಆಮೇಲೆ ಹೃದಯದಲ್ಲಿ ಭಗವಂತನ ಸ್ತೋತ್ರವನ್ನು ನಿತ್ಯವೂ ನೇರವಾಗಿಯೇ ಗಾನಮಾಡುತ್ತಿರಬಹುದು. ನಾವು ಮಾಡುವ ಭಗವಂತನ ಸ್ತೋತ್ರವು ಯಾರೊಬ್ಬರಿಗೂ ಸ್ಥೂಲವಾದ ಶ್ರೋತ್ರಕ್ಕೆ ಕೇಳಿಸಬೇಕಾದ ಅವಶ್ಯಕತೆಯಿಲ್ಲ. ಮನಸ್ಸನ್ನೆಲ್ಲ ಭಗವಂತನಲ್ಲಿಯೇ ಇಟ್ಟು, ನಾನು, ನನ್ನದು, ಹೊರಗು, ಒಳಗು-ಎಂಬ ಭಾವವಿಲ್ಲದೆ ನಿರಂತರವಾಗಿ ಹೃದಯದಲ್ಲಿಯೇ ಸ್ತೋತ್ರಮಾಡುವದಕ್ಕೂ ಬರುತ್ತದೆ. ಆಗ ಯಾವ ಋಷಿವಾಕ್ಯವಾಗಲಿ, ಯಾರೊಬ್ಬರ ಕವಿತೆಯ ಸ್ತೋತ್ರವಾಗಲಿ, ನಮಗೆ ಬೇಕಾಗುವದಿಲ್ಲ. ನಮ್ಮ ಸುತ್ತಮುತ್ತಲೂ ಆತನೇ, ಆತನ ಮಹಿಮೆಯ ಬೆಳುದಿಂಗಳೇ, ಆವರಿಸಿಕೊಂಡಿರುವಂತೆ ತೋರುತ್ತದೆ. ನಮ್ಮ ಹೃದಯವು ಆಗ ಆ ಬೆಳುದಿಂಗಳಿನಲ್ಲಿ ಹಾಯಾಗಿ ವಿಶ್ರಮಿಸಿಕೊಳ್ಳುತ್ತಾ ತನಗೆ ತೋರಿದ ರೀತಿಯಿಂದ ಆ ಪರಂಜ್ಯೋತಿಯ ಮಹಿಮೆಯನ್ನು ಕೊಂಡಾಡುವ ಸಾಮಗಾನವನ್ನು ಹೊಂದಿಕೊಂಡಿರುವ ವೀಣೆಯ ತಂತ್ರೀನಾದವಾಗಿರುವುದು.

# 15. ನಾಮೋಚ್ಚಾರಣೆ

* ಅಧ್ಯಾತ್ಮಸಾಧನೆ ಎಂದರೇನೆಂಬುದರ ವಿಷಯದಲ್ಲಿ ಜನರಲ್ಲಿ ಸ್ಪಷ್ಟವಾದ ನಿಶ್ಚಿತವಾದ ಅಭಿಪ್ರಾಯವಿರುವದಿಲ್ಲ. ಆತ್ಮ, ಪರಮಾತ್ಮ-ಎಂಬ ಶಬ್ದಗಳು ಜಗತ್ತಿನ ಸಾರವನ್ನು ತಿಳಿಸುವವು. ಈ ಜಗತ್ತು ಯಾವದರಿಂದ ಸಾರವತ್ತಾಗಿದೆಯೋ, ಯಾವದರ ಬಲದಿಂದ ಇದು **ಇದೆ** ಎನಿಸಿಕೊಳ್ಳುವದೋ ಅದೇ ಜಗತ್ತಿನ ಆತ್ಮನು, ಇದರ ತಿರುಳು. ಅದನ್ನು ಬಿಟ್ಟರೆ ಮಿಕ್ಕ ಯಾವದೂ ಸಾರವತ್ತಲ್ಲ, ಯಾವದೂ ನಿಜವಲ್ಲ. ಆದರೂ ಸ್ವಾಭಾವಿಕವಾಗಿ ಮನುಷ್ಯನ ಅಂತಃಕರಣವು ಅಸಾರವನ್ನು ಸಾರವೆಂದು ಭಾವಿಸಿಕೊಂಡಿದೆ, ಸಾರವಾದ ಆತ್ಮನನ್ನು ಮರೆತುಬಿಟ್ಟಿದೆ, ಅದು ಇಲ್ಲವೆಂದುಕೂಡ ಎಣಿಸುವಷ್ಟು ಅಸಡ್ಡೆಯಿಂದ ಅದರಿಂದ ಹಿಂತಿರುಗಿಬಿಟ್ಟಿರುತ್ತದೆ. ನಾವು ಈಗ ಇಲ್ಲಿಯೇ ಆ ಸಾರವಾದ ಪರಮಾರ್ಥವನ್ನು, ಈ ಜಗತ್ತಿನ ಆತ್ಮನನ್ನು, ಕಂಡುಕೊಳ್ಳಬಹುದು; ಈಗ ಇಲ್ಲಿಯೇ ಅದನ್ನು ನಮ್ಮ ಅಂತಃಕರಣದಿಂದ ಸೋಕಿ ಅದರ ಆನಂದವನ್ನು ಅನುಭವಿಸಬಹುದು. ಇದನ್ನು ಹೇಗೆ ಸಾಧಿಸಬೇಕೆಂಬುದನ್ನು ತಿಳಿಸಿಕೊಡುವದೇ **ಅಧ್ಯಾತ್ಮಸಾಧನೆ.**

ಪರಮಾತ್ಮನನ್ನು ಮುಟ್ಟುವ ಈ ಅನುಭವಕ್ಕೆ ಭಗವದ್ಗೀತೆಯಲ್ಲಿ "ಬ್ರಹ್ಮಸಂಸ್ಪರ್ಶ" ಎಂಬ ಹೆಸರನ್ನು ಕೊಟ್ಟಿರುತ್ತದೆ. ಪರಮಾತ್ಮನನ್ನು ಮುಟ್ಟುವ ಹಾದಿ ಯಾವದೆಂದರೆ ಎಡೆಬಿಡದೆ ಆತನ ಕಡೆಗೇ ತಿರುಗಿಕೊಂಡಿರುವದು. ಮಗುವು ತನ್ನ ತಾಯಿಯನ್ನೇ ನೋಡುತ್ತಾ ಆನಂದಿಸುತ್ತಿರುವಂತೆ ಸಾಧಕನಾದವನೂ ಆ ಭಗವಂತನ ಕಡೆಗೇ ತಿರುಗಿಕೊಂಡು ನಲಿಯುವ ಅಭ್ಯಾಸವನ್ನು ಮಾಡಬೇಕು. ಈಗ ನಮ್ಮ ಮನಸ್ಸು, ನಮ್ಮ ಮಾತು-ಎರಡೂ ಹೊರಗಿನ ಪ್ರಪಂಚದ ಕಡೆಗೇ ತಿರುಗಿಕೊಂಡಿರುವವು. ಹೊರಗಿನ ಪ್ರಪಂಚದಲ್ಲಿ ಬೇಗಬೇಗನೆ ಮಾರ್ಪಾಡುಗಳಾಗುತ್ತಿರುವದು; ಮಾತು ಅದನ್ನೇ ಕುರಿತು ಬಗೆಬಗೆಯಿಂದ ಬಣ್ಣಿಸಿ ಆಡುತ್ತಿರುವದು. ಪ್ರಪಂಚದ ಭೀಕರವಾದ ಮಾರ್ಪಾಡುಗಳನ್ನು ಕುರಿತು ಓದುವದು, ಮಾತನಾಡುವದು, ಒಬ್ಬರಿಗೊಬ್ಬರು ಹೇಳುವದು, ಒಬ್ಬರಿಂದೊಬ್ಬರು ಕೇಳುವದು, ಮನಸ್ಸಿನಲ್ಲಿ ಅದನ್ನೇ ಚಿಂತಿಸುತ್ತಿರುವದು-ಇದೇ ನಮ್ಮ ದಿನದ ಉದ್ಯೋಗವಾಗಿಬಿಟ್ಟಿದೆ. ನಾವು ಪ್ರಪಂಚವನ್ನೇ ಚಿಂತಿಸುತ್ತಿರುವದರಿಂದಲೂ ಪ್ರಪಂಚದ ಮಾತನ್ನೇ ಹೇಳಿಕೊಳ್ಳುತ್ತಿರುವದರಿಂದಲೂ ಪ್ರಪಂಚಮಯರಾಗಿಬಿಟ್ಟಿರುವೆವು. ಆದ್ದರಿಂದ ಪ್ರಪಂಚದ ವ್ಯವಹಾರವೇ ನಮ್ಮ ಜೀವನವಾಗಿಬಿಟ್ಟಿದೆ. ಪ್ರಪಂಚವು ಎಲ್ಲೆಲ್ಲಿಯೂ ಅಂಜಿಕೆ, ನಿರಾಶೆ, ಸಂಶಯ, ರಾಗ, ದ್ವೇಷ; ಮೋಹ-ಇವುಗಳಿಂದ ಕೂಡಿಬಿಟ್ಟಿದೆ; ಇವುಗಳ ಚಿಂತೆಯಿಂದ ನಮ್ಮಲ್ಲಿಯೂ ಅಂಜಿಕೆ-ಮುಂತಾದ ಭಾವಗಳು ಬಲವಾಗುತ್ತಿರುತ್ತವೆ.

---

* ಸಂಪುಟ 17, ಸಂಚಿಕೆ 3, ನವೆಂಬರ್ 1947, ಪುಟ 49-55

ನಮ್ಮ ನಡತೆಯು ಇವುಗಳನ್ನು ತಪ್ಪಿಸುವದಕ್ಕೆಂದು ಕಲ್ಪಿತೋಪಾಯಗಳನ್ನು ಅನುಸರಿಸುತ್ತಲೂ ಕೊಲೆ, ಮೋಸ, ಕಳವು, ಅನ್ಯಾಯ-ಮುಂತಾದವುಗಳನ್ನು ಕೈಕೊಳ್ಳುತ್ತಲೂ ಇರುವದಾಗಿದೆ. ಭಯದ ಚಿಂತೆಯಿಂದ ಅಭಯವು ಬರಲಾರದು, ಹಸಿವಿನ ಚಿಂತೆಯಿಂದ ಹಸಿವು ಅಡಗಲಾರದು, ಮುಪ್ಪಿನ ಚಿಂತೆಯಿಂದ ಮುಪ್ಪು ಮತ್ತಷ್ಟು ಬೇಗ ಬಂದೀತೇ ಹೊರತು ತಡವಾಗಿ ಬರಲಾರದು.

ಈ ನ್ಯಾಯವನ್ನೇ ಅನುಸರಿಸಿ ಅಧ್ಯಾತ್ಮಶಾಸ್ತ್ರಜ್ಞರು ಮನುಷ್ಯನು ಆತ್ಮನ ಸ್ಪರ್ಶವನ್ನು ಮಾಡಿ ನಲಿಯುವದಕ್ಕೆ ಅವನ ಮಾತು, ಮನಸ್ಸು-ಎರಡೂ ಆತ್ಮನಿಗಾಗಿಯೇ ಮೀಸಲಾಗಿರಬೇಕೆಂದು ಹೇಳುತ್ತಾರೆ. ಮಾತು, ಮನಸ್ಸು-ಎರಡೂ ಸಾಮಾನ್ಯವಾಗಿ ಒಂದೇ ವಿಷಯದ ಕಡೆಗೆ ಹರಿಯುತ್ತಿರುವವಾದ್ದರಿಂದ ಇವುಗಳಲ್ಲಿ ಒಂದನ್ನು ಎತ್ತಕಡೆಗೆ ತಿರುಗಿಸುವೆವೋ ಇನ್ನೊಂದೂ ಅತ್ತಕಡೆಗೇ ತಿರುಗುವದು. ಮನಸ್ಸು ಸೂಕ್ಷ್ಮವಾಗಿರುವದರಿಂದ ಅದನ್ನೇ ತಟಕ್ಕನೆ ಆತ್ಮನ ಕಡೆಗೆ ಮೊದಲು ತಿರುಗಿಸುವದು ಕಷ್ಟ. ಆದ್ದರಿಂದ ಮೊದಲು ಸ್ಥೂಲವಾದ ಮಾತನ್ನು ಆತ್ಮನ ವಿಷಯವಾಗಿಯೇ ಆಡುವದಕ್ಕೆ ಹತ್ತಿಸುವ ಪ್ರಯತ್ನವನ್ನು ನಡೆಯಿಸಬೇಕು. ಪ್ರಾರ್ಥನೆ, ಸ್ತೋತ್ರ, ನಾಮೋಚ್ಚಾರಣೆ-ಮುಂತಾದ ಸಾಧನಗಳನ್ನು ಮೊದಲು ಉಪದೇಶಿಸುವದಕ್ಕೆ ಇದೇ ಕಾರಣ.

ಪ್ರಾರ್ಥನೆ, ಸ್ತೋತ್ರ-ಇವುಗಳ ವಿಷಯವಾಗಿ ಹಿಂದಿನ ಸಂದೇಶಗಳಲ್ಲಿ ಸ್ವಲ್ಪ ತಿಳಿಸಿರುತ್ತೇವೆ. ಈ ಸಲ **ನಾಮೋಚ್ಚಾರಣೆಯ ವಿಷಯ**ವಾಗಿ ಕೆಲವು ವಾಕ್ಯಗಳನ್ನು ಬರೆಯುವೆವು. ನಮ್ಮ ದೇಶದಲ್ಲಿ ಭಗವಂತನ ನಾಮಗಳ ಹಲವಾರು ಪಟ್ಟಿಗಳು ಪುರಾಣಗಳಲ್ಲಿಯೂ ಇತಿಹಾಸದಲ್ಲಿಯೂ ಸಿಕ್ಕುವವು. ವೇದದಲ್ಲಿಯೇ ಪರಮಾತ್ಮನ ನಾಮಗಳು ಬೇರೆಬೇರೆಯಾಗಿರುವದರಿಂದ ಒಬ್ಬ ಋಷಿಯು ಹೀಗೆಂದು ಎಚ್ಚರಿಸುತ್ತಾನೆ. 'ಏಕಂ ಸದ್ವಿಪ್ರಾ ಬಹುಧಾ ವದನ್ತಿ'. ಇರುವದು ಒಂದೇ ತತ್ತ್ವವಾದರೂ ಬಲ್ಲವರು ಅದನ್ನು ಬಗೆಬಗೆಯಾದ ಹೆಸರುಗಳಿಂದ ಕರೆಯುವರು. ಇಂದ್ರ, ಮಿತ್ರ, ವರುಣ-ಮುಂತಾದ ಹೆಸರುಗಳೆಲ್ಲವೂ ಒಬ್ಬ ಈಶ್ವರನದೇ ಎಂದು ಆ ಋಷಿಯ ಮತವು. ಪುರಾಣಗಳಲ್ಲಿ ಶಿವ, ವಿಷ್ಣು, ದೇವಿ, ಸೂರ್ಯ, ಗಣಪತಿ-ಎಂಬ ಮುಖ್ಯವಾದ ಐದು ನಾಮಗಳಿಂದ ಪರಮೇಶ್ವರನನ್ನು ಕರೆದಿರುವದು ಕಂಡುಬರುತ್ತದೆ. ಈ ಹೆಸರುಗಳೂ ಈ ಹೆಸರಿನ ದೇವರು ಮಾಡಿದ ಲೀಲೆಗಳ ವರ್ಣನೆಗಳೂ ಪುರಾಣಗಳಲ್ಲಿ ಬೇರೆಬೇರೆಯಾಗಿಯೇ ಇರುವವೆಂಬುದು ಯಾರಿಗಾದರೂ ಸ್ಪಷ್ಟವಾಗಿ ತಿಳಿಯುತ್ತದೆ. ಆದರೆ ಪರಮೇಶ್ವರನ ಸ್ವರೂಪದ ವರ್ಣನೆಯು ಮಾತ್ರ ಎಲ್ಲಾ ಕಡೆಯಲ್ಲಿಯೂ ಒಂದೇ ಪರಿಯಾಗಿರುತ್ತದೆ. ಪರಮೇಶ್ವರನು ಎಲ್ಲಾ ಜೀವರಿಗೂ ಅಂತರಾತ್ಮನು, ಎಲ್ಲರಿಗೂ ಸದ್ಬುದ್ಧಿಯುಂಟಾಗುವಂತೆ ಪ್ರೇರಿಸುವವನು, ಸರ್ವಜ್ಞನು, ಸರ್ವಶಕ್ತನು, ಸತ್ಯಕಾಮನು,

ಸತ್ಯಸಂಕಲ್ಪನು, ಪ್ರೇಮಮಯನು, ಪರಮಾರ್ಥಸತ್ಯಸ್ವರೂಪನು, ನಿತ್ಯಶುದ್ಧಬುದ್ಧಮುಕ್ತ ಸ್ವರೂಪನು—ಎಂದೇ ಎಲ್ಲಾ ನಾಮಗಳಿಂದಲೂ ವರ್ಣಿಸಿರುತ್ತದೆ. ಆದ್ದರಿಂದ ಹರಿ, ಹರ, ಆದಿತ್ಯ—ಮುಂತಾದ ಯಾವ ನಾಮದಿಂದ ಕರೆದರೂ ಪರಮೇಶ್ವರನನ್ನೇ ಕರೆಯುತ್ತಿರುವೆವೆಂಬುದನ್ನು ಮರೆಯಬಾರದು.

ವಿಷ್ಣು, ಶಿವ—ಮುಂತಾದ ಒಂದೊಂದು ಹೆಸರಿನ ಪರಮಾತ್ಮನಿಗೂ ಹಲವು ಅಷ್ಟೋತ್ತರಶತನಾಮಗಳಿರುತ್ತವೆ. ಎರಡು ಮೂರು ಸಹಸ್ರನಾಮಗಳಿರುತ್ತವೆ. ಆ ನಾಮಗಳಲ್ಲಿ ಒಬ್ಬ ಪರಮೇಶ್ವರನನ್ನೇ ತಿಳಿಸುತ್ತವೆ ಎಂದು ಆ ನಾಮಗಳ ಪಟ್ಟಿಯಲ್ಲಿಯೇ ಬರೆದಿರುತ್ತದೆ. ಆದರೆ ಪರಮಾರ್ಥವಾಗಿ ಭಗವಂತನಿಗೆ ಅವನನ್ನು ಇದ್ದಂತೆ ತಿಳಿಸುವ ಯಾವದೊಂದು ನಾಮವೂ ಇರುವದಿಲ್ಲ. ಏಕೆಂದರೆ ಭಗವಂತನು ಪರಮಾರ್ಥವಾಗಿ ನಾಮರೂಪ ರಹಿತನಾಗಿರುತ್ತಾನೆ. ಆದ್ದರಿಂದ ನಾಮೋಚ್ಚಾರಣೆಯ ಉದ್ದೇಶವೇನೆಂದರೆ ನಾಮರಹಿತನಾದ ಭಗವಂತನ ತತ್ತ್ವದ ಸಾಮೀಪ್ಯವನ್ನು ಪಡೆಯುವದೇ ಆಗಿರುತ್ತದೆ. ಭಗವಂತನ ಪರಮಾರ್ಥತತ್ತ್ವಕ್ಕೆ ಯಾವ ಹೆಸರೂ ನಿಜವಾಗಿ ಸಲ್ಲುವದಿಲ್ಲ; ಆದ್ದರಿಂದಲೇ ಶ್ರುತಿಯು ಆ ತತ್ತ್ವವನ್ನು 'ನೇತಿ ನೇತಿ' ಇದಲ್ಲ—ಇದಲ್ಲ ಎಂದು ತಿಳಿಸಿರುತ್ತದೆ. ನೇತಿ ನೇತಿ ಎಂಬುದು ಭಗವಂತನ ಹೆಸರೆಂದು ಭಾವಿಸಬಾರದು, ಆತ್ಮನನ್ನು ಅರಿಯುವದಕ್ಕೆ ಮಾರ್ಗವನ್ನು ತಿಳಿಸುವ ಉಪಾಯವದು. ಇದರಂತೆ ಉಪನಿಷತ್ತುಗಳಲ್ಲಿ ಪರಮಾತ್ಮನನ್ನು ಓಂ ಎಂಬ ಹೆಸರಿನಿಂದ ಕರೆದಿರುವದುಂಟು. ಓಂ ಎಂಬುದು ಸರ್ವವಾಚಕವೆಂದೂ ಶಾಸ್ತ್ರದಲ್ಲಿ ಹೇಳಿರುತ್ತದೆ. ಆದರೆ ಭಗವಂತನು ಎಲ್ಲಾ ನಾಮಗಳಿಗೂ ಅತೀತನೆಂಬುದನ್ನು ತಿಳಿಸುವದಕ್ಕೆ ಇದೊಂದು ಗುರುತಾಗುವ ಹೆಸರೆಂದು ತಿಳಿಯದೆ ಸಾಮಾನ್ಯರು ಅದು ಮಿಕ್ಕ ಹೆಸರುಗಳಂತೆಯೇ ಒಂದು ಹೆಸರೆಂದು ಭಾವಿಸಿ ಅದನ್ನು ಉಚ್ಚರಿಸುತ್ತಾ ಬಂದದ್ದರಿಂದ ಅದರ ಉಪಯೋಗವು ಅವರಿಗೆ ಆಗಿರುವದಿಲ್ಲ. ಓಂಕಾರವು ವೇದದ ಸಾರವೆಂದೂ ಆದ್ದರಿಂದ ವೇದವೆಲ್ಲವನ್ನೂ ಅಧ್ಯಯನಮಾಡಿ ಅದರಲ್ಲಿ ಹೇಳಿರುವ ಕರ್ಮಗಳನ್ನು ಯಥಾವಿಧಿಯಾಗಿಮಾಡಿ ಪರಮಾತ್ಮನೊಬ್ಬನೇ ತನಗೆ ಬೇಕೆಂಬ ಆಧ್ಯಾತ್ಮಿಕವಾದ ಹಸಿವನ್ನು ಸಂಪಾದಿಸಿಕೊಂಡು ಸರ್ವಕರ್ಮಸಂನ್ಯಾಸವನ್ನು ಮಾಡಿರುವ ಯತಿಗಳು ಮಾತ್ರವೇ ಅದನ್ನು ಉಚ್ಚರಿಸುವದಕ್ಕೆ ಮುಖ್ಯಾಧಿಕಾರಿಗಳೆಂದು ಆರ್ಯರ ನಂಬಿಕೆಯಿದೆ. ಆದರೆ ರಹಸ್ಯಾರ್ಥವನ್ನು ಮಾತ್ರ ತಿಳಿಯದೆ ಸುಮ್ಮನೆ ಅದನ್ನು ಉಚ್ಚರಿಸುತ್ತಿರುವವರಿಗೆ ಈ ನಂಬಿಕೆಯ ಬುಡದಲ್ಲಿರುವ ಮಹಾತತ್ತ್ವವು ಎಂದಿಗೂ ತಿಳಿಯಲಾರದು.

ನಮ್ಮ ಧರ್ಮದಲ್ಲಿಯೇ ಅಲ್ಲದೆ ಯಹೂದಿಯರ ಧರ್ಮದಲ್ಲಿಯೂ ಇಂಥ ನಂಬಿಕೆಯು ಉಂಟು. ಸರ್ವೋತ್ತಮನಾದ ಭಗವಂತನಿಗೆ ಬೈಬಲ್ಲಿನಲ್ಲಿ 'ಯಹೋವ' ಎಂಬ ಹೆಸರನ್ನು ಕೊಟ್ಟಿರುತ್ತದೆ. ಇಂದಿಗೂ ಯಹೂದಿಯವರು ಈ ನಾಮವನ್ನು

ಉಚ್ಚಾರಣೆಮಾಡದೆ ಹಾಗೆಯೇ ಬಿಡುವ ಪದ್ಧತಿ ಇದೆಯಂತೆ. ಅದು ಪರಮಪವಿತ್ರವಾದ ನಾಮ, ಅದರಲ್ಲಿ ಅಡಗಿರುವ ರಹಸ್ಯಾರ್ಥಗಳು ಬಹಳವಾಗಿ ಸಾಧನೆಮಾಡಿರುವ ಮಹಾತ್ಮರಿಗೆ ಮಾತ್ರ ತಿಳಿದಿರುತ್ತವೆ ಎಂದು ಆ ಜನರ ವಿಶ್ವಾಸವಿರುತ್ತದೆ. ನಾಮರಹಿತನಾದ ಪರಮಾತ್ಮನನ್ನು ಯಾವದಾದರೊಂದು ಉತ್ತಮನಾಮದಿಂದ ಕರೆಯುವ ಪ್ರಯತ್ನವು ಆ ಧರ್ಮದವರಲ್ಲಿಯೂ ಕಂಡುಬರುತ್ತದೆ ಎಂದು ಇದರಿಂದ ಸ್ಪಷ್ಟವಾಗುತ್ತದೆ.

ಭಗವಂತನು ನಾಮಾತೀತನಾಗಿರುವದರಿಂದ ಆತನನ್ನು ತಿಳಿಸುವದಕ್ಕೆ ಒಂದೊಂದು ಗುಣದ ದೃಷ್ಟಿಯಿಂದ ಒಂದೊಂದು ನಾಮವನ್ನು ಉಪಯೋಗಿಸುವಾಗಲೂ ಆ ನಾಮವು ಆತನನ್ನು ಮುಟ್ಟುವದಕ್ಕೆ ಒಂದು ಉಪಾಯವೆಂಬುದನ್ನು ಎಂದಿಗೂ ಮರೆಯಬಾರದು. ಉಪಾಯವಾದ ನಾಮಕ್ಕಿಂತಲೂ ಉಪೇಯನಾಗಿರುವ ಆತನು ಎಷ್ಟೋ ಪಾಲು ಮಿಗಿಲಾಗಿರುವನು. ನಾಮೋಚ್ಚಾರಣೆಯನ್ನು ಮಾಡುವಾಗ ಆ ಮಹಾಮಹಿಮನ ನಾಮವಿದು ಎಂಬ ಅನುಸಂಧಾನವು ನಮಗೆ ಸಂಪೂರ್ಣ ವಾಗಿರಬೇಕು. ಹಾಗಾದರೆ ಮಾತ್ರ ನಾಮೋಚ್ಚಾರಣೆಯ ಪೂರ್ಣಫಲವು ನಮಗೆ ದೊರಕುವದು. ಉದಾಹರಣೆಗೆ ವಿಷ್ಣು ಸಹಸ್ರನಾಮದ ಮೊದಲಲ್ಲಿರುವ ಪೀಠಿಕೆಯ ಶ್ಲೋಕಗಳನ್ನು ಕೇಳಿರಿ :

**ಪರಮಂ ಯೋ ಮಹತ್ತೇಜಃ ಪರಮಂ ಯೋ ಮಹತ್ತಪಃ ।**
**ಪರಮಂ ಯೋ ಮಹದ್ ಬ್ರಹ್ಮ ಪರಮಂ ಯಃ ಪರಾಯಣಮ್ ॥**
**ಪವಿತ್ರಾಣಾಂ ಪವಿತ್ರಂ ಯೋ ಮಂಗಲಾನಾಂ ಚ ಮಂಗಲಮ್ ।**
**ದೈವತಂ ದೇವತಾನಾಂ ಚ ಭೂತಾನಾಂ ಯೋಽವ್ಯಯಃ ಪಿತಾ ॥**
**ಯತಃ ಸರ್ವಾಣಿ ಭೂತಾನಿ ಭವನ್ತ್ಯಾದಿಯುಗಾಗಮೇ ।**
**ಯಸ್ಮಿಂ ಶ್ಚ ಪ್ರಲಯಂ ಯಾನ್ತಿ ಪುನರೇವ ಯುಗಕ್ಷಯೇ ॥**
**ತಸ್ಯ ಲೋಕಪ್ರಧಾನಸ್ಯ ಜಗನ್ನಾಥಸ್ಯ ಭೂಪತೇ ।**
**ವಿಷ್ಣೋರ್ನಾಮಸಹಸ್ರಂ ಮೇ ಶೃಣು ಪಾಪಭಯಾಪಹಮ್ ॥**

‘ಯಾವನು ಎಲ್ಲಕ್ಕೂ ಮಿಗಿಲಾದ ತೇಜವಾಗಿರುವನೋ, ಯಾವನು ಎಲ್ಲಕ್ಕೂ ಮಿಗಿಲಾದ ತಪಸ್ಸಾಗಿರುವನೋ, ಯಾವನು ಎಲ್ಲಕ್ಕೂ ಮಿಗಿಲಾದ ಬ್ರಹ್ಮವಾಗಿರುವನೋ, ಯಾವನು ಎಲ್ಲಕ್ಕೂ ಮಿಗಿಲಿನ ಪರಗತಿಯಾಗಿರುವನೋ, ಪವಿತ್ರವಾದ ವಸ್ತುಗಳಲ್ಲೆಲ್ಲ ಮಿಗಿಲಾದ ಪವಿತ್ರ ವಸ್ತು ಯಾವನೋ, ಮಂಗಲವಾಗಿರುವ ವಸ್ತುಗಳೆಲ್ಲಕ್ಕಿಂತಲೂ ಮಂಗಲವಾಗಿರುವವನು ಯಾವನೋ, ದೇವತೆಗಳಿಗೂ ದೇವತೆ ಯಾರೋ, ಪ್ರಾಣಿಗಳಿಗೆಲ್ಲ ಅವ್ಯಯನಾದ ತಂದೆ ಯಾವನೋ, ಯಾವಾತನಿಂದ ಯುಗದ ಆದಿಯಲ್ಲಿ ಎಲ್ಲಾ

ಪ್ರಾಣಿಗಳೂ ಹುಟ್ಟಿ ಯಾವನಲ್ಲಿಯೇ ಮತ್ತೆ ಯುಗವು ಕ್ಷಯವಾಗಿ ಲಯವಾಗುವವೋ, ಅಂಥ ಲೋಕ ಪ್ರಧಾನನಾಗಿರುವ, ಜಗದೊಡೆಯನಾದ ವಿಷ್ಣುವಿನ ಸಹಸ್ರನಾಮವನ್ನು, ಎಲೈ ಭೂಪತಿಯಾದ ಧರ್ಮರಾಯನೆ, ಹೇಳುವೆನು ಕೇಳು. ಇದು ಸರ್ವಪಾಪಗಳನ್ನೂ ಸರ್ವಭಯಗಳನ್ನೂ ನಾಶಗೊಳಿಸತಕ್ಕದ್ದಾಗಿರುವದು.'

ಭೀಷ್ಮಾಚಾರ್ಯರು ಹೇಳಿರುವ ಈ ವಾಕ್ಯಗಳಲ್ಲಿ ವಿಷ್ಣುವಿನ ಸಹಸ್ರನಾಮವನ್ನು ಹೇಳುತ್ತೇನೆಂದು ಪ್ರತಿಜ್ಞೆಮಾಡಿ ವಿಷ್ಣುವೆಂದರೆ ಯಾವ ಯಾವ ಭಾವವು ನಮ್ಮ ಮನಸ್ಸಿನಲ್ಲಿ ಬಂದಿರಬೇಕೆಂಬುದನ್ನು ಇಲ್ಲಿ ಹೇಳಿರುತ್ತಾರೆ. ವಿಷ್ಣುವೆಂಬ ಹೆಸರಿನ ಈ ಭಗವಂತನು **ಮಹಾಪ್ರಕಾಶರೂಪ**ನಾಗಿರುತ್ತಾನೆ. ಲೋಕದಲ್ಲಿ ಗ್ಯಾಸ್‌ಲೈಟ್ (ಅನಿಲದ ಬೆಳಕು), ಎಲೆಕ್ಟ್ರಿಕ್ ಲೈಟ್ (ವಿದ್ಯುದ್ದೀಪದ ಬೆಳಕು), ನಕ್ಷತ್ರ, ಚಂದ್ರಸೂರ್ಯರ ಬೆಳಕು–ಮುಂತಾದ ಎಷ್ಟೋ ಬೆಳಕುಗಳುಂಟು. ಆದರೆ ಅವುಗಳೆಲ್ಲವನ್ನೂ ಬೆಳಗುವ ನಮ್ಮ ಇಂದ್ರಿಯಗಳ ಮತ್ತು ಮನಸ್ಸಿನ ಶಕ್ತಿಯು ಇನ್ನೂ ಹೆಚ್ಚಿನದು. ಇಂಥ ಮನಸ್ಸನ್ನು ಕೂಡ ಬೆಳಗಿ ತೋರಿಸುತ್ತಿರುವ ನಮ್ಮ ಆತ್ಮನೇ ಆಗಿರುವ ಭಗವಂತನನ್ನು **ಮಹತ್ತೇಜಃ** ಎಂದು ಕರೆದಿರುವದು ಎಷ್ಟು ಹೊಂದಿಕೆಯಾಗಿದೆ! ಇದರಂತೆ ಭಗವಂತನು **ಮಹಾತಪಸ್ಸು**. ಲೋಕದಲ್ಲಿ ಶಾರೀರಕವೇ ಮುಂತಾದ ಹೆಚ್ಚಿನ ತಪಸ್ಸನ್ನು ಮಾಡಿ ಸಿದ್ಧಿಗಳನ್ನು ಪಡೆದ ಯೋಗಿಗಳೂ ಋಷಿಗಳೂ ಅತ್ಯದ್ಭುತವಾದ ಕೃತಿಗಳನ್ನು ಮಾಡಿ ತೋರಿಸಿರುತ್ತಾರೆ; ಆದರೆ ಬ್ರಹ್ಮಾಂಡವನ್ನೆಲ್ಲ ತನ್ನ ಸಂಕಲ್ಪ ಮಾತ್ರದಿಂದ ನಮ್ಮ ಎಚ್ಚರದಲ್ಲಿ ತೋರಿಸುತ್ತಾ ಸುಷುಪ್ತಿಯೇ ಮುಂತಾದ ಅವಸ್ಥೆಗಳಲ್ಲಿ ಯಾವ ಆಯಾಸವೂ ಇಲ್ಲದೆ ಉಪಸಂಹಾರ ಮಾಡುತ್ತಿರುವ ಈ ಪರಮಾತ್ಮನ ಜ್ಞಾನಮಯವಾದ **ಮಹಾತಪಸ್ಸು** ಎಂಥಾ ಅಗಾಧವಾದದ್ದು! ನದಿಗಳ ನೀರು, ಮಹಾಮಂತ್ರಗಳು, ಪ್ರಾಯಶ್ಚಿತ್ತಗಳು, ದೊಡ್ಡವರ ಸೇವೆ–ಮುಂತಾದ ಪವಿತ್ರಕರವಾದ ಸಾಧನಗಳು ಎಷ್ಟೋ ಇವೆ. ಆದರೆ ಪವಿತ್ರವಾಗಿರುವ ವಸ್ತುಗಳೆಲ್ಲವೂ ಯಾವ ಪರಮಾತ್ಮನ ಸೋಂಕಿನಿಂದಲೇ ಪವಿತ್ರವೆನಿಸಿರುವವೋ ಅಂಥ ಭಗವಂತನು ಎಂಥ **ಪವಿತ್ರ** ನೆನಬೇಕಾಯಿತು!

ಹೀಗೆಯೇ ಭಗವಂತನು ಜಗತ್ತಿನ ಸೃಷ್ಟಿಸ್ಥಿತಿಲಯಗಳಿಗೆ ಕಾರಣನಾಗಿರುತ್ತಾನೆ; ಆದರೂ ಆ ಕರ್ಮಗಳಿಂದ ಒಂದಿಷ್ಟೂ ಬದ್ಧನಾಗಿರುವದಿಲ್ಲ. ಲೋಕಗಳೆಲ್ಲಕ್ಕಿಂತಲೂ ಆತನೊಬ್ಬನೇ **ಪ್ರಧಾನನು**, ಮುಖ್ಯನು; ಮಿಕ್ಕದ್ದೆಲ್ಲವೂ ಅಪ್ರಧಾನ, ಅವನ ಅಧೀನವಾಗಿ ಇರತಕ್ಕದ್ದು. ಇಡಿಯ ಜಗತ್ತಿಗೆ ಆತನು ಒಡೆಯನು, ರಕ್ಷಕನು, ಆದ್ದರಿಂದ ಜಗನ್ನಾಥನೆಂಬ ಹೆಸರು ಆತನಿಗೆ ಅಸಾಧಾರಣವಾಗಿರುತ್ತದೆ. ಹೆಚ್ಚೇಕೆ? ಆತನು ವಿಷ್ಣು, ಎಲ್ಲವನ್ನೂ ವ್ಯಾಪಿಸಿರುವವನು; ಆತನನ್ನು ಬಿಟ್ಟು ಮತ್ತೆ ಯಾವದೂ ಇರುವದಿಲ್ಲ. ಇಂಥ ಪರಮಾತ್ಮನ ನಾಮವಿದು ಎಂಬ ಭಾವವು ನಮ್ಮ ಹೃದಯದಲ್ಲಿ ಉಕ್ಕುತ್ತಿರಬೇಕು. ಈ ಭಾವದಿಂದ

ಕೂಡಿ ಓದಿದ ವಿಷ್ಣುಸಹಸ್ರನಾಮವು ನಮ್ಮನ್ನು ವಿಷ್ಣುಮುಖವಾಗಿ ಮಾಡುವದು. ಆಗ ವಿಷಯಗಳೆಂಬ ಆವರಣವು ಮರೆಯಾಗುವದು, 'ಸರ್ವಂ ವಿಷ್ಣುಮಯಂ ಜಗತ್' ಜಗತ್ತೆಲ್ಲವೂ ವಿಷ್ಣುಮಯವಾಗಿದೆ ಎಂಬ ಮಾತಿನ ಅರ್ಥವು ಮನದಟ್ಟಾಗಿಬಿಡುವದು.

ಇಲ್ಲಿ ಕೆಲವರು ಹೀಗೆಂದು ಕೇಳುವರು. 'ಭಗವಂತನ ನಾಮವನ್ನು ಭಾವಪೂರ್ವಕವಾಗಿ ಉಚ್ಚರಿಸುವದೆಂಬುದೇ ನಮ್ಮಿಂದ ಆಗುವದಿಲ್ಲವಲ್ಲ! ನಮ್ಮಲ್ಲಿ ದೈವಭಕ್ತಿಯೇ ಇರುವಂತೆ ತೋರುವದಿಲ್ಲವಲ್ಲ! ಭಾವವಿಲ್ಲದೆ ನಾಮೋಚ್ಚಾರಣೆಯನ್ನು ಮಾಡುತ್ತಿದ್ದರೆ ಏನು ಪ್ರಯೋಜನ? ಭಗವಂತನ ನಾಮವನ್ನು ಉಚ್ಚರಿಸುವಾಗ ನಮ್ಮ ಹೃದಯದಲ್ಲಿ ಯಾವ ಭಾವವೂ ಇರುವಂತೆ ಕಾಣುವದೇ ಇಲ್ಲವಲ್ಲ!' ಇದಕ್ಕೆ ನಮ್ಮ ಉತ್ತರವೇನೆಂದರೆ ಈ ನಮ್ಮ ಸಂದೇಶವನ್ನು ನೀವು ಓದುತ್ತಿರುವದೇ ನಿಮ್ಮ ಹೃದಯದಲ್ಲಿ ಭಗವದ್ಭಾವನೆಯು ಉಂಟಾಗುತ್ತಿದೆ ಎಂಬುದಕ್ಕೆ ಸಾಕ್ಷಿಯಾಗಿದೆ. ನಿಮಗೂ ತಿಳಿಯದಂತೆ ನಿಮಗೆ ಅಧ್ಯಾತ್ಮ ವಿಚಾರದಲ್ಲಿ ಆಸಕ್ತಿಯುಂಟಾಗುತ್ತಿದೆ; ಇಷ್ಟರಲ್ಲಿಯೇ ಅದರ ಫಲವಾಗಿ ನಿಮಗೆ ಭಾವಪೂರಿತವಾಗಿ ಭಗವಂತನ ಸ್ವರೂಪದ ಅನುಸಂಧಾನವನ್ನು ಮಾಡುವ ಅಭಿರುಚಿಯು ಎದ್ದು ತೋರಿಕೊಳ್ಳುವದು. ಒಂದು ಬಣವೆಯಲ್ಲಿ ಒಂದು ಕಿಡಿಬಿದ್ದರೆ ಸಾಕು, ಕಾಲಕ್ರಮದಲ್ಲಿ ಅದು ಸಿಮಿಸಿಮಿಯೆಂದು ಹೊಗೆಯಾಡಿ ಕೊನೆಗೆ ಭುಗಿಲೆನ್ನುವದು ಖಂಡಿತ. ಇದರಂತೆ ಈಗ ನಿಮ್ಮಲ್ಲಿ ಎದ್ದುಕೊಂಡಿರುವ ಈ ಕುತೂಹಲವೇ ಶ್ರದ್ಧಾಭಕ್ತಿಗಳಾಗಿ ಪರಿಣಮಿಸುವದು, ಬಳಿಕ ಕಾಲಕ್ರಮದಲ್ಲಿ ಭಗವದ್ಭಾವವು ನಿಮ್ಮನ್ನು ಆವರಿಸಿಕೊಂಡು ಬಿಡುವದು.

ಆದ್ದರಿಂದ ಈಗ ನೀವು ನಾಮೋಚ್ಚಾರಣೆಯ ವಿಷಯಕ್ಕೆ ಚರ್ಚೆಯನ್ನು ಮಾಡದೆ ಕೂಡಲೆ ಉಚ್ಚಾರಣೆಯ ಅಭ್ಯಾಸಕ್ಕೆ ಶ್ರದ್ಧೆಯಿಂದ ಮನಸ್ಸು ಹಾಕಿರಿ. ಧರ್ಮ ಗ್ರಂಥಗಳನ್ನು ಓದುವದು, ವಿಚಾರಗ್ರಂಥಗಳನ್ನು ತಿರಿವಿ ಹಾಕುವದು, ತರ್ಕವನ್ನು ಮಾಡುತ್ತಿರುವದು– ಇವುಗಳನ್ನು ಬಹುಕಾಲ ಮಾಡಬೇಕಾದದ್ದು ಅವಶ್ಯವಿರುವದಿಲ್ಲ. ತಿಳಿದಷ್ಟು ತತ್ತ್ವವನ್ನು ಸಾಧನದಲ್ಲಿ ಆಚರಣೆಗೆ ತರುವದಕ್ಕೆ ಪ್ರಯತ್ನವನ್ನು ಮಾಡುವದು ಮೊದಲನೆಯ ಕೆಲಸವು. ವಿಚಾರಗ್ರಂಥಗಳು ಸಾಧಕರಿಗೆ ಮಾತ್ರ ಉಪಯುಕ್ತವಾಗಿರುವದೇ ಹೊರತು ಸುಮ್ಮನೆ ಓದಿ ಓದಿ ಮೆದುಳಿನಲ್ಲಿ ವಿಷಯುಗಳ ನೆನಪಿನ ಹೊರೆಯುನ್ನು ಹೇರಿ ಕೊಳ್ಳುವವರಿಗೆ ಉಪಯುಕ್ತ ವಾಗುವದಿಲ್ಲ. ಈಗ ನೀವು ಮಾಡಬೇಕಾದ ಮುಖ್ಯ ಕಾರ್ಯವೊಂದಿದೆ, ಈ ಕೂಡಲೆ ಭಗವಂತನ ಕಡೆಗೆ ತಿರುಗಿರಿ. ಈ ಕೂಡಲೆ ಭಗವಂತನ ನಾಮದ ಉಚ್ಚಾರಣೆಯನ್ನು ಮಾಡುವದಕ್ಕೆ ಮೊದಲಿಡಿರಿ. ಎತ್ತಲೋ ನೋಡುತ್ತಾ ಮುಟ್ಟಿದರೂ ಬೆಂಕಿಯು ಸುಟ್ಟೇ ಸುಡುವದಲ್ಲವೆ? ಹಾಗೆ ಭಾವವು ಕಡಿಮೆಯಾಗಿದ್ದರೂ ಚಿಂತೆಯಿಲ್ಲ, ನಾಮೋಚ್ಚಾರಣೆಯನ್ನು ಮಾಡುತ್ತಾಬನ್ನಿರಿ. ಈ ನಾಮವೇ ಭವಸಾಗರವನ್ನು

ದಾಟುವದಕ್ಕೆ ಸೇತುವೆಯಾಗುವದು, ಈ ಸಂಸಾರದ ಆಚೆಯಿರುವ ಸರ್ವಾತ್ಮನಾದ ಭಗವಂತನನ್ನು ಮುಟ್ಟಿಸುವ ಸಾಧನವಾಗುವದು.

ಭಕ್ತಿಯಿಂದ ಭಗವಂತನ ನಾಮವನ್ನು ಉಚ್ಚರಿಸುವದರಿದ ಮನಸ್ಸಿನ ಹರಿದಾಟವು ನಿಲ್ಲುವದು, ಮನಸ್ಸಿಗೂ ಭಗವಂತನಿಗೂ ಹೊಂದುಗೆಯಾದ ಸಂಬಂಧವಾಗುವದು, ಮನಸ್ಸು ವಿಷಯಗಳ ಸಂಬಂಧದಿಂದ ಬಿಡಿಸಿಕೊಂಡು ನಾನೆಂಬ ತೊಡರಿನಿಂದ ಬಿಡುಗಡೆಯನ್ನು ಹೊಂದಿ ಭಗವಂತನ ಸ್ವರೂಪವನ್ನು ಅನವರತವಾಗಿ ನೆನೆಯುವದಕ್ಕೆ ಅಣಿಯಾಗುವದು. ನಾಮೋಚ್ಚಾರಣೆಯು ಅತ್ಯಂತ ಮಧುರವಾದ ಗಾನಕ್ಕಿಂತಲೂ ಇಂಪಾಗಿ ತೋರಿದರೆ ಆಗ ಅದರ ಕೆಲಸವು ಮೊದಲಾಯಿತೆಂದು ತಿಳಿಯಬೇಕು.

# 16. ನಾಮಸ್ಮರಣೆ

* ಭಗವಂತನ ನಾಮವನ್ನು ಉಚ್ಚಾರಣೆಮಾಡುವದರಿಂದ ಪರಮಪುರುಷಾರ್ಥವೇ ಕೈವಶವಾಗುವದೆಂಬುದನ್ನು ಕೇಳಿದ ಕೆಲವರಿಗೆ ಇಷ್ಟು ಸುಲಭವಾದ ಸಾಧನದಿಂದ ಅಷ್ಟು ಹೆಚ್ಚಿನ ಫಲವು ದೊರಕೀತೆಂಬ ಶಂಕೆ ಉಂಟಾಗುವದು. ಒಂದು ದಿನ ಒಬ್ಬ ಮಹಾಶಯನು ಹರಿಕೀರ್ತನೆಯನ್ನು ಪ್ರಾರಂಭಿಸುವ ಪೀಠಿಕೆಯಲ್ಲಿ 'ಈ ಕಲಿಯುಗದಲ್ಲಿ ಹರಿನಾಮದ ಉಚ್ಚಾರಣೆಗಿಂತ ಹೆಚ್ಚಿನ ಸಾಧನವೇ ಇಲ್ಲ. ಈ ಸಂಸಾರದುಃಖದಿಂದ ಪಾರಾಗಬೇಕೆನ್ನುವವರು ಪರಮಾತ್ಮನ ನಾಮವನ್ನು ಬಿಡದೆ ಉಚ್ಚರಿಸಬೇಕು. ಈ ದಿನ ಸಂಕೀರ್ತನದ ಆರಂಭದಲ್ಲಿ ತಾವೆಲ್ಲರೂ ಒಟ್ಟಿಗೆ ನಾಮೋಚ್ಚಾರಣಮಾಡಿರಿ, ಗಟ್ಟಿಯಾಗಿ ನಾಮಕೀರ್ತನೆಮಾಡಿರಿ, ಅದರ ಸುಖವು ತಮಗೆ ಈಗಲೆ ಅನುಭವಕ್ಕೆ ಬರುವದು' ಎಂದು ಉಪದೇಶಿಸುವದಕ್ಕೆ ಮೊದಲುಮಾಡಿದನು. ಸಭಿಕರು ಆ ಉಪದೇಶದ ಮಹತ್ತ್ವವನ್ನು ಹೆಚ್ಚಾಗಿ ಮನಸ್ಸಿಗೆ ಹತ್ತಿಸಿಕೊಂಡಂತೆ ಕಾಣಲಿಲ್ಲ; ಅವರಲ್ಲಿ ಒಬ್ಬನು ಹತ್ತಿರವಿದ್ದ ಮತ್ತೊಬ್ಬನೊಡನೆ, 'ಗಿಣಿಯಂತೆ ನಾಮವನ್ನು ಒಪ್ಪಿಸಿದರೆ ಆಗುವದಾದರೂ ಏನು? ಈ ಕೀರ್ತನಕಾರನು ಪೀಠಿಕೆಯ ಶಾಸ್ತ್ರವನ್ನು ಮಾಡಿ ಸ್ವಲ್ಪ ಹೊತ್ತುಕಳೆಯುವದಕ್ಕಾಗಿ ಹೀಗೆಲ್ಲ ಹೇಳುತ್ತಿದಾನೆ. ಈ ದಿನದ ಕಥೆಯನ್ನೇ ಪ್ರಾರಂಭಿಸಿಬಿಡಬಾರದೆ?' ಎಂದು ಗೊಣಗುಟ್ಟಿಕೊಳ್ಳುತ್ತಿದ್ದನು!

ಕೀರ್ತನಕಾರನು ತನ್ನ ಜೀವನದ ವೃತ್ತಿಯಾಗಿ ಹರಿಕಥೆಯನ್ನು ಹೇಳುವ ಪದ್ಧತಿಯನ್ನಿಟ್ಟುಕೊಂಡಿದ್ದನು. ಕಥಾಶ್ರವಣಕ್ಕೆ ಬಂದವರಲ್ಲಿ ಅನೇಕರು ಹಗಲೆಲ್ಲ ದುಡಿದು

* ಸಂಪುಟ 17, ಸಂಚಿಕೆ 4, ಡಿಸೆಂಬರ್ 1947, ಪುಟ 73-80

ವಿಶ್ರಾಂತಿಗೆಂದೂ ವಿನೋದಕ್ಕೆಂದೂ ಅಲ್ಲಿ ನೆರೆದಿದ್ದರು. ಆದ್ದರಿಂದ ನಾಮೋಚ್ಚಾರಣೆಯ ಪ್ರಯೋಜನವು ಏನೆಂಬುದು ಕಥಾಕಾಲದಲ್ಲಿ ಅಷ್ಟು ಸ್ಪಷ್ಟವಾಗಲಿಲ್ಲ. ಆದ್ದರಿಂದ ಮೇಲೆ ಕಾಣಿಸಿರುವ ಶಂಕೆಯನ್ನು ನಿಮಿತ್ತವಾಗಿ ಮಾಡಿಕೊಂಡು ಈ ಸಲದ ಸಂದೇಶವನ್ನು ಬರೆಯಬೇಕೆಂದು ನಾವು ಸಂಕಲ್ಪಿಸಿರುತ್ತೇವೆ. ಸಾಧಕರಿಗೆ ಇಲ್ಲಿ ಎಷ್ಟರಮಟ್ಟಿಗೆ ಸಹಾಯವು ದೊರಕುವದೋ ಅವರೇ ನಿರ್ಣಯಿಸಬೇಕು.

ಭಗವಂತನ ನಾಮವನ್ನು ಗಿಣಿಯಂತೆ ಉಚ್ಚರಿಸಿದರೂ ಪ್ರಯೋಜನವಿಲ್ಲದೆ ಇಲ್ಲ. ಭಗವಂತನ ನಾಮವು ಅದರ ಮಹಿಮೆಯನ್ನು ಅರಿಯದೆ ಉಚ್ಚರಿಸಿದವರ ಪಾಪರಾಶಿಯನ್ನೂ ಸುಟ್ಟುಬಿಡುವದೆಂದು ಬಲ್ಲವರು ಹೇಳುತ್ತಾರೆ. ಭಾಗವತ ಪುರಾಣದಲ್ಲಿ ವಿಷ್ಣುದೂತರು ಹೇಳಿರುವ ವಾಕ್ಯಗಳನ್ನು ನಾವು ಇಲ್ಲಿ ಮನಸ್ಸಿಗೆ ತಂದುಕೊಳ್ಳಬೇಕು. 'ಸಂಕೇತಕ್ಕಾಗಿ, ಹಾಸ್ಯಕ್ಕಾಗಿ, ನಡುನಡುವೆ ಅರ್ಥವಿಲ್ಲದ ಮಾತಾಗಿ ಅಥವಾ ಒಬ್ಬರನ್ನು ನಿಂದಿಸುವದಕ್ಕಾಗಿ ಭಗವಂತನ ನಾಮವನ್ನು ಉಚ್ಚರಿಸಿದರೂ ಅದು ಪಾಪವನ್ನೆಲ್ಲ ಸುಟ್ಟುಬಿಡುತ್ತದೆ. ಬೀಳುವಾಗ, ಎಡಹುವಾಗ, ಮುಗ್ಗರಿಸುವಾಗ, ಹಾವುಚೇಳುಗಳು ಕಚ್ಚಿದಾಗ, ಸಂತಾಪದಿಂದ ಸಂಕಟಪಡುತ್ತಿರುವಾಗ, ಯಾರಾದರೊಬ್ಬರು ತನ್ನನ್ನು ಹೊಡೆಯುವಾಗ, ತನಗೆ ತಿಳಿಯದೆ ಅವಶನಾಗಿ 'ಹರಿ!' ಎಂದರೂ ಸಾಕು, ಆತನಿಗೆ ಸುಖವಾಗುವದು. ತಿಳಿದು ಅಥವಾ ತಿಳಿಯದೆ ಭಗವಂತನ ನಾಮವನ್ನು ಉಚ್ಚರಿಸಿದ ಮಾತ್ರದಿಂದ, ಕಟ್ಟಿಗೆಯನ್ನು ಬೆಂಕಿಯು ಸುಡುವಂತೆ, ಘೋರವಾದ ಪಾಪವನ್ನೇ ಅದು ಸುಟ್ಟು ಹಾಕುವದು. ಔಷಧಿಯ ವೀರ್ಯವನ್ನು ತಿಳಿಯದೆ ಸೇವಿಸಿದರೂ ತನ್ನ ಗುಣವನ್ನು ಅದು ತೋರಿಸುವದಲ್ಲವೆ? ಅದರಂತೆ ಪರಮೇಶ್ವರನ ನಾಮವನ್ನು ಸುಮ್ಮನೆ ಉಚ್ಚರಿಸಿದರೂ ಅದು ತನ್ನ ಕಾರ್ಯವನ್ನು ಮಾಡಿಯೇ ತೀರುತ್ತದೆ!'

ಶ್ರೀ ರಾಮಕೃಷ್ಣಪರಮಹಂಸರು ಈ ವಿಷಯದಲ್ಲಿ ಹೇಳಿರುವದೇನೆಂದರೆ, 'ಅಮೃತ ಸರೋವರಕ್ಕೆ, ತಿಳಿದು ಅಥವಾ ತಿಳಿಯದೆ, ಹೇಗೆ ಬಿದ್ದರೂ ಸರಿಯೆ, ಅದರಲ್ಲಿ ಮುಳುಗಿದ ಮಾತ್ರದಿಂದ ಅಮೃತಸ್ವರೂಪರಾಗುತ್ತಾರೆ. ಯಾವ ಮರ್ತ್ಯನೇ ಆಗಲಿ, ಭಗವಂತನ ನಾಮವನ್ನು ಮನಃಪೂರ್ವಕವಾಗಿಯೋ ಅವಶನಾಗಿಯೋ, ಹೇಗೆ ಉಚ್ಚರಿಸಿದರೂ ಸರಿಯೆ, ಉಚ್ಚಾರಣೆ ಮಾಡಿದ ಮಾತ್ರದಿಂದ ಕೊನೆಗೆ ಅಮೃತನಾಗಿಯೇ ತೀರುವನು.' ಆದರೆ ನಾಮದ ಅರ್ಥವನ್ನು ಅನುಸಂಧಾನ ಮಾಡುತ್ತಾ ಪ್ರೇಮದಿಂದ ಉಚ್ಚರಿಸಿದರೆ ಆಗುವ ಫಲವು ಅಮೋಘವಾಗಿರುತ್ತದೆ. ಆ ಪರಮಹಂಸರೇ ಹೇಳಿರುವಂತೆ 'ಒಂದೇ ಸಲ ನಾಮಗ್ರಹಣಮಾಡಿದರೂ ಪಾಪನಾಶ ವಾಗುವದು ನಿಜ; ಆದರೆ ಉತ್ತರಕ್ಷಣದಲ್ಲಿಯೇ ಮಾನವನು ಮತ್ತೆ ಪಾಪಾಚರಣೆಗೆ ಧುಮುಕಿ ಬಿಡುತ್ತಾನೆ. ಗಂಗೆಯಲ್ಲಿ, ಅವಗಾಹನಸ್ನಾನವನ್ನು ಮಾಡಿದರೆ ಪಾಪಗಳು ತೊಲಗುವದು ನಿಜ. ಆದರೆ ಗಂಗೆಯಲ್ಲಿ

ಮುಳುಗಿದವನ ಪಾಪಗಳು ದಡದಲ್ಲಿರುವ ಮರಗಳ ಕೊಂಬೆಗಳ ಮೇಲೆ ಅಡರಿರುವವಂತೆ; ನೀರಿನಿಂದ ಮೇಲಕ್ಕೆ ಬರುತ್ತಲೂ ಮತ್ತೆ ಅವನ ಹೆಗಲನ್ನೇರುವವಂತೆ!' ಆದ್ದರಿಂದ ಭಗವಂತನ ನಾಮವನ್ನು ಬಿಡದೆ ಯಾವಾಗಲೂ ಉಚ್ಚರಿಸುತ್ತಿರಬೇಕು; ನಾಮದಲ್ಲಿ, ಪ್ರೇಮವುಂಟಾಗಿ ಧನಕನಕವಸ್ತುವಾಹನಾದಿಗಳ ಆಸಕ್ತಿಯು ತಪ್ಪುವಂತೆ ಮಾಡೆಂದು ಭಗವಂತನನ್ನು ಪ್ರಾರ್ಥನೆಮಾಡುತ್ತಲೂ ಇರಬೇಕು. ಬರಿಯ ನಾಮೋಚ್ಚಾರಣೆಗಿಂತ ನಾಮಸ್ಮರಣೆಯು, ನಾಮದ ಅರ್ಥವನ್ನು ಅನುಸಂಧಾನ ಮಾಡುವದು, ಹೆಚ್ಚಿನ ಅರ್ಥಕ್ರಿಯೆಯನ್ನು ಮಾಡುತ್ತದೆ. ನಾಮವನ್ನು ಉಚ್ಚಾರಣೆ ಮಾಡುತ್ತಿರಬೇಕು, ಅದೇ ಕಾಲದಲ್ಲಿ ಅದರ ಅರ್ಥವಾಗಿರುವ ಭಗವಂತನ ಕಡೆಗೆ ಚಿತ್ತವನ್ನು ತಿರುಗಿಸುತ್ತಿರಬೇಕು.

ನಾಮಸ್ಮರಣೆಯ ಹೆಚ್ಚುಗಾರಿಕೆಯನ್ನು ಮನಗಾಣಬೇಕೆನ್ನುವವರು ಶಬ್ದಕ್ಕೂ ಅರ್ಥಕ್ಕೂ ಇರುವ ನಿಕಟಸಂಬಂಧವನ್ನು ಮನಸ್ಸಿಗೆ ತಂದುಕೊಳ್ಳಬೇಕು. ವರ್ತಮಾನಪತ್ರಿಕೆಗಳನ್ನು ಮೇಲಿಂದ ಮೇಲೆ ಓದುತ್ತಿರುವ, ರೇಡಿಯೊ ಭಾಷಣಗಳನ್ನು ಮತ್ತೆ ಮತ್ತೆ ಕೇಳುತ್ತಿರುವ, ರೈಲುಗಳಲ್ಲಿಯೂ ಬಸ್ಸುಗಳಲ್ಲಿಯೂ ಹಡಗುಗಳಲ್ಲಿಯೂ ಎಡೆಬಿಡದೆ ಮಾತುಗಳನ್ನು ಆಡುತ್ತಲೂ ಕೇಳುತ್ತಲೂ ಇರುವ, ಈ ಕಾಲದ ಜನರಿಗೆ ಶಬ್ದಗಳ ಉಚ್ಚಾರಣೆಯು ಅಥವಾ ಶ್ರವಣವು ಮನಸ್ಸಿನ ಮೇಲೆ ಎಂಥ ಪರಿಣಾಮವನ್ನು ಮಾಡುವದೆಂಬುದನ್ನು ಯೋಚಿಸುವದಕ್ಕೆ ಕಾಲವು ಸಿಕ್ಕುವದು ಕಷ್ಟವಾಗಿರುತ್ತದೆ. ಆದರೂ ನಾವು ಓದುವ, ಆಡುವ, ಕೇಳುವ ವಾಕ್ಯಗಳಲ್ಲಿರುವ ಶಬ್ದಗಳು ಎಡೆಬಿಡದೆ ತಮ್ಮತಮ್ಮ ಅರ್ಥಗಳನ್ನು, ಆಯಾ ವಿಷಯಗಳ ಚಿತ್ರಗಳನ್ನು ನಮ್ಮ ಅಂತಃಕರಣದ ಮುಂದೆ ತಂದೊಡ್ಡುತ್ತಿರುವವು; ಆಯಾ ವಸ್ತುಗಳ ವಾಸನೆಯ ಮುದ್ರೆಯನ್ನು ಅಂತಃಕರಣದ ಮೇಲೆ ಒತ್ತುತ್ತಲೇ ಇರುವವು! ಒಂದೊಂದು ಶಬ್ದಕ್ಕೂ ಎಂಥ ಅದ್ಭುತಶಕ್ತಿಯಿರುತ್ತದೆ! ಆ ಶಕ್ತಿಯಿಂದ ಅದು ತನ್ನ ವಾಚ್ಯವಸ್ತುವಿನ ಚಿತ್ರವನ್ನು ಎಷ್ಟು ವೇಗದಿಂದ ತಂದು ನಮ್ಮ ಮುಂದೆ ಹಿಡಿಯುತ್ತದೆ! ಆ ವಸ್ತುಗಳ ಭಾವನೆಯಿಂದ ಎಂಥೆಂಥ ವಿಚಿತ್ರಬಾಧೆಗಳು ನಮ್ಮ ಮನಸ್ಸಿನಲ್ಲಿ ಮೂಡಿ ಕೊಳ್ಳುತ್ತಿರುತ್ತವೆ! ಇದನ್ನು ನಾವು ಸ್ವಲ್ಪ ಮನಸ್ಸಿಗೆ ತಂದುಕೊಳ್ಳಬೇಕು. ಈ ಕೆಳಗೆ ಕೆಲವು ವಾಕ್ಯಗಳನ್ನು, ಯಾವದೊಂದು ನಿಯತಸಂಬಂಧವನ್ನೂ ಇಟ್ಟುಕೊಳ್ಳದೆ ಮನಸ್ಸಿಗೆ ತೋಚಿದಂತೆ, ಬರೆದಿರುವೆವು. ವಾಚಕರು ಅವುಗಳಿಂದ ತಮ್ಮ ಅಂತಃಕರಣದಲ್ಲಿ ಮೂಡಿಕೊಳ್ಳುವ ಭಾವಗಳನ್ನು ಪರೀಕ್ಷಿಸಿಕೊಳ್ಳಲಿ!

**"ಭತ್ತದ ಬೆಲೆ ಇಳಿಯಿತು; ಮುಸಲ್ಮಾನರಿಗೂ ಹಿಂದುಗಳಿಗೂ ಹೊಡೆದಾಟ; ಎರಡು ತಲೆಗಳ ಮಗುವಿನ ಜನನ; ಇನ್ನುಮೇಲೆ ಸ್ಕೂಲುಗಳಲ್ಲಿ ಪರೀಕ್ಷೆ ಇಲ್ಲ; ಕೆಂಪಾಂಬುಧಿಯ ಕೆರೆಯ ಬಳಿ ಹೆಂಗಸಿನ ಶವ; ದೇವಾಲಯಗಳಿಗೆ ಹರಿಜನರ ಪ್ರವೇಶ; ಬಡವರಿಗೆ ಅನ್ನವಸ್ತ್ರದಾನ; ಎಪ್ಪತ್ತು ವರ್ಷದ ಮುದುಕಿಗೆ ಮದುವೆ; ಹಾವು ಕಡಿದವರಿಗೆ ಖರ್ಚಿಲ್ಲದ ಮದ್ದು; ನಿದ್ರೆ ಹತ್ತುವದಕ್ಕೆ ಉಪಾಯ; ಅಂಜಿಕೆಯನ್ನು ಪರಿಹರಿಸಿಕೊಳ್ಳುವ**

**ಬಗೆ; ಪಾಕಿಸ್ತಾನಕ್ಕೆ ಶಸ್ತ್ರಾಸ್ತ್ರಗಳ ಸರಬರಾಯಿ; ಎಂದೆಂದಿಗೂ ಒಣಗದ ಭಾವಿ; ಮುಟ್ಟಿದ್ದೆಲ್ಲ ಚಿನ್ನ; ಸುಖಶಾಂತಿಗಳು; ಭೂಮಂಡಲದ ಮೂರನೆಯ ಯುದ್ಧ!**

ಇಂಥ ಶಬ್ದಗಳು ನಮ್ಮ ಮೇಲೆ ಹೇಗೆ ಕುತೂಹಲ, ಭಯ, ಆಶ್ಚರ್ಯ, ಸಂತೋಷ, ವಿಷಾದ, ಸಮಾಧಾನ, ನಗೆ, ದುಃಖ, ಅಸೂಯೆ–ಮುಂತಾದ ಬಗೆಬಗೆಯ ಭಾವಗಳನ್ನು ಉಂಟುಮಾಡುವವು ಎಂಬುದನ್ನು ಓದುಗರು ಲಕ್ಷಿಸುತ್ತಾ ಹೋಗಬೇಕು. ಆಗ ಯಾವ ಶಬ್ದಕ್ಕೆ ಎಂಥ ಶಕ್ತಿಯು ಇರುವದೆಂಬುದು ಸ್ವಲ್ಪ ಮಟ್ಟಿಗೆ ಮನದಟ್ಟಾಗುವದು. ಪ್ರತಿಯೊಂದು ಶಬ್ದವೂ ತನ್ನತನ್ನ ವಾಚ್ಯವಸ್ತುವಿನ ಚಿತ್ರವನ್ನು ತಟ್ಟನೆ ನಮ್ಮ ಮನಸ್ಸಿಗೆ ತಂದೊಪ್ಪಿಸುತ್ತದೆ; ಪ್ರತಿಯೊಂದು ವಸ್ತುಚಿತ್ರವೂ ತನ್ನತನ್ನ ವಿಷಯಕ್ಕೆ ಆಶ್ಚರ್ಯ, ಭಯ–ಮುಂತಾದ ಭಾವಗಳನ್ನು ಎಬ್ಬಿಸುತ್ತದೆ. ಹೀಗೆ ಶಬ್ದದಿಂದ ವಸ್ತುವಿನ ಚಿತ್ರ, ವಸ್ತುವಿನ ಚಿತ್ರದಿಂದ ಭಾವ–ಇವುಗಳು ತೋರುತ್ತಾ ನಡೆಯುತ್ತಿರುವದೇ ನಮ್ಮ ನಿತ್ಯಜೀವನವು. ಇದನ್ನೇ ಶಾಸ್ತ್ರದಲ್ಲಿ ವ್ಯವಹಾರವೆಂದು ಕರೆದಿರುತ್ತದೆ.

ಭಗವಂತನ ನಾಮವೂ ಹೀಗೆಯೇ ತನ್ನ ವಾಚ್ಯವಾದ ಭಗವಂತನ ತತ್ತ್ವವನ್ನು ನಮ್ಮ ಅಂತಃಕರಣಕ್ಕೆ ಹಿಡಿಯುತ್ತದೆ. ಶಬ್ದದ ಉಚ್ಚಾರಣೆಯಿಂದ ಅಥವಾ ಶ್ರವಣದಿಂದ ವಸ್ತುವಿನ ಸ್ವರೂಪವು ನಮ್ಮ ಮನಸ್ಸಿಗೆ ತಟ್ಟುವಂತೆಯೇ ಭಗವನ್ನಾಮದ ಉಚ್ಚಾರಣೆಯಿಂದ ಅಥವಾ ಶ್ರವಣದಿಂದ ಸಾಧಕರಿಗೆ ಭಗವಂತನ ಸ್ವರೂಪದ ನೆನಪು ಬರುತ್ತದೆ. ವಸ್ತುವಿನ ಸ್ವರೂಪವು ನಮ್ಮಲ್ಲಿ ಆಶ್ಚರ್ಯ ಕುತೂಹಲಾದಿ ಭಾವಗಳನ್ನು ಮೂಡುವಂತೆ ಹೇಗೆ ಮಾಡುವದೋ ಹಾಗೆಯೇ ಭಗವತ್ಸ್ವರೂಪವು ಮನದಲ್ಲಿ ತೋರಿದ ಒಡನೆ ಒಂದು ವಿಲಕ್ಷಣಭಾವವು ನಮ್ಮಲ್ಲಿ ಮೂಡಿಕೊಳ್ಳುವಂತೆ ಮಾಡುತ್ತದೆ. ವಸ್ತುವಿನ ಹೆಸರು ವಸ್ತುವಿನ ಕಡೆಗೆ ತಿರುಗಿಸುವದೆಂಬುದು ನಾಮಮಾತ್ರಕ್ಕೆ ಸಮಾನವಾಗಿರುತ್ತದೆ. ಆದರೆ ಒಂದು ವಿಶೇಷವುಂಟು. ಮಿಕ್ಕ ವಸ್ತುಗಳ ಹೆಸರುಗಳನ್ನು ಉಚ್ಚರಿಸಿದರೆ ಅಥವಾ ಕಿವಿಯಲ್ಲಿ ಕೇಳಿದರೆ ವಸ್ತುವಿನ ಕಡೆಗೆ ಗಿರಕ್ಕನೆ ತಿರುಗಿಸಿ ಆಯಾ ಭಾವವನ್ನು ಹುಟ್ಟಿಸಿ ವಸ್ತುವು ಬೇಕಾದದ್ದು ಅಥವಾ ಬೇಡವಾದದ್ದು ಎಂಬ ತೀರ್ಪನ್ನು ಮನಸ್ಸಿನಲ್ಲಿ ಉಂಟುಮಾಡುತ್ತದೆ. ಆಗ ವಸ್ತುವು ಬೇಕಾಗಿದ್ದರೆ ಅದರ ಪ್ರಾಪ್ತಿಗಾಗಿ, ಬೇಡವಾಗಿದ್ದರೆ ಅದರ ನಿವೃತ್ತಿಗಾಗಿ, ನಾವು ಪ್ರಯತ್ನವನ್ನು ಮಾಡುವೆವು. ಭಗವಂತನ ನಾಮವೂ ಭಗವಂತನ ಕಡೆಗೆ ನಮ್ಮ ಹೃದಯವನ್ನು ತಿರುಗಿಸುತ್ತದೆ; ಅದೂ ಒಂದು ವಿಲಕ್ಷಣವಾದ ಭಾವವನ್ನು ನಮ್ಮ ಹೃದಯದಲ್ಲಿ ಹುಟ್ಟಿಸುತ್ತದೆ. ಆದರೆ ವಿಷಯಗಳ ಭಾವವು ನಮ್ಮನ್ನು ಪ್ರವೃತ್ತಿನಿವೃತ್ತಿಗಳಲ್ಲಿ ನೂಕುವಂತೆ ಭಗವದ್ಭಾವವು ನೂಕುವದಿಲ್ಲ. ಭಗವದ್ಭಾವವು ಒಂದಾನೊಂದು ಶಾಂತಿಯುನ್ನೂ ಸುಖವನ್ನೂ ಉಂಟುಮಾಡಿ ಅಷ್ಟರಿಂದಲೇ ತೃಪ್ತಿಯುನ್ನುಂಟು

ಮಾಡಿಬಿಡುತ್ತದೆ. ಭಗವನ್ನಾಮವನ್ನು ಅರ್ಥಾನು ಸಂಧಾನಪೂರ್ವಕವಾಗಿ ಉಚ್ಚರಿಸುವಾಗ, ನಮ್ಮ ಮನಸ್ಸು ಭಗವಂತನ ಕಡೆಗೆ ಏರುವದು, ಅತ್ತಕಡೆಗೇ ಧಾವಿಸುವದು. ಜಟಾಯು ಸಂಪಾತಿಗಳು ಸೂರ್ಯನ ಕಡೆಗೇ ಹಾರಿದಂತೆ ನಮ್ಮ ಮನೋಬುದ್ಧಿಗಳು ಆ ಪರಮೇಶ್ವರನ ಕಡೆಗೇ ಹಾರಿಹೋಗುತ್ತಿರುವವು. ನಮ್ಮ ಇಡಿಯ ವ್ಯಕ್ತಿತ್ವವೇ ಭಗವಂತನ ಅರ್ಚನೆ, ಪ್ರಾರ್ಥನೆ, ಸ್ತುತಿ, ಚಿಂತನೆ–ಮುಂತಾದ ಉಪಾಯಗಳಿಂದ ಭಗವಂತನಲ್ಲಿ ಸೇರಿಹೋಗಿ ನಿತ್ಯಸುಖವನ್ನು ಪಡೆಯುವ ಕುತೂಹಲವನ್ನು ವ್ಯಕ್ತಗೊಳಿಸುತ್ತಿರುವದು.

ಈ ಕೆಳಗಿನ ಹಾಡಿನಲ್ಲಿ, ಭಗವನ್ನಾಮವನ್ನು ಹೇಗೆ ಉಚ್ಚರಿಸಬೇಕು, ಅದರಿಂದಾಗುವ ಫಲವೇನು? ಎಂಬುದನ್ನು ಸಂಗ್ರಹವಾಗಿ ತಿಳಿಸಿದೆ. ಅಧ್ಯಾತ್ಮ ಗೀತಾವಳಿಯಲ್ಲಿರುವ ಈ ಪದವನ್ನು ಅರ್ಥಾನುಸಂಧಾನಪೂರ್ವಕವಾಗಿ ಹಾಡಿಕೊಂಡು ಸುಖಿಸುವದೂ ಒಂದು ಉತ್ತಮ ಸಾಧನವಾಗುತ್ತದೆ. ಆದ್ದರಿಂದ ಇದನ್ನು ಸ್ವಲ್ಪಮಟ್ಟಿಗೆ ವಿವರಿಸುವೆವು.

**ರಾಗ : ಜಂಜೂಟಿ** **ಆದಿತಾಳ**

**ನುಡಿ ಹರಿನಾಮವನೇ । ರಸನೆ ॥ಪ॥**

**ನುಡಿ ಹರಿನಾಮವ ನಡಿಗಡಿಗೊಲಿದು ನೀ ।**
**ಹಿಡಿಯೊಂದು ನೇಮವನೇ । ರಸನೆ ॥ಅ॥**

**ಬಿಡು ಬೀಳುಮಾತಿನ । ಬೆಡಗಿಗೆ ಸೋಲ್ವುದ ॥**
**ಕಡಿ ಪಾಪದಾಮವನೇ । ರಸನೆ ॥1॥**

**ಬಿಗಿಹಿಡಿ ಬಾಹ್ಯದ ಸೊಗವ ಸವಿವಾಸೆಯ ॥**
**ಹೊಗು ರಸಧಾಮವನೇ । ರಸನೆ ॥2॥**

**ನಾಮವೆ ಶಂಕರ । ಪ್ರೇಮರಸಾಯನ ॥**
**ಕಾಮಿಸೀ ಕಾಮವನೇ । ರಸನೆ ॥3॥**

ಇಲ್ಲಿ ನಾಲಗೆಗೆ ಭಕ್ತನು ಮಾಡಿದ ಉಪದೇಶವನ್ನು ವರ್ಣಿಸಿದೆ. ನಾಲಗೆಗೆ ರಸವನ್ನು–ಒಳ್ಳೆಯ ಸವಿಯನ್ನು–ಸೇವಿಸುವದರಲ್ಲಿ ಪ್ರೀತಿ ಹೆಚ್ಚು. ಆದ್ದರಿಂದಲೇ ಅದಕ್ಕೆ ರಸನೆ ಎಂದು ಹೆಸರು. ಮನುಷ್ಯನು ಮಿಕ್ಕ ಇಂದ್ರಿಯಗಳನ್ನು ಗೆದ್ದುಕೊಂಡರೂ ಗೆದ್ದು ಕೊಳ್ಳಬಹುದು; ಆದರೆ ರಸನೆಯನ್ನು ಗೆಲ್ಲುವದು ಬಲು ಕಷ್ಟ. ಅದರಲ್ಲಿ ಸ್ಪರ್ಶೇಂದ್ರಿಯ, ರಸನೇಂದ್ರಿಯ, ವಾಗಿಂದ್ರಿಯ–ಈ ಮೂರು ಇಂದ್ರಿಯಗಳೂ ಒಟ್ಟುಗೂಡಿರುವವು. ಒಂದೊಂದು ರೂಪದಿಂದಲೂ ಅದು ವಿಷಯಗಳನ್ನು ಸವಿಯುತ್ತಾ ಮನುಷ್ಯನನ್ನು ಮೈಮರೆಯುವಂತೆ ಮಾಡುತ್ತಿರುವದು. ಆದ್ದರಿಂದ ರಸನೆಯನ್ನು ಗೆದ್ದುಕೊಂಡರೆ

ಎಲ್ಲವನ್ನೂ ಗೆದ್ದುಕೊಂಡಂತೆ ಆಯಿತೆಂದು ಬಲ್ಲವರು ಹೇಳುವರು. ಪ್ರಕೃತದಲ್ಲಿ ವಾಗಿಂದ್ರಿಯದ ವ್ಯಾಪಾರವನ್ನು ಮುಖ್ಯವಾಗಿಟ್ಟು ನಾಲಗೆಯನ್ನು ಸಂಬೋಧಿಸಿ ಹೇಳಿರುವ ಉಪದೇಶವಿದು.

ಈ ಪದದ ಪಲ್ಲವಿಯಲ್ಲಿ 'ಹರಿನಾಮವನ್ನೇ ನುಡಿಯಬೇಕು' ಎಂಬ ಉಪದೇಶವಿದೆಯಷ್ಟೆ. ಇದೊಂದು ನಿಯಮವಿಧಿ ಎಂದು ಹೇಳಬಹುದು. ಮನುಷ್ಯನು ಮಾತನಾಡುವಾಗ ವಿಷಯಗಳ ಮಾತುಗಳನ್ನೇ ಬಳಸುವದು ಬಹಳ; ಒಂದೊಂದು ವೇಳೆ ಭಗವಂತನ ನಾಮವನ್ನೂ ನುಡಿಯುವದುಂಟು. ಆದರೆ ಇಲ್ಲಿ ಹೇಳಿರುವ ಸಾಧನೆ ಯಾವದೆಂದರೆ ಭಗವಂತನ ನಾಮವನ್ನೇ ನಿಯಮದಿಂದ ನುಡಿಯಬೇಕು; ಅದನ್ನೇ ಅಡಿಗಡಿಗೂ ನುಡಿಯುತ್ತಿರಬೇಕು; ಅದನ್ನೇ ಪ್ರೇಮದಿಂದ ನುಡಿಯುತ್ತಿರಬೇಕು. ಈ ನಿಯಮವೊಂದನ್ನು ಹಿಡಿದರೆ ಸಾಧಕನು ಕೃತಕೃತ್ಯನಾಗುವನು.

ಪಲ್ಲವಿಯಲ್ಲಿ ಹೇಳಿರುವ ಈ ವಿಷಯವನ್ನು ಮುಂದಿನ ಚರಣಗಳಲ್ಲಿ ವಿಸ್ತರಿಸಿರುತ್ತದೆ. ಹರಿನಾಮವನ್ನೇ ನುಡಿಯುತ್ತಿರಬೇಕು–ಎಂಬಲ್ಲಿ ಬಿಡತಕ್ಕದ್ದು ಯಾವದು ಎಂಬುದು ಸ್ಪಷ್ಟವಾಗಿಲ್ಲ; ಅದನ್ನು ಮೊದಲನೆಯ ಚರಣದಲ್ಲಿ ಸ್ಪಷ್ಟಪಡಿಸಿರುತ್ತದೆ. ಮನುಷ್ಯನಿಗೆ ಅರ್ಥವಿಲ್ಲದ ಬೀಳುಮಾತಿನಲ್ಲಿ ಬಹಳ ಅಕ್ಕರೆ; ಒಡಕು ಮಡಕೆಯಲ್ಲಿ ಕಲ್ಲಿಟ್ಟು ಆಡಿಸಿದಂತೆ, ಸುಮ್ಮನೆ ಏನಾದರೊಂದು ಮಾತನ್ನಾಡುತ್ತಾ ಅಷ್ಟರಿಂದಲೇ ತಾವು ಕೃತಕೃತ್ಯರೆಂದು ಭಾವಿಸುವ ಮಾತಿನಮಲ್ಲರು ಹಲವು ಮಂದಿ ಇರುತ್ತಾರೆ. ಮಾತಿನ ಬೆಡಗಿಗೆ ಮರುಳಾಗಿ ಸುಮ್ಮನೆ ಮಾತಾಡುವವರನ್ನು ಮಾತುಬರಿಯ ಮನುಷ್ಯರೆಂದೂ ವ್ಯವಹಾರಚತುರರೆಂದೂ ಭಾಷಣ ಕಾರರೆಂದೂ ಜನರು ಹೊಗಳುವದುಂಟು. ಇದರಿಂದ ಬರುವ ಒಣ ಹೆಸರೂ ಒಣಹರಟೆಗೆ ತಕ್ಕ ಬಹುಮಾನವೇ ಆಗಿರುತ್ತದೆ. ಮಾತಾಡಿಮಾತಾಡಿ ಸುಮ್ಮನೆ ಆಯಾಸವನ್ನು ಮಾಡಿಕೊಂಡು ಫಲವೇನು? 'ಬಹಳ ಶಬ್ದಗಳನ್ನು ಚಿಂತಿಸಿಕೊಳ್ಳುತ್ತಾ ಕೂರಬಾರದು; ಏಕೆಂದರೆ ಅದು ವಾಗಿಂದ್ರಿಯಕ್ಕೆ ಸಂಕಟವನ್ನು ತಂದುಕೊಳ್ಳುವದಾಗಿರುತ್ತದೆ' ಎಂದು ಶ್ರುತಿಯು ಉಪದೇಶಿಸುತ್ತದೆ. ಇದೂ ಅಲ್ಲದೆ ವ್ಯರ್ಥಾಲಾಪವನ್ನು ಮಾಡುವ ಚಟಕ್ಕೆ ಬಿದ್ದವರು ಸುಳ್ಳು, ಕಠಿನೋಕ್ತಿ, ಚಾಡಿ ಮುಂತಾದವುಗಳನ್ನೂ ಅರಿತೋ ಅರಿಯದೆಯೋ ಆಡಿ ಪಾಪದ ಪಾಶಕ್ಕೆ ಕಟ್ಟುಬೀಳುತ್ತಾರೆ. ಆದ್ದರಿಂದ ಪಾಪದ ನೇಣನ್ನು ಕತ್ತರಿಸಿ ಹಾಕುವದಕ್ಕೆ ಇದೊಂದೇ ಉಪಾಯ; ಹರಿನಾಮವನ್ನು ಅಡಿಗಡಿಗೂ ನುಡಿಯುತ್ತಾ ಬೀಳುಮಾತನ್ನು ತಪ್ಪಿಸಿಕೊಂಡು ಬಿಡಬೇಕು.

ಕಂಡಕಂಡ ಮಾತನ್ನು ಆಡುವವರು ಆಯಾ ಶಬ್ದದ ವಾಚ್ಯವಾದ ವಿಷಯಗಳನ್ನು ಸ್ಮರಿಸಿಕೊಳ್ಳುವರು. ವಿಷಯಸ್ಮರಣೆಯಿಂದ ಭೋಗಗಳ ಸಂಕಲ್ಪವು ಉಂಟಾಗುವದು,

ಅದರಿಂದ ವಿಷಯಗಳನ್ನು ಸವಿಯುವದು ಕಬ್ಬಿನ ಸಿಪ್ಪೆಯನ್ನು ಅಗಿದಂತೆ ನೀರಸ ಪದಾರ್ಥದಲ್ಲಿ ರಸವನ್ನು ಹುಡುಕುವ ಪ್ರಯತ್ನವಾಗಿರುತ್ತದೆ. ವಿಷಯಗಳಲ್ಲಿರುವಂತೆ ಕಾಣುವ ರಸವು ಯಾವದು? ನಿಜವಾಗಿ ಅದು ಪರಮಾತ್ಮನೆಂಬ ರಸವೇ. ಆದ್ದರಿಂದ ರಸಗಳ ಮೂಲಸ್ಥಾನವಾದ ಭಗವಂತನ ನಾಮವನ್ನೇ ನುಡಿಯುತ್ತಿರಬೇಕು, ಪ್ರೇಮದಿಂದ ನಾಮೋಚ್ಚಾರಣೆಯನ್ನು ಮಾಡುವದು ದಿವ್ಯವಾದ ಅಮೃತವನ್ನು ಪಾನಮಾಡುವ ಸುಖವನ್ನು ಕೊಡುತ್ತದೆ. ಆದ್ದರಿಂದಲೇ ಶ್ರುತಿಯಲ್ಲಿ 'ಮಿಕ್ಕ ಮಾತುಗಳನ್ನು ಬಿಡಿರಿ, ಆ ಪರಮಾತ್ಮನೊಬ್ಬನನ್ನೇ ಚಿಂತಿಸಿರಿ, ಆತನ ಸ್ಮರಣೆಯು ಅಮೃತಕ್ಕೆ ಸೇತುವೆಯಾಗಿರುತ್ತದೆ' ಎಂದು ಹೇಳಿರುತ್ತದೆ. 'ಆತನೇ ರಸವು, ರಸವನ್ನು ಹೊಂದಿಯೇ ಈ ಮಾನವನು ಆನಂದಿಯಾಗುತ್ತಾನೆ' ಎಂದೂ ಸಾರಿರುತ್ತದೆ.

ನಾಮವನ್ನು ಉಚ್ಚಾರಣೆಮಾಡುವದು ಹಾಗಿರಲಿ, ಅದನ್ನು ಸ್ಮರಿಸಿದ ಮಾತ್ರದಿಂದಲೇ ಉತ್ತಮ ಸಾಧಕರಿಗೆ ಹೆಜ್ಜೇನ ಸವಿದಂತೆ ಮಿಗಿಲಿಲ್ಲದ ಆನಂದವಾಗುತ್ತದೆ. ಕಬ್ಬು, ಬಾಳೆಯ ಹಣ್ಣು, ಹಾಲು, ಸಕ್ಕರೆ, ದ್ರಾಕ್ಷಿ, ಪಾಯಸ, ಷರಬತ್ತು, ಕಾಫಿ, ಹಲ್ವ–ಮುಂತಾದ ಶಬ್ದಗಳನ್ನು ಯಾರಾದರೂ ಪ್ರಯೋಗಿಸಿದ್ದು ಕಿವಿಗೆ ಬಿದ್ದರೆ ಸಾಕು, ಆಯಾ ವಿಷಯಗಳನ್ನು ಒಲವಿನಿಂದ ಹಿಂದೆ ಮೆದ್ದಿರುವವರ ನಾಲಗೆಯಲ್ಲಿ ನೀರೂರುವದು. 'ಸಂಗೀತ', 'ನಾಟಕ', 'ಸಿನೆಮ', 'ಸರ್ಕಸ್', 'ಚರ್ಚಾಕೂಟ', 'ಬಹುಮಾನಸ್ಪರ್ಧೆ', 'ಕುದುರೆಯ ಜೂಜು'– ಈ ಶಬ್ದಗಳು ಪ್ರಸಂಗವಶದಿಂದ ನೆನಪಿಗೆ ಬಂದರೂ ಸಾಕು, ಆಯಾ ವಿಷಯಗಳಲ್ಲಿ ಆಸಕ್ತಿಯಿರುವವರಿಗೆ ಅಷ್ಟರಿಂದಲೇ ಕಿವಿ ನೆಟ್ಟಗಾಗುವದು, ಕಣ್ಣುಗಳು ಅರಳುವವು, ಮನಸ್ಸು ಉತ್ಸಾಹದಿಂದ ಉಕ್ಕುವದು. ಅಲ್ಲವೆ? ಇದರಂತೆಯೇ ನಾಮೋಚ್ಚಾರಣೆಯ ಸುಖವನ್ನು ಬಲ್ಲವರಿಗೆ, ನಾಮದ ವಾಚ್ಯಾರ್ಥವಾದ ಭಗವಂತನ ಗುಣಕರ್ಮಗಳನ್ನು ಕೇಳಿ ಆನಂದಿಸಿರುವ ಮಹಾತ್ಮರಿಗೆ, ಯಾವದಾದರೊಂದು ಪ್ರಸಂಗದಿಂದ ಆತನ ನಾಮದ ಸ್ಮರಣೆಯುಂಟಾದರೆ ಸಾಕು, ಅಷ್ಟರಿಂದಲೇ ಸಂತೋಷದಿಂದ ಮೈಗೂದಲು ನಿಮಿರುವದು, ಮನಸ್ಸಿನಲ್ಲಿ ಉಲ್ಲಾಸವಾಗುವದು, ಹೃದಯವು ಅರಳುವದು, ಕಂಗಳಲ್ಲಿ ಆನಂದಬಾಷ್ಪವು ಸುರಿಯುವದು, ಮುಖದಲ್ಲಿ ಕಾಂತಿಯು ಚಿಮ್ಮುವದು, ಮಾತಿನಲ್ಲಿ ಗದ್ಗದವಾಗುವದು; ನಾಮೋಚ್ಚಾರಣೆಯು ಜೀವನಕ್ಕೇ ಸುಖಕರವಾಗಿರುವದೆಂದೂ ಅದು ಒಂದು ವಿಲಕ್ಷಣವಾದ ಪ್ರೇಮದ ರಸಾಯನವೆಂದೂ ಭಾಸವಾಗುವದು. ಆದ್ದರಿಂದಲೇ ಭಕ್ತವರನಾದ ಪ್ರಹ್ಲಾದನು ಭಗವಂತನನ್ನು ಹೀಗೆಂದು ಬೇಡಿಕೊಂಡಿರುತ್ತಾನೆ:

**ಯಾ ಪ್ರೀತಿರವಿವೇಕಾನಾಂ ವಿಷಯೇಷ್ವನಪಾಯಿನೀ ।**
**ತ್ವಾಮನುಸ್ಮರತಃ ಸಾ ಮೇ ಹೃದಯಾನ್ಮಾಪಸರ್ಪತು ॥**

'ಭಗವಂತಾ, ಅವಿವೇಕಿಗಳಿಗೆ ವಿಷಯಗಳಲ್ಲಿ ಎಂಥ ಎಡೆಬಿಡದ ಪ್ರೀತಿಯಿದ್ದು ಕೊಂಡಿರುವದೋ, ಅಂಥ ಪ್ರೀತಿಯು ನಿನ್ನನ್ನು ಸ್ಮರಣೆ ಮಾಡುತ್ತಿರುವದರಿಂದ ನನಗೆ ನಿತ್ಯವೂ ಉಂಟಾಗುತ್ತಿರಲಿ, ಆ ಪ್ರೀತಿಯು ನನ್ನ ಹೃದಯವನ್ನು ಬಿಟ್ಟು ಕದಲದೆ ಇರಲಿ!'

ನಾಮೋಚ್ಚಾರಣೆಯೂ ಅದರಿಂದುಂಟಾಗುವ ನಾಮಸ್ಮರಣೆಯೂ ನಿರುಪಮವಾದ ಆನಂದದಾಯಕವಾದ ಒಂದು ಪ್ರೇಮರಸಾಯನವು. ಆದ್ದರಿಂದ ಸಾಧಕರಾದವರು 'ಅದೊಂದು ನಮಗೆ ದಕ್ಕಲಿ, ಅದೊಂದೇ ನಮ್ಮ ನಾಲಗೆಯಲ್ಲಿಯೂ ಮನಸ್ಸಿನಲ್ಲಿಯೂ ನೆಲಸಿರಲಿ!'-ಎಂದು ಹರಕೆಯನ್ನು ಹೊರುತ್ತಿರಬೇಕು. ನಾಮವು ಬಹಳ ಸುಲಭವಾದ ಸಾಧನವೆಂಬುದು ನಿಜ; ಆದರೆ ಆ ಕಾರಣದಿಂದ ಅದನ್ನು ನಾವು ಅಸಡ್ಡೆಮಾಡಬಾರದು. ಅದು ಬಹು ಸುಲಭವಾಗಿರುತ್ತದೆ; ಮಿಕ್ಕ ಎಷ್ಟೋ ಸಾಧನೆಗಳಿಗಿಂತಲೂ ಶೀಘ್ರವಾಗಿ ಸಾಧ್ಯವನ್ನು ಮುಟ್ಟಿಸುವದು, ಅದರಿಂದಾಗುವ ಪರಿಣಾಮವು ಮಿಕ್ಕ ಸಾಧನಗಳಿಂದಾಗುವ ಪರಿಣಾಮಕ್ಕಿಂತಲೂ ಹೆಚ್ಚು ಬಲವಾಗಿ ಅನುಭವಕ್ಕೆ ಬರುವದು. ಆದ್ದರಿಂದ ನಾಮವೆಂದರೆ ಅಮೃತಧಾಮನಾದ ಭಗವಂತನ ಸ್ಥಾನಕ್ಕೆ ಒಯ್ಯುವ ಸೇತುವೆಯೆಂದೇ ಭಾವಿಸಬೇಕು.

ನಾಮದ ಉಚ್ಚಾರಣೆಯು ಕಿವಿಗೆ ಇಂಪಾಗಿ ಅದರಿಂದ ನಾಮಜಪದ ಅಭ್ಯಾಸ ವಾಗಬೇಕು. ನಾಮಜಪದ ಅಭ್ಯಾಸದಿಂದ ವಿರಾಮಕಾಲವೆಲ್ಲ ನಾಮಸ್ಮರಣೆಗೆ ವಿನಿಯೋಗವಾಗು ವಂತಾಗಬೇಕು. ನಾಮಸ್ಮರಣೆಯಿಂದ ಭಗವಂತನ ಸ್ವರೂಪದ ಯಥಾರ್ಥಜ್ಞಾನವು ಬಂದು ಅದು ವಿಶದತಮವಾಗಿ ಅಂತಃಕರಣದಲ್ಲಿ ನೆಲೆ ನಿಲ್ಲಬೇಕು. ಭಗವಂತನ ಸ್ವರೂಪವು ಹೃದಯದಲ್ಲಿ ನೆಲೆನಿಂತದ್ದರ ಫಲವಾಗಿ ಭಗವದ್ಭಕ್ತರ ಗುಣಗಳು ಒಂದೊಂದಾಗಿ ತೋರಿ ಕೊಳ್ಳಬೇಕು, ಜೀವನದಲ್ಲಿ ಸುಖ ಶಾಂತಿಗಳು ಸ್ವಾಭಾವಿಕವಾಗಿ ಅನುಭವಕ್ಕೆ ಬರಬೇಕು. ಮಾನವನಿಗೆ ಇದಕ್ಕಿಂತ ಮತ್ತೆ ಯಾವ ಪುರುಷಾರ್ಥವಿರುವದು?

# 17. ನಾಮದ ಆರಾಧನೆ

* ಭಗವಂತನ ನಾಮವನ್ನು ಉಚ್ಚರಿಸುವದು, ಭಗವಂತನ ನಾಮದ ಅರ್ಥಾನು ಸಂಧಾನವನ್ನು ಮಾಡುವದು, ಭಗವಂತನ ನಾಮವನ್ನು ನೆನೆದು ನಲಿಯುವದು- ಇವೆಲ್ಲ ಭಗವಂತನ ಅರಿವು ಮನದಲ್ಲಿ ಮಿಂಚುವದಕ್ಕೆ ಉಪಾಯಗಳು. ಹೇಗಾದರೂ ಮಾಡಿ ಭಗವಂತನ ಅರಿವು ನಮ್ಮ ಮನದಲ್ಲಿ ನೆಲೆನಿಲ್ಲುವಂತೆ ಮಾಡಿಕೊಳ್ಳುವದೇ ಅಧ್ಯಾತ್ಮ ಸಾಧನದ ಗುರಿ. ಈಗ ನಮ್ಮ ಅಂತಃಕರಣದಲ್ಲಿ ಪ್ರಪಂಚದ ಹಲವು ವಿಷಯಗಳು ಮನೆಮಾಡಿಕೊಂಡಿರುವವು. ಅನ್ನ, ಬಟ್ಟೆ, ಆರೋಗ್ಯ, ತಿಳಿವಳಿಕೆ, ಹೆಸರುವಾಸಿ, ಹಣ,

* ಸಂಪುಟ 17, ಸಂಚಿಕೆ 5, ಜನವರಿ 1948, ಪುಟ 97-100

ಮಕ್ಕಳು, ಹೊಲ, ಮನೆ, ಆಳುಗಳು, ದನಕರುಗಳು–ಮುಂತಾದ ಯೋಚನೆಗಳು, ಬಾಡಿಗೆಯನ್ನು ಕೊಡದೆ ಮನೆಯನ್ನೂ ಹಾಳುಮಾಡುತ್ತಿರುವ ಹೊರಗಿನ ಜನರಂತೆ, ನಮ್ಮ ಅಂತಃಕರಣವನ್ನು ಉನ್ನತಿಗೆ ಏರದಂತೆ ಅಡ್ಡಿಮಾಡುತ್ತಾ ಅದರಲ್ಲಿ ಹೊಲಸನ್ನು ತುಂಬುತ್ತಿರುವವು. ನಮ್ಮ ಕಷ್ಟಗಳಿಂದ ಹೇಗೆ ಪಾರಾದೇವು!–ಎಂಬ ಯೋಚನೆಯು ನಮ್ಮನ್ನು ಕಾಡುತ್ತಿರುವದು; ನಮ್ಮ ಇಷ್ಟವನ್ನು ಎಂದಿಗೆ ಪಡೆದೇವು!–ಎಂಬ ಹಂಬಲು ನಮ್ಮನ್ನು ಹಣ್ಣುಮಾಡುತ್ತಿರುವದು. ಆದರೆ ಇಷ್ಟ ಪ್ರಾಪ್ತಿಯಾಗಲಿ ಅನಿಷ್ಟನಿವೃತ್ತಿಯಾಗಲಿ ತೃಪ್ತಿಕರವಾಗಿ ಆಗಬೇಕಾದರೆ ಈಶ್ವರನ ಕಡೆಗೆ ಮುಖವನ್ನು ತಿರುಗಿಸಿಕೊಳ್ಳುವದೇ ಉತ್ತಮ ಉಪಾಯವೆಂಬುದು ನಮಗೆ ಒಂದಲ್ಲ ಒಂದು ದಿನ ಮನದಟ್ಟಾಗಿಯೇ ತೀರುವದು.

ಆದ್ದರಿಂದ ಭಗವಂತನನ್ನೇ ಮೊದಲು ಹಿಡಿಯಬೇಕು; ಆಮೇಲೆ ನಮ್ಮ ಕೋರಿಕೆಗಳೆಲ್ಲ ತಮಗೆ ತಾವೇ ಈಡೇರುವವು. ಭಗವಂತನನ್ನು ಹಿಡಿಯುವದಕ್ಕೆ ಆತನ ನಾಮಗ್ರಹಣದಲ್ಲಿ ಪ್ರೇಮವನ್ನು ಸಂಪಾದಿಸಿಕೊಳ್ಳುವದು ಅತ್ಯಂತ ಸುಕರವಾದ, ಅತ್ಯಂತ ಶೀಘ್ರಫಲಕಾರಿಯಾದ, ಉಪಾಯವು. ಮಿಕ್ಕ ಸಾಧನೆಗಳನ್ನು ಮಾಡುವವರು, ನಾಮಗ್ರಹಣದ ಜಾಡನ್ನು ಹಿಡಿದ ಬಳಿಕ ಅದರಿಂದ ಎಷ್ಟು ಸುಲಭವಾಗಿ, ಎಷ್ಟು ಬೇಗನೆ, ತಮಗೆ ಭಗವಂತನ ಸಂಬಂಧವು ಆಯಿತೆಂದು ಕಂಡು ಆಶ್ಚರ್ಯಪಡುವರು. ಆದರೆ ನಾಮದ ಸ್ವಭಾವವೇ ಅಂಥದ್ದು; ಅದು ಫಲಕಾರಿಯಾಗದಿದ್ದರೆ ಆಶ್ಚರ್ಯವೇ ಹೊರತು ಫಲವನ್ನು ಬೇಗ ಕೊಟ್ಟರೆ ಅದರಲ್ಲಿ ಏನೂ ಆಶ್ಚರ್ಯವಿಲ್ಲ.

**ಮಧುರಮಧುರಮೇತನ್ಮಂಗಲಂ ಮಂಗಲಾನಾಂ**
**ಸಕಲನಿಗಮವಲ್ಲೀಸತ್ಫಲಂ ಚಿತ್ಸ್ವರೂಪಮ್ ।**
**ಸಕೃದಪಿ ಪರಿಗೀತಂ ಶ್ರದ್ಧಯಾ ಹೇಲಯಾ ವಾ**
**ಭೃಗುವರ, ನರಮಾತ್ರಂ ತಾರಯೇದ್ರಾಮನಾಮ ॥**

'ಎಲೈ ಶೌನಕನೆ, ಈ ರಾಮನಾಮವೆಂಬುದು ಮಧುರಕ್ಕೆಲ್ಲಕ್ಕಿಂತಲೂ ಮಧುರ ವಾಗಿರುವದು; ಮಂಗಲಗಳೆಲ್ಲಕ್ಕೂ ಮಂಗಲಕರವಾಗಿರುವದು. ಇದು ಸಕಲ ಶಾಸ್ತ್ರ ಕಲ್ಪವಲ್ಲಿಯಲ್ಲಿ ಬಿಟ್ಟಿರುವ ಉತ್ತಮವಾದ ಫಲವು. ಇದು ಚಿತ್ಸ್ವರೂಪವೇ ಆಗಿರುತ್ತದೆ. ಒಂದು ಸಲವಾದರೂ ಇದನ್ನು ಶ್ರದ್ಧೆಯಿಂದ ಅಥವಾ ಹಾಸ್ಯದಿಂದ ಗಾನಮಾಡಿದರೆ ಸಾಕು, ಮನುಷ್ಯಮಾತ್ರದವನನ್ನು ದಾಟಿಸುವದು!' ಭಗವಂತನ ನಾಮದ ರುಚಿಗೆ ಎಂಥ ಮಧುರಪದಾರ್ಥದ ಸವಿಯನ್ನೂ ಹೋಲಿಸುವದಕ್ಕೆ ಬರುವದಿಲ್ಲ. ಅದನ್ನು ಗಾನಮಾಡುತ್ತ ಮಾಡುತ್ತಾ ಸವಿಯೂ ಹೆಚ್ಚಾಗುತ್ತಾ ಹೋಗುವದು, ಅದರಿಂದಾಗುವ ಕಲ್ಯಾಣಫಲವೂ

ಹಾಗೆಯೇ ದಿನದಿನಕ್ಕೂ ವೃದ್ಧಿಯಾಗುವದು. ಒಂದಾವೃತ್ತಿ ಗಾನಮಾಡಿದರೂ ಮನುಷ್ಯ ಮಾತ್ರದವನನ್ನು ಕಷ್ಟದಿಂದ ದಾಟಿಸುತ್ತದೆ; ಇನ್ನು ಶ್ರದ್ಧೆಯಿಂದ ಗಾನಮಾಡುವ ಭಕ್ತರನ್ನು ಉದ್ಧಾರಮಾಡುವದೆಂದು ಹೇಳಬೇಕಾದದ್ದೇನು?

ನಾವು ಮೇಲೆ ಉದಾಹರಿಸಿರುವ ಶ್ಲೋಕದಲ್ಲಿ 'ಚಿತ್ಸ್ವರೂಪಮ್' ಎಂಬ ವಿಶೇಷಣವನ್ನು ಲಕ್ಷ್ಯದಲ್ಲಿಡಬೇಕು. ನಾಮವು ಪರಮಾತ್ಮನ ಹೆಸರು; ಆದ್ದರಿಂದ ಜಡರೂಪವಾಗಿರುತ್ತದೆ. ಅದಕ್ಕೆ ತಾನೇ ಜನರನ್ನು ಸಂಸಾರದಿಂದ ದಾಟಿಸುವ ಶಕ್ತಿ ಎಲ್ಲಿಂಬ ಬರಬೇಕು?–ಎಂದು ಕೆಲವರಿಗೆ ಶಂಕೆಯುಂಟಾಗಬಹುದು. ಅದನ್ನು ಪರಿಹರಿಸುವದಕ್ಕಾಗಿ 'ಚಿತ್ಸ್ವರೂಪಮ್' ಎಂಬ ವಿಶೇಷಣವನ್ನು ಇಲ್ಲಿ ಕೊಟ್ಟಿರುತ್ತದೆ. ನಾಮರೂಪಾತ್ಮಕವಾದ ಜಗತ್ತು ಪರಮಾತ್ಮನಿಂದ ಹುಟ್ಟಿರುವದೆಂತಲೂ ಪರಮಾತ್ಮನು ನಾಮರೂಪಗಳಿಗಿಂತ ಭಿನ್ನನೆಂತಲೂ ಆತನ ಪರಮಾರ್ಥ ಸ್ವರೂಪವನ್ನು ಕಂಡುಕೊಂಡವರಿಗೆ ಪರಗತಿ ಯಾಗುವದೆಂತಲೂ ಶಾಸ್ತ್ರದಲ್ಲಿ ಹೇಳಿರುವದುಂಟು. ಆದರೆ ಅದು ಅಜ್ಞರಿಗೆ ಉಪದೇಶಮಾಡುವದಕ್ಕೆ ಉಪಾಯವೇ ಹೊರತು ಬೇರೆಯಲ್ಲ. ಸರಿಯಾಗಿ ನೋಡಿದರೆ ಸಚ್ಚಿದಾನಂದರೂಪನಾದ ಭಗವಂತನನ್ನು ಬಿಟ್ಟರೆ ಮತ್ತೆ ಯಾವದೊಂದೂ ಇರುವದೇ ಇಲ್ಲ. ಅಜ್ಞರಾದ ವಿಷಯಿಜನರು ಬೇರೆಬೇರೆಯ ವಿಷಯಗಳ ರೂಪವನ್ನು ಕಲ್ಪಿಸಿಕೊಂಡು ತಾನು ಕಟ್ಟಿಕೊಂಡ ಗೂಡಿನಲ್ಲಿ ತಾನೇ ಸಿಕ್ಕಿಸಾಯುತ್ತಿರುವ ರೇಷ್ಮೆಯ ಹುಳುವಿನಂತೆ ವಿಷಯಗಳ ರೂಪಕ್ಕೆ ಮರುಳಾಗುತ್ತಿರುವರು; ಆ ರೂಪಕ್ಕೆ ತಕ್ಕ ನಾಮವನ್ನೂ ಕಲ್ಪಿಸಿಕೊಂಡು ಆಯಾ ನಾಮಸ್ಮರಣೆಯಿಂದಲೇ ವಿಷಯದ ಸ್ಮರಣೆಗೆ ತಿರುಗಿ ವಿಷಯಗಳನ್ನು ಹುಡುಕಿಕೊಂಡು ಹೊರಡುವರು. ಅವು ಸಿಕ್ಕಿದರೆ ಹಿಗ್ಗುವರು, ಸಿಕ್ಕದಿದ್ದರೆ ಕುಗ್ಗುವರು. ಇದೆಲ್ಲವೂ ನಾಮರೂಪಮಾಯೆ; ಇದನ್ನು ಬಿಟ್ಟು ಇದಕ್ಕಿಂತ ವಿಲಕ್ಷಣವಾಗಿರುವ ಭಗವಂತನನ್ನೇ ಶರಣುಹೊಕ್ಕು ಬದುಕಿರಿ–ಎಂಬುದು ಶಾಸ್ತ್ರಾಚಾರ್ಯರ ಉಪದೇಶವು. ಕಲ್ಪಿತವಾದ ವಿಷಯಗಳ ನಾಮರೂಪಗಳಿಗೂ ಮೂಲಕವಾಗಿ ಭಗವಂತನನ್ನು ಹುಡುಕುವದು ಗಂಗೆಯ ನೀರನ್ನು ಬಿಟ್ಟು ಕೊಚ್ಚೆಯ ನೀರನ್ನು ಕುಡಿಯುವ ಪ್ರಯತ್ನವಾಗಿರುವದು. ನಾಮರೂಪಗಳ ಪ್ರಪಂಚಕ್ಕೆ ಮರುಳಾಗಿರುವ ಸಂಸಾರಿಗಳಿಗೆ ಸದ್ಗತಿಯನ್ನು ತೋರಿಸುವ ಉಪಾಯವಾಗಿ ಭಗವಂತನ ನಾಮರೂಪಗಳನ್ನು ಶಾಸ್ತ್ರದಲ್ಲಿ ತಿಳಿಸಿರುತ್ತದೆ, ನಿಜ. ಆದರೆ ಆ ನಾಮರೂಪಗಳು ಭಗವಂತನಿಗಿಂತ ಎಳ್ಳಷ್ಟೂ ಭಿನ್ನವಾಗಿರುವದಿಲ್ಲ. ಭಗವಂತನು ಹೇಗೆ ಸಚ್ಚಿದಾನಂದರೂಪನೋ ಆತನ ನಾಮರೂಪಗಳೂ ಹಾಗೆಯೇ ಸಚ್ಚಿದಾನಂದರೂಪವೆಂದೇ ತಿಳಿಯಬೇಕು.

ಒಬ್ಬ ಮಹಾತ್ಮನು ಈ ನಾಮನಾಮಿಗಳ ಸಂಬಂಧವನ್ನು ಹೀಗೆಂದು ವರ್ಣಿಸಿರುತ್ತಾನೆ:

ವಾಚ್ಯಂ ವಾಚಕಮಿತ್ಯುದೇತಿ ಭವತೋ ನಾಮ ಸ್ವರೂಪದ್ವಯಂ
ಪೂರ್ವಸ್ಮಾತ್ಪರಮೇವ ಹನ್ತಕರುಣಂ ತತ್ರಾಪಿ ಜಾನೀಮಹೇ ।
ಯಸ್ತಸ್ಮಿನ್ ವಿಹಿತಾಪರಾಧನಿವಹಃ ಪ್ರಾಣೀ ಸಮನ್ತಾದ್ಭವೇ
ದಾಸ್ಯೇನೇದಮುಪಾಸ್ಯ ಸೋಽಪಿ ಹಿ ಸದಾನನ್ದಾಮ್ಬುಧೌ ಮಜ್ಜತಿ ॥

'ಎಲೈ ಭಗವನ್ನಾಮವೇ, ವಾಚ್ಯವೆಂದೂ ವಾಚಕವೆಂದೂ ನಿನಗೆ ಎರಡು ರೂಪಗಳುಂಟು; ವಾಚ್ಯವು ಭಗವಂತನು, ನೀನು ವಾಚಕವು. ನಿನ್ನ ಈ ಎರಡು ರೂಪಗಳೂ ಅಭಿನ್ನವಾಗಿದ್ದರೂ ವಾಚ್ಯವೆಂಬ ಮೊದಲನೆಯ ರೂಪಕ್ಕಿಂತ ವಾಚಕವೆಂಬ ನಿನ್ನ ಎರಡನೆಯ ರೂಪವೇ ಹೆಚ್ಚು ದಯಾಳುವೆಂದು ನಾವು ತಿಳಿಯುವೆವು. ಏಕೆಂದರೆ ಯಾವ ಜೀವನು ವಾಚ್ಯವಾದ ಭಗವಂತನಲ್ಲಿ ಹಲವು ಅಪರಾಧಗಳನ್ನು ಮಾಡಿರುವನೋ, ಅವನು ಕೂಡ ಈ ವಾಚಕವಾದ ನಿನ್ನ ರೂಪವನ್ನು ಬಾಯಿಯಿಂದ ಉಪಾಸನೆಮಾಡಿದ ಮಾತ್ರದಿಂದ ಸದಾನಂದ ಸಾಗರದಲ್ಲಿ ಮುಳುಗುವನು!'

ಭಗವಂತನು ತನ್ನ ಸ್ವರೂಪದಲ್ಲಿ ವಾಚ್ಯನೂ ಅಲ್ಲ; ಆದರೆ ಭಕ್ತರ ಅನುಗ್ರಹಕ್ಕಾಗಿ ವಾಚ್ಯವಾದ ಹಲವು ರೂಪಗಳನ್ನು ಧರಿಸಿ ಉತ್ತಮವಾದ ಗುಣಕರ್ಮಗಳನ್ನು ವಿಸ್ತರಿಸುವ ಲೀಲೆಗಳನ್ನು ಅನುಗ್ರಹಿಸಿರುವನು. ಆ ಲೀಲೆಗಳನ್ನು ಮನಸ್ಸಿಗೆ ತರುವ ರಾಮ, ಕೃಷ್ಣ, ಗೋವಿಂದ–ಮುಂತಾದ ನಾಮಗಳು ಆಯಾ ವಾಚ್ಯ ರೂಪಗಳು ಅಂತರ್ಧಾನವಾದ ಬಳಿಕ, ಈಗಲೂ ಈ ಕಲಿಕಾಲದಲ್ಲಿಯೂ, ಜನರ ಹೃದಯವನ್ನು ಪಾವನಗೊಳಿಸುವ ದಿವ್ಯಶಕ್ತಿಯಿಂದ ಕೂಡಿಕೊಂಡು ಎಲ್ಲೆಲ್ಲಿಯೂ ಸಾಧಕರ ಕರ್ಣಕ್ಕೆ ರಸಾಯನವಾಗಿರುವವು! ಜೇನುತುಪ್ಪವೂ ಅದರ ರುಚಿಯೂ ಹೇಗೆ ಬೇರೆಯಲ್ಲವೋ ಸೂರ್ಯನೂ ಅವನ ಪ್ರಕಾಶವೂ ಹೇಗೆ ಬೇರೆಯಲ್ಲವೋ, ಮಲ್ಲಿಗೆಯ ಹೂವೂ ಅದರ ನರುಗಂಪೂ ಹೇಗೆ ಬೇರೆಯಲ್ಲವೋ ಹಾಗೆಯೇ ಭಗವಂತನೂ ಭಗವಂತನ ನಾಮವೂ ಬೇರೆಯಲ್ಲ. ಭಗವಂತನ ನಾಮವು ಮೊದಲು ಭಗವದ್ಭಕ್ತರ ನಾಲಗೆಯಲ್ಲಿ ನಲಿದಾಡುತ್ತಿದ್ದದ್ದು ಆಸ್ತಿಕರಾದ ಶ್ರೋತೃಗಳ ಕಿವಿಯಿಂದ ಅವರ ಅಂತಃಕರಣವನ್ನು ಪ್ರವೇಶಿಸುತ್ತದೆ. ಆ ಮೇಲೆ ಭಗವಂತನ ರೂಪವನ್ನು ತಳೆದು ಅದು ಅವರ ಹೃದಯದ ಗದ್ದುಗೆಯ ಮೇಲೆ ಕುಳಿತು ವಿರಾಜಿಸುತ್ತದೆ. ಯಾರು ತನ್ಮಯತೆಯಿಂದ ಆ ನಾಮವನ್ನು ಗಾನ ಮಾಡುವರೋ, ಯಾರು ಆ ರೂಪದ ಸ್ಮರಣೆಯಲ್ಲಿ ಮಗ್ನರಾಗುವರೋ ಅವರಿಗೆ ವಿಷಯಗಳ ನಾಮರೂಪಗಳ ಕೋಟಲೆಯು ಹರಿದುಹೋಗುವದು, ಹೃದಯದ ತಾಪವು ಶಾಂತವಾಗುವದು, ಶರೀರವು ಭಗವಂತನ ದೇವಾಲಯವಾಗುವದು, ಮುಖವು ಭಗವಂತನ ವರ್ಚಸ್ಸನ್ನು ಬೀರುವ ಸೂರ್ಯಮಂಡಲವಾಗುವದು!

ಆದ್ದರಿಂದ ವಾಚಕವೃಂದ, ಭಗವಂತನ ನಾಮವನ್ನು ಭಗವಂತನೆಂದೇ ಭಾವಿಸುವ ಸಾಧನವನ್ನು ಕೈಕೊಳ್ಳಿರಿ. ನಾಮವನ್ನು ಉಚ್ಚಾರಣೆಯಿಂದಲೂ ಶ್ರವಣದಿಂದಲೂ ಕೀರ್ತನದಿಂದಲೂ ಆರಾಧನೆಮಾಡುವ ಅಭ್ಯಾಸವನ್ನು ಇಟ್ಟುಕೊಳ್ಳಿರಿ. ನಾಮವೇ ಬ್ರಹ್ಮವು ಎಂದು ಉಪಾಸನೆಮಾಡುತ್ತಾ ಬನ್ನಿರಿ.

# 18. ಭಗವದಾರಾಧನೆ

* ಭಗವಂತನು ಸರ್ವವ್ಯಾಪಿಯಾದರೂ ಅವನನ್ನು ಯಾವದಾದರೊಂದು ಸ್ಥಲದಲ್ಲಿರುವಂತೆ ಚಿಂತಿಸಿಕೊಳ್ಳುವದು ಸಾಧಕನಿಗೆ ಸುಕರವಾಗಿರುತ್ತದೆ. ಸೂರ್ಯನ ಪ್ರಕಾಶದ ಬಲದಿಂದಲೇ ಎಲ್ಲವನ್ನೂ ಕಾಣುತ್ತಿರುವ ನಾವು, ಆ ಬೆಳಕಿನ ಬಲದಿಂದಲೇ ಸೂರ್ಯನು ಆಕಾಶದಲ್ಲಿ ಇಂಥ ಕಡೆಯಲ್ಲಿರುತ್ತಾನೆಂದು ಕಂಡುಕೊಳ್ಳುವಂತೆ, ಭಗವಂತನ ಸರ್ವವ್ಯಾಪಕವಾದ ಗುಣಗಳ ಸಹಾಯದಿಂದಲೇ ಆತನನ್ನು ಎಲ್ಲಾದರೊಂದು ಕಡೆಯಲ್ಲಿ ನಿಯತವಾಗಿರುವಂತೆ ಕಂಡುಕೊಂಡು ಚಿಂತಿಸುವ ಅಭ್ಯಾಸವನ್ನು ಮಾಡಬೇಕು. ಇದರಿಂದ ಮನಸ್ಸಿಗೆ ಆ ಪರಮೇಶ್ವರನ ಮಹಿಮೆಯರಿವು ಗೊತ್ತಾಗುವದು; ಮನಸ್ಸಿನ ಹರಿದಾಟವು ತಪ್ಪುವದು, ಮನಸ್ಸಿಗೆ ಹೆಚ್ಚಿನ ಶಾಂತಿಯು ದೊರಕುವದು.

ಪರಮಾತ್ಮನ ಸರ್ವವ್ಯಾಪಕತೆಯ ವಿಷಯದಲ್ಲಿ ಶ್ರುತಿಯು ಹೀಗೆಂದಿರುವದು:

**ಯೋ ದೇವೋಽಗ್ನೌ ಯೋಽಪ್ಸು ಯೋ ವಿಶ್ವಂ ಭುವನಮಾವಿವೇಶ ।**
**ಯ ಓಷಧೀಷು ಯೋ ವನಸ್ಪತಿಷು ತಸ್ಮೈ ದೇವಾಯ ನಮೋ ನಮಃ ॥**

'ಯಾವಾತನು ಬೆಂಕಿಯಲ್ಲಿರುವ ದೇವನೋ, ಯಾವಾತನು ನೀರಿನಲ್ಲಿರುವಾತನೋ, ಯಾವನು ಇಡಿಯ ಭೂಮಂಡಲವನ್ನೇ ಒಳಹೊಕ್ಕಿರುವನೋ, ಯಾವನು ಗಿಡಗಳಲ್ಲಿ, ಯಾವನು ಮರಗಳಲ್ಲಿಯೂ ಇರುತ್ತಿರುವನೋ ಆ ದೇವನಿಗೆ ನಮಸ್ಕಾರ, ನಮಸ್ಕಾರ!' ಪಂಚಭೂತಗಳಲ್ಲಿ ಎಲ್ಲೆಲ್ಲಿಯೂ ಆ ಭಗವಂತನೇ ವ್ಯಾಪಿಸಿಕೊಂಡಿರುತ್ತಾನೆ; ಸ್ಥಾವರ ಜಂಗಮ ಗಳಲ್ಲೆಲ್ಲ ಆತನೇ ಅಂತರ್ಯಾಮಿಯಾಗಿರುತ್ತಾನೆ. ಆದರೂ ಆತನ ಸನ್ನಿಧಿಯನ್ನು ಸೇರುವದಕ್ಕೆ, ಆತನನ್ನು ನಿಜವಾಗಿ ನೇರಾಗಿ ಕಂಡುಕೊಳ್ಳುವದಕ್ಕೆ ಒಂದು ವಿಶಿಷ್ಟವಾದ ಸ್ಥಲವು ಬೇಕು; ಒಂದು ವಿಶಿಷ್ಟವಾದ ಆರಾಧನಕ್ರಮವು ಬೇಕು.

ಪರಮೇಶ್ವರನು ಇದಾನೆಯೊ, ಇಲ್ಲವೊ? ಅವನು ಸಾಕಾರನೊ, ನಿರಾಕಾರನೊ? ಸಗುಣನೊ, ನಿರ್ಗುಣನೊ?–ಎಂದು ವಾದಿಗಳು ಚರ್ಚಿಸಿ ಚರ್ಚಿಸಿ ಸೋತಿರುವರು. ಆದರೆ ಪರಮಾರ್ಥವು

* ಸಂಪುಟ 17, ಸಂಚಿಕೆ 6, ಫೆಬ್ರವರಿ 1948, ಪುಟ 123–125

ತರ್ಕಕ್ಕೆ ಎಂದೆಂದಿಗೂ ದೂರವಾಗಿರುತ್ತದೆ. ಪರಮೇಶ್ವರನು ಇದಾನೆ; ಆದರೆ ಅದನ್ನು ಗೊತ್ತುಪಡಿಸಿಕೊಳ್ಳುವದು ಬರಿಯ ತರ್ಕದಿಂದ ಎಂದಿಗೂ ಆಗುವ ಹಾಗಿಲ್ಲ. ಪರಮೇಶ್ವರನು ಸ್ವತಃ ಯಾವ ಆಕಾರವೂ ಇಲ್ಲದವನು; ಆದರೆ ಆತನನ್ನು ವಿಶ್ವದಲ್ಲಿ ಕಾಣುವ ಆಕಾರಗಳಲ್ಲೆಲ್ಲ ಕಾಣಬೇಕು. ಪರಮೇಶ್ವರನು ಸ್ವತಃ ನಿರ್ಗುಣನು; ಆದರೆ ಆತನಿಂದಲ್ಲದೆ ಮತ್ತೆ ಯಾರಿಂದಲೂ ಗುಣಗಳು ಬಂದಿರುವದಿಲ್ಲ. ಇದನ್ನು ತಿಳಿದು ತರ್ಕವನ್ನು ಬಿಟ್ಟು, ಹೃದಯದಲ್ಲಿ ಶ್ರದ್ಧಾಭಕ್ತಿಗಳನ್ನು ತುಂಬಿಕೊಂಡು ಆತನನ್ನು ಆರಾಧನೆ ಮಾಡುವ ಪದ್ಧತಿಯನ್ನು ಮೊದಲು ಅಭ್ಯಾಸಮಾಡಬೇಕು.

ಪರಮೇಶ್ವರನ ಅರ್ಚನೆಯನ್ನು ಪುರಾಣಗಳಲ್ಲಿ ಬಗೆಬಗೆಯಾಗಿ ವರ್ಣಿಸಿರುತ್ತದೆ. ಅರ್ಚನೆಯು ಬಾಹ್ಯವೆಂದೂ ಆಂತರವೆಂದೂ ಮುಖ್ಯವಾಗಿ ಎರಡು ಬಗೆಯಾಗಿರುತ್ತದೆ. ಯಾವ ಅರ್ಚನೆಯನ್ನೇ ಮಾಡಲಿ, ನಮ್ಮ ಅಂತಃಕರಣವು ಪೂರ್ಣವಾಗಿ ಅರ್ಚನೆಗೆ ಧಾರೆಯೆರೆದದ್ದಾಗಿರ ಬೇಕೆಂಬುದನ್ನು ನಾವು ಮರೆಯಬಾರದು. ಅರ್ಚನೆಯೆಂಬುದೊಂದು ಕುಶಲ ವಿದ್ಯೆ. ಅದರಲ್ಲಿ ಉಪಯೋಗಿಸುವ ಪ್ರತಿಯೊಂದು ವಸ್ತುವನ್ನೂ ಭಗವಂತನಿಗೆ ಸಂಬಂಧಿಸಿಕೊಳ್ಳಬೇಕೆಂಬುದು ಮುಖ್ಯವಾದದ್ದು. ಹೊರಗಿನ ಅರ್ಚನೆಯಲ್ಲಿ ನಾವು ಸಿದ್ಧಗೊಳಿಸುವ ಗಂಧ, ಅಕ್ಷತೆ, ಪುಷ್ಪ, ಧೂಪ, ದೀಪ, ನೈವೇದ್ಯ–ಮುಂತಾದ ಪ್ರತಿಯೊಂದು ವಸ್ತುವೂ ಸಾತ್ತ್ವಿಕವಾಗಿರಬೇಕು, ಪವಿತ್ರವಾಗಿರಬೇಕು; ಆ ವಸ್ತುಗಳು ಯಥಾಶಕ್ತಿಯಾಗಿ ನಾವು ಅರ್ಪಿಸುವ ವಸ್ತುಗಳಿಗೆ ಉಪಲಕ್ಷಣವಾಗಿರಬೇಕು. ಹೊರಗಿನ ಲೋಕದಲ್ಲಿ ಕಾಣುವ ಚರಾಚರಪ್ರಾಣಿಗಳಲ್ಲಿ ಭಗವಂತನ ಸಾನ್ನಿಧ್ಯವನ್ನು ಮನಗಾಣುವದಕ್ಕೆ, ಆ ಭಗವಂತನನ್ನು ಯಥೋಚಿತವಾದ ದ್ರವ್ಯಗಳಿಂದ ಆಯಾ ಶರೀರದ ಮೂಲಕವಾಗಿ ಅರ್ಚಿಸುವದಕ್ಕೆ, ಈ ಅರ್ಚನೆಯು ಸ್ಮಾರಕವಾಗಿರಬೇಕು. ದೊಡ್ಡದೊಂದು ಕಟ್ಟಡದ ನಕ್ಷೆಯನ್ನು ಕಾಗದದ ಮೇಲೆ ಪ್ರಮಾಣಕ್ಕೆ ತಕ್ಕಂತೆ ಬರೆದುಕೊಂಡು ಆಮೇಲೆ ನಿಜವಾಗಿ ಕಟ್ಟಡವನ್ನೇ ಕಟ್ಟುವ ಶಿಲ್ಪಿಗಳಂತೆ ಹೊರಗಿನ ವಿಶ್ವದಲ್ಲಿ ಭಗವಂತನ ಮೂರ್ತಿಗಳಾದ ಚರಾಚರಪ್ರಾಣಿಗಳ ಮೂಲಕ ಆತನನ್ನು ಆರಾಧನೆಮಾಡುವ ಬಗೆಯನ್ನು ಅಭ್ಯಾಸಮಾಡುವದೇ ಬಾಹ್ಯಾರ್ಚನೆಯ ಗುರಿಯಾಗಿರಬೇಕು.

ಗೃಹಸ್ಥರಾದವರು ಯಥಾಶಕ್ತಿಯಾಗಿ ಯಥಾ ವೈಭವವಾಗಿ ಬಾಹ್ಯಾರ್ಚನೆಯನ್ನು ಅವಶ್ಯವಾಗಿ ಮಾಡಬೇಕು. ಆದರೆ ಹೊರಗಿನ ಅರ್ಚನೆಯ ಪ್ರಕಾರಗಳು ವಿಧವಿಧವಾಗಿ ಒಬ್ಬರ ಅರ್ಚನೆಯ ಕ್ರಮವು ಮತ್ತೊಬ್ಬರ ಅರ್ಚನೆಯ ಕ್ರಮಕ್ಕೆ ವಿರುದ್ಧವೆಂದು ಅಜ್ಞರ ಭಾವನೆಯು ಹೆಚ್ಚುತ್ತಿರುವ ಈಗಿನ ಕಾಲದಲ್ಲಿ ಹೊರಗಿನ ಆರಾಧನಕ್ರಮಗಳಲ್ಲಿ ಯಾವ ಕೊರತೆಯೂ ಇಲ್ಲದಂತೆ ಏರ್ಪಡಿಸಿಕೊಳ್ಳುವದು ಕಡುಕಷ್ಟವಾಗಿರುತ್ತದೆ. ದೇವಾಲಯಗಳು,

ಮೂರ್ತಿಗಳು-ಮುಂತಾದವುಗಳನ್ನು ಬಾಹ್ಯಾರ್ಚನೆಯ ರೀತಿಯಿಂದ ಪೂಜಿಸುವ ಕ್ರಮದಲ್ಲಿ ಸ್ವಾರ್ಥಪರರಾದವರು ಹಕ್ಕಿನ ಜಗಳಗಳನ್ನು ತಂದೊಡ್ಡುತ್ತಿರುವದರಿಂದ ಇಂಥ ಸಂದರ್ಭದಲ್ಲಿ ವಿವೇಕಿಗಳಾದವರು ಪರಮೇಶ್ವರನನ್ನು ಪೃಥ್ವಿ, ಅಪ್ಪು, ತೇಜಸ್ಸು, ವಾಯು, ಆಕಾಶ-ಎಂಬ ಶುದ್ಧವಾದ ಪಂಚಭೂತಗಳಲ್ಲಿಯೇ ಅರಾಧಿಸುತ್ತಾ ಸರ್ವಭೂತ ಮಯನಾದ ಭಗವಂತನನ್ನು ಸರ್ವಪ್ರಾಣಿಗಳಿಗೂ ತಮ್ಮ ಕೈಯಲ್ಲಾದ ಮಟ್ಟಿಗೂ ಉಪಕಾರವನ್ನೆಸಗುವ ವ್ಯವಹಾರರೂಪವಾದ ಅರ್ಚನೆಯಿಂದಲೇ ಆರಾಧಿಸುವ ಪದ್ಧತಿಯನ್ನು ಇಟ್ಟುಕೊಂಡರೆ ಯಾವ ಘರ್ಷಣೆಗೂ ಅವಕಾಶವಿಲ್ಲವಾಗಿದೆ. ಮಸೀದಿಗಳು, ದೇವಾಲಯಗಳು, ಚರ್ಚುಗಳು-ಮುಂತಾದವುಗಳನ್ನು ಅಪವಿತ್ರವಾದ ಹಕ್ಕಿನ ಭಾವನೆಯ ಸ್ಥಲಗಳನ್ನಾಗಿ ಮಾರ್ಪಡಿಸದೆ ಭಾವನೆಯಿಂದಲೇ ಭಗವಂತನನ್ನು ಆರಾಧನೆಮಾಡುವ ಉತ್ತಮ ಪದ್ಧತಿಯನ್ನು ಏರ್ಪಡಿಸಿಕೊಳ್ಳುವದು ಸದ್ಯಕ್ಕೆ ಶ್ರೇಯಃಸ್ಕರವಾಗಿರುತ್ತದೆ.

ಈ ದೃಷ್ಟಿಯಿಂದ ನೋಡುವಾಗ, ಯಾರು ವಿರಕ್ತಚಿತ್ತರೋ, ಸರ್ವಪರಿಗ್ರಹವನ್ನೂ ತ್ಯಜಿಸಿರುವ ಸಂನ್ಯಾಸಿಗಳೂ, ಸಾಧುಗಳೂ ಭೈರಾಗಿಗಳೂ ಆಗಿರುವರೋ, ಅಂಥವರಿಗೆ ಮಾನಸವಾದ ಅಂತರರ್ಚನೆಯೇ ಮುಖ್ಯವೆಂದು ಹೇಳಿದಂತೆ ಆಗುತ್ತದೆ. ಅಂಥವರು ತಮ್ಮ ಶರೀರವನ್ನೇ ಪರಮೇಶ್ವರನಿಗೆ ಪೀಠವೆಂದು ಭಾವಿಸಬೇಕು. ಹೃದಯದಲ್ಲಿ ಮನಃಕಲ್ಪಿತವಾದ ದಿವ್ಯಕಾಂಚನ ಸಿಂಹಾಸನವನ್ನು ಕಲ್ಪಿಸಿ ಅಲ್ಲಿ ಭಗವಂತನನ್ನು ಮಾನಸವಾದ ಉಪಚಾರಗಳಿಂದ ಭಕ್ತಿಯಿಂದ ಪ್ರತಿದಿನವೂ ಅರ್ಚನೆ ಮಾಡಬೇಕು. ಪರಮೇಶ್ವರನು ಮುಖ್ಯವಾಗಿ ಭಾವಗ್ರಾಹಿ ಯಾಗಿರುತ್ತಾನೆ. ಆದ್ದರಿಂದ ಹೊರಗಿನ ಗಂಧಪುಷ್ಪಾದಿಗಳಿಲ್ಲದಿದ್ದರೆ ಭಕ್ತಿಯಿಂದ ಕಲ್ಪಿಸಿದ ಈ ಉಪಚಾರಗಳನ್ನೇ ಆತನು ಪ್ರೇಮದಿಂದ ಸ್ವೀಕರಿಸುತ್ತಾನೆ. ಹೊರಗಿನ ಪೂಜೆಯಲ್ಲಿಯೂ ಪತ್ರವಾಗಲಿ, ಪುಷ್ಪವಾಗಲಿ, ಫಲವಾಗಲಿ, ನೀರಾಗಲಿ, ಭಗವಂತನಿಗೆ ಭಕ್ತಿಯಿಂದ ಅರ್ಪಿತವಾದದ್ದು ಮಾತ್ರ ಸಲ್ಲುತ್ತದೆ; ಸಮಸ್ತವಸ್ತುಗಳನ್ನೂ ಸೃಷ್ಟಿಸಿರುವ ಆ ಪರಮೇಶ್ವರನಿಗೆ ಬರಿಯ ಕ್ಷುದ್ರವಸ್ತುಗಳ ಬಯಕೆಯು ಹೇಗೆ ತಾನೆ ಇದ್ದೀತು!

ಪರಮೇಶ್ವರನ ಸಾಕಾರವಾದ ಸ್ವರೂಪವನ್ನು ಅರ್ಚನೆಮಾಡುವಾಗ ಆತನ ಪಾದ ತಲದಿಂದ ಹಿಡಿದು ತಲೆಯವರೆಗಿನ ಅಂಗಗಳನ್ನು ಸ್ಮರಿಸಿಕೊಂಡು ಗುರುಗಳ ಉಪದೇಶದಂತೆ ಕ್ರಮವಾಗಿ ಅರ್ಚಿಸುತ್ತಾ ಬರಬೇಕು. ಪೂಜೆಯ ಕಾಲಕ್ಕೆ ಆ ಭಗವಂತನ ಗುಣಗಳನ್ನು ಚಿಂತಿಸುತ್ತಾ ಬರಬೇಕು. ಅರ್ಚನೆಯೆಂಬುದು ಭಗವಂತನ ಗುಣಗಳನ್ನು ನೆನೆನೆನೆದು ಆನಂದಿಸುವದಕ್ಕೆ ಸಾಧನವಾಗಿರಬೇಕೇ ಹೊರತು ಭಗವಂತನಿಗೆ ನಾವು ಏನನ್ನೋ ಕೊಟ್ಟು ನಲಿಯುವೆವೆಂಬ ಹೆಮ್ಮೆಗೆ ಸ್ವಲ್ಪವೂ ಅದರಲ್ಲಿ ಅವಕಾಶವಿರಬಾರದು. ಯಾವ ಮಹಾತ್ಮನು ಹೀಗೆ ಬಹುಕಾಲ ಮಾನಸಾರ್ಚನೆಯಿಂದ ಅಂತಃಕರಣವನ್ನು ಶುದ್ಧಿಗೊಳಿಸಿಕೊಂಡಿರುವನೋ

ಅವನಿಗೆ ಮನಸ್ಸಿನಲ್ಲಿಯೇ ಭಗವಂತನ ಪಾದಗಳನ್ನು ಗಟ್ಟಿಯಾಗಿ ಹಿಡಿದುಕೊಂಡು ತನ್ನ ಎದೆಗೆ ಅಪ್ಪಿಕೊಂಡಂತೆ ಆಗುವದು; ಭಗವಂತನು ಎಂಥ ದಯಾಮಯನು!– ಎಂಬುದರ ಸ್ಮರಣೆಯಿಂದ ಆನಂದಬಾಷ್ಪವು ಸುರಿಯುವದು; ಹೃದಯವು ಕರಗಿ ಶರೀರದಲ್ಲಿ ರೋಮಾಂಚನವಾಗುವದು, ಧ್ಯಾನಾಭ್ಯಾಸದ ಬಲದಿಂದ ಆ ಭಗವಂತನಲ್ಲಿಯೇ ಲೀನನಾಗಿ ತಾನು ಮತ್ತೊಬ್ಬರೆಂಬ ಭಾವವೇ ಅಳಿದು ಹೋಗುವದು, ಸಂಸ್ಕಾರ ಬಲದಿಂದ ಎದ್ದಾಗ ಆ ಭಗವಂತನ ಗುಣಗಳನ್ನು ತನ್ನಲ್ಲಿ ಆರೋಪಿಸಿಕೊಳ್ಳುವದು, ಆ ಭಗವಂತನೇ ತನ್ನ ರೂಪದಿಂದಲೂ ಪ್ರಕಟವಾಗಿರು ತ್ತಾನೆಂದು ಭಾವಿಸುವದು– ಇವೇ ಮುಂತಾದ ಸಾತ್ತ್ವಿಕಭಾವಗಳು ಎದ್ದುಕೊಳ್ಳುವವು.

ಇದುವರೆಗೆ ವರ್ಣಿಸಿರುವದು ಭಗವಂತನ ವ್ಯಕ್ತರೂಪದ ಅರ್ಚನೆಯು. ಬಹುಜನರಿಗೆ ಇದು ಸುಕರವಾಗಿರುತ್ತದೆ. ಇದರಿಂದಾಗುವ ಆನಂದವನ್ನು ಎಲ್ಲರೂ ಬೇಗನೆ ಕಂಡುಕೊಳ್ಳಲೂಬಹುದು. ಭಗವಂತನು ಭಕ್ತರ ಉಪಾಸನೆಯನ್ನು ಕೈಕೊಳ್ಳುವದಕ್ಕೂ ಲೋಕದಲ್ಲಿ ಧರ್ಮವನ್ನು ನೆಲೆನಿಲ್ಲಿಸಿ ಅಧರ್ಮವನ್ನು ನಾಶಗೊಳಿಸುವದಕ್ಕೂ ಆಗಿಂದಾಗ್ಗೆ ಹಲವು ಆಕಾರಗಳಿಂದ ಅವತಾರಮಾಡಿರುತ್ತಾನೆ. ಆ ಆಕಾರಗಳಲ್ಲಿ ತನಗೆ ಇಷ್ಟವಾದ ಯಾವದಾದರೊಂದನ್ನು ಚಿಂತನೆಗೆ ಇಟ್ಟುಕೊಂಡು ಅರ್ಚನೆಮಾಡುತ್ತಿರುವದು ಹಲವರ ಮನಸ್ಸಿಗೆ ಇಷ್ಟವಾಗಿರುತ್ತದೆ. ಆದರೆ ಇಡಿಯ ಜಗತ್ತೇ ಭಗವಂತನ ವ್ಯಕ್ತರೂಪವಾಗಿರುವದೆಂಬ ಚಿಂತನೆಯನ್ನು ಮನಸ್ಸಿಗೆ ತಂದುಕೊಂಡು ಆನಂದಿಸಬಲ್ಲವರು ಹಲವರು ಇರುತ್ತಾರೆ. ಅಂಥವರಿಗೆ ಸುಂದರವಾದ ವನರಾಜಿಯಾಗಲಿ, ಎತ್ತರವಾದ ಬೆಟ್ಟವಾಗಲಿ, ದೀರ್ಘವಾಗಿ ಹರಿಯುತ್ತಿರುವ ನದಿಯಾಗಲಿ, ಸೂರ್ಯಚಂದ್ರನಕ್ಷತ್ರಗಳಾಗಲಿ, ಯಾವದಾದರೊಂದು ಭವ್ಯವಾದ, ಕಾಂತಿಯುತವಾದ ಉತ್ಸಾಹದಾಯಕವಾದ, ಚಿತ್ತಾಕರ್ಷಕವಾದ ನೋಟವು ಎದುರಿಗೆ ಬಂದರೂ ಸರಿಯೆ, ಕೂಡಲೆ ಅದರಲ್ಲಿ ಭಗವಂತನ ಮಹಿಮೆಯನ್ನು ಕಂಡುಕೊಳ್ಳುವರು; ಅದರ ಚಿಂತೆಯಲ್ಲಿಯೇ ಮಗ್ನರಾಗಿಬಿಡುವರು! ಒಂದು ಸುವಾಸನೆಯನ್ನು ಬೀರುತ್ತಿರುವ ಹೂವು ಕಣ್ಣಿಗೆ ಗೋಚರವಾದರೆ, ಅಲ್ಲಿ ಭಗವಂತನ ಮುಖವೇ ಅವರಿಗೆ ಗೋಚರ ವಾದಂತಾಗುವದು; ಒಂದು ಇಂಪಾದ ಹಕ್ಕಿಯ ಗಾನವು ಕಿವಿಗೆ ಬಿದ್ದರೆ, ಅಲ್ಲಿ ಭಗವಂತನ ಮಧುರವಾದ ಕಂಠಧ್ವನಿಯು ಅವರನ್ನು ಕರೆಯುತ್ತಿರುವಂತೆ ಭಾಸವಾಗುವದು! ಗಾಳಿಯು ಬೀಸಿದರೆ, ಬಿಸಿಲು ಕಾಯುತ್ತಿದ್ದರೆ, ಬೆಳುದಿಂಗಳು ಪಸರಿಸಿದ್ದರೆ, ಮಳೆಯು ಸುರಿಯುತ್ತಿದ್ದರೆ, ಮಿಂಚು ಥಳಾರೆಂದರೆ, ಗುಡುಗಿನ ಸದ್ದು ಕಿವಿಗೆ ಬಿದ್ದರೆ, ಅದೆಲ್ಲ ಆ ಭಗವಂತನ ಲೀಲೆಯೆಂದೇ ಅವರ ದಿವ್ಯ ಭಾವನೆ! ಇಂಥ ಭಾವನೆಯು ಯಾವ ಮಹಾತ್ಮರಿಗೆ ದೊರಕಿರುವದೋ ಅವರಿಗೆ ಮತ್ತೊಂದು ಆಕಾರದ ಆರಾಧನೆಯ ಅವಶ್ಯಕತೆಯಿರುವದಿಲ್ಲ; ಅವರಿಗೆ ಎಲ್ಲಿಗಾದರೂ ಗೊತ್ತಾದ ದೇವರ ಕೋಣೆಯು ಬೇರೆಯಾಗಿ ಬೇಕಿರುವದಿಲ್ಲ.

ತಮ್ಮ ಒಳಗಾಗಲಿ ಹೊರಗಾಗಲಿ ಕಾಣಬರುವ ದೃಶ್ಯಗಳೆಲ್ಲವೂ ಪರಮಾತ್ಮನ ನೆನಪನ್ನೇ ಅವರಿಗೆ ಕೊಡುತ್ತಿರುವವು. ಅವರು ಮಾಡುತ್ತಿರುವ ವ್ಯಕ್ತಾರಾಧನೆಯು ಗೊತ್ತಿನ ದೇಶದ, ಗೊತ್ತಿನ ಕಾಲದ, ಗೊತ್ತಿನ ಸಾಮಗ್ರಿಗಳದಾಗಿರುವದಿಲ್ಲ.

**ಆತ್ಮಾಂ ತ್ವಂ ಗಿರಿಜಾ ಮತಿಃ ಪರಿಜನಾಃ ಪ್ರಾಣಾಃ ಶರೀರಂ ಗೃಹಂ**
**ಪೂಜಾ ತೇ ವಿಷಯೋಪಭೋಗರಚನಾ ನಿದ್ರಾ ಸಮಾಧಿಸ್ಥಿತಿಃ ।**
**ಸಂಚಾರಃ ಪದಯೋಃ ಪ್ರದಕ್ಷಿಣವಿಧಿಃ ಸ್ತೋತ್ರಾಣಿ ಸರ್ವಾ ಗಿರೋ**
**ಯದ್ಯತ್ ಕರ್ಮ ಕರೋಮಿ ತತ್ತದಖಿಲಂ ಶಂಭೋ ತವಾರಾಧನಮ್ ॥**

'ಎಲೈ ದೇವನೆ, ನನ್ನ ಸ್ವರೂಪವೂ ನೀನೇ, ನನ್ನ ಮತಿಯೆಂಬುದು ನಿನ್ನ ಒಡನಾಡಿಯಾದ ಪಾರ್ವತಿಯು, ನನ್ನ ಪ್ರಾಣಗಳೆಲ್ಲವೂ ನಿನ್ನ ಪರಿಜನರು, ನನ್ನ ಶರೀರವೇ ನಿನ್ನ ಮನೆಯು. ಯಾವ ಯಾವ ಶಬ್ದಾದಿ ವಿಷಯಗಳನ್ನು ನಾನು ತತ್ತತ್ಕಾಲಕ್ಕೆ ಅನುಭವಿಸುವೆನೋ ಅದೆಲ್ಲವೂ ನಿನ್ನ ಪೂಜೆಯೇ, ನಾನು ನಿದ್ರಿಸಿದರೆ ಅದು ನಿನ್ನಲ್ಲಿ ಮಾಡಿರುವ ಚಿತ್ತಸಮಾಧಾನವು, ನಾನು ಆಡುವ ಕೇಳುವ ಮಾತುಗಳೆಲ್ಲವೂ ನಿನ್ನ ಸ್ತೋತ್ರವೇ, ನಾನು ಯಾವ ಯಾವ ಕರ್ಮವನ್ನು ಮಾಡಿದರೂ ನಿನ್ನ ಆರಾಧನೆಯೇ!' ಎನ್ನುತ್ತಿರುವರು, ಆ ಮಹಾತ್ಮರು. ಇಂಥ ಸತತವಾದ ವ್ಯಕ್ತಾರಾಧನೆಯಲ್ಲಿ ಕಾಲವನ್ನು ಕಳೆಯುವವರೇ ಲೋಕದಲ್ಲಿ ಧನ್ಯರು.

## 19. ವ್ಯಕ್ತಾವ್ಯಕ್ತ ಅರ್ಚನೆ

ಭಗವಂತನಿಗೆ ವ್ಯಕ್ತವೆಂದೂ ಅವ್ಯಕ್ತವೆಂದೂ ಎರಡು ರೂಪಗಳುಂಟು. ಆದ್ದರಿಂದ ಆತನ ಅರ್ಚನೆಯು ಎರಡು ವಿಧವಾಗಿರುತ್ತದೆ. ಪರಮೇಶ್ವರನ ವ್ಯಕ್ತಸ್ವರೂಪವೆಂಬುದು ಈ ಚರಾಚರವಾಗಿರುವ ಜಗತ್ತೇ ಆಗಿರುತ್ತದೆ. ಆದರೆ ಮಾಂಸಮಯ ಚಕ್ಷುಸ್ಸಿನಿಂದ ನೋಡುವವರಿಗೆ ಈ ಜಗತ್ತು ಅನಿತ್ಯವಾಗಿ ಅಶುಚಿಯಾಗಿ ಜಡವಾಗಿ ತೋರುವದರಿಂದ ಇದರ ಪರಮಾರ್ಥರೂಪವನ್ನು ಅರ್ಚಿಸುವದಕ್ಕೆ ಶಾಸ್ತ್ರದ ಮತ್ತು ಅನುಭವಿಗಳಾದ ಆಚಾರ್ಯರ ಉಪದೇಶವು ಅವಶ್ಯವಾಗಿರುತ್ತದೆ. ಜಗತ್ತಿನಲ್ಲಿರುವ ವಿಸ್ತಾರವಾದ, ಕಾಂತಿಯುತವಾದ, ಉತ್ಸಾಹ ಯುಕ್ತವಾದ, ದೃಶ್ಯಗಳನ್ನೂ ಮಹಾಪುರುಷರನ್ನೂ ಪರಮಾತ್ಮನ ವಿಭೂತಿಗಳೆಂದು ತಿಳಿದು ಗೌರವಿಸುವದು ಒಂದು ಬಗೆಯ ವ್ಯಕ್ತಾರ್ಚನೆಯು. ಪರಮೇಶ್ವರನು ಆಗಾಗ್ಗೆ ಅಧರ್ಮದ ನಾಶಕ್ಕಾಗಿಯೂ ಧರ್ಮದ ಉದ್ಧಾರಕ್ಕಾಗಿಯೂ ಅವತರಿಸಿ

* ಸಂಪುಟ 17, ಸಂಚಿಕೆ 7, ಮಾರ್ಚ್ 1948, ಪುಟ 145–150

ಲೋಕಾನುಗ್ರಹವನ್ನು ಮಾಡುವದಕ್ಕಾಗಿ ಸ್ವೀಕರಿಸಿರುವ ದಿವ್ಯಮಂಗಲರೂಪಗಳನ್ನು ಹೊರಗಿನ ಪೂಜಾದ್ರವ್ಯಗಳಿಂದಲೂ ಒಳಗಿನ ಮಾನಸೋಪಚಾರಗಳಿಂದಲೂ ಆರಾಧಿಸುವದು ಮತ್ತೊಂದು ಬಗೆಯ ಅರ್ಚನವು. ಶ್ರುತಿಸ್ಮೃತಿಪುರಾಣಗಳಲ್ಲಿ ಬಗೆಬಗೆಯ ಸಾಕಾರ, ಸಗುಣ ಮೂರ್ತಿಗಳ ಅರ್ಚನೆಯನ್ನೂ ಉಪಾಸನೆಯನ್ನೂ ವರ್ಣಿಸಿರುತ್ತದೆ. ಅದರ ಕ್ರಮವನ್ನು ಬಲ್ಲವರಿಂದ ತಿಳಿದು ವ್ಯಕ್ತಾರ್ಚನೆಯನ್ನು ಮಾಡುವದನ್ನು ಕಲಿಯಬೇಕು. ಯಾರು ಭಗವಂತನ ಆಜ್ಞಾರೂಪವಾದ ಶಾಸ್ತ್ರಗಳ ಉಪದೇಶಗಳನ್ನು ನಡೆಯಿಸಲು ಬದ್ಧರಾಗಿರುವರೋ ಅಥವಾ ನೇರಾಗಿ ತಮಗೆ ಶಾಸ್ತ್ರಗಳ ಪರಿಚಯವಿಲ್ಲದಿದ್ದರೂ ಶಾಸ್ತ್ರಜ್ಞರಾದ ಸದ್ಗುರುಗಳ ಉಪದೇಶದಂತೆ ನಡೆಯಲು ಸಿದ್ಧರಾಗಿರುವರೋ ಅಂಥವರು ಮಾತ್ರ ಈ ವ್ಯಕ್ತಾರ್ಚನೆಯನ್ನು ಮಾಡಲು ತಕ್ಕವರು.

ವ್ಯಕ್ತಾರ್ಚನೆಯೆಂಬುದು ಅರ್ಚನೆಯ ಮೊದಲನೆಯ ಸೋಪಾನವು. ಇದನ್ನು ಯಾರು ಏರಿರುವರೋ ಅವರಿಗೆ ಮಾತ್ರ ಭಗವಂತನ ಅವ್ಯಕ್ತರೂಪದ ಅರ್ಚನೆಯು ದಕ್ಕುವದು. ಕೆಲವರು ಮಹನೀಯರಿಗೆ ವ್ಯಕ್ತಾರ್ಚನೆಯ ಹಂಗಿಲ್ಲದೆ ನೇರಾಗಿ ಅವ್ಯಕ್ತದ ಆರಾಧನೆಯೇ ವಶವಾಗಿರುವದುಂಟು. ಆದರೆ ಅಂಥ ಮಹಾತ್ಮರು ಅನೇಕ ಜನ್ಮಗಳಲ್ಲಿ ಮಾಡಿರುವ ಪುಣ್ಯಕರ್ಮಗಳಿಂದಲೂ ಈಶ್ವರಾರ್ಚನೆಯಿಂದಲೂ ಅವರ ಚಿತ್ತವು ಅತ್ಯಂತಶುದ್ಧ ವಾಗಿರುವದರಿಂದ ಅವರಿಗೆ ಈ ಅವ್ಯಕ್ತಾರಾಧನೆಯು ಈಗ ಸಾಧ್ಯವಾಗಿರುತ್ತದೆ. ಯಾರೋ ಕೆಲವರಿಗೆ ವಿದ್ಯಾಶಾಲೆಗಳ ಪ್ರವೇಶವಿಲ್ಲದೆಯೇ ಜ್ಞಾನಾರ್ಜನೆಯಾಗಿರುವದೆಂಬ ಕಾರಣದಿಂದ ವಿದ್ಯಾಶಾಲೆಗಳಿಲ್ಲದೆಯೇ ಜ್ಞಾನವನ್ನು ಸಂಪಾದಿಸಬಹುದೆಂದು ನಮ್ಮ ಹುಡುಗರಿಗೆ ನಾವು ಉಪದೇಶಿಸುವದಿಲ್ಲವಷ್ಟೆ. ಇದರಂತೆಯೇ ವ್ಯಕ್ತಾವ್ಯಕ್ತಾರ್ಚನೆಗಳ ವಿಭಾಗವನ್ನೂ ಅರಿಯಬೇಕು. ಶ್ರೀಕೃಷ್ಣಭಗವಂತನು ಅರ್ಜುನನಿಗೆ ಈ ವಿಷಯದಲ್ಲಿ ಹೇಳಿರುವ ಉಪದೇಶವನ್ನು ನಾವು ಮನಸ್ಸಿನಲ್ಲಿಟ್ಟಿರಬೇಕು. 'ಅವ್ಯಕ್ತದಲ್ಲಿ ಚಿತ್ತವನ್ನು ಇಟ್ಟಿರುವ ಉಪಾಸಕರಿಗೆ ಕ್ಲೇಶವು ಇನ್ನೂ ಹೆಚ್ಚಾಗಿರುತ್ತದೆ. ಏಕೆಂದರೆ ದೇಹಾಭಿಮಾನಿಗಳಾದವರಿಗೆ ಅವ್ಯಕ್ತದ ಉಪಾಸನೆಯ ಮಾರ್ಗವೆಂಬುದು ಬಹಳ ಕಷ್ಟದಿಂದ ದೊರಕತಕ್ಕದ್ದಾಗಿರುತ್ತದೆ.'

ಅವ್ಯಕ್ತದ ಅರ್ಚನೆಯೆಂದರೆ ಏನು? ಅದನ್ನು ಎಲ್ಲಿ ಹೇಗೆ ಮಾಡಬೇಕು?–ಎಂಬ ಪ್ರಶ್ನೆಗಳಿಗೆ ಉತ್ತರವನ್ನು ಮೊದಲು ಹೇಳಬೇಕು. ಈ ಅರ್ಚನೆಯಲ್ಲಿ ಹೊರಗಿನ ಗಂಧಪುಷ್ಪಾದಿಗಳು ಯಾವ ಕೆಲಸಕ್ಕೂ ಬರುವದಿಲ್ಲವೆಂಬುದು ಸ್ಪಷ್ಟವೇ ಆಗಿರುತ್ತದೆ. ಇದರಂತೆ ಭಗವಂತನು ಧರಿಸಿರುವ ಯಾವದೊಂದು ಆಕಾರದ ಚಿಂತೆಯೂ ಇದರಲ್ಲಿರುವದಿಲ್ಲ. ಅವ್ಯಕ್ತವಾದ ಪರಮೇಶ್ವರನ ರೂಪಕ್ಕೆ ಹೋಲಿಸಿದರೆ ಈ ಆಕಾರಗಳೂ ಬರಿಯ ಮಾಯಾರೂಪವಾಗಿರುತ್ತವೆ. ಶ್ರೀಮನ್ನಾರಾಯಣನು ವಿಶ್ವರೂಪವನ್ನು ಧರಿಸಿ ನಾರದನಿಗೆ ತೋರಿಸಿಕೊಂಡಾಗ ಹೇಳಿದ ಮಾತು ಮನನೀಯವಾಗಿದೆ!

**ಮಾಯಾ ಹ್ಯೇಷಾ ಮಯಾ ಸೃಷ್ಟಾ ಯನ್ಮಾಂ ಪಶ್ಯಸಿ ನಾರದ ।**
**ಸರ್ವಭೂತಗುಣೈರ್ಯುಕ್ತಂ ಮೈವಂ ಮಾಂ ಜ್ಞಾತುಮರ್ಹಸಿ ॥**

'ಎಲೈ ನಾರದನೆ, ಈ ನನ್ನ ವಿಶ್ವರೂಪವೆಂಬುದು ನಾನು ಸೃಷ್ಟಿಸಿರುವ ಮಾಯೆಯು. ನಾನು ಹೀಗೆಯೇ ಸರ್ವಭೂತಗುಣಗಳಿಂದಲೂ ಕೂಡಿರುವೆನೆಂದು ಎಣಿಸಬೇಡ.' ಅವ್ಯಕ್ತವೆಂದರೆ ವ್ಯಕ್ತವಲ್ಲದ್ದು, ಇಂದ್ರಿಯಗಳಿಗೆ ತೋರಲಾರದ ರೂಪವು. ಯಾವದರಲ್ಲಿ ಶಬ್ದ, ಸ್ಪರ್ಶ, ರೂಪ, ರಸ, ಗಂಧ–ಇವುಗಳಿರುವವೋ ಅದು ಇಂದ್ರಿಯಗಳಿಗೆ ತೋರುವದರಿಂದ ವ್ಯಕ್ತವೆನಿಸುವದು. ಆದರೆ ಯಾವದರಲ್ಲಿ ಭೂತಗಳ ಯಾವ ಗುಣಗಳೂ ಇಲ್ಲವೋ ಅದು ಇಂದ್ರಿಯಗಳಿಗೆ ಎಂದಿಗೂ ತೋರಲಾರದು; ಆದ್ದರಿಂದ ಅದು ಅವ್ಯಕ್ತವೆನಿಸುವದು. ಹಿಂದೆ ಕಪಿಲಋಷಿಗಳು ಹೇಳಿದ ಸಾಂಖ್ಯವೆಂಬ ದರ್ಶನದಲ್ಲಿ ಈ ಇಡಿಯ ಜಗತ್ತಿಗೆ ಕಾರಣವು ಸತ್ತ್ವ, ರಜಸ್ಸು, ತಮ–ಎಂಬ ಮೂರು ಗುಣಗಳ ಸೇರುವೆಯಿಂದಾದ ಪ್ರಧಾನವೆಂಬ ತತ್ತ್ವವು ಎಂದು ಪ್ರತಿಪಾದಿಸಿರುತ್ತದೆ. ಪ್ರಧಾನವು ಕ್ರಮಕ್ರಮವಾಗಿ ಮಹತ್ತು, ಅಹಂಕಾರ, ಇಂದ್ರಿಯಗಳು, ತನ್ಮಾತ್ರೆಗಳು, ಪಂಚಮಹಾ ಭೂತಗಳು–ಮುಂತಾದ ರೂಪಗಳಿಂದ ಮಾರ್ಪಟ್ಟು ಈ ರೂಪವನ್ನು ಧರಿಸಿರುವದೆಂದು ಸಾಂಖ್ಯರ ಅಭಿಪ್ರಾಯವಿತ್ತು. ಜಗತ್ತಿನಲ್ಲಿರುವ ಎಲ್ಲಾ ವಸ್ತುಗಳೂ ಈ ಪ್ರಧಾನದ ಕಾರ್ಯವೇ ಆದರೂ ಅದು ಯಾವ ಇಂದ್ರಿಯಕ್ಕೂ ಗೋಚರವಲ್ಲ, ಅದರಲ್ಲಿ ವ್ಯಕ್ತವಾಗುವ ಶಬ್ದ, ಸ್ಪರ್ಶ, ರೂಪ, ರಸ–ಮುಂತಾದ ಯಾವ ಗುಣಗಳೂ ಇರುವದಿಲ್ಲ–ಎಂಬುದನ್ನು ತಿಳಿಸುವದಕ್ಕಾಗಿ ಅದನ್ನು ಅವ್ಯಕ್ತವೆಂದು ಸಾಂಖ್ಯರು ಕರೆಯುತ್ತಿದ್ದರು. ಆದರೆ ಪರಮಾತ್ಮನ ಅವ್ಯಕ್ತರೂಪವೆಂದರೆ ಅಂಥದ್ದಲ್ಲ; ಅದು ಸೂಕ್ಷ್ಮವಾಗಿರುವದರಿಂದ ನಮಗೆ ಅದರ ಶಬ್ದಸ್ಪರ್ಶಾದಿಗಳು ತೋರದೆ ಇದ್ದು ಆ ಬಳಿಕ ಅದು ಜಗತ್ತಾಗಿ ಅದರ ಶಬ್ದಾದಿಗಳೇ ತೋರಿಕೊಂಡು ವ್ಯಕ್ತವಾಗುವದು ಎಂದು ಭಾವಿಸಬಾರದು, ಸ್ಥೂಲವಾಗಿ ಅಥವಾ ಸೂಕ್ಷ್ಮವಾಗಿ ಯಾವ ಶಬ್ದಾದಿಗಳೂ ಈ ಪರಮಾರ್ಥತತ್ತ್ವದಲ್ಲಿ ಇರುವದಿಲ್ಲ. ಇದು ಅವ್ಯಕ್ತವೆಂದರೆ ಇಂದ್ರಿಯಗಳಿಂದ ನೋಡುವದಕ್ಕಾಗದಷ್ಟು ಸೂಕ್ಷ್ಮವಾಗಿರುವದು ಎಂದರ್ಥವಲ್ಲ; ಅದು ಇಂದ್ರಿಯಗಳಿಗೆ ಗೋಚರವಾಗುವಂಥದ್ದೇ ಅಲ್ಲ, ಆದ್ದರಿಂದ ಅದು ಅವ್ಯಕ್ತವು.

ಅವ್ಯಕ್ತದ ಅರ್ಚನೆಯೆಂದರೇನು? ಧ್ಯಾನವೇ ಅದರ ಅರ್ಚನೆ. ಈ ಅವ್ಯಕ್ತವನ್ನು ಏನೆಂದು ಚಿಂತಿಸಬೇಕು? ಅದು ಚಿನ್ಮಾತ್ರವಾದ ಬೆಳಕು, ಅದು ನಿತ್ಯವಾದದ್ದು, ಆನಂದಮಯವಾದದ್ದು, ಅದು ಎಲ್ಲಕ್ಕೂ ಅಂತರ್ಯಾಮಿಯಾಗಿರುವದು, ಸರ್ವಜ್ಞವಾದದ್ದು, ಸರ್ವಶಕ್ತಿಗಳುಳ್ಳದ್ದು, ಸ್ವತಂತ್ರವಾದದ್ದು, ಸರ್ವಗತವಾದದ್ದು,

ನಿತ್ಯಶುದ್ಧಬುದ್ಧಮುಕ್ತಸ್ವಭಾವವುಳ್ಳದ್ದು–ಎಂದು ಚಿಂತಿಸಬೇಕು. ಆ ಪರಮಾತ್ಮನ ಸ್ವರೂಪವು ಲೋಕದಲ್ಲಿರುವ ವಸ್ತುಗಳೆಲ್ಲವನ್ನೂ–ಸೂರ್ಯ, ಚಂದ್ರ, ನಕ್ಷತ್ರಗಳು, ಬೆಂಕಿ, ಮಿಂಚು–ಮುಂತಾದ ಭೌತಿಕವಾದ ಬೆಳಕುಗಳನ್ನು ಕೂಡ ಬೆಳಗಿತೋರುವ ಚೈತನ್ಯಪ್ರಕಾಶವಾಗಿರುತ್ತದೆ. ಅದರ ಬೆಳಕಿನಿಂದಲೇ ಎಲ್ಲವೂ ನಮಗೆ ತಿಳಿಯಬರತಕ್ಕದ್ದು. ಅದನ್ನು ತಿಳಿಸುವದಕ್ಕೆ ಮತ್ತೊಂದು ಸಾಧನವು ಇರುವದಿಲ್ಲ. ಬೇಕೂ ಇಲ್ಲ. ಲೋಕದಲ್ಲಿರುವ ವಸ್ತುಗಳ ಹುಟ್ಟುಹೊಂದುಗಳನ್ನು ಅದೇ ನೋಡುತ್ತಾ, ಬೆಳಗುತ್ತಾ ಇರುವದರಿಂದ ಅದರ ಹುಟ್ಟುಹೊಂದುಗಳನ್ನು ಕಲ್ಪಿಸುವದಕ್ಕೂ ಆಗುವಂತಿಲ್ಲ; ಆದ್ದರಿಂದ ಅದು ನಿತ್ಯವಾದದ್ದು. ವಿಷಯಗಳ ನಿಮಿತ್ತದಿಂದಾಗುವ ಸುಖದುಃಖಗಳು ಅದಕ್ಕೆ ವಿಷಯವಾಗಿರುವದರಿಂದ ಅದರ ಹತ್ತಿರಕ್ಕೂ ಬರುವಂತಿಲ್ಲ. ಸುಖದುಃಖಗಳ ಏರಿಳಿತವಿಲ್ಲದ ಪರಮಶಾಂತಶಿವ ಸ್ವರೂಪವಾಗಿರುವದರಿಂದ ಅದು ಆನಂದಮಯವು. ಅದರ ಇರವಿನಿಂದಲೇ ಎಲ್ಲವೂ ಇರವು, ಸ್ವರೂಪ ಮುಂತಾದವುಗಳನ್ನು ಪಡೆಯುತ್ತಿರುವದರಿಂದಲೂ ಅದರ ನೆರವಿಲ್ಲದೆ ಯಾವದೊಂದೂ ಯಾವ ವ್ಯಾಪಾರವನ್ನೂ ಮಾಡಲಾರದಾದ್ದರಿಂದಲೂ ಅದು ಸರ್ವಾಂತರ್ಯಾಮಿಯು. ಎಲ್ಲವನ್ನೂ ಅರಿಯುವದರಿಂದ ಅದು ಸರ್ವಜ್ಞವು. ಎಲ್ಲಕ್ಕೂ ಕಾರಣವಾಗಿರುವದರಿಂದ ಅದು ಸರ್ವಶಕ್ತವು. ದೇಶಕಾಲಗಳನ್ನೂ ವ್ಯಾಪಿಸಿರುವದರಿಂದ ಅದು ಸರ್ವಗತವಾಗಿರುತ್ತದೆ. ಅದಕ್ಕೆ ಎಂದೆಂದಿಗೂ ಯಾವದೊಂದರ ಸೋಂಕಿಲ್ಲ, ಯಾವದೊಂದೂ ಅರಿಯಬಾರದ್ದಿಲ್ಲ, ಯಾವದೊಂದರ ಕಟ್ಟಿಲ್ಲ; ಆದ್ದರಿಂದ ಅದನ್ನು ನಿತ್ಯಶುದ್ಧಬುದ್ಧಮುಕ್ತ ಸ್ವಭಾವವಾದದ್ದು ಎಂದು ಜ್ಞಾನಿಗಳು ಕರೆಯುತ್ತಾರೆ.

ಈ ವರ್ಣನೆಯನ್ನು ಕೇಳಿದ ಸಾಧಕರು 'ಇಂಥ ವಸ್ತುವು ಎಲ್ಲಿಯೂ ನಮಗೆ ಕಾಣಬಂದಿರುವದಿಲ್ಲವಲ್ಲ! ಅತ್ಯಂತ ಅಪ್ರಸಿದ್ಧವಾದ ಈ ರೂಪವನ್ನು ನಾವು ಚಿಂತಿಸುವದು ಹೇಗೆ?' ಎಂದು ಕೇಳಬಹುದು. ನಿಜ. ದೇಹಾಭಿಮಾನಿಗಳಾಗಿರುವವರಿಗೆ, ಹೊರಗಿನ ವಿಷಯಗಳನ್ನೇ ನೋಡುತ್ತಿರುವವರಿಗೆ, ಹೀಗೆಯೇ ಸರಿ. ಆದ್ದರಿಂದಲೇ ನಾವು ಅವ್ಯಕ್ತೋಪಾಸನೆಯು ಸಾಮಾನ್ಯಜನರಿಗೆ ದಕ್ಕುವದಿಲ್ಲವೆಂದು ಹೇಳಿರುವದು. ಆದರೆ ಯಾವ ಮಹನೀಯರು ಹೊರಗಿನ ವಿಷಯಗಳಲ್ಲಿ ವಿರಕ್ತರಾಗಿರುವರೋ ಯಾರಿಗೆ ಭಗವಂತನೇ ಬೇಕೆಂಬ ಹಂಬಲು ನಿತ್ಯವೂ ಹತ್ತಿಕೊಂಡಿರುವದೋ ಅವರಿಗೆ ಆ ಪರಮೇಶ್ವರನಂಥ ಸುಪ್ರಸಿದ್ಧವಸ್ತು ಮತ್ತೊಂದಿಲ್ಲ. ಅದರಷ್ಟು ಹತ್ತಿರವಿರುವ ವಸ್ತುವೂ ಮತ್ತೊಂದಿಲ್ಲ. ಶ್ರದ್ಧೆಯಿಂದಲೂ ಭಾವದಿಂದಲೂ ಭಜಿಸುವವರಿಗೆ ದಯಾಲುವಾದ ಆತನು ಅವರ ಹೃದಯದಲ್ಲಿಯೇ ಅವರ ಆತ್ಮನಾಗಿಯೇ ದರ್ಶನವನ್ನು ಕೊಡುತ್ತಾನೆ.

ಪರಮಾತ್ಮನ ಅವ್ಯಕ್ತಸ್ವರೂಪವನ್ನು ಚಿನ್ಮಾತ್ರವು, ನಿತ್ಯವು, ಆನಂದಮಯವು ಎಂದು ಮುಂತಾಗಿ ಚಿಂತಿಸಬೇಕೆಂದು ಹೇಳಿರುವದನ್ನು ಕಂಡು ಕೆಲವರು ಆತನು ಇಂಥಿಂಥ

ಗುಣಗಳುಳ್ಳವನೆಂದು ಚಿಂತಿಸಬೇಕೆಂದು ಭಾವಿಸಿಕೊಳ್ಳಬಹುದು. ಆದರೆ ನಿಜವು ಹಾಗಿಲ್ಲ. ಪರಮಾತ್ಮನು ಚಿನ್ಮಾತ್ರವೆಂಬುದು ನಾವು ನೋಡುವ ಜಡವಸ್ತುಗಳಂತೆ ಅಲ್ಲ ಎಂಬುದನ್ನು ಮಾತ್ರ ತಿಳಿಸುವದು; ನಿತ್ಯನೆಂಬುದು ಆತನು ಕಾಲದ ಅಳತೆಗೆ ಸಿಕ್ಕಿರುವದಿಲ್ಲ ಎಂಬುದನ್ನಿಷ್ಟೇ ತಿಳಿಸುವದು; ಆನಂದಮಯನೆಂಬುದು ಸುಖದುಃಖಗಳ ಏರುಪೇರುಗಳಿಲ್ಲದವನೆಂದು ತಿಳಿಸುವದು. ನಿಜವಾಗಿ ಆತನು ಇಂಥ ಸ್ವರೂಪದವನೆಂದು ಯಾರಿಂದಲೂ ವರ್ಣಿಸಲಳವಲ್ಲ. ಆದ್ದರಿಂದಲೇ ಆತನನ್ನು 'ನೇತಿ ನೇತಿ' ಇದಲ್ಲ, ಇದಲ್ಲ-ಎಂದು ಶ್ರುತಿಯು ತಿಳಿಸುತ್ತದೆ. ಪರಮೇಶ್ವರನು ತನ್ನ ಸ್ವರೂಪದಿಂದ ಇಂಥವನೆಂದು, ಇಂಥ ಹೆಸರಿನಿಂದ ಕರೆಯತಕ್ಕವನೆಂದು, ಗೊತ್ತುಪಡಿಸುವದಕ್ಕೆ ಆಗದೆಂಬುದಕ್ಕೆ ಬೈಬಲಿನಲ್ಲಿ ಒಂದು ಕಥೆಯಿದೆ. ಮೋಸಸ್ ಎಂಬ ಭಕ್ತನಿಗೆ ಪರಮೇಶ್ವರನು ಒಂದು ಜ್ಯೋತಿಯ ರೂಪದಿಂದ ದರ್ಶನವನ್ನು ಕೊಟ್ಟನು. ಆಗ ಆ ಭಕ್ತನು 'ಸ್ವಾಮಿ, ನಾನು ನಮ್ಮ ಜನರ ಬಳಿಗೆ ಹೋದಾಗ ಅವರು ನಿನ್ನ ಹೆಸರನ್ನು ಕೇಳಿದರೆ ಏನೆಂದು ಹೇಳಲಿ?' ಎಂದು ಕೇಳಿದ್ದಕ್ಕೆ ಆ ಮಹೇಶ್ವರನು 'ನಾನು ಯಾರೋ ಅವನೇ, ನಾನು ನಾನೇ ಆಗಿರುವೆನು; 'ನಾನಾಗಿರುವೆನು' ಎಂಬಾತನೇ ನಿನ್ನನ್ನು ಕಳುಹಿಸಿಕೊಟ್ಟಿರುವನೆಂದು ಹೇಳು' ಎಂದನಂತೆ. ನಾಮರೂಪಗಳಿಲ್ಲದ ಭಗವಂತನನ್ನು ಯಾವ ಹೆಸರಿನಿಂದ ಅಥವಾ ಯಾವ ರೂಪದಿಂದತಾನೆ ತಿಳಿಸುವದಾದೀತು?

ಅವ್ಯಕ್ತದ ಉಪಾಸನೆಯಲ್ಲಿ ಯಾವದಾದರೊಂದು ಪ್ರತ್ಯಯವನ್ನು ಮಾಡಿಕೊಳ್ಳುವ ಕಷ್ಟವೇನೂ ಇಲ್ಲ, ಅದರಲ್ಲಿ ಎಲ್ಲಾ ಪ್ರತ್ಯಯಗಳನ್ನೂ ಕೊಡವಿಕೊಂಡು ಪರಮೇಶ್ವರನ ಕೃಪಾಸಮುದ್ರದಲ್ಲಿ ಧುಮುಕಿಬಿಡುವ ಒಂದು ವಿಲಕ್ಷಣಸಾಧನವಿದೆ. 'ಆತ್ಮನ್ಯೇವ ಮನಃ ಕೃತ್ವಾ ನ ಕಿಂಚಿದಪಿ ಚಿನ್ತಯೇತ್' ಪರಮಾತ್ಮನಲ್ಲಿಯೇ ಮನಸ್ಸಿಟ್ಟು ಮತ್ತೇನನ್ನೂ ಚಿಂತಿಸದೆ ಇರಬೇಕು. ಈ ಸಾಧನದಲ್ಲಿ ಸ್ವಲ್ಪ ಹೆಚ್ಚುಕಡಿಮೆಯಾಗಿ ನಿದ್ರಿಸುವದಕ್ಕೆ ಮಾಡುವ ಪ್ರಯತ್ನದ ಹೋಲಿಕೆಯಿದೆ. ನಿದ್ರೆಗೆ ಹೋಗುವವರಿಗೆ ಹೊರಗಿನ ವಸ್ತುಗಳ ಚಿಂತೆಯು ಯಾವದೂ ಇರಬಾರದು; ಇದರಂತೆಯೇ ಇಲ್ಲಿಯೂ ಅನಾತ್ಮಚಿಂತೆಯೆಲ್ಲವೂ ಹೋಗಿಬಿಡಬೇಕು. ಮನಸ್ಸಿನ ವಿಕ್ಷೇಪವು, ಅಲುಗಾಟವು, ಪೂರ್ಣವಾಗಿ ನಿಂತುಬಿಡಬೇಕು. ಆದರೆ ಈ ಸಾಧನದಲ್ಲಿ ನಿದ್ರೆಯ ಪ್ರಯತ್ನದಲ್ಲಿಲ್ಲದ ಒಂದು ಹೆಚ್ಚಿನ ಪ್ರಯತ್ನವಿದೆ. ಇಲ್ಲಿ ಪರಮಾತ್ಮನು ನಮ್ಮೆಲ್ಲರ ಆತ್ಮನು, ಚಿನ್ಮಾತ್ರನು, ಆನಂದಮಯನು-ಎಂದು ಮುಂತಾಗಿರುವ ಆತನ ಸ್ವರೂಪವನ್ನೇ ಚಿಂತಿಸುತ್ತಿರಬೇಕು. ನಮಗೆ ಗೊತ್ತಿರುವ ಯಾವ ಮಿಕ್ಕ ವಸ್ತುಗಳಲ್ಲಿಯೂ ಈ ಲಕ್ಷಣವಿಲ್ಲವೆಂಬ ದೃಢವಾದ ತಿಳಿವಳಿಕೆಯು ನಮಗೆ ಬಂದಿರಬೇಕು. 'ಆತನನ್ನೇ ಹುಡುಕುವೆನು, ಆತನನ್ನೇ ಶರಣುಹೋಗುವೆನು' ಎಂಬ ಸ್ಥಿರಸಂಕಲ್ಪವು ಎದ್ದುಕೊಂಡಿರಬೇಕು.

ಪರಮಾತ್ಮನ ಉಪಾಸನೆಯೆಂಬುದು ನಾವು ಬಿಟ್ಟು ಬಂದಿರುವ ಮನೆಗೆ ಹಿಂದಿರುಗುವ ಪ್ರಯತ್ನದಂತೆ ಇರುತ್ತದೆ. ನಮಗೆಲ್ಲರಿಗೂ ನಿತ್ಯನಿವಾಸವಾಗಿರುವ ನಿತ್ಯಶರಣನಾಗಿರುವ ಪರಮಾತ್ಮನೆಂಬ ಮನೆಯನ್ನು ಬಿಟ್ಟು ನಾವು ಬಹುದೂರ ಬಂದಿರುತ್ತೇವೆ. ಇನ್ನೂ ಮುಂದಕ್ಕೆ ಹೋದಷ್ಟೂ ನಾವು ಆತನಿಗೆ ದೂರವಾಗುವೆವು. ಆದರೆ ಈ ಕೂಡಲೆ ಹಿಂತಿರುಗಿದರೆ, ಆತನನ್ನು ಕಾಣುವದಕ್ಕೆಂದು ಒಂದಡಿ ಹಿಂದಕ್ಕೆ ಸರಿದರೂ, ಅಷ್ಟರಮಟ್ಟಿಗೆ ನಾವು ಆತನಿಗೆ ಹತ್ತಿರವಾಗುವೆವು. ನಮ್ಮ ಮನೆಗೆ ಹಿಂತಿರುಗಿ ಬರುವಾಗ ದಾರಿಯಲ್ಲಿ ಕತ್ತಲಾಗಿದ್ದರೂ ನಾವು ಎಷ್ಟು ನಡೆದರೆ ಅಷ್ಟು ಉತ್ಸಾಹವು ಉಕ್ಕೇರುವದು. ಇದರಂತೆ ನಾವು ಪರಮೇಶ್ವರನ ಕಡೆಗೆ ಹಿಂತಿರುಗುವ ಉಪಾಸನೆಯಲ್ಲಿ ಎಷ್ಟು ಸಾಧನೆಮಾಡಿದರೆ ಅಷ್ಟು ಆತನಿಗೆ ಹತ್ತಿರವಾಗುವೆವು. ನಾವು ಹತ್ತಿರವಾಗಿರುವೆವೆಂಬ ಅರಿವು ಹೆಚ್ಚಿದಷ್ಟೂ ಉತ್ಸಾಹವು ಹೆಚ್ಚುತ್ತದೆ, ಉತ್ಸಾಹವು ಹೆಚ್ಚಿದಷ್ಟೂ ಫಲಪ್ರಾಪ್ತಿಯೂ ಶೀಘ್ರವಾಗಿ ಆಗುತ್ತದೆ. ಆದ್ದರಿಂದ ಉಪಾಸನೆಯನ್ನು ಮಾಡುವದಕ್ಕೆ ಇಂದೇ, ಇಲ್ಲಿಯೇ ಸಂಕಲ್ಪವನ್ನು ಮಾಡಿಕೊಳ್ಳಬೇಕು. ಪ್ರಯತ್ನವನ್ನು ಮಾಡುವದಕ್ಕೆ ಮೊದಲು ಮಾಡಿದ ಮೇಲೆ ಎಂದಿಗೂ ಅದನ್ನು ನಿಲ್ಲಿಸಬಾರದು. ಬೈಸಿಕಲ್ಲಿನ ಮೇಲೆ ಪ್ರಯಾಣಮಾಡುವಾಗ ಊರಿಗೆ ಒಂದೇ ಮೈಲಿಯ ದೂರವಿರುವಾಗ ಚಕ್ರದ ಹಳಿಯಲ್ಲಿ ತೂತುಬಿದ್ದು ಉಸಿರುಹೋದರೂ ಮನೆಗೆ ದೂರವಾದಂತೆ. ಉಪಾಸನೆಯ ಅನುಷ್ಠಾನದಲ್ಲಿಯೂ ಹೀಗೆಯೇ. ಫಲವು ಪ್ರಾಪ್ತಿಯಾಗುವದು ಹತ್ತಿರವಾಗಿರುವಾಗ ಪ್ರಯತ್ನವನ್ನು ನಿಲ್ಲಿಸಿದರೂ ನಾವು ಪರಮಾತ್ಮನಿಗೆ ದೂರವಾಗುವೆವು. ಆದ್ದರಿಂದ ಭಗವಂತನ ಉಪಾಸನೆಯಲ್ಲಿ ಸ್ಥಿರಪ್ರಯತ್ನವಿರಬೇಕು.

# 20. ಅವ್ಯಕ್ತಾರ್ಚನೆ

* ಹಿಂದಿನ ಎರಡು ಸಂದೇಶಗಳನ್ನು ವಾಚಕರು ಮತ್ತೆಮತ್ತೆ ಮನನಮಾಡುವದು ಒಳ್ಳೆಯದು. ಏಕೆಂದರೆ ಸಾಧನವನ್ನೂ ಮಾಡುತ್ತಾ ಅದಕ್ಕೆ ಸಂಬಂಧಪಟ್ಟ ವಿಚಾರವನ್ನು ನಡೆಯಿಸುವವರಿಗೆ ಮಾತ್ರ ಅಧ್ಯಾತ್ಮಲೇಖನಗಳನ್ನು ಓದುವದರಿಂದಾಗುವ ಪೂರ್ಣ ಪ್ರಯೋಜನವಾಗುವದೆಂದು ಬಲ್ಲವರು ಹೇಳುತ್ತಾರೆ. ಪರಮಾತ್ಮನ ಧ್ಯಾನವು ಅಥವಾ ಉಪಾಸನೆಯು ಅಧ್ಯಾತ್ಮಜ್ಞಾನಕ್ಕೆ ಅಂತರಂಗವಾದ ಸಾಧನವಾಗಿರುತ್ತದೆ. ಯಾರು ಸಂತತವಾಗಿ ಆದರದಿಂದ ಧ್ಯಾನವನ್ನು ಮಾಡುತ್ತಿರುವರೋ ಅವರಿಗೇ ಆಧ್ಯಾತ್ಮವಿಚಾರದ ಸವಿಯು ಚೆನ್ನಾಗಿ ಮನವರಿಕೆಯಾಗುತ್ತದೆ.

* ಸಂಪುಟ 17, ಸಂಚಿಕೆ 8, ಏಪ್ರಿಲ್ 1948, ಪುಟ 169–174

ಪರಮಾತ್ಮನ ವ್ಯಕ್ತರೂಪದ ಅಥವಾ ಅವ್ಯಕ್ತರೂಪದ ಅರ್ಚನೆಯನ್ನು ಮಾಡುವವರ ಮನಸ್ಸಿನಲ್ಲಿ ಪ್ರಶಾಂತಿಯುಂಟಾಗುವದು; ಏಕೆಂದರೆ ಆ ಮನಸ್ಸು ಸಾಮಾನ್ಯರ ಮನಸ್ಸಿನಂತೆ ಮೇಲೆಮೇಲೆ ಹರಿದಾಡದೆ ಜೀವನ ಸಮುದ್ರದ ತೀರ ಕೆಳಮಟ್ಟವನ್ನು ಮುಟ್ಟುವದಕ್ಕೆ ಪ್ರಯತ್ನಮಾಡುತ್ತಿರುತ್ತದೆ. ಸಮುದ್ರದ ಮೇಲುಗಡೆಯಲ್ಲಿ ಬಿರುಗಾಳಿಯ ಹೊಡೆತದಿಂದ ಹೆದ್ದೆರೆಗಳು ಎದ್ದು ಉರುಳುತ್ತಿದ್ದರೂ ಅದರ ಒಳಗಡೆಯಲ್ಲಿ ಯಾವ ಉಬ್ಬರವಿಳಿತಗಳೂ ಇರದೆ ಶಾಂತವಾಗಿರುತ್ತದೆಯಂತೆ. ಇದರಂತೆಯೇ ನಮ್ಮ ಅಂತಃಕರಣವು ಮೇಲಿನ ಮಟ್ಟದಲ್ಲಿ ವ್ಯಾಪಾರಮಾಡುತ್ತಿರುವಾಗ, ಹೊರಗಿನ ಪ್ರಪಂಚದ ಚಿಂತೆಯನ್ನೇ ಹತ್ತಿಸಿಕೊಂಡು ಒದ್ದಾಡುತ್ತಿರುವಾಗ, ಅದರಲ್ಲಿ ಅವ್ಯವಸ್ಥೆಯಿರುವದು, ಸಂಕಟವಿರುವದು, ತಿಕ್ಕಾಟವಿರುವದು. ಆದರೆ ಕೆಳಕ್ಕೆ ಇಳಿದಂತೆಲ್ಲ, ಪರಮಾರ್ಥವನ್ನು ಚಿಂತಿಸಿದಂತೆಲ್ಲ, ಒಂದು ಬಗೆಯ ಹೆಚ್ಚಿನ ಶಾಂತಿಯು ಕಾಣಿಸಿಕೊಳ್ಳುವದು.

ನಮ್ಮಲ್ಲಿ ಅನೇಕರಿಗೆ ಲೌಕಿಕವ್ಯವಹಾರವೆಂಬ ಅವ್ಯವಸ್ಥಿತಜೀವನವೇ ಜೀವನ ವಾಗಿಬಿಟ್ಟಿದೆ. ನಮಗೆ ಸಮುದ್ರದ ಮೇಲೆ ಎದ್ದಿರುವ ಬಿರುಗಾಳಿಯ ಹೊಡೆತವೇ ಸಹಜವಾದ ಜೀವನಕ್ರಮವೆಂತ ತೋರುತ್ತಿರುತ್ತದೆ. ನಮಗೆ ತೀರ ಕೆಳಗಿರುವ ಪ್ರಶಾಂತಸ್ಥಿತಿಯ ಪರಿಚಯವೇ ಇಲ್ಲ. ಆದ್ದರಿಂದ ಸಮುದ್ರದ ಮೇಲುಭಾಗದ ಅನರ್ಥಗಳೆಲ್ಲ ನಮಗೆ ಜೀವನದ ಅಂಗವಾಗಿ ತೋರುತ್ತಿರುವವು. ಹುಟ್ಟುವದು, ಬೆಳೆಯುವದು, ಸಿಕ್ಕಿದ್ದನ್ನು ಭೋಗಿಸುವದು, ಭೋಗವು ಸಿಕ್ಕದಿದ್ದರೆ ಸಿಟ್ಟುಮಾಡುವದು, ಅಳುವದು,- ಕಷ್ಟಾಡುವದು, ಒಳಗೆ ಬೇಗುದಿಕೊಳ್ಳುವದು, ಸೊರಗುವದು, ಸಾಯುವದು–ಇದೇ ನಮ್ಮ ಜೀವನವು. ಇದಕ್ಕೇ "**ಸಂಸಾರ**" ಎಂದು ಹೆಸರು. ಈ ಸಂಸಾರವು ಎಂದು ಮೊದಲಾಯಿತೋ ಎಂದಿಗೆ ಕೊನೆಗಾಣುವದೋ ನಾವರಿಯೆವು, ನಮ್ಮ ಸುತ್ತಲೂ ಇರುವವರೂ ಅರಿಯರು. ನಮಗಿಂತ ಹೆಚ್ಚಿನ ಅಂತಸ್ತಿನವರೆಂದು ನಾವು ಭಾವಿಸುವವರೂ ನಮ್ಮಂತೆಯೇ ಈ ಸಂಸಾರದ ಕಡಲಿನಲ್ಲಿ ಬಿದ್ದು ಒದ್ದಾಡುತ್ತಿರುವರು. ನಿಗ್ರಹಾನುಗ್ರಹಶಕ್ತಿಯುಳ್ಳವರೆಂದು ಹೆಸರಾಂತಿರುವವರುಕೂಡ ಇದೇ ಸಮುದ್ರದಲ್ಲಿ ಬಿದ್ದಿರುತ್ತಾರೆ. ಹೆಚ್ಚೇಕೆ? ನಾವು ಪೂಜೆಮಾಡಿದರೆ ನಮ್ಮನ್ನು ಅನುಗ್ರಹಿಸುವರೆಂದು ನಮ್ಮಲ್ಲನೇಕರು ನಂಬಿರುವ ದೇವತೆಗಳು ಕೂಡ ಈ ಸಮುದ್ರದಲ್ಲಿ ಬಿದ್ದಿರುವವರೇ. ಪರಮೇಶ್ವರನು ಈ ಜಗತ್ತನ್ನು ಸೃಷ್ಟಿಮಾಡಿದಾಗ, ಇದರ ವ್ಯವಸ್ಥೆಯನ್ನು ನೋಡಿಕೊಳ್ಳುವದಕ್ಕೆಂದು ಕೆಲವರು ದೇವತೆಗಳನ್ನು ಸೃಷ್ಟಿಮಾಡಿದನೆಂದೂ ಆಗ ಅವರುಕೂಡ ಈ ಸಂಸಾರವೆಂಬ ದೊಡ್ಡ ಸಾಗರದಲ್ಲಿ ಬಿದ್ದು ಹಸಿವು ಬಾಯಾರಿಕೆ, ಶೋಕಮೋಹ, ಮುಪ್ಪುಸಾವು–ಎಂಬ ದೊಡ್ಡದೊಡ್ಡ ಅಲೆಗಳ ಹೊಡೆತಕ್ಕೆ ಸಿಕ್ಕಿ ನರಳಿದರೆಂದೂ ಉಪನಿಷತ್ತಿನಲ್ಲಿ ಹೇಳಿರುತ್ತದೆ.

ಈ ಸಮುದ್ರದ ವರ್ಣನೆಯನ್ನು ಭಾಷ್ಯಕಾರರು ಹೀಗೆ ಮಾಡಿರುತ್ತಾರೆ: 'ಅವಿದ್ಯೆ, ಕಾಮ, ಕರ್ಮ–ಇವುಗಳಿಂದಾಗುವ ದುಃಖವೇ ಈ ಸಮುದ್ರದ ನೀರು. ತೀವ್ರವಾಗಿರುವ ರೋಗಗಳು, ಮುಪ್ಪು, ಸಾವು–ಎಂಬಿವು ಇಲ್ಲಿರುವ ದೊಡ್ಡದೊಡ್ಡ ಮೊಸಳೆಗಳು. ಇದಕ್ಕೆ ಆದಿಯಿಲ್ಲ, ಅಂತವಿಲ್ಲ, ದಡವಿಲ್ಲ. ಇದಕ್ಕೆ ಯಾವದೊಂದು ಆಶ್ರಯವೂ ಇಲ್ಲ. ವಿಷಯಗಳಿಗೂ ಇಂದ್ರಿಯಗಳಿಗೂ ಸಂಬಂಧವಾದಾಗ ಸುಖದ ಲೇಶವು ತೋರಿದರೆ ಅದೇ ಇಲ್ಲಿ ದೊರಕುವ ವಿಶ್ರಾಂತಿಯು. ಶಬ್ದಸ್ಪರ್ಶ ರೂಪರಸಗಂಧಗಳೆಂಬ ಇಂದ್ರಿಯಾರ್ಥಗಳ ತೃಷ್ಣೆ ಎಂಬ ಬಿರುಗಾಳಿಯ ಹೊಡೆತದಿಂದ ಎದ್ದ ನೂರಾರು ಅನರ್ಥಗಳೆಂಬ ಭಾರಿಭಾರಿಯ ಅಲೆಗಳು ಇಲ್ಲಿರುವವು. ಮಹಾರೌರವವೇ ಮುಂತಾದ ಅನೇಕ ನರಕಗಳಲ್ಲಿ 'ಹಾಹಾ, ಬಿಡುಬಿಡು!' ಎಂದು ಮುಂತಾದ ಕೂಗುಗಳು, ಬಯ್ಗುಳಗಳು–ಇವುಗಳ ಗದ್ದಲವು ಇದರಲ್ಲಿ ಕಾಣುತ್ತಿರುವವು. ಇಂಥ ಸಮುದ್ರದಲ್ಲಿ ದೇವತೆಗಳುಕೂಡ ಬಿದ್ದಿರುವರೆಂದರೆ ಈ ಸಮುದ್ರದಿಂದ ಪಾರಾಗುವದೇ ಅಸಾಧ್ಯವೆಂದು ನಮ್ಮಗಳಿಗೆ ತೋರಿದರೆ ಆಶ್ಚರ್ಯವೇನು?'

ಆದರೆ ಅಂಥ ನಿರಾಶೇಗೇನೂ ಕಾರಣವಿಲ್ಲ. ಏಕೆಂದರೆ ಅದೇ ಭಾಷ್ಯಕಾರರು ಈ ವರ್ಣನೆಯನ್ನು ಮುಂದುವರೆಸಿ ಹೀಗೆಂದಿರುತ್ತಾರೆ : 'ಸತ್ಯವನ್ನು ನುಡಿಯುವದು, ಮನೋವಾಕ್ಕಾಯಗಳಲ್ಲಿ ಒಂದೇ ಸಮನಾದ ವರ್ತನೆಯಿರುವದು, ಸತ್ಪಾತ್ರದಲ್ಲಿ ದಾನ ಮಾಡುವದು, ಸಂಕಟಪಡುತ್ತಿರುವವರಲ್ಲಿ ದಯೆಯನ್ನು ತೋರಿಸುವದು, ಯಾರನ್ನೂ ಹಿಂಸೆಮಾಡದಿರುವದು, ಮನಸ್ಸನ್ನೂ ಇಂದ್ರಿಯಗಳನ್ನೂ ತಪ್ಪುಹಾದಿಗೆ ಹೋಗದಂತೆ ಬಿಗಿಹಿಡಿದುಕೊಂಡಿರುವದು, ಶರೀರೇಂದ್ರಿಯಗಳು ವಿಷಾದದಿಂದ ಕುಸಿಯದಂತೆ ಎತ್ತಿ ಹಿಡಿದುಕೊಳ್ಳುವದು–ಮುಂತಾದ ಆತ್ಮಗುಣಗಳೆಂಬ ಬುತ್ತಿಯನ್ನು ತುಂಬಿದ ಜ್ಞಾನವೆಂಬ ರಕ್ಷಣನೌಕೆಯೊಂದಿರುವದು. ಸತ್ಸಂಗ, ಸರ್ವತ್ಯಾಗ–ಎಂಬ ಮಾರ್ಗದಲ್ಲಿ ಆ ನೌಕೆಯನ್ನು ನಡೆಯಿಸುತ್ತಿದ್ದರೆ ಮೋಕ್ಷವೆಂಬ ದಡವನ್ನು ಮುಟ್ಟಬಹುದು.'

ಮೇಲಿನ ವರ್ಣನೆಯಲ್ಲಿ ಒಂದು ವಿರೋಧಾಭಾಸವನ್ನು ಪರಿಹರಿಸಿಕೊಳ್ಳಬೇಕಾಗಿದೆ. ಸಮುದ್ರಕ್ಕೆ ಆದಿಯಿಲ್ಲ, ಅಂತವಿಲ್ಲ–ಎಂದು ಮೊದಲು ಹೇಳಿ ಕೊನೆಯಲ್ಲಿ ಮೋಕ್ಷವೆಂಬ ದಡವುಂಟು–ಎಂದಿರುವದು ಪೂರ್ವಾಪರವಿರುದ್ಧವೆಂದು ತೋರಬಹುದು. ಆದರೆ ನಿಜವು ಹಾಗಿಲ್ಲ. ಯಾರ ಮನಸ್ಸು ಮೇಲುಗಡೆಯಲ್ಲಿಯೇ ಕೆಲಸಮಾಡುತ್ತಿರುವದೋ ಅವರಿಗೆ ಅದು ಅನಾದಿಯಾಗಿ ಅನಂತವಾಗಿ ಇರುತ್ತದೆ. ಆದರೆ ಯಾರು ಒಳಹೊಕ್ಕು ಪರಮಾತ್ಮನ ಚಿಂತನೆಗೆ ಮನಸ್ಸನ್ನು ಮೀಸಲಾಗಿರಿಸುವರೋ ಅವರಿಗೆ ಮೋಕ್ಷತೀರವು ಬೇಗನೆ ಸಿಕ್ಕುವದು. ಜೀವನಸಮುದ್ರದ ಮೇಲುಗಡೆಯಲ್ಲಿ ಭೇದವೇ ಎಲ್ಲೆಲ್ಲಿಯೂ ಕಾಣುತ್ತಿರುತ್ತದೆ. ಒಬ್ಬೊಬ್ಬ ಜೀವನೂ ಬೇರೆಬೇರೆ, ಒಬ್ಬೊಬ್ಬರಿಗೂ ಶತ್ರುಮಿತ್ರರುಂಟು–ನಮ್ಮವರೆನಿಸಿಕೊಂಡಿರುವ

ಎಲ್ಲಿಯೋ ಕೆಲವರು ಹೊರತು ಮಿಕ್ಕವರೆಲ್ಲರೂ ನಮಗೆ ಹೆರವರೇ ಹಗೆಗಳೇ–ತನಗೂ ಈಶ್ವರನಿಗೂ ಬಲುದೂರ, ತನಗೂ ನೆರೆಂಪುವರಿಗೂ ಬಲುದೂರ–ಎಂದೇ ಭಾಸವಾಗುತ್ತಿರುತ್ತದೆ. ಈ ಮೇಲುಭಾಗದಲ್ಲಿರುವವರು ಕೆಲವರು, 'ನಾನು ಒಂಟಿಗನಾಗಿಯೇ ಜೀವಿಸಬೇಕಾಗಿದೆ, ಎಲ್ಲರೂ ನನಗೆ ಆಗದವರೇ' ಎಂದೇ ಭಾವಿಸಿಬಿಟ್ಟಿರುತ್ತಾರೆ. ಆದರೆ ಒಳಗೆ ಇಳಿದು ನೋಡಿದರೆ, ಈ ಚಿತ್ರವು ಮರೆಯಾಗಿಬಿಡುವದು. ಅಲ್ಲಿ ನಾವೆಲ್ಲರೂ ಪರಮಾತ್ಮನಲ್ಲಿ ಒಂದಾಗಿರುವೆವು. ಸರ್ವಭೂತಗಳೂ ಆತ್ಮನಲ್ಲಿ ಒಂದಾಗಿರುವವು ಎಂಬ ತತ್ತ್ವವನ್ನು ತಿಳಿಸಿಕೊಡುವದೇ ಶಾಸ್ತ್ರಾಚಾರ್ಯರುಗಳ ಉದ್ದೇಶವು.

ಅವ್ಯಕ್ತಾರ್ಚನೆಯ ಅಥವಾ ಧ್ಯಾನದ ಪ್ರಯೋಜನವೇನೆಂಬುದು ಈಗ ಕುಶಲ ಮತಿಗಳಾದ ಓದುಗರಿಗೆ ಹೊಳೆಯದೆ ಇರದು. ಅವ್ಯಕ್ತರೂಪನಾದ ಪರಮಾತ್ಮನಲ್ಲಿ ನಾವೆಲ್ಲರೂ ಒಂದಾಗಿರುವೆವು; ಮೇಲುಮೇಲೆ ನೋಡಿದರೆ ಮಾತ್ರ ನಾವು ಬೇರೆಬೇರೆಯಾಗಿರುವೆವು. ಒಂದು ಮರದ ಕೊಂಬೆಗಳು ಒಂದೊಂದೂ ಒಂದೊಂದು ದಿಕ್ಕಿಗೆ ಹೋಗಿರುವಂತೆ ನಾವು ಈ ವ್ಯವಹಾರದಲ್ಲಿ ಒಬ್ಬೊಬ್ಬರೂ ಒಂದೊಂದು ಗುರಿಯನ್ನು ಇಟ್ಟುಕೊಂಡು ಬೇರೆಬೇರೆ ದಿಕ್ಕಿಗೆ ಹೊರಟಿರುವೆವು. ಆದರೆ ಕೊಂಬೆಗಳೆಲ್ಲ ಕೆಳಗಡೆ ಬುಡದಲ್ಲಿ ಒಂದಾಗಿರುವ ಹಾಗೆ, ನಾವೆಲ್ಲರೂ ಪರಮಾತ್ಮನಲ್ಲಿ ಒಂದಾಗಿಯೇ ಇರುವೆವು. ಧ್ಯಾನಯೋಗವೆಂದರೆ ಮೇಲುಮೇಲೆ ಕಾಣುವ ಭೇದಗಳನ್ನೆಲ್ಲ ಮರೆತು, ಒಳಕ್ಕೆ ಆಳವಾಗಿ ಇಳಿದು ಆತ್ಮನಲ್ಲಿ ಒಂದಾಗುವ ವಿದ್ಯೆ. ಮೇಲುಗಡೆಯಲ್ಲಿ ಮನಸ್ಸಿನ ವಿಕ್ಷೇಪಕ್ಕೆ ಕಾರಣವಾದ ಭೇದಗಳು ಎದ್ದು ಕಾಣುತ್ತಿರುವವಷ್ಟೆ; ಅವುಗಳನ್ನು ಕಡೆಗಣಿಸಿ, ಅವುಗಳಿಂದಾಗುವ ಅಯುಕ್ತ ಭಾವನೆಗಳೆಂಬ ತೆರೆಗಳಿಗೆ ಸಿಲುಕದೆ, ತೀರ ಒಳಗಡೆಗೆ ನುಗ್ಗಿ ಆತ್ಮನಲ್ಲಿ ನೆಲೆನಿಲ್ಲುವ ವಿದ್ಯೆ. ಪರಮಾತ್ಮನಲ್ಲಿ ನಾವು ಯಾವಾಗ ಧ್ಯಾನದಿಂದ ಒಂದಾಗುವೆವೋ ಆಗ ಮನಸ್ಸು ಪ್ರಶಾಂತವಾಗುವದು, ಅದರ ವೃತ್ತಿಗಳ ಏರಿಳಿತಗಳು ಪಲಾಯನವಾಗುವವು, ಮನಸ್ಸಿನಲ್ಲಿ ಉತ್ತಮವಾದ ಒಂದು ವಿಲಕ್ಷಣಸುಖವು ಕಾಣಿಸಿಕೊಳ್ಳುವದು.

**ಪ್ರಶಾನ್ತಮನಸಂ ಹ್ಯೇನಂ ಯೋಗಿನಂ ಸುಖಮುತ್ತಮಮ್ ।**
**ಉಪೈತಿ ಶಾನ್ತರಜಸಂ ಬ್ರಹ್ಮಭೂತಮಕಲ್ಮಷಮ್ ॥**

ರಜೋಗುಣದಿಂದಾಗುವ ಮನಸ್ಸಿನ ಹರಿದಾಟಗಳು ತೀರ ಇಲ್ಲವಾಗಬೇಕೆ? ಮನಸ್ಸು ಶಾಂತಿಸುಖಗಳನ್ನು ಮುಟ್ಟಬೇಕೆ? ಹಾಗಾದರೆ ಬ್ರಹ್ಮಧ್ಯಾನವನ್ನು, ಎಲ್ಲರಿಗೂ ಆತ್ಮನಾಗಿರುವ ಹೆಚ್ಚಿನ ತತ್ತ್ವದ ಚಿಂತನೆಯನ್ನು, ಮನಸ್ಸಿಗೆ ಹತ್ತಿಸಿಕೊಳ್ಳಿರಿ. ಬ್ರಹ್ಮದ ಧ್ಯಾನದಿಂದ ನೀವು ಬ್ರಹ್ಮವೇ ಆಗಿಬಿಡುವಿರಿ. ಈಗಲೂ ನೀವು ಪರಮಾತ್ಮನಲ್ಲಿ ಒಂದೇ ಆಗಿರುವಿರಿ; ನಿಮ್ಮ ಮನಸ್ಸಿನ ತಪ್ಪುತಿಳಿವಳಿಕೆಯಿಂದ, 'ನಾನು ಬೇರೆ, ನೀನು ಬೇರೆ' ಎಂಬ ತಪ್ಪುಭಾವನೆಯಿಂದ,

ಕಾಮಕ್ರೋಧಗಳಿಗೆ ವಶರಾಗಿ ಈ ಪರಮಾರ್ಥವನ್ನು ಅರಿಯದೆ ಇರುವಿರಿ. ವಿದೇಶಕ್ಕೆ ಹೋದಕಾರಣ ಎಷ್ಟೋ ವರ್ಷಗಳಿಂದ ಒಬ್ಬರನ್ನೊಬ್ಬರು ಅಗಲಿರುವ ಅಣ್ಣತಮ್ಮಂದಿರಂತೆ, ಅಕ್ಕತಂಗಿಯರಂತೆ, ನೀವು ಒಬ್ಬರನ್ನೊಬ್ಬರು ಹೆರವರೆಂದು ಭಾವಿಸುತ್ತಾ ಸಲ್ಲದ ದ್ವೇಷಗಳನ್ನು ಒಬ್ಬರಮೇಲೊಬ್ಬರು ಹಾಕುತ್ತಾ, ಕಾರಣವೇ ಇಲ್ಲದೆ ಒಬ್ಬರಿಗೊಬ್ಬರು ಅಂಜಿಕೊಂಡು ಮಾಡಬಾರದ ಕೆಲಸಗಳಿಗೂ ಕೈಹಾಕಿರುವಿರಿ. ಪರಮಾತ್ಮನ ಧ್ಯಾನದಿಂದ ಪರಮಾತ್ಮ ಸ್ವರೂಪರೇ ಆಗಿ, ಮನಸ್ಸಿನ ಎಲ್ಲಾ ಬಗೆಯ ಕಲ್ಮಷಗಳನ್ನೂ ತೊಳೆದುಕೊಂಡು ನೋಡಿದರೆ ಇಲ್ಲಿರುವ ನಾವೆಲ್ಲರೂ ಎಂಥ ನಿಕಟ ಬಾಂಧವ್ಯವುಳ್ಳವರೆಂಬುದು ಸ್ಫುಟವಾಗುತ್ತದೆ.

ಧ್ಯಾನಯೋಗದ ಪರಮಾವಧಿಯಾವದು? ಪರಮಾತ್ಮನಲ್ಲಿ ಯಾವ ಭೇದಭಾವನೆಯೂ ಇಲ್ಲದೆ ಐಕ್ಯಭಾವನೆಯಿಂದ ನೆಲೆನಿಂತುಬಿಡುವದು. ನಮ್ಮ ಸುತ್ತಮುತ್ತಲಿನ ಜನರೆಲ್ಲರೂ ಆ ಪರಮಾತ್ಮನೆಂಬ ಅಗ್ನಿಯ ಕಿಡಿಗಳೇ ಎಂಬುದನ್ನು ಅರಿತುಕೊಳ್ಳುವದು. ಇಷ್ಟೇ ಅಲ್ಲ, ಎಲ್ಲಾ ಪ್ರಾಣಿಗಳಲ್ಲಿಯೂ ಆ ಒಬ್ಬ ಪರಮಾತ್ಮನೇ ಇರುವನೆಂಬುದನ್ನು ಕಂಡುಕೊಂಡು ಎಲ್ಲರಲ್ಲಿಯೂ ಸಮವಾದ ಪ್ರೇಮವನ್ನು ಅಳವಡಿಸಿಕೊಳ್ಳುವದು. ಗೀತಾಚಾರ್ಯನು ಉತ್ತಮ ಯೋಗಿಯ ಲಕ್ಷಣವನ್ನು ಹೇಳಿರುವ ರೀತಿಯನ್ನು ಕೇಳಿರಿ:

**ಆತ್ಮೌಪಮ್ಯೇನ ಸರ್ವತ್ರ ಸಮಂ ಪಶ್ಯತಿ ಯೋಽರ್ಜುನ ।**
**ಸುಖಂ ವಾ ಯದಿ ವಾ ದುಃಖಂ ಸ ಯೋಗೀ ಪರಮೋ ಮತಃ ॥**

ಯಾವನು ಎಲ್ಲಾ ಪ್ರಾಣಿಗಳಲ್ಲಿಯೂ ಸುಖವಾಗಲಿ ದುಃಖವಾಗಲಿ ತನಗಾಗುವಂತೆಯೇ ಆಗುವವು ಎಂಬುದನ್ನು ಕಂಡುಕೊಂಡು, ಎಲ್ಲಾ ಪ್ರಾಣಿಗಳನ್ನೂ ಪ್ರೇಮದಿಂದ ಕಾಣುವನೋ, ಯಾರಿಗೂ ದುಃಖವನ್ನು ಕೋರದೆ ಎಲ್ಲರಿಗೂ ಸುಖವನ್ನುಂಟುಮಾಡುವದಕ್ಕೇ ಪ್ರಯತ್ನಿಸುತ್ತಿರುವನೋ ಅವನೇ ಪರಮಯೋಗಿಯು.

ಮಾನವಜೀವನದಲ್ಲಿ ಕಾಣುವ ಅನರ್ಥಗಳಿಗೆಲ್ಲ ಕಾರಣವೆಂದರೆ ಸಂಸಾರ ಸಮುದ್ರದ ಮೇಲುಗಡೆಯಲ್ಲಿ ಮಾತ್ರವೇ ವ್ಯವಹರಿಸುತ್ತಿರುವದು, ಮಾಯಿಕವಾದ ಭೇದಗಳನ್ನೇ ಪರಮಾರ್ಥವೆಂದು ನಂಬಿ, ರಾಗದ್ವೇಷಗಳಿಗೆ ಹೊಯ್ನೀರೆರೆಯುತ್ತಾ ತನ್ನ ಸುತ್ತಲೂ ಇರುವವರನ್ನೆಲ್ಲಾ ಪರಕೀಯರೆಂದೆಣಿಸುತ್ತಿರುವದು. ಈ ಅನರ್ಥಗಳಿಗೆ ಪರಿಹಾರ ವೇನೆಂಬುದು ಸ್ಪಷ್ಟವಾಗಿರುತ್ತದೆ. ಮೊದಲನೆಯದು ಪರಮೇಶ್ವರಭಕ್ತಿ. ಪರಮಾತ್ಮನಲ್ಲಿ ಎಲ್ಲರೂ ಒಂದಾಗಿರು ವದರಿಂದ ಆತನ ಭಕ್ತಿಯಿಂದ ಎಲ್ಲರಲ್ಲಿಯೂ ಪ್ರೇಮವುಂಟಾಗುತ್ತದೆ. ಎರಡನೆಯದು ಆ ಪರಮೇಶ್ವರನನ್ನು ಸರ್ವಭೂತಗಳಲ್ಲಿಯೂ ಕಾಣುವದಕ್ಕೆ ಪ್ರಯತ್ನಿಸುವದು. ಆದರೆ ಯಾರಿಗೆ ಅಹಂಕಾರದ ಭಾವನೆಯೇ ಎದ್ದುಕೊಂಡಿರುವದೋ, ಯಾರಿಗೆ ನಾನೊಬ್ಬನು ಹೇಳುವದು ಸರಿ, ಮಿಕ್ಕವರು ಹೇಳುವದೆಲ್ಲ ತಪ್ಪೇ–ಎಂಬ ಭಾವನೆಯ ಆವೇಶವಾಗಿ

ಬಿಟ್ಟಿರುವದೋ, ಅಂಥವರಿಗೆ ಈ ಸಾಧನವು ಮೊದಮೊದಲು ಒಗ್ಗುವದಿಲ್ಲ. ಆದರೆ ಹೇಗಾದರೂ ಮಾಡಿ ಈ ಅಭ್ಯಾಸವನ್ನು ಸ್ವಲ್ಪಮಟ್ಟಿಗೆ ಮೊದಲುಮಾಡಿದರೂ ಸಾಕು, ಕೂಡಲೆ ಸರ್ವವ್ಯಾಪಿಯಾಗಿರುವ, ಅಚಿಂತ್ಯನಾಗಿರುವ, ಶಾಶ್ವತನಾಗಿರುವ, ಆನಂದಮಯನಾದ, ಪರಮಾತ್ಮನ ನಿಜದ ಅರಿವು ನಮಗೆ ಮಿಂಚಿನಂತೆ ಥಳಾರನೆ ಹೊಳೆಯುವದಕ್ಕೆ ಮೊದಲಾಗುವದು.

ಹೀಗೆ ನೋಡಿದರೆ ಪರಮಾತ್ಮನ ಧ್ಯಾನದಿಂದ ನಮ್ಮ ವಿಕ್ಷೇಪಗಳು ಕಡಿಮೆಯಾಗುವವು, ಮನಸ್ಸು ಆಳವಾಗಿ ಇಳಿದು, ಎಲ್ಲರಿಗೂ ಆತ್ಮನಾಗಿರುವ ಭಗವತ್ತತ್ತ್ವವನ್ನು ಮುಟ್ಟುವದು, ಅದರಲ್ಲಿ ಒಂದಾಗುವದು; ಆಗ ಹೊಸ ಬಗೆಯ ಪ್ರಶಾಂತಿಯೊಂದು ಕಾಣಿಸಿಕೊಳ್ಳುವದು, ನಿರುಪಾಧಿಕವಾದ ಆನಂದವೊಂದು ಕಾಣಿಸಿಕೊಳ್ಳುವದು. ಯಾವಾಗ ಈ ಧ್ಯಾನವು ಪರಮಾವಧಿಯನ್ನು ಮುಟ್ಟುವದೋ ಆಗ ಸರ್ವಭೂತಗಳೂ ಆ ಪರಮಾತ್ಮನಲ್ಲಿ ಒಂದಾಗಿರುವವೆಂಬ ಹೊಸ ಅರಿವು ಒಡೆದು ಮೂಡಿಕೊಳ್ಳುವದು, ಸರ್ವಭೂತಗಳಿಗೂ ಆ ಪರಮಾತ್ಮನೇ ಆತ್ಮನಾಗಿರುವನೆಂಬ ದೃಢ ನಿಶ್ಚಯವುಂಟಾಗಿ ಎಲ್ಲವರನ್ನೂ ಸಮಪ್ರೇಮ ದಿಂದಲೇ ಕಾಣುವ ಉದಾತ್ತಭಾವವು ಕಾಣಿಸಿಕೊಳ್ಳುವದು. ಆದರೆ ಯಾರಿಗೆ ಈ ಧ್ಯಾನವು ಇನ್ನೂ ದಕ್ಕಿಲ್ಲವೋ ಅವರು ಪ್ರಯತ್ನಪೂರ್ವಕವಾಗಿ ಎಲ್ಲರನ್ನೂ ಮೈತ್ರಿಯಿಂದ ಕಾಣುವ, ಶಾಸ್ತ್ರೋಪದೇಶದ ಬಲದಿಂದ ಎಲ್ಲರಲ್ಲಿಯೂ ಪರಮೇಶ್ವರನಿದಾನೆಂದು ಭಾವಿಸುವ, ತಾನು ಮಾಡುವ ಲೌಕಿಕಶಾಸ್ತ್ರೀಯಕರ್ಮಗಳೆಲ್ಲವನ್ನೂ ಪರಮೇಶ್ವರನ ಆರಾಧನೆಯೆಂದು ಚಿಂತಿಸುವ, ಪದ್ಧತಿಯನ್ನು ಇಟ್ಟುಕೊಳ್ಳಬೇಕು. ಆಗ ಧ್ಯಾನಯೋಗವು ಕ್ರಮಕ್ರಮವಾಗಿ ಸ್ವಾಧೀನವಾಗಿ ಮೊಟ್ಟಮೊದಲು ತಾನು ಭಾವನೆಯಿಂದ ನಂಬಿದ್ದದ್ದೆಲ್ಲವೂ ಪರಮಾರ್ಥವೇ ಎಂಬ ನಿಜದ ಅರಿವನ್ನು ತಂದುಕೊಡುವದು. ಆದ್ದರಿಂದ ಮನುಷ್ಯನು ವ್ಯವಹಾರಸಮುದ್ರದ ಮೇಲುಗಡೆಯಲ್ಲಿ ತೇಲಾಡುವದರಿಂದ ತೃಪ್ತನಾಗಬಾರದು; ಮೆಲ್ಲಮೆಲ್ಲಗೆ ಆ ಸಮುದ್ರದ ಒಳಕ್ಕೆ ಆಳವಾಗಿ ಇಳಿಯುವ ಸಂಕಲ್ಪವನ್ನೂ ಮಾಡಿಕೊಳ್ಳಬೇಕು.

ಲೌಕಿಕ ಸಮುದ್ರದಲ್ಲಿ ಮುಳುಗುವದಕ್ಕೆ ಧೈರ್ಯವು ಬೇಕಾಗಿರುವಂತೆ ಈ ಜೀವನ ಸಮುದ್ರದಲ್ಲಿ ಮುಳುಗುವದಕ್ಕೂ ಸ್ವಲ್ಪ ಧೈರ್ಯವು ಬೇಕಾಗುತ್ತದೆ. ನೆಲದಮೇಲೆ ಸಂಚರಿಸುವದಕ್ಕೆ ಬೇಕಾದ ಉಡುಪುಗಳನ್ನೂ ಮಿಕ್ಕ ಹೊರೆಗಳನ್ನೂ ದಡದ ಮೇಲೆಯೇ ಇಟ್ಟು ಮುಳುಗುವದಕ್ಕೆ ತಕ್ಕ ಉಡುಪನ್ನು ಧರಿಸಿಕೊಂಡೇ ಸಮುದ್ರದೊಳಕ್ಕೆ ಮುಳುಗುವದಕ್ಕೆ ಯತ್ನಿಸುವಂತೆ ಇಲ್ಲಿಯೂ ಒಳಕ್ಕಿಳಿಯುವದಕ್ಕೆ ಅಡ್ಡಿಯಾಗಿರುವದನ್ನೆಲ್ಲ ತೆಗೆದಿಡಬೇಕಾಗುತ್ತದೆ. ಮುಖ್ಯವಾಗಿ 'ನಾನು' ಎಂಬ ನಿಲುವಂಗಿಯನ್ನು ಮೊದಲು ತೆಗೆದುಹಾಕಬೇಕು; ಸರ್ವ ಪ್ರೇಮವೆಂಬ ಜುಬ್ಬವನ್ನು ತೊಟ್ಟುಕೊಳ್ಳಬೇಕು, ಆಗ ಸುಲಭವಾಗಿ ಈ ಆನಂದಸಮುದ್ರದ ತಳವನ್ನು ನಾವು ಸೇರಬಹುದು.

# 21. ಬ್ರಹ್ಮಸಂಸ್ಪರ್ಶ

* ಈ ಸರ್ವಧಾರಿಸಂವತ್ಸರದಲ್ಲಿ ನಮ್ಮ ವಾಚಕವೃಂದಕ್ಕೆಲ್ಲ ಆಯುರಾರೋಗ್ಯಗಳನ್ನೂ ಶುಭಸನ್ನಿವೇಶಗಳನ್ನೂ ಭಗವಂತನು ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇವೆ. ಎಲ್ಲಕ್ಕೂ ಮೇಲಾಗಿ ಸರ್ವರಲ್ಲಿಯೂ ಸಮಬುದ್ಧಿಯನ್ನು ಧಾರಣೆಮಾಡುವ ಶಿವಸಂಕಲ್ಪವನ್ನು ತಮ್ಮೆಲ್ಲರಿಗೂ ಪರಮೇಶ್ವರನು ಕರುಣಿಸಲಿ!

ಹೊಸ ವರ್ಷದ ಮೊದಲನೆಯ ದಿನದಲ್ಲಿ, ಕೆಲವು ಸಂಕಲ್ಪಗಳನ್ನು ಮಾಡಿಕೊಳ್ಳುವದು ಒಬ್ಬೊಬ್ಬರಲ್ಲಿ ರೂಢಿಯಾಗಿರುತ್ತದೆ. ಅಂಥವರು ಈ ವರ್ಷದಿಂದ ತಾವು ಹೊಸ ಮನುಷ್ಯರಾದಂತೆ ಭಾವಿಸಿಕೊಂಡು 'ಇನ್ನುಮುಂದೆ ನಾನು ಹೀಗೆ ಹೀಗೆ ನಡೆಯುವೆನು' ಎಂದು ಪ್ರತಿಜ್ಞೆಮಾಡಿಕೊಳ್ಳುವರು. ಇದೊಂದು ಒಳ್ಳೆಯ ಪದ್ಧತಿಯೇ ಸರಿ; ಆದರೆ ಪ್ರತಿಜ್ಞೆಯು ಅನೇಕ ಸಂಕಲ್ಪಗಳನ್ನು ಒಳಗೊಂಡಿರಬಾರದು, ಮಾಡಿದ ಸಂಕಲ್ಪವನ್ನು ನೆರವೇರಿಸುವದಕ್ಕೆ ತಕ್ಕ ಪ್ರಯತ್ನವನ್ನು ಮೊದಲಿನ ದಿನವೇ ಪ್ರಾರಂಭಿಸಿಬಿಡಬೇಕು. ಹಾಗಾದರೆ ಅವರು ಮಾಡಿದ ಪ್ರತಿಜ್ಞೆಯು ಸಾರ್ಥಕವಾಗುವದು. ಈ ಸರ್ವಧಾರಿ ಸಂವತ್ಸರದಲ್ಲಿ ನಾವುಗಳೆಲ್ಲರೂ ಅಂಥ ಒಂದು ಪ್ರತಿಜ್ಞೆಯನ್ನು ಮಾಡೋಣ.

ಯುಗಾದಿಯ ಹಬ್ಬದ ದಿನ ತೈಲಾಭ್ಯಂಗಸ್ನಾನವನ್ನು ಮಾಡಿ ನಿಂಬದಳಭಕ್ಷಣವನ್ನು ಮಾಡುವ ವಾಡಿಕೆಯು ನಮ್ಮಗಳಲ್ಲಿದೆಯಷ್ಟೆ. ತೈಲಾಭ್ಯಂಗದ ಉದ್ದೇಶವು ನಮಗೆಲ್ಲ ಗೊತ್ತೇ ಇದೆ; ಶರೀರಶುದ್ಧಿಗಾಗಿ ಅದನ್ನು ಮಾಡಿಕೊಳ್ಳುತ್ತೇವೆ ಎಂದು ನಾವೆಲ್ಲರೂ ಸಾಮಾನ್ಯವಾಗಿ ಹೇಳುತ್ತಿರುವೆವು. ಆದರೆ ಹಿಂದಿನ ವರ್ಷದ ಕಶ್ಮಲವೆಲ್ಲ ನಮ್ಮನ್ನು ಬಿಟ್ಟು ಹೋಯಿತೆಂಬುದಕ್ಕೆ ಅದನ್ನು ಸಂಕೇತವಾಗಿ ಮಾಡಿಕೊಂಡರೆ ಯುಗಾದಿಯ ತೈಲಾಭ್ಯಂಗಸ್ನಾನಕ್ಕೆ ಒಂದು ಹೆಚ್ಚಿನ ಅರ್ಥವು ಬರುತ್ತದೆ. ನಮ್ಮ ಮನೋವಾಕ್ಕಾಯಗಳಲ್ಲಿ ಬೇರೆಬೇರೆಯ ನಿಮಿತ್ತಗಳಿಂದ ಸೇರಿಕೊಂಡಿರಬಹುದಾದ ದೋಷಗಳು ಇಂದಿನ ಸ್ನಾನದಿಂದ ತೊಳೆದುಹೋಗಲಿ!–ಎಂದು ಹಾರೈಸಿ ಈ ಸ್ನಾನವನ್ನು ಮಾಡಿರಿ. ಆ ಉತ್ತಮ ಭಾವನೆಯು ನಿಮ್ಮನ್ನು ಈ ಹೊಸವರ್ಷದ ವ್ಯವಹಾರಕ್ಕೆ ಹೊಸಮನುಷ್ಯರಾಗಿ ಮಾಡಿ ಸಜ್ಜುಗೊಳಿಸುವದು. ಸರಿಯಾಗಿ ಬರೆಯದೆ ಡೊಂಕುಗೀಟುಗಳಿಂದಲೂ ಚಿತ್ತುಕಾಟುಗಳಿಂದಲೂ ತುಂಬಿರುವ ಪುಟವನ್ನು ಬಿಟ್ಟು ಹಾಳೆಯನ್ನು ತಿರುಹಿ ಇನ್ನೊಂದು ಸಲ ಸರಿಯಾಗಿ ಪ್ರಯತ್ನ ಮಾಡುವಂತೆ 'ಈ ಸಲ ನಾನು ತ್ರಿಕರಣಗಳಲ್ಲಿಯೂ

---

* ಸಂಪುಟ 17, ಸಂಚಿಕೆ 9, ಮೇ 1948, ಪುಟ 193–198

ಕೂಡಿದ ಮಟ್ಟಿಗೂ ಸ್ವಚ್ಛನಾಗಿರುವೆನು' ಎಂದು ಸಂಕಲ್ಪಿಸಿ ಅಭ್ಯಂಗಸ್ನಾನವನ್ನು ಮಾಡಬೇಕು. ಈ ವರ್ಷದಲ್ಲಿ ನಿಮ್ಮ ಸತ್ಸಂಕಲ್ಪಗಳು ನೆರವೇರಲಿ! ಎಂದು ಹರಸುವಂತೆ ಗುರು ಹಿರಿಯರನ್ನು ನಮಸ್ಕರಿಸಿ ಕೇಳಿಕೊಳ್ಳಬೇಕು. ಬೇವಿನ ಚಿಗುರನ್ನು ಅಥವಾ ಹೂವನ್ನು ಬೆಲ್ಲದೊಡನೆ ಸೇರಿಸಿ ದೇವರ ಪ್ರಸಾದವಾಗಿ ಮಾಡಿಕೊಂಡು ಭಕ್ಷಿಸುವ ಪದ್ಧತಿಗೂ ಹೀಗೆಯೇ ಒಂದು ಉತ್ತಮವಾದ ಸಂಕಲ್ಪವನ್ನು ಜೋಡಿಸಿಕೊಳ್ಳಬಹುದು. ಈ ಜೀವನದಲ್ಲಿ ನಮಗೆ ಬೇವುಬೆಲ್ಲಗಳಂತೆ ಸುಖದುಃಖಗಳು ಮಿಶ್ರವಾಗಿಯೇ ಇರುವವು; ಸುಖದುಃಖನಿಮಿತ್ತಗಳು ಜೊತೆಜೊತೆಯಲ್ಲಿಯೇ ಬರುತ್ತಿರುವವು. ಈ ದ್ವಂದ್ವಗಳನ್ನು ನಾವು ಲೆಕ್ಕಿಸದೆ, ಇವುಗಳನ್ನು ಮೀರಿರುವ ಪರಮಾರ್ಥದ ಅನ್ವೇಷಣೆಯಲ್ಲಿಯೇ ಪರಮ ಪುರುಷಾರ್ಥವನ್ನು ಕಂಡುಕೊಳ್ಳ ಬೇಕಾಗಿರುತ್ತದೆ. ಇಂದ್ರಿಯಗಳಿಗೂ ವಿಷಯಗಳಿಗೂ ಸಂಬಂಧವಾದಾಗ, ನಮಗೆ ಶೀತೋಷ್ಣಗಳಿಗೆ ಪರಸ್ಪರವಿರುದ್ಧವಾದ ವೇದನೆಗಳೂ ಅವುಗಳಿಂದ ನಮಗೆ ಸುಖದುಃಖಗಳೂ ತಪ್ಪದೆ ಉಂಟಾಗುವವು. ಆದರೆ ನಾವು ಮಾತ್ರ ಆ ಸುಖ ದುಃಖಗಳಿಂದ ಹಿಗ್ಗದೆ ಕುಗ್ಗದೆ ಇರುವ ಅಭ್ಯಾಸವನ್ನು ಮಾಡಬೇಕು. ಇದೇ ನಮ್ಮ ಜೀವನದ ಹೆಗ್ಗುರಿಯಾಗಿರಬೇಕು. ಈ ಅರ್ಥವನ್ನು ನಾವು ಬೇವುಬೆಲ್ಲದ ಭಕ್ಷಣಕ್ಕೆ ಜೋಡಿಸಿಕೊಳ್ಳಬೇಕು.

ಸಂಕಲ್ಪವನ್ನು ಮಾಡುವದು ಬಹು ಸುಲಭ. ಆದರೆ ಅದು ನೆರವೇರುವದು ಕಷ್ಟ. ಶರೀರಮಲವನ್ನೂ ವಾಙ್ಮಲವನ್ನೂ ಮನೋಮಲವನ್ನೂ ತೊಳೆದುಹಾಕುವ ಸಂಕಲ್ಪವು ನೆರವೇರುವದಕ್ಕೆ ಏನು ಮಾಡಬೇಕು? ದ್ವಂದ್ವಗಳನ್ನು ಮೀರಿ ಸುಖದುಃಖಗಳ ಹೊಡೆತದಿಂದ ಹಿಗ್ಗದೆ ಕುಗ್ಗದೆ ಇರುವದಕ್ಕೆ ಏನು ಮಾಡಬೇಕು? ಈ ಪ್ರಶ್ನೆಯು ಸಹಜವಾಗಿ ನಮ್ಮ ಮನಸ್ಸಿನಲ್ಲಿ ಮೊಳಕೆಯಾಗುತ್ತದೆ. ಇದಕ್ಕೆ ಉಪನಿಷತ್ತುಗಳಲ್ಲಿ ಒಂದೇ ಒಂದು ಉತ್ತರವನ್ನು ಕೊಟ್ಟಿರುತ್ತದೆ. 'ಆತ್ಮನನ್ನೇ ಕಾಣಬೇಕು.' ಆತ್ಮನನ್ನು ಕಾಣುವದೆಂದರೆ, ಸೂರ್ಯನಿಂದ ಬರುವ ಬೆಳಕನ್ನು ಕಾಣುವಂತೆ ಅಥವಾ ಬೆಂಕಿಯಿಂದ ಬರುವ ಶಾಖವನ್ನು ಕಾಣುವಂತೆ ಹೊರಗಿನಿಂದ ಬರುವ ಅನುಭವವಲ್ಲ. 'ಅಗೋ, ಅಲ್ಲಿ ಪರಮೇಶ್ವರನಿದಾನೆ!' ಎಂದು ಒಂದು ಗೊತ್ತಾದ ಸ್ಥಳದಲ್ಲಿ ಹೊರಗೆ ಒಂದಾನೊಂದು ಕಾಲದಲ್ಲಿ ಇಂದ್ರಿಯಗಳಿಂದ ಕಾಣುವದಲ್ಲ; ಆ ಪರಮೇಶ್ವರನು ನಮ್ಮ ಆತ್ಮನು, ನಮ್ಮ ನಿಜವಾದ ಸ್ವರೂಪವೇ, ಎಂದು ಅರಿತುಕೊಳ್ಳುವದು. ಪರಮಾರ್ಥತತ್ತ್ವವನ್ನು ಬ್ರಹ್ಮ, ಈಶ್ವರ, ನಾರಾಯಣ, ವಾಸುದೇವ-ಮುಂತಾದ ಅನೇಕ ಹೆಸರುಗಳಿಂದ ಶಾಸ್ತ್ರದಲ್ಲಿ ಕರೆದಿದ್ದರೂ 'ಆತ್ಮ' ಎಂಬ ಹೆಸರಿಗಿಂತ ಉತ್ತಮವಾದ ಹೆಸರು ಮತ್ತೊಂದಿಲ್ಲವೆಂದು ಹೇಳಬಹುದು. ಆ ಈಶ್ವರನು ನಮ್ಮ ಆತ್ಮನು ಎಂದ ಒಡನೆಯೇ ನಾವು ಆತನನ್ನು

ನಮ್ಮ ಹೊರಗೆ ಹುಡುಕುವ ಪ್ರಯತ್ನವನ್ನು ನಿಲ್ಲಿಸುವೆವು; ನಮ್ಮ ಒಳಕ್ಕೇ ಸರಿಯುತ್ತಾ ನಮ್ಮ ತೀರ ಒಳಗಿನ ತಿರುಳಾಗಿರುವ ಆತನನ್ನು ಕಂಡುಕೊಂಡುಬಿಡುವೆವು. ಹೊರಗಿನ ವಿಷಯಗಳನ್ನು ಇಂದ್ರಿಯಗಳಿಂದ ಮುಟ್ಟಿಮುಟ್ಟಿ ಸುಖದುಃಖಗಳೆಂಬ ದ್ವಂದ್ವಗಳ ಹೊಡೆತಕ್ಕೆ ಸಿಕ್ಕಿ ಸಿಕ್ಕಿ ನರಳುತ್ತಿರುವ ಪ್ರಾಣಿಗಳಿಗೆ ಉಪನಿಷತ್ತುಗಳು ಮಾಡುತ್ತಿರುವ ಅಮೃತಕಲ್ಪವಾದ ಉಪದೇಶವಿದು: 'ಆತ್ಮನನ್ನೇ ಕಾಣಬೇಕು,' ಆದ್ದರಿಂದ ಹೊರಹೊರಕ್ಕೆ ಓಡಬಾರದು, ನಮ್ಮ ನಮ್ಮ ಒಳಕ್ಕೆ ಸರಿದು ಆತ್ಮನನ್ನು ಕಂಡುಕೊಳ್ಳಬೇಕು. 'ಅವನೇ ನಾನು ಎಂದು ಆತ್ಮನನ್ನು ಅರಿತುಕೊಂಡರೆ, ಏನನ್ನು ಬಯಸಿ, ಯಾರ ಕಾಮಕ್ಕಾಗಿ ಮನುಷ್ಯನು ಶರೀರವನ್ನು ಆಯಾಸಗೊಳಿಸಿಯಾನು?'

ಈ ಉಪದೇಶದ ಅಭಿಪ್ರಾಯವನ್ನು ಸ್ವಲ್ಪ ಹಿಗ್ಗಿಸಿದರೆ ಇಷ್ಟಾಗುವದು : ನಮ್ಮ ಮನಸ್ಸು ಮಲಿನವಾಗಿದ್ದರೆ, ವಾಕ್ಕೂ ಮಲಿನವಾಗಿರುವದು, ಶರೀರವೂ ಅದಕ್ಕೆ ತಕ್ಕ ಕರ್ಮವನ್ನು ಮಾಡಿ ಮಲಿನವಾಗುತ್ತಿರುವದು. ಮನುಷ್ಯನು, ಕಂಡಕಂಡ ಕರ್ಮಗಳನ್ನೆಲ್ಲ ಮಾಡಿ ಕರಣತ್ರಯವನ್ನು ಮಲಿಗೊಳಿಸುತ್ತಿರುವದಕ್ಕೆ ವಿಷಯಚಿಂತನೆಯೇ ಕಾರಣವು. ನನಗೆ ಇದು ಬೇಕು, ಅದು ಬೇಕು–ಎಂದು ಸಾಮಾನ್ಯ ಮನುಷ್ಯನು ಹಾತುವರಿಯುತ್ತಲೇ ಇರುವನು. ಶರೀರದ ಒಂದೊಂದು ಭಾಗವೂ ಒಂದೊಂದು ಸುಖದ ಪ್ರಾಪ್ತಿಯನ್ನು ಬಯಸುತ್ತಿರುವದು, ಅಥವಾ ಒಂದೊಂದು ದುಃಖದ ನಿವೃತ್ತಿಯನ್ನು ಬಯಸುತ್ತಿರುವದು. ಈ ಸುಖಪ್ರಾಪ್ತಿಗಾಗಿಯೇ ಅಥವಾ ದುಃಖದ ನಿವೃತ್ತಿಗಾಗಿಯೇ ಜನರು ಬಗೆಬಗೆಯ ಕರ್ಮಗಳನ್ನು ಮಾಡಿ ಶರೀರವನ್ನು ಆಯಾಸಗೊಳಿಸು ತ್ತಿರುವರು. ನನಗೆ ಹಸಿವು ತೀರಬೇಕು. ಆದ್ದರಿಂದ ಮೃಷ್ಟಾನ್ನವು ಬೇಕು; ನನ್ನ ಬಾಯಾರಿಕೆಯು ಇಂಗಬೇಕು, ಆದ್ದರಿಂದ ಉತ್ತಮಪೇಯಗಳನ್ನು ಹುಡುಕುತ್ತಿರುವೆನು, ನನಗೆ ಬೇನೆಯಾಗಲಿ ಮುಪ್ಪಾಗಲಿ ಬರಬಾರದು, ಆದ್ದರಿಂದ ಔಷಧಗಳನ್ನು ಸೇವಿಸುವೆನು; ನಾನು ಬಹುಕಾಲ ಸಾಯದೆ ಇರಬೇಕು, ಆದ್ದರಿಂದ ಯೋಗವನ್ನು ಅಭ್ಯಾಸಮಾಡುತ್ತಿರುವೆನು. ನನ್ನ ಶೋಕವೂ ಮೋಹವೂ ಅಡಗಬೇಕು, ಆದ್ದರಿಂದ ಸುಖವನ್ನೂ ಜ್ಞಾನವನ್ನೂ ಸಂಪಾದಿಸುವದಕ್ಕೆಂದು ಹವಣಿಸುತ್ತಿರುವೆನು–ಎಂದು ಜನರು ಬವಣೆಬಡುತ್ತಿರುವದೇಕೆ? ಈ ದೋಷಗಳ ಸೋಂಕು ಒಂದಿಷ್ಟೂ ಇಲ್ಲದ ತಮ್ಮ ಆತ್ಮನನ್ನು ಕಂಡುಕೊಳ್ಳದೆ ಇರುವದರಿಂದಲೇ. ಆದರೆ ಯಾವಾಗ ಮನುಷ್ಯನು ತನ್ನ ಆತ್ಮನೇ ಆಗಿರುವ ಆ ಪರಮಪುರುಷನನ್ನು ಕಂಡುಕೊಳ್ಳುವನೋ ಆಗ ಅವನು ಏನನ್ನು ಬಯಸುವನು? ಅವನಿಗೆ ಸರ್ವಕಾಮಗಳ ಪ್ರಾಪ್ತಿಯೂ ಆಗಿಬಿಡುವದು. ಆದ್ದರಿಂದ ಅವನಿಗೆ ಯಾವ ಕಾಮದ ಉಪಟಳವೂ ಇರುವದಿಲ್ಲ. ಆದ್ದರಿಂದ ಅವನು ಇನ್ನು ಅನವಶ್ಯವಾದ ಆಯಾಸಕ್ಕೆ ಎಂದಿಗೂ ಗುರಿಯಾಗುವದಿಲ್ಲ.

ಇಂದ್ರಿಯಗಳಿಂದ ವಿಷಯಗಳನ್ನು ಸೋಕಿದ ಮೇಲೆ ಉಂಟಾಗುವ ಬೇವುಬೆಲ್ಲದ ಸವಿಯು ದುಃಖಕ್ಕೆ ಕಾರಣವು. ಯಾವಯಾವದು ವಿಷಯಗಳ ಸಂಸ್ಪರ್ಶದಿಂದ ಆಗುವ ಭೋಗವೋ ಅದೆಲ್ಲ ದುಃಖಕ್ಕೆ ಯೋನಿಗಾಗಿಯೇ ಇರುವದು ಎಂದು ಗೀತಾಚಾರ್ಯನಾದ ಶ್ರೀಕೃಷ್ಣನು ಅಪ್ಪಣೆಕೊಡಿಸಿರುತ್ತಾನೆ. ಆದರೆ ಯಾವನು ಆತ್ಮನನ್ನು ಕಾಣುವದಕ್ಕೇ ಹಂಬಲಿಸುತ್ತಿರುವನೋ, ಯಾವನು ಆತ್ಮನ ಶ್ರವಣವನ್ನೇ ಮಾಡುವನೋ, ಆತ್ಮನ ವಿಚಾರವನ್ನೇ ಮನಸ್ಸಿನಲ್ಲಿ ಹೊರಳಿಸುತ್ತಿರುವನೋ, ಆತ್ಮನ ಚಿಂತೆಯಲ್ಲಿಯೇ ಕಾಲವನ್ನು ಕಳೆಯುತ್ತಿರುವನೋ, ಅವನಿಗೆ ಆಗುವ ಫಲವನ್ನು ಹೀಗೆಂದು ಭಗವಂತನು ತಿಳಿಸಿರುತ್ತಾನೆ:

**ಯುಞ್ಜನ್ನೇವಂ ಸದಾತ್ಮಾನಂ ಯೋಗೀ ವಿಗತಕಲ್ಮಷಃ ।**
**ಸುಖೇನ ಬ್ರಹ್ಮಸಂಸ್ಪರ್ಶಮತ್ಯನ್ತಂ ಸುಖಮಶ್ನುತೇ ॥**

'ಈ ರೀತಿಯಲ್ಲಿ ಯಾವಾಗಲೂ ಆತ್ಮನ ಧ್ಯಾನಮಾಡುತ್ತಿರುವ ಯೋಗಿಯು ಎಲ್ಲಾ ಕಲ್ಮಷವನ್ನೂ ತೊಳೆದುಕೊಂಡು ಸುಲಭವಾಗಿಯೇ ಬ್ರಹ್ಮಸಂಸ್ಪರ್ಶವೆಂಬ ಅತ್ಯಂತ ಸುಖವನ್ನು ಪಡೆಯುತ್ತಾನೆ'. ಯಾವನು ತಾನೇ ತನ್ನೊಳಗೆ ಹೊಕ್ಕು ನೋಡುವ ವಿದ್ಯೆಯಲ್ಲಿ ನಿಪುಣನಾಗುವನೋ ಅವನಿಗೆ ವಿಷಯದ ಸಂಪರ್ಕದಿಂದ ಆಗುತ್ತಿದ್ದ ಶರೀರದ ಕಲ್ಮಷವು ತೊಳೆದುಹೋಗುವದು, ಮನಸ್ಸಿಗೆ ಅಂಟಿಕೊಳ್ಳುತ್ತಿದ್ದ ಕಲ್ಮಷವು ತೊಳೆದುಹೋಗುವದು. ಹೀಗೆ ಎಡೆಬಿಡದೆ ದೀರ್ಘಕಾಲದವರೆಗೆ ಮಾಡುತ್ತಿದ್ದರೆ ಆ ಸಾಧಕನು ತನ್ನನ್ನೂ ತಾನೇ ದಾಟುವನು; ಆಮೇಲೆ ಬ್ರಹ್ಮಸಂಸ್ಪರ್ಶದಿಂದಾಗುವ, ಪರಮಾತ್ಮನನ್ನು ಮುಟ್ಟುವದರಿಂದಾಗುವ, ಪರಮಾನಂದವನ್ನು ಸುಲಭವಾಗಿ ಅನುಭವಿಸುವನು.

ಬ್ರಹ್ಮಸಂಸ್ಪರ್ಶವೆಂಬುದು ಒಂದು ವಿಲಕ್ಷಣವಾದ ಅನುಭವವು. ಏಕೆಂದರೆ ವಿಷಯಸಂಸ್ಪರ್ಶವನ್ನು ಸಂಪೂರ್ಣವಾಗಿ ಕೈಬಿಟ್ಟಮೇಲೆಯೇ ಅದರ ಅನುಭವವು ಸಿಕ್ಕುವದು. ಅದನ್ನು ಅಸ್ಪರ್ಶಯೋಗವೆಂದೂ ಕೆಲವರು ಕರೆಯುತ್ತಾರೆ. ವಿಷಯಗಳನ್ನು ಇಂದ್ರಿಯಗಳಿಂದಲಾಗಲಿ ಮನಸ್ಸಿನಿಂದಲಾಗಲಿ ಮುಟ್ಟದೆ ಇರುವ ಸಾಧನವೆಂಬ ಕಾರಣದಿಂದ ಮಾತ್ರವೇ ಅದನ್ನು ಅಸ್ಪರ್ಶಯೋಗವೆಂದು ಕರೆದಿದೆ ಎಂದು ಭಾವಿಸಲಾಗದು; ಬ್ರಹ್ಮವನ್ನು ಮುಟ್ಟಬೇಕಾದ ಅವಶ್ಯಕತೆಯೂ ಇಲ್ಲವೆಂದು ಅರಿವು ನಮಗೆ ಉದಿಸುವದೆಂಬ ಕಾರಣದಿಂದಲೂ ಅದು ಅಸ್ಪರ್ಶಯೋಗವೆನಿಸಿರುತ್ತದೆ. ಅನುಭವಿಗಳ ದೃಷ್ಟಿಯಿಂದ ನೋಡಿದರೆ, ಬ್ರಹ್ಮವನ್ನು ನಾವು ಹೊಸದಾಗಿ ಮುಟ್ಟಬೇಕಾದದ್ದೇನೂ ಇರುವದೇ ಇಲ್ಲ. ನಮ್ಮ ಈಗಿನ ಸ್ಥಿತಿಯಲ್ಲಿ ಬ್ರಹ್ಮವು, ಅಥವಾ ಪರಮಾರ್ಥತತ್ತ್ವವು, ನಮಗೆ ಎಷ್ಟೋ ದೂರದಲ್ಲಿ ಇರುವದು. ಆದರೆ ಬ್ರಹ್ಮದರ್ಶನದ ಸ್ಥಿತಿಯಲ್ಲಿ ನಮ್ಮ ಶರೀರಮನಸ್ಸುಗಳಿಗಿಂತಲೂ ಅದು ಹತ್ತಿರವಾಗಿರುತ್ತದೆ. ಅದು ಹತ್ತಿರವೆಂಬುದೂ

ಸರಿಯಲ್ಲ, ಏಕೆಂದರೆ ನಮಗೂ ಅದಕ್ಕೂ ಇರುವ ಅಂತರವು ಸ್ವಲ್ಪವೂ ಇರುವದಿಲ್ಲ; ಅದೂ ನಾವೂ ಒಂದಾಗಿರುವೆವು. ಇದೇ ಧ್ಯಾನಯೋಗದ ಕಟ್ಟಕಡೆಯ ಫಲವು. ಈ ದೃಷ್ಟಿಯಿಂದ ನೋಡಿದರೆ, ನಾವು ಧ್ಯಾನದಿಂದ ಬ್ರಹ್ಮವನ್ನು ಮುಟ್ಟುವೆವು ಎಂಬುದಕ್ಕಿಂತ ನಿತ್ಯಪ್ರಾಪ್ತವಾಗಿರುವ ಬ್ರಹ್ಮಾನುಭವಕ್ಕೆ ಅಡ್ಡಿಯಾಗಿರುವದೆಲ್ಲ ಧ್ಯಾನದಿಂದ ನಾಶವಾಗುವದು ಎಂದು ಹೇಳುವದೇ ಹೆಚ್ಚು ಒಪ್ಪುತ್ತದೆ.

ಇದುವರೆಗೆ ನಾವು ಪರಮಾತ್ಮನನ್ನು ಧ್ಯಾನಮಾಡುವದರಿಂದ ಸಾಧಕನಿಗೆ ಆಗುವ ವಿಲಕ್ಷಣವಾದ ಶಾಂತಿಯನ್ನೂ ಸುಖವನ್ನೂ ವರ್ಣಿಸಿರುವೆವು; ವಿಷಯಗಳ ಸಂಸ್ಪರ್ಶದಿಂದಾಗುವ ದುಃಖವು ಸಂಪೂರ್ಣವಾಗಿ ಇಲ್ಲವಾಗುವದೆಂಬುದನ್ನೂ ವರ್ಣಿಸಿರುವೆವು. ಆದರೆ ಈ ಸಮಾಧಿಸುಖವು, ಪರಮಾತ್ಮನನ್ನು ಮುಟ್ಟಿದಾಗ ಅಥವಾ ಪರಮಾತ್ಮಭಾವದಿಂದ ನೆಲೆನಿಲ್ಲುವಾಗ ಆಗುವ ಸುಖವು, ತನ್ನೊಬ್ಬನಿಗೇ ಮೀಸಲಾಗಿರುವ ಒಂದಾನೊಂದು ಹೆಚ್ಚಿನ ಪುರುಷಾರ್ಥವು ಎಂದು ಸಾಧಕನು ಭಾವಿಸಬಾರದು. ಏಕೆಂದರೆ ಆ ಸ್ಥಿತಿಯಲ್ಲಿ ಪ್ರತಿಯೊಬ್ಬ ಸಾಧಕನೂ ತನ್ನತನವನ್ನು ಕಳಚಿಕೊಂಡೇ ಪರಮಾತ್ಮನಲ್ಲಿ ಒಂದಾಗಿರುತ್ತಾನೆ. ನಮ್ಮಲ್ಲಿ ಯಾರು ಈ ಸ್ಥಿತಿಯನ್ನು ಮುಟ್ಟಿದರೂ ನಮ್ಮ ವ್ಯಕ್ತಿತ್ವವು ಅಲ್ಲಿರುವದಿಲ್ಲ. ಆಗ ನಾವು ಬ್ರಾಹ್ಮಣ, ವೈಶ್ಯ, ಶೂದ್ರ, ಅಂತ್ಯಜ, ಮ್ಲೇಂಛ–ಎಂಬ ಒಂದೊಂದು ಗುಂಪಿಗೆ ಸೇರಿರುವದಿಲ್ಲ; ಅಲ್ಲಿ ಆರ್ಯನು ಆರ್ಯನಲ್ಲ, ಅನಾರ್ಯನು ಅನಾರ್ಯನಲ್ಲ, ಮುಸಲ್ಮಾನನು ಮುಸಲ್ಮಾನನಲ್ಲ, ಕ್ರಿಸ್ತಿಯನ್ನನು ಕ್ರಿಸ್ತಿಯನ್ನನಲ್ಲ. ನಾವು ಯಾವ ಮತವನ್ನು ಅವಲಂಬಿಸಿ, ಯಾವ ಸಾಧನವನ್ನು ನಂಬಿಕೊಂಡವರಾಗಿರಲಿ, ಆ ಸಾಧನಗಳಿಂದ ನಮ್ಮಗಳಲ್ಲಿ ಎಷ್ಟೇ ಪ್ರಭೇದಗಳಿರಲಿ, ಬ್ರಹ್ಮಸಂಸ್ಪರ್ಶವು ನಮಗೆ ದೊರಕಿದಾಗ, ಅಥವಾ ಆ ಪರಮಾತ್ಮನ ಸ್ಥಿತಿಯಲ್ಲಿ ನಾವು ನಿಂತಿರುವಾಗ, ನಮ್ಮೆಲ್ಲರ ಅನುಭವವೂ ಒಂದೇ ಆಗಿಬಿಟ್ಟಿರುತ್ತದೆ. ಆಗ ನಾವು ನಾವಲ್ಲ, ಪರಮಾತ್ಮನ ಸ್ವರೂಪವು ನಮ್ಮ ನನ್ನತನವನ್ನು ತನ್ನಲ್ಲಿ ಅಡಗಿಸಿಕೊಂಡು ಬಿಟ್ಟಿರುತ್ತದೆ. ಯಾವ ಮಹನೀಯರು ಈ ದಿವ್ಯಾನುಭವವನ್ನು ಒಮ್ಮೆ ಹೊಂದಿರುವರೋ. ಅವರು ಅಂದಿನಿಂದ ತಮ್ಮ ಸುತ್ತಮುತ್ತಲಿರುವ ಸಕಲ ಪ್ರಾಣಿಗಳಲ್ಲಿಯೂ ಅದೇ ಪರಮಾತ್ಮನನ್ನು ಕಾಣುತ್ತಿರುವರು. ಅವರ ಮೂಲಕವಾಗಿ ಪರಮಾತ್ಮನೇ ತನ್ನ ಸಂಕಲ್ಪವನ್ನು ನೆರವೇರಿಸುತ್ತಿರುವನು. ವ್ಯವಹಾರದಲ್ಲಿಕೂಡ ಅವರು ಮಿಕ್ಕವರಿಗೆ ವ್ಯಕ್ತಿಗಳಂತೆ ಕಂಡರೂ ಅವರ ವ್ಯಕ್ತಿತ್ವವು ಅಳಿಸಿಹೋಗಿಬಿಟ್ಟಿರುತ್ತದೆ. ದೀಪದ ಬೆಳಕನ್ನು ಎಲ್ಲಾ ಕಡೆಯಲ್ಲಿಯೂ ಬೀರುವ ಗಾಜಿನ ಬುರುಡೆಯಂತೆ, ಅವರು ತಮ್ಮ ಒಳಗೆ ಅಭಿವ್ಯಕ್ತವಾದ ಪರಮಾತ್ಮನ ಪ್ರಕಾಶವನ್ನು ಸುತ್ತಲೂ ಬೀರುವ ಸಾಧನಮಾತ್ರವಾಗಿಬಿಟ್ಟಿರುತ್ತಾರೆ.

ಎಲ್ಲಿಯವರೆಗೆ ನಮಗೆ ಈ ಬ್ರಹ್ಮಸಂಸ್ಪರ್ಶವು ದೊರಕಿಲ್ಲವೋ ಅಲ್ಲಿಯವರೆಗೆ ನಮಗೆ ವ್ಯಕ್ತಿತ್ವವು ಇದ್ದುಕೊಂಡೇ ಇರುತ್ತದೆ. ಅಲ್ಲಿಯವರೆಗೆ ನಮಗೆ ವ್ಯವಹಾರದಲ್ಲಿ ಬೇವುಬೆಲ್ಲಗಳ ಸವಿಯು ಕಾಣಿಸುತ್ತಲೇ ಇರುವದು; ಅದರಿಂದ ನಮ್ಮ ವಾಙ್ಮನಃಕಾಯ ಗಳಲ್ಲಿ ಕಲ್ಮಷವೂ ಅಂಟಿಕೊಳ್ಳುತ್ತಲೇ ಇರುವದು. ಹೀಗಿರುವದರಿಂದ ನಾವು ಬರಿಯ ಸ್ವಪ್ರಯತ್ನದಿಂದಲೇ ನಮ್ಮ ವ್ಯಕ್ತಿತ್ವವನ್ನು ಕಳಚಿಕೊಳ್ಳುವದಾಗಲಿ ದ್ವಂದ್ವಗಳ ಪರಿಣಾಮವನ್ನು ತಪ್ಪಿಸಿಕೊಳ್ಳುವದಾಗಲಿ ಆಗಲಾರದು. ನಾವುಗಳು ಮಾಡಬಹುದಾ ದದ್ದೆಲ್ಲ ಇಷ್ಟೇ. ಪ್ರತಿದಿನವೂ ಗೊತ್ತಾದ ಕಾಲದಲ್ಲಿ ಏಕಾಂತದಲ್ಲಿ ಕುಳಿತುಕೊಂಡು ಭಗವಂತನನ್ನೇ ಶ್ರದ್ಧೆಯಿಂದಲೂ ತಾತ್ಪರ್ಯದಿಂದಲೂ ಭಜಿಸುವ ಪದ್ಧತಿಯನ್ನು ಇಟ್ಟುಕೊಳ್ಳಬೇಕು. 'ಪ್ರಭುವೆ, ನಿನ್ನಲ್ಲಿರುವ ನಿಜವಾದ ಕರುಣೆಯಿಂದ, ನಿನ್ನ ಪ್ರೇಮ ಪ್ರವಾಹಕ್ಕೆ ನಾನು ಅಡ್ಡಬರದಂತೆ, ನಿನ್ನ ಅಮೃತಪ್ರೇಮದ ಹೊನಲು ನನ್ನ ಮೂಲಕವಾಗಿ ನಿರರ್ಗಳವಾಗಿ ಹರಿಯುತ್ತಾ ಮಿಕ್ಕವರನ್ನೂ ತನ್ನ ಸೆಳೆತಕ್ಕೆ ಸಿಕ್ಕಿಸಿಕೊಳ್ಳುವಂತೆ, ಅನುಗ್ರಹಿಸು' ಎಂದು ಎಡೆಬಿಡದೆ ಪ್ರಾರ್ಥಿಸುತ್ತಿರಬೇಕು.

# 22. ಧ್ಯಾನಯೋಗ

* ಭಗವಂತನನ್ನು ಧ್ಯಾನಿಸುವದೆಂಬುದೊಂದು **ಯೋಗ**ವು. ಯೋಗವೆಂದರೆ ಸಿದ್ಧನಾಗುವದು ಎಂದು ಅರ್ಥವಾಗುತ್ತದೆ. ಭಗವಂತನನ್ನು ಯಾವನು ಧ್ಯಾನಿಸುವನೋ ಅವನು ಭಗವಂತನನ್ನು ಕಾಣುವದಕ್ಕೆ, ಆತನ ಪ್ರೇಮದ ಝುರಿಯನ್ನು ಆನಂದದಿಂದ ಅನುಭವಿಸುವದಕ್ಕೆ, ಸಿದ್ಧನಾದಂತೆ. ಯಾವದಾದರೊಂದು ಗೃಹಪ್ರವೇಶಕ್ಕೆ ಅಥವಾ ಯಾವದಾದ ರೊಂದು ಮಿಷ್ಟಾನ್ನವನ್ನು ಉಂಡು ನಲಿಯುವದಕ್ಕೆ, ಕಾಣುವದಕ್ಕೆ, ಆತನಲ್ಲಿ ಬೆರೆತು ಸುಖವನ್ನು ಅನುಭವಿಸುವದಕ್ಕೆ, ಧ್ಯಾನಯೋಗಿಯು ಸನ್ನದ್ಧನಾಗುತ್ತಿರುವನು. ಆದ್ದರಿಂದ ಧ್ಯಾನವನ್ನು ಈ ಅರ್ಥದಲ್ಲಿ ಯೋಗವೆಂದು ಕರೆಯುವದು ಯುಕ್ತವಾಗಿಯೇ ಇದೆ.

ಯೋಗವೆಂಬ ಶಬ್ದಕ್ಕೆ ಉಪಾಯವೆಂದೂ ಒಂದು ಅರ್ಥವಿದೆ. ಈ ಅರ್ಥದಲ್ಲಿಯೂ ಧ್ಯಾನವು ಒಂದು ಉತ್ತಮಯೋಗವಾಗಿರುತ್ತದೆ. ಯಾವ ಉಪಾಯವನ್ನು ಅನುಸರಿಸಿದರೆ ನಮ್ಮ ಗುರಿಯನ್ನು ಬೇಗ ಮುಟ್ಟಬಹುದೋ ಅದೇ ಉತ್ತಮವಾದ ಉಪಾಯವೆಂಬುದನ್ನು ನಾವೆಲ್ಲರೂ ಒಪ್ಪಿರುತ್ತೇವೆ. ಇಳಿಜಾರಾಗಿರುವ ಬಂಡೆಯಮೇಲೆ ಕುಳಿತವನು ಕೆಳಕ್ಕೆ ಬಲುಬೇಗನೆ ಜಾರಿ ಇಳಿಯಬಹುದು; ಆದರೆ ಏರುದಿಟ್ಟಾಗಿರುವ ಬೆಟ್ಟವನ್ನು ಹತ್ತುವದು ಬಲು ಕಷ್ಟ. ನದಿಯ ಹೊನಲು ಎತ್ತಕಡೆಗೆ ಹರಿಯುತ್ತಿರುವದೋ ಅತ್ತಲೇ ಈಜಿಕೊಂಡು ಹೋಗುವದು

* ಸಂಪುಟ 17, ಸಂಚಿಕೆ 10, ಜೂನ್ 1948, ಪುಟ 217–221

ಬಹು ಸುಲಭ; ಆದರೆ ನದಿಯ ಪ್ರವಾಹಕ್ಕೆ ಇದಿರಾಗಿ ಈಜುವದು ಬಹಳ ಕಷ್ಟ. ಅಲ್ಲವೆ? ಇದರಂತೆ ಭಗವಂತನ ಧ್ಯಾನವೆಂಬುದು ಸುಖಕ್ಕೆ ಹೆಚ್ಚಿನ ಉಪಾಯವು; ವಿಷಯಗಳ ಧ್ಯಾನವೆಂಬುದು ದುಃಖಕ್ಕೇ ಸಾಧನವು. ಇಳಿಜಾರು ಬಂಡೆಯಿಂದ ಜಾರುವವನಿಗೂ ನದಿಯ ಸೆಳೆತಕ್ಕೆ ಅನುಗುಣವಾಗಿ ಈಜುವವನಿಗೂ ಪ್ರಕೃತಿಯ ಶಕ್ತಿಯೂ ಸಹಾಯಕವಾಗಿರುವಂತೆ ಭಗವಂತನನ್ನು ಧ್ಯಾನಿಸುವವನಿಗೆ ಭಗವಂತನ ಪ್ರೇಮದ ಸೆಳವೂ ಸಹಾಯಕವಾಗಿ ಅವನನ್ನು ವೇಗದಿಂದ ಭಗವಂತನ ಆನಂದಧಾಮಕ್ಕೆ ಕೊಚ್ಚಿಕೊಂಡು ಹೋಗುತ್ತಿರುವದು. ವಿಷಯಗಳ ಕಡೆಗೆ ಧಾವಿಸುವ ಮನಸ್ಸಿನವನು ನದಿಯ ಪ್ರವಾಹಕ್ಕೆ ಇದಿರಾಗಿ ಈಜುವವನಂತೆ ಬಹು ಶ್ರಮದಿಂದ ಸುಖದ ತುಂತುರುಗಳನ್ನು ಆರಿಸಿಕೊಂಡು ಸವಿಯಬೇಕಾಗಿರುವದು. ಆದ್ದರಿಂದ ಧ್ಯಾನವು ಪರಮಸುಖಕ್ಕೆ ಉತ್ತಮವಾದ ಉಪಾಯವಾಗಿದೆ. ಈ ಅರ್ಥದಲ್ಲಿಯೂ ಅದು ಯೋಗವಾಗಿರುತ್ತದೆ.

ರೂಢಿಯಲ್ಲಿ ಯೋಗವೆಂಬ ಮಾತಿಗೆ ಯಾವದೋ ಒಂದು ಕಷ್ಟವಾದ ಸಾಧನವೆಂಬ ಅರ್ಥವಾಗುತ್ತದೆ. ಅದರಿಂದಾಗುವ ಪ್ರಯೋಜನದ ವಿಷಯದಲ್ಲಿ ಏನೋ ಒಂದು ಅಭೇದ್ಯರಹಸ್ಯವು ಸೇರಿಕೊಂಡಿರುವದೆಂದು ಜನರಿಗೆ ಭಾಸವಾಗುತ್ತಿರುತ್ತದೆ. ಶರೀರವನ್ನು ವಶದಲ್ಲಿಟ್ಟುಕೊಳ್ಳುವದು, ಬಗೆಬಗೆಯ ಆಸನಗಳನ್ನು ಹಾಕುವದು, ಶರೀರದಲ್ಲಿರುವ ಮಾಂಸ ಖಂಡಗಳನ್ನು ವಶಪಡಿಸಿಕೊಳ್ಳುವದು–ಇಂಥ ಸಾಧನವನ್ನೇ ಜನರು ಯೋಗವೆಂದು ಕರೆಯುತ್ತಾರೆ. ಈ ಯೋಗದಿಂದ ಆರೋಗ್ಯವೂ ನೆಲವನ್ನು ಬಿಟ್ಟು ಅಂತರಾಳದಲ್ಲಿ ನಿಲ್ಲುವ ಸಿದ್ಧಿಯೂ ಇಂದ್ರಿಯಗಳಿಗೆ ಅಸಾಧಾರಣವಾದ ಪಾಟವವಿಶೇಷವೂ ಉಂಟಾಗುವದೆಂದು ಹೇಳಿಕೊಳ್ಳುತ್ತಾರೆ. ಆದರೆ ಈ ಬಗೆಯ ಯೋಗದ ವಿಧಾನವನ್ನು ಎಲ್ಲರೂ ಅನುಭವಕ್ಕೆ ತಂದುಕೊಳ್ಳುವದು ಸುಲಭಸಾಧ್ಯವಲ್ಲ. ಎಲ್ಲಿಯೋ ಕೆಲವರು ಈ ಭಾಗದಲ್ಲಿ ತಮಗಿರುವ ಅದ್ಭುತಶಕ್ತಿಯನ್ನು ಒಂದಿಷ್ಟು ಪ್ರದರ್ಶನಮಾಡಿ ಜನರನ್ನು ಬೆರಗುಮಾಡಬಹುದು; ಆದರೆ ಜನರೆಲ್ಲರೂ ಪ್ರಯತ್ನಪಟ್ಟರೂ ಈ ಯೋಗವನ್ನು ಅಭ್ಯಾಸಮಾಡುವದಾಗಲಿ ಅದರ ಪ್ರಯೋಜನವನ್ನು ಹೊಂದುವದಾಗಲಿ ಸಾಧ್ಯವಿಲ್ಲ. ಸರಿಯಾದ ಗುರುವಿನ ಉಪದೇಶವೂ ಶರೀರದಲ್ಲಿ ದಾರ್ಢ್ಯವೂ ಉತ್ತಮವಾದ ಸಂನಿವೇಶವೂ ಲೌಕಿಕ ಸಹಾಯಸಂಪತ್ತೂ ಇಲ್ಲದವರು ಕುತೂಹಲದಿಂದ ಅಭ್ಯಾಸಮಾಡಿದರೆ ಕೆಲವು ಅಪಾಯಗಳೂ ಒದಗುವ ಸಂಭವವೂ ಈ ಯೋಗದಲ್ಲಿದೆ.

ಆದರೆ ಧ್ಯಾನಯೋಗದ ವಿಷಯದಲ್ಲಿ ಹೀಗಿಲ್ಲ. ಮನುಷ್ಯರೆಲ್ಲರೂ ಸ್ವಭಾವದಿಂದಲೇ ಯಾವದಾದರೊಂದು ವಸ್ತುವಿನ ಚಿಂತನೆಯನ್ನು ಮಾಡುತ್ತಲೇ ಇರುವರು. ಚಿಂತನೆಯನ್ನೇನೂ ಅವರಿಗೆ ಹೊಸದಾಗಿ ಹೇಳಿಕೊಡಬೇಕಾದದ್ದಿರುವದಿಲ್ಲ. ಧ್ಯಾನಕ್ಕೆ ತಕ್ಕ ಸನ್ನಿವೇಶವು ಹೊಸದಾಗಿ ಏರ್ಪಡಬೇಕು, ಇಲ್ಲದಿದ್ದರೆ ಧ್ಯಾನವು ಸಾಗುವದಿಲ್ಲ, ಅಥವಾ ಧ್ಯಾನದಿಂದ ಅಪಾಯವುಂಟು–

ಎಂಬುದಿಲ್ಲ. ಅಧ್ಯಾತ್ಮ ಶಾಸ್ತ್ರದಲ್ಲಿ ಹೇಳಿರುವ ಧ್ಯಾನವಿಷಯವು ಎಲ್ಲಿಯೋ ಇರುವ ಅಥವಾ ಯಾವಾಗಲೋ ಕೆಲವರಿಗೆ ಮಾತ್ರ ದೊರಕಬಹುದಾದ ದುರ್ಲಭವಸ್ತುವಲ್ಲ. ಆ ವಿಷಯವೆಂದರೆ ನಮ್ಮಗಳೆಲ್ಲರಿಗೂ ಆತ್ಮನಾಗಿರುವ, ಈಗಲೇ ಇಲ್ಲಿಯೇ ಇದ್ದುಕೊಂಡಿರುವ ತತ್ತ್ವವು. 'ಭಗವಂತನು' ಕೃತಯುಗದಲ್ಲಿದ್ದನು, ಕಲಿಯುಗದಲ್ಲಿಲ್ಲ; ಸದ್ಯಕ್ಕೆ ದೊರೆಯುವಂತಿಲ್ಲ, ಬಹುದಿನಗಳು ಹುಡುಕಿದರೆ ಸಿಕ್ಕಬಹುದಾದವನು' ಎಂದು ಯಾರೊಬ್ಬರೂ ಗೊಣಗುಟ್ಟುವವಹಾಗಿಲ್ಲ. ಭಗವತ್ಪ್ರಾಪ್ತಿಗೆ ಸುಮುಹೂರ್ತವು ದೊರಕಬೇಕೆಂಬುದಿಲ್ಲ. ಭಗವಂತನನ್ನು ಈಗಲೇ ಧ್ಯಾನಿಸುವದಕ್ಕೆ ಮೊದಲು ಮಾಡಿರಿ. ಇದೇ ಸುಲಗ್ನವು, ಇದೇ ಸುದಿನವು, ಈಗಲೇ ಚಂದ್ರತಾಲಾಬಲಗಳಿರುವವು; ಎಲ್ಲಾ ವಿದ್ಯೆಯ ಬಲವೂ ಎಲ್ಲಾ ದೈವಬಲವೂ ಈಗಲೇ ಒದಗಿಬಿಡುವವು.

ನಮ್ಮಗಳ ಮನಸ್ಸಿನಲ್ಲಿ ಒಂದು ಬಗೆಯ ದೌರ್ಬಲ್ಯವಿರುತ್ತದೆ. 'ಈಗ ನನಗೆ ಬಹಳ ಕಷ್ಟಕಾಲವಾಗಿರುತ್ತದೆ, ಕೆಲವುವರ್ಷಗಳಮೇಲೆ ಗ್ರಹಚಾರವು ಹರಿಯಬಹುದು. ಈ ಸ್ಥಳದಲ್ಲಿ ನನಗೆ ತಕ್ಕ ಅನುಕೂಲ್ಯಗಳಿಲ್ಲ, ಯಾವದಾದರೊಂದು ಉತ್ತಮ ಪ್ರದೇಶಕ್ಕೆ ಹೋದರೆ ಒಳ್ಳೆಯ ಸಂನಿವೇಶವು ಏರ್ಪಟ್ಟೀತು' ಎಂದು ಭಾವಿಸುವದು ನಮ್ಮ ಸ್ವಭಾವವಾಗಿಬಿಟ್ಟಿರುತ್ತದೆ. ಮೊಟ್ಟಮೊದಲು ಈ ಭಾವನೆಯನ್ನು ತಲೆಕೆಳಗುಮಾಡಬೇಕು. 'ಈಗಲೇ ನನಗೆ ಸಕಾಲವು, ಇಲ್ಲಿಯೇ ನನ್ನ ಪ್ರಯತ್ನವು ಸಫಲವಾಗುವ ಅವಕಾಶವಿದೆ. ನಾನು ಯಾವಾಗಲೂ ಭಗವಂತನವನೇ; ಭಗವಂತನೇ ನಮಗೆಲ್ಲ ಮೂಲವು, ಭಗವಂತನೇ ನಮಗೆಲ್ಲ ಆಧಾರವು, ಭಗವಂತನೇ ನಾವೆಲ್ಲರೂ ಹೋಗಿ ಮುಟ್ಟಬೇಕಾದ ಮಜಲು. ಭಗವಂತನಿಗೂ ನನಗೂ ಇರುವ ಈ ಅತ್ಯಂತ ನಿಕಟವಾದ ಸಂಬಂಧವು ಅಂದು ಇದ್ದದ್ದಲ್ಲ, ಮುಂದೆ ಆಗಬೇಕಾದದ್ದಲ್ಲ. ಇಂದು ಇಲ್ಲಿಯೇ ಇರುವಂಥಾದ್ದು' ಎಂಬ ಭಾವನೆಯನ್ನು ಬಲಪಡಿಸಿಕೊಳ್ಳಬೇಕು. ಭಗವಂತನ ಚಿಂತನೆಯಿರುವದು, ಇಲ್ಲದಿರುವದು–ಇವುಗಳಿಂದಲೇ ನಮಗೆ ಪುರುಷಾರ್ಥವು, ಅಥವಾ ಪುರುಷಾರ್ಥವು ದೊರೆಯುವದೇ ಹೊರತು ಪುರುಷಾರ್ಥವು ಎಲ್ಲಿಯೋ ಯಾವಾಗಲೋ ದೊರಕುವದಲ್ಲ, ಪುರುಷಾರ್ಥವು ನಮ್ಮನ್ನು ಎಂದೆಂದಿಗೂ ಗೋಳುಗುಟ್ಟಿಸುತ್ತಿರುವದು ಸಾಧ್ಯವೂ ಇಲ್ಲ.

ಭಗವಂತನಿಂದ ಇತ್ತ ಸರಿದಿರುವದೇ, ನಮ್ಮ ಅಪುರುಷಾರ್ಥಕ್ಕೆಲ್ಲ ಕಾರಣವು. ಈ ಲೋಕವು ನಮಗೆ ದುಃಖಮಯವಾಗಿ ಕಾಣುತ್ತದೆ. ಇಲ್ಲಿರುವ ಸುಖಲವವಾದರೂ ಅನಿತ್ಯವಾಗಿ, ಈಗ ತೋರಿ ಇನ್ನೊಂದು ಘಳಿಗೆಗೆ ಹಾರಿಹೋಗುವದಾಗಿ, ತೋರುತ್ತಿರುತ್ತದೆ. ಆದರೆ ನಿಜವೇನೆಂದರೆ ನಮ್ಮ ಮನಸ್ಸು ಭಗವಂತನ ಸಂಬಂಧವನ್ನು ಕಡಿದುಹಾಕಿ ಕೊಂಡಿರುವದೇ ನಮ್ಮ ದುಃಖಕ್ಕೆಲ್ಲ ಕಾರಣವು. ಈ ದುಃಖವು ಸ್ವಯಂಕೃತವಾದ ಅಪರಾಧವಾಗಿರುತ್ತದೆ. ಆದರೆ ಇದು ಪರಮಾರ್ಥವಲ್ಲ. ಏಕೆಂದರೆ ಯಾವಾಗ ಎಲ್ಲಿ

ನಾವು ಭಗವಂತನ ಚಿಂತೆಗೆ ಮನಸ್ಸನ್ನು ಹತ್ತಿಸಿಕೊಂಡರೆ ಆ ಕೂಡಲೆ, ಅಲ್ಲಿಯೇ, ನಮಗೆ ಸುಖವು ಸೂರೆಯಾಗುವದು, ದುಃಖವು ಕಣ್ಮರೆಯಾಗುವದು. 'ಅನಿತ್ಯಮಸುಖಂ ಲೋಕಮಿಮಂ ಪ್ರಾಪ್ಯ ಭಜಸ್ವ ಮಾಮ್' ಅನಿತ್ಯವಾದ, ಅಸುಖವಾದ ಈ ಲೋಕವನ್ನು ಪಡೆದು ಕೊಂಡಿರುವೆಯಷ್ಟೆ; ಕೂಡಲೆ ನನ್ನನ್ನು ಭಜಿಸು, ನಿತ್ಯಸುಖವು ನಿನ್ನದೇ ಆಗಿರುವದೆಂಬುದು ನಿನಗೆ ಮನದಟ್ಟಾಗುವದು–ಎಂದು ಭಗವಂತನು ವಾಗ್ದಾನ ಮಾಡಿರುತ್ತಾನೆ.

ಒಂದು ನಲ್ಲಿಯಿಂದ ನೀರು ಸುರಿಯುತ್ತಲೇ ಇತ್ತು; ಅದರ ಕೆಳಗೆ ಒಂದು ನೀರಿನ ಹರವಿಯೂ ಇತ್ತು. ಆದರೆ ಹರವಿಯ ಬಾಯಿ ಇತ್ತಕಡೆಗೆ ತಿರುಗಿತ್ತು. ಆದ್ದರಿಂದ ನೀರು ಆ ಹರವಿಯ ಮೇಲೆ ಸುರಿದು ಎಲ್ಲಾ ಕಡೆಗೂ ಛಲ್ಲೆಂದು ಸಿಡಿಯುತ್ತಿತ್ತು. ಹೀಗಿದ್ದರೆ ಆ ಹರವಿಯು ತುಂಬಿಕೊಳ್ಳುವದೆಂತು? ನಮ್ಮ ಮನಸ್ಸೆಂಬ ಗಡಿಗೆಯು ಭಗವಂತನ ಪ್ರೇಮವೆಂಬ ನಲ್ಲಿಯ ನೀರಿಗೆ ಹಾಗೆಯೇ ವಿಮುಖವಾಗಿರುತ್ತದೆ. ಭಗವಂತನ ಪ್ರೇಮವು ಧಾರಾಕಾರವಾಗಿ ನಮ್ಮ ಮೇಲೆ ಸುರಿಯುತ್ತಲೇ ಇರುತ್ತದೆ. ಆದರೆ ನಮ್ಮ ಮನಸ್ಸು ವಿಷಯಗಳ ಕಡೆಗೆ ಮುಖವನ್ನು ಮಾಡಿಕೊಂಡಿರುತ್ತದೆ; ಆದ್ದರಿಂದ ಭಗವಂತನ ಪ್ರೇಮದ ರಸವು ಅದರೊಳಕ್ಕೆ ಹಿಡಿಸುವ ಹಾಗಿಲ್ಲ. ನಾವು ಎಷ್ಟುದಿನ ಹೀಗೆ ವಿಮುಖರಾಗಿದ್ದರೆ ಭಗವಂತನ ಪ್ರೇಮದ ರಸವು ನಮ್ಮ ಅಂತಃಕರಣದೊಳಗೆ ತುಂಬಿಕೊಂಡೀತು? ನಿಮ್ಮ ಮನಸ್ಸಿನ ಗಡಿಗೆಯ ಮುಖವನ್ನು ಭಗವಂತನ ಹೃದಯದ ಉಕ್ಕಂದವಾದ ಪ್ರೇಮಧಾರೆಗೆ ಅನುಗುಣವಾಗಿ ತಿರುಗಿಸಿರಿ; ಕೂಡಲೆ ಆ ಪ್ರೇಮಾಮೃತವು ನಿಮ್ಮೊಳಗೆಲ್ಲ ತುಂಬಿತುಳುಕುವದು. ನಿಮಗೆ ನಿತ್ಯಾನಂದವೇನೆಂಬುದರ ಅರಿವು ಉಂಟಾಗುವದು!

ಭಗವಂತನು ಎಲ್ಲೆಲ್ಲಿಯೂ ಇರುತ್ತಾನೆಂದು ಶಾಸ್ತ್ರಗಳು ಸಾರುತ್ತಿರುತ್ತವೆ. ಆದರೆ ಆತನ ಸತ್ತೆಯು ಜಗತ್ತಿನಲ್ಲಿ ಅವ್ಯಕ್ತವಾಗಿರುತ್ತದೆ; ಅದು ವ್ಯಕ್ತವಾಗುವವರೆಗೆ ನಾವು ಹೊರಗಿನ ವಿಷಯಗಳಿಂದ ಅಥವಾ ಜೀವರುಗಳಿಂದ ನಮಗೆ ಸುಖವಾಗುವದೆಂದು ನೆಚ್ಚಿಕೊಂಡಿರುವದು ತಪ್ಪು. ಭೂಮಿಯೊಳಗೆ ನೀರಿನ ಸೆಲೆ ಹರಿಯುತ್ತಲೇ ಇದ್ದರೂ ಅದು ಮೇಲುಗಡೆಯಲ್ಲಿ ಕಾಣಿಸಿಕೊಂಡಲ್ಲದೆ ನಮಗೆ ಉಪಯೋಗಕ್ಕೆ ಬರುವಹಾಗಿಲ್ಲ. ಅದು ಎಲ್ಲಿ ಸುಲಭವಾಗಿ ಮೇಲುಗಡೆ ಕಾಣಿಸಿಕೊಳ್ಳಬಹುದೋ ಅಲ್ಲಿಯೇ ನಾವು ಮೊದಲು ತೋಡಬೇಕು. ಅಲ್ಲವೆ? ಇದರಂತೆ ಸರ್ವವ್ಯಾಪಕಭಗವಂತನನ್ನು ನಮ್ಮ ಅಂತಃಕರಣದಲ್ಲಿಯೇ ಮೊದಲು ಕಂಡುಕೊಳ್ಳಬೇಕು. ಅಂತಃಕರಣಕ್ಕೆ ಮೇಲೆಹತ್ತಿ ಕೊಂಡಿರುವ ವಿಷಯವಾಸನೆಯ ಮೆತ್ತಿಗೆಯನ್ನು ತೆಗೆದುಹಾಕಿ ಒಳಒಳಕ್ಕೆ ಧ್ಯಾನವೆಂಬ ಗುದ್ದಲಿಯಿಂದ ಅಗೆಯುತ್ತಾ ಹೋಗಬೇಕು. ಹಾಗಾದರೆ ನಮ್ಮೊಳಗೇ ಆತನನ್ನು ಕಾಣಬಹುದು. ಆತನ ಪ್ರೇಮದ ರಸವು ಮೇಲಕ್ಕೆ ಉಕ್ಕೇರುವದು. ಆ ಬಳಿಕ ಅದೇ ರಸವೇ ಎಲ್ಲೆಲ್ಲಿಯೂ ವ್ಯಾಪಿಸಿಕೊಂಡಿರುವದೆಂಬುದನ್ನು ನಾವು ಮನಗಾಣಬಹುದು.

ಈ ದೃಷ್ಟಿಯಿಂದ ನೋಡಿದಾಗ ನಮ್ಮ ಜೀವನದ ಸ್ಥಿತಿಯನ್ನು ನಾವು ಹೊರಗಿನ ಸನ್ನಿವೇಶದ ಮಾರ್ಪಾಡಿನಿಂದ ಸರಿಪಡಿಸಿಕೊಳ್ಳುವದಕ್ಕೆ ಯತ್ನಿಸುವದು ಏಕೆ ಸಫಲ ವಾಗಲಾರದೆಂಬುದು ಸ್ಪಷ್ಟವಾಗುತ್ತದೆ. ನಮ್ಮ ದುಃಖಗಳು ಹೇಗೋ ಮಾಂತ್ರಿಕ ಶಕ್ತಿಯಿಂದ ಹೊರಗಿನ ನಿಮಿತ್ತಗಳಿಂದಲೇ ಸರಿಯಾಗಬಹುದೆಂದು ನಿರೀಕ್ಷಿಸುವದು ವ್ಯರ್ಥ. ಏಕೆಂದರೆ ನಮ್ಮ ಉದ್ಧಾರವು ನಮ್ಮೊಳಗಿನಿಂದಲೇ ಆಗಬೇಕಾಗಿರುತ್ತದೆ; ನಮ್ಮ ಅಂತಃಕರಣವು ಬ್ರಹ್ಮಸಂಸ್ಪರ್ಶವನ್ನು ಮಾಡಿಕೊಳ್ಳುವದರಿಂದಲೇ ಆಗಬೇಕಾಗಿರುತ್ತದೆ. ಬಹು ಜನರು ತಮ್ಮ ಕಷ್ಟವೆಲ್ಲ ಪರಿಹಾರವಾಗುವಂತೆ ಅನುಗ್ರಹಿಸಬೇಕೆಂದು ಕಂಡಕಂಡ ದೇವತೆಗಳಿಗೆ ಮೊರೆಯಿಡುವರು, ಕಂಡಕಂಡವರ ಕಾಲಿಗೆ ಬೀಳುವರು. ಆದರೆ ಯಾವದಾದರೂ ಬಾಹ್ಯನಿಮಿತ್ತದಿಂದ ಪರಿಹಾರವಾಗುವ ದುಃಖವು ಮತ್ತೊಂದು ಬಾಹ್ಯನಿಮಿತ್ತದಿಂದ ತಲೆದೋರಬಹುದೆಂಬುದನ್ನೂ ಹೊರಗಿನ ನೆರವನ್ನು ಕಾಯುತ್ತಾ ಕೂರುವವರು ಹೊರಗಿನ ದುರ್ನಿಮಿತ್ತಗಳಿಗೆ ಅಂಜುತ್ತಲೂ ಇರಬೇಕಾಗುವದೆಂಬುದನ್ನೂ ಅದೇಕೋ, ಅವರ ಮನಸ್ಸು ಅರಿತುಕೊಳ್ಳಲಾರದೆ ಇರುವದು.

ಆದ್ದರಿಂದ ನಮ್ಮ ಕಷ್ಟಪರಿಹಾರಕ್ಕಾಗಲಿ ನಮ್ಮ ಕಾಮಪರಿಪೂರ್ತಿಗಾಗಲಿ ಹೊರಗಿನ ಸಹಾಯವನ್ನು ಕೋರುತ್ತಿರುವದು ಎಂದಿಗೂ ಸರಿಯಲ್ಲ. ಪರಮೇಶ್ವರನು ನಮ್ಮ ಇಷ್ಟಾರ್ಥಗಳನ್ನು ನೆರವೇರಿಸುವದು ನಿಜ. ಆದರೆ ಆತನ ಅನುಗ್ರಹವು ನಮ್ಮ ಅಂತಃಕರಣದ ಮಾರ್ಪಾಡಿನಿಂದಲೇ ಆಗಬೇಕಾಗಿರುತ್ತದೆ. ಈ ಅಂತಃಕರಣದ ಮಾರ್ಪಾಟು ಹೊರಗಿನ ಚಿಂತೆಯನ್ನೆಲ್ಲ ಬಿಟ್ಟು ಧ್ಯಾನಯೋಗವೆಂಬ ಉಪಾಯದಿಂದ ನಮ್ಮ ಆತ್ಮನಾದ ಆ ಭಗವಂತನ ಮಡಿಲಿಗೆ ಬಿದ್ದು ಬದುಕುವದ-ರಿಂದಲೇ ಆಗಬೇಕಾಗಿರುತ್ತದೆ. ಆಗ ನಮಗೆ ಹೊರಗಿನ ಸನ್ನಿವೇಶವು ಬದಲಾಯಿಸಬೇಕೆಂಬ ಇಚ್ಛೆಯೇ ಇರುವದಿಲ್ಲವಾದರೂ ಸರ್ವದಿಕ್ಕುಗಳೂ ನಮಗೆ ಸುಖಮಯವಾಗಿ ತೋರುವದಕ್ಕೆ ಮೊದಲಾಗುವವು.

# 23. ಆತ್ಮಚಿಂತನೆ

* ಮಾನವನ ಜೀವನದಲ್ಲಿ ಹಲವು ದೋಷಗಳು ಕಾಣಬರುತ್ತಿರುವವು; ಆದರೂ ನಮ್ಮಗಳೆಲ್ಲರ ಆತ್ಮನು ನಿರ್ದುಷ್ಟನೆಂದು ಶಾಸ್ತ್ರಗಳು ಮೊಳಗುತ್ತಿರುವವು, ಗುರುಗಳೂ ಉಪದೇಶಿಸುತ್ತಿರುವರು. ಹಸಿವು, ಬಾಯಾರಿಕೆ, ಬೇನೆ, ಮುಪ್ಪು, ಸಾವು–ಈ ದೋಷಗಳು ಪ್ರಾಣಿಮಾತ್ರಕ್ಕೆ ಅಂಟಿಕೊಂಡಿರುವಂತೆ ತೋರುತ್ತಿರುವವು. ಆದರೂ ನಮ್ಮ ಆತ್ಮನು ಹಸಿವಿಲ್ಲದ, ಬಾಯಾರಿಕೆಯಿಲ್ಲದ, ಬೇನೆಯಿಲ್ಲದ, ಮುಪ್ಪಿಲ್ಲದ, ಸಾವಿಲ್ಲದ ಅಮೃತಸ್ವರೂಪನು ಎಂಬ ಆನಂದದ ಒಸಗೆಯು ಋಷಿಗಳ ವಾಕ್ಯದಿಂದ ನಮಗೆ ಬರುತ್ತಲೇ ಇರುವದು. ದುಃಖವು ನಮ್ಮನ್ನು ತನ್ನ ವಶದಲ್ಲಿಟ್ಟುಕೊಂಡಿರುವಾಗಲೇ ಆನಂದವೇ ನಮ್ಮ ಜೀವನದ ತಿರುಳೆಂದು ಶ್ರುತಿಯು ಸಾರುತ್ತಿದೆ. 'ಆನಂದದಿಂದಲೇ ಈ ಜೀವರುಗಳೆಲ್ಲರೂ ಹುಟ್ಟಿರುವರು, ಆನಂದದಿಂದಲೇ ಜೀವಿಸಿಕೊಂಡಿರುವರು, ಆನಂದವನ್ನೇ ಕೊನೆಗೆ ಸೇರುವರು' ಎಂಬುದು ಶ್ರುತಿಯ ಡಂಗುರ!

ಮೇಲುಮೇಲೆ ನೋಡಿದರೆ ಹಸಿವನ್ನು ಅಡಗಿಸುವದು ಕಡುಕಷ್ಟವಾಗಿರುತ್ತದೆ, ಚಳಿಸೆಕೆಗಳ ಕಾಟದಿಂದ ತಪ್ಪಿಸಿಕೊಳ್ಳುವದು ಆಗದಮಾತೆಂದು ತೋರುತ್ತದೆ. ಎಷ್ಟು ಧಾನ್ಯವನ್ನು ಬೆಳೆದರೂ ಎಷ್ಟು ಅನ್ನಸತ್ರಗಳನ್ನು ಇಡಿಸಿದರೂ ಎಷ್ಟು ಸಂತರ್ಪಣೆಗಳನ್ನು ಏರ್ಪಡಿಸಿದರೂ ಮನುಷ್ಯನ ಹೊಟ್ಟೆಯು 'ಹಸಿವು!' ಎಂದು ಕೂಗುವದನ್ನು ನಿಲ್ಲಿಸುವ ಹಾಗೆ ಕಾಣುವದಿಲ್ಲ! ಸಾರ್ವತ್ರಿಕ ಕ್ಷಾಮವು ಬಂದಿರುವ ಈ ಕಾಲದಲ್ಲಂತೂ ಹಸಿವಿನ ದೇವತೆಯು ಜೀವರುಗಳನ್ನು ತಂಡತಂಡವಾಗಿ ಬಲಿ ತೆಗೆದುಕೊಳ್ಳುತ್ತಿರುವಂತೆ ಕಾಣುತ್ತಿದೆ. ಇದರಂತೆಯೇ ಎಷ್ಟು ಮಳೆ ಹುಯ್ದರೂ, ಎಷ್ಟು ಬಾವಿಕೆರೆಕುಂಟೆಗಳನ್ನು ತೆಗೆಸಿದರೂ, ಎಷ್ಟು ಅರವಟ್ಟಿಗೆಗಳನ್ನು ಇಡಿಸಿದರೂ, ಜೀವನ ನೀರಡಿಕೆಯು ತಪ್ಪುವಂತಿಲ್ಲ. 'ಬಾಯಾರಿದೆ, ಗಂಟಲು ಒಣಗಿದೆ, ನೀರು, ನೀರು!' ಎಂದು ಮಾನವನು ಪರಿತಪಿಸುತ್ತಿದಾನೆ, ಪ್ರಾಣಿಗಳು ನೀರಿಗಾಗಿ ಹರಿದಾಡುತ್ತಿವೆ! ಮೈಗೆ ಸಾಕಾದಷ್ಟು ಬಟ್ಟೆಬರೆಗಳು ದೊರೆಯದ ಈ ಕಾಲದಲ್ಲಿ, ಚಳಿಸೆಕೆಗಳ ಉಪಟಳವೂ ದಿನದಿನಕ್ಕೆ ಹೆಚ್ಚುತ್ತಿದೆ. ಆದರ ನಮ್ಮಗಳೆಲ್ಲರ ಆತ್ಮನು ಹಸಿವು ಬಾಯಾರಿಕೆಗಳನ್ನು ಎಂದೆಂದಿಗೂ ದಾಟಿದವನು, ಶೀತೋಷ್ಣಗಳ ಸೋಂಕು ಎಂದೆಂದಿಗೂ ಇಲ್ಲದವನು ಎಂದು ಅಧ್ಯಾತ್ಮಶಾಸ್ತ್ರಗಳು ಉಗ್ಗಡಿಸುತ್ತಿರುವವು! ಜನರ ಆರೋಗ್ಯವು ದಿನದಿನಕ್ಕೂ ಕೆಡುತ್ತಿದೆ. ಚಿಕಿತ್ಸಾಲಯಗಳು ಹೆಚ್ಚಿದಂತೆಲ್ಲ, ಚಿಕಿತ್ಸಾಪದ್ಧತಿಗಳ ಸಂಖ್ಯೆಯು ಹೆಚ್ಚಿದಂತೆಲ್ಲ, ಮಾನವರ ರೋಗಗಳ ಸಂಖ್ಯೆಯೂ ಹೆಚ್ಚುತ್ತಿದೆ. ಮಾನವರಿಗೆ ಆರೋಗ್ಯವು ಸ್ವಭಾವವವೆನ್ನುವದಕ್ಕಿಂತ ಒಂದಲ್ಲದಿದ್ದರೊಂದು ರೋಗದಿಂದ ನರಳುತ್ತಿರುವದೇ

* ಸಂಪುಟ 17, ಸಂಚಿಕೆ 11, ಜುಲೈ 1948, ಪುಟ 241–246

ಮಾನವನ ಸ್ವಭಾವವು ಎಂದು ಹೇಳಬೇಕಾಗಿದೆ; ಹೀಗಿದ್ದರೂ ನಮ್ಮಗಳ ಆತ್ಮನು ನೀರೋಗನೆಂದೇ ಬಲ್ಲವರು ಉಪದೇಶಿಸುತ್ತಿದಾರೆ. ನಮಗೆಲ್ಲರಿಗೂ ಮುಪ್ಪುಸಾವುಗಳು ತಪ್ಪದೆ ಬರುವವೆಂಬುದು ಖಂಡಿತ. ಸನತ್ಕುಮಾರರೆಂದೂ ಚಿರಂಜೀವಿಗಳೆಂದೂ ಹೇಳಿಸಿಕೊಳ್ಳುವವರು ಪುರಾಣಗಳಲ್ಲಿರುವವೇ ಹೊರತು ನಮ್ಮ ಇದಿರಿಗೆ ಯಾರೂ ಕಾಣುತ್ತಲಿಲ್ಲ. ಆದರೂ ನಮ್ಮ ಆತ್ಮನು ಅಜರನು, ಅಮೃತನು–ಎಂದು ಶ್ರುತಿಯು ಸಾರುತ್ತಿದೆ!

ನಾವು ಹಸಿವು ಮುಂತಾದ ದೋಷಗಳಿಂದ ಮುಕ್ತರಾಗಿರುವೆವೆಂಬುದನ್ನು ಕೇಳಿದರೆ ನಮಗೆ ಹರ್ಷವಾಗುವದು. 'ಈ ಮಾತು ನಿಜವಾದರೆ ಎಷ್ಟು ಆನಂದದ ಸುದ್ದಿಯಿದು?' ಎಂದು ನಮಗೆಲ್ಲರಿಗೂ ಅನ್ನಿಸುತ್ತದೆ. ಆದರೆ ಅನುಭವದಲ್ಲಿ ಕಾಣುತ್ತಿರುವದನ್ನು ಅಲ್ಲಗಳೆಯುವದು ಹೇಗೆ? ನಮಗೆ ಹಸಿವುನೀರಡಿಕೆಗಳ ಕಾಟವು ಉತ್ಕಟವಾಗಿರುವಾಗ ನಾವು ಈ ದೋಷಗಳಿಂದ ನಿರ್ಮುಕ್ತರಾಗಿರುವೆವೆಂದು ಹೇಗೆ ನಂಬುವದು? ರೋಗದಲ್ಲಿ ಬಿದ್ದು ನರಳುತ್ತಿರುವಾಗ ನೀರೋಗರೆಂದುಕೊಳ್ಳುವದು ಸುಳ್ಳುಮಾತಾಗುವದಿಲ್ಲವೆ? ಮುಪ್ಪುಸಾವುಗಳು ಎಲ್ಲರನ್ನೂ ತಿಕ್ಕಿಮುಕ್ಕುತ್ತಿರುವಲ್ಲಿ ನಾವು ಅಜರರೆಂದೂ ಅಮರರೆಂದೂ ಕೊಚ್ಚಿಕೊಳ್ಳುವದು ಒಣಹೆಮ್ಮೆಯ ಮಾತಾಗುವದಿಲ್ಲವೆ? ಈ ದೋಷಗಳೆಲ್ಲ ನಮ್ಮಗಳಿಗೆ ಅಂಟಕೊಂಡಿರುವದೆಂಬುದು ಅಬಾಧಿತವಾಗಿರುವಾಗ ನಾವು ನಿತ್ಯಶುದ್ಧಬುದ್ಧಮುಕ್ತರೆಂಬ ಶಾಸ್ತ್ರವು ಹೇಗೆ ಪ್ರಮಾಣವಾದೀತು? ಈ ಶಂಕೆಯು ಮನಸ್ಸಿನಲ್ಲಿ ಜನರ ಮನಸ್ಸಿನಲ್ಲಿ ಆಗಾಗ ಉಂಟಾದರೆ ಆಶ್ಚರ್ಯವೇನೂ ಇಲ್ಲ.

ಆದರೆ ಈ ಶಂಕೆಯ ಅಲೆಯು ಏಳುವದು ನಮ್ಮ ಅಂತಃಕರಣದ ಮೇಲುಗಡೆಯಲ್ಲಿ ಮಾತ್ರ. ನಾವು ಹೊರಮುಖವಾಗಿದ್ದುಕೊಂಡು, ಹೊರಗಿನ ವಿಷಯಗಳಿಂದ ನಮಗೆ ಸಹಾಯವಾಗಬೇಕೆಂದು ಕೋರುತ್ತಿರುವವರೆಗೆ; 'ನಮಗೆ ಇದು ಬೇಕು, ಇದು ಬೇಡ; ಇದರಿಂದ ಈ ಗುಣವಾಗುವದು. ಇದರಿಂದ ಈ ಕೇಡಾಗುವದು' ಎಂದು ಬಗೆಯುತ್ತಿರುವವರೆಗೆ. ನಮ್ಮಲ್ಲಿ ಸಕಲ ದೋಷಗಳೂ ಕಾಣಿಸಿಕೊಳ್ಳುತ್ತಿರುವವರೆಗೇ ನಮ್ಮ ಜೀವನವು ದೋಷಮಯವಾಗಿ ತೋರುತ್ತಿರುವದು. ಆದರೆ ನಮ್ಮ ಅಂತಃಕರಣವು ಒಳಮುಖವಾದರೆ, ಹೊರಗಿನ ವಿಷಯಗಳಿಂದ ಸಹಾಯವನ್ನು ಕೋರುವದನ್ನು ನಿಲ್ಲಿಸಿ ನಮ್ಮ ಒಳಗಿನ ಆತ್ಮನ ಚಿಂತೆಯನ್ನು ಹಿಡಿದರೆ, ಕೂಡಲೆ ಅದರ ಅನುಭವವೇ ಬೇರೆಯಾಗಿಬಿಡುತ್ತದೆ. ದಾರಿಯನ್ನು ನಡೆದು ಬಳಲಿ ಬೆಂಡಾದವನಿಗೆ ಅಮೃತದ ಹೊಕ್ಕರಣೆಯ ರಸದ ಪಾನವು ದೊರಕಿದಂತೆ, ಬಹುಕಾಲದಿಂದ ದೊಡ್ಡ ರೋಗದಿಂದ ನರಳುತ್ತಿದ್ದವನಿಗೆ ಪೋಷಕವಾದ ದಿವ್ಯೌಷಧಸೇವನೆಯು ದೊರಕಿದಂತೆ, ಗುಟುಕು ಜೀವದಿಂದ ಯಮಪಾಶದಲ್ಲಿ ಸಿಕ್ಕಿಬಿದ್ದವನಂತಿರುವವನಿಗೆ, ಸಂಜೀವಿನಿಯ ಸೋಂಕಾದಂತೆ,

ಅಂತಃಕರಣವು ಆತ್ಮಧ್ಯಾನದಿಂದ ಹೊಸ ವೀರ್ಯವನ್ನೂ ಹೊಸ ಬಲವನ್ನೂ ಪಡೆದುಕೊಳ್ಳುವದು. ಆ ದೃಷ್ಟಿಯಿಂದ ನೋಡಿದರೆ, ನಮ್ಮ ಸ್ವರೂಪದಲ್ಲಿ ಯಾವ ಹಸಿವುಬಾಯಾರಿಕೆಗಳಾಗಲಿ, ಯಾವ ರೋಗರುಜಿನಗಳಾಗಲಿ, ಯಾವ ಮುಪ್ಪು-ಸಾವುಗಳಾಗಲಿ ಎಂದಿಗೂ ಇರಲೇ ಇಲ್ಲವೆಂದು ಕೂಡಲೆ ಮನದಟ್ಟಾಗಿಬಿಡುತ್ತದೆ.

'ಆತ್ಮನಿಂದ ವೀರ್ಯವು ದೊರಕುತ್ತದೆ, ವಿದ್ಯೆಯಿಂದ ಬಲವು ದೊರಕುತ್ತದೆ' ಎಂಬುದು ಶ್ರುತಿವಚನವು. ನಾವು ನಮ್ಮೊಳಗೆ ಹುದುಗಿಕೊಂಡಿರುವ ಆತ್ಮನ ಚಿಂತನೆಯನ್ನು ಮನಸ್ಸಿಗೆ ತಂದುಕೊಂಡರೆ ಸಾಕು, ಕೂಡಲೆ ನಮ್ಮಲ್ಲಿ ಒಂದು ಹೊಸ ಬಗೆಯ ವೀರ್ಯವೂ ಬಲವೂ ಉಂಟಾಗುವವು. ಜನರು ಹಣದಿಂದಲೂ ಜನಸಹಾಯದಿಂದಲೂ ಮಂತ್ರಶಕ್ತಿಯಿಂದಲೂ ಔಷಧಿಯಿಂದಲೂ ತಪಸ್ಸಿನಿಂದಲೂ ಯೋಗದಿಂದಲೂ ಬೇರೆಬೇರೆಯ ಬಲವನ್ನು ಸಂಪಾದಿಸಿಕೊಳ್ಳುವರು. ಆದರೆ ಈ ಆತ್ಮಬಲವು ಅವುಗಳೆಲ್ಲಕ್ಕಿಂತಲೂ ಅತ್ಯಂತವಿಲಕ್ಷಣವಾಗಿರುತ್ತದೆ. ಹಣವು ಪದಾರ್ಥಗಳನ್ನು ಕೊಳ್ಳುವ ಶಕ್ತಿಯುಳ್ಳದ್ದಾಗಿರುವವರೆಗೆ ಬಲವೆನಿಸುತ್ತದೆ. ಆದರೆ ಒಂದು ರೂಪಾಯಿಗೆ ಒಂದು ಸೇರು ಧಾನ್ಯವೂ ಸಿಕ್ಕದೆ ಇರುವಾಗ ಅದರ ಬಲವು ಎಲ್ಲಿಯದು, ದೇಶದಲ್ಲಿ ವಸ್ತುಗಳು ಹೇರಳವಾಗಿರುವಲ್ಲಿಯವರೆಗೆ ಹಣಕ್ಕೆ ಕೊಳ್ಳುವ ಶಕ್ತಿಯಿರುತ್ತದೆ, ಇಲ್ಲದಿದ್ದರೆ ಇಲ್ಲ. ಹಿಂದಿನ ಕಾಲದ ಚಲಾವಣೆಯಲ್ಲಿದ್ದ ಎಷ್ಟು ನಾಣ್ಯಗಳಿದ್ದರೆತಾನೆ ಈಗ ನಮಗೆ ಬಲವನ್ನು ಕೊಟ್ಟಾವು? ನಮ್ಮವರೆಂಬ ಜನರು ಗುಂಪುಕಟ್ಟಿಕೊಂಡು ನಮಗೆ ಸಹಾಯಕರಾಗಿರುವ ಕಾಲವೂ ಒಂದುಂಟು; ಆಗ ಜನಬಲವು ನಮಗೆ ಉಪಯೋಗವಾಗುತ್ತದೆ. ಆದರೆ ಅಡವಿಯಲ್ಲಿ ನಾವು ಒಬ್ಬರೇ ತಿರುಗಾಡುತ್ತಿರುವಾಗ ಊರಲ್ಲಿರುವ ನಮ್ಮ ಜನರ ಬಲವು ನಮಗೆ ಯಾವ ಸಹಾಯವನ್ನು ಮಾಡೀತು? ಸತ್ತಬಳಿಕ ನಮ್ಮ ಪಾಪಗಳ ಫಲವನ್ನು ನಾವು ಒಬ್ಬರೇ ಉಣ್ಣಬೇಕಾಗಿರುವಲ್ಲಿ ಬದುಕಿರುವಾಗ ನಮಗೆ ಇದ್ದ ಜನಬಲವು ಏತಕ್ಕೆ ಬಂದೀತು? ಮಂತ್ರಶಕ್ತಿಯಿಂದ ಸಂಪಾದಿಸಿಕೊಂಡಿರುವ ಬಲವು ಮಂತ್ರದ ವೀರ್ಯವಿರುವವರೆಗೆ ನಮ್ಮಿಂದ ಅದ್ಭುತಕಾರ್ಯಗಳನ್ನು ಮಾಡಿಸಬಹುದು. ಆದರೆ ಆ ವೀರ್ಯವು ಕೃತಕವಾಗಿರುವದರಿಂದ ಅದರಿಂದಾದ ಬಲವೂ ಕೃತಕವಾಗಿರುತ್ತದೆ. ಸಪ್ಪೆಯ ಔಷಧಿಯನ್ನೂ ರಸಾಯನಗಳನ್ನು ತೆಗೆದುಕೊಂಡ ಬಳಿಕ ಕೆಲವು ಕಾಲದವರೆಗೆ ನಮ್ಮಲ್ಲಿ ತೋರುವ ಕೃತಕವಾದ ಬಲವು ನಮ್ಮ ಶರೀರದ ಸ್ವಾಭಾವಿಕವಾದ ಬಲವಾದೀತೆ? ಕಾಯಕಲ್ಪದಿಂದ ಪಡೆದ ಯೌವನವು ಕೂಡ ಕೃತಕವೇ ಹೊರತು ಅದರಿಂದ ಬಂದ ಹೊಸಬಲವು ಚಿರಕಾಲವಿರಲಾರದು. ತಪಸ್ಸಿನಿಂದಲೂ ಯೋಗಾಭ್ಯಾಸದಿಂದಲೂ ವಿಚಿತ್ರವಾದ ಬಲವನ್ನು ಜನರು ಸಂಪಾದಿಸುವರೆಂದು ಆಯಾ ಸಾಧನದ ಮಹಿಮೆಯನ್ನು ಬಲ್ಲವರು ಹೇಳುವದುಂಟು; ಆದರೆ ಆ ತಪಸ್ಸು ಅಥವಾ ಯೋಗವು ಎಂದಿಗೂ

ನಿತ್ಯವಾದ ಬಲವನ್ನು ಕೊಡಲಾರದು. ಹೆಚ್ಚೇಕೆ? ಯಾವಯಾವದು ಸಾಧನಾಯತ್ತವಾದ ಬಲವೋ ಅದೆಲ್ಲವೂ ಆಯಾ ಸಾಧನದ ಕೃತಕವೀರ್ಯದ ಪರಿಣಾಮಕ್ಕೆ ಅನುಗುಣ ವಾಗಿರುತ್ತದೆ. ಆದರೆ ನಮ್ಮ ಆತ್ಮನ ವೀರ್ಯವು ಈ ಯಾವದೊಂದು ಸಾಧನದ ವೀರ್ಯಕ್ಕೂ ಹೋಲಿಸತಕ್ಕದ್ದಲ್ಲ; ಏಕೆಂದರೆ ಆತ್ಮನು ನಿತ್ಯವಾಗಿರುವದರಿಂದ ಅವನ ವೀರ್ಯವೂ ನಿತ್ಯವಾಗಿರುತ್ತದೆ. ಈ ಕಾರಣದಿಂದ ಆತ್ಮನ ವೀರ್ಯವನ್ನು ಜ್ಞಾನದಿಂದ ಸಂಪಾದಿಸಿಕೊಂಡರೆ ಅದರಿಂದ ದೊರೆಯುವ ಬಲವೂ ನಿತ್ಯವಾಗಿರುತ್ತದೆ. ಈ ಬಲವು ಕೃತಕವಲ್ಲ, ಸಾಧನಕ್ಕೆ ಅಧೀನವಾಗಿರುವದಲ್ಲ; ಅದು ನಮ್ಮ ಸ್ವರೂಪಕ್ಕೇ ಸೇರಿಕೊಂಡಿರು ವದರಿಂದ ಅದು ನಿತ್ಯವಾಗಿರುತ್ತದೆ.

ಆತ್ಮಬಲವು ನಿತ್ಯವಾಗಿರುವದಾದರೆ ಅದನ್ನು ಅರಿತುಕೊಳ್ಳುವದಕ್ಕೆ ಧ್ಯಾನವು ಏತಕ್ಕೆ ಬೇಕು? ಇರುವ ವಸ್ತುವನ್ನು ಹಾಗೆಯೇ ಉಪಯೋಗಿಸಿಕೊಳ್ಳಬೇಕಲ್ಲದೆ, ಬರಿಯ ಧ್ಯಾನದಿಂದ ಅದರ ಪ್ರಾಪ್ತಿಯಾದೀತೆ?– ಎಂದು ಕೆಲವರಿಗೆ ಶಂಕೆಯು ಎದ್ದುಕೊಳ್ಳಬಹುದು. ನಮ್ಮಗಳ ಅಂತಃಕರಣವು ಈಗಿನ ಸ್ಥಿತಿಯಲ್ಲಿ ನಮ್ಮ ಸ್ವರೂಪವಾದ ಆತ್ಮನಿಂದ ಜಾರಿಬಿದ್ದಿರುತ್ತದೆ, ಅಥವಾ ಆತ್ಮನನ್ನು ಬಿಟ್ಟುಬಹುದೂರ ಬಂದಿರುತ್ತದೆ. ಅದು ಅಸತ್ಯವಾದ, ಅನಿತ್ಯವಾದ, ಅಶುಚಿಯಾದ, ಜಡವಸ್ತುಗಳ ಚಿಂತನೆಯ ಬಲೆಯಲ್ಲಿ ಸಿಕ್ಕಿಬಿದ್ದಿರುತ್ತದೆ. ಆದ್ದರಿಂದ ನಾವು ಈ ಬಲೆಯಿಂದ ತಪ್ಪಿಸಿಕೊಂಡಲ್ಲದೆ, ಈ ತಪ್ಪುಹಾದಿಯನ್ನು ಬಿಟ್ಟು ಆತ್ಮನ ಹಾದಿಯನ್ನು ಹಿಡಿದಲ್ಲದೆ, ಅನಾತ್ಮದ ಚಿಂತೆಯನ್ನು ಬಿಟ್ಟು ಸತ್ಯವಾದ, ನಿತ್ಯವಾದ, ಶುದ್ಧವಾದ, ಚೈತನ್ಯದ ಗಟ್ಟಿಯಾದ ಸ್ವಭಾವಸಿದ್ಧವಾದ ಆತ್ಮಸ್ವರೂಪದ ಚಿಂತೆಯನ್ನು ತಂದುಕೊಳ್ಳದೆ ಇರುವವರೆಗೆ ಅದರಲ್ಲಿರುವ ದೌರ್ಬಲ್ಯವು ಹೋಗುವದಿಲ್ಲ, ಆತ್ಮನ ಬಲವೂ ಅದಕ್ಕೆ ಸಿಕ್ಕುವದಿಲ್ಲ, ಈ ಕಾರಣದಿಂದ ಧ್ಯಾನಯೋಗವು ಒಂದು ಉತ್ತಮ ಸಾಧನವಾಗಿರುತ್ತದೆ.

ಧ್ಯಾನವೆಂದರೆ ಸೋಮಾರಿಗಳ ಹಗಲುಗನವರಿಕೆಯಲ್ಲ. ಅನಾತ್ಮಚಿಂತನವನ್ನು ಪ್ರಯತ್ನ ಪೂರ್ವಕವಾಗಿ ಬಿಟ್ಟು, ಆತ್ಮನ ಕಡೆಗೆ ಆದರದಿಂದ ಮನಸ್ಸು ಒಲಿಯುವಂತೆ ಮಾಡುವ ಪ್ರಯತ್ನವದು. ಮನಸ್ಸು ಅನಾದಿಕಾಲದಿಂದಲೂ ಅಸತ್ಯವಾದ ವಸ್ತುಗಳನ್ನೇ ಸತ್ಯವೆಂದು ನಂಬಿರುತ್ತದೆ. ಅವುಗಳನ್ನೇ ನಾನು, ನನ್ನದು–ಎಂದು ಪಟ್ಟುಹಿಡಿದುಕೊಂಡುಬಿಟ್ಟಿರುತ್ತದೆ. ಶರೀರವನ್ನು ನಾನು ಎಂದು ಗಟ್ಟಿಯಾಗಿ ನಂಬಿಕೊಂಡು ಹೊರಗಿನ ವಿಷಯಗಳನ್ನು ನಮ್ಮವು, ಅಥವಾ ನಮಗೆ ಪ್ರಿಯವಾಗಿಯೋ ಅಪ್ರಿಯವಾಗಿಯೋ ಇರತಕ್ಕವು, ಎಂದು ಅನಾತ್ಮವನ್ನು ಬಿಗಿದಪ್ಪುವ ತಪ್ಪುತಿಳಿವಳಿಕೆಗೆ 'ಅಸದ್ಗ್ರಹ', ಅಸತ್ತನ್ನು ಹಿಡಿದುಕೊಂಡು ಬಿಡುವದು, ಎಂದು ಹೆಸರು. ಈ ಅಸದ್ಗ್ರಹವೇ ನಮ್ಮ ದೌರ್ಬಲ್ಯವು. 'ನನಗೆ ಹಸಿವು ಆಗುತ್ತದೆ, ಬಾಯಾರಿಕೆಯಾಗುತ್ತದೆ' ಎಂಬ ನಂಬಿಕೆಯಿಂದ ಅನ್ನವನ್ನೂ ಪಾನವನ್ನೂ

ಬಯಸುತ್ತಾ, ಆ ಅನ್ನಪಾನಗಳ ಪ್ರಾಪ್ತಿಗಾಗಿ ಹಂಬಲಿಸುತ್ತಾ, ಹವಣಿಸುತ್ತಾ, ಇವು ಸಿಕ್ಕಿದರೆ ಹಿಗ್ಗುತ್ತಲೂ ಸಿಕ್ಕದಿದ್ದರೆ ಸಂಕಟಪಡುತಲೂ, ಸಿಕ್ಕಿ ಸ್ವಲ್ಪಕಾಲ ತನ್ನಲ್ಲಿರುವುದಾದರೆ ಅವು ಎಲ್ಲಿ ಕಳೆದು ಹೋಗುವವೋ ಎಂದು ಶಂಕಿಸುತ್ತಲೂ, ಹೋದರೆ ಗೋಳುಗರೆಯುತ್ತಲೂ ಇರುವದಕ್ಕೆ ಈ ಅಸದ್ಗ್ರಹವೇ ಕಾರಣವು. ಮುಪ್ಪುಮರಣಗಳಿಗೆ ಅಂಜುತ್ತಲೂ ಅವುಗಳನ್ನು ಆದಷ್ಟು ದೂರವಿರಿಸುವದಕ್ಕೆ ಪ್ರಯತ್ನವನ್ನು ಮಾಡುತ್ತಲೂ ಆ ಪ್ರಯತ್ನವು ನಿಷ್ಫಲವಾಗಲು ದುಗುಡವನ್ನು ತಾಳುತ್ತಲೂ ಇರುವದಕ್ಕೆ ಈ ಅಸದ್ಗ್ರಹವೇ ಕಾರಣವು.

ಆದ್ದರಿಂದ ಅನಾತ್ಮವಸ್ತುಗಳಲ್ಲಿರುವ ಸಲ್ಲದ ಈ ಅಭಿಮಾನವನ್ನು ತೊಲಗಿಸಿಕೊಳ್ಳುವದಕ್ಕೆ ಪ್ರಯತ್ನಿಸುತ್ತಲೇ ಆತ್ಮಪ್ರಾಪ್ತಿಗೆ ಹವಣಿಸಬೇಕು. ನೆಲವನ್ನು ಸಾರಿಸುವ ಮುಂಚೆ ಕಸವನ್ನು ಗುಡಿಸಿಹಾಕಬೇಕಾಗಿರುವಂತೆ, ಆತ್ಮನ ಧ್ಯಾನವನ್ನು ಮೊದಲುಮಾಡುವ ಮುಂಚೆಯೇ ಈ ಅಸದ್ಗ್ರಹವನ್ನು ತೊಲಗಿಸಿಕೊಳ್ಳುವದಕ್ಕೆ ಪ್ರಯತ್ನಪಡಬೇಕು. ಈ ಪ್ರಯತ್ನವೇ ತ್ಯಾಗವು. 'ಪರಮಾರ್ಥವನ್ನು ಮನಗಾಣುವದಕ್ಕೆ ತ್ಯಾಗವೇ ಉತ್ತಮವಾದ ಸಾಧನವು; ಪರಮಾರ್ಥವು ಸಾಧಕನ ಒಳಗಿರುವ ಆತ್ಮನೇ ಆಗಿರುವದರಿಂದ ಅನಾತ್ಮವಸ್ತುಗಳ ಅಭಿಮಾನತ್ಯಾಗವನ್ನು ಮಾಡುತ್ತಲೇ ಅದನ್ನು ಮನಗಾಣಬೇಕಾಗಿದೆ' ಎಂದು ಶ್ರುತಿಯು ಸಾರುತ್ತಿರುವದು. ತಪ್ಪುದಾರಿಯಲ್ಲಿ ನಡೆಯುತ್ತಿರುವವನು ಸರಿಯಾದ ದಾರಿಯನ್ನು ಹಿಡಿಯುವ ಮೊದಲು ಅವಶ್ಯವಾಗಿ ಇನ್ನು ತಪ್ಪುಹಾದಿಯಲ್ಲಿ ನಡೆಯದಿರಬೇಕು. ಅಷ್ಟೇ ಸಾಲದು, ಇದುವರೆಗೆ ತಾನು ನಡೆದಿದ್ದಷ್ಟು ದಾರಿಯನ್ನು ಹಿಂದಕ್ಕೆ ನಡೆಯಲೇಬೇಕು, ಇದರಂತೆ ಅಸತ್ತಾಗಿರುವ ವಿಷಯಗಳಲ್ಲಿರುವ ಮಮತಾಭಿಮಾನವನ್ನು ಇನ್ನು ಮಾಡಬಾರದು ಎಂಬುದಿಷ್ಟೇ ಸಾಲದು, ಅದರಿಂದ ಬಿಡಿಸಿಕೊಳ್ಳುವದಕ್ಕೆ ಬಲವಾದ ಪ್ರಯತ್ನವನ್ನೂ ಮಾಡಬೇಕು. ಇದು ಧ್ಯಾನಯೋಗದ ಮೊದಲನೆಯ ಮೆಟ್ಟಲು.

ಅಸದ್ಗ್ರಹವೆಂಬ ತಪ್ಪುದಾರಿಯಿಂದ ಹಿಂತಿರುಗುವ ಪ್ರಯತ್ನವು ತಕ್ಕಮಟ್ಟಿಗೆ ಸಾಗಿದ ಬಳಿಕ ಆತ್ಮನ ಚಿಂತೆಯನ್ನು ಚೆನ್ನಾಗಿ ಮನಸ್ಸಿಗೆ ಹತ್ತಿಸಿಕೊಳ್ಳಬೇಕು. ಆತ್ಮನಲ್ಲಿ ಹಸಿವು, ಬಾಯಾರಿಕೆ, ಮುಪ್ಪು, ಮರಣ, ಶೋಕ, ಮೋಹ-ಮುಂತಾದ ಯಾವ ದೋಷವೂ ಇಲ್ಲ ಎಂದು ಶಾಸ್ತ್ರದಲ್ಲಿ ನಿಸ್ಸಂದಿಗ್ಧವಾದ ರೀತಿಯಲ್ಲಿ ಹೇಳಿರುತ್ತದೆ. ಅನುಭವಿಗಳಾದ ಹಿರಿಯರೂ ಹಾಗೆಂದು ಹೇಳುತ್ತಾರೆ. ಶಾಸ್ತ್ರಾಚಾರ್ಯರ ಈ ಉಪದೇಶವನ್ನು ಕಿವಿಗೊಟ್ಟು ಕೇಳಬೇಕು, ಯುಕ್ತಿಗಳಿಂದ ಮನಸ್ಸಿಗೆ ಒಗ್ಗಿಸಿಕೊಳ್ಳಬೇಕು, ಎಲ್ಲಕ್ಕೂ ಮೇಲಾಗಿ ನಮ್ಮ ಆತ್ಮನ ನಿಜವಾದ ಈ ಸ್ವರೂಪವನ್ನು ಎಡೆಬಿಡದೆ ಚಿಂತಿಸಿಕೊಳ್ಳುವದರಿಂದ ಅದರ ಭಾವನೆಯನ್ನೇ ಮೈಗೂಡಿಸಿಕೊಳ್ಳಬೇಕು. ಈ ಭಾವನೆಯು ಎಷ್ಟೆಷ್ಟು ನಮ್ಮ ಮನದಲ್ಲಿ ನೆಲಸುವದೋ ಅಷ್ಟಷ್ಟುಮಟ್ಟಿಗೆ ಆತ್ಮಬಲವು ನಮಗೆ ಅನುಭವಕ್ಕೆ ಬರುತ್ತದೆ. ಅಷ್ಟಷ್ಟು ಮಟ್ಟಿಗೆ ಅದರ ಫಲಿತಾಂಶವು ನಮ್ಮ ಜೀವನದಲ್ಲಿ ರೂಪುಗೊಳ್ಳುತ್ತದೆ.

ಆಗಲೇ ನಮ್ಮ ಆತ್ಮನು ಹಸಿವು, ಬಾಯಾರಿಕೆ, ಮುಪ್ಪು, ಸಾವು-ಮುಂತಾದ ದೋಷಗಳಿಲ್ಲದವನೆಂಬ ಶಾಸ್ತ್ರೋಕ್ತಿಯ ಯಥಾರ್ಥತೆಯು ನಮ್ಮ ಮನದಲ್ಲಿ ಮಿಂಚುವದು. ಆಗಲೇ ನಮ್ಮ ಜೀವನದಲ್ಲಿ ಮೇಲುಮೇಲೆ ನೋಡಿದರೆ ಹಲವು ದೋಷಗಳು ಕಾಣಬರುತ್ತಿದ್ದರೂ ನಮ್ಮ ಆತ್ಮನು ನಿತ್ಯ ನಿರ್ದುಃಖನೆಂದೂ ನಿತ್ಯಾನಂದ ಸ್ವರೂಪನೆಂದೂ ಉಪದೇಶಿಸುತ್ತಿರುವ ಶಾಸ್ತ್ರದಲ್ಲಿ ನಮಗೆ ದೃಢವಿಶ್ವಾಸವುಂಟಾಗುವದು.

# 24. ಅಧ್ಯಾತ್ಮ ವಿದ್ಯೆ

* ಅಧ್ಯಾತ್ಮವಿದ್ಯೆಯನ್ನು ವೈದ್ಯವಿದ್ಯೆಗೆ ಹೋಲಿಸುವದು ರೂಢಿಯಲ್ಲಿದೆ. ರೋಗದ ಸ್ವಭಾವ, ರೋಗದ ನಿದಾನ, ರೋಗದ ನಿವೃತ್ತಿ, ರೋಗನಿವೃತ್ತಿಯ ಉಪಾಯ-ಈ ನಾಲ್ಕನ್ನೂ ತಿಳಿದವನು ವೈದ್ಯನು. ಇದರಂತೆ ಸಂಸಾರದುಃಖ, ಆ ದುಃಖದ ಕಾರಣ, ದುಃಖನಿವೃತ್ತಿ, ದುಃಖನಿವೃತ್ತಿಯ ಉಪಾಯ-ಇವು ನಾಲ್ಕನ್ನೂ ತಿಳಿದವನು ಅಧ್ಯಾತ್ಮವಿದ್ಯಾವಿಶಾರದನು.

ರೋಗವೆಂಬುದು ಶರೀರದ ದೌರ್ಬಲ್ಯದಿದ ಉಂಟಾಗುವದು. ಶರೀರದಲ್ಲಿ ಪ್ರಾಣಶಕ್ತಿಯು ಚೆನ್ನಾಗಿರುವವರೆಗೆ ಯಾವ ರೋಗವೂ ಬರುವದಿಲ್ಲ. ಪದಾರ್ಥಗಳು ಶರೀರದ ಮೇಲೆ ಕೆಟ್ಟ ಪರಿಣಾಮವನ್ನು ಮಾಡುತ್ತಿದ್ದರೆ, ಅದಕ್ಕೆ ಶರೀರದ ದೌರ್ಬಲ್ಯವೇ ಕಾರಣವು. ಕೆಲವರು ಬಹಳ ಆಯಾಸಪಟ್ಟು ಕೆಲಸಮಾಡಿದರೂ ತಡೆದುಕೊಳ್ಳುವರು; ಮತ್ತೆ ಕೆಲವರಿಗೆ ಸ್ವಲ್ಪ ಆಯಾಸವಾದರೂ ಆರೋಗ್ಯವು ತಪ್ಪುವದು. ಕೆಲವರಿಗೆ ಆಹಾರದ ಸ್ವಭಾವವು ಕೆಟ್ಟಿದ್ದರೂ, ಪರಿಮಾಣವು ಸ್ವಲ್ಪ ಹೆಚ್ಚಾದರೂ, ಏನೂ ಆಗುವದಿಲ್ಲ; ಮತ್ತೆ ಕೆಲವರಿಗೆ ಆಹಾರವಿಹಾರಗಳಲ್ಲಿ ಒಂದಿಷ್ಟು ಕ್ರಮತಪ್ಪಿದರೂ ಸ್ವಾಸ್ಥ್ಯವು ತಪ್ಪುವದು, ಆಹಾರವು ಒಂದಿಷ್ಟು ಹೆಚ್ಚಾದರೂ ಅಜೀರ್ಣವಾಗುತ್ತದೆ. ಈ ತಾರತಮ್ಯಕ್ಕೆ ಅವರಿಬ್ಬರಲ್ಲಿರುವ ಪ್ರಾಣಶಕ್ತಿಯ ತಾರತಮ್ಯವೇ ಹೊಣೆಯಾಗಿರುತ್ತದೆ.

ಇದು ನಿಜವಾದರೆ ರೋಗನಿವಾರಣೆಗೆ ಪ್ರಾಣಶಕ್ತಿಯನ್ನು ತುಂಬುವದೇ ಮುಖ್ಯವಾದ ಉಪಾಯವೆಂಬುದು ಸ್ಪಷ್ಟವಾಗುತ್ತದೆ. ರೋಗವನ್ನು ತಡೆಗಟ್ಟುವ ಮೂಲಿಕೆಗಳನ್ನೂ ಉಪ್ಪುಗಳನ್ನೂ ಹೊಟ್ಟೆಗೆ ತುಂಬುವದು, ದೇಹಕ್ಕೆ ಸಾತ್ಮ್ಯವಲ್ಲದ ಹೊರಗಿನ ವಸ್ತುಗಳನ್ನು ಶರೀರದೊಳಕ್ಕೆ ಸೂಜಿಗೊಳವಿಗಳಿಂದ ಪಿಚಕಾರಿ ಹೊಡೆಯುವದು-ಮುಂತಾದ ಉಪಾಯಗಳಿಗಿಂತ ರೋಗಿಗೆ ಪ್ರಾಣಶಕ್ತಿಯನ್ನು ಕೊಟ್ಟು ಬಲವೃದ್ಧಿಯನ್ನು ಮಾಡುವ ಉಪಾಯವನ್ನು ಕೈಕೊಳ್ಳುವದೇ ಉತ್ತಮವೆಂದು ಏರ್ಪಡುತ್ತದೆ. ಗಿಡಮರಗಳಿಗೂ

* ಸಂಪುಟ 17, ಸಂಚಿಕೆ 12, ಆಗಸ್ಟ್ 1948, ಪುಟ 265-270

ಪೈರುಪಚ್ಚೆಗಳಿಗೂ ಬಗೆಬಗೆಯ ರೋಗಗಳು ಬರುತ್ತವೆಯಷ್ಟೆ. ಅವುಗಳಿಗೆ ಆಯಾ ರೋಗವು ಬಂದಾಗ ಒಂದೊಂದು ಔಷಧದಿಂದ ನಿವಾರಣೆಮಾಡುವ ಪದ್ಧತಿಗಿಂತಲೂ ರೋಗದ ನಿದಾನವನ್ನು ತಿಳಿದು ಆ ನಿದಾನವನ್ನು ಪರಿಹಾರಮಾಡುವಂಥ ಉಪಾಯಗಳನ್ನು ಕೈಕೊಂಡು ಅವುಗಳ ಪ್ರಾಣಶಕ್ತಿಯನ್ನು ಹೆಚ್ಚಿಸುವದೇ ಉತ್ತಮವಾದ ಉಪಾಯವೆಂದು ಬಲ್ಲವರು ಹೇಳುತ್ತಾರೆ.

ಇದರಂತೆ ಮನುಷ್ಯನಿಗೆ ಉಂಟಾಗಿರುವ ಮನೋರೋಗಗಳಿಗೂ ನಿವಾರಣೋಪಾಯ ವನ್ನು ಕಂಡುಕೊಂಡು ಅಂತಃಕರಣಕ್ಕೆ ಬಲವನ್ನು ಕಲ್ಪಿಸುವದೇ ಉಪಾಯವೆಂದು ತಿಳಿದವರೆನ್ನುವರು. ಕೆಲವರಿಗೆ ಸ್ವಭಾವದಿಂದಲೇ ತಾಳ್ಮೆಯಿರುತ್ತದೆ; ಮತ್ತೆ ಕೆಲವರಿಗೆ ಹೊರಗೆ ಒಂದಿಷ್ಟು ಅನನುಗುಣವಾದ ಸಂನಿವೇಶವೊದಗಿದರೂ ರುದ್ರಕೋಪವು ಬಂದುಬಿಡುತ್ತದೆ. ಕೆಲವರಿಗೆ ಸ್ವಲ್ಪದರಿಂದಲೇ ತೃಪ್ತಿಯಾಗುತ್ತದೆ; ಅವರಿಗೆ ಯಾವ ಬೆಲೆಯುಳ್ಳ ವಸ್ತುಗಳನ್ನು ಕಂಡರೂ ಅವುಗಳು ತಮಗೆ ಬೇಕೆಂಬ ಇಚ್ಛೆಯುಂಟಾಗುವದಿಲ್ಲ. ಇನ್ನು ಕೆಲವರು ಕಾಮಕಾಮಿಗಳಾಗಿರುತ್ತಾರೆ; ಅವರಿಗೆ ಯಾವದು ಕಂಡರೂ ಬೇಕು, ಯಾವದರ ಸುದ್ದಿ ಕಿವಿಗೆ ಬಿದ್ದರೂ ಬೇಕು. ಕೆಲವರು ಬಡವರಾಗಿದ್ದರೂ ಸ್ವಭಾವದಿಂದಲೇ ಉದಾರಿ ಗಳಾಗಿರುವರು; ಮತ್ತೆ ಕೆಲವರು ಸಂಪತ್ತಿದ್ದರೂ ಸ್ವಭಾವದಿಂದಲೇ ಲೋಭಿಗಳಾಗಿರುವರು. ಹೀಗೆಲ್ಲ ಕಾಣಬರುವ ತಾರತಮ್ಯಕ್ಕೆ ಅವರವರ ಅಂತಃಕರಣದ ಶಕ್ತಿಯ ತಾರತಮ್ಯವೇ ಕಾರಣವಾಗಿರುತ್ತದೆ.

ಒಂದೊಂದು ರೋಗಕ್ಕೆ ಒಂದೊಂದು ಚಿಕಿತ್ಸೆಯನ್ನು ಮಾಡುವದು ತಾತ್ಕಾಲಿಕ ವೈದ್ಯವು. ಆ ಕ್ರಮದಿಂದ ರೋಗವನ್ನು ತಡೆಗಟ್ಟಬಹುದು; ಆದರೆ ಆ ರೋಗವು ಹೋದರೆ ಮತ್ತೊಂದು ಉಪರೋಗವು ಹುಟ್ಟಿಕೊಳ್ಳಲೂಬಹುದು, ಅಥವಾ ಆ ರೋಗವೇ ಕಾಲಾನುಕಾಲಕ್ಕೆ ಕಾಣಿಸಿಕೊಳ್ಳಲೂಬಹುದು. ಇದರಂತೆ ಮನಸ್ಸಿನಲ್ಲಿ ಕಾಣುವ ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯ–ಮುಂತಾದ ಒಳಗಿನ ರೋಗಗಳನ್ನು ಒಂದೊಂದು ಉಪಾಯದಿಂದ ಗೆಲ್ಲುವದಕ್ಕೆ ಪ್ರಯತ್ನಿಸುವದೂ ತಾತ್ಕಾಲಿಕವೈದ್ಯವೇ. ಆ ವೈದ್ಯದಿಂದ ಒಂದು ಮನೋದೋಷವನ್ನು ತಡೆಗಟ್ಟಿದರೆ ಮತ್ತೊಂದು ದೋಷವು ಎದ್ದುಕೊಳ್ಳಬಹುದು. ಇಲ್ಲದಿದ್ದರೆ ಕಾಲಾನುಕಾಲಕ್ಕೆ ಅದೇ ದೋಷವೇ ಇನ್ನಷ್ಟು ವೇಗದಿಂದ ಕಾಣಿಸಿಕೊಳ್ಳಬಹುದು. ರೋಗಿಯನ್ನು ಬಲಾತ್ಕಾರದಿಂದ ಪಥ್ಯಕ್ಕೆ ಇಟ್ಟರೆ, ಅವನು ನಾಲಗೆಯ ಚಾಪಲ್ಯಕ್ಕೆ ಸೋತು ವೈದ್ಯನಿಗೆ ತಿಳಿಸದಂತೆಯೇ ಅಪಥ್ಯವನ್ನು ಭೋಜನ ಮಾಡಿಬಿಡಬಹುದಲ್ಲವೆ? ಇದರಂತೆ ಮನೋದೋಷಗಳನ್ನು ಕೃತಕೋಪಾಯಗಳಿಂದ ತಡೆಗಟ್ಟಿದರೆ ಅಂತಃಕರಣವು ನಮಗೂ ತಿಳಿದಂತೆಯೇ ಆ ದೋಷಗಳನ್ನು ವಾಸನಾರೂಪದಲ್ಲಿ ತನ್ನಲ್ಲಿಟ್ಟುಕೊಂಡುಬಿಡಬಹುದು. ಹೊರಗಿನ ರೋಗಕ್ಕೆ ಹೇಗೋ

ಹಾಗೆ ಒಳಗಿನ ರೋಗಗಳಿಗೂ ಶಕ್ತಿಯನ್ನು ಆಧಾನವಮಾಡುವ ಉಪಾಯುವೇ ಉತ್ತಮವಾದ ಚಿಕಿತ್ಸೆಯು. ರೋಗಿಗೆ ಬಲವುಂಟಾದರೆ ಶರೀರವು ರೋಗಗಳನ್ನು ತಾನಾಗಿಯೇ ಹೊರಕ್ಕೆ ಹಾಕಿಬಿಡುತ್ತದೆ. ಅಂತಃಕರಣಕ್ಕೆ ಬಲವುಂಟಾದರೆ ತಾನಾಗಿಯೇ ದೋಷಗಳನ್ನು ಪರಿಹರಿಸಿಕೊಂಡು ಶುದ್ಧವಾಗಿಬಿಡುತ್ತದೆ. ಜನರ ಶರೀರವೂ ಮನಸ್ಸೂ ಒಂದಕ್ಕೊಂದು ನಿಕಟವಾಗಿ ಸಂಬದ್ಧವಾಗಿರುತ್ತವೆ. ಸಾಮಾನ್ಯವಾಗಿ ಶರೀರದಲ್ಲಿ ಸ್ವಾಸ್ಥ್ಯವು ಕಡಿಮೆಯಾದರೆ ಮನಸ್ಸಿಗೂ ಅದರ ಪರಿಣಾಮವುಂಟಾಗುತ್ತಿರುತ್ತದೆ; ಇದರಂತೆ ಮನಸ್ಸಿನ ಸಮಾಧಾನವು ತಪ್ಪಿದರೆ, ಯಾವದಾದರೂ ಕಾರಣಗಳಿಂದ ಮನಸ್ಸಿನಲ್ಲಿ ಚಿಂತೆಯೇ ಮುಂತಾದ ಭಾವಗಳು ಆಕ್ರಮಿಸಿಕೊಂಡರೆ, ಅವು ಮನುಷ್ಯನ ಶರೀರದ ಮೇಲೂ ಪರಿಣಾಮವನ್ನು ಉಂಟುಮಾಡುತ್ತಿರುವವು. ಆದರೆ ಇಲ್ಲಿ ಒಂದು ವಿಶೇಷವುಂಟು. ಶರೀರದ ಅಸ್ವಸ್ಥತೆಯ ದಶೆಯಲ್ಲಿಯೂ ಮನಸ್ಸನ್ನು ವಶವಾಗಿಟ್ಟುಕೊಂಡಿರುವವರು ಕೆಲವರಿದಾರೆ; ಮನಸ್ಸಿಗೆ ಅಸ್ವಾಸ್ಥ್ಯವುಂಟಾದರೆ ಅದು ಶರೀರದ ಮೇಲೆ ಪರಿಣಾಮವನ್ನುಂಟುಮಾಡದೆ ಇರುವದೇ ಇಲ್ಲ. ಈ ವಿಶೇಷವನ್ನು ವೈದ್ಯರು ಅವಶ್ಯವಾಗಿ ನೆನಪಿನಲ್ಲಿಡಬೇಕು. ಏಕೆಂದರೆ ಬರಿಯ ಶರೀರಕ್ಕೆ ಚಿಕಿತ್ಸೆಯನ್ನು ಮಾಡಿದಮೇಲೂ ರೋಗಗಳು ನಿವೃತ್ತಿಯಾಗದೆ ಇರುವಾಗ ರೋಗಿಯ ಮನಸ್ಸನ್ನೂ ಲೆಕ್ಕಕ್ಕೆ ಹಿಡಿಯದೆ ಇದ್ದ ಲೋಪವು ಕಾರಣವಾಗಿರುವದೆಂದು ಹಲವು ವೇಳೆ ಕಂಡುಬಂದಿರುತ್ತದೆ.

ಈವರೆಗಿನ ವಿಚಾರಸರಣಿಯನ್ನು ಮನದಂದರೆ ಏನು ಸಿದ್ಧವಾಗುವದೆಂದರೆ, ಮನಸ್ಸಿಗೆ ಬಲವನ್ನುಂಟುಮಾಡಿಕೊಳ್ಳುವದೇ ಎಲ್ಲಾ ಬಗೆಯ ಆರೋಗ್ಯಕ್ಕೂ ಕಾರಣವಾಗಿರುತ್ತದೆ. ಮನಸ್ಸಿನ ಅಥವಾ ಶರೀರದ ರೋಗವು ಬುಡದಲ್ಲಿ ನೋಡಿದರೆ ಬಲದ ಕೊರತೆಯಿಂದಾಗಿರುತ್ತದೆ. ಶರೀರದ ಬಲವೂ ಪರಂಪರೆಯಿಂದ ಮನೋಬಲವನ್ನೇ ಅವಲಂಬಿಸಿಕೊಂಡಿರುತ್ತದೆ. ಶರೀರದ ಬಲವೆಂದರೆ ಜಟ್ಟಿಗಳಂತೆ ಮಾಂಸಖಂಡಗಳನ್ನು ಬೆಳೆಯಿಸಿಕೊಳ್ಳುವದೆಂದು ನಮ್ಮ ಅಭಿಪ್ರಾಯವಲ್ಲ. ಶರೀರವು ತನ್ನಿಂದಾಗಬೇಕಾದ ಕಾರ್ಯಗಳನ್ನು ಸೋಲಿಲ್ಲದೆ ನೆರವೇರಿಸುವದಕ್ಕೆ ತಕ್ಕಷ್ಟು ಗಟ್ಟಿಯಾಗಿರುವದನ್ನೇ ಇಲ್ಲಿ ನಾವು ಬಲವೆಂದು ಕರೆದಿರುವದು. ಪ್ರತಿಯೊಬ್ಬನಿಗೂ ಶರೀರವು ತಾಯಿತಂದೆಗಳ ಶರೀರಸ್ಥಿತಿ, ಕುಲ, ತಾನಿರುವ ದೇಶಕಾಲಗಳ ಸ್ಥಿತಿ–ಮುಂತಾದ ಹಲವು ಹೊರಗಿನ ಕಾರಣಗಳನ್ನವಲಂಬಿಸಿ ಬೇರೆಬೇರೆಯ ಮೈಕಟ್ಟನ್ನು ಪಡೆದಿರುತ್ತದೆ. ಆದರೆ ಅದು ಇರುವಷ್ಟು ದಿನ ತನ್ನ ವ್ಯಾಪಾರಗಳನ್ನು ತಡೆಯಿಲ್ಲದೆ ನೆರವೇರಿಸುವಷ್ಟು ಆರೋಗ್ಯವನ್ನು ಬಲವನ್ನೂ ಹೊಂದಿರುವದು ಅವನವನ ವಶವಾಗಿಯೇ ಇರುತ್ತದೆ. ಈ ಆರೋಗ್ಯವೂ ಬಲವೂ ನಾವು ಮೇಲೆ ಹೇಳಿರುವಂತೆ ಮನಸ್ಸಿನ ಬಲವನ್ನೇ ಹೊಂದಿಕೊಂಡಿರುತ್ತವೆ. ಆದ್ದರಿಂದ ಮನುಷ್ಯನು ತನ್ನ ಸ್ವಾಸ್ಥ್ಯಕ್ಕೆ ಮನೋಬಲವನ್ನು ಸಂಪಾದಿಸುವದು ಅತ್ಯವಶ್ಯವಾಗಿರುತ್ತದೆ.

ಮನೋಬಲವನ್ನು ಹೇಗೆ ಸಂಪಾದಿಸಿಕೊಳ್ಳಬೇಕು? ಈ ಪ್ರಶ್ನೆಗೆ ಹಲವರು ಹಲವು ಬಗೆಯಾದ ಉತ್ತರವನ್ನು ಕೊಟ್ಟಿರುತ್ತಾರೆ. ಔಷಧಿಗಳು, ಜನಧನಸಂಪತ್ತಿ, ಯೋಗ, ತಪಸ್ಸು, ಮಂತ್ರಾದಿಗಳು ಇವುಗಳಿಂದ ಮನಸ್ಸಿಗೆ ಹೆಚ್ಚಿನ ವೀರ್ಯವುಂಟಾಗುವದೆಂದು ಕೆಲವರು ನಂಬಿರುತ್ತಾರೆ. ಇನ್ನು ಕೆಲವರು ಮೊಟ್ಟಮೊದಲು ಮನಸ್ಸಿಗೆ ಧೃತಿಯನ್ನು ತಂದುಕೊಂಡು 'ನನ್ನಲ್ಲಿ ದೌರ್ಬಲ್ಯವಿಲ್ಲ, ನಾನು ದಿನ ದಿನಕ್ಕೂ ಬಲಿಷ್ಠನಾಗುತ್ತಿರುವೆನು' ಎಂಬ ಭಾವನೆಯನ್ನು ಬಲಪಡಿಸಿಕೊಳ್ಳುತ್ತಾಬರಬೇಕು; ಹಾಗಾದರೆ ಅದಕ್ಕೆ ಬಲವು ಬಂದೇ ಬರುವದು ಎನ್ನುತ್ತಾರೆ. ಇವುಗಳೆಲ್ಲ ಸ್ವಲ್ಪಮಟ್ಟಿಗೆ ಕಾರ್ಯಕಾರಿಯಾದ ಉಪಾಯಗಳೇ ಸರಿ. ಆದರೆ ಇಂಥ ಉಪಾಯಗಳು ಎಲ್ಲರಿಗೂ ಸುಲಭವಾಗಿ ಸಿಕ್ಕುವದಿಲ್ಲ; ಅಥವಾ ಸಿಕ್ಕಿದರೂ ಅವುಗಳಿಂದ ಪೂರ್ಣವಾಗಿ ನಮ್ಮ ಇಷ್ಟಾರ್ಥವು ಕೈವಶ ವಾಗುವಂತೆಯೂ ಇಲ್ಲ. ಏಕೆಂದರೆ ಈ ಔಷಧಿಯೇ ಮುಂತಾದವುಗಳನ್ನು ಹೇಗೆ ಸಂಪಾದಿಸಿಕೊಳ್ಳಬೇಕು?–ಎಂಬ ಪ್ರಶ್ನೆಯು ಯಾವಾಗಲೂ ಎದ್ದುಕೊಳ್ಳುತ್ತಿರುತ್ತದೆ. ಮನಸ್ಸಿಗೆ ಧೃತಿಯನ್ನು ತಂದುಕೊಳ್ಳುವದು ಹೇಗೆ? ನಮ್ಮಲ್ಲಿ ದೌರ್ಬಲ್ಯವಿರುವದೆಂದು ಪ್ರತ್ಯಕ್ಷವಾಗಿರುವಾಗ ಅದು ಇಲ್ಲ ಎಂಬ ಭಾವನೆಯನ್ನು ಮೊದಲು ಹೇಗೆ ತಂದುಕೊಳ್ಳಬೇಕು? ನಮ್ಮ ದುರ್ಬಲವಾದ ಸಂಕಲ್ಪದಿಂದ ಮಾಡಿಕೊಂಡ ಈ ಭಾವನೆಯು ಅನುಭವಸಿದ್ಧವಾಗಿರುವ ದೌರ್ಬಲ್ಯವನ್ನು ಹೇಗೆತಾನೆ ಕಳೆದೀತು?

ಆದ್ದರಿಂದ ಮನಸ್ಸಿಗೆ ಬಲವನ್ನು ತಂದುಕೊಳ್ಳುವದಕ್ಕೆ ಇವು ಯಾವವೂ ಪೂರ್ಣೋಪಾಯ ಗಳಲ್ಲ. ಹಿಂದಿನ ತಿಂಗಳ ಸಂದೇಶದಲ್ಲಿ ನಾವು ಹೇಳಿರುವಂತೆ 'ಆತ್ಮನಿಂದ ವೀರ್ಯವನ್ನು ಹೊಂದಬಹುದು, ಆತ್ಮವಿದ್ಯೆಯಿಂದ ಅಮೃತತ್ವವನ್ನು ಹೊಂದಬಹುದು' ಎಂಬ ಉಪನಿಷದ್ವಾಕ್ಯವು ಈ ವಿಷಯದಲ್ಲಿ ನಮಗೆ ಒಂದು ಅಪೂರ್ವವಾದ ಉಪಾಯವನ್ನು ಒದಗಿಸಿಕೊಡುತ್ತದೆ. ನಮ್ಮ ಆತ್ಮನೇ ಆಗಿರುವ ಭಗವಂತನನ್ನು ಪ್ರತಿದಿನವೂ ಚಿಂತಿಸುವ ಅಭ್ಯಾಸವನ್ನು ಮಾಡಿಕೊಳ್ಳಬೇಕು. ಭಗವಂತನು ಯಾರು? ಎಲ್ಲಿದಾನೆ?–ಎಂದು ಮುಂತಾಗಿ ಚರ್ಚಿಸಬೇಕಾದ ಆವಶ್ಯಕತೆಯೇನೂ ಇಲ್ಲ. ಭಗವಂತನು ಸರ್ವವ್ಯಾಪಿಯು, ಆತನು ನಮ್ಮೆಲ್ಲರ ಆತ್ಮನಾಗಿ ನಮ್ಮಗಳ ಹೃದಯ ದಲ್ಲಿಯೇ ಇರುತ್ತಾನೆ ಎಂದು ಶಾಸ್ತ್ರದಲ್ಲಿ ಹೇಳಿರುತ್ತದೆ; ಅನುಭವಿಗಳಾದ ಆಚಾರ್ಯರೂ ಹೀಗೆಂದೇ ಉಪದೇಶಿಸುತ್ತಿದಾರೆ. ಎಲ್ಲೆಲ್ಲಿಯೂ ಇರುವ ಗಾಳಿಬೆಳಕುಗಳನ್ನು ಎಲ್ಲಿದೆ?– ಎಂದು ಕೇಳುವದು ದಡ್ಡತನವು; ಅವುಗಳನ್ನು ಉಪಯೋಗಿಸುವ ರೀತಿಯನ್ನು ಕಲಿತುಕೊಳ್ಳುವದೇ ಜಾಣತನವು. ವಿದ್ಯುಚ್ಛಕ್ತಿ ಎಲ್ಲಿದೆ? ಹೇಗಿದೆ?–ಎಂಬುದು ತಿಳಿಯದಿದ್ದರೂ ನಾವು ಅದರಿದ ನಮ್ಮ ಯಂತ್ರಗಳಿಗೆ ಶಕ್ತಿಯನ್ನು ಸಂಪಾದಿಸಿ ಕೊಳ್ಳಬಹುದು. ಹೀಗೆಯೇ ಭಗವಂತನಿಂದಲೂ ನಾವು ನಮ್ಮ ಮನೋಯಂತ್ರಕ್ಕೆ ಶಕ್ತಿಯನ್ನು ಸಂಪಾದಿಸಿಕೊಳ್ಳಬಹುದು.

ವಿದ್ಯುಚ್ಛಕ್ತಿಸಮೂಹನಯಂತ್ರಕ್ಕೆ ಪ್ರತಿದಿನವೂ ವಿದ್ಯುಚ್ಛಕ್ತಿಯನ್ನು ಭರ್ತಿಮಾಡಿಕೊಳ್ಳುವ ಹಾಗೆ ನಮ್ಮ ಪರಮಮೂಲವಾದ ಭಗವಂತನ ಸಂಬಂಧವನ್ನು ಧ್ಯಾನದಿಂದ ಸಂಪಾದಿಸಿಕೊಂಡು ಆತನಲ್ಲಿರುವ ಶಕ್ತಿಪ್ರವಾಹವು ನಮ್ಮೊಳಕ್ಕೂ ಹರಿದುಬರುವಂತೆ ಮಾಡಿಕೊಳ್ಳಬೇಕು. 'ತಮೇವ ಚಾದ್ಯಂ ಪುರುಷಂ ಪ್ರಪದ್ಯೇ ಯತಃ ಪ್ರವೃತ್ತಿಃ ಪ್ರಸೃತಾ ಪುರಾಣೀ' (ಗೀ. 15-4) ಯಾವನಿಂದ ಈ ಸಂಸಾರ-ವೆಲ್ಲವೂ ಹೊರಟು ಬಂದಿರುವದೋ, ಯಾವಾತನ ಬಲದಿಂದಲೇ ಈ ಜಗತ್ತಿನ ವ್ಯಾಪಾರವೆಲ್ಲವೂ-ಮೂಲಶಕ್ತಿಕೇಂದ್ರದಿಂದ ಬೇರೆ ಬೇರೆಯ ಯಂತ್ರಗಳಿಗೆ ಹರಿಯುವ ವಿದ್ಯುಚ್ಛಕ್ತಿಯಂತೆ-ಬಂದು ತೋರಿ ಕೊಳ್ಳುತ್ತಿರುವದೋ ಆ ಆದ್ಯ ಪುರುಷನನ್ನೇ ಶರಣುಹೊಕ್ಕಿರುತ್ತೇನೆ-ಎಂದು ಆ ಭಗವಂತನನ್ನು ಮರೆಹೋಗಬೇಕು.

ಔಷಧಿ ಮುಂತಾದವುಗಳನ್ನು ಉಪಯೋಗಿಸಲೇ ಬಾರದೆಂದು ನಾವು ಹೇಳುವದಿಲ್ಲ. ಅವುಗಳ ಅವಶ್ಯಕತೆಯೇ ಇಲ್ಲದೆ ತಾನೇ ಭಗವಂತನ ಅನುಗ್ರಹದಿಂದ ಆರೋಗ್ಯವನ್ನೂ ಬಲವನ್ನೂ ಸಂಪಾದಿಸಿಕೊಳ್ಳಬಹುದಾದರೂ ಅವುಗಳನ್ನು ಸರಿಯಾದ ರೀತಿಯಲ್ಲಿ ಹಿತಮಿತವಾಗಿ ಉಪಯೋಗಿಸುವದು ತಪ್ಪಲ್ಲ. ಆದರೆ ಅವುಗಳಲ್ಲಿರುವ ಶಕ್ತಿಯೂ ಈಶ್ವರನದೇ ಎಂಬುದನ್ನು ನೆನಪಿಡುವದು ಒಳ್ಳೆಯದು. ಭಗವಂತನಲ್ಲಿ ಅಚಲವಿಶ್ವಾಸ ವಿರುವಾತನು 'ಔಷಧಂ ಜಾಹ್ನವೀತೋಯಂ ವೈದ್ಯೋ ನಾರಾಯಣೋ ಹರಿಃ' ಎಂಬ ವಾಕ್ಯದ ಯಥಾರ್ಥತೆಯನ್ನು ನಿಸ್ಸಂಶಯವಾಗಿ ಮನಗಾಣಬಹುದು. ಆದರೆ ಲೋಕದಲ್ಲಿರುವ ಔಷಧಿಗಳಲ್ಲಿಯೂ ಯೋಗತಪೋಮಂತ್ರಾದಿಗಳಲ್ಲಿಯೂ ಕಾಣಬರುವ ವೀರ್ಯವು ಆತನದೇ ಎಂಬ ನಂಬಿಕೆಯಿಂದ ಅವನ್ನು ಉಪಯೋಗಿಸಿದರೂ ಮಹತ್ಪ್ರಯೋಜನವಾಗುತ್ತದೆ. ನಿಜವಾಗಿ ನೋಡಿದರೆ ಇಡಿಯ ಪೃಥ್ವಿಯಲ್ಲಿರುವ ಶಕ್ತಿವಿಶೇಷಗಳೆಲ್ಲ ಆತನಿಂದಲೇ ಬಂದಿರುತ್ತವೆ ಯಾದ್ದರಿಂದ ನೆಲದಲ್ಲಿ ಬೆಳೆಯುವ ಮರಗಿಡಗಳ ರಸವು ವೀರ್ಯವತ್ತಾಗಿರುವದಕ್ಕೆ ಆತನೇ ಕಾರಣವು. ತಪಸ್ವಿಗಳಿಗೂ ಯೋಗಿಗಳಿಗೂ ಆಯಾ ಸಿದ್ಧಿಗಳನ್ನು ಅನುಗ್ರಹಿಸುವವನು ನಿತ್ಯಸಿದ್ಧನಾದ ಆ ಪರಮೇಶ್ವರನೇ ಆಗಿರುತ್ತಾನೆ. ಆದ್ದರಿಂದ ಆತನನ್ನು ಬಿಟ್ಟು ಔಷಧಾದಿಗಳನ್ನೇ ನಂಬುವವರು ಅನ್ನಸಂತರ್ಪಣೆಯನ್ನು ಮಾಡಿಸುವ ಯಜಮಾನನನ್ನು ಲೆಕ್ಕಕ್ಕೆ ತಾರದೆ, ಆತನ ಮನೆಯಲ್ಲಿ ಅಡಿಗೆಗೆ ಬರುವ ಅಥವಾ ಬಡಿಸುವದಕ್ಕೆ ಬರುವ ಜನರನ್ನು ಊಟಕ್ಕೆ ಆಶ್ರಯಿಸುವ ಮೂಢರಂತೆ ಇರುತ್ತಾರೆನ್ನಬೇಕಾಗಿದೆ.

ಭಗವಂತನೇ ಬಲವು. 'ಕಾಮರಾಗವಿಲ್ಲದ ಬಲವು ನಾನು' ಎಂದು ಗೀತೆಯಲ್ಲಿ ಆತನೇ ಅಪ್ಪಣೆಕೊಡಿಸಿರುತ್ತಾನೆ. ಆದ್ದರಿಂದ ದೇಹಾರೋಗ್ಯಕ್ಕೂ ಬಲಕ್ಕೂ ಆ ಬಲವಂತರ

ಬಲವಾಗಿರುವ ಭಗವಂತನನ್ನೇ ಚಿಂತಿಸಿರಿ, ಆತನ ಸಂಸ್ಪರ್ಶದಿಂದಲೇ ಬಲವನ್ನು ಪಡೆದುಕೊಳ್ಳುವ ಸಂಕಲ್ಪವನ್ನು ಮಾಡಿಕೊಳ್ಳಿರಿ.

ಇನ್ನೊಂದು ಮಾತು. ಭಗವಂತನಿಂದ ಬಲಪ್ರವಾಹವು ನಿಮ್ಮೊಳಕ್ಕೆ ನುಗ್ಗಿಬಂದಿರುವ ಅನುಭವವು ಕಾಣಿಸಿಕೊಂಡರೆ ಅಷ್ಟಕ್ಕೇ ಹಿಗ್ಗಿ ಸುಮ್ಮನಾಗಬೇಡಿರಿ. ನಿಮ್ಮ ಸುತ್ತಮುತ್ತಲಿನ ಜನರಿಗೂ ಅದರ ಪ್ರಯೋಜನವಾಗಲೆಂದು ಭಗವಂತನಲ್ಲಿ ಮೊರೆಯಿಡುತ್ತಾ ಬನ್ನಿರಿ. ಒಂದು ಕುಂಟೆಯೊಳಕ್ಕೆ ಹರಿದುಬರುವ ನೀರು ಕುಂಟೆಯು ತುಂಬಿದಮೇಲೂ ಬರುತ್ತಲೇ ಇರುತ್ತದೆ. ಅದು ಕೋಡಿಯಿಂದ ಆಚೆಗೆ ಹರಿದುಹೋಗದಿದ್ದರೆ ಕುಂಟೆಯಲ್ಲಿರುವ ನೀರು ಮಲೆತುಕೊಳ್ಳುತ್ತದೆ. ಕಾಲುವೆಯ ನೀರು ಹಿಮ್ಮೆಟ್ಟ ಕಾಲುವೆಯ ಮೇಲೂ ಹರಿದು ಅಡ್ಡದಾರಿಯನ್ನು ಹಿಡಿಯಬಹುದು. ಮತ್ತೊಬ್ಬರಲ್ಲಿ ಮೈತ್ರಿ, ಕರುಣಾ, ಪ್ರೇಮ ಇವನ್ನು ಎಷ್ಟರಮಟ್ಟಿಗೆ ನೀವು ಹರಿಸುವಿರೋ ಅಷ್ಟರಮಟ್ಟಿಗೂ ಭಗವಂತನಿಂದಲೂ ಈ ಅಮೃತ ಝರಿಗಳು ನಿಮ್ಮ ಹೃದಯದೊಳಕ್ಕೆ ಹರಿದುಬಂದು ನುಗ್ಗುವವು; ಅಷ್ಟರಮಟ್ಟಿಗೂ ನಿಮ್ಮ ಅಂತಃಕರಣಕ್ಕೆ ಬಲವು ಬಂದು ಕಾಣಿಸಿಕೊಳ್ಳುವದು; ಅಷ್ಟರಮಟ್ಟಿಗೂ ನಿಮ್ಮ ಚಿತ್ತದ ಸ್ವಾಸ್ಥ್ಯವೂ ಶರೀರಸ್ವಾಸ್ಥ್ಯವೂ ಮೈದೋರುವವು.

ಆದ್ದರಿಂದ ನಿತ್ಯವೂ ಎಡೆಬಿಡದೆ ಈ ಮಂತ್ರವನ್ನು ಜಪಿಸುತ್ತಿರಿ. 'ಆತ್ಮನಿಂದಲೇ ವೀರ್ಯವನ್ನು ಹೊಂದುತ್ತಾರೆ, ಆತ್ಮವಿದ್ಯೆಯಿಂದಲೇ ಅಮೃತವನ್ನು ಹೊಂದುತ್ತಾರೆ. ಅಮೃತವೀರ್ಯದ ಮೂಲಸ್ಥಾನವಾದ ಪರಮಾತ್ಮನೆ, ನನಗೆ ಬಲವನ್ನು ಕೊಡು.'

## ಅಧ್ಯಾಯ–3 : ಪರಮಾರ್ಥದ ಅರಿವು

# 25. ನಿಜವಾದ ಆತ್ಮನು ಕೂಟಸ್ಥನೇ

* ಈ ಸಂಚಿಕೆಯು ತಮ್ಮ ಕೈಗೆ ಬಂದಾಗ ಅದನ್ನು ನೋಡಿದ ಕೂಡಲೆ ನಿಮಗೆ ಅದರಲ್ಲಿ ಆಕಾರವು ಸಣ್ಣದಾಗಿರುವದು ಗೋಚರವಾಗುವದು. ಅದರಲ್ಲಿ ಪುಟಗಳ ಸಂಖ್ಯೆಯು ಬದಲಾಯಿಸಿರುವದು, ಅದರ ಅಚ್ಚಿನ ಸ್ಥಾನವು ಬೇರ್ಪಟ್ಟಿರುವದು, ಅಕ್ಷರಗಳು ಬೇರೆಯಾಗಿ ಕಾಣುವದು, ಸಂಪಾದಕರು ಬೇರೆಯಾಗಿರುವದು–ಇಂಥ ಹಲವು ಮಾರ್ಪಾಡುಗಳು ನಿಮ್ಮ ಮನಸ್ಸಿಗೆ ಒಂದೊಂದಾಗಿ ಹೊಳೆಯುವವು. ಅಲ್ಲವೆ? ವಾಚಕವೃಂದ, ನಿಮ್ಮಲ್ಲಿ ಒಬ್ಬೊಬ್ಬರಲ್ಲಿಯೂ ಕಳೆದ ಒಂದು ವರ್ಷದೊಳಗಾಗಿ ಹೀಗೆಯೇ ಎಷ್ಟೋ ಮಾರ್ಪಾಡು ಗಳಾಗಿರುವವೆಂಬುದು ನಿಮ್ಮ ಮನಸ್ಸಿಗೆ ಬಂದಿದೆಯೆ? ನಿಮ್ಮ ಸುತ್ತಲಿನ ಜನರು, ನೆಂಟರು, ಇಷ್ಟರು, ಮಿತ್ರರು, ಶತ್ರುಗಳು, ಪ್ರಾಣಿಗಳು, ಗಿಡಮರಗಳು, ಪೈರುಪಚ್ಚೆಗಳು–ಎಲ್ಲವೂ ಹೀಗೆಯೇ ಮಾರ್ಪಟ್ಟಿವೆ ಎಂಬುದು ನಿಮ್ಮ ಲಕ್ಷ್ಯಕ್ಕೆ ಬಂದಿದೆಯೆ? ಹೀಗೆ ಎಲ್ಲವೂ ಮಾರ್ಪಡುತ್ತಿದ್ದರೂ ನಿಮ್ಮೊಳಗೆ ಯಾವದೋ ಒಂದು ತತ್ತ್ವವು ಯಾವ ಮಾರ್ಪಾಡೂ ಇಲ್ಲದೆ ಅದೇ ನಾನು ಈಗಲೂ ಇರುವೆನು, ಅದೇ ನಾನು ಮುಂದೂ ಇರುವೆನು–ಎಂದುಕೊಳ್ಳುತ್ತಿರುವದೆಂಬುದನ್ನು ನೀವು ಯಾವಾಗಲಾದರೂ ಮನದಂದುಕೊಂಡಿದ್ದೀರೇನು?

ಈ ತಿಂಗಳು ನಾನು ಜನರಿಗೆ **ಮುಪ್ಪು** ಬೇಗನೆ **ಬಾರದಂತೆ** ಮಾಡುವ **ಉಪಾಯ**ವನ್ನು ಕುರಿತು ಕೆಲವು ಮಾತುಗಳನ್ನು ಬರೆಯಬೇಕೆಂದಿರುವೆನು. ಅಧ್ಯಾತ್ಮವಿದ್ಯೆಯು ಉಗಮಸ್ಥಾನವಾದ ಉಪನಿಷತ್ತಿನಲ್ಲಿರುವ ಬೋಧೆಯ ಪ್ರಕಾರವಾಗಿ ನೋಡಿದರೆ ನಮ್ಮ ನಿಜವಾದ ಆತ್ಮನು ಎಲ್ಲಕ್ಕೂ ಆತ್ಮನಾದ ಪರಮಾತ್ಮನೇ ಆಗಿರುತ್ತಾನೆ. ಆ ಪರಮಾತ್ಮನು ಕೂಟಸ್ಥನಿತ್ಯನು; ಆದ್ದರಿಂದ ಅವನಲ್ಲಿ ಯಾವ ಮಾರ್ಪಾಡೂ ಇರುವದಿಲ್ಲ. ಯಾವಾಗಲೂ ಇದ್ದವನು ಇದ್ದಂತೆಯೇ ಇರುವನಾದ್ದರಿಂದ, ಅವನಲ್ಲಿ ಒಂದು ಕಾಲದಲ್ಲಿ ಯಾವ ದೋಷಗಳೂ ಇರುವದಿಲ್ಲವೆಂದೂ ಮತ್ತೊಂದು ಕಾಲದಲ್ಲಿ ಮುಪ್ಪಿನ ದೋಷವು ಬಂದು ಅಂಟಿಕೊಳ್ಳುವದೆಂದೂ ತಿಳಿಯುವದಕ್ಕೆ ಸ್ವಲ್ಪವೂ ಅವಕಾಶವಿರುವದಿಲ್ಲ.

ಆದರೂ ಈಗ ನಮಗೆ ಮುಪ್ಪಿನ ಚಿಂತೆಯು ತಪ್ಪುವಹಾಗಿಲ್ಲ. ನಮ್ಮ ಜೊತೆಯಲ್ಲಿ ಹುಟ್ಟಿ ಬೆಳೆದವರು, ಕೆಲವು ವರ್ಷಗಳ ಹಿಂದೆ ಹರೆಯದ ಕಾಂತಿಯಿಂದ ಹೊಳೆಯು ತ್ತಿದ್ದವರು, ಈಗ ಮುದುಕರಾಗಿರುತ್ತಾರೆ. ಅವರು ದಿನ ದಿನಕ್ಕೂ ಶರೀರದಲ್ಲಿ

---

* ಸಂಪುಟ 18, ಸಂಚಿಕೆ 1, ಸೆಪ್ಟೆಂಬರ್ 1948, ಪುಟ 1–7

ದುರ್ಬಲರಾಗುತ್ತಾಬರುತ್ತಿದಾರೆ. ಅವರ ಇಂದ್ರಿಯಗಳ ಪಾಟವವು ಕಡಿಮೆಯಾಗುತ್ತಾ ಬಂದಿದೆ. ಅವರ ಮನಸ್ಸಿನ ಶಕ್ತಿಯು ಕುಗ್ಗುತ್ತಾ ಬಂದಿರುತ್ತದೆ. ವಯಸ್ಸು ಹೆಚ್ಚಿದಂತೆಲ್ಲ ಮೈಚರ್ಮವು ಸುಕ್ಕುತ್ತಿರುವದು, ಕಣ್ಣಿನ ಹೊಳಪು ಕಡಿಮೆಯಾಗುತ್ತಿರುವದು, ಕೈಕಾಲುಗಳ ದಾರ್ಢ್ಯವು ಕುಂದುತ್ತಿರುವದು–ಇವೆಲ್ಲ ಅವರಿಗೆ ಮುಪ್ಪಿನ ದೋಷವು ತಗಲಿಕೊಳ್ಳುತ್ತಿದೆ ಎಂದು ಚಾಡಿಹೇಳುತ್ತಿವೆ. ಅದರ ಜೊತೆಗೆ ನಾವೂ ಬಲಗುಂದುತ್ತಿರುವೆವು, ಉತ್ಸಾಹದಲ್ಲಿ ಕಡಿಮೆಯಾಗುತ್ತಿರುವೆವು. ನಮ್ಮ ಸುತ್ತಲೂ ಇರುವವರು ಇದು 'ವಯೋಧರ್ಮ' ಎಂದು ನೆನಪುಕೊಡುತ್ತಿರುವರು. ಹೀಗಿರುವಲ್ಲಿ ನಮ್ಮ ಆತ್ಮನಿಗೆ ಮುಪ್ಪಿಲ್ಲ ಎಂಬ ಶಾಸ್ತ್ರೋಕ್ತಿಯನ್ನು ನಾವು ಹೇಗೆ ಉಪಯೋಗಿಸಿ ಕೊಳ್ಳಬೇಕು?–ಎಂದು ಅನೇಕರಿಗೆ ಶಂಕೆಯುಂಟಾಗುತ್ತಿರುವದು.

ಇದಕ್ಕೆ ಉತ್ತರವನ್ನು ಕೊಡುವದಕ್ಕೆ ಅಧ್ಯಾತ್ಮ ವಿದ್ಯಾವಿಶಾರದರಿಗೆ ತಡವಾಗುವದಿಲ್ಲ. 'ನೀವು ಆತ್ಮನೇ ಹೊರತು ಶರೀರವಲ್ಲ. ನಿಮ್ಮ ಶರೀರಕ್ಕೆ ಮುಪ್ಪು ಬಂದರೆ ನಿಮಗೇನಾಯಿತು? ಶರೀರವೇ ನಾನೆಂಬ ಚಿಂತೆಯನ್ನು ತಪ್ಪಿಸಿಕೊಳ್ಳಿರಿ. ನಿಮಗೆ ಯಾವ ಮುಪ್ಪೂ ಪರಮಾರ್ಥವಾಗಿ ಇರುವದೇ ಇಲ್ಲ. ದೇಹವು ಹುಟ್ಟಿದರೆ ನೀವು ಹುಟ್ಟಿದಂತಲ್ಲ; ದೇಹವು ಬೆಳೆದರೆ ನೀವು ಬೆಳೆದಂತಲ್ಲ, ದೇಹವು ಸವೆದರೆ ನೀವು ಸವೆದಂತಲ್ಲ; ದೇಹಕ್ಕೆ ಮುಪ್ಪಡಸಿದರೆ ನಿಮಗೆ ಮುಪ್ಪು ಸೋಂಕಿದಂತೆಯೂ ಅಲ್ಲ. ನೀವು ಅಜರರು, ಅಮರರು. ಈ ವೇದಾಂತಜ್ಞಾನವನ್ನು ಸಂಪಾದಿಸಿಕೊಳ್ಳಿರಿ!' ಎಂದು ಆ ತತ್ತ್ವಜ್ಞಾನಿಗಳು ಉಪದೇಶಿಸುತ್ತಿರುವರು.

ಈ ಜ್ಞಾನವು ಯಾರಿಗೆ ಲಭಿಸುವದೋ ಅಂಥ ಮಹನೀಯರು ಲೋಕದಲ್ಲಿ ಸಾವಿರ ಸಾವಿರಕ್ಕೆ ಒಬ್ಬರಂತೆ ಕೂಡ ಸಿಕ್ಕಲಾರರು. ಅಂಥವರನ್ನು ಬಿಟ್ಟರೆ ಸಾಮಾನ್ಯರ ಪಾಡೇನು? ಯಾವ ರೋಗವೂ ಬಾರದಂತೆ ನೋಡಿಕೊಳ್ಳಿ ಎಂದು ಉಪದೇಶಿಸುವದು ಉತ್ತಮವಾದ ಉಪದೇಶವೇ ಸರಿ; ಆದರೆ ಆಗಲೆ ರೋಗದಿಂದ ನರಳುತ್ತಿರುವವರ ಪಾಡೇನು? ಅವರಿಗೆ ಏನಾದರೂ ಚಿಕಿತ್ಸೆಯನ್ನು ಮಾಡಬೇಕಲ್ಲವೆ? ಆದ್ದರಿಂದ ಯಾರು ಆಗಲೆ ಹೆಚ್ಚಿನ ವಯಸ್ಸಿನವರಾಗಿರುವರೋ, ಯಾರು ಇಷ್ಟರಲ್ಲಿಯೇ ಮುದುಕರಾಗುವಷ್ಟು ವಯಸ್ಸಿಗೆ ಏರಿರುವರೋ ಮತ್ತು ಯಾರು ಇನ್ನೂ ಕಡಿಮೆಯ ವಯಸ್ಸಿನವರಾಗಿದ್ದರೂ ಮುಪ್ಪು ತಮಗೆ ಬೇಗನೆ ಬರಬಹುದೆಂದು ಅಂಜುತ್ತಿರುವರೋ, ಅವರಿಗೆ ಇದೇ ಅಧ್ಯಾತ್ಮವಿದ್ಯೆಯ ಆಧಾರದಿಂದ ಕೆಲವು ಉಪದೇಶಗಳನ್ನು ಮಾಡುವದು ಅವಶ್ಯವು.

ನಮ್ಮಗಳಲ್ಲಿ ಅನೇಕರು ನಡುವಯಸ್ಸಿನವರಾಗುವವರೆಗೆ ಶರೀರದಲ್ಲಿ ದೃಢಗಾತ್ರ ರಾಗಿರುತ್ತಾರೆ. ಅವರು ತಮ್ಮ ಸ್ವಪ್ರಯತ್ನದಿಂದ ತಿಳಿವಳಿಕೆಯನ್ನೂ ಧನಸಂಪತ್ತನ್ನೂ ಅಧಿಕಾರವನ್ನೂ ಸಮಾಜದಲ್ಲಿ ಒಳ್ಳೆಯ ಸ್ಥಾನಮಾನಗಳನ್ನೂ ಸಂಪಾದಿಸಿಕೊಂಡಿರುತ್ತಾರೆ.

ಆದರೆ ಅವರು ಈ ಐಸಿರಿಯನ್ನು ತಮ್ಮ ಉಪಯೋಗಕ್ಕೂ ತಮ್ಮವರ ಉಪಯೋಗಕ್ಕೂ ಬಹುಜನರ ಉಪಯೋಗಕ್ಕೂ ವಿನಿಯೋಗಿಸುವದಕ್ಕೆ ಇದೇ ಸುಸಮಯವೆಂದು ಕಂಡುಬರುವ ಹೊತ್ತಿಗೆ ಸರಿಯಾಗಿ, ಅದೇನು ಮಾಯೆಯೊ, ಅವರ ಮುನ್ನಡೆಯು ತಟ್ಟನೆ ಅಲ್ಲಿಗೇ ನಿಂತುಬಿಡುತ್ತದೆ, ಅವರ ಆರೋಗ್ಯವು ಕೆಡುತ್ತದೆ, ಬರುಬರುತ್ತಾ ಶರೀರವು ಯಾವ ಕೆಲಸಕ್ಕೂ ಬಾರದ್ದಾಗುತ್ತದೆ. ಎಷ್ಟೋ ಸಂದರ್ಭಗಳಲ್ಲಿ ಕೂತಬಳಿಯಿಂದ ಏಳಲಾರದೆ ಕಾಲವನ್ನು ಕಳೆಯುತ್ತಿದ್ದು, ಕೊನೆಗೆ ಹಾಸಿಗೆಹಿಡಿದು, ಇಹಲೋಕದ ಯಾತ್ರೆಯನ್ನು ಮುಗಿಸಿಬಿಡುತ್ತಾರೆ. ಕೆಲವರಂತೂ ನಲವತ್ತು ಐವತ್ತಾಗುವದರೊಳಗೆ ಎಂಬತ್ತೋ ತೊಂಬತ್ತೋ ವರ್ಷವಾದವರಂತೆ ಕಾಣುತ್ತಾ ಯಾವ ಕೆಲಸಕ್ಕೂ ತಕ್ಕವರಾಗದೆ ಶರೀರದ ಶಕ್ತಿಯೂ ಮನಸ್ಸಿನ ಶಕ್ತಿಯೂ ಕುಗ್ಗಿ ಕೈನಡುಗುತ್ತಾ ಬೆನ್ನುಬಾಗಿ ತಟ್ಟಾಡುತ್ತಾ ನಡೆಯುತ್ತಿರುತ್ತಾರೆ. ಇದೇಕೆ? ಎಲ್ಲಿಯೋ ಕೆಲವರು ಮಹನೀಯರು ಎಂಬತ್ತುತೊಂಬತ್ತು ವಯಸ್ಸಿನವರಾದರೂ ಗಟ್ಟಿಮುಟ್ಟಾ ಗಿರುತ್ತಾರೆ, ಮನಸ್ಸಿನಲ್ಲಿ ಉತ್ಸಾಹಭರಿತರಾಗಿರುತ್ತಾರೆ. ವಯಸ್ಸು ಮೀರಿದಮೇಲೂ ದೊಡ್ಡದೊಡ್ಡ ಕಾರ್ಯಗಳನ್ನು ಕೈಕೊಂಡು ನಿರ್ವಿಘ್ನವಾಗಿ ತೃಪ್ತಿಕರವಾಗಿ ಪರಿಪೂರ್ತಿ ಮಾಡಿರುವವರೂ ಕಾಣಬರುತ್ತಾರೆ. ಅದರ ರಹಸ್ಯವೇನು?

ಇದೆಲ್ಲ ಅವರವರ ಪೂರ್ವಾರ್ಜಿತ, ಆಯಾ ವಂಶದ ಪೂರ್ವಿಕರ ರಕ್ತಬಲ ಅಥವಾ ಅದೃಷ್ಟ ಎಂದು ನಮ್ಮಲ್ಲಿ ಅನೇಕರು ಭಾವಿಸುತ್ತಾರೆ. ನಾವು ಮಾತ್ರ ಹೀಗೆಯೇ ಬರುಬರುತ್ತಾ ಬಲಗುಂದಿ, ಇಂದ್ರಿಯಗಳ ತೇಜವಡಗಿ, ಬೇಗ ಮುಪ್ಪಿಗೆ ಮುಡುಪಾಗುವದೇ ಸಹಜವೆಂದು ಅವರ ಭಾವನೆ! ಆದರೆ ವಿಚಾರಪರರಾದ ಅನೇಕ ಜನರು ಇಷ್ಟುಬೇಗನೆ ಮುಪ್ಪಾಗತಕ್ಕದ್ದು ಅನವಶ್ಯವೆಂತಲೂ, ಇನ್ನೂ ವಯಸ್ಸಾಗುವದರೊಳಗೇ ಇಂಥ ಭಯಂಕರವಾದ ಮುಪ್ಪು ಜನರಿಗೆ ಬರುವದಕ್ಕೆ ಅವರವರೇ ಕಾರಣರೆಂತಲೂ, ಅವರು ಇಷ್ಟಪಟ್ಟರೆ ಮುಪ್ಪನ್ನು ಬಹಳ ಹಿಂದಕ್ಕೆ ತಳ್ಳಬಹುದೆಂತಲೂ ಅಭಿಪ್ರಾಯಪಟ್ಟಿರುತ್ತಾರೆ.

ಚಿಂತೆಯೇ ಮುಪ್ಪು, ಸಂತೋಷವೇ ಯೌವನ–ಎಂಬ ಗಾದೆಯನ್ನು ನೀವು ಕೇಳಿರಬಹುದು. ಮನಸ್ಸಿಗೆ ದೊಡ್ಡ ಕಷ್ಟವಾಗಲಿ, ಕರೆಕರೆಯಾಗಲಿ, ಅಂಜಿಕೆಯಾಗಲಿ ಹತ್ತಿಕೊಂಡರೆ ಮನುಷ್ಯನಿಗೆ ಎರಡು ತಿಂಗಳಲ್ಲಿ ಅಥವಾ ಎರಡೇ ವಾರದಲ್ಲಿ ಹತ್ತಿಪ್ಪತ್ತು ವರ್ಷಗಳು ಹೆಚ್ಚು ವಯಸ್ಸಾದ ಫಲವು ಶರೀರದಲ್ಲಿ ಕಾಣಿಸಿಕೊಳ್ಳಬಹುದು. ಈ ತತ್ತ್ವವನ್ನು ನಾವು ಮನಗಂಡಂತೆಲ್ಲ ನಮ್ಮ ಮನಸ್ಸಿನಲ್ಲಿ ಎಂಥ ಭಾವನೆಗಳಿಗೆ ನಾವು ಎಡೆಗೊಡಬೇಕೆಂಬ ವಿಷಯದಲ್ಲಿ ಅಷ್ಟಷ್ಟು ಎಚ್ಚರಿಕೆಯಿಂದಿರಬೇಕಾಗುವದು. ಅಧ್ಯಾತ್ಮಶಾಸ್ತ್ರಜ್ಞರು ಈ ತತ್ತ್ವವನ್ನು ಮನದಂದೇ ಮನುಷ್ಯನಿಗೆ ಉತ್ತಮಭಾವನೆಗಳನ್ನು ಬಲಪಡಿಸಿಕೊಳ್ಳುವ ಬಗೆಬಗೆಯ ಸಾಧನಗಳನ್ನು ಉಪದೇಶಿಸಿರುತ್ತಾರೆ. 'ಶರೀರದ ವಯಸ್ಸು ಅದರ ಮನಸ್ಸಿನ ಭಾವಗಳಮೇಲೆ ಇರುವದು; ಹೊರಗೆ ಎಷ್ಟಾದರೂ ವರ್ಷಗಳು ಆಗಲಿ, ನಮ್ಮ ಮನಸ್ಸಿನಲ್ಲಿ ಚಿಕ್ಕವಯಸ್ಸಿನ

ಭಾವನೆಯನ್ನೇ ಇಟ್ಟುಕೊಂಡು ಆ ವಯಸ್ಸಿನ ಮುಖಭಾವವನ್ನೇ ಹೊರಗೆ ತೋರಿಸಿಕೊಳ್ಳುವದು ಸಾಧ್ಯ' ಎಂದು ಕೆಲವರು ಮನಃಶಾಸ್ತ್ರಜ್ಞರು ಅಭಿಪ್ರಾಯಪಟ್ಟಿರುತ್ತಾರೆ.

ಶರೀರಕ್ಕೆ ಮುಪ್ಪು ಬಾರದಂತೆ ಯಾವದಾದರೂ ಯೋಗಶಕ್ತಿಯನ್ನು ಅಥವಾ ಮಂತ್ರಶಕ್ತಿಯನ್ನು ಸಂಪಾದಿಸುವ ವಿಧಾನವನ್ನು ಹೇಳುವದಕ್ಕೆ ನಾನು ಹೊರಟಿರುವೆನೆಂದು ಓದುಗರು ಭಾವಿಸಬಾರದು. ಅಕಾಲದಲ್ಲಿ ನಮಗೆ ಮುಪ್ಪು ಬಾರದಂತೆ, ವಯಸ್ಸು ಹೆಚ್ಚಿದಂತೆ ಅವಶ್ಯವಾಗಿ ಆಗುವ ದೇಹದ ಮಾರ್ಪಾಡುಗಳು ಆದರೂ ನಮ್ಮ ಶಕ್ತಿಯು ಅನವಶ್ಯವಾಗಿ ಕಂದಿಕುಂದಿ ನಮ್ಮನ್ನು ಮುಗ್ಗರಿಸುವಂತೆ ಮಾಡದೆ ಹರೆಯದಿಂದ ನಡುವಯಸ್ಸಿಗೆ ಸಾಗುವದಕ್ಕೂ ನಡುವಯಸ್ಸಿನಿಂದ ಜೀವಮಾನದ ಅಂತ್ಯಭಾಗಕ್ಕೆ ಆದಷ್ಟು ಶಕ್ತಿಯನ್ನೂ ಉತ್ಸಾಹವನ್ನೂ ಕೊಂಡೊಯ್ಯುವದಕ್ಕೂ ಉಪಾಯವಿಲ್ಲದೆ ಇಲ್ಲ ಎಂಬುದನ್ನು ತಿಳಿಸುವದೇ ನನ್ನ ಉದ್ದೇಶವು.

ಅಧ್ಯಾತ್ಮಶಾಸ್ತ್ರದಂತೆ ನಮ್ಮ ಆತ್ಮನಲ್ಲಿ ನಿಜವಾಗಿ ಯಾವ ಮುಪ್ಪೂ ಇಲ್ಲವೆಂದು ಹಿಂದೆ ಹೇಳಿದೆ. ಅದು ನಿಜವಾದರೆ ನಮಗೆ ಆತ್ಮನ ಚಿಂತೆಗಿಂತಲೂ ದೇಹದ ಚಿಂತೆಯೇ ಹೆಚ್ಚಾಗಿರುವದೆಂದು ಮೇಲೆಯೇ ಕಾಣಿಸುತ್ತದೆ. ದೇಹವು ಕ್ಷಣಕ್ಷಣಕ್ಕೂ ಮಾರ್ಪಡುತ್ತಿರುವದರಿಂದ ಅದನ್ನನುಸರಿಸುವ ಮನಸ್ಸಿಗೆ ಕ್ಷಣಕ್ಷಣಕ್ಕೂ ಮುಪ್ಪಿನ ಅಂಜಿಕೆಯು ಹತ್ತಿಕೊಳ್ಳುವದು ಸಹಜವಾಗಿರುತ್ತದೆ. ಆದರೆ ಕೂಟಸ್ಥನಿತ್ಯನೆಂದು ಶಾಸ್ತ್ರದಲ್ಲಿ ಪ್ರಸಿದ್ಧವಾಗಿರುವ ನಮ್ಮೆಲ್ಲರ ಆತ್ಮನಾದ ಭಗವಂತನ ಚಿಂತೆಯನ್ನು ಅಭ್ಯಾಸ ಮಾಡುತ್ತಿರುವವರಿಗೆ ಮುಪ್ಪಿನ ಅಂಜಿಕೆಯು ಎಂದಿಗೂ ಬರಲಾರದು. ಪರಮೇಶ್ವರನು ನಮ್ಮ ಆತ್ಮನು ಎಂಬ ಜ್ಞಾನವನ್ನು ವೇದಾಂತವಿಚಾರದಿಂದ ಸಂಪಾದಿಸಿಕೊಂಡು ಆ ಜ್ಞಾನವನ್ನು ಅನುಭವಕ್ಕೆ ತಂದುಕೊಳ್ಳುವ ಮಹಾಭಾಗ್ಯವು ನಮ್ಮೆಲ್ಲರಿಗೂ ಇರಲಾರದು. ಆದರೆ ಭಾವನೆಯಿಂದ ಅದನ್ನೇ ನಂಬಿ ನಮ್ಮ ಜೀವಮಾನದ ಸೂತ್ರವಾಗಿಟ್ಟುಕೊಳ್ಳುವದೇನೂ ಪ್ರಯತ್ನಪಡುವವರಿಗೆ ಕಷ್ಟವಲ್ಲ. ಜರಾಮರಣಗಳಿಗೆ ದೂರನಾಗಿರುವ ಪರಮಾತ್ಮನನ್ನು ತಮ್ಮ ಆತ್ಮನೇ ಎಂದು ಭಾವಿಸುವ ಧ್ಯಾನಯೋಗಿಗಳಿಗೆ ಹೃದಯದಲ್ಲಿ ಆನಂದವೂ ಶರೀರದಲ್ಲಿ ಸ್ವಾಸ್ಥ್ಯವೂ ಸಿಕ್ಕುವದೆಂಬುದು ಅತ್ಯಂತ ಸ್ವಾಭಾವಿಕವಾಗಿರುತ್ತದೆ.

ನಚಿಕೇತನೆಂಬ ಹುಡುಗನಿಗೂ ಯಮನಿಗೂ ನಡೆದ ಸಂಭಾಷಣೆಯೊಂದು ಕಠೋಪನಿಷತ್ತಿ ನಲ್ಲಿದೆ. ಯಮನು ಮುಪ್ಪುಸಾವುಗಳಿಗೊಡೆಯನು. ಜನಗಳ ಧರ್ಮಾಧರ್ಮಗಳಿಗೆ ಅನುಗುಣವಾಗಿ ಅವರು ಒಂದಲ್ಲದಿದ್ದರೆ ಒಂದುದಿನ ಮೃತ್ಯುವಿಗೆ ವಶರಾಗುವರು. ಆದರೆ ಮುಪ್ಪಾಗಲಿ ಮರಣವಾಗಲಿ ಈ ಲೋಕದಲ್ಲಿ ಬರುವಂತೆ ಸ್ವರ್ಗಲೋಕದಲ್ಲಿ ತಟ್ಟನೆ ಬರುವದಿಲ್ಲವಂತೆ. ಆ ಸ್ವರ್ಗವನ್ನು ಮುಟ್ಟಿದವನು 'ನ ಜರಯಾ ಬಿಭೇತಿ' ಮುಪ್ಪಿಗೆ ಅಂಜುವದಿಲ್ಲವಂತೆ. ಆ ಸ್ವರ್ಗಕ್ಕೆ ಹೋಗುವ ಉಪಾಯವನ್ನು

ಹೇಳಿಕೊಡು ಎಂದು ನಚಿಕೇತನು ಪ್ರಾರ್ಥಿಸಿದನು. ಆ ಹುಡುಗನಿಗೆ ಯಮನು ಅಗ್ನಿವಿದ್ಯೆಯನ್ನು-ಇಡಿಯ ಜಗತ್ತೇ ಶರೀರವಾಗಿರುವ ವಿರಾಟ್ಪುರುಷನ ಉಪಾಸನೆಯನ್ನು-ಹೇಳಿಕೊಟ್ಟನಂತೆ. ಈ ಕಥೆಯಲ್ಲಿರುವ ಉಪದೇಶದ ಸಾರವೇನೆಂದರೆ ಸರ್ವಾತ್ಮನಾದ ಭಗವಂತನ ಧ್ಯಾನವನ್ನು ಮಾಡಿದವರಿಗೆ ಮುಪ್ಪಿನ ಭಯವು ಒಂದಿಷ್ಟೂ ಆಗುವದಿಲ್ಲ. ಅವರು ಈ ಲೋಕದಲ್ಲಿ ಬಹುಕಾಲ ಸುಖದಿಂದ ಬದುಕಿದ್ದು ಪರಲೋಕದಲ್ಲಿಯೂ ಸುಖದಿಂದ ಬಾಳುವರು. ಸ್ವರ್ಗಲೋಕದಲ್ಲಿರುವ ದೇವತೆಗಳಿಗೆ 'ತ್ರಿದಶರು' ಬಾಲ್ಯ ಯೌವ್ವನಕೌಮಾರವೆಂಬ ಮೂರೇ ಅವಸ್ಥೆಗಳುಳ್ಳವರು, ಮುಪ್ಪಿಲ್ಲದವರು ಎಂದು ಹೆಸರು. ಭಗವಂತನ ಚಿಂತೆಯಿಂದ ಜನರು ಈ ಲೋಕದಲ್ಲಿ ಬದುಕಿರುವವರೆಗೂ ತ್ರಿದಶರಾಗಿರಬಹುದು, ಮುಪ್ಪಿನ ಕರೆಕರೆಯಿಲ್ಲದೆ ಸುಖವಾಗಿ ಬಾಳಬಹುದು.

ಮನುಷ್ಯನಿಗೆ ದೂರದೃಷ್ಟಿಯಿಲ್ಲದಿದ್ದರೆ, ಇಂದಿಗೆ ಉಂಡದ್ದೇ ಬಂತು-ಎಂಬ ಭೋಗಲಾಲಸೆಯು ಮನಸ್ಸಿಗೆ ಹತ್ತಿಕೊಳ್ಳುವದು. ಇಂದ್ರಿಯಗಳು ವಿಷಯಭೋಗಕ್ಕೆ ಹರಿದಷ್ಟೂ ಸೋಲುವವು, ಕಾಂತಿಗುಂದುವವು, ಮುಪ್ಪಿಗೆ ಔತಣವನ್ನು ಕೊಡುವವು. ಯಮನು ನಚಿಕೇತನಿಗೆ ಆತ್ಮವಿದ್ಯೆಯು ರುಚಿಯಿದೆಯೋ ಇಲ್ಲವೋ ಎಂದು ಪರೀಕ್ಷಿಸುವದಕ್ಕೋಸ್ಕರ ಅವನಿಗೆ ಬೇಕಾದಷ್ಟು ಹಣ, ಉತ್ತಮವಾದ ಅಪ್ಸರಸ್ತ್ರೀಯರು, ಸಂಚರಿಸುವದಕ್ಕೆ ಉತ್ತಮವಾದ ರಥ, ಕೇಳುವದಕ್ಕೆ ಇಂಪಾದ ಸಂಗೀತ-ಮುಂತಾದವುಗಳನ್ನೆಲ್ಲ ಕೊಡುತ್ತೇನೆ-ಎಂದು ಆಸೆಯನ್ನು ತೋರಿಸಿದನು. ಆದರೆ ನಚಿಕೇತನು ಅದಕ್ಕೆ ಹೇಳಿದ್ದೇನು? 'ಇವೆಲ್ಲ ಇಂದ್ರಿಯಗಳ ತೇಜಸ್ಸನ್ನು ಕಳೆಯುವವು, ಅವು ನನಗೆ ಬೇಡ' ಎಂದುಬಿಟ್ಟನು. ಶರೀರೇಂದ್ರಿಯಗಳ ಶಕ್ತಿಯು ಕುಂದಿದಮೇಲೆ, ಮನುಷ್ಯನು ಎಷ್ಟು ವರ್ಷ ಬದುಕಿದ್ದರೆ ತಾನೆ ಪ್ರಯೋಜನವೇನು? ಇಂದ್ರಿಯಗಳನ್ನೂ ಮನಸ್ಸನ್ನೂ ವಿಷಯಗಳ ಕಡೆಗೆ ಹರಿಯಬಿಟ್ಟ ಫಲವೇ ಮುಪ್ಪು. ಮುಪ್ಪಿನ ಭೀಕರ ಪರಿಣಾಮವು ಶರೀರದ ಮೇಲೆ ಕಾಣಿಸಿಕೊಂಡಾಗ ತನ್ನ ವಶದಲ್ಲಿ ತಾನು ಇರುವದಕ್ಕಿಲ್ಲ. ಮತ್ತೊಬ್ಬರಿಗೆ ಹೊರೆ. ಇಂಥವನನ್ನು ಜನರು ಕಂಡರೆ 'ಅಯ್ಯೋ ಪಾಪ, ಈ ಪ್ರಾಣಿಯು ಎಷ್ಟು ಬೇಗನೆ ಈ ಲೋಕವನ್ನು ಬಿಟ್ಟರೆ ಅಷ್ಟು ಅವನಿಗೂ ಕ್ಷೇಮ, ಮಿಕ್ಕವರಿಗೂ ಕ್ಷೇಮ!' ಎನ್ನುವದನ್ನು ನಾವೆಲ್ಲರೂ ಕೇಳಿಯೇ ಇರುತ್ತೇವೆ.

ಆದರೆ ಯಾವ ಮಹಾತ್ಮನಿಗೆ 'ನನ್ನ ಇಂದ್ರಿಯಗಳನ್ನು ನಾನು ಹತೋಟಿಯಲ್ಲಿಟ್ಟುಕೊಂಡರೆ ನಾನೇ ನನಗೆ ಬಂಧು, ಇವುಗಳನ್ನು ಹರಿಯಬಿಟ್ಟರೆ ನಾನೇ ನನಗೆ ಶತ್ರು' ಎಂಬ ತಿಳಿವಳಿಕೆಯು ಬಂದಿರುವದೋ 'ನಮ್ಮ ಪ್ರವೃತ್ತಿಗಳಿಗೆಲ್ಲ ಮೂಲ ಸ್ಥಾನವಾಗಿ ಒಬ್ಬ ಭಗವಂತನಿರುತ್ತಾನೆ, ಆತನ ಪ್ರೇರಣೆಯಿಂದಲೇ ನಾನು ಎಲ್ಲಾ ಕೆಲಸಗಳನ್ನೂ ಮಾಡುತ್ತಿರುವೆನು. ನನ್ನ ಹೃದಯದ ಬಾಗಿಲನ್ನು ಹಾರುಹೊಡೆದು

ಆತನ ಅನುಗ್ರಹದ ಅಮೃತಪ್ರವಾಹವು ನನ್ನ ಕಡೆಗೆ ಹರಿಯುವತೆ ಬಿಟ್ಟಷ್ಟೂ ನನ್ನ ಕೆಲಸವು ಹಗುರವಾಗುವದು' ಎಂಬ ನಂಬಿಕೆಯು ದೃಢವಾಗಿಬಿಟ್ಟಿರುವದೋ ಆತನು ಉಲ್ಲಾಸದಿಂದ ಉತ್ಸಾಹದಿಂದ ಜೀವನಯಾತ್ರೆಯನ್ನು ಸಾಗಿಸುತ್ತಿರುವನು. ಮುಪ್ಪಿನ ಹಾವಳಿಯು ಅವನ ಮುಖದ ಮೇಲೆ ಎಂದಿಗೂ ಕಾಣಿಸುವದಿಲ್ಲ. ಅವನು ಸುತ್ತಮುತ್ತಲಿನ ಜನರಿಗೆ ಸನತ್ಕುಮಾರನ ನೆನಪನ್ನು ಕೊಡುವನು.

ಪರಮೇಶ್ವರನು ನಿತ್ಯಯೌವನಕಾಂತಿಯ ನಿಧಿಯು, ಆತನು ಜರಾಮರಣದೂರನು, ಆತನೇ ನಮ್ಮಗಳ ಆತ್ಮನು-ಎಂಬ ಚಿಂತೆಯನ್ನು ನಿಮ್ಮ ಮನಸ್ಸಿನಲ್ಲಿ ಎಡೆಬಿಡದೆ ಕಂಡುಕೊಳ್ಳಿರಿ. ನಿಮ್ಮ ಮನಸ್ಸು ಆ ಧ್ಯಾನದಿಂದ ಅದ್ಭುತವಾದ ಮಾರ್ಪಾಡನ್ನು ಹೊಂದುವದು. ಭಗವಚ್ಚಿಂತನೆಯಿಂದ ಉತ್ಸಾಹವನ್ನು ದೊರಕಿಸಿಕೊಂಡ ಅಂತಃಕರಣದ ವೃತ್ತಿಗಳು ನಿಮ್ಮ ಶರೀರದ ಮೇಲೂ ಪ್ರಾಣಶಕ್ತಿಯಮೇಲೂ ಅದ್ಭುತವಾದ ಪರಿಣಾಮ ವನ್ನುಂಟುಮಾಡುವವು. ಪರಮಾತ್ಮನಿಂದಲೇ ಪ್ರಾಣವೂ ಮನಸ್ಸೂ ಸರ್ವೇಂದ್ರಿಯಗಳೂ ಹುಟ್ಟಿರುತ್ತವೆ. ಆತನೇ ಅವುಗಳ ಇರವಿಗೂ ಬೆಳವಣಿಗೆಗೂ ಮೂಲವು. ಆದ್ದರಿಂದ ನಿಮ್ಮ ಶರೀರವು ಎಂದೆಂದಿಗೂ ಹರಿಯುವ ಆ ಅಮೃತದ ಬುಗ್ಗೆಯ ಸಂಬಂಧದಿಂದ ಬೆಳೆದು ನಳನಳಿಸುವ ಕಲ್ಪವಲ್ಲಿಯಾಗಬೇಕೆಂಬ ಅಭಿಲಾಷೆಯು ನಿಮಗೆ ಇದ್ದರೆ ಧ್ಯಾನದ ಕಾಲುವೆಯೊಂದನ್ನು ಆ ಬುಗ್ಗೆಯಿಂದ ನಿಮ್ಮ ಹೃದಯಕ್ಕೆ ಏರ್ಪಡಿಸಿಕೊಳ್ಳಿರಿ.

# 26. ಚಿತ್ತಜನಯ್ಯನ ಚಿಂತೆಯೆಂಬ ಚಿಂತಾಮಣಿ

* ಕಳೆದ ಮಹಾಯುದ್ಧವು ಪ್ರಾರಂಭವಾದಂದಿನಿಂದ ವೃತ್ತಾಂತಪತ್ರಿಕೆಗಳಲ್ಲಿಯೂ ರೇಡಿಯೊಗಳಲ್ಲಿಯೂ 'ಸಾವುನೋವುಗಳು' ಎಂಬ ಶಬ್ದವು ಎಲ್ಲರ ಬಾಯಿಂದಲೂ ಆಗಿಂದಾಗ್ಗೆ ಹೊರಡುವದಕ್ಕೆ ಮೊದಲಾದವು. ಸಂಸಾರದಲ್ಲಿ ಸಾವೂ ನೋವೂ ಇಲ್ಲದ ಕಾಲವೇ ಇಲ್ಲ; ಆದರೂ ಇತ್ತೀಚೆಗೆ ಈ ಶಬ್ದಗಳಿಗೆ ಹೆಚ್ಚಿನ ಪ್ರಾಮುಖ್ಯ ಬಂದಿರುತ್ತದೆ. ಈ 'ಸಾವುನೋವು'ಗಳ ಭೀತಿಯು ಭೂಮಂಡಲದಲ್ಲಿ ಅಭೂತಪೂರ್ವವಾಗಿ ಎಲ್ಲರಿಗೂ ಅಂಟಿಕೊಂಡುಬಿಟ್ಟಿದೆ. ಈಗ ಸಾವುನೋವುಗಳಿಗಿಂತ ಜನರು ಅವುಗಳ ಭೀತಿಯಿಂದಲೇ ಹೆಚ್ಚಾಗಿ ಸಂಕಟಪಡುತ್ತಿದಾರೆನ್ನಬಹುದು.

ಆದರೆ ಮುಂದೆ ಉಂಟಾಗಬಹುದಾದ ಸಾವುನೋವುಗಳ ಅಂಜಿಕೆಯಿಂದ ಜನರು ತಲ್ಲಣಿಸುತ್ತಿದ್ದರೂ ತಮಗೆ ಬದುಕಿರುವಾಗಲೇ ಈಗಲೇ ಒಂದಾನೊಂದು ಸಾವು

* ಸಂಪುಟ 18, ಸಂಚಿಕೆ 2, ಅಕ್ಟೋಬರ್ 1948, ಪುಟ 9–15

ಉಂಟಾಗಿರುವದೆಂಬುದು ಅವರಿಗೆ ತಿಳಿಯದೆ ಇದೆ. ಅದರ ವಿಚಾರವನ್ನು ಮನಸ್ಸಿಗೆ ತಂದುಕೊಳ್ಳುವದೂ ಅವರಿಂದಾಗುವದಿಲ್ಲ. ಸತ್ತವರ ಶರೀರಕ್ಕೆ ಸಾವಿನ ಅಥವಾ ನೋವಿನ ಅರಿವು ಇರುವದಿಲ್ಲ; ಇರುವ ಸಂಭವವೂ ಇಲ್ಲ. ಅಲ್ಲವೇ? ಹಾಗೆಯೇ ಬದುಕಿರುವಾಗಲೇ ಸತ್ತವರಿಗೂ ತಮ್ಮ ಸಾವು ಯಾವ ಬಗೆಯದೆಂಬುದರ ಅರಿವು ಇರುವದಿಲ್ಲ; ಬಲ್ಲವರು ಯಾರಾದರೂ ಹೇಳುವವರೆಗೆ ಮತ್ತು ಅವರು ಹೇಳಿದ್ದನ್ನು ಇವರು ಕಿವಿಗೊಟ್ಟು ಕೇಳುವವರೆಗೆ, ಈ ಸಾವಿನ ಸುಳಿವೂ ಅವರ ಮನದಲ್ಲಿರುವದಿಲ್ಲ.

ಬದುಕಿರುವವರು ಸತ್ತಿದಾರೆಂದರೇನರ್ಥ? 'ಮಾತನಾಡುತ್ತಿರುವವನು ಮೂಕನು' ಎಂಬಂತೆ ತನಗೆ ತಾನೇ ವಿರುದ್ಧವಾದ ಮಾತಲ್ಲವೆ, ಇದು?–ಎಂದು ಯಾರಾದರೂ ಕೇಳಬಹುದು. ಆದರೂ 'ಬದುಕಿರುವವರ ಸಾವು' ಎಂಬ ಮಾತಿನಲ್ಲಿ ಅರ್ಥವಿದೆ. ನಮ್ಮಗಳ ಆತ್ಮಸ್ವರೂಪವು ಯಾವ ಸಾವೂ ಇಲ್ಲದ ಯಾವ ನೋವೂ ಅಂಟದ ಅಮರವಾದ ಅಮೃತವಾದ ಆನಂದವು–ಎಂದು ಶ್ರುತಿಯು ಸಾರುತ್ತಿದೆ, ಸ್ಮೃತಿಗಳು ಹಾಡುತ್ತಿವೆ, ಅನುಭವಿಗಳು ಉಪದೇಶಿಸುತ್ತಿರುತ್ತಾರೆ. ಆದರೆ ನಮ್ಮಲ್ಲಿ ಬಹುಜನರ ಪಾಲಿಗೆ ಆ ಸ್ವರೂಪವು ಸತ್ತಿದೆ, ಅದು ಇಲ್ಲವೇ ಇಲ್ಲ. ನಮಗೆ ಇನ್ನೊಂದು ಕೃತಕರೂಪವು ಇರುತ್ತದೆ; ಅದು ಸಾವುನೋವುಗಳ ಭಂಡಾರವು. ಅದು ನಮಗೆ ಪ್ರತ್ಯಕ್ಷಾನುಭವ ದಲ್ಲಿದೆಯೆಂದೂ ಅದನ್ನು ಹೊಡೆದುಹಾಕುವ ಜ್ಞಾನವು ಯಾವದೂ ಇಲ್ಲವೆಂದೂ ನಾವು ದೃಢವಾಗಿ ನಂಬಿ ವ್ಯವಹರಿಸುತ್ತಿದೇವೆ. ಇದೇ ನಮ್ಮ ಸಾವು. ನಾವು ಬದುಕಿರುವೆವೆಂದು ಎಣಿಸಿಕೊಂಡಿದ್ದರೂ ನಿಜವಾಗಿ ಸತ್ತಿರುತ್ತೇವೆ!

ಈ ಬದುಕಿರುವ ಸಾವು ಜನರಿಗೆ ಯಾವ ಯುದ್ಧದಲ್ಲಿ ಆಯಿತು?–ಎಂದು ನೀವು ಕೇಳಬಹುದು. ಆದರೆ ಇಲ್ಲಿ ಜನರನ್ನು ಕೊಂದವರು ಯಾರೊಬ್ಬರೂ ಇಲ್ಲವೇ ಇಲ್ಲ. ಜನರು ತಮ್ಮನ್ನು ತಾವೇ ಕೊಂದುಕೊಂಡಿರುತ್ತಾರೆ. ಇದೊಂದು ಬಗೆಯ ಆತ್ಮಹತ್ಯೆ. ಈ ಆತ್ಮಹತ್ಯಕ್ಕೆ ಉಪಯೋಗಿಸಿದ ನೇಣು ಯಾವದು, ಅಥವಾ ವಿಷವು ಯಾವದು?– ಎಂದರೆ ಅಜ್ಞಾನವೇ ಈ ನೇಣು, ಅಜ್ಞಾನವೇ ಈ ವಿಷ. ಅಜ್ಞಾನವೆಂಬ ನೇಣನ್ನು ನಮ್ಮ ಕೊರಳಿಗೆ ನಾವೇ ಬಿಗಿದುಕೊಂಡು ತೂಗುಬಿದ್ದಿದ್ದೇವೆ; ಅಜ್ಞಾನವೆಂಬ ವಿಷವನ್ನು ನಾವೇ ಕುಡಿದು ಸತ್ತಿರುತ್ತೇವೆ! ಈ ಆತ್ಮಹತ್ಯೆಯ ಫಲವೇನು? ಎಂದರೆ ಶ್ರುತಿಯು ಹೀಗೆನ್ನುತ್ತಿದೆ :

> "ಅಸುರ್ಯ ಎಂಬ ಲೋಕಗಳಿವೆ, ಆ ಲೋಕಗಳಲ್ಲಿ ಒಂದಿಷ್ಟೂ ಮುಂದು ಕಾಣಿಸದಂಥ ದಟ್ಟಗತ್ತಲೆ ಕವಿದುಕೊಂಡಿರುತ್ತದೆ. ಆತ್ಮಸ್ವರೂಪವನ್ನು ಕೊಂದುಕೊಂಡ ಜೀವರುಗಳು ಪ್ರೇತರಾಗಿ ಆ ಅಂಧಂತಮಸ್ಸಿನ ಅಸುರ್ಯಲೋಕಗಳನ್ನು ಸೇರುವರು". –ಈಶಾವಾಸ್ಯ

ಸತ್ತವರು ಪ್ರೇತರಾಗಿ ಸಂಕಟಪಡುವರೆಂದು ಪುರಾಣಗಳಲ್ಲಿ ವರ್ಣಿಸಿದೆಯಷ್ಟೆ. ಆತ್ಮಹತ್ಯವನ್ನು ಮಾಡಿಕೊಂಡ ಪಾಪಿಗಳೂ ಪ್ರೇತರಾಗಿ ಅಸುರರ ಲೋಕಗಳನ್ನು ಹೊಂದುವರು. ಅಲ್ಲಿ ಅವರಿಗೆ ಮುಂದೇನೆಂದು ತೋಚಲೀಸದ ಕಗ್ಗತ್ತಲೆಯು ಕವಿದುಕೊಂಡಿರುವದು. ಆ ಕತ್ತಲೆಯಲ್ಲಿ ಇವರಿಗೆ ಕಾಣುವದೆಲ್ಲ ಭಯೋತ್ಪಾದಕವಾದ ಭೂತವಾಗಿರುತ್ತದೆ. ಎಲ್ಲಿ ನೋಡಿದರೂ ಎಲ್ಲರಿಂದಲೂ ಎಲ್ಲಾ ವಸ್ತುಗಳಿಂದಲೂ ಇವರಿಗೆ ಸಾವಿನ ಅಂಜಿಕೆಯೇ ಕಾಣುತ್ತಿರುವದು? ಸಾವು ನೋವಿನ ಅಂಜಿಕೆಯಿಂದ ಇವರು ಆತ್ಮರಕ್ಷಣೆಗೆಂದು ಶಸ್ತ್ರಾಸ್ತ್ರಗಳನ್ನು ಹೊಸ ಹೊಸದಾಗಿ ಶೋಧನೆಮಾಡಿಕೊಂಡು ಸಂಗ್ರಹಿಸಿಡುವರು. ಆ ಶಸ್ತ್ರಗಳಿಂದ ತಮ್ಮ ಶತ್ರುಗಳನ್ನು ಕೊಂದು ತಾವು ಬದುಕಿಕೊಳ್ಳುವದಕ್ಕೆ ಹವಣಿಸುವರು. ಆದರೆ ಎಲ್ಲರಿಗೂ ಎಲ್ಲರಿಂದಲೂ ಈ ಸಾವುನೋವುಗಳು ಆಗುವವೆಂದೇ ಭಯವುಂಟಾಗಿರುತ್ತದೆ. ಆದ್ದರಿಂದ ಇವರು ಗುಂಪುಗುಂಪಾಗಿ ಸೇರಿಕೊಂಡು ಒಂದು ಗುಂಪಿನವರನ್ನು ಇನ್ನೊಬ್ಬರು ಸಾವುನೋವುಗಳ ಬೆದರಿಕೆಯಿಂದ ದೂರವಾಗಿ ಅಟ್ಟುವದಕ್ಕೆ ಹೊಂಚುಹಾಕುತ್ತಿರುವರು. ಆದರೇನು? ಈ ಉಪಾಯಗಳು ಯಾವ ಕೆಲಸಕ್ಕೂ ಬಾರವು. ಎಲ್ಲರಿಗೂ ಸಾವಿನ ಅಂಜಿಕೆಯಿರುವಲ್ಲಿ, ಎಲ್ಲರಿಗೂ ಎಲ್ಲರಿಂದಲೂ ಸಾವುನೋವು ಗಳಾಗುವವೆಂಬ ಸಂಶಯವಿರುವೆಡೆಯಲ್ಲಿ, ಯಾರುತಾನೆ ಮತ್ತೊಬ್ಬರಿಗೆ ನಿಶ್ಶಂಕೆಯಿಂದ ಸಹಾಯಮಾಡಿಯಾರು! ಎಲ್ಲಿ ನೋಡಿದರೂ ಶಂಕೆ, ಎಲ್ಲಿ ನೋಡಿದರೂ ಒಬ್ಬರಮೇಲೊಬ್ಬರು ಸಂಶಯ, ಎಲ್ಲಿ ನೋಡಿದರೂ ಸಾವುನೋವುಗಳ ಶಂಕೆ!–ಇದೇ ಈ ಅಸುರ್ಯಲೋಕಗಳ ನೋಟ! ಹೊಡಿ, ಬಡಿ, ತಿವಿ, ಇರಿ, ಕೊಲ್ಲು! ಹಾ! ಅಯ್ಯೋ! ಅಪ್ಪಾ! ಕೆಟ್ಟೆ!–ಇವೇ ಆ ಲೋಕದವರ ಬಾಯಿಂದ ಹೊರಡುತ್ತಿರುವ ಮಧುರಶಬ್ದಗಳು!

ಆದರೆ ಸಂಸಾರವು ಇಂಥ ನರಕದ ಗುಂಡಿಯೆಂದು ತೋರುತ್ತಿರುವದೂ ಜನರು ಸಾವುನೋವುಗಳೆಂಬ ಶಬ್ದಕ್ಕೆ ಅಂಜುತ್ತಿರುವದೂ ಬರಿಯ ಅಜ್ಞಾನಿಗಳ ವಿಷಯವೆಂದು ಶ್ರುತಿಯು ಹೇಳುವಂತೆ ಭಗವದ್ಗೀತೆಯಲ್ಲಿಯೂ ಹೇಳಿರುತ್ತದೆ; ಭಗವಂತನ ದೃಷ್ಟಿಯನ್ನೊಳ ಗೊಂಡಿರುವ ಪರಭಕ್ತರಾದ ಜ್ಞಾನಿಗಳೂ ಹಾಗೆಂದು ಉಪದೇಶಿಸುತ್ತಿರುತ್ತಾರೆ. ಈ ಅಜ್ಞಾನದ ತಿಮಿರರೋಗವು ಬಂದು ಕುರುಡರಾದವರಿಗೆ ಜ್ಞಾನಾಂಜನ ಶಲಾಕೆಯಿಂದ ಪರೆಬಿಡಿಸುವದೇ ಅಧ್ಯಾತ್ಮವಿದ್ಯೆಯ ಗುರಿ. ಭಗವಂತನು ಹೇಳಿರುವ ಗೀತೋಕ್ತಿಗಳನ್ನು ಕೇಳಿ:

**"ಯಾವನು ಇವನು ಕೊಲ್ಲುವವನೆಂದು ತಿಳಿಯುವನೋ, ಯಾವನು ಇವನು ಹತನಾಗುವನೆಂದು ಎಣಿಸಿರುವನೋ ಅವರಿಬ್ಬರೂ ಅರಿಯರು. ಏಕೆಂದರೆ ಇವನು ಕೊಲ್ಲುವದೂ ಇಲ್ಲ, ಕೊಲ್ಲಿಸಿಕೊಳ್ಳುವದೂ ಇಲ್ಲ. ಇವನು ಎಂದಿಗೂ ಹುಟ್ಟುವದಿಲ್ಲ,**

ಸಾಯುವದಿಲ್ಲ, ಇದ್ದು ಇಲ್ಲದವನಾಗುವದಿಲ್ಲ; ಇವನು ಅಜನು, ನಿತ್ಯನು, ಶಾಶ್ವತನು, ಪುರಾಣನು, ಶರೀರವನ್ನು ಕೊಂದರೂ ಇವನನ್ನು ಕೊಲ್ಲುವದಾಗುವದಿಲ್ಲ... ಇವನನ್ನು ಶಸ್ತ್ರಗಳು ಕತ್ತರಿಸುವದಿಲ್ಲ, ಬೆಂಕಿಯು ಸುಡುವದಿಲ್ಲ, ನೀರು ತೋಯಿಸಿ ಕೊಳೆಯಿಸುವದಿಲ್ಲ, ಗಾಳಿಯು ಒಣಗಿಸುವದಿಲ್ಲ".

ಅಧ್ಯಾತ್ಮ ಗೀತಾವಳಿಯಲ್ಲಿ ಮಾಡಿರುವ ಉಪದೇಶವೊಂದನ್ನು ಲಾಲಿಸಿ :

ರಾಗ : ಪಂತುವರಾಳಿ

ಸಾವಿಲ್ಲವೊ ಜೀವ । ನಿನಗೆಂದಿಗು ॥ಪ॥

ಸಾವಿಲ್ಲವು ಪರಿಭಾವಿಸೆ ಜಗವೇ । ಸಾವ ಹುಟ್ಟುತಿಹ ತಾವೈಸಲೆ ನೀ ॥ಅ॥

ಗಡಿಗೆಯ ದೂಸರಿಂದ । ಬಯಲು ಬೇರ್ಪಡುತಡಗುವ ಚಂದ ।<br>
ಅಡಿಗಡಿಗಾನುತೆ ಜಡದೇಹಂಗಳ ।<br>
ಮಡಿವವೊಲಿರ್ದೊಡೇಂ ಬಿಡು ಪುಸಿ ದುಗುಡವ ॥1॥

ಕನಸು ಮಾಯೆಯೊಳಗೆ । ದೇಹಂಗಳು ।<br>
ನೆನೆಸಿಕೊಂಡ ಘಳಿಗೆ । ಎನಿಸೊ ತೋರುತಲಿ ಕೊನೆಗಾಣುವ ಪರಿ ।<br>
ತನುವಿದು ಬರಿದೇ ಮೊನೆದು ಮೈಗರೆವುದು ॥2॥

ತನಿನಿದ್ರೆಯ ಸೊಗದೆ । ನೀನನುದಿನ । ತನುವಿನೊಳಗೆ ಸಿಗದೆ ।<br>
ಚಿನುಮಯನಹೆ ನೀನನಘ ಶಂಕರನೈ ।<br>
ಜನಿಮೃತಿಸಾಕ್ಷಿಯೆಂದನುಭವಸಿದ್ಧವು ॥3॥

ಗಡಿಗೆಯ ದೆಸೆಯಿಂದ ಆಕಾಶವು ಹುಟ್ಟಿ ಹಾಳಾಗುವಂತೆ ಕಂಡರೂ ನಿಜವಾಗಿ ಅದು ಹುಟ್ಟುವದೂ ಇಲ್ಲ. ನಾಶವಾಗುವದೂ ಇಲ್ಲ. ಇದರಂತೆ ದೇಹಗಳ ಕಾರಣದಿಂದ ಜೀವರೂ ಹುಟ್ಟುವದಿಲ್ಲ, ಸಾಯುವದೂ ಇಲ್ಲ. ಕನಸುಮಾಯೆಗಳಲ್ಲಿ ತೋರುವ ದೇಹಗಳು ಹುಟ್ಟುವದೂ ಇಲ್ಲ, ಮಡಿಯುವದೂ ಇಲ್ಲ; ಇದರಂತೆ ಈ ಜೀವರ ದೇಹಗಳೂ ಹುಟ್ಟುವದಿಲ್ಲ, ಮಡಿಯುವದಿಲ್ಲ. ನಿಜವಾಗಿ ಅಶರೀರರೇ ಆಗಿರುವ ಸಾಕ್ಷಿಸ್ವರೂಪರೇ ಜೀವರೆಂಬುದು ಸುಷುಪ್ತ್ಯಾದ್ಯನುಭವಗಳಲ್ಲಿ ಸಿದ್ಧವಾಗುತ್ತದೆ-ಎಂಬುದು ಈ ಪದದ ಒಟ್ಟರ್ಥವು.

ಇಂಥ ಅನುಭವವು ಯಾರಿಗೆ ಉಂಟಾಗಿರುವದೋ ಅವರು ಸಾವಿಗೂ ಅಂಜುವದಿಲ್ಲ. ನೋವಿಗೂ ಅಂಜುವದಿಲ್ಲ ಎನ್ನುವದು ಮೇಲೆಯೇ ಕಾಣಿಸುತ್ತದೆ. ಇಂಥ ಮಹಾತ್ಮರ

ದೃಷ್ಟಿಯಲ್ಲಿ ಸಾವಿಲ್ಲ, ನೋವಿಲ್ಲ, ಶತ್ರುಗಳಿಲ್ಲ, ಅಂಜಿಕೆಯಿಲ್ಲ, ಬೇನೆಯಿಲ್ಲ, ಬಡತನವಿಲ್ಲ, ಕರೆಕರೆಯಿಲ್ಲ, ದುಗುಡವಿಲ್ಲ, ಯಾವದೊಂದು ಸಂಕಟವೂ ಇಲ್ಲವೇ ಇಲ್ಲ. ಅಜ್ಞರಿಗೆ ಆಸುರದೃಷ್ಟಿಯಿಂದ ಕಾಣಿಸುತ್ತಿರುವ ಈ ದೃಶ್ಯಗಳು ಎಷ್ಟೇ ಭಯಂಕರವಾಗಿರಲಿ, ಅವು ಪರಮಾರ್ಥವಲ್ಲ, ಪರಮಾರ್ಥವೇನೆಂದರೆ ನಾವೆಲ್ಲರೂ ಅಮೃತಸ್ವರೂಪರು, ಶಸ್ತ್ರಾಸ್ತ್ರಗಳಿಂದ ನೋವನ್ನು ಪಡೆಯುವವರಲ್ಲ, ಅಜಾತಶತ್ರುಗಳು, ಅಭಯರು, ನಿರಾಮಯರು, ಶ್ರೀಮಂತರು, ನಿಶ್ಚಿಂತರು, ನಿರ್ದುಃಖರು. ಈಗಲೇ ಇಲ್ಲಿಯೇ ಎಲ್ಲರೂ ಸರ್ವಸಂಸಾರಬಂಧ ವಿರ್ಮುಕ್ತರು!

ಆದರೆ ಸಾಮಾನ್ಯರ ಕಣ್ಣಿನಿಂದ ನೋಡಿದರೆ ಇದೆಲ್ಲವೂ ಕನ್ನಡಿಯೊಳಗಿನ ಗಂಟು. ಅವರಿಗೆ ಸಾವಿಲ್ಲದ, ನೋವಿಲ್ಲದ, ಅಂಜಿಕೆಯಿಲ್ಲದ, ಬೇನೆಯಿಲ್ಲದ, ಬಡತನವಿಲ್ಲದ, ಕರೆಕರೆಯಿಲ್ಲದ ಸ್ಥಿತಿಯೊಂದಿದೆ ಎಂದರೆ ಯಾವದೋ ಒಂದು ಕಲ್ಪಿತ ಕಾದಂಬರಿಯ ಮಾತಾಗಿ ಕಾಣುವದು. ಹೀಗಿದ್ದರೂ ನಾವೆಲ್ಲರೂ ಈಗಲೇ ಇಲ್ಲಿಯೇ ಈ ಸ್ಥಿತಿಯನ್ನು ಅನುಭವಕ್ಕೆ ತಂದುಕೊಳ್ಳುವದಕ್ಕೆ ಅವಕಾಶವಿದೆ, ದುಗುಡದುಮ್ಮಾನಗಳನ್ನು ದೂಡಿ ನಿತ್ಯಾನಂದದಲ್ಲಿ ನಿಲ್ಲುವದಕ್ಕೆಡೆಯಿದೆ.

ಇದಕ್ಕಾಗಿ ನಾವು ಮಾಡಬೇಕಾದದ್ದೇನು? ಇನ್ನೇನೂ ಅಲ್ಲ. ನಾವೂ ಭಗವಂತನ ಅಥವಾ ಭಗವದ್ಭಕ್ತರ ದೃಷ್ಟಿಯನ್ನು ಅವಲಂಬಿಸಬೇಕು. ನಮ್ಮ ಚಿತ್ತವನ್ನು ಅವರ ಚಿತ್ತದ ಮಟ್ಟಕ್ಕೇರಿಸಿಕೊಳ್ಳಬೇಕು; ಆ ಚಿತ್ತದಿಂದ ಪರಮಾರ್ಥದ ಸ್ಪರ್ಶವನ್ನು ಮಾಡಿಕೊಳ್ಳಬೇಕು. ಕೂಡಲೆ ಸಾವುನೋವುಗಳ ದೃಶ್ಯವು ಮಾಯವಾಗುತ್ತದೆ, ಅಮರವಾದ ಅನಂತ ಸಮತಾನಂದದ ತಾಣವಾದ ನಮ್ಮ ಸ್ವರೂಪವು ನಮಗೆ ಗೋಚರವಾಗುತ್ತದೆ. ಸತ್ತಿರುವದೆಂದು ನಾವು ಭಾವಿಸಿರುವ ನಮ್ಮ ನಿಜವಾದ ಆತ್ಮವು, ನಮ್ಮ ಸ್ವರೂಪವು, ಅಮೃತವನ್ನು ಚಿಮುಕಿಸಿದಂತೆ ಎದ್ದು ಕಾಣುವದು.

ಮಹಾತ್ಮರಾದವರು ಯಾವ ಮಟ್ಟದಲ್ಲಿ ಚಿತ್ತವನ್ನಿಟ್ಟುಕೊಂಡಿರುತ್ತಾರೆ? ನಾವು ಅವರ ಮಟ್ಟಕ್ಕೆ ಚಿತ್ತವನ್ನು ಏರಿಸಿಕೊಳ್ಳುವದು ಹೇಗೆ?–ಎಂದು ಯಾರಾದರೂ ಕೇಳಬಹುದು. ಮಹಾತ್ಮರು ಮಹಾತ್ಮರಾಗಿರುವದು ಏತರಿಂದ?–ಎಂದೇ ಆ ಪ್ರಶ್ನೆಯ ಅರ್ಥ. ಎಲ್ಲರಿಗಿಂತ ದೊಡ್ಡವನಾದ ಪರಮಾತ್ಮನನ್ನು ಅವರು ಯಾವಾಗಲೂ ಚಿತ್ತದಲ್ಲಿಟ್ಟುಕೊಂಡಿರುವರು. ಅವರು ಎಲ್ಲೆಲ್ಲಿಯೂ ಒಬ್ಬನೇ ಪರಮಾತ್ಮನನ್ನು ಕಾಣುತ್ತಿರುವರು. ಆ ಪರಮಾತ್ಮನಿಗೂ ಅವರಿಗೂ ಯಾವ ಭೇದವೂ ಇರುವದಿಲ್ಲ. 'ಜ್ಞಾನಿಯು ನನ್ನ ಆತ್ಮನೇ ಎಂಬುದು ನನ್ನ ಮತವು' ಎಂದು ಭಗವಂತನೇ ಹೇಳಿರುತ್ತಾನೆ. ಯಾರು ಪರಮಾತ್ಮನಲ್ಲಿಯೇ ಮನೋಬುದ್ಧಿಗಳನ್ನು ಯಾವಾಗಲೂ ಇಟ್ಟುಕೊಂಡಿರುವರೋ, ಯಾರಿಗೆ ಆ ಪರಮಾತ್ಮನಿಗಿಂತ ಹೆಚ್ಚಿನದು ಯಾವದೂ ಇರುವದಿಲ್ಲವೋ, ಯಾರು ಆ ಪರಮಾತ್ಮನಲ್ಲಿಯೇ ನೆಲೆನಿಂತಿರುವರೋ ಅವರೇ ಮಹಾತ್ಮರು. ಮಹಾತ್ಮರ ಚಿತ್ತವು ಪರಮಾತ್ಮನ ಚಿತ್ತಕ್ಕೆ

ಹೊಂದಿಗೆಂಬಾಗಿರುತ್ತದೆ. ಆದ್ದರಿಂದ ಅವರು ಸಂಸಾರಿಗಳ ದುಃಖಪ್ರಪಂಚಕ್ಕೆ ಹೊರತಾಗಿರುತ್ತಾರೆ. ಅವರ ಆತ್ಮವು ಅಲ್ಪವಾದ, ಅಳತೆಗೆ ಸಿಕ್ಕಿರುವ, ಆತ್ಮನಾಗಿರುವದಿಲ್ಲ. ಅವರ ಹತ್ತಿರವಿರುವವರಿಗೂ ಅವರ ಅನುಗ್ರಹದಿಂದ ಚಿತ್ತವು ಮೆಲ್ಲಮೆಲ್ಲಗೆ ಈ ಮೇಲುಮಟ್ಟಕ್ಕೆ ಏರುತ್ತದೆ. ಆದ್ದರಿಂದ ನಾವು ಮೊಟ್ಟಮೊದಲು ಸತ್ಸಂಗವನ್ನು ಮಾಡಬೇಕು, ಅವರ ವಾಣಿಯನ್ನು ಕೇಳಬೇಕು, ಅವರ ನಡೆನುಡಿಗಳನ್ನು ಅನುಕರಿಸಬೇಕು.

ಮಹಾತ್ಮರಿಗೆಲ್ಲ ಸರ್ವಮಹತ್ತಾಗಿರುವ **ಭಗವತ್ಸ್ವರೂಪದ ಚಿಂತನೆಯು ಜೀವನದ ಉಸಿರಾಗಿರುವದು.** ಭಗವಂತನ ಚಿಂತನೆಯೆಂಬ ರಾಮರಸದಿಂದ ಅವರು ಮತ್ತರಾಗಿರುವರು. ಸಂಗೀತವನ್ನು ಹಾಡುತ್ತಿರುವ ವಿದ್ವಾಂಸರ ಬಳಿಯಲ್ಲಿ ಕುಳಿತಿರುವ ಸಾಮಾನ್ಯರಿಗೂ ತಾಳಹಾಕುವ, ತಲೆಯನ್ನಲುಗಾಡಿಸುವ ಚಟವು ಅಂಟುಜಾಡ್ಯದಂತೆ ಬರುವದನ್ನು ನೀವು ನೋಡಿರಬಹುದು. ಭಗವದ್ಭಕ್ತರಾದ ಈ ಮಹಾತ್ಮರ ಬಳಿಯಲ್ಲಿದ್ದು ಅವರ ನಡೆನುಡಿಗಳನ್ನೇ ಪರಿಶೀಲಿಸುತ್ತಿರುವವರಿಗೂ ಹಾಗೆಯೇ ಭಗವಚ್ಚಿಂತನೆಯ ಅಮಲು ಮೆಲ್ಲಮೆಲ್ಲಗೆ ಹತ್ತಲಾರಂಭಿಸುವದು. ಸತ್ತವರು ಅಮೃತಸೇಕದಿಂದ ಮೆಲ್ಲಗೆ ಕಣ್ಣುಬಿಟ್ಟು, ಕೈಕಾಲುಗಳನ್ನು ಒದರಿ, ಎದ್ದುನಿಂತು ಸಂತೋಷದಿಂದ ನಲಿದಾಡುವಂತೆ ಮಹಾತ್ಮರ ಉಪದೇಶಾಮೃತದ ಹನಿಗಳು ಕಿವಿಗೆ ಬಿದ್ದಂತೆಲ್ಲ ಸಾಧಕರಾದವರಿಗೆ ನವಚೇತನವುಂಟಾಗುವದು, ಆಗ ಅವರು ಕಂದೆರೆದು ನೋಡುವಾಗ ತಮ್ಮ ಸ್ವಾಭಾವಿಕವಾದ ಆತ್ಮನ ರೂಪದಿಂದ ಇರುವಂತೆಯೂ ತಮ್ಮ ಸುತ್ತಲೂ ಕಾಣುತ್ತಿದ್ದ ದುಃಖದ ದುಗುಡದ ದೋಷಗಳ ಜಗತ್ತು ಎಲ್ಲಿಯೋ ಮಾಯವಾಗಿ ಬಿಟ್ಟಿರುವಂತೆಯೂ ಕಾಣುವದು! ಶ್ರುತಿಯಲ್ಲಿ ಹೇಳಿರುವಂತೆ ಎಲ್ಲಿ ಎಲ್ಲವೂ ಆನಂದರೂಪನಾದ ಪರಮಾತ್ಮನೇ ಆಗಿಬಿಟ್ಟಿರುವದೋ ಅಲ್ಲಿ ಎಲ್ಲಿಯ ಶೋಕ, ಎಲ್ಲಿಯ ಮೋಹ?

ಶಾಸ್ತ್ರಶ್ರವಣದಿಂದಲೂ ದೊಡ್ಡವರ ಉಪದೇಶಶ್ರವಣದಿಂದಲೂ ಯಾವ ಸಾವು ನೋವುಗಳೂ ಇಲ್ಲದ ಅಜರಾಮರನಾಗಿರುವ ಆನಂದರೂಪನಾದ ಪರಮಾತ್ಮನೇ ನಮ್ಮ ಸ್ವರೂಪವೆಂದು ಯಾವಾಗ ತಿಳಿದುಕೊಳ್ಳುವೆವೋ ಆಗ ನಾವು ಹೀಗೆ ದುಃಖಾತ್ಮರಾಗಿ ದುಃಖದ ಪ್ರಪಂಚದಲ್ಲಿ ಸಾಯುತ್ತಲೂ ಬೇಯುತ್ತಲೂ ಇರುವದಿಲ್ಲ; ಆನಂದಾತ್ಮರಾಗಿ ಆನಂದಮಯಪ್ರಪಂಚದಲ್ಲಿ ಅಜರಾಮರರಾಗಿ ನಲಿದಾಡುತ್ತಾ ವಿಹರಿಸುತ್ತಿರುವೆವು.

ಈ ಪ್ರಪಂಚದಲ್ಲಿ ಕಷ್ಟಪರಂಪರೆಯ ದೃಶ್ಯಗಳು ಆಗ ಏನಾಗುವವು? ಎಂದು ಕೇಳುವಿರೇನು? ಅವು ಏನೂ ಆಗುವದಿಲ್ಲ, ಅವು ಇದ್ದಂತೆಯೇ ಇರುವವು. ಅಲ್ಲಿಂದ ಮುಂದಕ್ಕೆ ಅವು ಕಷ್ಟಪರಂಪರೆಯ ದೃಶ್ಯಗಳಾಗಿರುವದಿಲ್ಲ, ಅಷ್ಟೇ. ಒಬ್ಬ ಅವಿವೇಕಿಯು ಎರಡುಮೂರು ಕಡೆಗಳಲ್ಲಿ ತನ್ನ ನೆರಳು ಬಿದ್ದಿರುವದನ್ನು ಕಂಡು ಅಷ್ಟು ಜನ ಕಳ್ಳರು ತನ್ನನ್ನು ಬೆನ್ನಟ್ಟಿಕೊಂಡು ಬರುತ್ತಿರುವರೆಂದು ಬೆದರಿ ಚೀರುತ್ತಾನೆ. ಆದರೆ ಅವನು

ಕಣ್ಣಿಟ್ಟು ನೋಡಿದರೆ, ಆ ಕಳ್ಳರು ಏನಾಗುವರು? ಅವರು ಇರಲೇ ಇಲ್ಲ; ಈಗಲೂ ಇಲ್ಲ. ನೆರಳುಗಳು ನೆರಳುಗಳಾಗಿಯೇ ಉಳಿದುಕೊಳ್ಳುವವು ಅಲ್ಲವೆ? ಇದರಂತೆ ಲೋಕದಲ್ಲಿ ಕಷ್ಟಗಳು ಕಾಣುತ್ತಿರಬಹುದು. ಆದರೆ ಭಗವಂತನ ಚಿಂತನೆಯಿಂದ ಆತನ ಅನುಗ್ರಹವನ್ನು ಸಂಪಾದಿಸಿದರೆ ಆ ಕಷ್ಟಗಳು ಮುಂದೆ ತೋರುತ್ತಿದ್ದರೂ ಅವು ಕಷ್ಟಗಳಾಗಿ ಉಳಿದುಕೊಳ್ಳುವದಿಲ್ಲ.

ನಮ್ಮ ಕಷ್ಟಗಳೆಲ್ಲ ನಾವು ಭಗವಚ್ಚಿಂತನೆಯನ್ನು ಮಾಡದೆ ಭಗವಂತನ ಚಿತ್ತದ ಮಟ್ಟದಿಂದ ಕೆಳಕ್ಕೆ ಇಳಿದಿರುವದರಿಂದಲೇ ಆಗಿವೆ. ಅಥವಾ ನಾವು ಕೆಳಕ್ಕಿಳದಿರುವೆವೆಂದೇಕೆ ಹೇಳಬೇಕು? ಕೆಳಮಟ್ಟದಲ್ಲಿಯೇ ಇದ್ದು ಸಂಕಟಪಡುತ್ತಿರುವದೇ, ಸಾವುನೋವುಗಳನ್ನು ಕಾಣುತ್ತಿರುವದೇ, ನಮ್ಮ ಸ್ವಭಾವವಾಗಿದೆ. ಈ ಸ್ಥಿತಿಯಿಂದ ಮೇಲಕ್ಕೇರುವದೇ ಸಾವಿನ ಸಾವು, ನಮ್ಮ ಅಮೃತಸ್ವಭಾವದಿಂದ ಎಂದೆಂದಿಗೂ ಇರುತ್ತಿರುವದು.

ಆದ್ದರಿಂದ ಹೊರಗಿನ ಕಷ್ಟಪರಂಪರೆಗಳನ್ನು ಒಂದೊಂದಾಗಿ ಪರಿಹರಿಸಿಕೊಳ್ಳುವೆವೆಂಬ ಹುಚ್ಚು ಸಂಕಲ್ಪವನ್ನು ಮಾಡಿಕೊಳ್ಳಬೇಡಿ. ಏಕೆಂದರೆ ಅವುಗಳನ್ನು ನೀವು ಪರಿಹಾರಮಾಡಿ ಕೊಳ್ಳುವದಕ್ಕೆ ಪ್ರಯತ್ನಿಸಿದಂತೆಲ್ಲ, ಅವು ಒಂದರ ಹಿಂದೊಂದು ಪೆಡಂಭೂತಗಳಾಗಿ ಕಾಣಿಸಿಕೊಳ್ಳುತ್ತಲೇ ಇರುವವು. ಈ ಕಷ್ಟಗಳ ಮೂಲಕಾರಣವು ಹೊರಗೆ ಇರುವದಿಲ್ಲ, ಈ ಕಷ್ಟಗಳನ್ನೂ ಸಾವು ನೋವುಗಳನ್ನೂ ಚಿಂತಿಸಿಕೊಳ್ಳುವ ಚಿತ್ತವೃತ್ತಿಪರಂಪರೆಯಲ್ಲಿರುತ್ತದೆ. ಚಿತ್ತದಲ್ಲಿ ಚಿತ್ತಜನಯ್ಯನಾದ ಭಗವಂತನ ಚಿಂತೆಯೆಂಬ ಚಿಂತಾಮಣಿಯನ್ನು ಭದ್ರವಾಗಿಟ್ಟು ಕೊಳ್ಳಿರಿ. ಅಷ್ಟು ಮಾತ್ರದಿಂದಲೇ ಸಾವುನೋವುಗಳ ಮತ್ತು ಉಳಿದ ಕಷ್ಟಪರಂಪರೆಯ ಚಿತ್ತವೃತ್ತಿಗಳ ಹುಟ್ಟಡಗುವದು, ಅಲ್ಲಿಂದ ಮುಂದಕ್ಕೆ ನಿಮ್ಮ ಬಳಿಯಲ್ಲಿ ಸಾವುನೋವುಗಳ ಸುಳಿವೂ ಇರುವದಿಲ್ಲ.

# 27. ಭಗವಚ್ಚಿಂತನೆಯಿಂದಲೇ ಶಾಂತಿ ಸುಖಗಳು

* 'ಈಶ್ವರನು ಎಲ್ಲರ ಹೃದಯದಲ್ಲಿಯೂ ಇರುತ್ತಾನೆ. ಅವನನ್ನೇ ಸರ್ವಭಾವದಿಂದಲೂ ಶರಣುಹೊಂದು; ಆತನ ಪ್ರಸಾದದಿಂದ ಪರಮಶಾಂತಿಯನ್ನು ಹೊಂದುವೆ, ಶಾಶ್ವತವಾದ ಸ್ಥಾನವನ್ನು ಹೊಂದುವೆ' ಹೀಗೆಂದು ಶಾಂತಿಸಂದೇಶವನ್ನು ಭಗವಂತನು ದ್ವಾಪರಯುಗದ ಯುದ್ಧರಂಗದಲ್ಲಿ ಅರ್ಜುನನಿಗೆ ಅನುಗ್ರಹಿಸಿದ್ದನು. ಈಗ ಕಲಿಯುಗ; ಆದ್ದರಿಂದ ಸಹಜವಾಗಿ ಎಲ್ಲೆಲ್ಲಿಯೂ ಕಲಿಯೇ, ಯುದ್ಧವೇ, ಹರಡಿಕೊಂಡಿರುತ್ತದೆ. ಆದ್ದರಿಂದ

* ಸಂಪುಟ 18, ಸಂಚಿಕೆ 3, ನವೆಂಬರ್ 1948, ಪುಟ 49–56

ಇನ್ನೊಮ್ಮೆ ಆ ಭಗವಂತನ ಸಂದೇಶವನ್ನೂ ಆತನು ಹೇಳಿರುವ ಫಲವಾಕ್ಯವನ್ನೂ ನಾವು ಕಿವಿಗೊಟ್ಟು ಕೇಳೋಣ, ಮನಮುಟ್ಟಿ ಮನನಮಾಡೋಣ.

**ತಮೇವ ಶರಣಂ ಗಚ್ಛ ಸರ್ವಭಾವೇನ ಭಾರತ ।**
**ತತ್ಪ್ರಸಾದಾತ್ ಪರಾಂ ಶಾನ್ತಿಂ ಸ್ಥಾನಂ ಪ್ರಾಪ್ಸ್ಯಸಿ ಶಾಶ್ವತಮ್ ॥**

ಈಗಿನ ವೃತ್ತಾಂತಪತ್ರಿಕೆಗಳಲ್ಲಿ ಯುದ್ಧದ ಅಂಜಿಕೆಯನ್ನು ಹರಡುವ ಲೇಖನಗಳು ಹೆಚ್ಚುತ್ತಿವೆ. ತಿಳಿದವರೆನಿಸಿರುವ ಎಷ್ಟೋ ಜನರೂ ಯುದ್ಧದ ಪ್ರಸಂಗವನ್ನು ತಂದುತಂದು ಸಂಭಾಷಣೆಗೆ ಸೇರಿಸುತ್ತಿರುವರು. ಆದರೆ ಇದು ಶುಭದೃಷ್ಟಿಯಲ್ಲ, ಮಾಡತಕ್ಕ ಕಾರ್ಯವಲ್ಲ. ಯುದ್ಧದ ಚಿಂತನೆ, ಯುದ್ಧದ ಮಾತು, ಯುದ್ಧದ ಲೇಖನ–ಇವು ಲೋಕದಲ್ಲಿ ಶಾಂತಿಯಾಗಲೆಂಬ ಸದಿಚ್ಛೆಯಿಂದ ಮಾಡಿದರೂ ಯುದ್ಧವನ್ನೇ ಆಹ್ವಾನಮಾಡುವ ಮಂತ್ರಪುರಶ್ಚರಣೆಯಾಗುತ್ತವೆ. ಏಕೆಂದರೆ ಮನಸ್ಸಿನಲ್ಲಿ ಯಾವ ಯೋಚನೆಯನ್ನು ಹತ್ತಿಸಿಕೊಳ್ಳುವೆವೋ, ಮಾತಿನಲ್ಲಿ ಅದರ ವಿಷಯದ ವರ್ಣನೆಗಳೇ ಬರುತ್ತಿರುವವು; ಕೆಲಸವು ಅದಕ್ಕೆ ಅನುಗುಣವಾಗಿಯೇ ಆಗುತ್ತಿರುವದು. ಆದ್ದರಿಂದ ಲೋಕಕ್ಕೆ ಶಾಂತಿಯುಂಟಾಗಲೆಂಬ ಹಾರೈಕೆಯಿರುವವರು ಶಾಂತಿಯ ಭಾವನೆಗಳನ್ನು ಮನಸ್ಸಿನಲ್ಲಿ ಊಡಿಸಿಕೊಳ್ಳಬೇಕು; ಅದರಿಂದ ಶಾಂತಿಯ ಮಾತುಕಥೆಗಳು ಹೊರಹೊಮ್ಮುವವು, ಶಾಂತಿಗೆ ಕಾರಣವಾದ ಕಾರ್ಯಗಳೂ ರೂಪುಗೊಳ್ಳುವವು.

ಯುದ್ಧವು ಹೇಗೆ ಉಂಟಾಗುವದು? ಕಾಮ, ಭಯ, ಕ್ರೋಧ, ಪ್ರತೀಕಾರ, ವೈರ–ಈ ಭಾವನೆಗಳು ಜನರ ಅಂತಃಕರಣದಲ್ಲಿ ತುಂಬಿಕೊಳ್ಳುವದರಿಂದಲೇ ಯುದ್ಧವು ಅವತರಿಸುವದು. ಲೋಕದಲ್ಲಿ ಕೆಲವರಿಗೆ ಮನಸ್ಸಿನ ದೌರ್ಬಲ್ಯದಿಂದ ಅತ್ಯಾಶೆ, ಸಿಟ್ಟು, ಸೇಡುತೀರಿಸಿಕೊಳ್ಳುವ ಬುದ್ಧಿ, ಹಗೆತನ, ಹಿಂಸೆ–ಎಂಬ ಭಾವನೆಗಳು ಉಂಟಾದರೆ, ಅದರ ಫಲವಾಗಿ ಅದರ ಸುತ್ತಮುತ್ತಲಿನ ಮನುಷ್ಯರಿಗೂ ಪ್ರಾಣಿಗಳಿಗೂ ಸಹಿಸುವದಕ್ಕಾಗದ ದುಃಖವುಂಟಾಗುವದು. ಆದರೆ ಆ ದುಃಖವನ್ನು ತೊಲಗಿಸಿಕೊಳ್ಳುವದಕ್ಕೆ ಉಪಾಯವೇನು? ಆ ಜನರು ತಾವೂ ಅತ್ಯಾಶೆ, ಅಂಜಿಕೆ, ಸಿಟ್ಟು, ಸೇಡುತೀರಿಸಿಕೊಳ್ಳುವ ಬುದ್ಧಿ, ಹಗೆತನ, ಹಿಂಸೆ–ಈ ಭಾವನೆಗಳನ್ನು ತಮ್ಮ ಹೃದಯದಲ್ಲಿ ಬಿತ್ತಿ ಬೆಳೆದುಕೊಂಡರೆ ಆ ದುಃಖವು ಹೋದೀತೆ? ಎಂದಿಗೂ ಇಲ್ಲ. ವೈರದಿಂದ ವೈರವು ಎಂದಿಗೂ ಶಾಂತವಾಗಲಾರದು. ಆದ್ದರಿಂದ ಯುದ್ಧವನ್ನು ನಿವಾರಿಸುವದಕ್ಕೆ ಯುದ್ಧದ ಭಾವನೆಗಳನ್ನು ತಮ್ಮ ಮನಸ್ಸಿನಲ್ಲಿ ಎಬ್ಬಿಸಿಕೊಳ್ಳುವದಾಗಲಿ, ಅಥವಾ ಮತ್ತೊಬ್ಬರ ಮನಸ್ಸಿನಲ್ಲಿ ಅವು ಮೊಳೆಯುವಂತೆ ಮಾಡುವದಾಗಲಿ ಎಂದಿಗೂ ಉಪಾಯವಾಗಲಾರದು. ಯುದ್ಧ ಭಾವನೆಗಳು ಹೆಚ್ಚಿದಷ್ಟೂ, ಯುದ್ಧದ ಮಾತುಗಳು ಹೆಚ್ಚುವವು; ಯುದ್ಧದ ಮಾತುಗಳು ಹೆಚ್ಚಿದಷ್ಟೂ ಯುದ್ಧಕ್ಕೆ ಬೇಕಾಗಿರುವ ಶಸ್ತ್ರಾಸ್ತ್ರಗಳ ಶೋಧನೆ, ಸಂಪಾದನೆ, ರಕ್ಷಣೆ–

ಇವುಗಳೂ ಹೆಚ್ಚುವವು. ಹೀಗೆ ಹೊಗೆಯಾಡುತ್ತಿರುವ ಯುದ್ಧಮನನ, ಭಾಷಣ, ಸಾಧನಸಂಗ್ರಹಗಳೇ ಕೊನೆಗೆ ಭುಗಿಲೆಂಬ ಯುದ್ಧ ಜ್ವಾಲೆಗೆ ಮೂಲವಾಗುವವು.

ಆದ್ದರಿಂದ ಲೋಕದಲ್ಲಿ ಹರಡಿರುವ, ಹರಡುತ್ತಿರುವ ಮತ್ತು ಮುಂದೆ ಹರಡಲಿರುವ ಯುದ್ಧ ಭಾವನೆಗಳ ಕೆಟ್ಟ ನಾತವು ಕಾಣದಂತಾಗಬೇಕಾದರೆ, ಕೂಡಲೆ ಶಾಂತಿಯ ಭಾವನೆಗಳನ್ನೂ ಮಾತುಗಳನ್ನೂ ಹರಡುವದೆಂಬ ದಶಾಂಗದ ಧೂಪದ ಹೊಗೆಯು ಎಲ್ಲೆಲ್ಲಿಯೂ ಹರಡುವಂತೆ ಮಾಡುವದೇ ಉಪಾಯವು. ಈ ಶಾಂತಿಗೆ ಮೂಲವಾಗಿರುವ ಸರ್ವಭೂತಪ್ರೇಮವನ್ನು ಹರಿಯಬಿಡುವದೇ ಉಪಾಯವು.

ಆದರೆ ಯಾರ ಮನಸ್ಸಿನಲ್ಲಿ ಶಾಂತಿಯಿಲ್ಲವೋ ಅವರು ಶಾಂತಿಯನ್ನು ಲೋಕಕ್ಕೆ ಕೊಡುವದು ಹೇಗೆತಾನೆ ಆದೀತು? ಯಾರಿಗೆ ಮಾನವಪ್ರೇಮವೂ ಪ್ರಾಣಿಗಳ ಮೇಲಿನ ಪ್ರೇಮವೂ ಪರಿಚಿತವಾಗಿರುವದಿಲ್ಲವೋ, ಅವರು ಮತ್ತೊಬ್ಬರಿಗೆ ಅನ್ಯೋನ್ಯಪ್ರೇಮದ ತಿಳಿವಳಿಕೆಯನ್ನು ಹೇಗೆತಾನೆ ಕೊಟ್ಟಾರು? ಕೈಯಲ್ಲಿ ಕಾಸಿಲ್ಲದವನು ಕುಬೇರನಿಗೆ ಸಾಲವನ್ನು ಕೊಡುವೆನೆಂದು ಭಾವಿಸುವಂತೆಯೂ, ತನಗೆ ಐದು ಅಕ್ಷರಗಳುಕೂಡ ಪರಿಚಯವಿಲ್ಲದವನು ಪರಶಿವನಿಗೆ ಪಂಚಾಕ್ಷರೀ ಮಂತ್ರವನ್ನು ಉಪದೇಶಿಸುವೆನೆಂದು ಹವಣಿಸುವಂತೆಯೂ, ಶಾಂತಿಸುಖಗಳನ್ನು ತಾವೇ ಗಳಿಸಿಕೊಳ್ಳದೆ ಇರುವವರು ಲೋಕಕ್ಕೆ ಶಾಂತಿಸುಖಗಳನ್ನು ತಂದುಕೊಡುವ ಕಾರ್ಯಕ್ಕೆ ಸೊಂಟಕಟ್ಟಿಕೊಳ್ಳುವದೂ ನಗೆಗೀಡಾಗಿರುವದು. ಆದ್ದರಿಂದ ವಿಶ್ವಕ್ಕೆ ಶಾಂತಿ ಸುಖಗಳು ಹೇಗೆ ಉಂಟಾದಾವು!–ಎಂದು ಯೋಚಿಸುವ ಮುಂಚೆಯೇ ನನಗೆ ಶಾಂತಿಸುಖಗಳು ಹೇಗೆ ಉಂಟಾದಾವು!– ಎಂಬುದನ್ನು ಯೋಚಿಸಿಕೊಳ್ಳ ಬೇಕಾಯಿತು. ಶಾಂತಿಗಾಗಲಿ ಸುಖಕ್ಕಾಗಲಿ ಮೂಲವು ಪರಮೇಶ್ವರನು. ನಲ್ಲಿಯೊಳಕ್ಕೆ ನೀರು ನದಿಯಿಂದಲೋ ಕೆರೆಯಿಂದಲೋ ಬರುವಂತೆ ಮಾನವನ ಹೃದಯಕ್ಕೆ ಪರಮೇಶ್ವರನ ಪ್ರಸಾದದ ನಿಮಿತ್ತದಿಂದಲೇ ಆಗಬೇಕಾಗಿರುವದು. ಈ ಉಪನಿಷತ್ತಿನ ವಾಕ್ಯವನ್ನು ಮನಸ್ಸಿಗೆ ತಂದುಕೊಳ್ಳಿರಿ:

**"ಯಾವನೊಬ್ಬನೇ ಜಗತ್ತೆಲ್ಲವನ್ನೂ ವಶದಲ್ಲಿಟ್ಟುಕೊಂಡಿರುವನೋ, ಯಾವನು ಎಲ್ಲಾ ಪ್ರಾಣಿಗಳಿಗೂ ಅಂತರಾತ್ಮನೋ, ಯಾವನು ತನ್ನ ಒಂದು ರೂಪವನ್ನೇ ಬಗೆಬಗೆಯಾಗಿ ಮಾಡಿಕೊಂಡಿರುವನೋ, ಆತನನ್ನು ತಮ್ಮ ಹೃದಯದಲ್ಲಿ ಯಾರು ಕಂಡುಕೊಂಡಿರುವರೋ, ಆ ಧೀರರಿಗೆ ಶಾಶ್ವತಸುಖವು, ಮಿಕ್ಕವರಿಗಿಲ್ಲ. ಅನಿತ್ಯವಾದವುಗಳಲ್ಲಿ ನಿತ್ಯನಾಗಿ, ಚೇತನಪ್ರಾಣಿಗಳಲ್ಲಿರುವ ಚೈತನ್ಯನಾಗಿ, ಎಲ್ಲರ ಕಾಮಗಳನ್ನೂ ಯಾವನು ತಾನೊಬ್ಬನೇ ಸಲ್ಲಿಸುತ್ತಿರುವನೋ ಅವರಿಗೇ ಶಾಂತಿಯು, ಮಿಕ್ಕವರಿಗಿಲ್ಲ." –ಕಠೋಪನಿಷತ್ತು**

ಭಗವಂತನ ಧ್ಯಾನಕ್ಕೂ ಲೋಕದ ಶಾಂತಿಗೂ ಸಂಬಧವೇನಿದ್ದೀತೆಂದು ಅಚ್ಚರಿ ಪಡುವವರು ಮೇಲಿನ ವಚನವನ್ನು ಚೆನ್ನಾಗಿ ಮನಸ್ಸಿನಲ್ಲಿ ಹೊರಳಿಸಬೇಕು. ನಮ್ಮಗಳ

ಮನಸ್ಸು ಯಾವಾಗ ಭಗವಂತನಲ್ಲಿಯೇ ಏಕಾಗ್ರತೆಯಿಂದ ನಿಲ್ಲುವದೋ, ಆಗ ನಾವು ಆತನ ಸನ್ನಿಧಿಯಲ್ಲಿರುವೆವು. ಯಾವಾಗ ನಾವು ಭಗವಂತನ ಸನ್ನಿಧಿಯಲ್ಲಿರುವೆವೋ ಆಗ ಭಗವಂತನ ಸ್ವರೂಪಕ್ಕೆ ಮೀಸಲಾಗಿರುವ ಶಾಂತಿಸುಖಗಳು ನಮ್ಮ ಅಂತಃಕರಣದ ಆಶಯಕ್ಕೆ ಹರಿದುಬರುವವು.

ಭಗವಂತನ ಸ್ವರೂಪದಲ್ಲಿ ಯಾವ ತಾಪಗಳೂ ಇರುವದಿಲ್ಲ; ಅವನು ಶಾಂತ ಮೂರ್ತಿಯು. ನಮಗೆ ದಿನದಿನವೂ ಅನುಭವಕ್ಕೆ ಬರುತ್ತಿರುವ ಆಧ್ಯಾತ್ಮಿಕ, ಆಧಿಭೌತಿಕ, ಆಧಿದೈವಿಕ–ಎಂಬ ತಾಪತ್ರಯಕ್ಕೆ ನಾವೇ ಹೊಣೆಯಾಗಿರುತ್ತೇವೆ. ನಮ್ಮ ಶರೀರದಲ್ಲಿಯೂ ಮನಸ್ಸಿನಲ್ಲಿಯೂ ಆಗುತ್ತಿರುವ ರೋಗರುಜಿನಗಳು, ಶೋಕಮೋಹ, ಕೋಪತಾಪಗಳು; ಹೊರಗಿನ ಗಾಳಿಮಳೆ ಬಿಸಿಲುಗಳಿಂದಾಗುವ ಸಂಕಟಗಳು, ಪ್ರಾಣಿಗಳಿಂದಲೂ ಜನರಿಂದಲೂ ಒದಗುವ ದುಃಖಗಳು, ಭೂಕಂಪ, ನದಿಗಳು ಉಕ್ಕೇರುವದು, ಪ್ರಚಂಡವಾತವು ಏದ್ದುಕೊಳ್ಳುವದು ಮುಂತಾದ ಆಕಸ್ಮಿಕವಾದ ಘಟನೆಗಳಿಂದಾಗುವ ದುಃಖಗಳು–ಇವುಗಳು ಯಾವವೂ ಭಗವಂತನ ಸ್ವರೂಪದಲ್ಲಿ ಒಂದಿಷ್ಟೂ ಇರುವದಿಲ್ಲ. ಸಮುದ್ರದ ಮೇಲುಗಡೆಯಲ್ಲಿ ದೊಡ್ಡದೊಡ್ಡ ಅಲೆಗಳ ಉಬ್ಬರವಿಳಿತಗಳು ಎಷ್ಟೇ ವೇಗದಿಂದ ಕಾಣುತ್ತಿರಲಿ, ಸಮುದ್ರವು ಮೇಲುಗಡೆಯಲ್ಲಿ ಎಷ್ಟೇ ಭೋರ್ಗರೆಯುತ್ತಿರಲಿ, ಬಹಳ ಆಳವಾಗಿರುವ ಅದರ ಭಾಗದಲ್ಲಿ ಒಂದಿಷ್ಟೂ ಚಾಂಚಲ್ಯವಿರುವದಿಲ್ಲ, ಒಂದಿಷ್ಟೂ ಗದ್ದಲವಿರುವದಿಲ್ಲ; ಅಲ್ಲವೆ? ಅದರಂತೆ **ಈ ಪ್ರಪಂಚದಲ್ಲಿ ಕಾಣಬರುವ ತಾಪತ್ರಯಗಳ, ಮತ್ತು ವಿಕ್ಷೇಪನಿಮಿತ್ತಗಳ ಸೋಂಕು ಭಗವಂತನ ಸ್ವರೂಪದಲ್ಲಿ ಒಂದಿಷ್ಟೂ ಇರುವದಿಲ್ಲ. ಜಗತ್ತೆಲ್ಲವೂ ಆತನ ವಶದಲ್ಲಿರುತ್ತದೆ.**

ಭಗವಂತನು ಸರ್ವೇಶ್ವರನು, ಜಗತ್ತೆಲ್ಲವನ್ನೂ ವಶದಲ್ಲಿಟ್ಟುಕೊಂಡಿರುವವನು, ಎಂಬುದು ಮಾತ್ರವಲ್ಲ. ಆತನು ಮಾನವರೆಲ್ಲರಿಗೂ ಸರ್ವಪ್ರಾಣಿಗಳಿಗೂ ಅಂತರಾತ್ಮನಾಗಿರುತ್ತಾನೆ. ಆ ಭಗವಂತನು ನನಗೂ ನಿಮಗೂ ಎಲ್ಲರಿಗೂ ಆತ್ಮನು; ಪಶುಗಳಿಗೂ ಪಕ್ಷಿಗಳಿಗೂ ಮೃಗಗಳಿಗೂ ಕ್ರಿಮಿಗಳಿಗೂ ಕೀಟಗಳಿಗೂ ಆತ್ಮನು; ದೇವತೆಗಳಿಗೂ, ಅಸುರರಿಗೂ ಆತ್ಮನು. ನಾವುಗಳು ನಾನು, ನಾನು–ಎಂದು ತಿಳಿದುಕೊಂಡಿರುವ ರೂಪವು ನಿಜವಾಗಿ ನಮ್ಮ ಆತ್ಮನಲ್ಲ, ಅದಕ್ಕೂ ಒಳಗೆ ಸರ್ವರಿಗೂ ಆತ್ಮನಾಗಿರುವ ಭಗವಂತನು ಇದ್ದುಕೊಂಡಿರುತ್ತಾನೆ. ಆದ್ದರಿಂದ ಆ **ಭಗವಂತನು ಅಂತರಾತ್ಮನೆನಿಸಿಕೊಂಡಿರುತ್ತಾನೆ.**

ಈ ಭಗವಂತನು ತಾನು ಒಬ್ಬನೇ ಆಗಿರುತ್ತಾನೆ; ಎಲ್ಲಾ ಜೀವರೂ ತಮ್ಮ ತಮ್ಮ ಆತ್ಮನೆಂದು ಕರೆಯುವದೂ ತಾವುತಾವು ಬೇರೆಬೇರೆಯಾಗಿರುವೆವೆಂದು ಭಾವಿಸಿರುವದೂ ಆತನೊಬ್ಬನನ್ನೇ. ಭೂಮಿಯಲ್ಲಿ, ನೀರಿನಲ್ಲಿ, ಗಾಳಿಯಲ್ಲಿ, ಬೆಂಕಿಯಲ್ಲಿ, ಆಕಾರದಲ್ಲಿ, ಸೂರ್ಯನಲ್ಲಿ, ಚಂದ್ರನಲ್ಲಿ, ಆಕಾಶದಲ್ಲಿ, ಮೋಡದಲ್ಲಿ, ಮಳೆಯಲ್ಲಿ, ನದಿಯಲ್ಲಿ, ಸಮುದ್ರದಲ್ಲಿ,

ಬೆಟ್ಟದಲ್ಲಿ, ಮನುಷ್ಯನಲ್ಲಿ, ಕೀಳು **ಪ್ರಾಣಿಗಳಲ್ಲಿ ಬಗೆಬಗೆಯೆಂದು ಕಾಣಿಸುತ್ತಿರುವವನು ಆತನೊಬ್ಬನೇ.**

ಪ್ರಪಂಚದಲ್ಲಿ ಅನೇಕ ಮಾರ್ಪಾಡುಗಳಾಗಿರುವವು. ಯಾವದೊಂದೂ ಇದ್ದಂತೆ ಇರುವದಿಲ್ಲ. ಹೊರಗಿನ ವಸ್ತುಗಳಾಗಲಿ ನಮ್ಮಗಳ ಶರೀರಾದಿಗಳಾಗಲಿ, ಇದ್ದಂತೆ ಇರುವದಿಲ್ಲ. ಆದರೆ ಯಾವದು ಎಷ್ಟೇ ಮಾರ್ಪಡಲಿ, ಎಲ್ಲದರೊಳಗೂ ಯಾವದೋ ಒಂದು ನಿತ್ಯವಾದ ತತ್ತ್ವವು ಇರಬೇಕೆಂದು ನಮಗೆಲ್ಲರಿಗೂ ಭಾಸವಾಗುತ್ತಿರುವದು. ಯಾವದೊಂದೂ ನಿತ್ಯವಾಗಿರುವದಿಲ್ಲ; ಆದರೆ ಎಲ್ಲದರಲ್ಲಿಯೂ ಒಂದು ನಿತ್ಯವಾದ ತತ್ತ್ವವು ಅದರ ತಿರುಳಾಗಿ, ಅದರ ಆತ್ಮನಾಗಿ ಇರುವ ಒಂದು ವಸ್ತು ಇರಬೇಕೆಂದೇ ನಮಗೆ ಭಾಸವಾಗುತ್ತಿರುವದು. ಹಾಗಿಲ್ಲದಿದ್ದರೆ ದಿನದಿನಕ್ಕೂ ಕ್ಷಣಕ್ಷಣಕ್ಕೂ ಬೇರೆ ಬೇರೆಯಾಗುತ್ತಿರುವ ಈ ಜಗತ್ತಿನಲ್ಲಿ ನಮಗೆ ನಿತ್ಯತ್ವಭಾವನೆಯು ಹೇಗೆತಾನೆ ಉಂಟಾಗಿರುತ್ತಿತ್ತು? **ಅನಿತ್ಯವನ್ನು ನಿತ್ಯವೆಂದು ನಂಬುವ ಭ್ರಾಂತಿಗೆ ಕಾರಣವಾಗಿರುವ ಆ ಪರಮಾರ್ಥ ವಸ್ತುವೇ ಭಗವಂತನು.**

ಚೇತನವೆಂದೂ ಅಚೇತನವೆಂದೂ ನಾವು ಜಗತ್ತಿನ ವಸ್ತುಗಳನ್ನು ವಿಂಗಡಿಸಿ ಕೊಳ್ಳುತ್ತಿರುವೆವು. ಹೊರಗಿನ ವಸ್ತುಗಳ ವಿಭಾಗವು ಹಾಗಿರಲಿ. ನಮ್ಮ ನಮ್ಮ ಶರೀರದಲ್ಲಿ ಚೈತನ್ಯವು, ಎಂದರೆ ಅರಿವು ಇದೆ ಎಂದೇ ನಾವು ಗಟ್ಟಿಯಾಗಿ ನಂಬಿರುವೆವು. ನಮ್ಮಲ್ಲಿರುವ ಈ ಚೈತನ್ಯವು ಯಾವದು, ಅದು ಎಲ್ಲಿದೆ? ಇದನ್ನು ವಿಚಾರಿಸಿದರೆ ಕಣ್ಣು, ಕಿವಿ, ಮೂಗು, ನಾಲಗೆ, ಚರ್ಮ–ಇವುಗಳಲ್ಲಿ ರೂಪ, ಶಬ್ದ, ವಾಸನೆ, ರುಚಿ, ಸ್ಪರ್ಶ–ಇವುಗಳನ್ನು ಅರಿಯುವ ಶಕ್ತಿಯಿರುವಂತೆ ಕಾಣುವದು; ಮನಸ್ಸಿನಲ್ಲಿ ಅರಿಕೆಯನ್ನುಂಟು ಮಾಡಿಕೊಳ್ಳುವ, ಅದಿದೆಂದು ವಿಕಲ್ಪಿಸುವ, ಆ ವಿಕಲ್ಪಗಳನ್ನು ಒಂದುಗೂಡಿಸಿ ಇಂಥದ್ದೇ ಎಂದು ನಿಶ್ಚಯಿಸುವ ಶಕ್ತಿಯಿದೆ ಎಂದು ಕಾಣುವದು. ಆದರೆ ಇಂದ್ರಿಯಗಳಲ್ಲಿಯೂ ಮನಸ್ಸಿನಲ್ಲಿಯೂ ಇರುವದೆಂಬ ಈ ಚೈತನ್ಯಶಕ್ತಿಯು ಅವುಗಳದ್ದೆ, ಅಥವಾ ಅವಕ್ಕಿಂತ ಬೇರೆಯಾದ ಮತ್ತೊಂದು ವಸ್ತುವಿನದೆ? ಇಂದ್ರಿಯಗಳನ್ನಾಗಲಿ ಮನಸ್ಸನ್ನಾಗಲಿ ಅರಿಯುವದಕ್ಕೆ ನಮ್ಮ ಸ್ವರೂಪವು ಮೊದಲು ಬೇಕು. ನಮ್ಮ ಸ್ವರೂಪದಲ್ಲಿ ಚೈತನ್ಯವಿಲ್ಲದಿದ್ದರೆ ಇಂದ್ರಿಯಗಳಲ್ಲಿ ಅಥವಾ ಮನದಲ್ಲಿ ಚೈತನ್ಯವಿದೆ ಎಂಬುದೇ ನಮಗೆ ಗೊತ್ತಾಗುತ್ತಿರಲಿಲ್ಲ. ಅಲ್ಲವೆ? ಈ ನಮ್ಮ ಸ್ವರೂಪದ ಚೈತನ್ಯವೇ ನಮ್ಮ ಮನದಲ್ಲಿಯೂ ಇಂದ್ರಿಯಗಳಲ್ಲಿಯೂ ಹೊರಹೊಮ್ಮುತ್ತಿರುವದೆಂದು ಋಷಿಗಳು ಹೇಳುತ್ತಾರೆ. ಬಿಸಿನೀರಿನಲ್ಲಿರುವ ಬಿಸಿಯು ಅದಕ್ಕೆ ಎಲ್ಲಿಂದ ಬಂದಿರುತ್ತದೆ? ಅದನ್ನು ಕಾಯಿಸಿದ ಬೆಂಕಿಯಿಂದ ಅಥವಾ ಬಿಸಿಲಿನಿಂದ ಬಂದಿರುತ್ತದೆ. ನೀರಿನ ಸ್ವಭಾವವು ಬಿಸಿಯಾಗಿರುವದಲ್ಲ. ಇದರಂತೆ ನಮ್ಮ ಇಂದ್ರಿಯಗಳೂ ಮನಸ್ಸೂ ತಾವೇ ಚೈತನ್ಯವಲ್ಲ, ತಾವೇ ಅರಿಯುವ ಸ್ವಭಾವದವಲ್ಲ; ಅವುಗಳೊಳಗೆ

ಇರುವ ಆತ್ಮನ ಚೈತನ್ಯವೇ ಅವುಗಳ ಮೂಲಕವಾಗಿ ತೋರಿಕೊಳ್ಳುತ್ತಿರುತ್ತದೆ–ಎಂದು ಶಾಸ್ತ್ರಗಳೂ ಋಷಿಗಳೂ ಹೇಳುತ್ತಾರೆ. ಚೇತನಗಳೆಂದು ನಮಗೆ ಯಾವ ಪ್ರಾಣಿಗಳು ತೋರಿದರೂ ಅವುಗಳಲ್ಲಿರುವ ಚೈತನ್ಯವೆಲ್ಲ ಒಂದೇ. ಅದೇ ಭಗವಂತನ ಚೈತನ್ಯವು. ಆ **ಭಗವಂತನು ಚೇತನಗಳಿಗೆಲ್ಲ ಚೇತನನಾಗಿರುತ್ತಾನೆ.**

ಈ ಜಗತ್ತಿನಲ್ಲಿ ಅನಂತಪ್ರಾಣಿಗಳಿರುವವು. ಅವುಗಳಿಗೆ ಬೇಕಾದ ಕಾಮಗಳು ಅನಂತವಾಗಿರುವವು. ಆದರೆ ಒಂದೊಂದು ಪ್ರಾಣಿಯೂ ತನತನಗೆ ಬೇಕಾದ ಕಾಮವನ್ನು ಹುಡುಕಿಕೊಂಡು ಹೊರಟಿರುತ್ತದೆ; ಒಂದೊಂದು ಪ್ರಾಣಿಗೂ ತನ್ನ ಕಾಮಿತವಸ್ತುವು ಜಗತ್ತಿನಲ್ಲಿ ಇದ್ದೇಇದೆ ಎಂಬ ಭರವಸೆಯಿರುತ್ತದೆ; ಒಂದೊಂದು ಪ್ರಾಣಿಗೂ ಬೇಕಾದ ಕಾಮವು ಒಂದಲ್ಲದಿದ್ದರೆ ಒಂದು ದಿನ, ಒಂದು ಕಡೆಯಲ್ಲಿಲ್ಲದಿದ್ದರೆ ಮತ್ತೊಂದು ಕಡೆಯಲ್ಲಿ ದೊರಕಿಯೇತೀರುತ್ತದೆ. ಈ ಅನಂತಕಾಮಗಳನ್ನು ಅನಂತಪ್ರಾಣಿಗಳಿಗೂ ಒದಗಿಸಿಕೊಡುತ್ತಿರು ವವರು ಯಾರು? ಕಾಮಗಳನ್ನು ಹುಡುಕುತ್ತಿರುವ ಅಲ್ಪಜ್ಞನಾದ ಯಾವ ಜೀವನಿಗೆತಾನೆ ಎಲ್ಲರಿಗೂ ಬೇಕಾಗಿರುವ ಕಾಮಗಳು ಯಾವಯಾವೆಂದು ತಿಳಿದೀತು? **ಅನಂತರಾಗಿರುವ ಜೀವರ ಬೇರೆಬೇರೆಯ ಕಾಮಗಳನ್ನು ಈಡೇರಿಸಿ ಕೊಡುವವನೂ ಆ ಭಗವಂತನೇ.**

ಇಂಥ ಭಗವಂತನನ್ನು ನಾವು ಎಲ್ಲಿ ಹುಡುಕಬೇಕು, ಹೇಗೆ ಹುಡುಕಬೇಕು? ಆತನು ಸರ್ವವ್ಯಾಪಿಯಾಗಿರುವದರಿಂದ ಎಲ್ಲೆಲ್ಲಿಯೂ ಇರುತ್ತಾನೆ. ಆದರೆ ಆತನನ್ನು ವಿಶೇಷವಾಗಿ ಕಂಡುಕೊಳ್ಳುವ ತಾಣವೊಂದಿದೆ. ಆತನು ನಮ್ಮೆಲ್ಲರ ಹೃದಯದಲ್ಲಿಯೂ ಇರುತ್ತಾನೆ. ಆತನನ್ನು ನಮ್ಮ ನಮ್ಮ ಹೃದಯುದಲ್ಲಿಯೇ ಕಂಡುಕೊಳ್ಳಬೇಕು. ಯಾರು ಆತನನ್ನು ಅಲ್ಲಿ ಕಂಡುಕೊಂಡಿರುವರೋ ಅವರೇ ಧೀಮಂತರು, ಅವರೇ ವಿವೇಕಿಗಳು.

ಭಗವಂತನು ನಮ್ಮ ಹೃದಯದಲ್ಲಿಯೇ ಇರುವನೆಂದು, ಆತನೇ ನಮ್ಮೆಲ್ಲರಿಗೂ ಅಂತರಾತ್ಮನೆಂದು, ಆತನೇ ನಮ್ಮಲ್ಲಿರುವ ನಿತ್ಯತತ್ತ್ವವೆಂದು, ಆತನೇ ನಮಗೆ ಅರಿವನ್ನು ಕೊಟ್ಟಿರುವ ಚೈತನ್ಯದ ರಾಶಿಯೆಂದು, ಆತನೇ ನಮ್ಮೆಲ್ಲರ ಕಾಮಗಳನ್ನು ಪರಿಪೂರ್ತಿಗೊಳಿಸುತ್ತಿರುವ ಆಪ್ತಕಾಮನೆಂದು, ನೆರೆನಂಬಿ ಯಾವಾಗ ನಾವು ಆತನಲ್ಲಿಯೇ ಮನಸ್ಸನ್ನು ನಿಲ್ಲಿಸಿಕೊಳ್ಳುವೆವೋ, ಆಗ ಆತನ ಸತ್ಯಸಂಕಲ್ಪಕ್ಕೆ ಅನುಗುಣವಾಗಿ ನಮ್ಮ ಅಂತಃಕರಣವು ವ್ಯಾಪಾರವನ್ನು ಮಾಡುವದಕ್ಕೆ ಮೊದಲಿಕ್ಕುವದು. ಶಾಂತನೂ ಶಿವನೂ ಆಗಿರುವ ಪರಮಾತ್ಮನ ಸಂಕಲ್ಪಕ್ಕೆ ಅನುಗುಣವಾಗಿ ಯಾವಾಗ ಅಂತಃಕರಣವು ಕೆಲಸಮಾಡುವದೋ ಆಗ ನಮ್ಮ ಚಿತ್ತವೃತ್ತಿಯ ಪ್ರವಾಹವು ಆತನ ಅನಂತವಾದ ಸಮತೆಯ ಆನಂದದ ಸಮುದ್ರದ ಕಡೆಗೇ ಹರಿಯುವದಕ್ಕೆ ಮೊದಲಾಗುವದು. ಈ ಭಗವಚ್ಚಿಂತನೆಯೇ ನಮಗೆ ಶಾಂತಿಸುಖಗಳ ನೆಲೆಯನ್ನು ಮುಟ್ಟಿಸುವದು.

ಲೋಕದಲ್ಲಿ ಶಾಂತಿಯು ನೆಲೆಸಬೇಕೆಂದು, ಸುಖವು ಮನೆಮಾಡಿಕೊಂಡಿರಬೇಕೆಂದು, ಯಾರುಯಾರು ಬಯಸುತ್ತಾರೋ ಅವರೆಲ್ಲರೂ ಮೊಟ್ಟಮೊದಲು ವೈರಭಾವನೆಯನ್ನೂ ಸೇಡುತೀರಿಸಕೊಳ್ಳುವ ಭಾವನೆಯನ್ನೂ ಬಿಟ್ಟುಬಿಡಬೇಕು. ವೈರಭಾವನೆಯು ಇರುವವರೆಗೆ ಯುದ್ಧಗಳು ನಿಲ್ಲುವದಿಲ್ಲ, ಸೇಡುತೀರಿಸಿಕೊಳ್ಳುವ ಮನೋಭಾವವಿರುವವರೆಗೆ ಹಿಂಸೆಯ ಕೃತ್ಯಗಳು ನಿಲ್ಲುವದಿಲ್ಲ. ವ್ಯಕ್ತಿಗಳು ಒಬ್ಬರಲ್ಲೊಬ್ಬರು ಇಟ್ಟುಕೊಂಡಿರುವ ವೈರಬುದ್ಧಿ ಯಿಂದಲೂ ಪ್ರತೀಕಾರಬುದ್ಧಿಯಿಂದಲೂ ವ್ಯಕ್ತಿಗಳ ಜಗಳಗಳು ಉಂಟಾಗುವವು; ಜಾತಿಗಳ ವೈರಬುದ್ಧಿ ಯಿಂದಲೂ ಪ್ರತೀಕಾರಬುದ್ಧಿಯಿಂದಲೂ ಜಾತಿಕಲಹಗಳುಂಟಾಗುವವು. ರಾಷ್ಟ್ರಗಳಿಗೂ ಹೀಗೆಯೇ. ಈ ರಾಷ್ಟ್ರದವರನ್ನು ಕಂಡರೆ ನಮಗೆ ಆಗದು, ಇವರನ್ನು ಹೇಗಾದರೂ ಮಟ್ಟಹಾಕಿ ಸೇಡುತೀರಿಸಿಕೊಳ್ಳಬೇಕು–ಎಂಬ ಭಾವನೆಯಿರುವವರೆಗೆ ಎಂದಿಗೂ ಯುದ್ಧಗಳು ನಿಲ್ಲುವದಿಲ್ಲ, ಎಂದಿಗೂ ಶಾಂತಿಯು ತಲೆದೋರುವದಿಲ್ಲ.

ಆದ್ದರಿಂದ ಯುದ್ಧಗಳು ನಿಲ್ಲಬೇಕಾದರೆ ಮೊಟ್ಟಮೊದಲು ವ್ಯಕ್ತಿಗಳ ಜಗಳಗಳು ನಿಲ್ಲಬೇಕು. ವ್ಯಕ್ತಿಗಳ ಜಗಳ ನಿಲ್ಲಬೇಕಾದರೆ, ಅವರು ಒಬ್ಬರೊಬ್ಬರ ಮೇಲೆ ಇಟ್ಟುಕೊಂಡಿರುವ ವೈರಬುದ್ಧಿಯು ನಾಶವಾಗಬೇಕು. ವೈರವು ನಾಶವಾಗಬೇಕಾದರೆ ಮೊದಲು ನಮ್ಮ ಹೃದಯುದಲ್ಲಿ ಶಾಂತಿಯೂ ಸುಖವೂ ನೆಲೆಸಬೇಕು; ಬಳಿಕ ಸುತ್ತುಮುತ್ತಲಿನ ಜನರಮೇಲೆ ಪ್ರೇಮವುಂಟಾಗಬೇಕು. ಎಲ್ಲಕ್ಕಿಂತಲೂ ಮೊದಲು ನೆರೆಮನೆಯವರನ್ನು ಕಂಡರೆ ಸಿಡುಗುಟ್ಟುವ ಮುಖವನ್ನು ಸರಿಪಡಿಸಿಕೊಳ್ಳಬೇಕು, ನೆಂಟರಲ್ಲಿರುವ ಅಸಡ್ಡೆಯನ್ನೂ ಔದಾಸೀನ್ಯವನ್ನೂ ಕಳೆದುಕೊಳ್ಳಬೇಕು. ಜೊತೆಯಲ್ಲಿ ಕೆಲಸಮಾಡುವವರನ್ನು ನೋಡಿದರೆ ಆಗುವ ಅಸೂಯೆಯನ್ನು ತಡೆಗಟ್ಟಬೇಕು. ಬಳಿಕ ಅವರೆಲ್ಲರನ್ನೂ ಪ್ರೇಮದಿಂದ ಕಾಣುವ ರೀತಿಯನ್ನು ಅಭ್ಯಾಸಮಾಡಬೇಕು.

ಪರಮೇಶ್ವರನು ಎಲ್ಲರ ಹೃದಯದಲ್ಲಿಯೂ ಸಮವಾಗಿಯೇ ಇರುತ್ತಾನೆಂಬುದನ್ನು ಮನದಂದುಕೊಳ್ಳಿರಿ. ಆತನಿಗೆ ಎಲ್ಲರಮೇಲೆಯೂ ಸಮವಾಗಿಯೇ ಪ್ರೇಮವಿರುವ ದೆಂಬುದನ್ನು ಮನಸ್ಸಿಗೆ ಸೇರಿಸಿಕೊಳ್ಳಿರಿ. ಭಗವಂತನ ಪ್ರೇಮವೇ ನಮಗೆ ಈಗ ಉಂಟಾಗಿರುವ ಎಲ್ಲಾ ಸೌಕರ್ಯಗಳಿಗೂ ಮೂಲವು, ಭಗವಂತನಿಗೆ ವಿಮುಖವಾಗಿರುವದೇ ನಮಗೆ ಈಗ ಉಂಟಾಗಿರುವ ಎಲ್ಲಾ ಕಷ್ಟಗಳಿಗೂ ಮೂಲವು ಎಂದು ನೆರೆನಂಬಿರಿ. ಹಾಗಾದರೆ ಭಗವಂತನ ಚಿಂತೆಯಿಂದ ಆತನ ಪ್ರೇಮವನ್ನು ಸಂಪಾದಿಸಿಕೊಳ್ಳಬೇಕೆಂಬ ಹವಣಿಕೆಯು ತಪ್ಪದೆ ನಿಮ್ಮ ಮನಸ್ಸಿನಲ್ಲಿ ಉಂಟಾಗುವದು. ಆಗ 'ಯಾರು ನನ್ನನ್ನು ಭಕ್ತಿಯಿಂದ ಭಜಿಸುವರೋ ಅವರು ನನ್ನಲ್ಲಿರುವರು, ಅವರಲ್ಲಿಯೂ ನಾನಿರುವೆನು' ಎಂಬ ಭಗಂತನ ಅಭಿವಚನವು ಮನಸ್ಸಿಗೆ ಹತ್ತುವದು; ಬಳಿಕ ಆತನಲ್ಲಿಯೇ ಮನಸ್ಸನ್ನು ನಿಲ್ಲಿಸಿಕೊಳ್ಳುವ ಪ್ರಯತ್ನವನ್ನು ಮಾಡಿರಿ. ಅದರಿಂದ ನಿಮಗೆ ಭಗವಂತನ

ಸ್ವಾಭಾವಿಕವಾದ ಶಾಂತಿಯು ಅಳವಡುವದು. ಅಲ್ಲಿಂದ ಮುಂದಕ್ಕೆ ಭಗವಂತನು ನನ್ನ ಹೃದಯದಲ್ಲಿರುವಂತೆಯೇ ಮಿಕ್ಕ ಎಲ್ಲರ ಹೃದಯದಲ್ಲಿಯೂ ಇರುವದರಿಂದ ಅವರನ್ನೂ ಪ್ರೇಮದಿಂದ ಕಾಣುವದೇ ಆತನ ಆರಾಧನೆ ಎಂಬ ವಿಚಾರವು ಮನಸ್ಸಿಗೆ ಹೊಳೆಯುವದು. ಕೂಡಲೆ ನಿಮ್ಮ ಅನಿಮಿತ್ತಪ್ರೇಮದ ಪ್ರವಾಹವು ಎಲ್ಲರ ಕಡೆಗೂ ಹರಿಯುವದು. ಹೀಗೆ ಕೆಲವು ಜನರು ಅಲ್ಲಲ್ಲಿ ಮಾಡಿದರೂ ಸಾಕು; ವಿಶ್ವಶಾಂತಿಯು ಕಟ್ಟಿಟ್ಟ ಬುತ್ತಿಯಾಗುವದು.

ಈಗಿನ ಸ್ಥಿತಿಯಲ್ಲಿ ಜನರನ್ನು 'ಎಲ್ಲರನ್ನೂ ಪ್ರೀತಿಸಿರಿ' ಎಂದು ಕೇಳಿಕೊಳ್ಳುವದು ಸಾಧ್ಯವಿಲ್ಲ. ಈಗ ಇಡಿಯ ಭೂಲೋಕಕ್ಕೇ ಒಂದು ಭಾರಿಯ ಹುಚ್ಚುಹಿಡಿದಿದೆ. ಎಲ್ಲರನ್ನೂ ಕೊಂದು ತಮ್ಮ ಸಾವನ್ನೂ ಬೇಗನೇ ಆವಾಹನೆಮಾಡಿಕೊಳ್ಳುವ ಚಟವು ಜನಾಂಗಗಳಿಗೆ ಬಂದುಬಿಟ್ಟಿದೆ. ಹುಚ್ಚರ ಸಂತೆಯಲ್ಲಿ ಕೆಲವರು ಎಚ್ಚರದಿಂದಿರುವ ವಿವೇಕಿಗಳೂ ಇರಬಹುದು. ಅವರು ಭಗವಂತನನ್ನು ಎಡೆಬಿಡದೆ 'ದೇವ, ಎಲ್ಲರಿಗೂ ನಿನ್ನ ಪ್ರೇಮದ ಸಾರವನ್ನು ದಯಮಾಡಿ ಅನುಗ್ರಹಿಸು' ಎಂದು ಬೇಡಿಕೊಳ್ಳುತ್ತಿರಬೇಕು.

# 28. ಭಗವಂತನ ಪ್ರೇಮ ಪ್ರವಾಹದ ಹರಿವು

* ಒಬ್ಬ ರೈತನು ತನ್ನ ಗದ್ದೆಗೆ ನೀರನ್ನು ಕಟ್ಟುವದಕ್ಕೆ ಸಾಯಂಕಾಲವಾದ ಮೇಲೆ ಮನೆಯನ್ನು ಬಿಟ್ಟು ಹೋದನು. ನೀರನ್ನು ಹೆಗ್ಗಾಲುವೆಯಿಂದ ಮಡಬಾಯಿ ಕಿತ್ತು ತನ್ನ ಗದ್ದೆಗೆ ಬರುವ ಕಿರುಗಾಲುವೆಗೆ ಹರಿಯುವಂತೆ ಮಾಡಿದನು. ಗದ್ದೆಗೆ ಬರುವ ತನ್ನ ಕಾಲುವೆಯಲ್ಲಿ ನೀರು ಅಲ್ಲಲ್ಲಿ ಸೀಳುದಾರಿಗೆ ಹೋಗದಂತೆ ಚೆನ್ನಾಗಿ ಗುದ್ದಲಿಯಿಂದ ಮಣ್ಣುಕಟ್ಟೆಯನ್ನು ಕಟ್ಟುತ್ತಾ ಹೋದನು. ಕೊನೆಗೆ ಆಯಾಸದಿಂದ ಗದ್ದೆಯ ಮೇಲುಗಡೆ ಇದ್ದ ತನ್ನ ಗುಡಿಸಲಿನಲ್ಲಿ ಮಲಗಿಕೊಂಡನು. ಬೆಳಗಿನ ಜಾವದಲ್ಲಿ ಅವನಿಗೆ ಎಚ್ಚರವಾಯಿತು. ಬೆಳುದಿಂಗಳಲ್ಲಿ ಗದ್ದೆಗೆ ಎಷ್ಟು ಮಟ್ಟಿಗೆ ನೀರು ಹಾಯ್ದಿದೆ ಎಂದು ನೋಡುತ್ತಾನೆ, ನೀರು ಬಂದೇ ಇಲ್ಲ! ಆಶ್ಚರ್ಯದಿಂದ ಗುದ್ದಲಿಯನ್ನು ಹೆಗಲಮೇಲೆ ಇಟ್ಟುಕೊಂಡು ಕಾಲುವೆಯನ್ನು ಉದ್ದಕ್ಕೂ ಪರಿಕಿಸುತ್ತಾ ಹೋದನು. ಎಲ್ಲವೂ ಸರಿಯಾಗಿತ್ತು. ಕಟ್ಟಕಡೆಗೆ ಮಡಬಾಯಿಯ ಹತ್ತಿರ ಎರಡು ಮಾರು ದೂರದಲ್ಲಿ ಕಟ್ಟೆಯನ್ನು ಒಡೆದುಕೊಂಡು ನೀರು ಸೋರುತ್ತಿರುವದು ಕಂಡಿತು. ಅತ್ತಲಾಗಿ ನೆಲವು ತಗ್ಗಾಗಿತ್ತು; ಆದ್ದರಿಂದ ನೀರಿನ ಸೆಳವು ಆಕಡೆಗೆ ಹೋಗಿ ಕೊನೆಗೆ ಒಂದು ಕೊರಕಲಿಗೇ ಹರಿಯುತ್ತಿತ್ತು!

ಪರಮೇಶ್ವರನ ಪ್ರೇಮಪ್ರವಾಹವನ್ನು ಹೃದಯಕ್ಷೇತ್ರಕ್ಕೆ ಹರಿಯಿಸಿಕೊಳ್ಳಬೇಕೆಂದು ಬಯಸುವ ಧ್ಯಾನಯೋಗಿಗೆ ಅನೇಕ ವೇಳೆಗಳಲ್ಲಿ ಮೇಲೆ ಹೇಳಿದ ಪ್ರಕಾರದ ಆತಂಕವು

* ಸಂಪುಟ 18, ಸಂಚಿಕೆ 4, ಡಿಸೆಂಬರ್ 1948, ಪುಟ 73–78

ಬಂದು ಒದಗುತ್ತದೆ. ಶಾಂತವಾದ ವಾತಾವರಣದಲ್ಲಿ ಮನಮುಟ್ಟಿ ಮಾಡಿದ ಧ್ಯಾನದಿಂದ ಇಂದ್ರಿಯಗಳ ಹರಿದಾಟವು ನಿಲ್ಲಬೇಕು. ಮನಸ್ಸಿನ ಚೆದರಾಟವು ಕಡಿಮೆಯಾಗಬೇಕು, ಹೃದಯದಲ್ಲಿ ಪ್ರಶಾಂತಿಯು ದೊರಕಿಬಿಡಬೇಕು. ದಿನಕ್ಕೆ ಒಂದೊಂದು ಘಂಟೆಯಂತೆ ಬೆಳಗ್ಗೆ, ಸಂಜೆ–ಎರಡು ಹೊತ್ತು ಹೀಗೆ ಧ್ಯಾನಮಾಡಿದವನಿಗೆ ಕೆಲವು ದಿನಗಳಲ್ಲಿಯೇ ಶಾಂತಿಯು ಕಟ್ಟಿಟ್ಟ ಬುತ್ತಿಯಾಗಬೇಕು. ಭಗವಂತನ ಪ್ರಸಾದವು ದೊರೆತ ಫಲವಾಗಿ ಮುಖದಲ್ಲಿ ಬ್ರಹ್ಮವರ್ಚಸ್ಸು ಚಿಮ್ಮುತ್ತಿರಬೇಕು. ಆದರೆ ಎಷ್ಟೋ ತಿಂಗಳುಗಳವರೆಗೆ ಧ್ಯಾನ ಮಾಡಿದರೂ ಮನಸ್ಸಿಗೆ ಶಾಂತಿಯು ದೊರಕಿರುವದಿಲ್ಲ, ಮುಖವು ಕರೆಕರೆಯ, ಅಂಜಿಕೆಯ, ದುಗುಡದ ಮಸುಕನ್ನು ಕಳೆದುಕೊಂಡಿರುವದಿಲ್ಲ. ಇದೇಕೆ? ಸಾಧನದಲ್ಲಿ ಯಾವ ಕೊರತೆಯಿದೆ?–ಎಂದು ಸಾಧಕರು ಆಗಾಗ್ಗೆ ತಮ್ಮಲ್ಲಿ ತಾವು ಯೋಚಿಸಿಕೊಳ್ಳುತ್ತಿರುವರು.

ಇದಕ್ಕೆ ಉತ್ತರವು ಮೇಲೆ ಕೊಟ್ಟಿರುವ ದೃಷ್ಟಾಂತದಲ್ಲಿ ಅಡಗಿರುತ್ತದೆ. ಭಗವಂತನ ಪ್ರೇಮವೇನೋ ಹರಿಯುತ್ತಲೇ ಇದೆ. ಅದನ್ನು ನಮ್ಮಕಡೆಗೆ ಹರಿಯುವದಕ್ಕಾಗಿ ಯಾವ ಮಡಬಾಯಿಯನ್ನೂ ಕೀಳಬೇಕಾದದ್ದಿಲ್ಲ. ಆದರೆ ಆ ಪ್ರೇಮದ ಕಡೆಗೆ ನೀವು ಕಾಲುವೆಯನ್ನು ತೋಡುತ್ತಿಲ್ಲ, ಕಾಲುವೆಗೆ ಸರಿಯಾದ ಕಟ್ಟೆಯನ್ನು ಹಾಕಿ ನಿಮ್ಮ ಕಡೆಗೆ ಬರುವ ಪ್ರಯತ್ನವನ್ನು ನೀವು ಮಾಡುತ್ತಿಲ್ಲ. ಸ್ವಲ್ಪಹೊತ್ತು ಕಾಲುವೆಯನ್ನು ಮಾಡಿ ಬಳಿಕ ನಿದ್ರಿಸಿದ ರೈತನಂತೆ ನೀವೂ ಕಾಲುವೆಯಲ್ಲಿ ಎಲ್ಲಿಯೋ ಒಂದು ಕಳ್ಳಗಂಡಿಯನ್ನು ಮರೆತು ನಿದ್ರಿಸುತ್ತಿರುವಿರಿ. ಏಳಿರಿ, ಮೊದಲು ಆ ಕಳ್ಳಗಂಡಿಯನ್ನು ಮುಚ್ಚಿರಿ.

ದೃಷ್ಟಾಂತದಲ್ಲಿ ರೈತನ ಉದ್ದೇಶವೇನಿತ್ತು? ತನ್ನ ಗದ್ದೆಗೆ ನೀರುಹಾಯಿಸಿಕೊಳ್ಳುವದೇ. ಅವನು ಪಟ್ಟ ಶ್ರಮವೆಲ್ಲ ಈ ಒಂದು ಪ್ರಯೋಜನಕ್ಕಾಗಿ. ಮಡಬಾಯಿಕೀಳುವದರಿಂದ ಹಿಡಿದು ತನ್ನ ಗದ್ದೆಗೆ ಕಾಲುವೆಯನ್ನು ನೇರಾಗಿ ತಂದುಕೊಳ್ಳುವವರೆಗೆ ಅವನು ಮಾಡಿದ ಪ್ರಯತ್ನವೆಲ್ಲ ಈ ಒಂದು ಪ್ರಯೋಜನಕ್ಕಾಗಿಯೇ. ಆದ್ದರಿಂದ ಕಾಲುವೆಯಲ್ಲಿ ಯಾವ ಭಾಗದಲ್ಲಿ ಒದು ಸಣ್ಣ ಕಳ್ಳಗಂಡಿ ಇದ್ದರೂ ಅದೇ ಅವನ ಶ್ರಮವನ್ನೆಲ್ಲ ವ್ಯರ್ಥಗೊಳಿಸುತ್ತಿತ್ತು. ಅಲ್ಲವೆ? ಧ್ಯಾನಯೋಗಿಯಾದವನು ಆ ರೈತನಂತೆಯೇ ಪರಮಾತ್ಮನಿಗೂ ತನಗೂ ಸಂಬಂಧವನ್ನು ಮಾಡಿಕೊಂಡು ಆತನ ಪ್ರೇಮಪ್ರವಾಹವು ತನ್ನ ಹೃದಯದೊಳಕ್ಕೆ ನುಗ್ಗುವಂತೆ ಮಾಡಿಕೊಳ್ಳಲು ಪ್ರಯತ್ನಿಸುತ್ತಾನೆ. ಈ ಪ್ರಯತ್ನವು ಈಡೇರುವದಕ್ಕೆ ಕ್ಲಿಪ್ತಕಾಲದಲ್ಲಿ ಇಂತಿಷ್ಟು ಹೊತ್ತು ಧ್ಯಾನವನ್ನು ಮಾಡಿಬಿಟ್ಟರೆ ಸಾಲದು. ಅದರ ಪರಮಪ್ರಯೋಜನಕ್ಕೆ ಅಡ್ಡಿಯಾಗಿರುವ ವರ್ತನೆಗಳನ್ನೆಲ್ಲ ಬಿಡಬೇಕು. ಅನುಕೂಲವಾಗಿರುವ ವರ್ತನೆಗಳನ್ನೆಲ್ಲ ಮಾಡಬೇಕು.

ಧ್ಯಾನಯೋಗದ ಉದ್ದೇಶವು ಪರಮಾತ್ಮನ ಪ್ರೇಮಪ್ರವಾಹವನ್ನು ನಮ್ಮ ಕಡೆಗೆ ತಿರುಗಿಸಿ ಕೊಳ್ಳುವದೇ ಎಂದು ಮೇಲೆ ಹೇಳಿರುತ್ತೇವೆ. ಆದರೆ ದೃಷ್ಟಾಂತಕ್ಕೂ ಈ

ದಾರ್ಷ್ಟಾಂತಿಕಕ್ಕೂ ಒಂದು ಮುಖ್ಯವಾದ ವೈಷಮ್ಯವಿದೆ. ದೃಷ್ಟಾಂತದಲ್ಲಿ ನೀರು ಒಂದು ದಿಕ್ಕಿನಲ್ಲಿ ಹರಿಯುತ್ತಿರುತ್ತದೆ, ಅದನ್ನು ರೈತನು ತನಗೆ ಇಷ್ಟವಾದ ಮತ್ತೊಂದು ದಿಕ್ಕಿಗೆ ಹರಿಯಿಸಿಕೊಳ್ಳಬೇಕಾಗಿರುತ್ತದೆ. ಆದರೆ ದಾರ್ಷ್ಟಾಂತಿಕದಲ್ಲಿ ಭಗವಂತನ ಪ್ರೇಮವು ಯಾವದೊಂದು ಕ್ಲಿಪ್ತವಾದ ಹಾದಿಯಲ್ಲಿಯೂ ಹರಿಯುತ್ತಲಿಲ್ಲ; ಅದು ಎಲ್ಲಾ ದಿಕ್ಕುಗಳಲ್ಲಿಯೂ ನುಗ್ಗುತ್ತಿರುತ್ತದೆ. ಅದರ ಪ್ರವಾಹಕ್ಕೆ ಅಡ್ಡಲಾಗಿ ಯಾವದಾದರೊಂದು ಆತಂಕವು ಬಂದರೆ ಅತ್ತ ಅದು ಹರಿಯುವದಿಲ್ಲ; ಆ ಪ್ರತಿಬಂಧಕವನ್ನು ಕಿತ್ತುಹಾಕಿದರೆ ಕೂಡಲೆ ಅತ್ತಲೂ ಹರಿದುಬರುತ್ತದೆ.

ಪರಮೇಶ್ವರನ ಪ್ರೇಮವು ನಿಮ್ಮ ಕಡೆಗೆ ಹರಿಯಬೇಕೆ? ಹಾಗಾದರೆ ಕೂಡಲೆ ಪರಮೇಶ್ವರನನ್ನು ಪ್ರೀತಿಸುವದಕ್ಕೆ ಮೊದಲುಮಾಡಿರಿ. ಆತನ ಪ್ರೇಮದ ಪ್ರವಾಹವು ನಿಮ್ಮ ಕಡೆಗೆ ಹರಿದುಬಂದರೂ ಅದು ನಿಮ್ಮ ಹೃದಯದೊಳಕ್ಕೆ ನುಗ್ಗದಂತೆ ಅಡ್ಡಲಾಗಿರುವ ಕಟ್ಟೆಗಳನ್ನು ಎಲ್ಲಕ್ಕೂ ಮೊದಲು ಕಿತ್ತುಹಾಕಿರಿ. ನಿಮ್ಮ ಹೃದಯಕ್ಷೇತ್ರದಲ್ಲಿ ಎಲ್ಲಾ ಕಡೆಗೂ ನಿಮ್ಮ ಪ್ರೇಮದ ಕಾಲುವೆಗಳನ್ನು ಮಾಡಿಕೊಳ್ಳಿರಿ. ಆ ಕಾಲುವೆಗಳನ್ನು ಸರ್ವತೋ ಮುಖವಾಗಿ ಹರಿದುಬರುತ್ತಿರುವ ಪರಮೇಶ್ವರನ ಪ್ರೇಮಪ್ರವಾಹಕ್ಕೆ ಸಂಬಂಧಿಸಿಕೊಳ್ಳಿರಿ.

ಪರಮೇಶ್ವರನ ಪ್ರೇಮವು ನಮ್ಮ ಹೃದಯದೊಳಕ್ಕೆ ಹರಿದುಬರುವದಕ್ಕೆ ಅಡ್ಡಲಾಗಿರುವ ಕಟ್ಟೆಗಳು ಯಾವವು? ಎಂದರೆ ಶರೀರ, ವಾಕ್ಕು, ಮನಸ್ಸು–ಎಂಬ ಕರಣತ್ರಯದಲ್ಲಿರುವ ಕುಸಂಸ್ಕಾರಗಳು. ಸ್ವಚ್ಛವಾಗಿರಿಸಿಕೊಳ್ಳದ ಬಚ್ಚಲುದೋಣಿಯಲ್ಲಿ ಕಸವು ಕಟ್ಟಿಕೊಳ್ಳುವಂತೆ-ರಾಜಸತಾಮಸವಾದ ಆಹಾರವಿಹಾರಗಳಿಂದಲೂ ನಡೆನುಡಿಗಳಿಂದಲೂ ಭಾವನೆ ಗಳಿಂದಲೂ ಈ ಮೂರು ಕರಣಗಳಲ್ಲಿಯೂ ಕುಸಂಸ್ಕಾರಗಳು ಉಂಟಾಗುವವು; ಅದರಿಂದ ಪರಮೇಶ್ವರನ ಅತಿ ಸ್ವಚ್ಛವಾದ ಪ್ರೇಮಾಮೃತದ ಝರಿಯು ನಮ್ಮೊಳಕ್ಕೆ ಹರಿದುಬರುವದಕ್ಕೆ ಅಡಚಣೆಯಾಗುತ್ತದೆ. ಈ ಸಂಸ್ಕಾರಗಳನ್ನು ಕಳೆದುಕೊಳ್ಳುವ ಪ್ರಯತ್ನಗಳನ್ನು ಮಾಡಬೇಕು. ಸಾತ್ತ್ವಿಕವಾದ ಸಂಸ್ಕಾರಗಳೆಂಬ ಕೊಳವೆಗಳನ್ನು ನಮ್ಮ ಹೃದಯದ್ವಾರಗಳಿಗೆ ಸೇರಿಸಿಕೊಳ್ಳಬೇಕು. ಇದು ಧ್ಯಾನಯೋಗಿಯ ಮೊಟ್ಟಮೊದಲನೆಯ ಸಾಧನವು.

ಹೃದಯಕ್ಷೇತ್ರದಲ್ಲಿ ಹೊಡೆಯಬೇಕಾಗಿರುವ ಕಾಲುವೆಗಳು ಯಾವವು ಎಂದರೆ, ಸರ್ವಭೂತಪ್ರೇಮವು. ಭಗವಂತನ ಪ್ರೇಮಕ್ಕೆ ನಮ್ಮ ಹೃದಯವನ್ನು ಸಂಬಂಧಿಸಿಕೊಳ್ಳುವದಕ್ಕೆ ಇದು ಅತ್ಯವಶ್ಯವಾದ ಸಾಧನವು. ಭಗವಂತನು ಸರ್ವವ್ಯಾಪಕನಾದ್ದರಿಂದ ಆತನ ಪ್ರೇಮಾಮೃತವು ಎಲ್ಲಾ ಪ್ರಾಣಿಗಳ ಕಡೆಗೂ ಹರಿದುಬಂದಿರುತ್ತದೆ. ಆತನ ಪ್ರೇಮಕ್ಕೆ ನಮ್ಮ ಹೃದಯವು ಸಂಬಂಧಿಸಬೇಕಾದರೆ ನಮ್ಮ ಪ್ರೇಮದ ಕಾಲುವೆಗಳನ್ನು ನಮ್ಮ ಸುತ್ತುವಳೆಯದಲ್ಲಿರುವ ಎಲ್ಲಾ ಜೀವರ ಕಡೆಗೆ ಹಾಯಿಸಬೇಕು. ಭಗವಂತನನ್ನು ಪ್ರೀತಿಸುವದೆಂದರೂ ಒಂದೇ, ಆತನ ಮಕ್ಕಳಾದ ಜೀವರುಗಳನ್ನು ಪ್ರೀತಿಸುವದೆಂದರೂ

ಒಂದೇ. ಎಲ್ಲಾ ಪ್ರಾಣಿಗಳ ಸುಖದುಃಖಗಳೂ ತನ್ನ ಸುಖದುಃಖಗಳಂತೆಯೇ; ಯಾವ ಪ್ರಾಣಿಗೂ ದುಃಖವು ಬೇಡ, ಸುಖವು ಎಲ್ಲರಿಗೂ ಬೇಕು ಎಂಬುದನ್ನರಿತು ಸರ್ವಪ್ರೇಮವನ್ನು ಮಾಡುವ ಯತ್ನಗಳೇ ಭಗವಂತನ ಧ್ಯಾನಕ್ಕೆ ಬೇಕಾದ ಕಾಲುವೆಗಳು. ಎಲ್ಲರನ್ನೂ ಪ್ರೀತಿಸುವದಕ್ಕೆ ಮೊದಲು ಮಾಡದೆ ಭಗವಂತನನ್ನು ಪ್ರೀತಿಸುವದೆಂಬುದೇ ಇಲ್ಲ. ಭಗವಂತನ ಸೇವೆಯೆಂದರೆ ಸರ್ವರಿಗೂ ಸಂತೋಷವನ್ನುಂಟುಮಾಡುವ ಪ್ರಯತ್ನವೇ ಎಂಬುದನ್ನು ಯೋಗಿಯು ಗಟ್ಟಿಯಾಗಿ ನಂಬಬೇಕು.

ಪರಮೇಶ್ವರನ ಪ್ರೇಮಪ್ರವಾಹಕ್ಕೆ ಅಡ್ಡಲಾಗಿರುವಂತೆ ಜನರು ಹಾಕಿಕೊಂಡಿರುವ ಕಟ್ಟೆಗಳನ್ನು ಕುರಿತು ಸ್ವಲ್ಪ ವಿವರವಾಗಿ ತಿಳಿದುಕೊಳ್ಳುವದರಿಂದ ಪ್ರಯೋಜನವುಂಟು. ಶರೀರವನ್ನು ಸ್ನಾನಾದಿಗಳಿಂದ ಸ್ವಚ್ಛವಾಗಿಟ್ಟುಕೊಳ್ಳದೆ ಶುಭ್ರವಾದಬಟ್ಟೆಗಳನ್ನು ಧರಿಸದೆ, ಮನೆಯನ್ನೂ ಅದರ ಬಳಸನ್ನೂ ಶುಚಿಯಾಗಿಟ್ಟುಕೊಳ್ಳದೆ ಇರುವದರಿಂದ ರಾಜಸತಾಮಸ ವ್ಯವಹಾರಗಳಿಗೇ ಮನಸ್ಸು ಒಗ್ಗಿಕೊಳ್ಳುವದು. ಮದ್ಯ, ಮಾಂಸ–ಮುಂತಾದ ದುರಾಹಾರ ಗಳನ್ನೂ ಕೊಳಕಾದ ಹಳಸಿದ ಅಥವಾ ಕೊಳಕರು ಮಾಡಿದ ನೀರಸಪದಾರ್ಥಗಳನ್ನೂ ತಿನ್ನುವದರಿಂದ ದೇಹವು ಅಪವಿತ್ರವಾಗುತ್ತಾ ಹೋಗುವದು; ಅದರಿಂದ ಪವಿತ್ರವಾದ ಭಗವಂತನ ಪ್ರೇಮವು ಅಂಥವರ ಕಡೆಗೆ ಹರಿಯುವದಕ್ಕೆ ಅಡ್ಡಿಯಾಗುವದು. ಆಹಾರಗಳನ್ನೂ ವಿಹಾರಗಳನ್ನೂ ಅಳತೆಗೆಟ್ಟು ಅಭ್ಯಾಸಮಾಡಿರುವದರಿಂದ ನಿದ್ರೆ, ಎಚ್ಚರ, ವ್ಯವಹಾರ–ಇವುಗಳೆಲ್ಲವೂ ಹದಗೆಟ್ಟು ಭಗವಂತನ ಪ್ರೇಮಪ್ರವಾಹಕ್ಕೆ ಅಡ್ಡಲಾಗುವವು. ಭಂಡಮಾತುಗಳನ್ನು ಆಡುವದು, ಕೇಳುವದು, ಮನಸ್ಸನ್ನು ಕಲಕುವ ಮಾತುಗಳನ್ನು ಕೇಳುವದು, ಅಂಥ ಭಾಷೆಯು ತುಂಬಿರುವ ಗ್ರಂಥಗಳನ್ನು ಓದುವದು–ಇವುಗಳು ವಾಕ್ಕನ್ನು ಅಪವಿತ್ರಗೊಳಿಸಿ ಭಗವಂತನ ಪ್ರೇಮಕ್ಕೆ ದೊಡ್ಡ ಅಡ್ಡಿಯಾಗುವವು. ಹಿಂಸೆ, ವ್ಯಭಿಚಾರ, ಮೋಸ, ಸುಳ್ಳು, ಕಠಿನೋಕ್ತಿ–ಮುಂತಾದವುಗಳನ್ನು ಆಚರಿಸುವದೂ ಆ ಬಗೆಯ ಭಾವನೆಗಳನ್ನು ಮನಸ್ಸಿನಲ್ಲಿ ಹೊರಳಾಡಿಸುತ್ತಿರುವದೂ ಮನಸ್ಸನ್ನೂ ಹೊಲಗೆಡಸಿ ಭಗವಂತನ ಪ್ರೇಮಕ್ಕೆ ಭಾರಿಯ ಅಡಚಣೆಗಳಾಗುವವು.

ಈ ಅಡ್ಡಿಗಳನ್ನು ಸಾಧಕನಾದವನು ಎಲ್ಲಕ್ಕೂ ಮೊದಲು ದೂರವಿರಿಸಬೇಕು. ಇವು ಧ್ಯಾನಯೋಗಕ್ಕೆ ವೈರಿಗಳಾಗಿರುತ್ತವೆ ಎಂದು ಕಡುಖಂಡಿತವಾಗಿ ತಿಳಿದುಕೊಳ್ಳಬೇಕು. ಆಲಸ್ಯ, ನಿದ್ರೆ, ದುರಾಚಾರ, ದುರ್ಭಾಷಣ, ದುರ್ಭಾವನೆ–ಇವಕ್ಕೆ ಒಂದಿಷ್ಟೂ ಎಡೆಗೊಡದೆ ಇರಬೇಕು. ಅತ್ಯಾಶೆ, ಸಿಡುಮೋರೆ, ಜಿಪುಣತನ, ಅಜ್ಞಾನ, ಮೈಮರೆತು ನಡೆಯುವದು, ಹೊಟ್ಟೆಕಿಚ್ಚು–ಮುಂತಾದ ದುರ್ಗುಣಗಳನ್ನು ದೂರಮಾಡಬೇಕು. ಹಾಳುಹರಟೆ, ಚಾಡಿ, ಬಿರುನುಡಿ, ಸುಳ್ಳು, ನಿಂದೆ–ಮುಂತಾದ ವಾಗ್ದೋಷಗಳನ್ನು ಹೊಡೆದೋಡಿಸಬೇಕು. ಮೋಸ, ಮಾಯೆ, ಕಪಟ, ಮತ್ತೊಬ್ಬರನ್ನು ಕೆಡಿಸುವ ಹಂಚಿಕೆ, ಭೋಗಗಳನ್ನು ಹೇಗಾದರೂ ಯಾವ

ಅನೀತಿಯ ಮಾರ್ಗದಿಂದಲಾದರೂ ಸಂಪಾದಿಸಿಕೊಳ್ಳುವದು-ಇಂಥ ಭಾವನೆಗಳಿಗೆ ಮನದಲ್ಲಿ ಒಂದಿಷ್ಟೂ ಎಡೆಗೊಡದಿರಬೇಕು.

ಈ ಅಡ್ಡಿಗಳನ್ನು ಹೇಗೆ ನಿವಾರಣೆಮಾಡಿಕೊಳ್ಳಬೇಕೆಂಬುದನ್ನು ತಿಳಿದುಕೊಳ್ಳುವ ಕುತೂಹಲವಿರುವವರಿಗಾಗಿ ಒಂದು ಮುಖ್ಯವಾದ ಸೂಚನೆಯನ್ನು ಕೊಡಬೇಕಾಗಿದೆ. ಸಾತ್ತ್ವಿಕ, ರಾಜಸ, ತಾಮಸ-ಎಂದು ನಮ್ಮ ಆಹಾರ ವಿಹಾರಾದಿಗಳು ಮೂರು ಬಗೆಯಾಗಿರುವವು. ಇವುಗಳಲ್ಲಿ ತಾಮಸವಾಗಿರುವ ನಡೆವಳಿಕೆಗಳನ್ನು ರಾಜಸದಿಂದಲೂ ರಾಜಸವರ್ತನೆಗಳನ್ನು ಸಾತ್ತ್ವಿಕದಿಂದಲೂ ಗೆದ್ದುಕೊಳ್ಳಬೇಕು. ಉದಾಹರಣೆಗೆ ಆಲಸ್ಯವನ್ನೂ ನಿದ್ರೆಯನ್ನೂ ಚಟುವಟಿಕೆಯ ಕಾರ್ಯಗಳಿಂದ ಗೆದ್ದುಕೊಂಡು, ಆಮೇಲೆ ಸಾತ್ತ್ವಿಕವಾದ ಆಚರಣೆಗಳನ್ನು ಕೈಕೊಳ್ಳಬೇಕು. ಹರಟೆಹೊಡೆಯುವದು, ಚಾಡಿಹೇಳುವದು, ಸುಳ್ಳುಹೇಳುವದು-ಮುಂತಾದ ದುರಭ್ಯಾಸಗಳನ್ನು ಉತ್ತಮವಾದ ಗ್ರಂಥಗಳನ್ನು ಓದುವದರಿಂದಲೂ ಸತ್ಯವೂ ಪ್ರಿಯವೂ ಆದ ಮಿತಭಾಷಣವನ್ನು ಅಭ್ಯಾಸ ಮಾಡುವದರಿಂದಲೂ ತಪ್ಪಿಸಿಕೊಳ್ಳಬೇಕು. ದ್ವೇಷ, ಕಠಿನಚಿತ್ತತೆ, ತಿರಸ್ಕಾರ, ಅಸೂಯೆ-ಮುಂತಾದ ಮನಸ್ಸಿನ ದುರ್ಭಾವನೆಗಳನ್ನು ಮೈತ್ರಿ, ಕರುಣೆ, ಮತ್ತೊಬ್ಬರ ಪಾಪದಲ್ಲಿ ಔದಾಸೀನ್ಯ, ಮತ್ತೊಬ್ಬರ ಏಳಿಗೆಯಲ್ಲಿ ಸಂತೋಷಪಡುವದು-ಇಂಥವುಗಳಿಂದ ಬಿಡಿಸಿಕೊಳ್ಳಬೇಕು.

ಮನೋವಾಕ್ಕಾಯಗಳೆಂಬ ಮೂರು ಕರಣಗಳಲ್ಲಿ ಮನಸ್ಸೇ ಮೂಲವು. ಯಾರ ವಿಚಾರವು ಮನಸ್ಸನ್ನು ಒಳಹೊಕ್ಕು ಪರೀಕ್ಷಿಸುವಷ್ಟು ಬೆಳೆದುಕೊಂಡಿಲ್ಲವೋ, ಅವರು ವಾಕ್ಕಾಯಗಳ ನಡತೆಯನ್ನು ಸರಿಪಡಿಸಿಕೊಳ್ಳುವ ಯತ್ನದಿಂದಲೇ ತೃಪ್ತರಾಗಿರಬೇಕಾಗುತ್ತದೆ. ಆದರೆ ಯಾರು ತಮ್ಮ ಒಳಹೊಕ್ಕು ಮನಸ್ಸನ್ನೂ ನಿರುಕಿಸಿ ನೋಡಿಕೊಳ್ಳಬಲ್ಲರೋ ಅವರು ಮನಸ್ಸಿಗಿರುವ ಹೆಚ್ಚಿನ ಸ್ಥಾನವನ್ನು ಕಂಡುಕೊಳ್ಳಬಹುದು. ಮನುಷ್ಯನ ಮನಸ್ಸಿನಲ್ಲಿ ಎಂಥ ಭಾವನೆಗಳು ಬರುತ್ತಿರುವವೋ ಅಂಥ ನುಡಿಗಳೇ ಅವನ ನಾಲಗೆಯ ಮೇಲೆ ಕುಣಿಯುತ್ತಿರುವವು. ಅಂಥ ಕೆಲಸಗಳನ್ನೇ ಅವನ ದೇಹವು ಮಾಡುತ್ತಿರುವದು. ಆದ್ದರಿಂದ ತಮ್ಮ ನಡೆನುಡಿಗಳನ್ನು ತಿದ್ದಿಕೊಳ್ಳಬೇಕೆನ್ನುವವರು ಎಲ್ಲಕ್ಕೂ ಮೊದಲು ತಮ್ಮ ಮನಸ್ಸಿನ ಸಂಸ್ಕಾರವನ್ನು ಸರಿಪಡಿಸಿಕೊಳ್ಳಬೇಕು. ಯಾರು ಮನಸ್ಸಿನಲ್ಲಿ ಸ್ವಾರ್ಥಪರರಾಗಿರುವರೋ ಅವರಿಗೆ ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯ ಮುಂತಾದ ಕೆಟ್ಟಭಾವನೆಗಳ ಸಂಸ್ಕಾರವು ತಪ್ಪುವದಿಲ್ಲ. ಆದರೆ ಯಾರು ಮನಸ್ಸಿನಲ್ಲಿ ಸರ್ವರ ಆತ್ಮನಾದ ಭಗವಂತನನ್ನು ಕುಳ್ಳಿರಿಸಬೇಕೆಂಬ ತವಕವುಳ್ಳವರಾಗಿರುವರೋ ಅವರಿಗೆ ವೈರಾಗ್ಯ, ಶಾಂತಿ, ತ್ಯಾಗ, ವಿವೇಕ, ಅಮಾನಿತ್ವ, ಪರಗುಣಾಭಿನಂದನ-ಇವುಗಳು ಒಂದರ ಹಿಂದೊಂದು ತಾವೇ ಬಂದು ವಶವಾಗುವವು.

ಆದ್ದರಿಂದ ಧ್ಯಾನಯೋಗಿಯು ಸಾಧನಕ್ಕೆ ಬಹಿರಂಗವಾದ ಸಾತ್ತ್ವಿಕವಾದ ಆಚಾರಗಳನ್ನು ಕೈಕೊಳ್ಳುವದು ಅತ್ಯವಶ್ಯವು. ಅದಕ್ಕಿಂತಲೂ ಅಂತರಂಗವಾದ ಭಗವಂತನ ಪ್ರೇಮದ ಮೂಲವಾದ ಸರ್ವಭೂತಪ್ರೇಮವನ್ನು ಅಳವಡಿಸಿಕೊಳ್ಳುವದು ಅತ್ಯಂತವಾಗಿ ಅವಶ್ಯವಾಗಿರುತ್ತದೆ. ಆಚಾರವು ಮೊದಲನೆಯ ಧರ್ಮವು. ಧರ್ಮಕ್ಕೆ ಅಚ್ಯುತನೇ ಪ್ರಭು–ಎಂದು ವ್ಯಾಸರು ಅಪ್ಪಣೆಕೊಡಿಸಿರುತ್ತಾರೆ. ನಮ್ಮ ಆಚಾರಗಳನ್ನು ನಾವು ತಿದ್ದಿಕೊಳ್ಳಬೇಕು, ತಿದ್ದಿಕೊಳ್ಳುವದಕ್ಕೆ ಪ್ರಯತ್ನವನ್ನು ಮಾಡುವ ಸಂಕಲ್ಪವನ್ನು ಮೊದಲು ಮಾಡಬೇಕು. ಯಾವನ ಮನೋವಾಕ್ಕಾಯಗಳು ದುರಾಚಾರಕ್ಕೆ ದಾಸರಾಗಿರುವವೋ ಅವನಿಗೆ ಧ್ಯಾನಯೋಗವು ಎಂದಿಗೂ ದಕ್ಕುವದಿಲ್ಲ. ಆದರೆ ಸರಿಯಾದ ಆಚಾರವನ್ನು ಕೈಕೊಳ್ಳುವದಕ್ಕೆ ಮಾಡುವ ಪ್ರಯತ್ನದಲ್ಲಿ ಭಗವಂತನ ಸಹಾಯವನ್ನು ತಪ್ಪದೆ ಕೋರಬೇಕು. "ದೇವ, ನಾನು ದುರಾಚಾರವನ್ನು ಬಿಟ್ಟು ಸದಾಚಾರವನ್ನು ಹಿಡಿಯುವಂತೆ ಅನುಗ್ರಹಿಸು!" ಎಂದು ಅಂಗಲಾಚಿ ಬೇಡಿಕೊಳ್ಳಬೇಕು.

# 29. ಪರಮಾತ್ಮ ಹಾದಿ

* "ಮಾಸಗಳಲ್ಲಿ ಮಾರ್ಗಶೀರ್ಷವು ನಾನು" ಎಂದು ಭಗವಂತನು ಭಗವದ್ಗೀತೆಯಲ್ಲಿ ಅಪ್ಪಣೆಕೊಡಿಸಿರುತ್ತಾನೆ. ಮಿಕ್ಕ ತಿಂಗಳುಗಳಿಗಿಂತ ಮಾರ್ಗಶೀರ್ಷದಲ್ಲಿರುವ ಹೆಚ್ಚುಗಾರಿಕೆ ಏನೆಂಬ ಬಗ್ಗೆ ವಿದ್ವಾಂಸರು ಬಹಳ ವಾದವಿವಾದಗಳನ್ನು ತೆಗೆದಿರುತ್ತಾರೆ. ಅವರ ನಿರ್ಣಯವು ಏನಾದರೂ ಆಗಲಿ; ಮಾರ್ಗಶೀರ್ಷದಲ್ಲಿ ಭಗವಂತನು ಉಪದೇಶಿಸಿದ ದಿವ್ಯಗೀತೆಯ ಜಯಂತಿಯು ಮಾರ್ಗಶೀರ್ಷದಲ್ಲಿ ಭರತಖಂಡದಲ್ಲಿ ಈಗ ಎಲ್ಲೆಲ್ಲಿಯೂ ಆಚರಣೆಗೆ ಬರುತ್ತಲಿದೆ. ಈ ದೃಷ್ಟಿಯಿಂದ ನೋಡಿದರೆ ಭಗವಂತನು ತಾನು ಮಾಡಿದ ಉಪದೇಶವು ಮಾರ್ಗಶೀರ್ಷದಲ್ಲಿ ಆಯಿತೆಂಬುದನ್ನು ಜನರು ಮರೆಯದೆ ಇರಲೆಂದೇ ಆ ಮಾಸವನ್ನು ತನ್ನ ವಿಭೂತಿ ಎಂದು ಕರೆದಿರಬಹುದೇನೊ, ಎನಿಸುತ್ತದೆ. ಭಗವದ್ಗೀತೆಯು ಭಗವಂತನ ಹೃದಯವು. ಆತನ ಮುಖಪದ್ಮದಿಂದ ಹೊರಟುಬಂದಿರುವ ಈ ಗೀತೆಯಲ್ಲಿ ಉಪನಿಷತ್ತುಗಳ ಸಾರವೆಲ್ಲ ಅಡಕವಾಗಿರುವದು. ಈ ಗೀತೆಯ ಏಳುನೂರು ಶ್ಲೋಕಗಳಲ್ಲಿ ಒಂದರ ಅರ್ಥವನ್ನಾದರೂ ಬಿಡಿಸಿ ಮನನಮಾಡಿದರೆ ಗೀತಾ ಜಯಂತಿಯನ್ನು ಸಾಂಗವಾಗಿ ಆಚರಿಸಿದಂತೆ ಆಗುವದು; ಆ ಭಗವಂತನೂ ಅದರಿಂದ ಪ್ರಸನ್ನನಾಗುವದರಲ್ಲಿ ಸಂಶಯವಿಲ್ಲ.

---

* ಸಂಪುಟ 18, ಸಂಚಿಕೆ 5, ಜನವರಿ 1949, ಪುಟ 98–104

ಈ ಕಾರಣಗಳಿಂದ ಈ ತಿಂಗಳ ಸಂದೇಶಕ್ಕೆ ಭಗವದ್ಗೀತೆಯಿಂದ ಒಂದು ಶ್ಲೋಕಾರ್ಥವನ್ನು ಆರಿಸಿಕೊಳ್ಳೋಣ:

**"ಮಮ ವರ್ತ್ಮಾನುವರ್ತನ್ತೇ ಮನುಷ್ಯಾಃ ಪಾರ್ಥ ಸರ್ವಶಃ"**

ಅರ್ಜುನನೆ, ಮನುಷ್ಯರು ಸರ್ವಪ್ರಕಾರದಿಂದಲೂ ನನ್ನ ದಾರಿಯನ್ನು ಅನುಸರಿಸುವರು– ಎಂದು ಈ ವಾಕ್ಯದ ಅರ್ಥ. ಇಲ್ಲಿ ಭಗವಂತನ ದಾರಿಯೆಂದರೇನು? ಮನುಷ್ಯರು ಆತನ ದಾರಿಯಲ್ಲಿಯೇ ನಡೆಯುತ್ತಾರೆಂದರೇನರ್ಥ? ಆತನ ದಾರಿಯಲ್ಲಿ ನಡೆಯುವವರಿಗೆ ಯಾವ ಪ್ರಯೋಜನವುಂಟು? ಈ ಪ್ರಶ್ನೆಗಳು ಎದ್ದುಕೊಳ್ಳುತ್ತವೆ. ಇವುಗಳಿಗೆ ಉತ್ತರವನ್ನು ಕೊಡುವದಕ್ಕೆ ಈ ಲೇಖನದಲ್ಲಿ ಪ್ರಯತ್ನಿಸಲಾಗುವದು.

ಭಗವದ್ಗೀತೆಯಂಥ ಋಷಿಪ್ರೋಕ್ತಗ್ರಂಥಗಳಲ್ಲಿರುವ ವಾಕ್ಯಗಳು ನೋಡುವದಕ್ಕೆ ಸಾಮಾನ್ಯವಾಕ್ಯಗಳಂತೆ ಕಂಡರೂ ಅವುಗಳಲ್ಲಿ ಪುಷ್ಕಲವಾದ ಅರ್ಥವಿರುತ್ತದೆ. ಈ ವಾಕ್ಯಗಳಿಗೆ ಸಾಧಕರ ಮನಃಸ್ಥಿತಿಗೆ ತಕ್ಕಂತೆ ಅರ್ಥವು ಹಿಗ್ಗುತ್ತಾ ಹೋಗುತ್ತದೆ. ಆದ್ದರಿಂದ ನಾವು ಈ ವಾಕ್ಯವನ್ನು ಮನಮುಟ್ಟಿ ಮನನಮಾಡಬೇಕು; ಆಗ ಇದರ ಅರ್ಥವು ಕ್ರಮಕ್ರಮವಾಗಿ ನಮ್ಮ ಮನಸ್ಸಿಗೆ ಹೊಳೆಯುವದು.

ಮೊಟ್ಟಮೊದಲನೆಯದಾಗಿ "ಮಮ ವರ್ತ್ಮ" ಎಂದರೇನು? ಭಗವಂತನ ದಾರಿಯು ಬೇರೆಯಾಗಿರುವದೆ? ಆತನು ಎಲ್ಲಿಗೆ ಹೋಗಬೇಕಾಗಿರುತ್ತದೆ?–ಎಂಬ ಶಂಕೆಯು ನಮಗೆ ತೋರಬಹುದು. ಇದಕ್ಕೆ ಉತ್ತರವನ್ನು ಕಂಡುಹಿಡಿಯುವ ಮುಂಚೆ ದಾರಿನಡೆಯುವ ಜನರ, ಸಾಧಾರಣಸ್ಥಿತಿಯನ್ನು ಮೊದಲು ಚಿಂತಿಸೋಣ. ಹಳ್ಳಿಗಳಲ್ಲಿ ಕಾಲುದಾರಿಗಳಿದ್ದರೆ ಅಲ್ಲಲ್ಲಿಯೇ ಸೀಳುದಾರಿಗಳು ಕಾಣಿಸುತ್ತಿರುವವು. ಸುತ್ತಲೂ ನೋಡಿದರೆ ಯಾರೂ ಕಾಣಿಸದೆ ಇರುವಾಗ ಅಂಥ ಸಂದರ್ಭಗಳಲ್ಲಿ ಯಾವ ದಾರಿಯಲ್ಲಿ ಹೋಗೋಣ? ಯಾವ ಹಾದಿಯನ್ನು ಹಿಡಿದರೆ ಒಳ್ಳೆಯದಾದೀತು? ನಾನು ತಲುಪಬೇಕಾದ ಸ್ಥಲಕ್ಕೆ ಸಲೀಸಾಗಿ ತೆಗೆದುಕೊಂಡುಹೋಗಿ ಮುಟ್ಟಿಸುವ ಹಾದಿ ಯಾವದಿದ್ದೀತು? ಇಷ್ಟೊಂದು ದಾರಿಗಳಿರುವವಲ್ಲ, ಏನು ಮಾಡಲಿ!– ಎಂಬ ಆಲೋಚನೆಗಳು ಸಹಜವಾಗಿ ಮನಸ್ಸಿನಲ್ಲಿ ಮೊಳೆತುಕೊಳ್ಳುವವು. ಜೀವನದ ಹಾದಿಯಲ್ಲಿಯೂ ಹಾಗೆಯೇ ನಮಗೆಲ್ಲರಿಗೂ ಒಂದಲ್ಲ ಒಂದು ದಿನ "ಏನು ಮಾಡಲಿ? ಯಾವ ಹಾದಿಯನ್ನು ತಿಳಿದರೆ ಒಳಿತಾದೀತು?" ಎಂಬ ಪ್ರಶ್ನೆಯು ಮುಂದೆ ಕಾಣಿಸಿಕೊಳ್ಳುವದು. ಕತ್ತಲಲ್ಲಿ ನಡೆಯುತ್ತಿರುವವರಿಗೆ ದಾರಿಯಲ್ಲಿ ಒಂದು ಸಣ್ಣ ಮಿಣುಕುದೀಪವು ಕಂಡರೆ ಎಷ್ಟೋ ಉತ್ಸಾಹವು ಬರುವದು; ದಾರಿಯಲ್ಲಿ ಯಾವನಾದರೂ ಮನುಷ್ಯನು ಕಣ್ಣಿಗೆ ಬಿದ್ದರೆ ಸಾಕು, "ಇಂಥ ಊರಿಗೆ ಹೋಗುವ ದಾರಿ ಇದೇ ಏನಯ್ಯ?" ಎಂದು ಉತ್ಸುಕತೆಯ ನಿರೀಕ್ಷಣೆಯಿಂದ, ಕಾತರರಾಗಿ ಕೇಳುವೆವು. ಆತನು ದಾರಿಯನ್ನು ತೋರಿಸಿಬಿಟ್ಟರೆ ಸಾಕು, ನಮಗೆ ಎಷ್ಟು ಸಂತೋಷ! ಇನ್ನು "ನಾನೂ ಅದೇ ಹಾದಿಯಲ್ಲಿ ಹೋಗುತ್ತಿದ್ದೇನೆ, ಅದೇ

ಊರಿಗೆ ಹೋಗುತ್ತಿದ್ದೇನೆ, ಬನ್ನಿ!" ಎನ್ನುವ ಮಹಾರಾಯನು ಸಿಕ್ಕಿದರಂತೂ ನಮ್ಮ ಹಿಗ್ಗಿಗೆ ಪಾರವೇ ಇರುವದಿಲ್ಲ. ಅಲ್ಲವೆ?

ಇದರಂತೆ ಅರ್ಜುನನಿಗೆ ಒಂದು ಪ್ರಶ್ನೆಯು ಬಾಧಿಸುತ್ತಿತ್ತು. "ಕಾರ್ಪಣ್ಯದೋಷವು ನನ್ನ ಮನಃಸ್ವಭಾವವನ್ನು ಕುಗ್ಗಿಸಿಬಿಟ್ಟಿರುತ್ತದೆ. ಅಲ್ಪಮತಿಯಾದ ನನಗೆ ಯಾವದನ್ನು ಮಾಡಬೇಕೆಂಬುದೇ ತೋಚಲೊಲ್ಲದು. ಇಗೊ, ನಿನ್ನ ಶಿಷ್ಯನಾಗಿರುವೆನು, ನಿನ್ನನ್ನು ಶರಣುಹೊಕ್ಕಿರುವೆನು. ನಾನು ಈಗ ಯಾವ ಹಾದಿಯಲ್ಲಿ ನಡೆಯಬೇಕೋ ನನಗೆ ತಿಳಿಸು" ಎಂದು ಶ್ರೀಕೃಷ್ಣಭಗವಂತನನ್ನು ಅಂಗಲಾಚಿ ಬೇಡಿಕೊಂಡನು.

ಭಗವಂತನು ದಯಾಮಯನು. ಕೂಡಲೆ ಅವನಿಗೆ ಜ್ಞಾನಯೋಗ, ಕರ್ಮಯೋಗ–ಎಂಬ ಎರಡು ಮಾರ್ಗಗಳನ್ನು ಉಪದೇಶಿಸಿದನು. ಊರಿಗೆ ಹೋಗುವ ಎರಡು ದಾರಿಗಳನ್ನು ನಮಗೆ ಯಾವನಾದರೊಬ್ಬನು ತೋರಿಸಿದರೆ ನಾವೇನು ಮಾಡುವೆವು? "ಈ ಎರಡರಲ್ಲಿ ಯಾವದು ಉತ್ತಮ? ನನ್ನಂಥ ಹೊಸಬನಿಗೆ ಯಾವದು ಸುಗಮವಾದ ದಾರಿ?'–ಎಂದು ಕೇಳುತ್ತೇವಲ್ಲವೆ? ಅರ್ಜುನನೂ ಹಾಗೆಯೇ ಕೇಳಿದನು. ಭಗವಂತನು ಅದಕ್ಕೆ ಉತ್ತರವಾಗಿ "ಇವೆರಡೂ ಸರಿಯಾದ ದಾರಿಗಳೇ ಆದರೂ ನಿನಗೆ ಕರ್ಮಯೋಗವೇ ತಕ್ಕದ್ದು" ಎಂದು ಸಕಾರಣವಾಗಿ ಉತ್ತರವನ್ನು ಕೊಟ್ಟನು. ಭಗವಂತನು ಅರ್ಜುನನಿಗೆ ಹೇಳಿದ ಉತ್ತರದಲ್ಲಿ ಯಾವ ಸಂದೇಹವೂ ಉಂಟಾಗುವದಕ್ಕೆ ಅವಕಾಶವೇ ಇರಲಿಲ್ಲ. ಕೆಲವರು ಮಹನೀಯರಿಗೆ ಜ್ಞಾನಮಾರ್ಗವು ತಕ್ಕದ್ದಾಗಿರಬಹುದು; ಆದರೆ "ನೀನು ಅಸಕ್ತನಾಗಿ ಯಾವಾಗಲೂ ಮಾಡಬೇಕಾದ ಕರ್ಮವನ್ನೇ ಮಾಡುತ್ತಿರು. ಹಾಗೆ ಮಾಡುವ ಪುರುಷನಿಗೆ ಪರಪ್ರಾಪ್ತಿಯೇ ಆಗುತ್ತದೆ" ಎಂದು ಸ್ಪಷ್ಟವಾಗಿ ಆಡಿತೋರಿಸಿದನು. ಭಗವಂತನು ಈಗಲೂ ನಮಗೆ ದಾರಿಯನ್ನು ತೋರಿಸುತ್ತಿದ್ದಾನೆ. ಆದರೆ "ಯಾವ ದಾರಿಯಲ್ಲಿ ನಡೆಯಲಿ?" ಎಂದು ಅರ್ಜುನನಂತೆ ನಾವೂ ಮನಃಪೂರ್ವಕವಾಗಿ ಕೇಳಿಕೊಳ್ಳಬೇಕು, ಅಷ್ಟೆ.

ಶ್ರೀಕೃಷ್ಣಭಗವಂತನು ಹಾದಿಹೋಕರಲ್ಲಿ ಕೆಲವರು "ಇಗೊ, ಇದೇ ಹಾದಿ, ಈ ಹಾದಿಯಲ್ಲಿ ಹೋದರೆ ನಿಮಗೆ ಊರುಸಿಕ್ಕುವದು" ಎಂದು ತೋರಿಸಿ ತಾವು ಬೇರೊಂದು ದಾರಿಯಲ್ಲಿ ಹೋಗುವಂತೆ ಅರ್ಜುನನಿಗೆ ಸುಮ್ಮನೆ ಕರ್ಮಮಾರ್ಗವನ್ನು ಉಪದೇಶಿಸಲಿಲ್ಲ. "ತಿಳಿದವರೂ ಜನರ ಉಪಕಾರಕ್ಕಾಗಿ ಈ ಮಾರ್ಗದಲ್ಲಿಯೇ ನಡೆಯುತ್ತಿರುವರು. ಕೃತಕೃತ್ಯನೂ ಆಪ್ತಕಾಮನೂ ಆಗಿರುವ ನಾನೂ ಇದೇ ಮಾರ್ಗದಲ್ಲಿ ನಡೆಯುತ್ತಿರುವೆನು. ಆದ್ದರಿಂದ ನೀನೂ ಇದೇ ಹಾದಿಯಲ್ಲಿ ನಡೆಯುವವನಾಗು" ಎಂದು ಕರ್ಮಮಾರ್ಗವು ತನ್ನ ಮಾರ್ಗವೇ ಎಂಬುದನ್ನು ತಿಳಿಸಿಕೊಟ್ಟನು. "ಮಮ ವರ್ತ್ಮಾನುವರ್ತನ್ತೇ ಮನುಷ್ಯಾಃ ಪಾರ್ಥ ಸರ್ವಶಃ" (3–23) "ಪಾರ್ಥನೆ, ಮನುಷ್ಯರು ಸರ್ವಪ್ರಕಾರದಿಂದಲೂ ನನ್ನ ಹಾದಿಯಲ್ಲಿಯೇ ನಡೆಯುವರು; ಆದ್ದರಿಂದ ನಾನು ಕೃತಕೃತ್ಯನಾದರೂ

ಕರ್ಮಮಾರ್ಗದಲ್ಲಿಯೇ ನಡೆಯುತ್ತಿರುವೆನು" ಎಂದು ಉಪದೇಶಿಸಿದನು. ಭಗವಂತನು ಸುಮ್ಮನೆ ಉಪದೇಶಿಸುವ ಮಾತಿನವನಲ್ಲನಲ್ಲ. ಆತನು ನಮಗೆ ದಾರಿಯನ್ನು ತೋರಿಸುವದಕ್ಕೆ ತಾನೇ ಆ ಹಾದಿಯಲ್ಲಿ ನಡೆದುತೋರಿಸುತ್ತಾನೆ. ರಾಮಕೃಷ್ಣಾದ್ಯವತಾರ ಗಳಲ್ಲಿ ಆತನು ನಡೆದಿರುವ ಹಾದಿಯು ರಾಮಾಯಣಭಾರತಾದಿಗಳಲ್ಲಿ ವರ್ಣಿತವಾಗಿರುತ್ತದೆ. ಅದನ್ನು ಅರಿತು ಆ ಮಾರ್ಗವನ್ನು ನಾವೂ ಅನುಸರಿಸಬಹುದು.

ಆ ಭಗವಂತನು ಇಂದಿಗೂ ನಮಗೆಲ್ಲರಿಗೂ ತನ್ನ ಭಕ್ತರ ನಡೆನುಡಿಗಳ ಮೂಲಕವೂ ನಮಗೆ ತನ್ನ ಮಾರ್ಗವನ್ನು ಉಪದೇಶಿಸುತ್ತಿರುವನು. "ಶಿಷ್ಯಸ್ತೇಽಹಮ್" ನಿನ್ನ ಶಿಷ್ಯನಾಗಿರುವೆನು, ನೀನು ಹೇಳಿದಂತೆ ನಡೆಯುವೆನು–ಎಂದು ಆತನನ್ನೇ ಮನಃಪೂರ್ವಕವಾಗಿ ಶರಣುಹೊಕ್ಕವರಿಗೆ "ಇಗೊ, ಇದೇ ನನ್ನ ಮಾರ್ಗ!" ಎಂದು ಉಪದೇಶಿಸುತ್ತಲೇ ಇರುವನು. ನಾವು ನಮ್ಮ ಮಾರ್ಗಗಳನ್ನು ಬಿಟ್ಟು ಆತನ ಮಾರ್ಗವನ್ನು ಹಿಡಿಯುವ ಪ್ರಯತ್ನವನ್ನು ಮಾತ್ರ ಮಾಡಬೇಕು.

ನಮ್ಮ ಮಾರ್ಗಗಳು ಯಾವವು? ಊರಿಗೆ ತಲುಪುವದಕ್ಕೆ ಸರಿಯಾದ ಉತ್ತಮವಾದ ಹಾದಿಯು ಒಂದಿದ್ದರೆ, ನಮ್ಮನ್ನು ಕಾಡಿನ ಕಡೆಗೆ ತಿರುಗಿಸುವ, ಕೊರಕಲಿಗೆ ತೆಗೆದುಕೊಂಡು ಹೋಗಿ ಬಿಡುವ, ಕವಲುಹಾದಿಗಳು ಹಲವು ಇರುತ್ತವೆ. ಅದರಲ್ಲಿಯೂ ಕಗ್ಗತ್ತಲೆಯಲ್ಲಿ ಎಂದೂ ನೋಡದ ಪ್ರದೇಶದಲ್ಲಿ ನಡೆಯುವವರು ಅತ್ತಿತ್ತ ಕವಲುಹಾದಿಗಳಲ್ಲಿ ಸುತ್ತಿಸುತ್ತಿ ಬಳಲುವಂತೆ, ನಾವೂ ಭಗವಂತನನ್ನು ಲಕ್ಷಿಸದೆ, ಆತನ ಉಪದೇಶಕ್ಕೆ ಕಿವಿಗೊಡದೆ, ಆತನ ಭಕ್ತರಾದ ಸಾಧುಗಳ ನಡೆನುಡಿಯನ್ನು ಮನಸ್ಸಿಗೆ ತಂದುಕೊಳ್ಳದೆ "ಈಗ ಅದನ್ನು ಮಾಡೋಣ," "ಈಗ ಇದನ್ನು ಮಾಡೋಣ" ಎಂದು ಸಿಕ್ಕಿದ ಹಾದಿಗಳನ್ನೆಲ್ಲ ತುಳಿಯುವೆವು. ಆದರೆ ಯಾವ ಹಾದಿಯಲ್ಲಿಯೂ ನಮಗೆ ಸುಖವು ಕಾಣಿಸುವದಿಲ್ಲ. ಆಗ ನಮ್ಮಂತೆಯೇ ಕಣ್ಣುಕಾಣದವರನ್ನು "ದಾರಿ ಯಾವದಪ್ಪ?" ಎಂದು ಕೇಳುವೆವು. ದಟ್ಟಡವಿಯಲ್ಲಿ ಕಾರುಗತ್ತಲೆಯಲ್ಲಿ ನಡೆಯುವ ಹೊಸಬರು ಒಬ್ಬರಿಗೊಬ್ಬರು ದಾರಿಯನ್ನು ಉಪದೇಶಿಸುವದಕ್ಕೆ ಹೋಗುವಂತೆ, ನಮಗೇ ಏನೂ ತಿಳಿಯದಿದ್ದರೂ ಮತ್ತೊಬ್ಬರಿಗೂ ದಾರಿಯನ್ನು ತೋರಿಸುವದಕ್ಕೆ ಹವಣಿಸುವೆವು! ಈ ಮಾರ್ಗಗಳು ಸರಿಯಲ್ಲವೆಂದು ಶಾಸ್ತ್ರದಲ್ಲಿ ಹೇಳಿದೆ ಎಂಬುದು ಮಾತ್ರವಲ್ಲ, ನಮ್ಮ ದುರಂತ ದುಃಖಪೂರಿತವಾದ ಜೀವನದಲ್ಲಿಯೇ ದಿನದಿನಕ್ಕೂ ಅನುಭವಕ್ಕೆ ಬರುತ್ತಿರುವದು.

ಹೀಗೆ ಭಗವಂತನ ಮಾರ್ಗಕ್ಕೆ ನಮ್ಮ ಮಾರ್ಗವು ತೀರ ವಿರುದ್ಧವಾಗಿರುತ್ತದೆ. ಆದ್ದರಿಂದಲೇ ಭಗವಂತನು "ಮನುಷ್ಯರು ಸರ್ವಪ್ರಕಾರದಿಂದಲೂ ನನ್ನ ಹಾದಿಯನ್ನೇ ಅನುಸರಿಸುತ್ತಾರೆ" ಎಂದು ಉಪದೇಶಿಸಿರುವದು. ಈಗ ನಾವು ಮನುಷ್ಯರಂತೆ ವರ್ತಿಸುತ್ತಿಲ್ಲ, ಪಶುಗಳಂತೆ ನಡೆದುಕೊಳ್ಳುತ್ತಿರುವೆವು. ಜಿಂಕೆಯು ಘಂಟೆಯ ಶಬ್ದವನ್ನು ಕೇಳಿ ಆಕಡೆಗೆ ಬಂದು ಬಲೆಗೆ

ಬೀಳುವಂತೆ, ಪತಂಗವು ಬೆಳಕಿಗೆ ಮರುಳಾಗಿ ದೀಪದ ಉರಿಗೆ ಬಲಿಯಾಗುವಂತೆ, ಮೀನು ನೀರಿನಲ್ಲಿ ಚಲಿಸುತ್ತಿರುವ ಗಾಳದ ಎರೆಹುಳುವನ್ನು ತಿನ್ನುವದಕ್ಕೆ ಹೋಗಿ ಮೀನುಹಿಡಿಯುವವನ ಬುಟ್ಟಿಯನ್ನು ಸೇರಿಕೊಳ್ಳುವಂತೆ, ಕೆಂಡಸಂಪಿಗೆಯ ವಾಸನೆಗೆ ಹೋಗಿ ಸಾಯುವ ಮರಿದುಂಬಿಯಂತೆ, ನಾವು ಯಾವದೋ ಸಣ್ಣಪುಟ್ಟ ವಿಷಯದ ಥಳಕಿಗೆ ಮರುಳಾಗಿ ಭಗವಂತನ ಹಾದಿಯನ್ನು ಬಿಟ್ಟು ನಮ್ಮ ಕಲ್ಪನೆಯ ಹಾದಿಗಳನ್ನು ಹಿಡಿಯುತ್ತಿರುವೆವು, ಗುಂಡಿಗೆ ಬೀಳುತ್ತಿರುವೆವು!

"ನನ್ನ ಹಾದಿಯನ್ನು ಮನುಷ್ಯರು ಅನುಸರಿಸುವರು" ಎಂಬ ವಾಕ್ಯಕ್ಕೆ ಮತ್ತೊಂದು ಅರ್ಥವನ್ನು ಈಗ ಕಂಡುಕೊಳ್ಳುವದಕ್ಕೆ ಸಮಯವಾಗಿರುತ್ತದೆ. ಭಗವಂತನು ಸ್ವತಃ ಎಲ್ಲಿಗೂ ಹೋಗಿ ಮುಟ್ಟಬೇಕಾದದ್ದಿಲ್ಲವಾದ್ದರಿಂದ ಅವನು ನಿಜವಾಗಿ ಒಬ್ಬ ದಾರಿಹೋಕನೆಂದು ತಿಳಿಯುವದು ತಪ್ಪು. ದಾರಿತಪ್ಪುವವರಿಗೆ ದಾರಿ ತೋರಿಸುವವನು ಆತನು ಎಂಬುದನ್ನು ಮೇಲೆ ತಿಳಿಸಿರುತ್ತೇವೆ. ಆದರೆ ಅವನು ನಮಗೆ ಕೈಮರದಂತೆ ಬರಿಯ ದಿಕ್ಕನ್ನು ತೋರಿಸುವವನಲ್ಲ. ಆತನೇ ನಾವು ಮುಟ್ಟಬೇಕಾದ ಕೊನೆಯ ಮಜಲು. ಪರಮಾತ್ಮನೇ ಹಾದಿ, ಪರಮಾತ್ಮನೇ ಪಡೆಯಬೇಕಾದ ಪರಗತಿ. ಆದ್ದರಿಂದ "ನನ್ನ ಹಾದಿ" ಎಂದರೆ ನನ್ನನ್ನು ಮುಟ್ಟುವ ಹಾದಿ ಎಂದೂ ಅರ್ಥಮಾಡಬಹುದು. "ಮೈಸೂರು ರಸ್ತೆ" ಎಂದರೆ ಮೈಸೂರಿಗೆ ತಲಪುವ ರಸ್ತೆ ಎಂದು ಅರ್ಥವಾಗುವದಷ್ಟೆ; ಅದರಂತೆ ಈ ಮಾತಿಗೂ ಅರ್ಥವನ್ನು ಮಾಡಿಕೊಳ್ಳಬಹುದಾಗಿದೆ.

"ಮನುಷ್ಯರು ನನ್ನ ಹಾದಿಯಲ್ಲಿಯೇ ನಡೆಯುತ್ತಾರೆ" ಎಂಬ ಭಗವಂತನ ವಾಕ್ಯದ ಅಭಿಪ್ರಾಯವನ್ನು ಈಗ ಚೆನ್ನಾಗಿ ತಿಳಿದುಕೊಳ್ಳಬಹುದು. ಯಾವ ಹಾದಿಯು ಇಂದಿಲ್ಲದಿದ್ದರೆ ಒಂದು ದಿನ ಭಗವಂತನನ್ನು ಮುಟ್ಟುವದೋ ಅದು ಭಗವಂತನ ಹಾದಿಯು. ಆ ಹಾದಿಯಲ್ಲಿ ನಡೆಯುವವರೇ ನಿಜವಾದ ಮನುಷ್ಯರು. ನಾವು ಭಗವಂತನ ಕಡೆಗೆ ತಿರುಗಬೇಕು ಎಂದ ಮಾತ್ರದಿಂದ ಇಹಲೋಕದ ಭೋಗಗಳನ್ನೆಲ್ಲ ಈಗಲೇ ಹೊಡೆದೋಡಿಸಬೇಕೆಂಬುದೇನೂ ಇಲ್ಲ. ಯಾರಿಗೆ ಪ್ರಪಂಚದ ಸುಖವು ಬೇಕಾಗಿರುವದೋ, ಯಾರಿಗೆ ಇಲ್ಲಿ ಕಾಣುವ ದುಃಖಗಳ ಪರಿಹಾರವು ಬೇಕಾಗಿರುವದೋ, ಅವರೂ ಭಗವಂತನ ಹಾದಿಯಲ್ಲಿ ನಡೆಯುವದಕ್ಕೆ ಬರುತ್ತದೆ.

ಇದನ್ನು ಒಂದು ದೃಷ್ಟಾಂತದಿಂದ ಸ್ಪಷ್ಟಪಡಿಸಬಹುದು. ನಮಗೆ ಯಾವದಾದರೂ ಒಂದು ಸಂಕಟವು ಪರಿಹಾರವಾಗಬೇಕಾಗಿರುವಾಗ, ಅಥವಾ ನಮಗೆ ಹಣವೋ ಅಧಿಕಾರವೋ ಮತ್ತೆ ಯಾವದಾದರೂ ಇಷ್ಟಪದಾರ್ಥವೋ ಬೇಕಾಗಿರುವಾಗ ನಾವು ಸಾಮಾನ್ಯವಾಗಿ ಅನುಸರಿಸುವ ಮಾರ್ಗವು ಯಾವದು? ಇಂಥ ಉಪಾಯದಿಂದ ನಮ್ಮ ದುಃಖವು ಪರಿಹಾರವಾಗಬಹುದು, ನಮ್ಮ ದುಮ್ಮಾನವು ದೂರವಾಗಬಹುದು,

ನಮ್ಮ ಶರೀರದ ರೋಗವು ತೊಲಗಬಹುದು–ಎಂದು ನಮಗೆ ಗೊತ್ತಾಗದೆ ಇರುವಾಗ ಅಥವಾ ಇಂಥ ಕಡೆಯಿಂದ ನಮಗೆ ಇಷ್ಟವಾಗಿರುವ ಹಣವು, ಅಥವಾ ಪದಾರ್ಥವು, ಕೀರ್ತಿಯು, ಬುದ್ಧಿಯು, ಬಲವು–ಮುಂತಾದದ್ದು ದೊರೆಯುವದು ಎಂಬುದು ನಿಶ್ಚಿತವಾಗಿ ತಿಳಿಯದೆ ಇರುವಾಗ, ನಾವೇನು ಮಾಡುವೆವು? "ಈಗ ನಾನೇನು ಮಾಡಬೇಕು?" ಎಂಬ ಯೋಚನೆಯು ಆಗ ನಮ್ಮ ಮನಸ್ಸಿಗೆ ಬಲವಾಗಿ ಅಂಟಿಕೊಳ್ಳುತ್ತದೆ. ನಮಗೆ ದಿಕ್ಕು ತೋಚದೆ ಇರುತ್ತದೆ. ಆದರೂ ಏನಾದರೊಂದನ್ನು ಮಾಡಿಬಿಡಬೇಕು ಎನ್ನಿಸುತ್ತದೆ. ಅಲ್ಲವೆ? ಸರಿ, ಈಗ ಏನಾದರೂ ಮಾಡಿಯೇ ತೀರಬೇಕು ಎಂದು ಗಡಿಬಿಡಿಯಿಂದ ಯಾವದಾದರೊಂದು ಕಾರ್ಯವನ್ನು ಕೈಕೊಳ್ಳುವೆವು. ಕಣ್ಣುಕಾಣದೆ ಇರುವ ಕಗ್ಗತ್ತಲೆಯಲ್ಲಿ ದಾರಿಯನ್ನು ತಿಳಿಯದವನು ಕಂಡಕಡೆಗೆ ಓಡಿದರೆ ಆಗುವ ಫಲವೇ ನಮಗೂ ಆ ಸಂದರ್ಭದಲ್ಲಿ ಆಗುತ್ತದೆ. ನಾವು ಎಡವರಿಸುವದು, ಮುಗ್ಗರಿಸುವದು ಮುಂತಾದ ಅನುಭವಗಳನ್ನು ತಂದುಕೊಳ್ಳುತ್ತಾ ಮಾಡಬಾರದ್ದನ್ನೇ ಮಾಡುತ್ತಾ ಆಗಬಾರದ್ದನ್ನು ಅನುಭವಿಸುತ್ತಾ ಹೋಗುವೆವು! ಇದು ನಮ್ಮ ಮಾರ್ಗ!

ಇದಕ್ಕೆ ತೀರ ವಿರುದ್ಧವಾಗಿರುವದು ಭಗವಂತನ ಮಾರ್ಗ. ಕತ್ತಲೆಯ ಮನೆಯಲ್ಲಿ ನಮಗೆ ಬೇಕಾದ ಪದಾರ್ಥಗಳಿದ್ದರೂ ನಮಗೆ ಅವು ಎಲ್ಲಿರುವವೆಂದು ಕಾಣಿಸದಿರುವಂತೆ ಗಡಿಬಿಡಿಯಿಂದ ನಾವು ಮಾಡುವ ಹಲವು ಪ್ರಯತ್ನಗಳು ಮೊದಲು ನಿಲ್ಲಬೇಕು. ಭಗವಂತನು ಕೊಟ್ಟಿರುವ ವಾಗ್ದಾನವನ್ನು ಇಂಥ ಸಂದರ್ಭದಲ್ಲಿ ನಾವು ಕೂಡಲೆ ನೆನಪಿಗೆ ತಂದುಕೊಳ್ಳಬೇಕು:

**ಯೇ ಯಥಾ ಮಾಂ ಪ್ರಪದ್ಯನ್ತೇ ತಾಂಸ್ತಥೈವ ಭಜಾಮ್ಯಹಮ್ ।**
**ಮಮ ವರ್ತ್ಮಾನುವರ್ತನ್ತೇ ಮನುಷ್ಯಾಃ ಪಾರ್ಥ ಸರ್ವಶಃ ॥**

'ಯಾರು ನನ್ನನ್ನು ಹೇಗೆ ಭಜಿಸುವರೋ ಅವರನ್ನು ನಾನು ಹಾಗೆಯೇ ಅನುಗ್ರಹಿಸುವೆನು. ಎಲೈ ಪಾರ್ಥನೆ, ಮನುಷ್ಯರು ಸರ್ವಪ್ರಕಾರಗಳಿಂದಲೂ ನನ್ನ ಹಾದಿಯನ್ನೇ ಅನುಸರಿಸುವರು' (4–11) ಎಂದು ಆತನು ಅಪ್ಪಣೆಕೊಡಿಸಿರುತ್ತಾನೆ. ಭಗವಂತನ ಉಪದೇಶವೂ ಭಗವದ್ಭಕ್ತರ ಆಚಾರವಿಚಾರಗಳೂ ನಮಗೆ ಈ ಸಂದರ್ಭದಲ್ಲಿ ಸರಿಯಾದ ಮಾರ್ಗದರ್ಶಕಗಳಾಗಿರುತ್ತವೆ. ನಾವು ಭಗವಂತನ ಕಡೆಗೆ ತಿರುಗುವದಕ್ಕೆ ಮಾತ್ರವೇ ಈ ಮಾರ್ಗವು ಉಪಯೋಗವಾಗುವದಿಲ್ಲ; ಲೋಕದಲ್ಲಿ ನಮಗೆ ಅವಶ್ಯವಾಗಿರುವ ಅನಿಷ್ಟನಿವೃತ್ತಿಯೂ ಇಷ್ಟಪ್ರಾಪ್ತಿಯೂ ಈ ಭಗವಂತನ ಮಾರ್ಗವನ್ನು ಅನುಸರಿಸುವದಿಂದಲೇ ದೊರೆಯುವವು.

ಇಲ್ಲಿ ಮನುಷ್ಯರೆಂದರೆ ಭಗವಂತನನ್ನು ಮಾರ್ಗದರ್ಶಿಯಾಗಿಯೂ ಮುಟ್ಟಬೇಕಾದ ಗತಿಯಾಗಿಯೂ ಇಟ್ಟುಕೊಂಡು ತಮ್ಮ ಇಷ್ಟಾರ್ಥಗಳಿಗೆಲ್ಲ ಮೂಲವೆಂದು

ಭಾವಿಸಿರುವವರು. ಅವರು ಈ ಭಗವಂತನ ಮಾರ್ಗವನ್ನೇ ಅನುಸರಿಸುವರು ಎಂದು ದೊಡ್ಡವರು ಹೇಳುತ್ತಾರೆ. ಯಾರು ಸ್ವಪ್ರಯತ್ನದಿಂದಲೇ ತಮ್ಮ ಅನಿಷ್ಟಗಳೆಲ್ಲ ತೊಲಗಬೇಕೆಂದೂ ಇಷ್ಟಾರ್ಥಗಳೆಲ್ಲ ದೊರಕಬೇಕೆಂದೂ ಬಯಸುವವರೋ ಅವರು ನಿಜವಾದ ಮನುಷ್ಯರಲ್ಲ. ತಮಗೆ ಬೇಕಾಗಿರುವ ಭುಕ್ತಿಮುಕ್ತಿಗಳಿಗೆಲ್ಲ ಭಗವಂತನೇ ಮೂಲವೆಂದು ಎಣಿಸಿರುವವರು ಮಾತ್ರ ಈ ಅರ್ಥದಲ್ಲಿ ಮನುಷ್ಯರು.

ಆದ್ದರಿಂದ ನಿಜವಾದ ಮನುಷ್ಯರೆನಿಸಿಕೊಳ್ಳಬೇಕೆನ್ನುವವರು ತಮ್ಮ ಮನಸ್ಸನ್ನು ಉಪಯೋಗಿಸಬೇಕು. ಮನಸ್ಸನ್ನು ಸರಿಯಾದ ಹಾದಿಯಲ್ಲಿ ಉಪಯೋಗಿಸದವರು ಎಂದಿಗೂ ಮನುಷ್ಯರೆನಿಸಲಾರರು. ಸರಿಯಾದ ಹಾದಿ ಎಂದರೆ ಭಗವಂತನ ಹಾದಿಯೊಂದೇ. ಭಗವಂತನ ಹಾದಿ ಎಂದರೆ ಭಗವಂತನು ಉಪದೇಶಿಸಿರುವ ಹಾದಿ; ಮನುಷ್ಯರೂಪದಿಂದ ಪ್ರಕಟವಾಗಿ ಭಕ್ತಜನರಿಗೆ ತಾನೇ ನಡೆದು ತೋರಿಸಿರುವ ಹಾದಿ; ಭಗವದ್ಭಕ್ತರಿಗೆ ಇನ್ನೂ ಹೃದಯದಲ್ಲಿದ್ದುಕೊಂಡು ತೋರಿಸಿಕೊಡುತ್ತಿರುವ ಹಾದಿ; ಭಗವದ್ಭಕ್ತರು ನಮಗೆಲ್ಲ ತೋರಿಸುತ್ತಿರುವ ಹಾದಿ. ಭಗವಂತನಿಂದ ಉಪದಿಷ್ಟವಾದ ಹಾದಿಯಾದ್ದರಿಂದ ಮಾತ್ರವೇ ಅದು ಭಗವಂತನ ಹಾದಿಯಲ್ಲ; ಭಗವಂತನನ್ನು ಮೆಚ್ಚುವ ಹಾದಿಯಾದ್ದರಿಂದಲೂ ಅದು ಭಗವಂತನ ಹಾದಿ ಎನಿಸಿರುತ್ತದೆ. ಈ ಹಾದಿಯಲ್ಲಿ ನಡೆಯುವ ಸಂಕಲ್ಪವನ್ನು ಮಾಡಿದರೆ ನಡೆಯುತ್ತಿರುವಾಗ ಯಾವದೊಂದು ಆಯಾಸವೂ ತೋರದಂತೆ ಅಡಚಣೆಗಳೆಲ್ಲ ಮಾಯವಾಗುವವು, ಅವರಿಗೆ ಅವಶ್ಯವಾಗಿ ಬೇಕಾಗುವ ಲೌಕಿಕ ಸಂಪತ್ತುಗಳೆಲ್ಲ ಅವರಿದ್ದಲ್ಲಿಗೆ ತಾವುತಾವೇ ಬಂದು ಸೇರಿಕೊಳ್ಳುವವು. ಹೆಚ್ಚೇನು? ಈ ಹಾದಿಯಲ್ಲಿ ನಡೆಯುವವರ ಯೋಗಕ್ಷೇಮವೆಲ್ಲ ಭಗವಂತನದೇ.

ನಿಮಗೆ ಯಾವದಾದರೂ ಅನರ್ಥದಿಂದ ಪಾರಾಗಬೇಕೆಂಬ ಹಂಬಲ ಇದೆಯೆ? ಹಾಗಾದರೆ ಭಗವಂತನ ಮಾರ್ಗವನ್ನು ಅನುಸರಿಸಿರಿ. ಯಾವದಾದರೂ ಇಷ್ಟವಾದ ಧನಾದಿಗಳ ಪ್ರಾಪ್ತಿಯಾಗಬೇಕೆಂಬ ಹಂಬಲು ಇದೆಯೆ? ಹಾಗಾದರೆ ಭಗವಂತನ ಮಾರ್ಗವನ್ನು ಅನುಸರಿಸಿರಿ. ಭಗವಂತನನ್ನು ಮುಟ್ಟಿ ಪರಮಪುರುಷಾರ್ಥವನ್ನೇ ಮುಟ್ಟಬೇಕೆ? ಹಾಗಾದರಂತೂ ಅವಶ್ಯವಾಗಿ ಭಗವಂತನ ಮಾರ್ಗವನ್ನೇ ಹಿಡಿಯಿರಿ.

ಭಗವಂತನೆಂದರೆ ಯಾರು? ಸಮಗ್ರವಾದ ಐಶ್ವರ್ಯ, ಧರ್ಮ, ಯಶಸ್ಸು, ಸಂಪತ್ತು, ಜ್ಞಾನ, ವೈರಾಗ್ಯ, ಮೋಕ್ಷ–ಇವುಗಳ ಗನಿಯಾದ ದೇವದೇವನೇ ಭಗವಂತನು. ನಮಗೆ ಸ್ವಾತಂತ್ರ್ಯವು ಬೇಕೆಂದೂ ನಮ್ಮ ಕುಂದುಕೊರತೆಗಳು ಮಾಯವಾಗಬೇಕೆಂದೂ ನಮಗೆ ಬಯಕೆಯಿದ್ದರೆ ಯಾವ ಕುಂದುಕೊರತೆಯೂ ಇಲ್ಲದ ಅಷ್ಟೈಶ್ವರ್ಯದ ಮೂಲವಾಗಿರುವ ಆ ಭಗವಂತನಲ್ಲಿಯೇ ನಮ್ಮ ಮನಸ್ಸು ನೆಲೆನಿಲ್ಲಬೇಕು. ಈ ಭಗವಂತನ ಮಾರ್ಗಕ್ಕಿಂತ ಮತ್ತೆ ಬೇರೆ ಯಾವ ಶ್ರೇಯೋಮಾರ್ಗವೂ ಇಲ್ಲ.

# 30. ಉಪಾಸನೆ

* ಭಗವಂತನ ಉಪಾಸನೆ ಎಂದರೇನು? ಉಪಾಸನೆ ಎಂಬ ಶಬ್ದಕ್ಕೆ ಹತ್ತಿರ ಕೂತುಕೊಂಡಿರುವದು ಎಂದು ಅಕ್ಷರಾರ್ಥವಾಗುತ್ತದೆ. ಆದರೆ ಭಗವಂತನು ಎಲ್ಲೆಲ್ಲಿಯೂ ಇರುವವನು; ಅವನ ಹತ್ತಿರದಲ್ಲಿರುವದೆಂದರೇನರ್ಥ?-ಎಂದು ಕೆಲವರಿಗೆ ಸಂಶಯವು ಬರಬಹುದು. ನಿಜ, ಭಗವಂತನು ನಮಗೆ ದೂರವಾಗಿಲ್ಲ. ಅವನು ತೀರ ಹತ್ತಿರದಲ್ಲಿಯೇ ಇರುತ್ತಾನೆ. ಅವನು ನಮ್ಮಗಳೆಲ್ಲರ ಆತ್ಮನೇ ಆಗಿರುತ್ತಾನೆ. ನಮ್ಮ ಆತ್ಮನು, ನಮ್ಮ ಸ್ವರೂಪವು, ನಾವು, ನಮಗೆ ದೂರವಾಗಿರುವದೆಂದರೆ ಎಂದಿಗೂ ಅರ್ಥವಿಲ್ಲದ ಮಾತೇ ಸರಿ. ಭಗವಂತನು ನಮಗೆ ದೇಶದಿಂದಲಾಗಲಿ ಕಾಲದಿಂದಲಾಗಲಿ ದೂರವಿರುವದಿಲ್ಲ. ಅವನು ಈಗಲೇ ಇಲ್ಲಿಯೇ ನಮ್ಮ ಆತ್ಮನೇ ಆಗಿ ಇರುತ್ತಾನೆ. ಹೀಗಿದ್ದರೂ ನಾವು ಭಗವಂತನಿಗೆ ದೂರವಾಗಿರುತ್ತೇವೆ. ನಮ್ಮ ಮನಸ್ಸು ಆತನ ಇರವನ್ನು ಲೆಕ್ಕಕ್ಕೆ ತೆಗೆದುಕೊಂಡಿರುವದಿಲ್ಲ. ಆತನು ಇಲ್ಲಿಯೇ ಇದಾನೆಂಬುದನ್ನು ಅದು ತನ್ನ ಭಾವನೆಯಲ್ಲಿಟ್ಟುಕೊಂಡಿರುವದಿಲ್ಲ. ಆದ್ದರಿಂದ ನಾವು ಭಗವಂತನಿಗೆ ದೂರವಾಗಿರುತ್ತೇವೆ; ಆತನ ಹತ್ತಿರ ಕುಳಿತುಕೊಳ್ಳಬೇಕು. ಆತನು ನಮ್ಮ ಬಳಿಯಲ್ಲಿಯೇ ಇರುತ್ತಾನೆಂಬುದನ್ನು ನಮ್ಮ ಮನಸ್ಸು ಕಂಡುಕೊಳ್ಳಬೇಕು. ಈ ರೀತಿಯಲ್ಲಿ ಕಂಡುಕೊಳ್ಳುವದಕ್ಕೆ ಮಾಡುವ ಪ್ರಯತ್ನವೇ ಉಪಾಸನೆ.

ಉಪಾಸನೆ, ಧ್ಯಾನ-ಎರಡೂ ಪರ್ಯಾಯಶಬ್ದಗಳು. ಉಪಾಸನೆಗೆ ಅಥವಾ ಧ್ಯಾನಕ್ಕೆ ಧ್ಯಾನಮಾಡುವವನ ಮನಸ್ಸು, ಧ್ಯಾನಕ್ಕೆ ವಿಷಯವಾದ ವಸ್ತು-ಎರಡೂ ಉತ್ತಮವಾಗಿರಬೇಕು. ಹಾಗಾದರೆ ಮಾತ್ರ ಉಪಾಸನೆಯಿಂದ ಉತ್ತಮವಾದ ಫಲವುಂಟಾಗುತ್ತದೆ. ನಮ್ಮ ಮನಸ್ಸು ಪ್ರೇಮದಿಂದ ಕೂಡಿದ್ದರೆ ವಸ್ತುವಿನ ಬಳಿಯಲ್ಲಿಯೇ ಸುಳಿದಾಡುತ್ತಿರುತ್ತದೆ; ಹಾಗಿಲ್ಲದಿದ್ದರೆ ಅದು ಬೇಗ ಆ ವಸ್ತುವನ್ನು ಬಿಟ್ಟು ಮತ್ತೊಂದು ಕಡೆಗೆ ಹೋಗಿಬಿಡುತ್ತದೆ. ವಸ್ತು ದೂರದಲ್ಲಿದ್ದರೂ ಪ್ರೇಮದಿಂದ ಹತ್ತಿರವಾಗಿ ಕಾಣುತ್ತದೆ; ವಸ್ತು ಹತ್ತಿರವೇ ಇದ್ದರೂ ಔದಾಸೀನ್ಯದಿಂದ ದೂರವಾಗುತ್ತದೆ. "ಈಕೆಗೆ ಕಾಶಿಯಲ್ಲಿರುವ ಮಗಳೂ ಹತ್ತಿರ, ಮನೆಯಲ್ಲಿಯೇ ಇರುವ ಸೊಸೆಯು ದೂರ!" ಎಂದು ಒಮ್ಮೆ ಒಬ್ಬಾತ ನುಡಿದನು! ಹೀಗೆ ಮನಸ್ಸಿನ ಪ್ರೇಮ ಅಥವಾ ಔದಾಸೀನ್ಯದ್ವೇಷಗಳ ನಿಮಿತ್ತದಿಂದ ವಿಷಯವು ಹತ್ತಿರವೂ ದೂರವೂ ಆಗುವದು ನಮಗೆಲ್ಲ ಅನುಭವದಲ್ಲಿರುತ್ತದೆ. ಇದರಂತೆ ವಸ್ತುವು ತಾನೇ ಬದಲಾಯಿಸಿದರೂ ಅದರಲ್ಲಿರುವ ಪ್ರೇಮವು ಕಡಿಮೆಯಾಗಿ ಅದು ನಮಗೆ ದೂರವಾಗಿಬಿಡುತ್ತದೆ. ಹಾಲುಕೊಡುತ್ತಿದ್ದಾಗ ಹುಲ್ಲುಹಾಕುವದು, ಕಲಗಚ್ಚು

* ಸಂಪುಟ 18, ಸಂಚಿಕೆ 6, ಫೆಬ್ರವರಿ 1949, ಪುಟ 121-127

ಕುಡಿಯುವದಕ್ಕೆ ಹಾಕುವದು ಮುಂತಾದ ರೀತಿಗಳಿಂದ ಆದರಿಸುತ್ತಿದ್ದು ಆಕಳು ಹಾಲುಕರೆಯುವದು ನಿಲ್ಲುತ್ತಲೂ ಅದು ಮನೆಯಲ್ಲಿದ್ದರೂ ಅದರ ವಿಚಾರವನ್ನು ಕೆಲವರು ಅವಿವೇಕಿಗಳು ಕೈಬಿಡುವರಲ್ಲ, ಆ ಅಸಡ್ಡೆಗೆ ಹಸುವಿನ ಬದಲಾವಣೆಯು ಕಾರಣವಾಗುತ್ತದೆ. ನಮಗೆ ಉಪಯೋಗವಾಗಿರುವ ಕುರ್ಚಿ, ಮೇಜು-ಮುಂತಾದ ಪದಾರ್ಥಗಳನ್ನು ಎಚ್ಚರಿಕೆಯಿಂದ ನೋಡಿಕೊಳ್ಳುತ್ತಿದ್ದು ಅವು ಮುರಿಯುತ್ತಲೂ ಹರುಕುಮುರುಕುಸಾಮಾನುಗಳ ಕೊಠಡಿಗೆ ಅವನ್ನು ಒಗೆಯುವಂತೆ ಮಾಡುವದೂ ವಸ್ತುವಿನ ಬದಲಾವಣೆಯೇ.

ಆದರೆ ಒಂದಾನೊಂದು ವಸ್ತು ಸ್ವಲ್ಪವೂ ಮಾರ್ಪಡದೆ ನಮ್ಮ ಬಳಿಯಲ್ಲಿಯೇ ಇರುತ್ತದೆ; ಅದು ಯಾವ ದೇಶದಲ್ಲಿಯೂ ಯಾವ ಕಾಲದಲ್ಲಿಯೂ ಹೆಚ್ಚು ಕಡಿಮೆ ಯಾಗುವದಲ್ಲ. ಅದರಿಂದ ನಮ್ಮ ಸಂಕಟಗಳೆಲ್ಲ ಪರಿಹಾರವಾಗುವವು, ನಮ್ಮ ಇಷ್ಟಾರ್ಥಗಳೆಲ್ಲ ನೆರವೇರುವವು; ಅದನ್ನು ಸಂಪಾದಿಸಿಕೊಳ್ಳುವದಕ್ಕೆ ಯಾವ ಆಯಾಸವೂ ಇಲ್ಲ, ಅದು ಈಗಲೇ ಇಲ್ಲಿಯೇ ಇರುವದೆಂಬ ಮನಸ್ಸಿನ ಭಾವನೆಯನ್ನು ಸಂಪಾದಿಸಿ ಕೊಂಡಮಾತ್ರದಿಂದ ನಮಗೆ ಸಿಕ್ಕಿಬಿಡುವದು-ಎಂದು ಯಾರಾದರೂ ಹೇಳಿದರೆ ಯಾರ ಕಿವಿಗಳು ತಾನೆ ನೆಟ್ಟಗಾಗುವದಿಲ್ಲ? ಇಂಥ ಭಗವಂತನೆಂಬ ತತ್ತ್ವವನ್ನು ತಿಳಿಸುವದಕ್ಕೇ ಶಾಸ್ತ್ರಗಳು ಹೊರಟಿವೆ; ಅದರ ಕಡೆಗೆ ಮನಸ್ಸನ್ನು ಹಾಕುವದೇ, ಅದರಲ್ಲಿ ಮನಸ್ಸನ್ನು ನಿಲ್ಲಿಸಿಕೊಳ್ಳುವದೇ, ಭಗವಂತನ ಉಪಾಸನೆ.

ಭಗವಂತನ ಉಪಾಸನೆಯಿಂದ ನಮಗೆ ಆಗುವ ಫಲಗಳನ್ನು ಗೀತೆಯಲ್ಲಿ ಚಿತ್ತಾಕರ್ಷಕವಾದ ರೀತಿಯಲ್ಲಿ ವರ್ಣಿಸುವ ಕೆಲವು ವಾಕ್ಯಗಳಿವೆ. ಅವುಗಳಲ್ಲಿ ಕೆಲವನ್ನು ಈ ಕೆಳಗೆ ಬರೆಯುವೆವು:

1. **"ಮಚ್ಚಿತ್ತಃ ಸರ್ವ ದುರ್ಗಾಣಿ ಮತ್ಪ್ರಸಾದಾತ್ ತರಿಷ್ಯಸಿ ।**

ನನ್ನಲ್ಲಿಯೇ ಚಿತ್ತವನ್ನಿಟ್ಟುಕೊಂಡಿದ್ದರೆ ಸರ್ವದುರ್ಗಗಳನ್ನೂ ನನ್ನ ಪ್ರಸಾದದಿಂದ ದಾಟುವೆ.

2. **"ಮನ್ಮನಾ ಭವ ಮದ್ಭಕ್ತೋ ಮದ್ಯಾಜೀ ಮಾಂ ನಮಸ್ಕುರು ।**
**ಮಾಮೇವೈಷ್ಯಸಿ ಸತ್ಯಂ ತೇ ಪ್ರತಿಜಾನೇ ಪ್ರಿಯೋಽಸಿ ಮೇ ॥"**

ನನ್ನಲ್ಲಿಯೇ ಮನಸ್ಸಿಡು, ನನ್ನ ಭಕ್ತನಾಗಿರು, ನನಗಾಗಿಯೇ ಯಾಗಮಾಡು, ನನ್ನನ್ನೇ ನಮಸ್ಕರಿಸು. ನೀನು ನನಗೆ ಪ್ರಿಯನಾದ್ದರಿಂದ ಪ್ರತಿಜ್ಞೆ ಮಾಡಿ ಹೇಳುತ್ತೇನೆ ಕೇಳು; ಹೀಗೆ ಮಾಡುತ್ತಿದ್ದರೆ ಸತ್ಯವಾಗಿಯೂ ನನ್ನನ್ನೇ ಸೇರುವೆ.

3. “ಮಯ್ಯೇವ ಮನ ಆಧತ್ಸ್ವ ಮಯಿ ಬುದ್ಧಿಂ ನಿವೇಶಯ ।
ನಿವಸಿಷ್ಯಸಿ ಮಯ್ಯೇವ ಅತ ಊರ್ಧ್ವಂ ನ ಸಂಶಯಃ ॥”

ನನ್ನಲ್ಲಿಯೇ ಮನಸ್ಸಿಡು, ನನ್ನಲ್ಲಿಯೇ ಬುದ್ಧಿಯನ್ನಿಡು; ಇನ್ನು ಮೇಲೆ ನನ್ನಲ್ಲಿಯೇ ನಿವಾಸ ಮಾಡಿಕೊಂಡಿರುವೆ, ಇದಕ್ಕೆ ಸಂಶಯವಿಲ್ಲ.

ಇಂಥ ವಚನಗಳು ಗೀತೆಯಲ್ಲಿ ಅಲ್ಲಲ್ಲಿ ಸಿಕ್ಕುತ್ತಲೇ ಇರುತ್ತವೆ. ಇಂಥ ವಚನಗಳನ್ನು ನಾವುಗಳು ಭಗವಂತನು ನಮಗೇ ಬೇರೆಯಾಗಿ ಮಾಡಿರುವ ವಾಗ್ದಾನಗಳೆಂದು ಭಾವಿಸಬೇಕು. ದ್ವಾಪರಯುಗದ ಕೊನೆಯಲ್ಲಿ ಅರ್ಜುನನಿಗೆ ಮಾಡಿದ ವಾಗ್ದಾನವಿದೆಂದು ಎಂದಿಗೂ ಭಾವಿಸಬೇಡಿರಿ. ಅದೇ ನಿಜವಾಗಿದ್ದರೆ ವ್ಯಾಸರು ಈ ವಚನಗಳನ್ನು ಭಾರತದಲ್ಲಿ ಸೇರಿಸಿ ಬರೆದಿಡುತ್ತಿರಲಿಲ್ಲ. ಭಗವದ್ಗೀತೆಯನ್ನು ಹಿಂದೆ ಎಷ್ಟೋ ಜನರು ಪಾರಾಯಣ ಮಾಡಿರುತ್ತಾರೆ, ಈಗಲೂ ಪಾರಾಯಣಮಾಡುತ್ತಿರುತ್ತಾರೆ. ಅವರೆಲ್ಲರಿಗೂ ಈ ವಾಗ್ದಾನವನ್ನು ಭಗವಂತನು ಮಾಡಿರುತ್ತಾನೆ. ಎಷ್ಟೋ ಜನರು ಭಗವಂತನನ್ನು ಉಪಾಸನೆಮಾಡಿ ಈ ವಾಗ್ದಾನಗಳು ತಮ್ಮ ಪಾಲಿಗೆ ಅಕ್ಷರಶಃ ನಿಜವಾದದ್ದನ್ನು ಮನಗಂಡಿರುತ್ತಾರೆ. ಆದರೆ ಈಗ ನೀವೂ ಇದೇ ವಾಗ್ದಾನಗಳು ನಿಮಗಾಗಿಯೇ ಭೂಮಂಡಲದಲ್ಲೆಲ್ಲ ನೀವು ಒಬ್ಬರೇ ಇದ್ದರೆ ಹೇಗೋ ಹಾಗೆ, ನಿಮ್ಮ ಪ್ರಯೋಜನ ಕ್ಕಾಗಿಯೇ ಮಾಡಿರುತ್ತವೆ ಎಂದು ಭಾವಿಸಿರಿ. ನೀವೂ ಈ ವಾಗ್ದಾನಗಳು ನಿಜವಾಗಿ ನೆರವೇರುವವೆಂಬುದನ್ನು ಈಗಲೂ ಮನಗಾಣಬಹುದು.

ಭಗವದ್ಗೀತೆಯ ಪುಸ್ತಕಗಳು ಈಗ ಅಗ್ಗವಾಗಿ ಸಿಕ್ಕುತ್ತವೆ. ಆದ್ದರಿಂದ ನಾನೂ ಗೀತೆಯನ್ನು ಓದುತ್ತೇನೆ, ನಾನೂ ಅದನ್ನು ಪಾರಾಯಣಮಾಡುತ್ತೇನೆ–ಎಂದು ಕುತೂಹಲನಿವೃತ್ತಿಗಾಗಿ ಅಥವಾ ತೋರುಗಾಣಿಕೆಗಾಗಿ ಓದಿದರೆ ಸಾಲದು. ಅದರಲ್ಲಿರುವ ಯಾವದಾದರೊಂದು ವಾಗ್ದಾನವನ್ನು ನಾವು ಪರೀಕ್ಷಿಸಿ ನೋಡುವದಕ್ಕೆ ಸೊಂಟಕಟ್ಟಿ ನಿಲ್ಲಬೇಕು. ಆಗಲೇ ನಮಗೆ ಉಪಾಸನೆಯ ಫಲವು ಅನುಭವಕ್ಕೆ ಬರುವದು.

ಈ ಲೇಖನದಲ್ಲಿ “ನನ್ನಲ್ಲಿಯೇ ಚಿತ್ತವನ್ನಿಟ್ಟುಕೊಂಡಿದ್ದರೆ ಸರ್ವದುರ್ಗಗಳನ್ನೂ ನನ್ನ ಪ್ರಸಾದದಿಂದ ದಾಟುವೆ” ಎಂಬ ವಾಕ್ಯವನ್ನು ಕುರಿತು ಸ್ವಲ್ಪ ವಿಚಾರಮಾಡೋಣ. ದುರ್ಗಗಳು ಎಂದರೆ ದಾಟುವದಕ್ಕಾಗದಂತೆ ಕಾಣುವ ಕಷ್ಟಗಳು; ಅಂಥವುಗಳನ್ನೂ ನನ್ನ ಪ್ರಸಾದದಿಂದ ದಾಟುವೆ–ಎಂದು ಭಗವಂತನು ಅಪ್ಪಣೆಕೊಡಿಸಿರುತ್ತಾನೆ. ಕಷ್ಟಗಳು ಬಾರದೆ ಇರುವ ಜೀವನವು ಯಾರದ್ದು ತಾನೆ ಇದೆ? ನಮಗೆಲ್ಲ ಕಷ್ಟಗಳು ಬರುತ್ತವೆ. ಕಷ್ಟಗಳೇ ಬಾರದಂತೆ ಇದ್ದರೆ ಚೆನ್ನಾಗಿತ್ತೆಂದು ನಾವು ಒಂದೊಂದು ಸಲ ಮನಸ್ಸಿನಲ್ಲಿ ಅಂದುಕೊಳ್ಳುವದುಂಟು; ಆದರೆ ಅದು ಶಕ್ಯವಿಲ್ಲ, ಸರಿಯಾಗಿ ನೋಡಿದರೆ ಇಷ್ಟವೂ

ಅಲ್ಲ. ಜೀವನದಲ್ಲಿ ಕಷ್ಟವೇ ಬೇಡವೆಂದು ನಾವು ಬಯಸಬಹುದು; ಆದರೆ ಆ ಬಯಕೆ ನೆರವೇರತಕ್ಕದ್ದಲ್ಲ. ಬರುವ ಕಷ್ಟಗಳನ್ನು ದಾಟುವದಕ್ಕೆ ತಕ್ಕ ಶಕ್ತಿಯೊಂದು ಇದ್ದರೆ ಕಷ್ಟಗಳು ಏನು ಮಾಡುವವು? "ಕಷ್ಟ ಬೇಕಾದಷ್ಟು ಬರಲಿ, ನಿನ್ನ ದಯೆ ಮಾತ್ರ ಇರಲಿ" ಎಂದು ಒಬ್ಬ ಭಾಗವತೋತ್ತಮರು ತಮ್ಮ ಗುರುವನ್ನು ಬೇಡಿಕೊಂಡಿರುತ್ತಾರೆ. ಅದೇ ಸರಿಯಾದ ಮಾರ್ಗ. ಭಗವಂತನೂ ಇಲ್ಲಿ "ನನ್ನ ಪ್ರಸಾದದಿಂದ ಸರ್ವದುರ್ಗಗಳನ್ನೂ ದಾಟುವೆ" ಎಂದು ವಾಗ್ದಾನವಿತ್ತಿರುತ್ತಾನೆ", ನಾವೇಕೆ ಈ ವಾಗ್ದಾನವನ್ನು ಉಪಯೋಗಿಸಿಕೊಳ್ಳಬಾರದು?

ದುರ್ಗಗಳನ್ನು ದಾಟುವದಕ್ಕೆ ಬರಿಯ ನಮ್ಮ ಬಲವು ಸಾಲದು; ಭಗವಂತನ ಪ್ರಸಾದವು ಅತ್ಯವಶ್ಯವಾಗಿರುತ್ತದೆ. "ಎಂಥ ಕಷ್ಟವು ಬಂದರೂ ನಾನೇ ನನ್ನ ಮನಶ್ಶಕ್ತಿಯಿಂದ ಅದನ್ನು ದಾಟಬಲ್ಲೆನು" ಎಂದು ಕೊಚ್ಚಿಕೊಳ್ಳುವವರು ಕೆಲವರು ಉಂಟು. ಆದರೆ ಮನುಷ್ಯನ ಈ ಅಲ್ಪಮನಸ್ಸು ಎಷ್ಟರದು? ಬಿದಿರಿನ ಗಳುವಿನ ತೆಪ್ಪದ ಮೇಲೆ ಕುಳಿತು ಸಾಗರವನ್ನು ದಾಟುವೆವೆಂಬ ಹುಚ್ಚರಂತೆ ನಮ್ಮ ಮನೋಬಲದಿಂದ ಕಷ್ಟವನ್ನೆಲ್ಲ ದಾಟುವೆವೆನ್ನುವವರೂ ಕೊನೆಗೆ ದುಃಖದಲ್ಲಿ ಮುಳುಗುವರು. ಮನಸ್ಸಿಗೆ ಎಂಥ ಕಷ್ಟವನ್ನಾದರೂ ದಾಟುವ ಅಥವಾ ಸಹಿಸುವ ಶಕ್ತಿಯು ಭಗವಚ್ಚಿತ್ತತೆಯಿಂದ ಬರುತ್ತದೆ. ಚಿತ್ತವನ್ನು ಎಡೆಬಿಡದೆ ಭಗವಂತನಲ್ಲಿಯೇ ನಿಲ್ಲಿಸಿಕೊಳ್ಳುವ ಮಹನೀಯರಿಗೆ ಕಷ್ಟಗಳೆಂಬ ದುರ್ಗಗಳು ಎಷ್ಟೇ ಎತ್ತರವಾಗಿ ಕಂಡರೂ ಅವುಗಳನ್ನು ಸಣ್ಣಸಣ್ಣ ಮಣ್ಣುಗುಪ್ಪೆಗಳಂತೆ ಕಂಡು ದಾಟಿಬಿಡುವ ಶಕ್ತಿಯು ಬರುತ್ತದೆ. ಈ ಕಷ್ಟಗಳು ಮನಸ್ಸಿನ ದುಃಖಗಳಾಗಲಿ, ದುರಾಶೆಯ ಕಾಟಗಳಾಗಿರಲಿ, ಭೀತಿಶಂಕೆಗಳಾಗಿರಲಿ, ರೋಗರುಜಿನಗಳಾಗಿರಲಿ, ಧನದ ನಷ್ಟಗಳಾಗಿರಲಿ–ಎಲ್ಲಾ ಕಷ್ಟಗಳನ್ನೂ ಭಗವಂತನ ಪ್ರಸಾದದಿಂದ ದಾಟಿಬಿಡಬಹುದು; ಸರ್ವದುರ್ಗಗಳನ್ನೂ ದಾಟುವದಕ್ಕೆ ಒಂದೇ ಸಾಧನ; ಭಗವಂತನ ಪ್ರಸಾದವೇ ಆ ಸಾಧನವು. ಭಗವಂತನ ಪ್ರಸಾದವು ಪ್ರಾಪ್ತವಾಗುವದಕ್ಕೆ ಭಗವಚ್ಚಿತ್ತತೆಯೇ, ಭಗವಂತನ ಉಪಾಸನೆಯೇ, ಉಪಾಯವು. ನಮ್ಮ ಜೀವನದ ನೆಮ್ಮದಿಗೆ ಭಂಗವನ್ನು ತರುವ ಕಷ್ಟಗಳು ಕಾಣಿಸಿಕೊಂಡಾಗ, ನಮ್ಮ ಇಷ್ಟಾರ್ಥಗಳನ್ನು ನೆರವೇರಿಸಿಕೊಳ್ಳುವದಕ್ಕೆ ನಾವು ಮಾಡುವ ಪ್ರಯತ್ನಗಳಿಗೆ ಅಡ್ಡಿ ಆತಂಕಗಳು ಎದ್ದೆದ್ದು ಕಾಣಿಸಿಕೊಳ್ಳುವಾಗ, ಆ ಕಷ್ಟಪರಂಪರೆಗಳನ್ನೂ ವಿಘ್ನಪರಂಪರೆಗಳನ್ನೂ ನಮ್ಮ ಬಲವನ್ನು ಉಪಯೋಗಿಸಿ ಎದುರಿಸುವೆವೆಂದೂ ಚದುರಿಸುವೆವೆಂದೂ ಸಂಕಲ್ಪಿಸುವದು ಮೂರ್ಖತನವು. ಹಾಗೆ ಮಾಡಿದಂತೆಲ್ಲ ಆ ಕಷ್ಟಗಳು ಇನ್ನಷ್ಟು ಹೆಚ್ಚುವವು; ಇದು ನಮ್ಮ ಅನುಭವದಲ್ಲಿ ಹಲವು ವೇಳೆಗಳಲ್ಲಿ ಕಂಡುಬಂದಿದ್ದರೂ ಮತ್ತೆಮತ್ತೆ ನಾವು ಅದೇ ತಪ್ಪುಗಳನ್ನೇ ಮಾಡುತ್ತಿರುವೆವು. ಈ ಸಂದರ್ಭಗಳಲ್ಲಿ ನಾವು ನಿಜವಾಗಿ ಮಾಡಬೇಕಾದದ್ದು ಇಷ್ಟೇ, ಕೂಡಲೆ ನಮ್ಮ ಹೃದಯದಲ್ಲಿ ನಮ್ಮ ಬಳಿಯಲ್ಲಿಯೇ ಇರುವ ಭಗವಂತನನ್ನು ನೆನಪಿಸಿಕೊಳ್ಳಬೇಕು. ಆ

ಭಗವಂತನಲ್ಲಿ ಚಿತ್ತವನ್ನು ಇಟ್ಟುಕೊಳ್ಳಬೇಕು. ಅದರಿಂದ ಭಗವಂತನ ಪ್ರಸಾದರೂಪವಾಗಿ ನಮ್ಮೊಳಗಿಂದ ಬಲವು ಎದ್ದುಕಾಣಿಸಿಕೊಳ್ಳುವದು; ಸೂರ್ಯನ ಕಿರಣಕ್ಕೆ ಕರಗುವ ಮಂಜಿನಂತೆ ಕಷ್ಟಗಳು ಮಾಯವಾಗುವವು.

ಭಗವಂತನನ್ನು ಕಾಣದವರು ಅವನಲ್ಲಿ ಚಿತ್ತವನ್ನು ಹೇಗೆ ಇಟ್ಟುಕೊಳ್ಳಬೇಕು?–ಎಂದು ಕೆಲವರು ಕೇಳುವರು. ಆದರೆ ಕಾಣದ ಕೇಳದ ತತ್ತ್ವವನ್ನು ಚಿಂತಿಸಬೇಕೆಂದೇನೂ ನಾವು ಹೇಳುತ್ತಿಲ್ಲ. ಭಗವಂತನೇ ಗೀತೆಯಲ್ಲಿ ಅಪ್ಪಣೆ ಕೊಡಿಸಿರುವಂತೆ, ಸದ್ಗುರುಗಳಾದವರೂ ಉಪದೇಶಿಸುವಂತೆ, ನಿಮ್ಮ ಮನಸ್ಸಿನಲ್ಲಿ ಆಗುವ ಭಗವಂತನ ಉತ್ತಮಕಲ್ಪನೆಯನ್ನು ಮಾಡಿಕೊಳ್ಳಿರಿ. ಆ ಕಲ್ಪನೆಯನ್ನು ಬಿಡದೆ ಚಿಂತಿಸುತ್ತಿರಿ. ಕಾಲಕ್ರಮದಲ್ಲಿ ನಿಮಗೆ ಭಗವಂತನ ಪರಮಾರ್ಥತತ್ತ್ವದಲ್ಲಿ ವಿಶ್ರಾಂತಿಯು ದೊರಕುವದು; ಉಪಾಸನೆಯು ಗಟ್ಟಿಯಾಗುವದು. ಭಗವಂತನು "ನನ್ನಲ್ಲಿಯೇ ಮನಸ್ಸನ್ನಿಡು, ನನ್ನಲ್ಲಿಯೇ ಬುದ್ಧಿಯನ್ನಿಡು; ಹಾಗಾದರೆ ನನ್ನಲ್ಲಿಯೇ ಇನ್ನುಮೇಲೆ ವಾಸಮಾಡಿಕೊಂಡಿರುವೆ, ಇದಕ್ಕೆ ಸಂಶಯವಿಲ್ಲ" ಎಂದಿರುತ್ತಾನಷ್ಟೆ. ತಿಳಿದವರು ಇದನ್ನೇ ಉಪಾಸನೆ ಎಂದು ಕರೆಯುವರು. ಭಗವಂತನ ಹೊರತು ಮತ್ತೇನೂ ನಿಮ್ಮ ಮನಸ್ಸನ್ನಾಗಲಿ ಬುದ್ಧಿಯನ್ನಾಗಲಿ ಸೆಳೆಯಕೂಡದು. ಹಾಗೆ ನಿಮ್ಮ ಚಿತ್ತವನ್ನು ಭಗವಂತನಲ್ಲಿಯೇ ಇಟ್ಟುಕೊಂಡಿದ್ದರೆ ನೀವು ಎಂದೆಂದಿಗೂ ಭಗವಂತನಲ್ಲಿಯೇ ವಾಸವಾಗಿದ್ದಂತಾಗುವದು. ಒಂದು ಸಲ ಭಗವಂತನ ಕಡೆಗೆ, ಒಂದು ಸಲ ವಿಷಯಗಳ ಕಡೆಗೆ, ತಿರುಗುವ ಚಿತ್ತವು ನಿಮಗೆ ಒಳಗಿನ ಬಲವನ್ನು ಎಬ್ಬಿಸಿಕೊಡಲಾರದು. ಯಾವಾಗ ಭಗವಂತನಲ್ಲಿಯೇ ನಿವಾಸಮಾಡಿಕೊಂಡು, ನೆಲಸಿಬಿಟ್ಟಿರುವಿರೋ, ಆಗ ನಿಮ್ಮೊಳಗೇ ಅವಿತುಕೊಂಡಿದ್ದ ಬಲವು ನಿಮ್ಮದಾಗುವದು; ಆಗ ನೀವು ಎಂಥ ದುರ್ಗಗಳನ್ನಾದರೂ ಸುಲಭವಾಗಿ ದಾಟಿಬಿಡಲು ಶಕ್ತರಾಗುವಿರಿ. ನಾವು ತಿಳಿದಿರಲಿ ತಿಳಿಯದಿರಲಿ ಭಗವಂತನಲ್ಲಿಯೇ ಇರುತ್ತಿರುವೆವು; ಹುಟ್ಟಿದ ಪ್ರಾಣಿಗಳಿಗೆಲ್ಲ ಭಗವಂತನೇ ಆಸರೆಯಾಗಿರುತ್ತಾನೆ. ಆದರೆ "ನಾನು ಭಗವಂತನಲ್ಲಿ ವಾಸವಾಗಿರುತ್ತೇನೆ" ಎಂಬ ಭಾವನೆಯು ಯಾರಿಗೆ ಬರುವದೋ ಅವರು ಮಾತ್ರ ಭಗವಂತನ ಪುರದಲ್ಲಿ ನಿವಾಸಿಗಳಾಗುವರು. ಅವರಿಗೆ ಮಾತ್ರ ಆತನ ಅಭಯಹಸ್ತದ ಪ್ರಸಾದವು ದೊರೆಯುವದು; ಅವರು ಮಾತ್ರವೇ ಈ ಜೀವನದಲ್ಲಿ ಎಂಥ ದುರ್ಗಗಳನ್ನಾದರೂ ದಾಟುವದಕ್ಕೆ ಶಕ್ತರಾಗಿರುವರು.

ಭಗವಂತನಲ್ಲಿಯೇ ವಾಸಮಾಡಿಕೊಂಡಿರುವದಕ್ಕಿಂತ ಮೊದಲು ನಾವು ಆತನನ್ನು ಸೇರುವದಕ್ಕೆ ಪ್ರಯತ್ನಮಾಡುತ್ತಿರಬೇಕು. ಈ ಪ್ರಯತ್ನವು ಹೇಗಿರಬೇಕು?–ಎಂದರೆ ಭಗವಂತನು ಹೇಳುತ್ತಾನೆ: "ನನ್ನಲ್ಲಿಯೇ ಮನಸ್ಸಿಡು, ನನ್ನ ಭಕ್ತನಾಗಿರು, ನನ್ನ ಯಾಗವನ್ನು ಮಾಡು, ನನ್ನನ್ನೇ ನಮಸ್ಕರಿಸು; ಹೀಗೆ ಮಾಡುತ್ತಿದ್ದರೆ ಸತ್ಯವಾಗಿಯೂ ನನ್ನನ್ನು ಸೇರುವೆ." ಉಪಾಸನೆಯ ಪ್ರಯತ್ನವೇ ಇದು. ಭಗವಂತನನ್ನು ಪ್ರತಿದಿನವೂ

ಸ್ತೋತ್ರಮಾಡುವದು, ಆತನನ್ನು ನಮಸ್ಕರಿಸುವದು, ಆತನ ನಾಮವನ್ನು ಜಪಿಸುತ್ತಿರುವದು– ಹೀಗೆ ಆತನ ಪ್ರೇಮವನ್ನು ಸಂಪಾದಿಸಿಕೊಳ್ಳುವದಕ್ಕೆ ಪ್ರಯತ್ನಮಾಡುತ್ತಿರಬೇಕು. ಆ ಭಗವಂತನು ಈಗ, ಇಲ್ಲಿ, ನಮ್ಮೆದುರಿಗೇ ಇರುತ್ತಾನೆ–ಎಂಬ ಭಾವನೆಯನ್ನು ಅಡಿಗಡಿಗೂ ಮನದಂದುಕೊಳ್ಳುತ್ತಿರಬೇಕು. ಹಾಗಾದರೆ ಭಗವಂತನನ್ನೇ ನಾವು ಸೇರುವೆವು. ಭಗವಂತನು ಇಂಥವರಿಗೆ "ನೀನು ನನ್ನನ್ನೇ ಸೇರುವೆ; ಸತ್ಯವಾಗಿ ಆಣೆಮಾಡಿಹೇಳುತ್ತೇನೆ, ಏಕೆಂದರೆ ನೀನು ನನಗೆ ಪ್ರಿಯನಾಗಿರುವೆ" ಎಂದು ಪ್ರೋತ್ಸಾಹವನ್ನು ಕೊಡುತ್ತಿರುವನು.

ನಾವು ಈಗಾಗಲೆ ಕಷ್ಟಗಳ ನಡುವೆ ಸಿಕ್ಕಿಕೊಂಡುಬಿಟ್ಟಿರುತ್ತೇವೆ. ಅವುಗಳು ನಮ್ಮನ್ನು ಗೋಳುಗುಟ್ಟಿಸುತ್ತಿವೆ. ಇಂಥ ಸಂದರ್ಭದಲ್ಲಿ ನಾವು ಮನಸ್ಸನ್ನೂ ಬುದ್ಧಿಯನ್ನೂ ಭಗವಂತನಲ್ಲಿ ನಿಲ್ಲಿಸುವದು ಹೇಗೆ? ನಾವು ಪ್ರಯತ್ನಮಾಡಿದರೂ ಅವು ನಮ್ಮ ಕಷ್ಟಗಳಿಗೇ ಹತ್ತಿಕೊಂಡಿರುವವಲ್ಲ!–ಎಂದು ಕೆಲವರು ಕೇಳಬಹುದು. ಇದು ನಿಜ. ಆದರೆ "ಭಗವಂತ, ಈ ಕಷ್ಟಗಳನ್ನು ದಾಟುವ ಶಕ್ತಿಯನ್ನು ಕೊಡುವ ಭಾರವು ನಿನ್ನದು; ಕಷ್ಟಗಳನ್ನು ನಾನು ಸಹಿಸಲೇ ಬೇಕೆನ್ನುವದು ನಿನ್ನ ಸಂಕಲ್ಪವಾಗಿದ್ದರೆ ಅವನ್ನು ಎದೆಗೆಡದೆ ಸಹಿಸಿಕೊಳ್ಳುವ ಶಕ್ತಿಯನ್ನಾದರೂ ಕೊಡು!" ಎಂದು ಎಲ್ಲರೂ ಪ್ರಾರ್ಥಿಸಬಹುದಾಗಿದೆ. ಕೆಲವುವೇಳೆ ಭಗವಂತನ ಪ್ರಾರ್ಥನೆಯಿಂದ ಯಾವ ಫಲವೂ ಆಗಿಲ್ಲವೆಂದು ತೋರಬಹುದು. ಆದರೆ ಅಂಥ ಸಂದರ್ಭದಲ್ಲಿ ಪ್ರಯತ್ನವನ್ನುಮಾತ್ರ ಬಿಡಬಾರದು. ಪ್ರಾರ್ಥನೆಯನ್ನು ಮಾಡುತ್ತಾಹೋದಹಾಗೆಲ್ಲ, ನಮ್ಮ ಮನಸ್ಸು ಶಾಂತವಾಗುತ್ತದೆ. ಇದೇ ಭಗವಂತನು ಮಾಡುವ ಮೊದಲನೆಯ ಅನುಗ್ರಹವು. ಬಳಿಕ ಮನಸ್ಸೂ ಬುದ್ಧಿಯೂ ಭಗವಂತನಲ್ಲಿ ನಿಲ್ಲುವದಕ್ಕೆ ಸಿದ್ಧವಾಗುತ್ತವೆ. ಇದು ಎರಡನೆಯ ಅನುಗ್ರಹವು. ಆಮೇಲೆ ತೀರ ಕಟ್ಟಕಡೆಯಲ್ಲಿ ಅನಿರೀಕ್ಷಿತವಾಗಿ ನಮಗೆ ಬಂದಿದ್ದ ಕಷ್ಟವು ಪಾರಾಗುತ್ತದೆ. ಅದು ಮೂರನೆಯ ಅನುಗ್ರಹವು.

ಕೆಲವು ವೇಳೆಗಳಲ್ಲಿ ಪ್ರಾರ್ಥಿಸಿಪ್ರಾರ್ಥಿಸಿ ಸಾಕಾಗಿ "ಭಗವಂತ, ನಿನ್ನ ಇಷ್ಟವಿದ್ದದ್ದು ಆಗಲಿ" ಎಂದು ಕೈಬಿಡುವ ಹೊತ್ತಿಗೆ ಸರಿಯಾಗಿ ಕಷ್ಟಗಳು ಪಾರಾಗುವದೂ ಉಂಟು. ಇದೇಕೆಂದರೆ ನಮ್ಮ ಪ್ರಾರ್ಥನೆಯಲ್ಲಿ ನಮ್ಮ ಆತ್ಮನಿವೇದನೆಯು ಪೂರ್ಣವಾಗಿ ಆಗದಿದ್ದದ್ದೇ ಅಡ್ಡಿಯಾಗಿತ್ತೆಂದು ತಿಳಿಯಬೇಕು. ಭಗವಂತನ ಪ್ರಸಾದವು ಯಾವಾಗಲೂ ಆಗುತ್ತಿದ್ದರೂ ನಮ್ಮ ಸ್ವಾರ್ಥಬುದ್ಧಿಯು ಅದಕ್ಕೆ ಅಡ್ಡಿಯಾಗಿರುತ್ತದೆ. ಆದ್ದರಿಂದ ಮನಃಪೂರ್ವಕವಾಗಿ ಪ್ರಾರ್ಥಿಸಿದ ಬಳಿಕ ಫಲವು ಯಾವದು ಆಗಬೇಕೋ ಆಗಲಿ ಎಂದು ಆತನಮೇಲೆಯೇ ಭಾರವನ್ನು ಹಾಕಿ ಸುಮ್ಮನಾಗಬೇಕು. ಆದರೆ ಯಾವ ಪ್ರಯತ್ನವನ್ನೂ ಮಾಡದೆ "ಭಗವಂತನು ಹೇಗಾದರೂ ಕೊನೆಗೆ ಕಾಪಾಡಿಯೇತೀರುತ್ತಾನಲ್ಲ!" ಎಂದು ಸುಮ್ಮನೆ ಕೈಕಟ್ಟಿಕೊಂಡು ಕೂರುವ ಸೋಮಾರಿಗಳಿಗೆ ಈ ಅನುಗ್ರಹವು ದೊರಕುವದಿಲ್ಲವೆಂದು ಭಗವಂತನನ್ನೇ ನಂಬಿರುವ ಶ್ರದ್ಧಾಳುಗಳಿಗೆ, ಭಗವಂತನನ್ನೇ ಚಿಂತಿಸುತ್ತಿರುವ ಸಾಧಕರಿಗೆ, ಇಂದಿಲ್ಲದಿದ್ದರೆ

ನಾಳೆ, ನಾಳೆಯಲ್ಲದಿದ್ದರೆ ನಾಡಿದ್ದು, ಎಷ್ಟೋ ವೇಳೆಗಳಲ್ಲಿ ತೀರ ಕೊನೆಯದಿನದ ಕೊನೆಯ ಮುಹೂರ್ತದಲ್ಲಿ ಕಷ್ಟಗಳ ಪರಾಭವವಾಗುವದೂ ಉಂಟು. ಆದ್ದರಿಂದಲೇ ಭಗವಂತನು "ಬುದ್ಧಿಯೋಗವನ್ನು ಆಶ್ರಯಿಸಿಕೊಂಡು ಸತತವಾಗಿ ನನ್ನಲ್ಲಿಯೇ ಚಿತ್ತವಿಟ್ಟಿರು" ಎಂದು ಹೇಳಿರುತ್ತಾನೆ.

ಆದರೆ ಕೊನೆಗೆ ಯಾವ ಸಹಾಯವೂ ದೊರಕಿಲ್ಲವೆಂದೇ ಇಟ್ಟುಕೊಳ್ಳಿರಿ. ಆಗ ಏನುಮಾಡಬೇಕು? ಆಗಲೂ ಏತಕ್ಕೂ ಅಂಜದೆ, "ಆಗಲಿ, ಭಗವಂತನಿದಾನೆ, ಆತನ ಬೆಂಬಲವಿರುವಾಗ ಈ ಕಷ್ಟವು ಏನು ಮಾಡೀತು?"–ಎಂದು ಧೈರ್ಯವನ್ನೂ ತಾಳ್ಮೆಯನ್ನೂ ಸುಮ್ಮಾನವನ್ನೂ ಬಿಡದೆ ಈ ಕಷ್ಟವನ್ನು ಅನುಭವಿಸುವಂತೆ ಅನುಗ್ರಹಿಸೆಂದು ಆ ಭಗವಂತನಲ್ಲಿ ಮೊರೆಯಿಡಬೇಕು. ಆಗ ಆ ಬಂದಿದ್ದ ಕಷ್ಟವು ಹಲ್ಲುತೆಗೆದ ವಿಷವಿಲ್ಲದ ಹಾವಿನಂತೆ ನಮ್ಮನ್ನು ಯಾವ ಬಗೆಯಿಂದಲೂ ಅಲುಗಾಡಿಸಲಾರದೆ ಕೆಲವು ದಿನಗಳು ತೋರಿಕೊಂಡು ತಾನೇ ಹಿಂಜರಿಯುವದು.

# 31. ಸತ್ಪುರುಷರ ಸಂಗ

* ಇತ್ತೀಚೆಗೆ ಅಧ್ಯಾತ್ಮವಿಚಾರದಲ್ಲಿ ಉಪನ್ಯಾಸಗಳೂ ಉಪದೇಶಗಳೂ ನಿರೂಪಣೆಗಳೂ ಹೇರಳವಾಗಿ ಆಗುತ್ತಿರುತ್ತವೆ. ಭರತಖಂಡದಲ್ಲಿ ಬಹು ಹಿಂದಿನ ಕಾಲದಲ್ಲಿ ನಡೆದುಬಂದಿರುವ ಮಠಗಳ ಜೊತೆಗೆ ಈಗ ಹಲವು 'ಆಶ್ರಮಗಳು' ಎದ್ದುಕೊಂಡಿರುತ್ತವೆ. ಅವುಗಳಲ್ಲಿ ಸಾಧುಗಳೂ ಸಂನ್ಯಾಸಿಗಳೂ ಉಪದೇಶಗಳ ಜೊತೆಗೆ ಪುರಾಣಗಳನ್ನೂ ಭಜನೆಗಳನ್ನೂ ಕೀರ್ತನೆಗಳನ್ನೂ ಏರ್ಪಡಿಸಿರುತ್ತಾರೆ. ಸಾಲದ ಕಡಿಮೆಗೆ ವರ್ತಮಾನಪತ್ರಿಕೆಗಳಲ್ಲಿಯೂ ನಿಯತಕಾಲಿಕ ಪತ್ರಿಕೆಗಳಲ್ಲಿಯೂ ಅಧ್ಯಾತ್ಮವಿಚಾರದ ಲೇಖನಗಳು ಆಗಾಗ್ಗೆ ಪ್ರಕಟವಾಗುತ್ತಲೇ ಇರುತ್ತವೆ. ಜನರು 'ಸಂಘಗಳು', 'ಸಮಾಜಗಳು' ಮುಂತಾದ ಬೇರೆಬೇರೆಯ ಹೆಸರಿನಿಂದ ಅಧ್ಯಾತ್ಮ ವಿಚಾರದ ಕಾಲಕ್ಷೇಪಕ್ಕಾಗಿ ಒಟ್ಟುಗೂಡುತ್ತಿರುತ್ತಾರೆ. ಅಲ್ಲಿ ಉತ್ಸವಗಳು ಅನುಷ್ಠಾನಗಳು–ಮುಂತಾದ ಕಾರ್ಯಗಳ ವ್ಯವಸ್ಥೆಯನ್ನು ಮಾಡುತ್ತಿರುತ್ತಾರೆ. ಆದರೂ ಜನಸಾಮಾನ್ಯಕ್ಕೆ ಇನ್ನೂ ಅಧ್ಯಾತ್ಮವಿದ್ಯೆಯಲ್ಲಿ ಸವಿಹತ್ತಿರುವದಿಲ್ಲ; ಇಷ್ಟೊಂದು ಮಹಾಪ್ರಯತ್ನಗಳ ಫಲವಾಗಿ ನಮ್ಮ ಜನಾಂಗದ ಧಾರ್ಮಿಕಬುದ್ಧಿಯೇನೂ ಮುಂದುವರಿದಿರುವದಿಲ್ಲ. ಇದರ ಕಾರಣವೇನು?

ಎಷ್ಟೋ ಸಂಘಗಳೂ ಸಮಾಜಗಳೂ ಅಧ್ಯಾತ್ಮವಿದ್ಯೆಯಲ್ಲಿ ಆದರವನ್ನು ತೋರಿಸುತ್ತದೆ. ಆಗಾಗ್ಗೆ ಮಿತ್ರಮಂಡಲಿಯನ್ನು ಸೇರಿಸುವದು, ತಮ್ಮತಮ್ಮಲ್ಲಿಯೇ ಒಬ್ಬರು

* ಸಂಪುಟ 18, ಸಂಚಿಕೆ 7, ಮಾರ್ಚಿ 1949, ಪುಟ 145–150

ಯಾವದಾದರೊಂದು ಗ್ರಂಥದ ಭಾಗವನ್ನು ಅಥವಾ ಭಾಗಗಳನ್ನು ಓದುವದು, ಅರ್ಥವನ್ನು ಹೇಳುವದು, ವಿಷಯಗಳನ್ನು ಚರ್ಚಿಸುವದು, ಪುಸ್ತಕ ಭಂಡಾಗಾರಗಳಿಗೆ ಹೊಸ ಹೊಸ ಪುಸ್ತಕಗಳನ್ನು ತರಿಸುವದು, ಕರಪತ್ರಗಳನ್ನು ಹಂಚುವದು, ವಾರ್ಷಿಕೋತ್ಸವಗಳನ್ನು ನಡೆಸುವದು, ಭಾರಿಭಾರಿಯ ಸರ್ಕಾರಿಯ ಉದ್ಯೋಗದಲ್ಲಿರುವವರನ್ನು ಕರೆಯಿಸಿ ಅಧ್ಯಕ್ಷಸ್ಥಾನದಲ್ಲಿ ಕುಳ್ಳಿರಿಸುವದು, ವರ್ಷದ ಚಟುವಟಿಕೆಗಳನ್ನು ವೃತ್ತಾಂತಪತ್ರಿಕೆಗಳ ಮೂಲಕವೂ ಕರಪತ್ರಗಳ ಮೂಲಕವೂ ಜನರಿಗೆ ತಿಳಿಯಪಡಿಸುವದು-ಇಂಥ ಕಾರ್ಯಗಳು ಈ ಸಂಘಗಳ ಅಥವಾ ಸಮಾಜಗಳ ಕೃತ್ಯವಾಗಿರುತ್ತದೆ. ಆದರೆ ಇಷ್ಟೆಲ್ಲ ಆದರೂ ಅಧ್ಯಾತ್ಮವಿಚಾರದಲ್ಲಿ ಮುಖ್ಯವಾದ ಒಂದು ಮರ್ಮವು ಈ ಸಂಘಗಳಿಗೆ ತಿಳಿದಿರುವದಿಲ್ಲ. ಯಾವ ಉಪದೇಶವೇ ಆಗಲಿ ಆತ್ಮಸಂಸ್ಪರ್ಶವಿಲ್ಲದೆ ಇದ್ದರೆ ಕಾರ್ಯಕಾರಿಯಾಗುವದಿಲ್ಲ. ಪರಮೇಶ್ವರನು ನಮ್ಮಗಳೆಲ್ಲರ ಹೃದಯದಲ್ಲಿಯೂ ಇರುವನು. ಆತನಿಗೂ ನಮಗೂ ಸಂಬಂಧವನ್ನು ಮಾಡಿಕೊಳ್ಳದೆ ನಾವು ಎಷ್ಟೇ ಜನವನ್ನು ಗುಂಪುಕೂಡಿಸಿದರೂ, ವಾಗ್ಮಿತಾಪೂರ್ಣವಾದ ಎಂಥ ಗಂಭೀರ ಭಾಷಣಗಳನ್ನು ಮಾಡಿದರೂ, ಎಂಥ ಉತ್ಸಾಹಭರಿತವಾದ ಉತ್ಸವಗಳನ್ನು ಏರ್ಪಡಿಸಿದರೂ, ಎಂಥ ಚಿತ್ತಾಕರ್ಷಕವಾದ ಕೀರ್ತನಗಳನ್ನು ಮಾಡಿದರೂ ಅವುಗಳಿಂದ ಜನರ ಚಿತ್ತದ ಮೇಲೆ ಯಾವ ನೆಲೆನಿಲ್ಲುವ ಪರಿಣಾಮವನ್ನೂ ಉಂಟುಮಾಡುವದಿಲ್ಲ.

ಇದಕ್ಕೆ ಕಾರಣವೇನೆಂದರೆ ಸತ್ಯಜ್ಞಾನಾನಂದರೂಪನಾದ ಪರಮೇಶ್ವರನೇ ನಮ್ಮಗಳೆಲ್ಲರ ಗುರುವಾಗಿರುತ್ತಾನೆ. ಕೆಲವು ವಿದ್ವಾಂಸರು ವರ್ಷಗಟ್ಟಲೆಯಾಗಿ ಉಪನ್ಯಾಸಗಳನ್ನು ಮಾಡುತ್ತಿದ್ದರೂ ಅವರ ಉಪನ್ಯಾಸದಿಂದ ಯಾವ ಶ್ರೋತೃಗಳ ಮೇಲೂ ನಿಲ್ಲುವಂಥ ಪರಿಣಾಮವಾಗಿರುವದಿಲ್ಲ. ಇನ್ನೂ ಕೆಲವರು ವರ್ಷಗಟ್ಟಲೆಯಾಗಿ ಸಭೆಗಳಿಗೆ ಹೋಗುತ್ತಲೂ ಉಪನ್ಯಾಸಗಳನ್ನೂ ಪುರಾಣಗಳನ್ನೂ ಕೇಳುತ್ತಲೂ ಉತ್ತಮವಾದ ಅಧ್ಯಾತ್ಮದ ಉಪದೇಶಗಳುಳ್ಳ ಸದ್ಗ್ರಂಥಗಳನ್ನು ಓದುತ್ತಲೂ ಇದ್ದರೂ ಅವರಲ್ಲಿ ಹಿಂದಿಗಿಂತ ಈಗ ಯಾವ ಸತ್ಪರಿಣಾಮವೂ ಆದದ್ದು ಕಾಣಬರುತ್ತಿರುವದಿಲ್ಲ. ಇದಕ್ಕೆ ಕಾರಣವೇನೆಂದರೆ ಅಧ್ಯಾತ್ಮವಿಚಾರವನ್ನು ನಾಲಗೆಯ ತುದಿಯಿಂದ ಹೇಳುತ್ತಿರುವದರಿಂದ ಅಥವಾ ಎಡೆಬಿಡದೆ ಕಿವಿಗೆ ಹಾಕಿಕೊಳ್ಳುತ್ತಿರುವದರಿಂದ ತತ್ತ್ವವು ತಮಗೆ ಸಿಕ್ಕುವದೆಂದು ಭಾವಿಸಿರುವ ತಪ್ಪುತಿಳಿವಳಿಕೆಯೇ.

ಪರಮಾರ್ಥವನ್ನು ಯಾರಿಗೂ ಯಾರೂ ಉಪದೇಶಮಾಡುವ ಹಾಗಿರುವದಿಲ್ಲ. ಏಕೆಂದರೆ ಅದು ಉಪದೇಶಕ್ಕೆ ಅಥವಾ ಶ್ರವಣಕ್ಕೆ ವಿಷಯವಲ್ಲ. ಪರಮಾರ್ಥವೆಂದರೇನು?- ಎಂಬುದನ್ನು ನಿರ್ಣಯಿಸಿ ಲಕ್ಷಣವಾಕ್ಯದಿಂದ ಯಾರೂ ತಿಳಿಸಲಾರರು. ಶ್ರುತಿಯಲ್ಲಿರುವ ಒಂದು ವಾಕ್ಯವು ಹೀಗಿದೆ:

**ಯತೋ ವಾಚೋ ನಿವರ್ತನ್ತೇ । ಅಪ್ರಾಪ್ಯ ಮನಸಾ ಸಹ ।**
**ಆನನ್ದಂ ಬ್ರಹ್ಮಣೋ ವಿದ್ವಾನ್ । ನ ಬಿಭೇತಿ ಕುತಶ್ಚನೇತಿ ॥**

"ವಾಕ್ಕು ಮುಂತಾದ ಕರಣಗಳು ಮನಸ್ಸಿನೊಡನೆ ಯಾವದನ್ನು ಮುಟ್ಟಲಾರದೆ ಹಿಂದಿರುಗುತ್ತವೆಯೋ ಆ ಬ್ರಹ್ಮದ ಆನಂದವನ್ನು ಅರಿತುಕೊಂಡವನು, ಏತಕ್ಕೂ ಹೆದರುವದಿಲ್ಲ". ಈ ವಾಕ್ಯದಲ್ಲಿ ಅಡಗಿರುವ ಅಭಿಪ್ರಾಯವನ್ನು ಸ್ವಲ್ಪ ಬಿಡಿಸಿನೋಡಿರಿ. ಪರಮಾರ್ಥತತ್ತ್ವಕ್ಕೆ ಬ್ರಹ್ಮವೆಂದು ಹೆಸರು. ಅದನ್ನು ಮಾತಿನಿಂದ ವರ್ಣಿಸುವದಕ್ಕೆ ಆಗುವದಿಲ್ಲ; ಯಾವ ಇಂದ್ರಿಯಗಳಿಂದಲೂ ಅರಿತುಕೊಳ್ಳುವದಕ್ಕೆ ಆಗುವದಿಲ್ಲ; ಕೊನೆಗೆ ಮನಸ್ಸಿನಿಂದ ಅದು ಇಂಥದ್ದೆಂದು ಕಲ್ಪಿಸುವ ಪ್ರತ್ಯಯವನ್ನು ಮಾಡಿಕೊಳ್ಳುವದಕ್ಕೂ ಬರುವದಿಲ್ಲ. ಆದರೂ ಅದು ನಮ್ಮೆಲ್ಲರ ಒಳಗೆ ಇರುವ ಆನಂದವಾಗಿರುತ್ತದೆ. ಅದನ್ನು ಅರಿತುಕೊಂಡವನು ಮತ್ತೇತಕ್ಕೂ ಅಂಜುವದಿಲ್ಲ.

ಇನ್ನೊಂದು ವಾಕ್ಯದಲ್ಲಿ ಹೀಗೆಂದಿದೆ: "ಯಾವನು ಹೃದಯಗುಹೆಯಲ್ಲಿ ಅಡಗಿರುವ ಆ ಪರಮಾರ್ಥವನ್ನು ಅರಿತುಕೊಳ್ಳುವನೋ ಅವನಿಗೆ ಸರ್ವಕಾಮಗಳೂ ಒಮ್ಮೆಗೇ ಸಿಕ್ಕುವವು". ತತ್ತ್ವವು ಉಪದೇಶಕ್ಕೆ ವಿಷಯವಲ್ಲ. ಮನಸ್ಸಿನಿಂದ ಚಿಂತಿಸುವದಕ್ಕೂ ವಿಷಯವಲ್ಲ; ಆದರೂ ಅದನ್ನು ನಾವು ನಮ್ಮ ಹೃದಯದ ಗವಿಯಲ್ಲಿ, ತೀರಒಳಗಡೆಯಲ್ಲಿ, ಕಂಡು ಆನಂದಿಸಬಹುದು, ಕೃತಕೃತ್ಯರಾಗಬಹುದು. ಆಪ್ತಕಾಮರಾಗಬಹುದು. ಆದ್ದರಿಂದ ತತ್ತ್ವವಿಚಾರದ ಸಂಘಗಳಲ್ಲಿ, ಅಥವಾ ಸಮಾಜಗಳಲ್ಲಿ, ನಾವು ತತ್ತ್ವವನ್ನು ನಿರೂಪಣೆಮಾಡಿ ಸಭಿಕರ ಮನಸ್ಸಿಗೆ ಅದನ್ನು ಹಿಡಿಯಿಸುವೆವೆಂಬ ಹೆಮ್ಮೆಯನ್ನು ಮೊದಲು ಬಿಡಬೇಕು. ಆದರೆ ಎಲ್ಲರಿಗೂ ಗುರುವಾಗಿರುವ ಆ ಪರಮಾತ್ಮನನ್ನು ಅವರವರ ಹೃದಯ ಗುಹೆಯಲ್ಲಿಯೇ ಅವರವರು ಕಂಡುಕೊಳ್ಳುವದಕ್ಕೆ ನಾವು ಸಹಯಮಾಡಬಹುದು. ಹಾಗೆ ಸಹಾಯಮಾಡುವದಕ್ಕೆ ನಾವು ಮೊಟ್ಟಮೊದಲು ನಮ್ಮ ಹೃದಯದಲ್ಲಿ ಆ ಪರಮಾತ್ಮನನ್ನು ಕಂಡುಕೊಳ್ಳಬೇಕು. ಆದ್ದರಿಂದ ಉಪನ್ಯಾಸಗಳಲ್ಲಿ ಪುರಾಣಶ್ರವಣಗಳಲ್ಲಿ, ಭಜನೆಗಳಲ್ಲಿ, ಕೀರ್ತನೆಗಳಲ್ಲಿ ನಾವು ಮಾಡಬೇಕಾದದ್ದು ಉಪನ್ಯಾಸದ ಟಿಪ್ಪಣಿಗಳು, ಪುರಾಣದ ಕಥೆಗಳು, ಭಜನೆಯ ಪದಗಳ ರಾಗತಾಳಗಳು, ಕೀರ್ತನೆಯ ಸಂವಿಧಾನಗಳು– ಇವನ್ನು ಗುರುತುಮಾಡಿಕೊಂಡು ಗಟ್ಟಿಮಾಡಿಕೊಳ್ಳುವದಲ್ಲ. ಆ ಸರ್ವಾತ್ಮನಾದ ಭಗವಂತನನ್ನು ನಮ್ಮ ಹೃದಯದೊಳಗೆ ನಾವು ಮೊದಲು ಕಂಡುಕೊಳ್ಳಬೇಕು; ಆತನ ಕೋಮಲಚರಣಗಳನ್ನು ನಾವು ನಿರಭಿಮಾನದಿಂದ ಮುಟ್ಟಬೇಕು. ಹಾಗಾದರೆ ನಮ್ಮಸುತ್ತಲೂ ಇರುವ ಜನರ ಹೃದಯದಲ್ಲಿ ಅದೇ ಭಗವಂತನು ಮೆಲ್ಲಮೆಲ್ಲನೆ ಮೈದೋರುವನು; ಅವರಿಗೆ ಆತ್ಮನ ದರ್ಶನಸ್ಪರ್ಶನಗಳು ಆಗುವದಕ್ಕೆ ಮೊದಲಾಗುವವು. ಯಾವದಾದರೊಂದು ಅಧ್ಯಾತ್ಮವಿಚಾರದ ಉಪನ್ಯಾಸವು ಸಭಿಕರಮೇಲೆ ಉತ್ತಮಪರಿಣಾಮಕಾರಿಯಾದರೆ, ಯಾವದಾದರೊಂದು ಪುರಾಣಶ್ರವಣದಲ್ಲಿ ಶ್ರೋತೃಗಳು

ಮನಮುಟ್ಟಿ ಕೇಳಿ ಮೈಮರೆತರೆ, ಯಾವದಾದರೊಂದು ಭಜನೆಯಲ್ಲಿ ಸೇರಿರುವ ಮಂಡಲಿಯವರು ಭಗವಂತನ ಸ್ಮರಣೆಯಿಂದ ಆನಂದವನ್ನು ಪಡೆದರೆ, ಅದಕ್ಕೆ ಮೂಲಚಾಲಕನ ಹೃದಯಸ್ಥಿತಿಯೇ ಕಾರಣವಾಗಿರುತ್ತದೆ. ಆತನು ತನ್ನ ಹೃದಯದಲ್ಲಿ ಭಗವಚ್ಚರಣವನ್ನು ಮುಟ್ಟಿದ್ದರ ಫಲವೇ ಆ ಸಭೆಯ, ಸಂಘದ ಅಥವಾ ಸಮಾಜದ ನಲ್ಮೆಗೆ ಕಾರಣವೆಂದು ತಿಳಿಯಬಹುದು.

ಸಭೆಯಲ್ಲಿ ಉಪನ್ಯಾಸಕನು ಅಥವಾ ಪುರಾಣಪ್ರವಚನಕಾರನು, ಅಥವಾ ಕೀರ್ತನಕಾರನು ಭಗವಂತನ ಸಂಸ್ಪರ್ಶವನ್ನು ಮಾಡಿದ್ದರೂ ಮಿಕ್ಕವರಿಗೆ ಅದನ್ನು ಉಪಯೋಗಿಸಿಕೊಳ್ಳುವ ಯೋಗ್ಯತೆ ಇಲ್ಲದಿದ್ದರೆ ಹೇಗೆ? ನಮ್ಮ ಮನಸ್ಸು ಇಂಥ ಸೂಕ್ಷ್ಮವಿಚಾರಗಳನ್ನು ತಿಳಿದುಕೊಳ್ಳುವ, ತಿಳಿದುಕೊಂಡರೂ ಉಪಯೋಗಿಸಿಕೊಳ್ಳುವ, ಸ್ಥಿತಿಯಲ್ಲಿಯೇ ಇಲ್ಲವಲ್ಲ!–ಎಂದು ಕೆಲವರು ಶಂಕಿಸುವರು. ತತ್ತ್ವವಿಚಾರಗಳನ್ನು ತಿಳಿದುಕೊಳ್ಳುವ ಸ್ಥಿತಿಯಲ್ಲಿದ್ದರೆ ಒಳ್ಳೆಯದೇ ಸರಿ; ಏಕೆಂದರೆ ಅಂಥವರಿಗೇ ಉಪನ್ಯಾಸಗಳ, ಪುರಾಣಶ್ರವಣಗಳ, ಕೀರ್ತನೆಗಳ, ಮತ್ತು ಭಜನೆಗಳ ಪೂರ್ಣವಾದ ಉಪಯೋಗವು ಆಗುತ್ತದೆ. ಆದರೆ ಅಂಥ ಯೋಗ್ಯತೆಯಿಲ್ಲದಿದ್ದರೂ ಚಿಂತೆಯಿಲ್ಲ. ಭಗವದ್ಭಕ್ತರಾದ ಮಹಾಮಹಿಮರ ಸನ್ನಿಧಿಯಲ್ಲಿದ್ದರೆ ಸಾಕು, ಅದರಿಂದಲೇ ಅವರಿಗೆ ಹೆಚ್ಚಿನ ಪ್ರಯೋಜನವಾಗುತ್ತದೆ. ಸಾಮಾನ್ಯವಾಗಿ ಕಾಡುಹರಟೆಯಿಂದ ವ್ಯರ್ಥ ಕಾಲಕ್ಷೇಪ ಮಾಡುವವರು ಕೂಡ ಭಜನಮಂದಿರದಲ್ಲಿ ಪ್ರೇಮಯುತವಾದ ಹಾಡಿನ ಇಂಪಿಗೆ ಕಿವಿಗೊಟ್ಟರೆ, ತಮಗೂ ತಿಳಿಯದಂತೆಯೇ ಭಗವದ್ಭಕ್ತಿಯ ಮಾಧುರ್ಯವನ್ನು ಸವಿಯುವ ಯೋಗ್ಯತೆಯನ್ನು ಸಂಪಾದಿಸಿಕೊಳ್ಳುವರು; ಭಗವಂತನ ಉತ್ತಮ ಗುಣಕರ್ಮಗಳನ್ನು ಕೊಂಡಾಡುವ ಪುರಾಣಿಕನ ವಚನವನ್ನು ಶ್ರವಣಮಾಡಿದಮಾತ್ರದಿಂದ ಭಗವಂತನ ಸನ್ನಿಧಿಯ ಸುಖವನ್ನು ಅನುಭವಿಸುವರು; ಸರ್ವತ್ರ ಸಮದರ್ಶನರಾದ ಮಹಾತ್ಮರ ಉಪದೇಶಗಳನ್ನು ಕೇಳಿದಮಾತ್ರದಿಂದ ಹಳೆಯ ಪಾಠಗಳನ್ನು ಪುನರಾವರ್ತನೆಮಾಡುವ ವಿದ್ಯಾರ್ಥಿಗಳಂತೆ ತತ್ತ್ವವಿಚಾರಕ್ಕೆ ಮನಸ್ಸನ್ನು ನೇರ್ಪಡಿಸಿಕೊಳ್ಳುವರು.

ಉಪನ್ಯಾಸವಿರಲಿ, ಇಲ್ಲದಿರಲಿ; ಪುರಾಣಶ್ರವಣವಾಗಲಿ, ಆಗದಿರಲಿ; ಭಜನೆಗೆ ಪ್ರಾರಂಭಿಸಿರಲಿ ಇಲ್ಲದಿರಲಿ; ಕೀರ್ತನೆಯು ಕಿವಿಗೆ ಬೀಳಲಿ ಬೀಳದಿರಲಿ; ಸಾಧುಸಂತರ, ಭಗವದ್ಭಕ್ತರ, ತತ್ತ್ವಜ್ಞಾನಿಗಳ, ದರ್ಶನಮಾತ್ರದಿಂದಲೇ ಜನರ ಮನಸ್ಸು ಎಷ್ಟೋ ಉತ್ಕೃಷ್ಟಸ್ಥಿತಿಯನ್ನು ಮುಟ್ಟುವದು. ಏಕೆಂದರೆ ಬೆಂಕಿಯ ಶಾಖವು ಯಾರಿಗೂ ಕಣ್ಣಿಗೆ ಕಾಣಿಸದೆಯೇ ಸುತ್ತಲೂ ಹರಡಿಕೊಳ್ಳುವಂತೆ ಆ ಮಹಾತ್ಮರ ಆತ್ಮಶಕ್ತಿಯ ಕಿರಣಗಳು ನಮ್ಮ ಅರಿವಿಲ್ಲದೆಯೇ ನಮ್ಮನ್ನು ಮುಸುಕಿಕೊಳ್ಳುವವು. ಸಾಧುಗಳು ದರ್ಶನದಿಂದಲೇ ಪವಿತ್ರಗೊಳಿಸುವರು ಎಂಬ ಸೂಕ್ತಿಯ ಮರ್ಮವಿದು.

ಜೀವನದಲ್ಲಿ ಸತ್ಸಂಗದ ಮಹತ್ತ್ವವು ಬಹಳ ಮೇಲಿನ ಮಟ್ಟದ್ದಾಗಿರುತ್ತದೆ. ದೊಡ್ಡವರ ಬಳಿಯಲ್ಲಿ ಕುಳಿತಿದ್ದರೆ ಅಷ್ಟರಿಂದಲೇ ನಮ್ಮ ತಾಪಗಳು ತಣ್ಣಗಾಗುವವು. ಅವರು ನಮ್ಮನ್ನು ಆರ್ದ್ರದೃಷ್ಟಿಯಿಂದ ನೋಡಿದರೆ ನಮ್ಮ ಪಾಪಗಳು ಮಾಯವಾಗುವವು. ಅವರ ಪುಣ್ಯತಮವಾದ ಮಾತುಗಳು ನಮ್ಮ ಕಿವಿಗೆ ಬಿದ್ದರೆ ನಮ್ಮ ಹೃದಯವನ್ನು ಸೋಮಾರಿತನದ ನಿದ್ರೆಯಿಂದ ಹೊಡೆದೆಬ್ಬಿಸುವವು. ಅವರ ಉಪದೇಶಕ್ಕೆ ಕಿವಿಗೊಟ್ಟರೆ ನಮ್ಮ ಅಂತಃಕರಣವು ಭಗವಂತನ ತತ್ತ್ವದ ಮನನಕ್ಕೆ ಅನುವಾಗುವದು. ಅವರ ಸೇವೆಗೆ ನಿಂತರೆ ನಮ್ಮ ಸ್ಥೂಲಸೂಕ್ಷ್ಮಶರೀರಗಳೆರಡೂ ಪುಟಕ್ಕೆ ಹಾಕಿದ ಚಿನ್ನದಂತೆ ಪರಿಶುದ್ಧ ವಾಗುವವು. ಅವರ ದಿವ್ಯವಾದ ನಡೆನುಡಿಗಳನ್ನು ಅನುಕರಿಸುವದಕ್ಕೆ ಹೊರಟರೆ ಭಗವಂತನ ಕಡೆಯ ತಂಗಾಳಿಯು ನಮ್ಮ ಕಡೆಗೆ ಬೀಸಿ ನವತರವಾದ ಸುಖವನ್ನೂ ಶಾಂತಿಯನ್ನೂ ತಂದುಕೊಡುವದು. ಕಾಲಕ್ರಮದಲ್ಲಿ ಆನಂದಸ್ವರೂಪನಾದ ಭಗವಂತನೇ ನಮ್ಮ ಹೃದಯದಲ್ಲಿ ನೆಲೆನಿಲ್ಲುವನು.

ಯಾರಿಗೆ ಸ್ವತಃ ಭಗವಂತನ ಧ್ಯಾನವನ್ನು ಮಾಡುವ ರೀತಿಯು ತಿಳಿಯದೆ ಇರುವದೋ ಯಾರಿಗೆ ಹೊರಗಿನ ಪ್ರಪಂಚವನ್ನು ಮರೆತು ತಮ್ಮ ಹೃದಯದೊಳಗೇ ಇದ್ದುಕೊಂಡಿರುವ ಪರಮಾತ್ಮನನ್ನು ಸೇರಿ ನಲಿಯುವ ಅಭ್ಯಾಸವು ಇನ್ನೂ ದಕ್ಕಿಲ್ಲವೋ, ಯಾರಿಗೆ ಮನಸ್ಸಿನ ಚದರಾಟವನ್ನು ನಿಲ್ಲಿಸಿಕೊಂಡು ಪರಮಾತ್ಮನ ಅನುಗ್ರಹವಾದ ಪರಶಾಂತಿಯನ್ನು ಅನುಭವಿಸುವ ಮಾರ್ಗವು ಸಿಕ್ಕಿಲ್ಲವೋ, ಅಂಥವರು ಅವಶ್ಯವಾಗಿ ಸತ್ಸಂಗಕ್ಕೆ ಹಾತುವರಿಯಬೇಕು; ಸಾಧುಸಂತರ ಸೇವೆಯಲ್ಲಿ ನಿರತರಾಗಿರುವದಕ್ಕೆ ಹಂಬಲಿಸಬೇಕು; ಸತ್ಪುರುಷರೆಂಬ ಕನ್ನಡಿಯಲ್ಲಿ ತಮ್ಮಲ್ಲಿರುವ ಕುಂದುಕೊರತೆಗಳನ್ನು ಕಂಡುಕೊಂಡು ಅವರಿಂದ ಉಪದಿಷ್ಟವಾದ ಮಾರ್ಗದಲ್ಲಿ ಸಾಧನವನ್ನು ಮಾಡುವ ಪ್ರಯತ್ನವನ್ನು ಅವಶ್ಯವಾಗಿ ಮಾಡಬೇಕು.

ಆದರೆ ಎಲ್ಲರಿಗೂ ವಿಷಯಗಳಲ್ಲಿ ಪೂರ್ಣವೈರಾಗ್ಯವು ಬಂದಿರುವದಿಲ್ಲ; ಅಧ್ಯಾತ್ಮ ಸಾಧನೆಯು ಜೀವನದ ಬೇಗೆಗೆ ಅಮೃತದ ಸೋನೆಯಾಗಿರುವದೆಂಬ ಗುಟ್ಟು ತಿಳಿದಿರುವದಿಲ್ಲ; ಸತ್ಪುರುಷರ ಸಂಗವೆಂಬ ದೋಣಿಯಿಂದ ಸಂಸಾರದ ಕಡಲನ್ನು ಸುಖವಾಗಿ ದಾಟಿಬಿಡಬಹುದೆಂಬ ಒಸಗೆಯೂ ಅವರಿಗೆ ತಲುಪಿರುವದಿಲ್ಲ. ಆದರೆ ಅಂಥವರು ತಾವು ಇದ್ದಲ್ಲಿದ್ದು ಜನತಾಸೇವೆಯಾಗಿ ತಮ್ಮತಮ್ಮ ಉದ್ಯೋಗವನ್ನು ಭಗವದರ್ಪಣೆ ಮಾಡುತ್ತಾ ಬರಬಹುದು; ಕಾಲಕಾಲಕ್ಕೆ ಸಾಧುಸಂತರ ಸನ್ನಿಧಿಗೆ ಹೋಗಿ ತಮ್ಮ ಸಂಸಾರ ತಾಪಕ್ಕೆ ಮುಲಾಮಾಗಿ ಅವರ ದರ್ಶನವನ್ನು ಮಾಡಿ ಅವರ ಸಂಭಾಷಣೆಯ ಲಾಭವನ್ನು ಪಡೆಯಬಹುದು.

ಅಧ್ಯಾತ್ಮಪುಸ್ತಕಗಳನ್ನು ಓದುವದು, ಉಪನ್ಯಾಸಗಳನ್ನೂ ಉಪದೇಶಗಳನ್ನೂ ಕೇಳುವದು, ಸಂಘಗಳಲ್ಲಿಯೂ ಸಮಾಜಗಳಲ್ಲಿಯೂ ಭಾಗವನ್ನು ವಹಿಸುವದು,

ಯಾವದಾದರೂ ಮಹಾಪುರುಷರ ವರ್ಧಂತಿಗಳನ್ನು ಆಚರಿಸುವದು-ಇವೆಲ್ಲ ಒಳ್ಳೆಯ ಸಾಧನಗಳೇ ಸರಿ. ಆದರೆ ಡಾಕ್ಟರು ಬರುವವರೆಗೆ ಮಾಡುವ ಪ್ರಥಮ ಚಿಕಿತ್ಸೆಯಂತೆ ಇವೆಲ್ಲ ಮೊದಮೊದಲು ಮಾಡುವ ಸಾಧನೆಗಳಾಗಿರುತ್ತವೆ ಎಂಬುದನ್ನು ಮರೆಯಬಾರದು. ಅನುಭವಿಗಳಾದ ಭಗವದ್ಭಕ್ತರ ಸೇವೆಯೂ ಅವರ ಸೂಕ್ತಿಗಳ ಶ್ರವಣವೂ ಇನ್ನೂ ಮೇಲಿನ ಮಟ್ಟದ ಸಾಧನಗಳಾಗಿರುತ್ತವೆ. ಆದರೆ ನಮ್ಮ ನಮ್ಮ ಹೃದಯದೊಳಗಿನ ಬ್ರಹ್ಮಾನಂದವನ್ನು ಕಂಡುಕೊಂಡು ಸುಖಶಾಂತಿಗಳನ್ನು ಪಡೆದುಕೊಳ್ಳುವದೇ ಎಲ್ಲಕ್ಕಿಂತಲೂ ಮುಖ್ಯವೆಂಬುದನ್ನು ನಮ್ಮ ಹೃದಯದಲ್ಲಿರುವ ಆ ಪರಮಾತ್ಮನೇ ಎಲ್ಲರಿಗಿಂತಲೂ ಮೇಲ್ತರದ ಅಂತಸ್ತಿನ ಆದಿಗುರುವಾಗಿರುವದರಿಂದ ಪ್ರತಿದಿನವೂ ಆತನ ಸದುಪದೇಶಗಳಿಗೆ ಕಿವಿಗೊಡುವದೇ ಅತ್ಯುತ್ತಮಸಾಧನವೆಂಬುದನ್ನೂ ಮರೆಯಬಾರದು. ಪರಮಾತ್ಮನು ನಮ್ಮೆಲ್ಲರ ಆತ್ಮನಾಗಿರುವದರಿಂದ ಅವನು ನಮಗೆ ದೂರವಿರುವದಿಲ್ಲ. "ದೇವನೆ, ಕರುಣಾನಿಧಿಯೇ, ನಿನ್ನನ್ನು ಕಾಣುವ ಮಾರ್ಗವನ್ನು ತೋರಿಸಿಕೊಡು; ಇಲ್ಲದಿದ್ದರೆ ಆ ದಾರಿಯಲ್ಲಿ ನಡೆಯುತ್ತಿರುವವರ ಸಂಗವನ್ನಾದರೂ ಕರುಣಿಸು" ಎಂದು ದೈನ್ಯದಿಂದ ಬೇಡಿಕೊಳ್ಳುತ್ತಿರಬೇಕು.

# 32. ಹೃದಯಕಮಲದಲ್ಲಿರುವ ಪರಮಾತ್ಮನು

* ಉಪನಿಷತ್ತಿನಲ್ಲಿ ಒಂದು ವಾಕ್ಯವಿದೆ; "ಈ ಬ್ರಹ್ಮಪುರದಲ್ಲಿ ಒಂದು ಸಣ್ಣ ಕಮಲದ ಮನೆಯಿದೆಯಲ್ಲ, ಅದರಲ್ಲಿ ಸಣ್ಣ ಆಕಾಶವಿದೆ; ಅದರಲ್ಲಿರುವದನ್ನು ಹುಡುಕಬೇಕು, ಅದನ್ನು ಅರಿತುಕೊಳ್ಳಬೇಕು." ಈ ವಾಕ್ಯದಲ್ಲಿ ಅಧ್ಯಾತ್ಮಸಾಧನೆಯ ಸಾರವನ್ನು ಸಂಗ್ರಹಿಸಿ ಇಟ್ಟಿರುತ್ತದೆ. ಯಾವ ದೇಶದ, ಯಾವ ಕಾಲದ ಅಧ್ಯಾತ್ಮ ಸಾಧಕರಾಗಲಿ, ತಿಳಿದೋ ತಿಳಿಯದೆಯೋ ಈ ಸಾಧನೆಯನ್ನು ಅಳವಡಿಸಿಕೊಂಡೇ ಕೃತಕೃತ್ಯರಾಗಿರುತ್ತಾರೆ; ಇನ್ನು ಮುಂದೆಯೂ ಇದೊಂದೇ ಸಾಧನೆಯನ್ನು ಅನುಸರಿಸಿ ನಾವೆಲ್ಲರೂ ಕೃತಕೃತ್ಯರಾಗಬಹುದು.

ಉಪನಿಷತ್ತನ್ನು ನಾವೆಲ್ಲರೂ ಅಧ್ಯಯನಮಾಡಿರುವದಿಲ್ಲ, ಅದರ ಅರ್ಥವನ್ನು ಭಾಷ್ಯಗಳ ಮೂಲಕ ತಿಳಿದುಕೊಳ್ಳುವ ಸಾಮರ್ಥ್ಯವೂ ನಮ್ಮೆಲ್ಲರಿಗೂ ಇರುವದಿಲ್ಲ. ಆದರೆ ಈ ವಾಕ್ಯದಲ್ಲಿರುವ ಅಭಿಪ್ರಾಯವನ್ನು ಎಲ್ಲಾ ಅನುಭವಿಗಳೂ ಉಪದೇಶಿಸಿರುತ್ತಾರೆ. ಎಲ್ಲಾ ಸಾಧಕರೂ ಅರಿತುಕೊಳ್ಳುವದಕ್ಕೆ ಪ್ರಯತ್ನ ಮಾಡಬಹುದಾಗಿದೆ. ಆದ್ದರಿಂದ ಸರಳವಾದ ಭಾಷೆಯಿಂದ ಈ ಉಪದೇಶವನ್ನು ಬಿಚ್ಚಿತಿಳಿಸುವದಕ್ಕೆ ಇಲ್ಲಿ ಪ್ರಯತ್ನಮಾಡುವೆವು.

* ಸಂಪುಟ 18, ಸಂಚಿಕೆ 8, ಏಪ್ರಿಲ್ 1949, ಪುಟ 169-176

ನಮ್ಮ ಶರೀರಕ್ಕೆ 'ಬ್ರಹ್ಮಪುರ' ಎಂಬ ಹೆಸರನ್ನು ಕೊಟ್ಟಿರುತ್ತದೆ ಎಂಬುದನ್ನು ನಾವು ಇಲ್ಲಿ ಮೊದಲು ಲಕ್ಷಿಸಬೇಕು. ಶರೀರವೆಂದರೆ ರೋಗರುಜಿನಗಳ ಮನೆ, ಅಥವಾ ಬಗೆಬಗೆಯ ಒಳ್ಳೆಯ ಕಟ್ಟ ವಿಕಾರಗಳ ಆಶ್ರಯವಾದ ಮನಸ್ಸು ಅವಿತುಕೊಂಡಿರುವ ಸ್ಥಲ ಎಂದು ನಮ್ಮಲ್ಲಿ ಅನೇಕರು ಭಾವಿಸಿಕೊಂಡಿರುವೆವು. ಈ ಭಾವನೆಯನ್ನು ಮೊಟ್ಟಮೊದಲು ನಾವು ಬಿಡುವದಕ್ಕೆ ಯತ್ನಿಸಬೇಕು; ಇದು 'ಬ್ರಹ್ಮಪುರ', ಪರಮಾತ್ಮನು ವಾಸವಾಗಿರುವ ಕೋಟೆ ಎಂಬುದನ್ನು ಮನದಂದುಕೊಳ್ಳಬೇಕು. ಈ ಶರೀರದೊಳಗೇ ನಾವು ಪರಮಾತ್ಮನನ್ನು ಕಂಡುಕೊಳ್ಳಬಹುದು. ಹಿಂದಿನ ಕಾಲದ ಅರಸರುಗಳು ಒಂದೊಂದು ದುರ್ಗವನ್ನು ಮಾಡಿಕೊಂಡು ಅದರ ಒಳಗೆ ತಮ್ಮ ಅರಮನೆಯನ್ನು ಮಾಡಿಕೊಂಡು ಇರುತ್ತಿದ್ದರಂತೆ. ಅದರಂತೆ ಪರಮೇಶ್ವರನು ಈ ನಮ್ಮ ಶರೀರದೊಳಗೇ ತನ್ನ ಭವನವನ್ನು ಮಾಡಿಕೊಂಡಿರುತ್ತಾನೆ.

ಈ ಭವನವು ಯಾವದು? ಇದೊಂದು ಸಣ್ಣ ಪುಂಡರೀಕವೇಶ್ಮ, ಒಂದು ಕಮಲದಮನೆ. ಹೃದಯವನ್ನು ಕಮಲವೆಂದು ವರ್ಣಿಸುವದು ಸಂಸ್ಕೃತದಲ್ಲಿ ಬಹುದಿನಗಳಿಂದ ಬಂದಿರುವ ವಾಡಿಕೆ. ಶರೀರದಲ್ಲಿ ಹೃದಯವೆಂಬ ಮಾಂಸಪಿಂಡವು ಕಮಲದ ಮೊಗ್ಗಿನಂತೆ ಕೆಳಕ್ಕೆ ಬಾಗಿರುವದರಿಂದ ಮೊದಲು ಈ ಹೆಸರನ್ನು ಕೊಟ್ಟಿರಬಹುದೆಂದು ತೋರುತ್ತದೆ. ಆದರೆ ಹೃದಯದಲ್ಲಿ ಅಂತಃಕರಣವಿರುವದೆಂಬ ಹಿಂದಿನವರ ನಂಬಿಕೆಯಿಂದ ಅಂತಃಕರಣಕ್ಕೂ ಹೃದಯಕಮಲವೆಂದೇ ಹೆಸರು ಬಂದಿರುತ್ತದೆ. ಅದರಲ್ಲಿಯೂ ಭಾವನೆಗಳ ರಾಶಿಯಾದ ಅಂತಃಕರಣವನ್ನೇ ಹೃದಯಕಮಲವೆಂದು ವಿಶೇಷವಾಗಿ ಕರೆಯುತ್ತಾರೆ; ಹೃದಯವು ಕಮಲದಂತೆ ಬಹು ಕೋಮಲವಾಗಿರುವದರಿಂದ ಅದನ್ನು ಕಮಲಕ್ಕೆ ಹೋಲಿಸಿರುವದು ಯುಕ್ತವೂ ಆಗಿರುತ್ತದೆ.

ಈ ಹೃದಯಕಮಲವೆಂಬ ಅರಮನೆಯಲ್ಲಿರುವ ಪರಮಾತ್ಮನನ್ನು ಉಪನಿಷತ್ತಿನಲ್ಲಿ ಆಕಾಶವೆಂದು ಕರೆದಿರುತ್ತದೆ. ಆಕಾಶದ ಸ್ವರೂಪವೇನು? ಅದು ನಿತ್ಯವಾಗಿ, ಎಲ್ಲಕ್ಕೂ ಆಶ್ರಯವಾಗಿ, ಎಲ್ಲಕ್ಕಿಂತಲೂ ಸೂಕ್ಷ್ಮವಾಗಿ, ಸರ್ವವ್ಯಾಪಕವಾಗಿರುವದು. ಪರಮಾತ್ಮನನ್ನು ಈ ಲೋಕದಲ್ಲಿ ಕಂಡಿರುವ ಯಾವ ಪದಾರ್ಥಕ್ಕೂ ಹೋಲಿಸುವದಕ್ಕೆ ಬರುವದಿಲ್ಲ; ಏಕೆಂದರೆ ಎಲ್ಲರೂ ಪರಮಾತ್ಮನಿಂದಲೇ ಸೃಷ್ಟವಾಗಿ ಪರಮಾತ್ಮನ ಆಶ್ರಯದಲ್ಲಿಯೇ ಇರುವದಾಗಿ, ಪರಮಾತ್ಮನಿಂದಲೇ ವ್ಯಾಪ್ತವಾಗಿ ಇರತಕ್ಕದ್ದು. ಆದರೂ ನಮ್ಮ ಸಾಮಾನ್ಯವಾದ ತಿಳಿವಳಿಕೆಯಲ್ಲಿ ಪೃಥಿವಿ, ಅಪ್ಪು, ತೇಜಸ್ಸು, ವಾಯು–ಎಂಬ ಭೂತಗಳು ಒಂದಕ್ಕಿಂತ ಒಂದು ಸೂಕ್ಷ್ಮವಾಗಿ, ಒಂದಕ್ಕೊಂದು ಕಾರಣವಾಗಿ, ಒಂದಕ್ಕೊಂದು ಆಶ್ರಯವಾಗಿ, ಒಂದಕ್ಕಿಂತ ಒಂದು ವ್ಯಾಪಕವಾಗಿ ಇರುತ್ತವೆ. ಆದರೆ ಇವೆಲ್ಲಕ್ಕಿಂತಲೂ ಪರಮಸೂಕ್ಷ್ಮವಾಗಿ, ಪರಮಕಾರಣವಾಗಿ, ಪರಮಾಶ್ರಯವಾಗಿ, ಪರಮವ್ಯಾಪಕವಾಗಿ ಇರುವದು ಆಕಾಶವು.

ಆದ್ದರಿಂದ ಈ ಆಕಾಶವನ್ನು ಪರಮಾತ್ಮನಿಗೆ ಶಾಸ್ತ್ರದಲ್ಲಿ ಉಪಮಾನವಾಗಿ ಕೊಡುವದು ಅಲ್ಲಲ್ಲಿ ಕಂಡುಬರುತ್ತದೆ.

ಹೊರಗಿನ ಆಕಾಶವೆಂಬುದೇ ನಮ್ಮಲ್ಲಿ ಅನೇಕರಿಗೆ ಮನಸ್ಸಿಗೆ ಬಂದಿರುವದಿಲ್ಲ. ಸೂಕ್ಷ್ಮವಸ್ತುಗಳ ಮನನವನ್ನು ಮಾಡುವ ಅಭ್ಯಾಸವನ್ನು ಮಾಡಿಕೊಂಡವರಿಗೆ ಪಂಚಭೂತಗಳಲ್ಲೆಲ್ಲ ಆಕಾಶವು ಅತ್ಯಂತಸೂಕ್ಷ್ಮವೂ ನಿತ್ಯವೂ ವ್ಯಾಪಕವೂ ಆಗಿರುವದೆಂಬುದು ಮನವರಿಕೆಯಾಗುತ್ತದೆ. ಆದರೆ ನಮ್ಮ ಹೃದಯದಲ್ಲಿರುವ ಅಂತಃಕರಣದ ಸ್ವರೂಪವನ್ನು ಮನಸ್ಸಿಗೆ ತಂದುಕೊಂಡರೆ ಅದು ಆಕಾಶವನ್ನು ಕೂಡ ವ್ಯಾಪಿಸಿಕೊಂಡಿರುವದೆಂದೂ ಆಕಾಶಕ್ಕಿಂತಲೂ ಸೂಕ್ಷ್ಮವಾಗಿರುವದೆಂದೂ ಅರಿವಾಗುವದು. ಭೂತಾಕಾಶಕ್ಕಿಂತಲೂ ಚಿತ್ತಾಕಾಶವು ವ್ಯಾಪಕವು ಎಂದು ಗ್ರಂಥಗಳಲ್ಲಿ ವರ್ಣಿತವಾಗಿರುವದಕ್ಕೆ ಇದೇ ಕಾರಣ. ಅದನ್ನೂ ವ್ಯಾಪಿಸಿಕೊಂಡಿರುವ ಪರಮಾತ್ಮನನ್ನು 'ಆಕಾಶ' ಎಂಬ ಹೆಸರಿನಿಂದಲ್ಲದೆ ಮತ್ತೆ ಯಾವ ಹೆಸರಿನಿಂದ ಕರೆಯುವದು ಯುಕ್ತವಾದೀತು? ಪರಮಾತ್ಮನನ್ನು 'ಚಿದಾಕಾಶ', 'ಚಿದಂಬರ' ಎಂದು ಕರೆಯುವದಕ್ಕೆ ಇದೇ ಕಾರಣವು.

ಚಿದಾಕಾಶರೂಪನಾದ ಪರಮಾತ್ಮನು ಇಲ್ಲದ ಕಡೆಯಿಲ್ಲ; ಅವನಲ್ಲಿಯೇ ಎಲ್ಲವೂ ಇರುತ್ತಿರುವದು. ಅವನ ಬೆಳಕಿನಿಂದಲೇ ಎಲ್ಲವ ಪ್ರಕಾಶಿಸುತ್ತಿರುವದು. 'ಆ' (ಎಲ್ಲಾ ಕಡೆಯಲ್ಲಿಯೂ) ಕಾಶ (ಬೆಳಗುತ್ತಿರುವವನು) ಎಂಬ ವ್ಯುತ್ಪತ್ತಿಯಿಂದ ಆ ಪರಮಾತ್ಮನೇ 'ಆಕಾಶ' ಎಂಬ ಹೆಸರಿಗೆ ತಕ್ಕವನಾಗಿರುತ್ತಾನೆ. ಈ ಕಾರಣದಿಂದಲೂ ಅವನನ್ನು 'ಆಕಾಶ' ಎಂದು ಕರೆದಿರುವದು ಯುಕ್ತವಾಗಿದೆ ಎಂದು ಬಲ್ಲವರು ಹೇಳುವರು.

ಆದರೆ ಇದೆಲ್ಲ ಜ್ಞಾನಿಗಳ ಮಾತು. ಯಾರು ಪರಮಾತ್ಮನನ್ನು ಕಂಡುಕೊಂಡಿರುವರೋ ಅಂಥ ಅನುಭವಿಗಳು ಪರಮಾತ್ಮನು ಹಾಗಿರುವನು, ಹೀಗಿರುವನು–ಎಂದು ಬಣ್ಣಿಸಬಹುದು. ಸಾಮಾನ್ಯರಾದ ನಾವುಗಳು ಆಕಾಶರೂಪನಾದ ಈ ಪರಮಾತ್ಮನನ್ನು 'ಬ್ರಹ್ಮಪುರ'ವಾದ ನಮ್ಮ ಶರೀರದೊಳಗೇ ಕಂಡುಹಿಡಿಯಬೇಕಾಗಿರುವದು. ಅದರಲ್ಲಿಯೂ ಒಳಗಿರುವ 'ಪುಂಡರೀಕವೇಶ್ಮ'ದಲ್ಲಿ; ಕಮಲದ ಮನೆಯೊಳಗೆ ಆತನನ್ನು ಕಾಣ ಬೇಕಾಗಿರುವದು. ನಾವುಗಳು ಆತನನ್ನು 'ಹುಡುಕಬೇಕು'; ಶಾಸ್ತ್ರಶ್ರವಣ, ಗುರುವಾಕ್ಯಶ್ರವಣ ಮುಂತಾದ ಉಪಾಯಗಳಿಂದ ನಮ್ಮೊಳಗೇ ನಾವು ಮನನಮಾಡಿಕೊಂಡು ಕಾಣುವದಕ್ಕೆ ಪ್ರಯತ್ನಿಸಬೇಕು. ಹೀಗೆ ಪರಮಾತ್ಮನನ್ನು ಹುಡುಕಿ 'ಅರಿತುಕೊಳ್ಳಬೇಕು, ನಮ್ಮ ಅನುಭವಕ್ಕೆ ತಂದುಕೊಳ್ಳಬೇಕು. ಇದೇ ಪರಮಾತ್ಮನ ಸಾಕ್ಷಾತ್ಕಾರವು.

ನಮ್ಮ ಶರೀರವೆಂಬುದು ಈ ಲೋಕಕ್ಕೆ ಹೋಲಿಸಿದರೆ ಒಂದು ಬಲುಸಣ್ಣ ಪದಾರ್ಥವು. ಅದರಲ್ಲಿರುವ ಹೃದಯವು ಇನ್ನೂ ಸಣ್ಣದು. ಇನ್ನು ಅದರೊಳಗಿರುವ ಆಕಾಶದಲ್ಲಿ

ಕಂಡುಕೊಳ್ಳತಕ್ಕದ್ದೇನಿರುವದು?-ಎಂದು ಯಾರೂ ಯೋಚಿಸಿಕೊಳ್ಳುವಂತಿಲ್ಲ. ನಿಜವಾಗಿ ಅದು ಹೃದಯದ ಒಳಗಡೆಯಿಲ್ಲವೆಂದೂ ಅದರಲ್ಲಿಯೇ ಎಲ್ಲವೂ ಇದ್ದುಕೊಂಡಿರುವದೆಂದೂ ಆಗಲೆ ತಿಳಿಸಿರುತ್ತೇವೆ. ಉಪನಿಷತ್ತಿನಲ್ಲಿಯೂ ಇದನ್ನು ಸ್ಪಷ್ಟಪಡಿಸಿರುತ್ತದೆ. "ಈ ಆಕಾಶವು ಹೊರಗಿನ ಭೌತಿಕಾಕಾಶವನ್ನೆಲ್ಲ ವ್ಯಾಪಿಸಿರುವದು. ಭೂಮ್ಯಂತರಿಕ್ಷಗಳು, ಅಗ್ನಿ, ವಾಯು, ಸೂರ್ಯ, ಚಂದ್ರ, ಮಿಂಚು, ನಕ್ಷತ್ರ, ಇರುವದು, ಇಲ್ಲವಾದದ್ದು-ಎಲ್ಲವೂ ಅದರಲ್ಲಿಯೇ ಇರುತ್ತದೆ." ಆದ್ದರಿಂದ ಅವಶ್ಯವಾಗಿ ನಾವು ಅದನ್ನು ಹುಡುಕಬೇಕು, ಅರಿತುಕೊಳ್ಳಬೇಕು. ಆ ತತ್ತ್ವವನ್ನು ಕಂಡುಕೊಂಡರೆ ನಾವು ಎಲ್ಲವನ್ನೂ ಕಂಡುಕೊಂಡಂತೆ.

ಪರಮಾತ್ಮನು ಎಲ್ಲೆಲ್ಲಿಯೂ ಇರುತ್ತಿದ್ದರೂ ಆತನನ್ನು ನಮ್ಮ ಹೃದಯದಲ್ಲಿಯೇ ಕಂಡುಕೊಳ್ಳಬೇಕು, ಆಗಲೇ ನಮಗೆ ಪರಮಶಾಂತಿಯು ದೊರಕುವದು, ಆಗಲೇ ನಮಗೆ ಸಕಲಕಾಮಗಳ ಪ್ರಾಪ್ತಿಯೂ ಆದ ಸುಖವು ವಶವಾಗುವದು-ಎಂಬ ರಹಸ್ಯವೇ ಅಧ್ಯಾತ್ಮಶಾಸ್ತ್ರದ ಮುಖ್ಯೋದ್ದೇಶವು. ನಾವು ಎಲ್ಲಿಯವರೆಗೆ ಹೊರಗಿನ ವ್ಯವಹಾರದಲ್ಲಿಯೇ ಮುಳುಗಿರುವೆವೋ ಅಲ್ಲಿಯವರೆಗೆ ನಮ್ಮ ಜೀವನದಲ್ಲಿ ಗಡಿಬಿಡಿ ತಪ್ಪಿದ್ದಲ್ಲ. ನಮ್ಮ ಮನಸ್ಸಿಗೆ ಚಿಂತೆಯು ತಪ್ಪಿದ್ದಲ್ಲ, ನಮ್ಮ ದೇಹಕ್ಕೂ ಮನಸ್ಸಿಗೂ ಆಯಾಸವು ತಪ್ಪಿದ್ದಲ್ಲ. ಅಲ್ಲಿಯವರೆಗೆ ನಮಗೆ ಜೀವನವೆಂಬುದು ಒಂದು ಹೊರೆಯಾಗಿರುತ್ತದೆ. ಅಧ್ಯಾತ್ಮಗೀತಾವಳಿಯ ಒಂದು ಪದದಲ್ಲಿ ಈ ಅಭಿಪ್ರಾಯವನ್ನು ಅಡಕಮಾಡಿರುತ್ತದೆ.

**ದೇಶಿತೋಡಿ, ಆದಿತಾಳ**

**ಬಿಡು ಬಿಡು ಜಗದ ಸಡಗರವೆಲ್ಲ । ಕೊಡುವದೇನಿಲ್ಲ ಶಾಂತಿಯನ್ನು॥ಪ॥**

**ಹೊಲ ಮನೆ ಹಣವು ಮಹದಧಿಕಾರ ।**
**ಹೊಲೆಯ ಸಂಸಾರ ತಿಳಿದುನೋಡು ॥1॥**

**ಹೆಂಡತಿ ಮಗನು ಮಾವನಳಿಯ ।**
**ಖಂಡದ ಗೆಳಯರಲ್ಲದೇನು? ॥2॥**

**ವಿದ್ಯೆಯು ಬುದ್ಧಿ ಕೌಶಲವೆಲ್ಲ ।**
**ಗುದ್ದಿದ ಕಲ್ಲ ಪೋಲ್ವುವಲ್ಲ ॥3॥**

**ಶಂಕರಪದವ ನಂಬಲು ನೀನು ।**
**ಶಂಕೆಯದೇನು? ಶಾಂತಿಯಹುದು ॥4॥**

ಜೀವನದಲ್ಲಿ ನಮಗಿರುವ ಆಯಾಸವೂ ಚಿಂತೆಯೂ-ಮನೆಯ ಬಾಡಿಗೆ, ಕಂದಾಯ, ಸುಂಕ, ನೆಲಗಟ್ಟಿನ ಕಂದಾಯ, ಆಧಾರ, ಗುತ್ತಿಗೆ, ಬೆಲೆಗಳ ಏರಿಳಿತ, ಕೋರ್ಟುಕಚೇರಿಗಳ

ವ್ಯವಹಾರ, ಸಂಸಾರದ ವ್ಯಾಪಾರ್‍ಡುಗಳು, ನೆಂಟರಿಷ್ಟರ ಹೋರಾಟಗಳು ಇವೇ ಮುಂತಾದ ನೂರಾರು ಚಿಂತೆಗಳು–ನಮ್ಮನ್ನು ತಿಕ್ಕಿಮುಕ್ಕುತ್ತಿರುವದು ಎಲ್ಲಿಯವರೆಗೆ? ನಮ್ಮ ಓದುಬರಹ, ಜಾಣತನ, ಕಲಾಕೌಶಲ, ಕೈಗಾರಿಕೆ ಮುಂತಾದ ಉಪಾಯಗಳು ಎಲ್ಲೆಲ್ಲಿಯೂ ಪೈಪೋಟಿಯನ್ನೂ ರಾಗದ್ವೇಷಗಳನ್ನೂ ಹೆಚ್ಚಿಸುತ್ತಾ ನಮ್ಮನ್ನು ಗೋಳುಗೊಟ್ಟಿಸುತ್ತಿರುವದು ಎಲ್ಲಿಯವರೆಗೆ?–ಎಲ್ಲಿಯವರೆಗೆ ನಮ್ಮಲ್ಲಿ ನಾವು ಭಗವಂತನ ಶಂಕರಪದವನ್ನು ಕಂಡು ಅದೇ ನಮ್ಮ ಜೀವನದ ತಿರುಳೆಂದು ನಂಬದೇ? ಇರುವೆವೋ ಅಲ್ಲಿಯವರೆಗೆ. ಆ ಪರಮಾತ್ಮನನ್ನು ಎಂದಿಗೆ ಶರಣುಹೊಂದುವೆವೋ ಅಂದು ಪರಮಶಾಂತಿಯು ನಮ್ಮದಾಗುವದು.

ಮಾನವನ ವ್ಯಷ್ಟಿ ಮನಸ್ಸಿಗೆ ದ್ವಂದ್ವಗಳ ವಿಚಾರವೇ ಹೊರತು ಮತ್ತೊಂದರ ವಿಚಾರವು ಹತ್ತದು. ಲಾಭ, ನಷ್ಟ; ಸೋಲು, ಗೆಲವು; ಹರ್ಷ, ಶೋಕ; ಸುಖ, ದುಃಖ–ಇದೇ ಲೌಕಿಕಜನರ ಮನಸ್ಸನ್ನು ಹಿಡಿದುಕೊಂಡಿರುವ ಚಿಂತಾಪಿಶಾಚಿಯು. ಒಂದಕ್ಕೊಂದು ವಿರುದ್ಧವಾಗಿರುವ ಶಕ್ತಿಗಳೇ ಈ ಜಗತ್ತಿನಲ್ಲಿ ಎಲ್ಲೆಲ್ಲಿಯೂ ಕೆಲಸಮಾಡುತ್ತಿರುವಂತೆ ಸಾಮಾನ್ಯಜನರಿಗೆ ಕಾಣುತ್ತಿರುವದು. ಆದರೆ ಯಾವಾಗ ಅವರು ತಮ್ಮೊಳಗೆ ತಾವು ಒಳಹೊಕ್ಕು ಪರಮಾತ್ಮನ ಶಾಂತಿಯನ್ನು ಕಂಡುಕೊಳ್ಳುವರೋ ಆಗ ದ್ವೈತದ ಭಾವನೆಗಳೆಲ್ಲವೂ ಮರೆಯಾಗುವವು, ಪರಸ್ಪರವಿರೋಧಗಳೆಲ್ಲವೂ ಮಾಯವಾಗುವವು. ಎಲ್ಲೆಲ್ಲಿಯೂ ಏಕತ್ವವೂ ವ್ಯವಸ್ಥೆಯೂ ಹೊಂದುಗೆಯೂ ಮೈದೋರುವವು. ಆದ್ದರಿಂದ ಆಗ ಯಾವ ಗಡಿಬಿಡಿಯೂ ಇಲ್ಲದ, ಯಾವ ಚಿಂತೆಯೂ ಇಲ್ಲದ, ಶಾಂತಿಯು ಅವರಿಗೆ ಕಾಣಿಸಿಕೊಳ್ಳುವದು.

ಈ ಶಾಂತಿಯನ್ನು ಓದುಬರಹದ ತಿಳಿವಳಿಕೆಯಿಂದಾಗಲಿ ಗಣಿತದ ಬುದ್ಧಿಯಿಂದಾಗಲಿ ತರ್ಕಶಾಸ್ತ್ರದ ಯುಕ್ತಿಗಳಿಂದಾಗಲಿ ಅರಿತುಕೊಳ್ಳುವದಕ್ಕೆ ಆಗುವದಿಲ್ಲ. ಅಂಥ ಶಾಂತಿಯೊಂದು ಇದೆ ಎಂಬುದು ನಮ್ಮ ಮಾನವಬುದ್ಧಿಗೆ ಗೋಚರವಾಗುವಹಾಗಿಲ್ಲ. ಬತ್ತವನ್ನು ಕುಟ್ಟುವ, ಬಟ್ಟೆಯನ್ನು ನೇಯುವ ಅಥವಾ ಕಬ್ಬಿಣದ ಸಾಮಾನುಗಳನ್ನು ತಯಾರುಮಾಡುವ ಹಲವು ಯಂತ್ರಗಳಿರುವ ಗಿರಣಿಗಳನ್ನು ನೀವು ನೋಡಿರುತ್ತೀರಾ? ಹಾಗಾದರೆ ಅಲ್ಲಿರುವ ಗದ್ದಲವನ್ನು ಮನಸ್ಸಿಗೆ ತಂದುಕೊಳ್ಳಿರಿ. ಅಲ್ಲಿ ಹೊರಗಿನಿಂದ ಬಂದವರು ಒಂದೆರಡು ಘಳಿಗೆಯಾದರೂ ನಿಲ್ಲುವದಕ್ಕಾಗದಷ್ಟು, ಕಿವಿಯನ್ನೇ ಒಡೆಯುವಷ್ಟು, ಗಲಾಟೆಯೂ ಕೋಲಾಹಲವೂ ಕೇಳಬರುತ್ತದೆ. ಅಲ್ಲವೆ? ಆದರೆ ಅಂಥ ಗಿರಣಿಗಳಲ್ಲಿ ಒಂದೊಂದು ನಿಶ್ಶಬ್ದವಾದ ಕೋಣೆಯನ್ನು ಮಾಡಿಕೊಂಡಿರುವದುಂಟು. ಆ ಕೋಣೆಯನ್ನು ಒಳಹೊಕ್ಕಿರುವವರಿಗೆ ಕದವನ್ನು ಹಾಕಿಕೊಂಡ ಕೂಡಲೆ ಹೊರಗಿನ ಗದ್ದಲದ ಕೋಟಲೆಯೆಲ್ಲವೂ ತಪ್ಪಿಬಿಡುವದು. ಅಲ್ಲವೆ? ಇದರಂತೆ ಈ ಬ್ರಹ್ಮಪುರವೆಂಬ ಕೋಟೆಯ

ಹೊರಗೆ ಎಷ್ಟೇ ಹೋರಾಟವಾಗಲಿ, ಎಷ್ಟೇ ಗಡಿಬಿಡಿಯಿರಲಿ, ಇದರೊಳಗಿರುವ ಹೃದಯಕಮಲವೆಂಬ ಕೋಣೆಯೊಳಕ್ಕೆ ನಾವು ಸೇರಿಕೊಂಡು ಅದರ ಬಾಗಿಲನ್ನು ಹಾಕಿಕೊಂಡ ಒಡನೆಯೇ ನಮಗೆ ಹೊರಗಿನ ಗಡಿಬಿಡಿಯೆಲ್ಲವೂ ನಿಂತುಹೋಗುವದು, ಯಾವ ಗಲಾಟೆಯೂ ನಮ್ಮನ್ನು ಗೋಳುಗುಟ್ಟಿಸದೆ ಇರುವದು, ಪರಮಶಾಂತಿಯೂ ನಮ್ಮದಾಗುವದು.

ಈ ಪರಮಶಾಂತಿಯ ಸ್ಥಾನವನ್ನು ಹುಡುಕಿ ಕಂಡುಕೊಳ್ಳುವದು ಎಲ್ಲರಿಗೂ ಸಾಧ್ಯವೆ? ಎಂದು ನೀವು ಕೇಳಬಹುದು. ಇದಕ್ಕೆ ಹೌದು, ಅಲ್ಲ–ಎಂದು ಎರಡು ಉತ್ತರವನ್ನೂ ಕೊಡಬೇಕಾಗುತ್ತದೆ. ಶ್ರೀ ಶಂಕರಾಚಾರ್ಯರು ಹೇಳಿರುವ ಉತ್ತರವನ್ನು ಇಲ್ಲಿ ಕೊಡುವದು ಒಳ್ಳೆಯದು:

"ಕರಣಗಳನ್ನು ಉಪಸಂಹಾರಮಾಡಿಕೊಂಡಿರುವ ಹೊರಗಿನ ವಿಷಯಗಳಲ್ಲಿ ವಿರಕ್ತರಾಗಿರುವ, ವಿಶೇಷವಾಗಿ ಬ್ರಹ್ಮಚರ್ಯ–ಎಂಬ ಸಾಧನಗಳಿಂದ ಕೂಡಿ ಈ ಬ್ರಹ್ಮವನ್ನು ಇಂಥಿಂಥ ಗುಣಗಳಿಂದ ಕೂಡಿದ್ದೆಂದು ಸತತವಾಗಿ ಧ್ಯಾನಮಾಡುತ್ತಿರುವ ಜನರಿಗೆ ಈ ಬ್ರಹ್ಮವು ಕಾಣಬರುತ್ತದೆ." ಯಾರುಯಾರು ಹೀಗೆ ಹೊರಗಿನಿಂದ ಕರಣಗಳನ್ನು ಹಿಂತಿರುಗಿಸಿಕೊಳ್ಳಬಲ್ಲರೋ, ಯಾರು ಯಾರು ಈ ಗಿರಣಿಯೊಳಗಿರುವ ಹೃದಯವೆಂಬ ನಿಶ್ಶಬ್ದದ ಕೋಣೆಯೊಳಕ್ಕೆ ಹೊಕ್ಕು ಸತ್ಯಬ್ರಹ್ಮಚರ್ಯಗಳೆಂಬ ಚಿಲುಕವನ್ನೂ, ಕೊಂಡಿಯನ್ನೂ ಉಪಯೋಗಿಸಿಕೊಳ್ಳಬಲ್ಲರೋ, ಅವರಿಗೆಲ್ಲ ಇದು ಸಾಧ್ಯ. ಆದರೆ ಯಾರು ಯಾರು ಹೊರಗಿನ ಪ್ರಪಂಚವೆಂಬ ಗಿರಣಿಯಲ್ಲಿಯೇ ನಿಂತುಕೊಂಡು ಅಲ್ಲಿರುವವರ ಜೊತೆಗೆ ತಾವೂ ಸ್ವಲ್ಪ ಗಟ್ಟಿಯಾಗಿ ಕಿರಿಚಿಕೊಂಡರೆ ಗದ್ದಲವು ಕಡಿಮೆಯಾಗಬಹುದೆಂದು ನಿರೀಕ್ಷಿಸುತ್ತಿರುವರೋ ಅವರಿಗೆ ಈ ಶಾಂತಿಯು ಕನಸಿನಲ್ಲಿಯೂ ಸಿಕ್ಕುವಂತಿಲ್ಲ.

ಹೊರಗಿನ ಪ್ರಪಂಚದಲ್ಲಿ ಗಡಿಬಿಡಿಯಿದೆ, ಒಳಗೆ ಸ್ವಲ್ಪವೂ ಗಡಿಬಿಡಿಯಿಲ್ಲದ ಶಾಂತಿಯಿದೆ–ಎಂದು ನಾವು ಹೇಳಿರುವದನ್ನು ಯಾರಾದರೂ ತಪ್ಪಾಗಿ ತಿಳಿದುಕೊಳ್ಳುವ ಸಂಭವವುಂಟು. ಶಾಂತಿಯಿಂದ ಕೂಡಿರುವ ಒಳಗಿನ ಪರಮಾತ್ಮತತ್ತ್ವವೊಂದು, ಅಶಾಂತಿಯಿಂದಲೂ ಚಿಂತೆಯಿಂದಲೂ ಗಡಿಬಿಡಿಯಿಂದಲೂ ಕೂಡಿರುವ ಹೊರಗಿನ ಪ್ರಪಂಚವೊಂದು–ಎಂದು ಎರಡು ಬಗೆಯ ತತ್ತ್ವಗಳು ಇರುವದಿಲ್ಲ. ನಾವು ಕಲ್ಪಿಸಿ ಕೊಂಡಿರುವ ಜೀವನವೊಂದು, ಪರಮಾರ್ಥವಾದ ಜೀವನವೊಂದು–ಹೀಗೆ ಎರಡು ಜೀವನಗಳಿರುವದು ನಿಜ. ಈಗ ನಾವು ನಮ್ಮಗಳ ಪ್ರಾಕೃತಬುದ್ಧಿಯಿಂದ ಕಲ್ಪಿಸಿಕೊಂಡಿರುವ ಸಂಸಾರದಲ್ಲಿ ನಮಗೆ ಬಗೆಬಗೆಯ ಕಾಮಗಳಿರುವವು. ನಮಗೆ ಇದು ಬೇಕು, ಅದು ಬೇಕು ಎಂಬ ಸಂಕಲ್ಪಗಳಾಗುವವು; ಆ ಸಂಕಲ್ಪದಿಂದ ಕಾಮಗಳುಂಟಾಗುವವು. ಆ ಕಾಮಗಳ

ವಿಷಯಗಳು ಯಾವಾಗಲೂ ದೊರಕುವವೆಂಬ ನಿಯಮವೇನೂ ಇರುವದಿಲ್ಲ; ಅವುಗಳನ್ನು ಪಡೆಯುವದಕ್ಕೆ ನಾವು ಮಾಡಬಾರದ ಮಿಥ್ಯಾಚಾರಗಳನ್ನೆಲ್ಲ ಮಾಡುವೆವು. ಇದು ಕಲ್ಪಿತವಾದ ಪ್ರಪಂಚದ ಸ್ಥಿತಿ. ಇದು ನಿಜವಾದ ಪ್ರಪಂಚವಲ್ಲ. ಪರಮಾತ್ಮನಲ್ಲಿ ಈ ಪ್ರಪಂಚವು ಇಲ್ಲವೇ ಇಲ್ಲ. ಪರಮಾತ್ಮನ ಸ್ವಭಾವವೇನೆಂದರೆ, ಅವನಲ್ಲಿ ಯಾವ ಪಾಪಗಳ ಸಂಪರ್ಕವೂ ಇರುವದಿಲ್ಲ. ಅವನಿಗೆ ಮುಪ್ಪಿಲ್ಲ, ಮರಣವಿಲ್ಲ, ಶೋಕವಿಲ್ಲ, ಹಸಿವಿಲ್ಲ, ಬಾಯಾರಿಕೆಯಿಲ್ಲ, ಅವನು ಸತ್ಯಕಾಮನು, ಸತ್ಯಸಂಕಲ್ಪನು. ಆ ಪರಮಾತ್ಮಸ್ಥಾನವನ್ನು ಪಡೆದವನಿಗೆ ಕಲ್ಪಿತಪ್ರಪಂಚದ ಯಾವ ಅಶಾಂತಿಕಾರಣಗಳೂ ಒಂದಿಷ್ಟೂ ಇರುವದೇ ಇಲ್ಲ.

ನಮ್ಮಲ್ಲಿ ಪ್ರತಿಯೊಬ್ಬನ ಹೃದಯದಲ್ಲಿಯೂ ಈ ಕೇಂದ್ರರೂಪನಾದ ಪರಮಾತ್ಮನು ಇರುತ್ತಾನೆ; ಆ ಕೇಂದ್ರದಲ್ಲಿ ನಮ್ಮ ಚಿತ್ತವು ನೆಲೆನಿಂತರೆ ಅಂದಿನಿಂದ ಎಂದೆಂದಿಗೂ ಮನಸ್ಸಿನಲ್ಲಿ ವ್ಯರ್ಥವಾದ ಸಂಕಲ್ಪಗಳಾಗಲಿ, ಕಾಮಗಳಾಗಲಿ ಹುಟ್ಟುವದಿಲ್ಲ. ಆದ್ದರಿಂದ ನಮ್ಮ ಹೊರಗಿನ ಸನ್ನಿವೇಶಗಳು ಕೂಡಲೆ ಮಾರ್ಪಡುತ್ತವೆ. ಇದರಿಂದ ಮೊದಲಿಲ್ಲದಿದ್ದ ವಸ್ತುಗಳು ಉಂಟಾಗುವವೆಂದಾಗಲಿ ಇದ್ದ ವಸ್ತುಗಳು ಹೋಗುವವೆಂದಾಗಲಿ ತಿಳಿಯಬಾರದು. ನಲ್ಲಿಯ ತಿರುಪನ್ನು ತಿರುಗಿಸಿದರೆ ಅದರಲ್ಲಿದ್ದ ನೀರೇ ಬರುವಂತೆ, ವಿದ್ಯುದ್ದೀಪದ ಗುಂಡಿಯನ್ನು ಒತ್ತಿದರೆ ಇದ್ದ ವಿದ್ಯುತ್ಪ್ರವಾಹವೇ ಮುಂದೊತ್ತಿ ಬಂದು ಬೆಳಕನ್ನು ಕೊಡುವಂತೆ, ಪರಮಾತ್ಮನೆಂಬ ಕೇಂದ್ರದಲ್ಲಿ ನಾವು ನೆಲೆನಿಂತರೆ ಆತ್ಮನಲ್ಲಿ ಎಂದೆಂದಿಗೂ ಇದ್ದ ಸತ್ಯಸಂಕಲ್ಪಗಳೂ ಸತ್ಯಕಾಮಗಳೂ ತಲೆದೋರುವವು; ನಮ್ಮ ಕಲ್ಪನೆಯ ಪ್ರಪಂಚದಲ್ಲಿ ನಮ್ಮ ಅಜ್ಞಾನದ ಕತ್ತಲೆಯಲ್ಲಿ ಕಾಣಿಸುತ್ತಿದ್ದ ಅನೃತವಾದ ದೃಶ್ಯಗಳು ಮರೆಯಾಗುವವು. ಅಷ್ಟೆ.

ನಮಗೆ ಇಷ್ಟವಾದ ಎಷ್ಟೋ ಪದಾರ್ಥಗಳು ಇನ್ನೂ ವಶವಾಗಿರುವದಿಲ್ಲ; ಕೈವಶವಾಗಿದ್ದ ಎಷ್ಟೋ ಸೌಕರ್ಯಗಳು ಕಣ್ಮರೆಯಾಗಿರುವವು; ಕೈಯಲ್ಲಿರುವ ಎಷ್ಟೋ ಅನುಕೂಲ್ಯಗಳು ನಮಗೆ ಶಾಂತಿಯನ್ನಾಗಲಿ, ತೃಪ್ತಿಯನ್ನಾಗಲಿ, ಸುಖವನ್ನಾಗಲಿ ಕೊಡುತ್ತಿಲ್ಲ. ನಮ್ಮನ್ನು ದ್ವಂದ್ವಗಳು ಕಾಡುತ್ತಿರುವವು. ಶರೀರದಲ್ಲಿ ಆರೋಗ್ಯವಿಲ್ಲ, ಇಂದ್ರಿಯಗಳಲ್ಲಿ ತೇಜವಿಲ್ಲ, ಮನಸ್ಸಿನಲ್ಲಿ ಉತ್ಸಾಹವಿಲ್ಲ, ಕಳವಳಗಳು, ಕಿರಿಕಿರಿಗಳು, ಸಂಶಯಗಳು, ಅಂಜಿಕೆಗಳು, ಆಶಾಭಂಗಗಳು, ನಷ್ಟಗಳು, ಕಷ್ಟನಿಷ್ಠುರಗಳು–ಇವುಗಳೆಲ್ಲವೂ ನಮ್ಮನ್ನು ತಿಕ್ಕಿ ಮುಕ್ಕುತ್ತಿರುವಂತೆ ಕಾಣುತ್ತಿರುವವು. ನಮ್ಮ ಸತ್ಯಕಾಮಗಳಿಗೆ ಇವೇ ಅನೃತವಾದ ಮುಚ್ಚಳವಾಗಿರುವವು. ಇವೇ ನಮ್ಮನ್ನು ಹೊರಕ್ಕೆ ಜಗ್ಗುತ್ತಿರುವವು. ಆದ್ದರಿಂದ ಅಂಜದಿರಿ. ನಿಮ್ಮೊಳಗೇ ಇರುವ ಸತ್ಯಕಾಮಗಳ ಆಧಾರವಾಗಿರುವ ಪರಮಾತ್ಮನೆಂಬ ಕೇಂದ್ರವನ್ನು ಸೇರಿಕೊಳ್ಳಿರಿ. ಕೂಡಲೆ ಅನೃತವಾದ ಈ ದೃಶ್ಯಗಳೆಲ್ಲವೂ ಮಾಯವಾಗುವವು.

ನಮ್ಮ ಹೃದಯದಲ್ಲಿ ಸತ್ಯಕಾಮನಾದ ಸತ್ಯಸಂಕಲ್ಪನಾದ ಪರಮಾತ್ಮನು ಇರುತ್ತಾನೆ. ಅವನೇ ಪ್ರಪಂಚಕ್ಕೆಲ್ಲ ಕೇಂದ್ರವು, ಅವನೇ ಪ್ರಪಂಚದ ಸಾರವು. ಆತನಲ್ಲಿ ಧ್ಯಾನದಿಂದ ಒಂದಾದರೆ ಆಗುವ ಫಲಗಳೆಲ್ಲ ಆ ಪರಮಾತ್ಮನ ಅನುಗ್ರಹವೇ ಹೊರತು ನಾವುಗಳು ವ್ಯಕ್ತಿಗಳಾಗಿ ಮಾಡಿಕೊಳ್ಳುವ ಯಕ್ಷಿಣೀ ವಿದ್ಯೆಯ ಫಲವಲ್ಲ. ಪರಮಾತ್ಮನು ಆಪ್ತಕಾಮನು. ಅವನ ಸಂಕಲ್ಪಕ್ಕೆ ತಮ್ಮ ಸಂಕಲ್ಪವನ್ನು ಹೊಂದಿಸಿಕೊಂಡ ಮಹಾತ್ಮರು ಎಂದಿಗೂ ಮಿಥ್ಯಾಸಂಕಲ್ಪಗಳನ್ನು ಮಾಡುವದಿಲ್ಲ. ಅವರ ಸಂಕಲ್ಪಗಳು ತತ್ತತ್ಕಾಲದಲ್ಲಿಯೇ ಆ ಸರ್ವಶಕ್ತನಾದ ಪರಮಾತ್ಮನ ಅನುಗ್ರಹದಿಂದ ನೆರವೇರುವವು; ಅವರ ಕಾಮಗಳೆಲ್ಲ ಪರಿಪೂರ್ತಿಯಾಗುವವು.

# 33. ಪರಮಾರ್ಥ ಸ್ವರೂಪ

*ನಮ್ಮ ಶರೀರವು ಸಂಕಟಪರಂಪರೆಗಳ ಸಂಕಲೆಯಲ್ಲ; ಅದು ಬ್ರಹ್ಮಪುರವು. ಪರಬ್ರಹ್ಮಸ್ವರೂಪನಾದ ವಾಸುದೇವನು ನಮ್ಮ ಈ ಶರೀರದಲ್ಲಿರುವ ಹೃದಯದೊಳಗೆ ಮನೆಮಾಡಿಕೊಂಡಿರುತ್ತಾನೆ. ಆತನೇ ನಮ್ಮ ಆತ್ಮನು ನಮ್ಮ ಜೀವನಕ್ಕೆಲ್ಲ ಕೇಂದ್ರವು, ಇಡಿಯ ಪ್ರಪಂಚಕ್ಕೇ ಕೇಂದ್ರವು. ಈ ಕೇಂದ್ರವನ್ನು ಮುಟ್ಟಿದರೆ ನಾವು ಕೃತಕೃತ್ಯರಾದೆವು; ಆಗ ನಮ್ಮ ಇಷ್ಟಾರ್ಥಗಳೆಲ್ಲ ಈಡೇರುವವು. ಇದಿಷ್ಟೂ ಕಳೆದ ತಿಂಗಳ ಸಂದೇಶದಲ್ಲಿ ಬರೆದಿರುವದರ ಸಾರವು.

ಹೃದಯಕಮಲದಲ್ಲಿ ನೆಲಸಿರುವ ಪರಮಾತ್ಮನೆಂಬ ಕೇಂದ್ರವನ್ನು ಕಂಡುಕೊಂಡು ಅಲ್ಲಿಯೇ ನೆಲೆನಿಂತವರಿಗೆ 'ಸರ್ವಲೋಕಗಳಲ್ಲಿಯೂ ಕಾಮಚಾರವುಂಟಾಗುವದು' ಎಂದು ಶ್ರುತಿಯಲ್ಲಿ ಹೇಳಿರುತ್ತದೆ. ಈ ಪರಮಾತ್ಮಕೇಂದ್ರವು ನಮ್ಮಲ್ಲಿ ಒಬ್ಬೊಬ್ಬನಲ್ಲಿಯೂ ಇದ್ದುಕೊಂಡಿರುತ್ತದೆ; ಅದನ್ನು ಪ್ರತಿಯೊಬ್ಬನೂ ತನ್ನತನ್ನೊಳಗೇ ಕಂಡುಕೊಳ್ಳಬಹುದು. ತನಗಿಂತ ಬೇರೆಯಾಗಿ, ಯಾವದೋ ಒಂದು ಹೊರಗಿನ ತತ್ತ್ವವಾಗಿಲ್ಲ, ಅದು. ಅದು ನಮ್ಮೆಲ್ಲರ ಆತ್ಮನು. ಎಲ್ಲರಲ್ಲಿಯೂ ವ್ಯಾಪ್ತವಾಗಿ, ಎಲ್ಲರಿಗೂ ತಿರುಳಾಗಿ, ಎಲ್ಲರಿಗೂ ಅತ್ಯಂತಪ್ರಿಯವಾಗಿ ಆನಂದದ ಧಾಮವಾಗಿರುತ್ತದೆ, ಅದು. ಅದು ಪರಮಾತ್ಮನು, ಎಂದರೆ ನಮ್ಮ ಪರಮಾರ್ಥವಾದ ಸ್ವರೂಪವು. ಈಗ ನಾವು ನಮ್ಮ ವಿಷಯದಲ್ಲಿ ಯಾವ ಯಾವ ಕೀಳುಭಾವನೆಗಳನ್ನು ಮಾಡಿಕೊಂಡಿರುವೆವೋ ಅದೊಂದೂ ನಮ್ಮ ಆ ನಿಜವಾದ ಆತ್ಮನಲ್ಲ, ನಮ್ಮ ನಿಜವಾದ ಸ್ವರೂಪವಾದ ಆ ಭಗವತ್ಸ್ವರೂಪದಲ್ಲಿ ಇರುವದಿಲ್ಲ.

* ಸಂಪುಟ 18, ಸಂಚಿಕೆ 9, ಮೇ 1949, ಪುಟ 191-199

ನಮ್ಮ ಕೇಂದ್ರವಾದ ಪರಮಾತ್ಮನನ್ನು ಮುಟ್ಟುವದಕ್ಕೆ ಆತನ ಸ್ವರೂಪವನ್ನು ಅನವರತವಾಗಿ ನೆನೆಯುತ್ತಿರಬೇಕು. ಇದೊಂದೇ ಎಲ್ಲಕ್ಕೂ ಮೊದಲುಮಾಡಬೇಕಾದ ಸಾಧನವು. ಶಾಸ್ತ್ರದಲ್ಲಿ ಆ ಪರಮಾತ್ಮನ ಸ್ವರೂಪವನ್ನು ವರ್ಣಿಸಿರುವಂತೆ ಮನಸ್ಸಿನಲ್ಲಿ ಎಡೆಬಿಡದೆ ಚಿಂತಿಸುತ್ತಿರುವದೇ ಆತನ ಕಡೆಗೆ ನಮ್ಮ ಮನಸ್ಸು ಒಲಿಯುವದಕ್ಕೆ ಪರಮೋಪಾಯವು. ಆದ್ದರಿಂದ ಆತನ ವಿಶೇಷಣಗಳನ್ನು ಒಂದೊಂದಾಗಿ ಈಗ ಮನಸ್ಸಿಗೆ ತಂದುಕೊಳ್ಳೋಣ. ಆ ಪರಮಾತ್ಮನು ಅಪಹತಪಾಪ್ಮನು; ಅವನಲ್ಲಿ ಯಾವ ಪಾಪವೂ ಇರುವದಿಲ್ಲ. ಪುಣ್ಯಪಾಪಗಳೆಂಬ ಕೆಸರಿನ ಬಳಿತವು ಒಂದಿಷ್ಟೂ ಅವನಲ್ಲಿರುವದಿಲ್ಲ. ಒಳ್ಳೆಯ ಕರ್ಮಗಳನ್ನು ಮಾಡಿ ಉತ್ತಮಫಲಗಳನ್ನು ಪಡೆಯುವ ಆಶೆಯೂ ಕೆಟ್ಟಕರ್ಮಗಳನ್ನು ಮಾಡಿ ದುಃಖದ ಫಲಗಳನ್ನು ಅನುಭವಿಸದಂತೆ ಮಾಡಬೇಕಾಗಿರುವ ಘೋರಸಂಗ್ರಾಮರೂಪವಾದ ಪ್ರಯತ್ನವೂ ಆ ರೂಪದಲ್ಲಿರುವದಿಲ್ಲ. ನಮ್ಮ ಪರಮಾರ್ಥಸ್ವರೂಪವಾದ ಪರಮಾತ್ಮನಲ್ಲಿ ಯಾವ ಪಾಪದ ಕೆಸರೂ ಇಲ್ಲ ಎಂಬ ಭಾವನೆಯು ನಮ್ಮ ಮನಸ್ಸಿನಲ್ಲಿ ಕೂಡಿಕೊಂಡಂತೆಲ್ಲ ನಮ್ಮ ಮನಸ್ಸು ಶಾಂತವಾಗುತ್ತದೆ. ಇದರಿಂದ ನಮ್ಮ ನಿಜವಾದ ಕೇಂದ್ರಾತ್ಮನಲ್ಲಿ ನಾವು ನೆಲಸುವದಕ್ಕೆ ಹೆಚ್ಚಿನ ಸಹಾಯವಾಗುತ್ತದೆ.

ಆ ಪರಮಾರ್ಥಸ್ವರೂಪವು ಮುಪ್ಪಿಲ್ಲದ್ದು, ಮರಣವಿಲ್ಲದ್ದು. ಈಗ ನಮಗೆ ಮುಪ್ಪುಸಾವುಗಳ ಭಾವನೆಯು ಒಂದಲ್ಲದಿದ್ದರೆ ಒಂದು ರೂಪದಿಂದ ಕಾಣಿಸಿಕೊಳ್ಳುತ್ತಲೇ ಇರುವದು. ಶರೀರವು ಬೆಳೆಯುತ್ತದೆ, ಮಾರ್ಪಡುತ್ತದೆ, ಬಗೆಬಗೆಯ ರೋಗರುಜಿನಗಳಿಂದ ಸಂಕಟಪಡುತ್ತದೆ; ಇದರಿಂದ ನಮ್ಮ ಶರೀರವು ಮೆಲ್ಲಮೆಲ್ಲಗೆ ಜೀರ್ಣವಾಗುತ್ತದೆ, ಹಳತಾಗುತ್ತದೆ. ಶರೀರದ ಬಲವು ಕುಗ್ಗುತ್ತದೆ, ಉತ್ಸಾಹವು ಮಂಕಾಗುತ್ತದೆ. ನಮ್ಮ ಕಾಲವು ಸ್ವಲ್ಪಸ್ವಲ್ಪವಾಗಿ ಕಳೆಯುತ್ತಬಂದಿತೆಂದು ನಮ್ಮ ಶರೀರದ ಸುಕ್ಕೂ, ಅಶಕ್ತಿಯೂ, ಇಂದ್ರಿಯಗಳ ಅಪಾಟವವೂ, ಹಲ್ಲುಗಳ ಉದುರುವಿಕೆಯೂ ನರೆಕೂದಲೂ ತಲೆನಡುಕವೂ ಆಗಾಗ್ಗೆ ಎಚ್ಚರಿಕೆಕೊಡುತ್ತಲೇ ಇರುವವು. ಮರಣವು ಆಗಾಗ್ಗೆ ಇಣಿಕಿನೋಡುತ್ತಲೇ ಇರುತ್ತದೆ. ಆದರೂ ನಮ್ಮೊಳಗಿನ ಈ ಕೇಂದ್ರಾತ್ಮನು ಈ ದೇಹದ ಮುಪ್ಪಿನಿಂದ ಮುಪ್ಪಾಗುವದಿಲ್ಲ, ಇದರ ಸಾವಿನಿಂದ ಸಾಯುವದಿಲ್ಲ. ಅಜನಾಗಿ, ನಿತ್ಯನಾಗಿ, ಶಾಶ್ವತನಾಗಿ, ಪುರಾಣನಾಗಿರುವ ಪರಮಾತ್ಮನೇ ನಮ್ಮ ಕೇಂದ್ರಭೂತನಾದ ಆತ್ಮನು–ಎಂಬ ಭಾವನೆಯು ನಮ್ಮಲ್ಲಿ ಮೂಡಿದರೆ, ನಮ್ಮ ಮನಸ್ಸಿನಲ್ಲಿ ಊಡಿಕೊಂಡರೆ, ಅದು ಬಲಿತುಕೊಂಡಂತೆಲ್ಲ ನಮ್ಮ ಕಳವಳವು ಕಳಚಿಕೊಳ್ಳುತ್ತದೆ; ಮುಪ್ಪುಸಾವುಗಳ ಯೋಚನೆಯೂ ಇಲ್ಲದೆ ನಾವು ಅಖಂಡಕಾಲದಲ್ಲಿ ನಿತ್ಯರಾಗಿರುವೆವೆಂಬ ಸುಮಂಗಳವಾದ ತೃಪ್ತಿದಾಯಕವಾದ ನಂಬಿಕೆಯು ನಿಂತುಕೊಳ್ಳುವದು. ಈ ಭಾವನೆಯೂ ನಮ್ಮ ಕೇಂದ್ರಾತ್ಮನ ಕಡೆಗೆ ನಾವು ಬೇಗಬೇಗನೆ ನಡೆಯುವದಕ್ಕೆ ನೆರವಾಗುತ್ತದೆ.

ನಮ್ಮ ಪರಮಾರ್ಥಸ್ವರೂಪವಾಗಿರುವ ಈ ದಿವ್ಯಾತ್ಮನಲ್ಲಿ ಹಸಿವಿಲ್ಲ, ಬಾಯಾರಿಕೆಯಿಲ್ಲ, ಶೋಕವಿಲ್ಲ. ತಿನ್ನುವದಕ್ಕೆ ಅನ್ನವಿಲ್ಲ, ಕುಡಿಯುವದಕ್ಕೆ ನೀರಿಲ್ಲ. ಸುಖವು ಕನಸಿನಲ್ಲಿಯೂ ದುರ್ಲಭವಾಗಿದೆ ಎಂದು ಹಲುಬುತ್ತಿರುವದೇ ಜೀವರುಗಳ ನಿತ್ಯಜೀವನವಾಗಿರುತ್ತದೆ. ಭೂಮಂಡಲದಲ್ಲಿರುವ ಅನ್ನವು ಜನಸಂಖ್ಯೆಗೆ ತಕ್ಕಷ್ಟು ಇಲ್ಲ, ಆಹಾರ ಬೆಲೆಯು ದಿನದಿನಕ್ಕೂ ಏರುತ್ತಿದೆ. ಸಾರ್ವತ್ರಿಕಕ್ಷಾಮವು ಬಂದರೇನು ಗತಿ? ಈಚೆಗೆ ಮಳೆಯು ವರ್ಷವರ್ಷಕ್ಕೂ ಕಡಿಮೆಯಾಗುತ್ತಿದೆ. ಎಷ್ಟೋ ಊರುಗಳಲ್ಲಿ ಕೆರೆಯಿಲ್ಲ, ಕಟ್ಟೆಯಿಲ್ಲ, ಭಾವಿಯಿಲ್ಲ, ಕುಡಿಯುವದಕ್ಕೆ ನೀರಿಲ್ಲದೆ ಗಂಟಲು ಒಣಗಿ ಸಾಯುವೆವಲ್ಲ! ಎಂದು ಹಲವರು ಹಲುಬುತ್ತಿರುವರು. ಆದರೂ ನಮ್ಮ ಕೇಂದ್ರರೂಪವಾಗಿರುವ, ನಮ್ಮ ಸ್ವರೂಪ ಭೂತನಾಗಿರುವ, ಪರಮಾತ್ಮನಲ್ಲಿ ಯಾವ ಹಸಿವೂ ಇಲ್ಲ, ಯಾವ ಬಾಯಾರಿಕೆಯೂ ಇಲ್ಲ, ಯಾವ ಶೋಕಕ್ಕೂ ಎಡೆಯಿಲ್ಲ. ಈ ಭಾವನೆಯನ್ನು ಮನದಂದುಕೊಂಡರೆ, ನಮಗೆ ಹಸಿವುನೀರಡಿಕೆಗಳ ಕೊರತೆಯೂ ಶೋಕವೂ ದೂರವಾಗುವವು. ಆಹಾರದ ದಿನಸುಗಳನ್ನೂ ಕೆರೆಕಟ್ಟೆಭಾವಿಗಳನ್ನೂ ಸಿದ್ಧಗೊಳಿಸುವ ಪ್ರಯತ್ನವನ್ನು ಬಿಟ್ಟು ಈ ನಾಯಿಕನಸನ್ನು ಕಾಣುತ್ತಾ ಕೂತುಕೊಳ್ಳಬೇಕೆಂದೇನೂ ನಮ್ಮ ಅಭಿಪ್ರಾಯವಿಲ್ಲ. ನಾವು ಪರಮಾತ್ಮನ ಮಕ್ಕಳು. ಆತನಲ್ಲಿ ಹಸಿವುಬಾಯಾರಿಕೆಯು ಒಂದಿಷ್ಟೂ ಇರುವದಿಲ್ಲ; ನಾವು ಹಸಿವು ಬಾಯಾರಿಕೆಗಳಿಂದ ನರಳುತ್ತಿರಬೇಕೆಂಬುದು ಎಂದಿಗೂ ಅವನ ಸಂಕಲ್ಪವಲ್ಲ–ಎಂಬ ದೃಢಭಾವನೆಯಿಂದ ದೈನಂದಿನದ ವ್ಯವಹಾರವನ್ನು ಮಾಡುತ್ತಿರಬೇಕು. ಈ ಭಾವನೆಯಿಂದಲೂ ನಮ್ಮ ಕೇಂದ್ರವಾಗಿರುವ ಪರಮಾತ್ಮನನ್ನು ಮುಟ್ಟುವದಕ್ಕೆ ಸೌಕರ್ಯವುಂಟಾಗುತ್ತದೆ.

ಪರಮಾತ್ಮನು ಸತ್ಯಕಾಮನು, ಸತ್ಯಸಂಕಲ್ಪನು. ನಾವು ಎಂಥ ಸಂಕಲ್ಪವನ್ನು ಮಾಡುವೆವೋ ಅಂಥ ಕಾಮಗಳನ್ನೇ ಮಾಡುವೆವು. ಸಾಮಾನ್ಯವಾಗಿ ನಮ್ಮ ಅಂತಃಕರಣವು ಅಶುದ್ಧವಾಗಿರುವದರಿಂದ ನಮ್ಮ ಎಷ್ಟೋ ಸಂಕಲ್ಪಗಳು ಹುಟ್ಟಿಹುಟ್ಟಿ ಅಲ್ಲಲ್ಲೇ ಮೈಗರೆಯುತ್ತಿರುವವು. ನಮ್ಮ ಕಾಮಗಳು ಹುಟ್ಟಿಹುಟ್ಟಿ ವಿಷಯವನ್ನು ಸಂಪಾದಿಸಲಾರದೆ ಹೋಗುವವು. ನಮ್ಮ ಸಂಕಲ್ಪಗಳೂ ಹುಸಿ, ನಮ್ಮ ಕಾಮಗಳೂ ಹುಸಿ. ಆದರೆ ನಮ್ಮೊಳಗಿನ ಕೇಂದ್ರವಾಗಿರುವ ಪರಮಾತ್ಮನ ಸ್ವರೂಪವನ್ನು ನಾವು ನೆನೆದಹಾಗೆಲ್ಲ, ನಮ್ಮ ಅಂತಃಕರಣವು ಶುದ್ಧವಾಗುವದು. ಆಗ ಸತ್ಯಕಾಮನಾದ ಸತ್ಯಸಂಕಲ್ಪನಾದ ಪರಮೇಶ್ವರನೇ ನಮ್ಮ ಆತ್ಮನಾಗಿ ನಮ್ಮ ಹೃದಯದಲ್ಲಿಯೇ ಇರುತ್ತಾನೆಂಬುದನ್ನು ನಾವು ಭಾವನೆಯಿಂದ ಸಾಕ್ಷಾತ್ಕಾರ ಮಾಡಿಕೊಳ್ಳುವದಕ್ಕೆ ಅರ್ಹರಾಗುವೆವು. ಆಗ ನಮ್ಮ ಅಂತಃಕರಣವು ಪರಮೇಶ್ವರನ ಸಂಕಲ್ಪಕ್ಕೆ ಹೊಂದಿಕೊಳ್ಳುವದರಿಂದ ಆತನೇ ನಮ್ಮ ಆತ್ಮನೆಂಬುದು ಮನದಟ್ಟಾಗಿಬಿಡುತ್ತದೆ. ಇಷ್ಟೇ ಅಲ್ಲ, ನಮಗೂ ಸತ್ಯಕಾಮತ್ವವೂ ಸತ್ಯಸಂಕಲ್ಪವೂ ಅಳವಡುವವು.

ನಮಗೆ ನಿಜವಾಗಿ ಏನೇನು ಬೇಕೋ, ಯಾವಯಾವದು ದೊರೆಯುವದು ಸಾಧ್ಯವೋ ಅದೆಲ್ಲವೂ ಆಗಲೇ ನವುಗೆ ದೊರಕಿರುತ್ತದೆ. ಅದೆಲ್ಲವೂ ಈಶ್ವರನ ದೃಷ್ಟಿಯಲ್ಲಿ ನಮ್ಮದಾಗಿಯೇಬಿಟ್ಟಿದೆ. ನಾವು ಹೊಸದಾಗಿ ಪಡೆಯತಕ್ಕದ್ದೇನೂ ಇರುವದೇ ಇಲ್ಲ. ಆದರೆ ನಾವು ಸತ್ಯಕಾಮನೂ ಸತ್ಯಸಂಕಲ್ಪನೂ ಆದ ಆ ಭಗವಂತನನ್ನು ನಮ್ಮ ಹೃದಯದಲ್ಲಿ ಕಂಡುಕೊಳ್ಳುವದಕ್ಕೆ ಪ್ರಯತ್ನಿಸುವದನ್ನು ಬಿಟ್ಟು ಹೊರಗಿನ ತೋರಿಹಾರುವ ವಿಷಯಗಳನ್ನು ಹಿಡಿದುಕೊಳ್ಳುವದರಲ್ಲಿ ವ್ಯಾಪೃತರಾಗಿರುವೆವು. ನಮ್ಮ ಸ್ವಪ್ರಯತ್ನದಿಂದ ಆಯಾ ಕಾಮಗಳನ್ನು ನೆರವೇರಿಸಿಕೊಳ್ಳುವೆವೆಂದು ಬಗೆದಿರುವೆವು. ಈ ನಮ್ಮ ಕಾಮಗಳು ಅನೃತವಾಗಿರುವವು; ವಿಷಯಗಳು ನಮ್ಮ ಎದುರಿಗೇ ಅಡ್ಡಾಡುತ್ತಾ ನಮ್ಮ ಮನಸ್ಸನ್ನು ಸೆಳೆಯುವವು. ಸರಿ, ಅವನ್ನು ಹಿಡಿದುಕೊಳ್ಳುವದಕ್ಕೆ ಹೋದರೆ ಮಾಯವಾಗುವವು, ಈ ಅನೃತಕಾಮಗಳ ಮಾಯಾಪಾಶದ ಬಿಗಿತಕ್ಕೆ ಸಿಕ್ಕಿ ನಾವು ಸಂಕಟಪಡುತ್ತಿರುವದನ್ನೂ ಈ ಪಾಶದಿಂದ ಪಾರಾಗುವ ಬಗೆಯನ್ನೂ ಅಧ್ಯಾತ್ಮಗೀತಾವಳಿಯಲ್ಲಿ ಹೀಗೆ ವರ್ಣಿಸಲಾಗಿದೆ:

ರಾಗ : ಹುಸೇನಿ, ಆದಿತಾಳ

ಮಾಯಾಪಾಶದ ಬಂಧದೆ ಬರಿದೇ । ನೋಯದಿರೆಲವೊ ಮಾನವ ॥ಪ॥
ಮಾಯಾತೀತ ನೀನಾಗುವ ಪರಮೋಪಾಯವ ಮಾಡೆಲೊ, ಮಾನವ ॥ಅ॥

ಈ ಲೋಕದ ಪರಲೋಕದ ಸುಖದೊಳು । ಲೋಲನಾಗದಿರೊ ಮಾನವ ।
ಮೇಲೆಮೇಲೆ ನೀನಿದರ ದೋಷಗಳ । ನಾಲೋಚಿಸುತಿರು ಮಾನವ ॥1॥

ರಾಗದ್ವೇಷದ ಸೆಳೆತಕೆ ಸಿಲ್ಕದೆ । ಜಾಗರೂಕನಿರೊ ಮಾನವ ।
ನೀಗಿ ಮೋಹದಾವರಣವ ನಿಲ್ವ ಸುಯೋಗವನರಸೊ ಮಾನವ ॥2॥

ಸೈಯೆನುತಡಿಯಿದೆ ಮಾಯವಾಗುವವು । ಹೇಯವಿಷಯವಿವು ಮಾನವ ।
ಛೀಯೆನ್ನುತ ಹಿಂದಿರುಗಲು ಬೆನ್ನೊಳೆ । ನಾಯಂತೆ ಬಹವು ಮಾನವ ॥3॥

ಪಡೆದೊಡೆ ದುಃಖವು ಪಿಡಿದೊಡೆ ದುಃಖ ಕೈ । ಬಿಡಲುರೆ ದುಃಖವು ಮಾನವ।
ಕೆಡದಿರು ವಿಷಯದ ಗೊಡವೆಗೆ ಹೋಗಿ ಸಂಗಡಿಪುದು ಸಂಕಟ ಮಾನವ ॥4॥

ಇಂದ್ರಜಾಲವೀ ಸರ್ವಪ್ರಪಂಚ ನಿಸ್ತಂದ್ರಿಯೊಳಿದ ತಿಳಿ ಮಾನವ ।
ಇಂದ್ರಿಯಗಳ ಗೆಲು ಶಂಕರಗುರುವರ । ಸಾಂದ್ರಭಕುತಿಯೊಳೇ ಮಾನವ ॥5॥

ವಿಷಯಗಳು ಸಿಕ್ಕುವದು ಕಷ್ಟ, ಸಿಕ್ಕಿದರೆ ನಿಲ್ಲುವದು ಕಷ್ಟ, ನಿಂತರೆ ಸುಖವನ್ನು ಕೊಡುವದು ಕಷ್ಟ. ಅವುಗಳಿಂದ ನಮ್ಮ ಚಿತ್ತಕ್ಕೆ ಭಾರವೂ ಕಳವಳವೂ ಹೆಚ್ಚುತ್ತಲೇ ಇರುವವು! ಇದೇ ಅನೃತಕಾಮಗಳ ಪ್ರಪಂಚವು; ಇದನ್ನೇ 'ಅಕಾಮಚಾರವು' ಎಂದು ಶ್ರುತಿಯಲ್ಲಿ ಕರೆದಿರುವದು.

ಆದರೆ ನಮ್ಮೊಳಗಿರುವ ಸತ್ಯಕಾಮನೂ ಸತ್ಯಸಂಕಲ್ಪನೂ ಆದ ಪರಮೇಶ್ವರನನ್ನು ಕಂಡುಕೊಂಡು ಆತನಲ್ಲಿಯೇ ನಾವು ನೆಲೆನಿಂತಾಗ ಆತನ ಸತ್ಯಕಾಮಗಳು ನಮ್ಮವಾಗುವವು; ಆತನ ಸಂಕಲ್ಪಗಳು ನಮ್ಮವಾಗುವವು. ಆಗ ನಾವು ಸಂಕಲ್ಪಿಸಿದ ಮಾತ್ರದಿಂದ ಆಯಾ ವಿಷಯಗಳು ತಾವುತಾವೇ ನಮ್ಮಲ್ಲಿಗೆ ಬಂದು ಸಾಕಿದ ನಾಯಿಗಳಂತೆಯೂ ಪಳಗಿಸಿದ ಆನೆಗಳಂತೆಯೂ ನಮಗೆ ಬೇಕಾದ ಕೋರಿಕೆಗಳನ್ನು ನೆರವೇರಿಸಿಕೊಡುವವು. ಆಗ ನಮ್ಮ ಚಿತ್ತಕ್ಕೆ ಯಾವ ಭಾರವೂ ಇರುವದಿಲ್ಲ, ಯಾವ ಕಳವಳವೂ ಇರುವದಿಲ್ಲ.

ನಮಗೆ ಬೇಕಾದ ವಸ್ತುವು ಎಷ್ಟೇ ಅತಿಶಯವಾಗಿರಲಿ, ಸಾಮಾನ್ಯರ ದೃಷ್ಟಿಯಿಂದ ಅದು ದೊರೆಯುವದು ಎಷ್ಟೇ ಅಸಾಧ್ಯವಾಗಿ ಕಾಣುತ್ತಿರಲಿ, ಪರಮೇಶ್ವರನ ದೃಷ್ಟಿಯಲ್ಲಿ ಅದರಲ್ಲಿ ಯಾವ ಅತಿಶಯವೂ ಇರುವದಿಲ್ಲ; ಅದು ನಮಗೆ ದೊರೆಯುವದು ಅತ್ಯಂತವಾಗಿ ಸುಲಭಸಾಧ್ಯವಾಗಿರುತ್ತದೆ. ಈಶ್ವರನನ್ನು ಕಂಡುಕೊಂಡರೆ ಸಾಕು, ಅಷ್ಟು ಮಾತ್ರದಿಂದಲೇ ತಂದೆತಾಯಿಗಳ ಭಾಗ್ಯ, ಅಣ್ಣತಮ್ಮಂದಿರ ಅಥವಾ ಅಕ್ಕತಂಗಿಯರ ಪ್ರೇಮದ ಭೋಗ, ಗೆಳೆಯರೊಡನೆ ಆಡುವ ಸುಖ, ಅನ್ನಪಾನಗಳ ಭೋಗ, ಗಂಧಮಾಲ್ಯಗಳ ಅಥವಾ ಗಾನವಿನೋದದ ಭೋಗ–ಯಾವದೇ ಆಗಿರಲಿ, ಅದು ಸಂಕಲ್ಪಮಾತ್ರದಿಂದ ನಮ್ಮದಾಗುವದು. ಮನೆ, ಹೊಲ, ದನಕರುಗಳು, ಹಣಕಾಸು, ಮಕ್ಕಳು ಮರಿ, ಆಳುಕಾಳು, ಅಧಿಕಾರ, ಕೀರ್ತಿ, ಆಯುಸ್ಸು, ಆರೋಗ್ಯ, ಬುದ್ಧಿಶಕ್ತಿ, ವಿಶಾಲವಾದ ಹೃದಯದ ಪ್ರೇಮ–ಇಂಥ ಯಾವ ಭೋಗಗಳು ನಮಗೆ ಬೇಕಾಗಿರಲಿ, ಅವು ಸಂಕಲ್ಪಿಸಿದ ಮಾತ್ರದಿಂದ ನಮ್ಮವಾಗುವವು. ಈ ಎಲ್ಲಾ ವಸ್ತುಗಳೂ ತಮ್ಮ ತಮ್ಮ ಹೊರಗಿನ ಆಕಾರದಿಂದಲೇ ನಮಗೆ ದೊರೆಯುವವೋ ಇಲ್ಲವೋ ಹೇಳುವದಕ್ಕೆ ಆಗುವದಿಲ್ಲ. ಆದರೆ ಪರಮೇಶ್ವರನ ಅನುಗ್ರಹವೊಂದಾದರೆ, ಇವುಗಳಿಂದಾಗಬೇಕಾದ ಆನಂದವು ನಮಗೆ ದೊರಕುವದು ಖಂಡಿತ.

ಮಾನವ ಪ್ರಯತ್ನಕ್ಕೆ ಕಷ್ಟಸಾಧ್ಯವೆಂದು ಅಥವಾ ಅಸಾಧ್ಯವೆಂದು ನಮಗೆ ತೋರುವ ಎಷ್ಟೋ ಇಷ್ಟಾರ್ಥಗಳು ಈಶ್ವರನ ಅನುಗ್ರಹದಿಂದ ಸುಲಭಸಾಧ್ಯವಾಗಿರುವವು. ಅದರಲ್ಲಿಯೂ ನಮ್ಮ ಉಪಾಸನೆಯ ಬಲವು ಎಷ್ಟು ಹೆಚ್ಚಿದರೆ ಅಷ್ಟು ವೇಗದಿಂದ ಫಲವು ಕಾಣಿಸಿಕೊಳ್ಳುತ್ತದೆ. ಸರ್ವಜ್ಞನೂ ಸರ್ವಶಕ್ತನೂ ದಯಾಸಿಂಧುವೂ ಆದ ಆ ಪರಮಾತ್ಮನಲ್ಲಿ ಈಡೇರದ ಸಂಕಲ್ಪಗಳು ಯಾವವು ಇದ್ದಾವು? ಆತನನ್ನು ಅನನ್ಯಭಕ್ತಿಯಿಂದ ಚಿಂತಿಸುತ್ತಿದ್ದರಾಯಿತು. ನಮ್ಮ ಜೀವನಲ್ಲಿ ಯಾವ ಯಾವ ವಸ್ತುವು ಯಾವಯಾವಾಗ ಎಲ್ಲೆಲ್ಲಿ ಎಷ್ಟೆಷ್ಟು ನಮಗೆ ಅವಶ್ಯವಾಗಿರುವದೋ ಅದೆಲ್ಲವೂ ಆಗಾಗ್ಗೆ ಸರಿಯಾಗಿ, ಅಲ್ಲಲ್ಲಿಯೇ ಅಷ್ಟುಮಟ್ಟಿಗೇ ನಮಗೆ ಕಾಣಿಸಿಕೊಳ್ಳುವದು ಖಂಡಿತ. ನಿತ್ಯಾಭಿಯುಕ್ತರಾದವರ ಯೋಗಕ್ಷೇಮವನ್ನು ಆ ಪರಮಾತ್ಮನು ತಾನೇ ವಹಿಸಿರುತ್ತಾನೆ.

ಯಾವದಾದರೊಂದು ಸಂದರ್ಭದಲ್ಲಿ ನಮಗೆ ದಿಕ್ಕುತೋಚದೆ ನಾವು ಕರ್ತವ್ಯಮೂಢರಾಗಿರಬಹುದು; ಆಗ್ಗೆ ಏನುಮಾಡಿದರೆ ಸರಿ ಎಂಬುದು ಮತ್ತೆ ಯಾರ ಸಹಾಯವೂ ಇಲ್ಲದೆ ಆತನ ಅನುಗ್ರಹದಿಂದ ನಮಗೆ ಕಾಲಕ್ಕೆ ಸರಿಯಾಗಿ ಹೊಳೆದುಬಿಡುವದು. ನಮಗೆ ಒದಗಿರುವ ಭಯಪರಂಪರೆಗಳಲ್ಲಿ ನಮಗೆ ಯಾವ ರಕ್ಷಕರೂ ಕಾಣದೆ ಇರಬಹುದು; ಆದರೆ ಆತನಲ್ಲಿ ನಾವು ಅಚಲ ವಿಶ್ವಾಸವನ್ನಿಟ್ಟುಕೊಂಡಿದ್ದರೆ ನಮಗೆ ಎಲ್ಲಿಂದಲೋ, ನಾವು ನಿರೀಕ್ಷಣೆಮಾಡದೆ ಇದ್ದ ಕಡೆಯಿಂದ, ರಕ್ಷಣೆಯು ದೊರೆತುಬಿಡುತ್ತದೆ. ನಮ್ಮಲ್ಲಿರುವ ವಸ್ತುಗಳು ಕ್ಷೇಮದಿಂದಿರುವದು ಹೇಗೆಂಬ ಯೋಚನೆಯು ನಮ್ಮನ್ನು ಆಗಾಗ್ಗೆ ಕಾಡಿಸುವದುಂಟು; ಆದರೆ ಭಗವದ್ಭಾವನೆಯಿಂದ ಕೂಡಿದ್ದರೆ ನಮ್ಮ ವಸ್ತುಗಳಿಗೆ ಯಾವ ಅಪಾಯವೂ ಇರುವದಿಲ್ಲ. ಭಗವಂತನ ಸಾನ್ನಿಧ್ಯವೊಂದಿದ್ದರೆ ನಮಗೆ ಯಾವ ಕಾಲಕ್ಕೆ ಯಾವ ಸುಖಸಾಮಗ್ರಿಗಳು ಅಥವಾ ಯಾವ ಅನರ್ಘವಸ್ತುಗಳು ಅವಶ್ಯವಾಗಿರುವವೋ ಅವು ತಪ್ಪದೆ ನಮ್ಮಲ್ಲಿಗೆ ಬಂದು ಸೇರುವವು. ನಮಗೆ ಯಾವದೊಂದು ಕೊರತೆಯೂ ಇರುವದೇ ಇಲ್ಲ.

ಹೆಚ್ಚೇನು, ಈ ಲೋಕದಲ್ಲಿ ಮಾನವನಿಗೆ ಬರಿಯ ಸ್ವಪ್ರಯತ್ನದಿಂದ ಯಾವಯಾವದರ ಆಶೆಗಳುಂಟಾಗಿ ಪರಿಪೂರ್ತಿಯಾಗದೆ ಇರುವವೋ ಅವಕ್ಕೆಲ್ಲ ಮೂಲವು ಪರಮಾತ್ಮನೇ. ಆತನ ಅನುಗ್ರಹವಾದರೆ ಅವು ಅನಾಯಾಸವಾಗಿ ಆಯಾ ಕಾಲಕ್ಕೆ ಸಂಕಲ್ಪಮಾತ್ರದಿಂದ ದೊರಕಿಬಿಡುವವು. ಆ ಪರಮಾತ್ಮನನ್ನು ನಾವು ಬಹಳದೂರ ಹುಡುಕಿಕೊಂಡೇನೂ ಹೋಗಬೇಕಾಗಿರುವದಿಲ್ಲ. ಇಲ್ಲಿಯೇ, ಈಗಲೇ, ಆತನನ್ನು ನಾವೆಲ್ಲರೂ ಕಾಣಬಹುದು. ಆದರೆ ಹಾಗೆ ಕಾಣುವದಕ್ಕೆ ನಿಜವಾದ ಮನಸ್ಸೂ ಪ್ರಯತ್ನವೂ ಅವಶ್ಯ. ಒಂದಾನೊಂದು ಚಿನ್ನದ ಗಣಿಯ ಮೇಲೆ ಓಡಾಡುವ ಸಾಮಾನ್ಯಜನರಿಗೆ "ಇದೊಂದು ಕಲ್ಲು ಹೊಲ; ಇದರಲ್ಲಿ ಯಾವ ಪೈರೂ ಬೆಳೆಯುವದಿಲ್ಲ. ಆದ್ದರಿಂದ ಇದನ್ನು ಮಾರಿಬಿಡೋಣ" ಎಂದು ತೋಚಬಹುದು. ಆದರೆ ಭೂಗರ್ಭಶಾಸ್ತ್ರದ ತತ್ತ್ವಗಳನ್ನು ಬಲ್ಲ ಸಾಹುಕಾರನೊಬ್ಬನು ಆ ಹೊಲವನ್ನು ಕಂಡರೆ ಹೊಲದವರು ಕೇಳುವ ಬೆಲೆಗಿಂತಲೂ ಸ್ವಲ್ಪ ಹೆಚ್ಚಾಗಿಯೇ ಕೊಟ್ಟು ಅದನ್ನು ವಶಪಡಿಸಿಕೊಳ್ಳುವನು. ಸ್ವಲ್ಪಕಾಲದಲ್ಲಿಯೇ ಆ ನೆಲವನ್ನು ಚೆನ್ನಾಗಿ ಅಗೆಯಿಸಿ ಚಿನ್ನವನ್ನು ತೆಗೆಯುವ ಉದ್ಯೋಗವನ್ನೇ ಮಾಡಿಬಿಡುತ್ತಾನೆ. ಅಲ್ಲವೆ? ಇದರಂತೆ ನಮಗೆ ಈ ನಮ್ಮ ಶರೀರದಲ್ಲಿ ಕೆಲವು ಅನ್ಯತಕಾಮಗಳನ್ನು ಪೂರ್ತಿಗೊಳಿಸುವದಕ್ಕೆ ಸಾಧನವೆಂಬ ದೃಷ್ಟಿಯೇ ಇರುತ್ತದೆ. ಆದರೆ ಭಗವದ್ಭಕ್ತರ ಉಪದೇಶವನ್ನು ಹೊಂದಿದ ಮಹಾತ್ಮರಿಗೆ ಸತ್ಯಕಾಮನೂ ಸತ್ಯಸಂಕಲ್ಪನೂ ಆಗಿರುವ ಪರಮೇಶ್ವರನ ನೆಲವೀಡೇ ಈ ಶರೀರವು ಎಂಬ ಅರಿವು ಉಂಟಾಗಿರುತ್ತದೆ.

ಪರಮಾತ್ಮನು ನಮ್ಮ ಈ ಶರೀರದಲ್ಲಿಯೇ, ನಮ್ಮ ಹೃದಯದೊಳಗೆ ಆಕಾಶದಂತೆ ಸೂಕ್ಷ್ಮರೂಪನಾಗಿ ಸತತವೂ ವಾಸವಾಗಿರುತ್ತಾನೆ. ಇದನ್ನು ಸಜ್ಜನರ ಸಂಗದಿಂಲೂ ಉಪದೇಶದಿಂದಲೂ ತನ್ನ ಅನುಭವಕ್ಕೆ ತಂದುಕೊಂಡವನಿಗೆ ಈ ಶರೀರವೊಂದು ಚಿನ್ನದ ಗನಿಯಾಗಿರುತ್ತದೆ. ಮಿಕ್ಕವರಿಗೆ ಯಾರಿಗೂ ಗೊತ್ತಾಗಿರುವ, ಸಕಲಕಾಮಗಳನ್ನೂ ನೆರವೇರಿಸಿಕೊಡಬಲ್ಲ, ಪರಮಾತ್ಮನು ಈ ಹೃದಯದಲ್ಲಿಯೇ ಇರುವನೆಂಬುದು ಅಂಥವನಿಗೆ ತಿಳಿಯುವದು. ಈ ಪರಮಾತ್ಮನು ಹೃದಯದಲ್ಲಿರುವದರಿಂದಲೇ, ಅದಕ್ಕೆ 'ಹೃದಯಮ್' (ಇವನು ಹೃದಯದಲ್ಲಿ) ಎಂಬ ಅನ್ವರ್ಥನಾಮವು ಬಂದಿರುವದೆಂಬುದು ಮನಕ್ಕೆ ತಟ್ಟುವದು.

# 34. ಸರ್ವಾತ್ಮ ಭಾವನೆ

* ಉಪನಿಷತ್ತಿನಲ್ಲಿಯೂ ಅದನ್ನು ಅನುಸರಿಸುವ ಭಗವದ್ಗೀತಾದಿಸ್ಮೃತಿಗಳಲ್ಲಿಯೂ ಮತ್ತೆಮತ್ತೆ ನಮ್ಮ ಲಕ್ಷ್ಯಕ್ಕೆ ಹಿಡಿದಿರುವ ಒಂದು ತತ್ತ್ವೋಪದೇಶವೇನೆಂದರೆ, ಒಬ್ಬನೇ ಒಬ್ಬನಾಗಿ ಅದ್ವಿತೀಯನಾಗಿರುವ ಪರಮೇಶ್ವರನಿಂದಲೇ ಈ ಇಡಿಯ ಜಗತ್ತು ಬಂದಿರುತ್ತದೆ. ಇಲ್ಲಿರುವ ಚೇತನಾಚೇತನರೂಪವಾದ ವಸ್ತುಗಳಿಗೆಲ್ಲ ಆ ಒಬ್ಬ ಪರಮೇಶ್ವರನೇ ಮೂಲವು. ಆತನು ಈ ಜಗತ್ತನ್ನು ಸೃಷ್ಟಿಸಿ ಇದರಲ್ಲಿ ತಾನೇ ಒಳಹೊಕ್ಕಿರುತ್ತಾನೆ. ಈ ಜಗತ್ತೆಲ್ಲವೂ ಆತನಲ್ಲಿಯೇ ಇದ್ದುಕೊಂಡು ಬಾಳುತ್ತಿರುವದು. ಇಡಿಯ ಜಗತ್ತಿನ ಪರಮಮೂಲ ವಾಗಿರುವ, ಇಡಿಯ ಜಗತ್ತಿಗೆ ಪರಮಾಶ್ರಯವಾಗಿರುವ, ಆ ಪರಮಾತ್ಮನ ಜ್ಞಾನವನ್ನು ಮಾಡಿಕೊಂಡು, ಸರ್ವಾತ್ಮಭಾವನೆಯಿಂದ ಲೋಕದಲ್ಲಿ ವ್ಯವಹರಿಸುವದೇ ನಮ್ಮ ಬಾಳಿನ ಪರಮೋದ್ದೇಶವು.

ಪ್ರಪಂಚವನ್ನು ಒಟ್ಟಾಗಿ ಭಾವಿಸುವದು ಸಮಷ್ಟಿಭಾವನೆಯು, ಪ್ರಪಂಚದಿಂದ ನಮ್ಮನ್ನು ಅಥವಾ ಒಂದೊಂದು ವಸ್ತುವನ್ನು ಬೇರ್ಪಡಿಸಿಕೊಂಡು ನೋಡುವದು ವ್ಯಷ್ಟಿಭಾವನೆಯು. ಇಡಿಯ ಪ್ರಪಂಚದತ್ತ ನೋಡದೆ, ಸಮಷ್ಟಿಭಾವನೆಯ ಕಣ್ಣನ್ನು ಮುಚ್ಚಿಕೊಂಡು ನಾನು, ನಮ್ಮ ಕುಟುಂಬ, ನಮ್ಮ ಹೊಲ ಮನೆಗಳು, ನಮ್ಮ ಏಳುಬೀಳು-ಎಂದು ಬಿಡಿಸಿಬಿಡಿಸಿ ಭಾವಿಸುವ ಬಾಳು ವ್ಯಷ್ಟಿಭಾವನೆಯ ಬಾಳು. ಪರಮಾರ್ಥವಾಗಿ ಇಡಿಯ ಜಗತ್ತನ್ನೇ ಒಂದುಗೂಡಿಸಿರುವ ಪರಮಾತ್ಮನ ಕಡೆಯಿಂದ ಇತ್ತ ತಿರುಗಿರುವವರೆಲ್ಲರೂ ಈ ವ್ಯಷ್ಟಿ ಭಾವನೆಯಬಾಳನ್ನೇ ಬಾಳುತ್ತಿರುವರು. ಇದು ದುಃಖಪೂರ್ಣವಾದ ಬಾಳು, ಮೂರುದಿನದ,

* ಸಂಪುಟ 18, ಸಂಚಿಕೆ 10, ಜೂನ್ 1949, ಪುಟ 217-221

ಮೂರುಘಳಿಗೆಯ, ಬಾಳು; ಇದರಲ್ಲಿ ಕಾಣುವ ಸುಖವೂ, ಸುಖವಲ್ಲ, ಅದೂ ದುಃಖವೇ. ಈ ವ್ಯಷ್ಟಿ ಬಾಳನ್ನು ನೆಚ್ಚಬೇಡಿ ಎಂದು ಬಲ್ಲವರು ಇದರ ವಿಷಯದಲ್ಲಿ ವೈರಾಗ್ಯವನ್ನು ಉಪದೇಶಿಸುವರು. ಇದು ನಿಜವಾದ ಬಾಳೇ ಅಲ್ಲ.

ಆದರೆ ಇನ್ನೊಂದು ಬಾಳಿದೆ. ಅದು ಸಮಷ್ಟಿಭಾವನೆಯ ಬಾಳು. ನಮ್ಮಲ್ಲಿ ಆ ಭಾವನೆಯು ತಲೆದೋರಿಕೊಂಡಂತೆಲ್ಲ ನಮ್ಮ ಬಾಳು ಉತ್ತಮವಾಗುವದು. ಆ ಭಾವನೆಯು ಪರಮಾವಧಿಯನ್ನು ಮುಟ್ಟಿದರೆ ನಮ್ಮ ಬಾಳು ಅತ್ಯಂತಶಾಂತಿಮಯವಾಗಿಯೂ ಅತ್ಯಂತಸುಖಮಯವಾಗಿಯೂ ಇರುವದು. ಅದೇ ನಿಜವಾದ ಬಾಳು. ಆ ಬಾಳನ್ನು ಬಾಳುವದೇ ಮನುಷ್ಯನ ಹೆಗ್ಗುರಿಯಾಗಿರಬೇಕು ಎಂದು ಬಲ್ಲವರು ಉಪದೇಶಿಸುತ್ತಾರೆ.

ಸಮಷ್ಟಿಭಾವನೆಯು ಅಳವಡುವದಕ್ಕೆ ಮಾಡಬೇಕಾದದ್ದೇನು? ಮೊಟ್ಟಮೊದಲು ನಮ್ಮ ಸುತ್ತಲೂ ಕಾಣುವ ಸೃಷ್ಟಿಯ ಏಕತ್ವವನ್ನು ಮನವರಿಕೆಮಾಡಿಕೊಳ್ಳಬೇಕು. ಸಂಕುಚಿತವಾದ ಭಾವನೆಯನ್ನು ಬಿಟ್ಟು ನೋಡಿದರೆ ಇಡಿಯ ಸೃಷ್ಟಿಯೇ ನಮ್ಮನ್ನು ಸಮಷ್ಟಿಭಾವನೆಯ ಸಮಾರಾಧನೆಗೆ ಬರಬೇಕೆಂದು ಮಂತ್ರಾಕ್ಷತೆಯ ಬಟ್ಟಲನ್ನು ಕೈನೀಡಿ ಹಿಡಿದಿರುವಂತೆ ಕಾಣುವದು. ಸೃಷ್ಟಿಯಲ್ಲಿ ಎಲ್ಲೆಲ್ಲಿಯೂ ಕಾಣಬರುವ ಆನಂದದ ವಿಲಾಸವು ನಮ್ಮನ್ನು ಇಡಿಯ ಜಗತ್ತಿನ ಒಟ್ಟು ಬಾಳಿನಲ್ಲಿ ಭಾಗವನ್ನು ವಹಿಸುವ ಸಮಾಧಿಗೆ ಒಯ್ಯುವಂತೆ ತೋರುತ್ತಿರುವದು. ಮೋಡಗಳಿಂದ ಸುರಿಯುವ ಮಳೆ, ವಿಶಾಲವಾದ ಹಸಲೆಯ ಎಳೆಯ ಹಸಿರು ಹುಲ್ಲು ಪ್ರದೇಶಗಳು, ಘಮಘಮಿಸುವ ಪರಿಮಳವನ್ನು ಬೀರುತ್ತಾ ಕಣ್ಮನಗಳನ್ನು ಸೂರೆಗೊಳ್ಳುತ್ತಿರುವ ಹೂಗಿಡಗಳು, ಚಿತ್ರವಿಚಿತ್ರದ ಆಕಾರದಿಂದಲೂ ಬಣ್ಣಗಳಿಂದಲೂ ಕೂಡಿದ ಎಲೆಗಳು ಸೊಗಯಿಸುತ್ತಿರುವ ಗಿಡಮರಬಳ್ಳಿಗಳು, ಅಲ್ಲಿಂದಲ್ಲಿಗೆ ಸುಳಿದಾಡುತ್ತಿರುವ ತಂಗಾಳಿ, ಜುಳಜುಳನೆ ಹರಿಯುತ್ತಿರುವ ನದಿಗಳು, ಏಳುಬೀಳುಗಳಿಂದ ಕುಣಿದಾಡುತ್ತಿರುವ ಕಡಲಿನ ಹೆದ್ದೆರೆಗಳು, ಇಂಪಿನ ಕಲರವದಿಂದ ನಮ್ಮ ಚಿತ್ತವನ್ನು ಸೆಳೆಯುತ್ತಿರುವ ಹಕ್ಕಿಗಳು, ಆಕಾಶದಲ್ಲಿ ಥಳಥಳಿಸುತ್ತಿರುವ ನಕ್ಷತ್ರಗಳು, ರಂಗಿನಾರತಿಯನ್ನು ಚೆಲ್ಲಿದಂತೆ ಮಂಗಲವನ್ನು ಸೂಚಿಸುವ ಅರುಣೋದಯ–ಇವೆಲ್ಲ ಮಾತಿನಿಂದ ಬಣ್ಣಿಸುವದಕ್ಕಸದಳವಾದ ಒಸಗೆಯನ್ನು ನಮಗೆ ಒಪ್ಪಿಸುತ್ತಿರುವವು. ನಾವೂ ಅವುಗಳಿಗೆ ಸ್ವಾಗತವನ್ನು ಬಯಸುತ್ತಾ, ಅವುಗಳಲ್ಲಿ ಸಹಾನುಭೂತಿ ಯನ್ನು ತೋರಿಸುವದಕ್ಕೂ ಎಲ್ಲದರೊಡನೆಯೂ ನಾವೂ ಒಂದಾಗಿರುವೆಂಬುದನ್ನು ಪ್ರದರ್ಶನ ಮಾಡುವದಕ್ಕೂ ಪ್ರಯತ್ನಿಸುತ್ತಿರುವೆವು.

ಸಮಸ್ತಭೂತಗಳೂ ಸಮಸ್ತಚರಾಚರವಸ್ತುಗಳೂ ನಾವೂ ಸಮಷ್ಟಿಜೀವನದಲ್ಲಿ ಒಂದಾಗಿರುವೆವೆಂಬುದನ್ನು ಕಂಡುಕೊಂಡವರು ಮಹನೀಯರು. ಉದಾರಚರಿತ ರಾದವರಿಗೆ ಇಡಿಯ ಪ್ರಪಂಚವೇ ಒಂದು ಕುಟುಂಬವಾಗಿರುವದು. ಯಾವದೊಂದು

ಅಚೇತನವಸ್ತುವಾಗಲಿ, ಯಾವದೊಂದು ಸಸ್ಯವಾಗಲಿ, ಯಾವದೊಂದು ಪ್ರಾಣಿಯಾಗಲಿ, ಯಾವನೊಬ್ಬ ಮಾನವನಾಗಲಿ, ತಮ್ಮ ಜೀವನಕ್ಕೆ ಸೇರಿಲ್ಲವೆಂದು, ತಮ್ಮ ಪರಮಜೀವನಕ್ಕಿಂತ ಹೊರಚ್ಚೆಂದು, ಭಾವಿಸುವದು ಇಂಥ ಮಹಾತ್ಮರಿಗೆ ಒಗ್ಗುವದಿಲ್ಲ. ಯಾರೊಬ್ಬರಿಗೆ ದುಃಖವಾದರೂ ಅವರು ಸಹಿಸಲಾರರು, ಯಾರೊಬ್ಬರಿಗೆ ಸುಖವುಂಟಾದರೂ ಅವರು ಹಿಗ್ಗುವರು; ಯಾರೊಬ್ಬರು ದಾರಿತಪ್ಪಿದರೂ, ಅವರನ್ನು ಸರಿಯಾದ ದಾರಿಗೆ ಕರೆತರುವ ಪ್ರಯತ್ನವನ್ನು ಮಾಡುವರು; ಯಾರೊಬ್ಬರು ಸರಿಯಾದ ಮಾರ್ಗದಲ್ಲಿ ನಡೆಯುತ್ತಿದ್ದರೂ ಅದನ್ನು ಅನುಮೋದಿಸಿ ಅವರಿಗೆ ಒತ್ತಾಸೆಕೊಡುವದಕ್ಕೆ ಪ್ರಯತ್ನಮಾಡುವರು. ಹೀಗಿರುವದು ಸಮಷ್ಟಿಭಾವನೆಯಿಂದ ತಮ್ಮ ಜೀವನವನ್ನು ಒಟ್ಟು ಜಗತ್ತಿನ ಬಾಳುವೆಯಲ್ಲಿ ಒಂದುಗೂಡಿಸಿರುವ ಮಹಾಶಯರ ವರ್ತನೆ.

ಇದೇನೂ ಸಾಮಾನ್ಯರಿಗೆ ದಕ್ಕುವ ತುತ್ತಲ್ಲ. ಒಂದು ಕುಟುಂಬದಲ್ಲಿರುವವರೆಲ್ಲರೂ ಒಂದೇ ಮನಸ್ಸಿನಿಂದ ಒಬ್ಬರಲ್ಲೊಬ್ಬರು ಸಹಾನುಭೂತಿಯನ್ನೂ ಮೈತ್ರಿಯನ್ನೂ ತೋರಿಸಿಕೊಂಡು ಬಾಳುವದೇ ಕಷ್ಟವಾಗಿ ತೋರುತ್ತಿರುವ ಈ ಕಾಲದಲ್ಲಿ ಇಡಿಯ ಭೂಲೋಕದಲ್ಲಿರುವ ಮಾನವರೆಲ್ಲರೂ ಪರಸ್ಪರಸಹಾನುಭೂತಿ ಯಿಂದ ಬಾಳಬೇಕು–ಎಂಬ ಮಾತು ಎಂಥ ಕನ್ನಡಿಯ ಗಂಟಾಗಿ ತೋರುವದು! ಇನ್ನು ಚರಾಚರಪ್ರಾಣಿಗಳೆಲ್ಲವನ್ನೂ ತನ್ನಂತೆ ಕಾಣುವದು, ತನಗೆ ಸುಖವು ಇಷ್ಟವಾಗಿರುವಂತೆ ಮಿಕ್ಕವರಿಗೂ ಇಷ್ಟವಾಗಿರುವದೆಂದೂ ತನಗೆ ದುಃಖವು ಅನಿಷ್ಟವಾಗಿರುವದೆಂದೂ ಬಗೆದು ಅದರಂತೆ ಜೀವನವನ್ನು ಹೊಂದಿಸಿಕೊಳ್ಳುವದಕ್ಕೆ ಯತ್ನಿಸುವದು–ಎಷ್ಟು ಕಷ್ಟಸಾಧ್ಯವಾಯಿತು! ಆದ್ದರಿಂದ ಸೃಷ್ಟಿಯೆಲ್ಲವನ್ನೂ ಏಕತ್ವಭಾವನೆಯಿಂದ ಕಾಣುವದು ಗ್ರಂಥದ ಮಾತೇ ಹೊರತು ಅನುಭವಕ್ಕೆ ಬರತಕ್ಕದ್ದಲ್ಲ ಎಂದು ಕೆಲವರು ಹೇಳುತ್ತಾರೆ.

ಆದರೆ ಇಷ್ಟು ಕಷ್ಟವೆಂದು ತೋರಿದರೂ ಸರಿಯಾದ ಹಾದಿಯನ್ನು ಹಿಡಿದರೆ ಇದು ಬಹು ಸುಲಭವಾಗಿರುತ್ತದೆ. ಜಗತ್ತು ಎಷ್ಟೇ ವಿಶಾಲವಾಗಿರುವಂತೆ ಕಾಣಲಿ, ಇದರಲ್ಲಿರುವ ಚೇತನಾಚೇತನಗಳು ಎಷ್ಟೇ ವಿಚಿತ್ರವಾಗಿ ಕಾಣಲಿ, ಸೃಷ್ಟಿಯು ಪ್ರತಿಕ್ಷಣವೂ ಮಾರ್ಪಡುತ್ತಾ ಎಷ್ಟೇ ಹೊಸಹೊಸದಾಗಿರುವಂತೆ ತೋರಲಿ, ಇದರಲ್ಲಿ ಕಾಣುವ ಸೌಂದರ್ಯವು, ಹೊಂದುಗೆಯು, ವ್ಯವಸ್ಥೆಯು, ಪರಸ್ಪರಾಕರ್ಷಣವು, ಪ್ರೇಮವು, ಆನಂದವು–ಮುಂತಾದವುಗಳೆಲ್ಲ ಸಕಲ ಗುಣಗಳಿಗೂ ಆಗರವಾಗಿರುವ ಪರಮಾತ್ಮನಿಂದ ಬಂದಿವೆ. ಆ ಪರಮಾತ್ಮನು ತಾನು ಸೃಷ್ಟಿಸಿರುವ ಪ್ರಪಂಚವನ್ನು ಒಂದು ಕಡೆ ಕೈಬಿಟ್ಟು ತಾನು ಎಲ್ಲಿಯೋ ಅವಿತುಕೊಂಡಿರುವದಿಲ್ಲ. ಅವನು ನಮ್ಮೆಲ್ಲರ ಒಳಗೂ ನಮ್ಮ ಆತ್ಮನಿಗೂ ಆತ್ಮನಾಗಿ ಪರಮಾತ್ಮನೆನಿಸಿಕೊಂಡು ನಮ್ಮ ಇರವಿಗೂ ಬಾಳಿಗೂ ತನ್ನ ಅಮೃತಧಾರೆಯ ಹೊಯ್ನೀರನ್ನು ಎರೆಯುತ್ತಿದಾನೆ.

ಹೊರಗಿನ ಮಾನವರಲ್ಲಿಯೂ ಪ್ರಾಣಿಗಳಲ್ಲಿಯೂ ಸಸ್ಯಗಳಲ್ಲಿಯೂ ಪ್ರಕೃತಿಯ ದೃಶ್ಯಗಳಲ್ಲಿಯೂ ನಮಗೆ ಸಹಾನುಭೂತಿಯುಂಟಾಗುತ್ತಿರುವದಕ್ಕೇನು ಕಾರಣ? ನಮ್ಮೆಲ್ಲರಿಗೂ ಮೂಲವಾಗಿರುವ ಪರಮಾತ್ಮನು ಒಬ್ಬನೇ ಆಗಿರುವದೇ. ಆ ಪರಮಾತ್ಮನೇ ನಮ್ಮೆಲ್ಲರಲ್ಲಿ ಕಾಣುವ ಇಚ್ಛಾಶಕ್ತಿ, ಜ್ಞಾನಶಕ್ತಿ, ಕ್ರಿಯಾಶಕ್ತಿ–ಎಲ್ಲಕ್ಕೂ ಮೂಲಕಾರಣ ನಾಗಿರುತ್ತಾನೆ. ನಾವು ಹೊರಗಿನ ಒಂದು ವಸ್ತುವಿನ ಸೌಂದರ್ಯವನ್ನಾಗಲಿ, ಒಂದು ಪ್ರಾಣಿಯ ಶೌರ್ಯವನ್ನಾಗಲಿ, ಒಬ್ಬ ಮನುಷ್ಯನ ಬುದ್ಧಿಯನ್ನಾಗಲಿ, ಇನ್ನೊಬ್ಬನ ಪ್ರೇಮವನ್ನಾಗಲಿ ಮನಸ್ಸಿಗೆ ತಂದುಕೊಳ್ಳುವದೂ ಅದನ್ನು ಮೆಚ್ಚುವದೂ ಏತರ ಬಲದಿಂದ? ಈ ಸೌಂದರ್ಯ, ಶೌರ್ಯ, ಬುದ್ಧಿ, ಪ್ರೇಮ–ಎಲ್ಲಕ್ಕೂ ಮೂಲವಾಗಿರುವ ಪರಮಾತ್ಮನೇ ನಮ್ಮೆಲ್ಲರ ಮೂಲವಾಗಿರುವದ ರಿಂದ. ಆ ಪರಿಪೂರ್ಣಶಕ್ತಿಯುತನಾದ ಪರಮಾತ್ಮನು ನಮ್ಮೆಲ್ಲರಿಗೂ ಮೂಲವಾಗಿರುವದಲ್ಲದೆ, ಈಗಲೇ ಇಲ್ಲಿಯೇ, ಈ ನಮ್ಮ ಶರೀರದಲ್ಲಿಯೇ, ನಮ್ಮ ಹೃದಯದಲ್ಲಿಯೇ, ಕುಳಿತಿರುವದರಿಂದ.

ಮೊಟ್ಟಮೊದಲು ನಾವು ಈ ಸರ್ವಮೂಲವಾಗಿರುವ ಪರಮಾತ್ಮನು ನಮ್ಮನಮ್ಮ ಹೃದಯದಲ್ಲಿಯೇ ಇರುವನೆಂಬುದನ್ನು ಮನದಂದುಕೊಳ್ಳಬೇಕು. ಆಮೇಲೆ ಆ ಪರಮಾತ್ಮನೊಡನೆ ಒಂದಾಗುವದಕ್ಕೆ, ಆತನ ಧ್ಯಾನದಿಂದ, ಆತನ ಅನವರತಚಿಂತನೆಯಿಂದ, ಆತನಲ್ಲಿಯೇ ಸೇರಿಹೋಗುವದಕ್ಕೆ ಪ್ರಯತ್ನ ಮಾಡಬೇಕು. ಪರಮಾತ್ಮನಲ್ಲಿ ಸೇರಿ ಹೋಗುವದೆಂದರೆ ಸಮುದ್ರದಲ್ಲಿ ನದಿಗಳು ಸೇರಿದಂತೆ ನಮ್ಮ ವ್ಯಕ್ತಿತ್ವವನ್ನು ನೀಗಿಕೊಳ್ಳುವೆನೇನೋ ಎಂದು ಅಂಜಬಾರದು. ಪರಮಾತ್ಮನಿಗಿಂತ ನಾನು ಬೇರೆಯಾಗಿರುವೆನು, ಈ ಸೃಷ್ಟಿಯಲ್ಲಿ ನಾನೊಬ್ಬನೇ ಬೇರೆಯಾಗಿರುವೆನು–ಎಂಬ ವ್ಯಷ್ಟಿಭಾವನೆಯಿಂದಾಗಿರುವ ವ್ಯಕ್ತಿತ್ವವು ಪರಮಾತ್ಮನ ಚಿಂತನೆಯಿಂದ ಎಂದೆಂದಿಗೂ ಮರೆಯಾಗುವದು ನಿಜ. ಆದರೆ ಈ ವ್ಯಕ್ತಿತ್ವವು ಬರಿಯ ತೋರಿಕೆಯು ಮಾತ್ರವಾಗಿರುತ್ತದೆ. ನಮ್ಮೆಲ್ಲರ ನಿಜವಾದ ಜೀವನವು ಆ ಪರಮಾತ್ಮನಲ್ಲಿ ಎರಕವಾಗಿ ಜೀವಿಸುವದೇ ಆಗಿರುತ್ತದೆ; ಆ ಜೀವನಕ್ಕೆ ಬೇಕಾಗಿರುವ ವ್ಯಕ್ತಿತ್ವವನ್ನು ಪರಮಾತ್ಮನು ನಮ್ಮಲ್ಲಿಟ್ಟು ನಮ್ಮ ಮೂಲಕವಾಗಿ ಲೋಕಕ್ಕೆ ಆಗಬೇಕಾಗಿರುವ ಆತನ ಅನುಗ್ರಹದ ಪ್ರವಾಹವನ್ನು ಹರಿಯಿಸುವನು.

ಪರಮಾತ್ಮನ ಆನಂದದ ಪ್ರವಾಹವು ಗುಪ್ತವಾಗಿ ನಮ್ಮೆಲ್ಲರಲ್ಲಿಯೂ ಸೃಷ್ಟಿಯಲ್ಲಿ ಕಾಣುವ ಎಲ್ಲಾ ಉಚ್ಚನೀಚ ಜೀವರಲ್ಲಿಯೂ ಹರಿಯುತ್ತಿರುವದು. ಆ ಪ್ರವಾಹಕ್ಕೂ ನಮಗೂ ಇರುವ ಸಂಬಂಧವನ್ನು ನಾವು ನಮ್ಮ ನಮ್ಮ ಹೃದಯದಲ್ಲಿರುವ ಚಿಲುಮೆಯ ಮೂಲಕವೇ ಕಂಡುಕೊಳ್ಳಬೇಕು. ನಾವು ಎಂದು ನಮ್ಮ ಹೃದಯಕುಹರದಲ್ಲಿ ಈ ಆನಂದದ ಚಿಲುಮೆಯನ್ನು ಕಂಡುಕೊಳ್ಳುವೆವೋ ಅಂದಿನಿಂದ ನಮ್ಮ ಸುತ್ತಮುತ್ತಲೂ ಇರುವ ಸಕಲಪ್ರಾಣಿಗಳಲ್ಲಿ ಅದೇ ಆನಂದದ ಪ್ರವಾಹಕ್ಕೆ ಸಂಬಂಧಪಟ್ಟ ಬೇರೆಬೇರೆ

ಚಿಲುಮೆಗಳು ಇರುವವೆಂದು ಗೊತ್ತಾಗುವದು. ಅಂದಿನಿಂದಲೇ ನಮಗೆ ಇಡಿಯ ಸೃಷ್ಟಿಯೊಡನೆ ಏಕರಸವಾದ ಜೀವನವನ್ನು ನಡೆಯಿಸುವ ಕೌಶಲದ ಮಾರ್ಗವು ತಿಳಿಯುವದು. ಆಗಲೇ "ಆನಂದದಿಂದಲೇ ಸಕಲಭೂತಗಳೂ ಬಂದಿರುವವು, ಆನಂದದಲ್ಲಿಯೇ ಇದ್ದುಕೊಂಡು ಜೀವಿಸುವವು, ಕೊನೆಗೆ ಆನಂದದಲ್ಲಿಯೇ ಮುಳುಗಿ ಒಂದಾಗುವವು"–ಎಂಬ ಶಾಸ್ತ್ರವಚನದ ಅಭಿಪ್ರಾಯವು ಗೊತ್ತಾಗುವದು. ಆಗಲೇ ನಮ್ಮ ಬಾಳಿನ ಪರಮಧ್ಯೇಯವು ಕೈವಶವಾಗುವದು.

# 35. ಅನಿಷ್ಟ ಪರಿಹಾರಕ್ಕೆ ಪರಮಾತ್ಮನಲ್ಲಿ ಶರಣಾಗತಿ

* ನಮ್ಮ ಇಷ್ಟವು ನೆರವೇರುವದಕ್ಕಾಗಲಿ ಅನಿಷ್ಟವು ಪರಿಹಾರವಾಗುವದಕ್ಕಾಗಲಿ ನಿಜವಾಗಿ ಒಂದೇ ಒಂದು ಉಪಾಯವಿದೆ. ನಮ್ಮೆಲ್ಲರ ಆತ್ಮನಾಗಿರುವ ಭಗವಂತನನ್ನು ಸರ್ವಭಾವ ದಿಂದಲೂ ಶರಣುಹೋಗುವದೇ ಆ ಉಪಾಯವು. ಭಗವಂತನು ಆಪ್ತಕಾಮನು; ಆತನಲ್ಲಿ ಈವರೆಗೆ ಪಡೆಯದೆ ಇರುವ ಮುಂದೆ ಪಡೆದುಕೊಳ್ಳಬೇಕಾಗಿರುವ ಯಾವದೊಂದು ಕಾಮವೂ ಲೋಕದಲ್ಲಿರುವದಿಲ್ಲ. ಆತನನ್ನು ಶರಣುಹೊಂದಿ ಆತನಲ್ಲಿಯೇ ನೆಲೆನಿಂತಿರುವ ಭಕ್ತರಿಗೆ ಸರ್ವಕಾಮಗಳೂ ಒಂದೇ ಕಾಲದಲ್ಲಿ ಪ್ರಾಪ್ತವಾಗುವವು; ಸಕಲ ಅನರ್ಥಗಳೂ ಅತ್ಯಂತಿಕವಾಗಿ ತೊಲಗುವವು. ಇದು ಶಾಸ್ತ್ರೋಪದೇಶದ ಸಾರವು.

ಹೀಗಿದ್ದರೂ ನಮ್ಮಲ್ಲಿ ಅನೇಕರು ಆ ಭಗವಂತನನ್ನು ಶರಣುಹೋಗದೆ, ಸಂಸಾರ ದುಃಖವನ್ನು ಅನುಭವಿಸುತ್ತಲೇ ಇರುವರು. ಅವರ ಆಶೆಗಳು ಪೂರ್ತಿಯಾಗುವಂತಿಲ್ಲ; ಅವರ ಕಷ್ಟಗಳು ಪರಿಹಾರವಾಗುವಂತಿಲ್ಲ. ಇಷ್ಟಾರ್ಥಗಳನ್ನು ಪಡೆದುಕೊಳ್ಳುವದಕ್ಕೂ ಅನಿಷ್ಟಾರ್ಥಗಳನ್ನು ಪರಿಹರಿಸಿಕೊಳ್ಳುವದಕ್ಕೂ ಅವರು ಎಡೆಬಿಡದೆ ಪ್ರಯತ್ನಗಳನ್ನು ನಡೆಸುತ್ತಲೇ ಇರುವರು. ಆದರೂ ಅವರ ಪ್ರಯತ್ನವು ಸಫಲವಾಗುತ್ತಿಲ್ಲ; ಅವರ ಸಂಕಟಗಳು ಪರಿಹಾರವಾಗಿಲ್ಲ. ಯಾವದೋ ಒಂದು ಭೂತವಿಶೇಷವು ಅವರನ್ನು ಮುಂದುವರಿಯದಂತೆ ಹಿಂದಕ್ಕೆ ತಳ್ಳುವ ಹಾಗೆ, ಅಥವಾ ಬೆನ್ನ ಹಿಂದಿನಿಂದ ಹಗ್ಗವನ್ನು ಕಟ್ಟಿ ಹಿಂಜಗ್ಗುತ್ತಿರುವ ಹಾಗೆ, ಅವರಿಗೆ ತೋರುತ್ತಿರುವದು. ಇಷ್ಟೇ ಅಲ್ಲ. ಅವರಿಗೆ ತಾವು ನಿಂತಲ್ಲಿ ನಿಲ್ಲುವದಕ್ಕೂ ಅವಕಾಶವಿಲ್ಲ. ಒಂದರ ಮೇಲೊಂದರಂತೆ ಕಷ್ಟಗಳು ಧಾಳಿಯಿಟ್ಟು ಮೇಲೆ ಬೀಳುತ್ತಲೇ ಇರುವವು. ಇದೇಕೆ? ಈ ಕಷ್ಟದಿಂದ ಪಾರಾಗುವದಕ್ಕೆ ಉಪಾಯವೇನಾದರೂ ಇದೆಯೆ? ಇದನ್ನು ಈಗ ವಿಮರ್ಶಿಸೋಣ.

---

* ಸಂಪುಟ 18, ಸಂಚಿಕೆ 11, ಜುಲೈ 1949, ಪುಟ 241–250

ಮೊಟ್ಟಮೊದಲು, ಜನರು ಭಗವಂತನನ್ನು ಶರಣುಹೋಗದಿರುವದಕ್ಕೆ ಕಾರಣ ವೇನೆಂಬುದನ್ನು ತಿಳಿದುಕೊಳ್ಳುವದು ಅವಶ್ಯ. ಏಕೆಂದರೆ ನಮ್ಮ ಎಲ್ಲಾ ಕಷ್ಟಗಳಿಗೂ ಭಗವಂತನ ಕಡೆಗೆ ತಿರುಗುವದೊಂದೇ ಅಂತಿಮ ಉಪಾಯವಾಗಿರುತ್ತದೆ. ಈ ವಿಷಯದಲ್ಲಿ ಶ್ರೀಕೃಷ್ಣಭಗವಂತನು ಅಪ್ಪಣೆಕೊಡಿಸಿರುವದನ್ನು ಕೇಳಿರಿ:

**"ಗುಣಮಯವಾಗಿರುವ ಸಾತ್ತ್ವಿಕರಾಜಸತಾಮಸಗಳೆಂಬೀ ಮೂರು ಭಾವಗಳಿಂದ ಈ ಜಗತ್ತೆಲ್ಲವೂ ಮೋಹಿತವಾಗಿರುತ್ತದೆ. ಆದ್ದರಿಂದ ಇವುಗಳಿಗಿಂತ ವಿಲಕ್ಷಣನಾಗಿರುವ ನನ್ನನ್ನು ಅರಿತುಕೊಳ್ಳದೆ ಇರುತ್ತದೆ. ಇದು ದೇವನಾದ ನನ್ನ ವೈಷ್ಣವೀ ಮಾಯೆಯು. ಇದನ್ನು ದಾಟುವದು ಬಲು ಕಷ್ಟ. ಆದರೆ ಯಾರು ನನ್ನನ್ನೇ ಶರಣು ಹೋಗುವರೋ ಅವರು ಈ ಮಾಯೆಯನ್ನು ದಾಟುವರು".**

**"ದುಷ್ಕೃತಿಗಳಾದ ಮೂಢರು ನನ್ನನ್ನು ಶರಣುಹೊಂದುವದಿಲ್ಲ, ಆ ನರಾಧಮರ ಜ್ಞಾನವನ್ನು ಮಾಯೆಯು ಅಪಹರಿಸಿರುವದು; ಅವರು ಆಸುರಭಾವವನ್ನೇ ಆಶ್ರಯಿಸಿಕೊಂಡಿರುತ್ತಾನೆ." ಗೀತೆ 7–13, 14, 15.**

ಭಗವಂತನ ಈ ಉಪದೇಶದಲ್ಲಿ ಅಡಕವಾಗಿರುವ ಅಭಿಪ್ರಾಯಗಳನ್ನು ಒಂದೊಂದಾಗಿ ಬಿಡಿಸಿದರೆ ಇಷ್ಟು ಅಂಶಗಳು ಕಾಣುವವು: (1) ಗುಣಮಯವಾದ ಪ್ರಪಂಚವು ಪರಮೇಶ್ವರನ ಮಾಯೆಯು. (2)ಮಾಯೆಯಾದ್ದರಿಂದಲೇ ಇದನ್ನು ದಾಟಬಹುದು. (3) ಯಾರು ಭಗವಂತನನ್ನೇ ಶರಣುಹೋಗುವರೋ ಅವರು ಸುಲಭವಾಗಿ ದಾಟುವರು. (4) ಆದರೆ ದುಷ್ಕೃತಿಗಳಾದವರು ಇದನ್ನು ದಾಟುವದು ಬಲುಕಷ್ಟ; ಏಕೆಂದರೆ ಅವರು ಭಗವಂತನನ್ನು ಶರಣುಹೊಂದುವದಕ್ಕೆ ಅಡ್ಡಿಯಾದ ಆಸುರಭಾವವನ್ನೇ ಅವಲಂಬಿಸಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನೂ ಒಂದೇ ಲೇಖನದಲ್ಲಿ ವಿವರಿಸುವದು ಕಷ್ಟ. ಇವುಗಳನ್ನು ಒಂದೊಂದಾಗಿ ವಿಮರ್ಶಿಸುವದರಿಂದ ಸೋಪಾನಕ್ರಮದಲ್ಲಿ ಎಲ್ಲವನ್ನೂ ಸುಲಭವಾಗಿ ಅರಿತುಕೊಳ್ಳಲೂಬಹುದು. ಆದ್ದರಿಂದ ಭಗವಂತನನ್ನು ಶರಣುಹೊಗುವದಕ್ಕೆ ಅಡ್ಡಿಯಾಗಿರುವ ದುಷ್ಕೃತವನ್ನೂ ಅದನ್ನು ಪರಿಹರಿಸಿಕೊಳ್ಳುವ ಉಪಾಯವನ್ನೂ ಈ ಸಲಕ್ಕೆ ವಿಚಾರಕ್ಕೆಟ್ಟುಕೊಳ್ಳೋಣ.

ಈ ವಿಷಯವನ್ನು ವಿವರಿಸುವದಕ್ಕೆ ಮೊದಲು ಭಗವಂತನ ಮಾಯೆಯನ್ನು ಕುರಿತು ಕೆಲವು ಮಾತುಗಳನ್ನು ಹೇಳುವದು ಅವಶ್ಯವು. ಭಗವಂತನು ಎಲ್ಲರಿಗೂ ಪುರುಷಾರ್ಥವನ್ನು ಅನುಗ್ರಹಿಸುವದಕ್ಕೂ ಅನರ್ಥಗಳನ್ನು ಪರಿಹರಿಸುವದಕ್ಕೂ ಸಮರ್ಥನಾದವನು. ಅವನು

ದಯಾಘನನೂ ಆಗಿರುತ್ತಾನೆ. ಹೀಗಿರುವಲ್ಲಿ ಅಲ್ಪಜ್ಞರೂ ಅಲ್ಪಶಕ್ತರೂ ಆದವರಿಗೆ ದಾಟಲಶಕ್ಯವಾದ ಈ ಮಾಯೆಯನ್ನೇಕೆ ಅವರ ಮುಂದೆ ಹರಡಿರುತ್ತಾನೆ? ಜೀವರುಗಳೆಂಬ ಹಕ್ಕಿಗಳನ್ನು ಹಿಡಿಯುವದಕ್ಕೆಂದು ಈ ಮಾಯೆಯೆಂಬ ಬಲೆಯನ್ನು ಬೀಸಿ, ಅದರಲ್ಲಿ ಸಾತ್ತ್ವಿಕರಾಜಸತಾಮಸಭಾವಗಳೆಂಬ ಅಕ್ಕಿಯ ಕಾಳುಗಳನ್ನೇಕೆ ಎರಚಿರುತ್ತಾನೆ? ಇದು ಪರಮೇಶ್ವರನ ಸ್ವಭಾವಕ್ಕೆ ಅನನುಗುಣವಲ್ಲವೆ?

ಈ ಪ್ರಶ್ನೆಯು ನೋಡುವದಕ್ಕೆ ಬಹಳ ಗಡುಸಾಗಿ ಕಂಡರೂ ಇದರ ಗಂಟನ್ನು ಬಿಚ್ಚುವದೇನೂ ಕಷ್ಟವಲ್ಲ. ದುಷ್ಕೃತಿಗಳಿಗೆ ಇದು ದಾಟಲಾಗದ ಮಾಯೆಯಾಗಿ ತೋರುತ್ತಿದ್ದರೂ ಇದು ಮಾಯೆಯಾಗಿರುವದರಿಂ ಬರಿಯ ಹುಸಿತೋರಿಕೆಯಾಗಿರುತ್ತದೆ. ಅಡ್ಡಹಾದಿಯಲ್ಲಿ ತಿರುಗುವವರಿಗೆ ಇದು ಕಷ್ಟಪರಂಪರೆಗಳ ಮೂಲವಾಗಿದ್ದರೂ ಇದರ ನಿಜವಾದ ಸ್ವರೂಪವು ಈಗ ತೋರುತ್ತಿರುವಂತಿಲ್ಲ. ಪರಮಾರ್ಥವಾಗಿ ಜಗತ್ತೆಲ್ಲವೂ ಪರಮಾತ್ಮನ ವಿಭೂತಿಯೇ ಆಗಿರುತ್ತದೆ. ಆದ್ದರಿಂದ ದಯಾಘನನಾದ ಆತನ ಕರುಣೆಯ ಗುರುತೇ ಅದು. ಆತನನ್ನು ಶರಣುಹೊಗುವದಕ್ಕೆಂದು ದಾರಿಯನ್ನು ತಿಳಿಸುವ ಕೈಕಂಬಗಳಾಗಿಯೇ ಆತನು ಬೇರೆಬೇರೆಯ ಭಾವಗಳನ್ನು ಸೃಷ್ಟಿಸಿರುತ್ತಾನೆ. ಆದ್ದರಿಂದ ಭಗವಂತನು ಮಾಯೆಯನ್ನು ನಮ್ಮ ಮುಂದೆ ಹರಡಿರುತ್ತಾನೆನ್ನುವದಕ್ಕಿಂತ ನಾವೇ ಆತನ ಅನುಗ್ರಹವನ್ನೇ ಈ ಕಷ್ಟಪರಂಪರೆಗಳ ಬಲೆಯನ್ನಾಗಿ ಮಾಡಿಕೊಂಡು ಸಂಕಟಪಡುತ್ತಿದೇವೆಂದು ಹೇಳಬಹುದು. ಇದನ್ನು ಮತ್ತೊಂದು ಸಂದೇಶದಲ್ಲಿ ವಿವರಿಸುವೆನು.

ಇದಂತಿರಲಿ. ಈ ತಿಂಗಳ ಸಂದೇಶದಲ್ಲಿ ಮುಖ್ಯವಾಗಿ ನಮ್ಮಗಳಿಗೆ ಜೀವನದಲ್ಲಿ ಒದಗುವ ಕಷ್ಟಪರಂಪರೆಗಳನ್ನು ಕುರಿತೇ ಬರೆಯಬೇಕೆಂದು ಸಂಕಲ್ಪಿಸಿರುತ್ತೇನೆ. ಮನುಷ್ಯನಿಗೆ ಕಷ್ಟಗಳು ಏಕೆ ಬರಬೇಕು? ಈಶ್ವರನ ಸೃಷ್ಟಿಯಲ್ಲಿ ಅವಕ್ಕೆ ಯಾವ ಸ್ಥಾನವಿದೆ? ಕಷ್ಟಗಳನ್ನು ನಾವು ಹೇಗೆ ಎದುರಿಸಬೇಕು? ಅವುಗಳು ಪರಿಹಾರವಾಗುವದಕ್ಕೆ ಯಾವ ಉಪಾಯವನ್ನು ನಾವು ಕೈಗೊಳ್ಳಬಹುದು? ಈ ಪ್ರಶ್ನೆಗಳಿಗೆ ಉತ್ತರವನ್ನು ಕೊಡುವದಕ್ಕೆ ಪ್ರಯತ್ನಿಸುವೆನು.

ಮೊದಲನೆಯದಾಗಿ ಜೀವನದ ಉದ್ದೇಶವನ್ನು ನಾವು ತಿಳಿದುಕೊಳ್ಳುವದು ಅವಶ್ಯವಾಗಿದೆ. ಮನುಷ್ಯನಿಗೆ **ಬಗೆಬಗೆಯ ಅನುಭವಗಳನ್ನು ಕೊಡುವದೇ ಜೀವನವು.** ಈ ಜೀವನವು ಯಾವಾಗಲೂ ಒಂದೇ ಬಗೆಯಾಗಿರುವದೇ ಇಲ್ಲ; ವರ್ಷವರ್ಷಕ್ಕೂ ತಿಂಗಳುತಿಂಗಳಿಗೂ ದಿನದಿನಕ್ಕೂ ಮಾರ್ಪಡುತ್ತಿರುತ್ತದೆ. ಆದ್ದರಿಂದ ಜೀವರು ಹೊಸ ಹೊಸ ಸಂನಿವೇಶಗಳಿಗೆ ತಕ್ಕಂತೆ ತಾವೂ ಮಾರ್ಪಡಬೇಕಾಗಿರುತ್ತದೆ. ಆ ಮಾರ್ಪಾಟಿನಿಂದ ಹೊಸಹೊಸ ಅನುಭವಗಳು ಉಂಟಾಗುತ್ತವೆ. ಸಂಸಾರದ ಉದ್ದೇಶವೆಲ್ಲ ಜೀವನಿಗೆ ಅನುಭವ ವಿಶೇಷಗಳನ್ನುಂಟುಮಾಡಿ ಕಟ್ಟಕಡೆಗೆ ಒಂದಾನೊಂದು ಹೊಸ ಅನುಭವವನ್ನು

ಕೊಡುವದೇ ಆಗಿರುತ್ತದೆ. ಆ ಹೊಸ ಅನುಭವಕ್ಕೆ ವಿಜ್ಞಾನವೆಂದು ಹೆಸರು. ಆ ವಿಜ್ಞಾನವು ಬಂದರೆ ಮನುಷ್ಯನು ಪರಮಪುರುಷಾರ್ಥವನ್ನು ಪಡೆದುಕೊಂಡಂತೆ ಆಗುವದು. ಹೊಸಹೊಸ ಸಂನಿವೇಶಗಳನ್ನು ಒಡ್ಡಿ ಹೊಸಹೊಸ ಅನುಭವಗಳನ್ನುಂಟುಮಾಡುವದೇ ಸೃಷ್ಟಿಯ ಪರಮೋದ್ದೇಶವು. ಆದ್ದರಿಂದ ಯಾವದಾದರೊಂದು ಹೊಸ ಸಂನಿವೇಶವು ಬಂದೊದಗಿದಾಗ ಅದಕ್ಕೆ ತಕ್ಕತೆ ನಾವು ಒಳಗಿನ ಮಾರ್ಪಾಡನ್ನು ಹೊಂದಿದರೆ ಆ ಸಂನಿವೇಶವು ಬದಲಾಯಿಸುವದು; ಮತ್ತೊಂದು ಸಂನಿವೇಶವು ನಮಗಾಗಿ ಸೃಷ್ಟವಾಗುವದು. ಆದರೆ ನಾವು ಅದಕ್ಕೆ ತಕ್ಕಂತೆ ಹೊಂದಿಕೊಳ್ಳದಿದ್ದರೆ ನಮ್ಮ ಸಂನಿವೇಶವು ಕ್ಲೇಶದಾಯಕವಾಗಿ ಕಾಣುವದು. ಇದಕ್ಕೇ 'ಕಷ್ಟ'ವೆಂದು ಹೆಸರು.

ಆದ್ದರಿಂದ ಕಷ್ಟವೆಂದರೇನು? ನಮಗೆ ಹೊಸ ಸಂನಿವೇಶದ ಎಚ್ಚರಿಕೆಯನ್ನು ಕೊಡುವ ಸೂಚನೆಯದು. ನಾವು ಕಗ್ಗತ್ತಲೆಯಲ್ಲಿ ನಡೆಯುತ್ತಾ ಒಂದು ಆಳವಾದ ಭಾವಿಯಲ್ಲಿ ಬೀಳುವದರಲ್ಲಿದ್ದರೆ, ಅಥವಾ ಯಾವದಾದರೊಂದು ಹಾವನ್ನು ತುಳಿಯುವದರಲ್ಲಿದ್ದರೆ, ನಮ್ಮ ಸ್ನೇಹಿತನೊಬ್ಬನು ಮಾತನಾಡುವದಕ್ಕೂ ತಕ್ಕಷ್ಟು ಕಾಲವಿಲ್ಲದ್ದರಿಂದ ನಮ್ಮನ್ನು ಕೈಹಿಡಿದು, ಅಥವಾ ಪಂಚೆಯ ಸೆರಗನ್ನು ಹಿಡಿದು, ತಟ್ಟನೆ ಇತ್ತ ಜಗ್ಗುವನು. ಅಲ್ಲವೆ? ಹಾಗೆ ನಮಗೆ ಯಾವದಾದರೊಂದು ಹೊಸ ಸಂನಿವೇಶವು ಬದು ಅದನ್ನು ಎದುರಿಸುವದಕ್ಕೆ ನಾವು ಸಿದ್ಧರಿಲ್ಲದಾಗ, ಕಷ್ಟಗಳು ನಮಗೆ ಮುಂದಾಗಿಯೇ ಎಚ್ಚರಿಕೆಕೊಡುವವು. ಇಷ್ಟೇ ಅಲ್ಲ. ನಾವು ಹೊಸ ಸಂನಿವೇಶಕ್ಕೆ ತಕ್ಕಂತೆ ಆಧ್ಯಾತ್ಮಿಕವಾಗಿ ಮಾರ್ಪಡುವವರೆಗೂ ಬಿಡದೆ ಅವು ನಮಗೆ ತಾಪವನ್ನುಂಟುಮಾಡುತ್ತಿರುವವು.

ಈ ಜನ್ಮದಲ್ಲಿ ಕಷ್ಟವನ್ನೇ ಕಾಣೆನೆಂಬ ಮಾನವನು ಯಾರೂ ಇಲ್ಲ; ಇದ್ದರೆ ಅವನು ಮಾನವನೇ ಅಲ್ಲ. ಏಕೆಂದರೆ ಕಷ್ಟವೆಂಬುದು ಒಂದು ಪದಾರ್ಥವಲ್ಲ. ಹೊಸದೊಂದು ಅನುಭವವನ್ನು ತಂದುಕೊಡುವ ಸಂದರ್ಭ ವಿಶೇಷವು. ಸರಿಯಾಗಿ ನೋಡಿದರೆ ಆ ಸಂದರ್ಭವು ನಮಗೆ ಸರಿಯಾದ ಮಾರ್ಗವನ್ನು ತೋರಿಸಿಕೊಡುತ್ತಲೇ ಇರುವದು. ಆದರೆ ನಾವು ಹಿಡಿಯಬೇಕಾದ ಮಾರ್ಗವನ್ನು ಬಿಟ್ಟು ಅಡ್ಡದಾರಿಯನ್ನು ಹಿಡಿಯುವೆವು. ಇದರಿಂದಾದ ದುಃಖವಿಶೇಷವನ್ನು ಮನದಂದು ನಾವು ಆ ಹೊಸ ಸಂದರ್ಭವನ್ನೇ ದುಃಖವೆಂದು ಕರೆಯುವೆವು. ಪೋಸ್ಟಾಫೀಸು, ರೈಲು, ಹಡಗು, ವಿಮಾನ, ವಿದ್ಯುದ್ದೀಪ, ರೇಡಿಯೊ-ಮುಂತಾದವುಗಳು ನಮ್ಮ ದೇಶದಲ್ಲಿ ಹೊಸದಾಗಿ ಕಾಣಿಸಿಕೊಂಡಾಗ ಅವುಗಳನ್ನುಪಯೋಗಿಸುವ ಕ್ರಮವನ್ನು ಕಲಿತುಕೊಂಡು ಅವುಗಳ ಪ್ರಯೋಜನವನ್ನು ಅನುಭವಿಸುವವರೆಗೂ ಅವು ತಿಳಿಯದ ಜನರಿಗೆ ಅಡ್ಡಿಗಳಾಗಿ ಕಂಡವು; ಅವುಗಳಿಂದ ವಿಧವಿಧವಾದ 'ಕಷ್ಟ'ಗಳನ್ನು ಜನರು ಅನುಭವಿಸಿದರು. ಆದರೆ ಈಗ ಎಲ್ಲರೂ ತಮ್ಮ ಜೀವನಕ್ರಮವನ್ನು ಈ ಹೊಸ ಸಂನಿವೇಶಗಳಿಗೆ ತಕ್ಕಂತೆ ಮಾರ್ಪಡಿಸಿಕೊಂಡಿರುತ್ತಾರೆ. ಅವು ಈಗ ಕಷ್ಟವಾಗಿರುವದರ ಬದಲು ಜೀವನದ ಸುಖಸಾಧನಗಳೆನಿಸಿಕೊಂಡುಬಿಟ್ಟಿವೆ.

ಕಷ್ಟಗಳು ನಿಜವಾಗಿ ಕಷ್ಟಗಳಲ್ಲವೆಂತಲೂ, ಅವುಗಳು ಸೂಚಿಸುವ ಹೊಸ ಸಂನಿವೇಶಗಳನ್ನು ಅರಿತು ತಕ್ಕಂತೆ ನಾವೇ ಮಾರ್ಪಡಬೇಕೆಂತಲೂ, ಹಾಗಾದರೆ ಅವು ನಮ್ಮನ್ನು ಹೊಸ ಅನುಭವವಿಶೇಷಕ್ಕೆ ಒಯ್ಯುವವೆಂತಲೂ, ಹೇಳಿದ್ದಾಯಿತು. ಆದರೆ ಕಷ್ಟಗಳನ್ನು ಎದುರಿಸುವದಕ್ಕೆ ಎರಡು ಮಾರ್ಗಗಳಿರುತ್ತವೆ. ಮೊದಲನೆಯದು ನಮ್ಮ ಲೌಕಿಕದೃಷ್ಟಿಯನ್ನುಪಯೋಗಿಸಿಕೊಂಡು, ನಮ್ಮ ಬುದ್ಧಿಗೆ ತಿಳಿದಂತೆ ತರ್ಕವನ್ನು ಮಾಡಿ, ನಮ್ಮ ಸಂಕಲ್ಪದಂತೆ ನಡೆದು, ಹೇಗೋ ಮಾಡಿ ಕಷ್ಟಗಳಿಂದ ಪಾರಾಗುವದಕ್ಕೆ ಪ್ರಯತ್ನಿಸುವದು ಒಂದು ಪ್ರಕಾರ. ಇದು ಹೊರಗಿನ ಮಾರ್ಗವೆನಿಸುತ್ತದೆ. ಅಥವಾ ನಮ್ಮೊಳಗೇ ಹುದುಗಿಕೊಂಡಿರುವ ಪರಮೇಶ್ವರನು ಅನುಗ್ರಹಿಸುವ ದಿವ್ಯದೃಷ್ಟಿಯನ್ನು ಉಪಯೋಗಿಸಿಕೊಂಡು, ಆತನು ಕೊಡುವ ಬುದ್ಧಿಯೋಗವನ್ನು ಅನುಸರಿಸಿ, ಆತನ ಸಂಕಲ್ಪದಂತೆ ನಡೆಯುವದು ಇನ್ನೊಂದು ಪ್ರಕಾರ. ಇವೆರಡರಲ್ಲಿ ಮೊದಲನೆಯ ಮಾರ್ಗವು ಕುರುಡನೊಬ್ಬನು ಹೊಸ ಊರಿನಲ್ಲಿ ದೊಡ್ಡದೊಂದು ಬಂಗಲೆಯಲ್ಲಿ ಆ ದಿನವೇ ತಾನು ಇಳಿದುಕೊಂಡಿದ್ದು ಕತ್ತಲೆಯಲ್ಲಿ ತಡವರಿಸುತ್ತಾ ಹೊರಕ್ಕೆ ಹೋಗುವ ಬಾಗಿಲನ್ನು ಹುಡುಕುವ ಪ್ರಯತ್ನದಂತಿರುವದು. ಏಕೆಂದರೆ ಕಷ್ಟವೆಂಬುದು ಹೊಸ ಸಂನಿವೇಶದ ಭವಿಷ್ಯಸೂಚನೆ ಎಂದು ಆಗಲೆ ಹೇಳಿರುತ್ತೇವೆ. ನಾವು ಎಂದಿಗೂ ಹಿಂದೆ ಅನುಭವಿಸದೆ ಇರುವ ಹೊಸ ಸಂನಿವೇಶವನ್ನು ನಮ್ಮ ಅಲ್ಪಬುದ್ಧಿಯು ಹೇಗೆತಾನೆ ತರ್ಕಿಸಬಲ್ಲದು? ಅಲ್ಪ ಶಕ್ತಿಯುಳ್ಳವನಿಗೆ ಈಜಾಡುವದಕ್ಕೆ ಬರುತ್ತಿದ್ದರೆತಾನೆ, ಅಗಾಧವಾದ ಸಮುದ್ರವನ್ನು ತನ್ನ ಶಕ್ತಿಯಿಂದಲೇ ದಾಟಿ ಆ ಕಡೆಯ ದಡಕ್ಕೆ ಹೋಗುವೆನೆಂದು ಹೂಡುವ ಅವನ ಸಂಕಲ್ಪವು ಎಷ್ಟರಮಟ್ಟಿಗೆ ಈಡೇರಬಲ್ಲದು? ಈ ಪ್ರಕಾರವನ್ನು ಉಪಯೋಗಿಸಿಕೊಂಡವನಿಗೆ ಕಷ್ಟವು ನೀಗುವದಕ್ಕೆ ಬದಲಾಗಿ ಪ್ರಬಲವಾಗುವ ಸಂಭವವೇ ಹೆಚ್ಚು.

ಇದಕ್ಕೆ ಬದಲು ಪರಮೇಶ್ವರನನ್ನು ಪ್ರಸನ್ನನಾಗಿಸಿಕೊಂಡಿರುವ ಮಹರ್ಷಿಗಳು ಅನುಸರಿಸಿರುವ ಇನ್ನೊಂದು ಪ್ರಕಾರವಿದೆ. ಅವರು ಅವಲಂಬಿಸಿದ್ದ ಶಾಸ್ತ್ರೀಯದೃಷ್ಟಿಯನ್ನು ಅವಲಂಬಿಸಿ ಪರಮೇಶ್ವರನ ಸಂಬಂಧವನ್ನು ಪಡೆದು ಹೊಸ ಸಂನಿವೇಶಕ್ಕೆ ತಕ್ಕಂತೆ ನಮ್ಮ ಅಂತರಂಗವನ್ನು ಮಾರ್ಪಡಿಸುವದೇ ಆ ಪ್ರಕಾರವು. ದೃಷ್ಟಿಯನ್ನು ಅವಲಂಬಿಸಿದವರು ಅನುಸರಿಸುವ ಸಾಧನ ಸೋಪಾನಕ್ರಮವನ್ನು ಇಲ್ಲಿ ಸ್ವಲ್ಪ ವಿವರಿಸುವದು ಒಳ್ಳೆಯದು.

ಕಷ್ಟವನ್ನು ಕಂಡಕೂಡಲೆ ಅದನ್ನು ಪರಿಹರಿಸಿಕೊಳ್ಳುವೆನೆಂದು ಲೌಕಿಕೋಪಾಯಗಳನ್ನು ಹುಡುಕುವದು ಸ್ವಾಭಾವಿಕವಾಗಿದೆ. ಆದರೆ ಕೆಲವು ವೇಳೆಗಳಲ್ಲಿ-ಬಹುವೇಳೆಗಳಲ್ಲಿ ಇದೇ ನಿಜ-ಯಾವ ಉಪಾಯವೂ ನಮಗೆ ಗೋಚರವಾಗುವದಿಲ್ಲ. ಇದರ ಜೊತೆಗೆ ಕಷ್ಟದಿಂದಾಗುವ ದುಃಖವು ದಿನದಿನಕ್ಕೂ ಹೆಚ್ಚುತ್ತಿರುತ್ತದೆ. ಇಷ್ಟೇ ಅಲ್ಲ. ಕಷ್ಟಗಳು ಒಂದೊಂದಾಗಿ ಬರುವದಕ್ಕೆ ಬದಲು ಸಾಲುಸಾಲಾಗಿ ಬರುತ್ತವೆ. ಆಗ ನಮ್ಮ ಲೌಕಿಕವಾದ

ಉಪಾಯವು ಯಾವದೂ ನಾಟದಿರುವಾಗ, ಅಥವಾ ಯಾವ ಉಪಾಯವೂ ಹೊಳೆಯದಿರುವಾಗ, ಏನು ಮಾಡಬೇಕು? ಒಳ್ಳೆಯದು. ಈಗಲಾದರೂ ನಾವು ಹೇಳಿರುವ ಇನ್ನೊಂದು ಪ್ರಕಾರವನ್ನು, ಆಧ್ಯಾತ್ಮಿಕೋಪಾಯದ ಪ್ರಕಾರವನ್ನು, ಪ್ರಯೋಗಿಸುವದಕ್ಕೆ ಪ್ರಾರಂಭಿಸಬೇಕು. ಈ ಪ್ರಕಾರವೇ ಸರಿಯಾದದ್ದು; ಇದು ಯಾವಾಗಲೂ ನಮಗೆ ಸಿಕ್ಕುವಂತೆಯೇ ಹತ್ತಿರದಲ್ಲಿರುತ್ತದೆ. ಆದರೆ ನಾವು ಮಾತ್ರ ಅದನ್ನು ಉಪಯೋಗಿಸಿಕೊಳ್ಳುತ್ತಲಿಲ್ಲ.

ಈ ಪ್ರಕಾರದ ಸಾಧನಸೋಪಾನದಲ್ಲಿ ಮೊದಲನೆಯ ಮೆಟ್ಟಲು ಯಾವದು? ನಮಗೆ ಹೊರಗಿನ ಸುತ್ತುವಳೆಯದಿಂದಾಗುವ ಕಷ್ಟಪರಂಪರೆಗಳು ಪ್ರಬಲವಾದರೆ, ಕೂಡಲೆ ನಮ್ಮ ಮನಸ್ಸು ಕುಸಿದುಬೀಳುವದಕ್ಕೆ ಹೋಗುತ್ತದೆ. ನಾವು ಈ 'ಅವಸಾದಕ್ಕೆ' ಅವಕಾಶವನ್ನು ಕೊಡಬಾರದು. ಶ್ರೀಕೃಷ್ಣ ಭಗವಂತನು ಅಪ್ಪಣೆಕೊಡಿಸಿರುವಂತೆ "ಇವೆಲ್ಲವೂ ಆಗಮಾಪಾಯಿಗಳು, ಬಂದು ಹೋಗತಕ್ಕವು; ಅವನ್ನು ಹೇಗಾದರೂಮಾಡಿ ತೆಗೆದುಕೊ" ಎಂದು ನಮ್ಮ ಮನಸ್ಸಿಗೆ ಬುದ್ಧಿಹೇಳಬೇಕು. ಇದೇ ತಿತಿಕ್ಷೆ. ತಿತಿಕ್ಷೆಯ ಮರ್ಮವನ್ನು ನಾವು ಚೆನ್ನಾಗಿ ತಿಳಿದುಕೊಳ್ಳಬೇಕು. ನಮಗೆ ದುಃಖವು ಹೆಚ್ಚುತ್ತಿರುವಾಗ, ಅದನ್ನು ನಿವಾರಿಸಿಕೊಳ್ಳುವ ಉಪಾಯವು ಯಾವದೊಂದೂ ತೋಚದಿರುವಾಗ, "ಆದದ್ದಾಗಲಿ!" ಎಂದು ಕೈಮುದುರಿಕೊಂಡು ಕೂಡುವದು ತಿತಿಕ್ಷೆಯಲ್ಲ. "ಇದು ಬಹುಕಾಲ ನಿಲ್ಲತಕ್ಕದ್ದಲ್ಲ! ಇದರಿಂದ ನನಗೆ ಯಾವದೋ ಒಂದು ಅನುಭವವಿಶೇಷವು ಉಂಟಾಗಬೇಕಾಗಿದೆ. ಆದ್ದರಿಂದ ಇದನ್ನು ತಪ್ಪಿಸಿಕೊಂಡು ಪ್ರಯೋಜನವಿಲ್ಲ. ಇದನ್ನೇ ಉಪಯೋಗಿಸಿಕೊಂಡು ಮುಂದುವರಿಯುವೆನು" ಎಂದು ಅದನ್ನು ಅಂಗೀಕರಿಸುವದು, ಅದನ್ನು ಸ್ವಾಗತಿಸುವದು, **ತಿತಿಕ್ಷೆಯು.**

ಕಷ್ಟವು ಬರಲಿ ಎಂದು ತೆಪ್ಪಗೆ ಕೂರುವದಕ್ಕಿಂತ, ಅದನ್ನು ಸ್ವೀಕರಿಸುವದು, ಅದನ್ನು ಸ್ವಾಗತಿಸಿ, ಆ ಕಷ್ಟವನ್ನು ನಮ್ಮದಾಗಿ ಮಾಡಿಕೊಂಡು, ಜೀವನದಲ್ಲಿ ನಮ್ಮ ಕರ್ತವ್ಯವನ್ನು ಮಾಡುತ್ತಾ ಇರುವದು ಎರಡನೆಯ ಮೆಟ್ಟಲು. ಇಂಥ ಕಷ್ಟವು ಬಂದ ಮೇಲೆ ಇನ್ನು ನಾನು ಬಾಳಿ ಫಲವೇನು? ಅಥವಾ ಈ ಕಷ್ಟವನ್ನು ಸಹಿಸಿಕೊಂಡು ಹೇಗೆ ಬಾಳಲಿ? ಅಥವಾ ಈ ಕಷ್ಟದ ಮಧ್ಯದಲ್ಲಿ ಧರ್ಮಾಚರಣೆಯನ್ನೂ ಆಧ್ಯಾತ್ಮಿಕಸಾಧನೆಗಳನ್ನೂ ಮಾಡುವದು ಹೇಗೆ?–ಎಂದು ಗೊಣಗುಟ್ಟುವದು ಎಂದಿಗೂ ಪ್ರಯೋಜನಕಾರಿಯಾಗುವದಿಲ್ಲ; ನಮ್ಮ ಕಷ್ಟಪರಂಪರೆಗಳನ್ನು ಕಂಡಕಂಡವರ ಮುಂದೆ ಹೇಳಿಕೊಂಡು ಅಳುವದಂತೂ ಎಂದಿಗೂ ಸರಿಯಲ್ಲ. ಹೀಗಿರುವಲ್ಲಿ ನಮ್ಮ ಕಷ್ಟಗಳಿಗೆ ಇಂಥವನೊಬ್ಬನು ಹೊಣೆಗಾರನು ಎಂದು ಮತ್ತೊಬ್ಬರ ಮೇಲೆ ತಪ್ಪುಹೊರಿಸುವದು ಸರಿಯೆಂದು ಯಾರುತಾನೆ ಹೇಳುವರು? ಇವು ಯಾವವೂ ಕಷ್ಟನಿವಾರಣೆಗೆ ಉಪಾಯವಲ್ಲ. ಲೋಕದಲ್ಲಿ

"ಕಷ್ಟವೆಂಬುದು ಮನುಷ್ಯನಿಗಲ್ಲದೆ ಮರಕ್ಕೆ ಬಂದೀತೆ?" ಎಂದು ಅನೇಕರು ನುಡಿಯುವರು. ಆದರೆ ಮರದ ಜೀವನವನ್ನು ನೋಡಿರಿ. ಯಾರು ಹೊಡೆದರೂ ಬಡಿದರೂ, ಕೊಂಬೆಗಳನ್ನು ಕಡಿದರೂ ಮರವು ಹೇಗೆ ಸುಮ್ಮನೆ ಎಲ್ಲವನ್ನೂ ಸಹಿಸಿಕೊಳ್ಳುವದು! ಇಷ್ಟೇ ಅಲ್ಲ. ಒಂದೊಂದು ಸಲ ಅದರ ಎಲೆಗಳು ಹಣ್ಣಾಗಿ ಉದುರಿಹೋಗುವವು. ಆದರೆ ಅದು ಮತ್ತೂ ಚಿಗುರುತ್ತಾ ಮತ್ತೆ ಕೊಂಬೆರೆಂಬೆಗಳನ್ನು ಅತ್ತಿತ್ತ ಹರಡುತ್ತಾ ಹೇಗೆ ತಾನೂ ಆನಂದದಿಂದ ಇದ್ದು ಮಿಕ್ಕವರಿಗೂ ಆನಂದವನ್ನು ಬೀರುವದು! ತನ್ನ ಬಳಿಗೆ ಬಂದವರಿಗೆ ನೆಳಲಿನ ತಂಪನ್ನು ಕೊಡುವದು, ತನ್ನನ್ನು ಆಶ್ರಯಿಸುವ ಹಕ್ಕಿಗಳಿಗೆ ಆಸರೆಯಾಗಿರುವದು, ಎಂದಿನಂತೆ ರುಚಿಯಿಂದ ಹಣ್ಣುಗಳನ್ನು ಮಿಕ್ಕ ಪ್ರಾಣಿಗಳಿಗೆಂದು ಬಿಡುತ್ತಲೇ ಇರುವದು! ಸ್ಥಾವರಪ್ರಾಣಿಯಾದ ಮರವು ಹೀಗಿದ್ದರೆ ಜಂಗಮಪ್ರಾಣಿಯಾಗಿರುವ, ಅದರಲ್ಲಿಯೂ ಬುದ್ಧಿಜೀವಿಯಾದ, ಅದರಲ್ಲಿಯೂ ಸತ್ಯಧರ್ಮ ಪ್ರೇಮಗಳಿಂದ ಜಗತ್ತಿಗೆಲ್ಲ ಆನಂದವನ್ನು ಕೊಡಬಲ್ಲ ಮಾನವನು ಹೇಗಿರಬೇಕಾಯಿತು!

ಎಂಥ ಕಷ್ಟವು ಬಂದರೂ ಮನಸ್ಸಿನ ಸಮತೂಕವನ್ನು ಹಾಗೆಯೇ ಇಟ್ಟುಕೊಳ್ಳುವದು ಸುಲಭವಲ್ಲ. ನಿರಪರಾಧಿಯಾದವನೋರ್ವನನ್ನು ಸಮಾಜವು ತುಳಿಯುತ್ತಿರುವಾಗ, ಕೆಲಸವನ್ನು ಮಾಡಬಲ್ಲವನಿಗೆ ಉದ್ಯೋಗವನ್ನು ಕೊಡದೆ ಜನರು ಸಂಕಟಕ್ಕೆ ಈಡು ಮಾಡಿರುವಾಗ, ಕಾಲಸ್ಥಿತಿಯು ಮಾರ್ಪಟ್ಟ ಕಾರಣದಿಂದ ತನ್ನ ಯಾವ ಅಪರಾಧವೂ ಇಲ್ಲದಿದ್ದರೂ ಒಬ್ಬನನ್ನು ದೈವವು ಅತ್ಯಂತ ಉನ್ನತವಾದ ಸ್ಥಾನದಿಂದ ತೀರ ಕೆಳಗಿನ ಸ್ಥಾನಕ್ಕೆ ಎಸೆದುಬಿಟ್ಟಿರುವಾಗ, ಮನುಷ್ಯನು ಎಲ್ಲವನ್ನೂ ತಡೆದುಕೊಂಡು ಎಂದಿನಂತೆ ಕರ್ತವ್ಯನಿಷ್ಠನಾಗಿರುವದೇನೂ ಬಾಯಿಮಾತಲ್ಲ. ಗಂಡನು ದುರಾಚಾರಿಯಾಗಿ ಹೆಂಡತಿಯನ್ನು ಅಲಕ್ಷಿಸಿ ಬಿಟ್ಟುಹೋಗಿರುವಾಗ, ಅಥವಾ ಹೆಂಡತಿಯು ವಿಲಾಸಪ್ರಿಯೆಯಾಗಿ ಗಂಡನನ್ನು ಅನಾದರಿಸಿರುವಾಗ, ಸಾಕಿಸಲಹಿದ ಮಗನು ತಂದೆಯ ಯೋಗಕ್ಷೇಮವನ್ನು ವಿಚಾರಿಸದಿರುವಾಗ, ಅಥವಾ ತಂದೆಯು ತನ್ನ ಕರ್ತವ್ಯವನ್ನು ಮರೆತು ಮಗನನ್ನು ನಿನ್ನ ಹಣೆಯಲ್ಲಿ ಬರೆದದ್ದು ಆಗಲೆಂದು ಕೈಬಿಟ್ಟಿರುವಾಗ, ನಮ್ಮ ಕಷ್ಟಕ್ಕೆ ಕಾರಣರಾದವರನ್ನು ಕ್ಷಮಿಸಿ, ಅವರಿಗೆ ಈಶ್ವರನೇ ಬುದ್ಧಿಯನ್ನು ಕೊಡಲೆಂದು ನಮ್ಮನಮ್ಮ ಕರ್ತವ್ಯದಲ್ಲಿ ತೊಡಗುತ್ತಲಿರುವದೇನೂ ಕಷ್ಟವಲ್ಲ. ಆದರೆ ಇಂಥ ಸಂದರ್ಭಗಳು ನಮ್ಮೊಬ್ಬರಿಗೇ ಬಂದಿರುವದಿಲ್ಲ. ಮಹಾತ್ಮರಾದವರು ಇಂಥ ಸಂದರ್ಭಗಳಲ್ಲಿ ಹೇಗೆ ನಡೆದುಕೊಂಡರೆಂಬ ಉದಾಹರಣೆಯೂ ನಮಗೆ ದೊರೆಯದೆ ಇಲ್ಲ. ಸದ್ಯಕ್ಕೆ ಒಂದೇ ಒಂದು ಉದಾಹರಣೆಯನ್ನು ನೆನಪಿಗೆ ತಂದುಕೊಳ್ಳಬಹುದು. ಶ್ರೀರಾಮನು ದಶರಥನ ಜ್ಯೇಷ್ಠಪುತ್ರನೂ ಸಕಲಗುಣಪರಿಪೂರ್ಣನೂ ಆಗಿದ್ದು ಯೌವರಾಜ್ಯಪಟ್ಟಾಭಿಷೇಕಕ್ಕೆ

ಸರ್ವಸಮ್ಮತಿಯಿಂದ ಗೊತ್ತಾಗಿದ್ದ ಕಾಲದಲ್ಲಿ ಅದೇ ದಿನವೇ ಹದಿನಾಲ್ಕುವರ್ಷದ ವನವಾಸಕ್ಕೆ ಸಿದ್ಧನಾಗಬೇಕಾಗಿ ಬಂದ ಸನ್ನಿವೇಶವನ್ನು ನೆನಪಿಸಿಕೊಳ್ಳಿರಿ. ತಾಯಿಯ ವಿಲಾಪ, ತಮ್ಮ ಲಕ್ಷ್ಮಣನ ಕೋಪ, ಭರತಾದಿಗಳ ನಿರ್ಬಂಧ–ಮುಂತಾದವುಗಳಲ್ಲಿ ಯಾವ ಒಂದು ನಿಮಿತ್ತವಾದರೂ ಅವನ ಮನಸ್ಸನ್ನು ಏರುಪೇರುಮಾಡಿತೆ? ವನದಲ್ಲಿ ಋಷಿಗಳಿಗೆ ಸಹಾಯವನ್ನು ಮಾಡುವದಕ್ಕಾಗಿ ಶ್ರೀರಾಮನು ಪಟ್ಟ ಕಷ್ಟಗಳೆಷ್ಟು! ತನ್ನ ಪ್ರಿಯಪತ್ನಿಯನ್ನು ರಾವಣನು ಕದ್ದೊಯ್ದ ಘಟನೆ, ಕೊನೆಗೆ ಸಾಹಸಪಟ್ಟು ಆಕೆಯನ್ನು ಹುಡುಕಿ ಶತ್ರುಗಳನ್ನೆಲ್ಲ ಜಯಿಸಿದ ಮೇಲೆ, ಇನ್ನೇನು ಸಂತೋಷದ ಅಲೆಯು ಉಕ್ಕೇಳುವದೆಂಬಂತಿದ್ದ ಸಮಯದಲ್ಲಿ, ತನ್ನ ಹೃದಯದ ಪ್ರೇಮ ಝುರಿಯಂತಿದ್ದ ಸೀತಾದೇವಿಯೇ ಚಿತಾಗ್ನಿಯಲ್ಲಿ ಹಾರಿಕೊಳ್ಳುವ ಪ್ರಸಂಗ ಇವುಗಳಿಂದಾದರೂ ಆ ಮಹಾತ್ಮನ ಚಿತ್ತದಲ್ಲಿ ತಾರುಮಾರಾಯಿತೆ?

ಇನ್ನೊಂದು ಮೆಟ್ಟಿಲನ್ನು ಈಗ ತಿಳಿಸುವೆವು. ನಾವು ಆರ್ತರಾಗಿರುವಾಗ ನಮ್ಮ ಸಂಕಟವನ್ನು ಪರಿಹರಿಸೆಂದು ಭಗವಂತನ ಕಡೆಗೆ ತಿರುಗುವದು ಪುಣ್ಯದ ಫಲದಿಂದಲೇ ಸರಿ. "ಭಗವಂತ, ಈ ಕಷ್ಟದಿಂದ ಪಾರುಮಾಡು!" ಎಂದು ಬೇಡಿಕೊಂಡವರಿಗೆ ಫಲವಾಗದೆ ಇಲ್ಲ. ಆದರೆ ಅದಕ್ಕಿಂತಲೂ ಒಂದು ಉತ್ತಮವಾದ ಮಾರ್ಗವೂ ಸಾಧಕನಿಗೆ ದೊರೆಯುತ್ತದೆ. ಕಷ್ಟಗಳು ನಾವು ಮುಂದುವರಿಯುವದಕ್ಕೆ ಸೂಚಕವಾಗಿ, ನಮಗೆ ಆಗಲಿರುವ ಅನುಭವವಿಶೇಷದ ಅರುಣೋದಯವಾಗಿ, ಬರುವವೆಂದು ಆಗಲೆ ತಿಳಿಸಿರುತ್ತೇನೆ. ಕಾಲಲ್ಲಿದ್ದ ಕಲ್ಲೊತ್ತಿನಿಂದ ಕೀವು ತುಂಬಿಕೊಂಡಿದ್ದ ಒಂದು ಸಮಯದಲ್ಲಿ ನನಗೆ ನೋವನ್ನು ತಡೆಯುವದು ಬಹಳ ಕಷ್ಟವಾಗಿ ತೋರಿತು. ಆದರೆ ಆ ನೋವು ಏಕೆ ಬಂದಿತ್ತು? ಕಾಲೊಳಗೆ ಕಟ್ಟಿಕೊಂಡಿದ್ದ ಕೀವು ಹೊರಗೆ ಹೋಗಬೇಕಾಗಿತ್ತು; ಹೊರಕ್ಕೆ ದಾರಿಯಿಲ್ಲದೆ ಅದು ಚರ್ಮವನ್ನು ದೂಡುತ್ತಿತ್ತು. ಆ ಸಮಯದಲ್ಲಿ ಸೂಜಿಯಿಂದ ಕಾಲಿನಲ್ಲಿ ಬಗೆಮಾಡುವದಕ್ಕೆ ಯಾರಾದರೂ ಬಂದರೆ ಅವರನ್ನು ನಿವಾರಿಸುವದು ಉತ್ತಮವೊ, ಸೂಜಿಯು ಚುಚ್ಚುವ ನೋವನ್ನು ಒಂದು ಘಳಿಗೆ ತಡೆದುಕೊಂಡು ಕೀವನ್ನು ಹೊರದೂಡುವದು ಉತ್ತಮವೊ? ಈ ಪ್ರಶ್ನೆಗೆ ಉತ್ತರಹೇಳುವದೇನೂ ಕಷ್ಟವಲ್ಲ. ಈ ದೃಷ್ಟಿಯಿಂದ ನೋಡಿದರೆ ಭಗವಂತನನ್ನು "ಈ ಕಷ್ಟದಿಂದ ಪಾರುಮಾಡು!" ಎಂದು ಬೇಡಿಕೊಳ್ಳುವದಕ್ಕಿಂತಲೂ "ಈ ಕಷ್ಟವನ್ನು ಸಹಿಸಿಕೊಳ್ಳುವ ಶಕ್ತಿಯನ್ನು ಕೊಡು!" ಎಂದು ಬೇಡಿಕೊಳ್ಳುವದು ಇನ್ನೂ ಉತ್ತಮಮಾರ್ಗವೆಂದು ಸ್ಪಷ್ಟವಾಗುತ್ತದೆ.

ಅನಿವಾರ್ಯವಾದ ಕಷ್ಟಪರಂಪರೆಯು ಬರುತ್ತಿದೆ ಎಂದು ಎದೆಗುಂದದೆ ಬೇಡಿರಿ. ಅದರಿಂದ ನಿಮಗೆ ಹೊಸದೊಂದು ಸನ್ನಿವೇಶವು ಏರ್ಪಡುತ್ತಿದೆ ಎಂದು ನಂಬಿ ಅದನ್ನು ಸ್ವಾಗತಿಸಿರಿ. ಆ ಕಷ್ಟವನ್ನು ನಿಮ್ಮದಾಗಿ ಮಾಡಿಕೊಂಡು ನಿತ್ಯಕರ್ತವ್ಯದಲ್ಲಿಯೇ ತೊಡಗಿರಿ. ಯಾವ ಕಷ್ಟವನ್ನಾದರೂ ಮೇಲುಮೇಲೆಯೇ ಕಾರ್ಯಕಾರಣಭಾವವನ್ನು ಕಲ್ಪಿಸಿಕೊಂಡು

ಸ್ವಪ್ರಯತ್ನದಿಂದ ಪರಿಹರಿಸಿಕೊಳ್ಳುವದಕ್ಕೆ ಯತ್ನಿಸಬೇಡಿರಿ. ನಿಮ್ಮ ಹೃದಯದಲ್ಲಿಯೇ ಇರುವ ಪರಮೇಶ್ವರನಲ್ಲಿ ಧ್ಯಾನನಿಷ್ಠೆಯನ್ನು ಪಡೆದು ಆತನ ಬಲದಿಂದ ವ್ಯವಹಾರವನ್ನು ಸಾಗಿಸಿರಿ. ಆಗ ಕಷ್ಟಗಳು ಕಷ್ಟಗಳಾಗುವದಿಲ್ಲ; ಆನಂದಾಮೃತಸರೋವರಕ್ಕೆ ಹರಿಯುವ ಕಾಲುವೆಗಳಾಗುವವು.

# 36. ಸಾಧನದ ಸಾಫಲ್ಯತೆಗೆ ಭಗವಂತನನ್ನೇ ಬೇಡಬೇಕು

ನಮ್ಮ ಇಷ್ಟಾರ್ಥವು ಈಡೇರುವದಕ್ಕೂ ಅನಿಷ್ಟಗಳು ಪರಿಹಾರವಾಗುವದಕ್ಕೂ ಭಗವಂತನನ್ನು ಶರಣುಹೋಗುವದೇ ಉಪಾಯವು-ಎಂದು ಶಾಸ್ತ್ರಗಳಲ್ಲಿ ಆಗಿಂದಾಗ್ಗೆ ಹೇಳುತ್ತಲೇ ಇರುತ್ತದೆ. ಅನುಭವಿಗಳಾದ ಗುರುಗಳೂ ಅದನ್ನೇ ಮತ್ತೆಮತ್ತೆ ಉಪದೇಶಿಸುತ್ತಿರುವರು. ಆದರೂ ನಾವು ಆ ಪ್ರಯತ್ನವನ್ನು ಮಾಡುವದಕ್ಕೆ ಹೊರಟರೆ ಅನೇಕ ಪ್ರತಿಬಂಧಕಗಳು ಗೋಚರವಾಗುವವು. ಆ ಪ್ರತಿಬಂಧಕಗಳು ಯಾವವು? ಅವುಗಳನ್ನು ಪರಿಹರಿಸಿಕೊಳ್ಳುವದು ಹೇಗೆ? ಇದನ್ನು ಕುರಿತು ಈ ತಿಂಗಳು ಬರೆಯುವೆನು.

ಭಗವಂತನೊಬ್ಬನು ಇದಾನೆಂದೇ ಮನಸ್ಸಿಗೆ ಬಾರದವರೂ ಉಂಟು. ನಾಸ್ತಿಕ್ಯವು ಪೂರ್ವಜನ್ಮದ ಪಾಪದ ಫಲವೆಂದು ಶಾಸ್ತ್ರದಲ್ಲಿ ಹೇಳಿದೆ. ಅದು ಹೇಗಾದರೂ ಇರಲಿ. ಯಾರ ಮನಸ್ಸಿನಲ್ಲಿ ಭಗವಂತನು ಇದಾನೆ ಎಂಬುದು ಇನ್ನೂ ಮಿಂಚಿಲ್ಲವೋ ಅವರು ಆ ನಂಬಿಕೆಯು ಮನದಲ್ಲಿ ಮೊಳೆಯುವವರೆಗೆ ದೃಷ್ಟೋಪಾಯಗಳಿಂದಲೇ ವ್ಯವಹಾರವನ್ನು ಸಾಗಿಸಬೇಕಾಗಿರುತ್ತದೆ. ದೇವರ ಅಸ್ತಿತ್ವವನ್ನು ನಂಬದವರೆಲ್ಲರೂ ನೀತಿಭ್ರಷ್ಟರೆಂದು ಹೇಳುವದಕ್ಕೆ ಬರುವದಿಲ್ಲ. ಏಕೆಂದರೆ ಲೋಕೋಪಕಾರದಲ್ಲಿ ನಿರತರಾಗಿರುವ ವಿಚಾರದಕ್ಷರಾದವರು ಕೂಡ ಕೆಲವರು ಭಗವಂತನೊಬ್ಬನು ಇದಾನೆಂಬುದನ್ನು ನಂಬಲಾರದೆ ಇರುತ್ತಾರೆ. ಆದರೆ ಈಶ್ವರನ ಅಸ್ತಿತ್ವದಲ್ಲಿ ನಂಬಿಕೆಯಿಲ್ಲದವರು ಎಷ್ಟೇ ಚತುರರಾಗಲಿ, ಮನುಷ್ಯಪ್ರಯತ್ನವು ಒಂದಿಷ್ಟೂ ಸಾಗದಂಥ ಸಂದರ್ಭಗಳು ಒದಗಿದಾಗ ನಿರಾಶರಾಗುವರು. "ಮಾಡುವದನ್ನೆಲ್ಲ ಮಾಡಿದ್ದಾಯಿತು, ಮನುಷ್ಯನು ಇನ್ನೇನು ಮಾಡುವದಕ್ಕಾದೀತು?" ಎಂಬುದೇ ಅವರ ಅಭಿಪ್ರಾಯವು. ಆದರೆ ನಾಸ್ತಿಕ್ಯವು ಮಾನವನ ನಿಜವಾದ ಸ್ವಭಾವಕ್ಕೆ ಸೇರಿದ್ದಲ್ಲ. ಭಗವದ್ಭಕ್ತರ ದರ್ಶನದಿಂದಲೂ ಸಂಭಾಷಣೆಯಿಂದಲೂ ಭಗವಂತನೊಬ್ಬನು ಇರುತ್ತಾನೆ ಎಂಬ ನಂಬಿಕೆಯು ತಲೆ ಎತ್ತಿಕೊಳ್ಳುತ್ತದೆ. ಪುರುಷಪ್ರಯತ್ನವಲ್ಲದೆ, ಮನುಷ್ಯನ ಏಳಿಗೆಗೆ ಪರಮೇಶ್ವರನ ಅನುಗ್ರಹದಿಂದಾಗುವ

* ಸಂಪುಟ 18, ಸಂಚಿಕೆ 12, ಆಗಸ್ಟ್ 1949, ಪುಟ 265-272

ಆಧ್ಯಾತ್ಮಿಕ ಬದಲಾವಣೆಯೂ ಕಾರಣವಾಗುವದೆಂಬುದು ಆಗ ಮನದಟ್ಟಾಗುವದು. ಸತ್ಸಂಗತಿಯಿಂದಾಗುವ ಈ ಲಾಭವನ್ನು ವಾಲ್ಮೀಕಿಯ ಪೂರ್ವವೃತ್ತಾಂತದಿಂದ ನಾವುಗಳು ಮನಸ್ಸಿಗೆ ತಂದುಕೊಳ್ಳಬಹುದು.

ಆದರೆ ಭಗವಂತನ ಇರುವಿಕೆಯಲ್ಲಿ ಸಂಶಯವಿಲ್ಲದೆ ಇರುವವರಿಗೂ ಭಗವಂತನನ್ನೇ ಚಿಂತಿಸುತ್ತಿರುವದಕ್ಕೆ ಹಲವು ಅಡ್ಡಿಗಳು ಬಂದೊದಗುತ್ತವೆ. ಕೆಲವು ದಿನಗಳವರೆಗೆ ಸತ್ಸಂಗವನ್ನು ಮಾಡುತ್ತಿದ್ದವರಿಗೂ ಸಾಧನೆಯಲ್ಲಿ ಬರುತ್ತಾಬರುತ್ತಾ ಅನಾದರವುಂಟಾಗುತ್ತದೆ. ಅಥವಾ ಸಾಧನೆಗಳನ್ನು ಮಾಡುತ್ತಿದ್ದರೂ ಸಾಧನದಿಂದಾಗುತ್ತಿದ್ದ ಸದ್ಯಃಫಲಗಳು ಕಾಣಿಸದೆ ಹೋಗಿ, ಸಾಧನಗಳಲ್ಲಿ ಶ್ರದ್ಧೆಯು ಸಡಿಲವಾಗುತ್ತದೆ. ಹಾಗಿಲ್ಲದಿದ್ದರೆ ಅಧ್ಯಾತ್ಮಸಾಧನಗಳಿಂದ ಅಲ್ಪಸ್ವಲ್ಪ ತಾತ್ಕಾಲಿಕಫಲಗಳು ಆದರೂ ಮಹಾಫಲವಾಗಿರುವ ಆತ್ಮಸಾಕ್ಷಾತ್ಕಾರ ವಾಗುವದಿಲ್ಲ; ಅದರಿಂದ ದೊರೆಯಬೇಕಾಗಿದ್ದ ಶಾಂತಿಸುಖಗಳು ದಕ್ಕುವದಿಲ್ಲ. ಈ ಅಡ್ಡಿಗಳನ್ನು ಹೇಗೆ ದಾಟಬೇಕು?

ಸತ್ಪುರುಷರ ಸಹವಾಸದಲ್ಲಿರುವವರಿಗೆ ಆ ಮಹನೀಯರ ಹೊಸ ದರ್ಶನದಿಂದಾಗಿದ್ದ ಉತ್ಸಾಹವು ಕಡಿಮೆಯಾಗಲು, ಅವರ ಉಪದೇಶದಲ್ಲಿ ಹೆಚ್ಚಿನದೇನೂ ಇಲ್ಲವೆಂಬ ಬುದ್ಧಿಯುಂಟಾಗುವದು ಸಹಜವಾಗಿದೆ. ಸಾಧುಜನರ ಉಪದೇಶದಲ್ಲಿ ರಹಸ್ಯವೇನಾದರೂ ಇದೆಯೆ? ಎಂದರೆ ಉಂಟು, ಇಲ್ಲ-ಎಂದು ಎರಡು ಉತ್ತರಗಳನ್ನು ಕೊಡಬಹುದು. ಅವರು ಶಾಸ್ತ್ರದಲ್ಲಿ ತಿಳಿಸಿರುವದನ್ನೇ ಸುಸ್ಪಷ್ಟವಾಗಿ ಸರಳವಾಗಿ ಬೋಧಿಸುತ್ತಾರೆ; ಅವರ ಅನುಗ್ರಹದಿಂದ ಅವರ ಬಳಿಯಲ್ಲಿರುವಾಗ ನಮಗೆ ಶಾಸ್ತ್ರವಾಕ್ಯಗಳ ಕಗ್ಗಂಟುಗಳು ಸುಲಭವಾಗಿ ಬಿಚ್ಚಿಕೊಂಡು ವಿಷಯವನ್ನು ಅನುಭವಕ್ಕೆ ತಂದುಕೊಡುತ್ತವೆ. ಆದ್ದರಿಂದ ಅವರ ಉಪದೇಶದಲ್ಲಿ **'ಅನುಭವ'** ಎಂಬ ರಹಸ್ಯವುಂಟು. ಆದರೆ ಅವರು ತತ್ತ್ವವು ತಿಳಿಯುವವರೆಗೂ ಮತ್ತೆಮತ್ತೆ ಅದನ್ನೇ ಹೇಳುತ್ತಿರುವದರಿಂದ, ಜ್ಞಾನವೆಂದರೆ ವಾಕ್ಯಗಳನ್ನು ನೆನಪಿಡುವದೆಂದಾಗಲಿ ಅಥವಾ ಯುಕ್ತಿಯಿಂದ ಗಡುಚಾದ ಪ್ರಶ್ನೆಗಳನ್ನು ಬಿಡಿಸುವ ಶಕ್ತಿಯೆಂದಾಗಲಿ ತಿಳಿದುಕೊಳ್ಳುವವರಿಗೆ ಅವರ ಉಪದೇಶದಲ್ಲಿ ಯಾವ ಹೆಚ್ಚಿನ ರಹಸ್ಯವೂ ಕಾಣಿಸುವದಿಲ್ಲ. ಆದ್ದರಿಂದಲೇ ಅನುಭವದ ಕಡೆಗೆ ಲಕ್ಷ್ಯವನ್ನು ಕೊಡದೆ ಇರುವವರು ಅನೇಕರು ಸಾಧುಸಂಗವೆಂಬುದು ಬರಿಯ ನಟನೆ ಎಂದುಕೊಂಡು ಬಲುಬೇಗನೆ ಸದ್ಗುರುವಿನ ಸನ್ನಿಧಿಯ ಲಾಭವನ್ನು ಕಳೆದುಕೊಳ್ಳುವರು. ಆದರೆ ಯಾರು ಸುಕೃತ ವಾಸನೆಯಿಂದ ಸತ್ಪುರುಷರು ಆಡುವ ನುಡಿಗಳಿಗಿಂತಲೂ ಆ ನುಡಿಯಲ್ಲಿ ಅಡಗಿರುವ ಅನುಭವವೇ ಮುಖ್ಯವೆಂದು ಅರಿತುಕೊಂಡಿರುವರೋ, ಅಂಥವರು ತಮ್ಮ ಗುರುಗಳ ನಡೆಗೂ ನುಡಿಗೂ ಹೊಂದಿಕೆಯುನ್ನು ಮಾಡಿಕೊಂಡು, ತಮ್ಮ ನಡೆನುಡಿಗಳನ್ನು ಗುರುಗಳ ನಡೆನುಡಿಗಳ ಪ್ರತಿಬಿಂಬವಾಗಿರುವಂತೆ ನೋಡಿಕೊಳ್ಳುವದಕ್ಕೆ ಯತ್ನಿಸುವರು. ಅಂಥವರಿಗೆ ಮಾತ್ರ ಸಾಧುಸಂಗಮದ ನಿಜವಾದ ಫಲವು ದೊರೆಯುವದು.

ಸತ್ಸಂಗದಲ್ಲಿಯೇ ಇದ್ದುಕೊಂಡಿರುವವರಿಗೆ ಅವರು ಮಾಡುವ ಅಧ್ಯಾತ್ಮಸಾಧನಗಳ ಫಲವಾಗಿ ಕೆಲಕೆಲವು ಅನುಭವಗಳು ಆಗಿಂದಾಗ್ಗೆ ಕಾಣಿಸಿಕೊಳ್ಳುತ್ತವೆ. ಉದಾಹರಣೆಗೆ ಅವರ ವಾಣಿಯನ್ನಾಗಲಿ ಅವರು ತೋರಿಸಿದ ಗೀತಾದಿಪ್ರಾಸಾದಿಕಗ್ರಂಥಗಳ ಉಪದೇಶವನ್ನಾಗಲಿ ಮನಮುಟ್ಟಿ ಚಿಂತಿಸುತ್ತಿದ್ದರೆ, ಅವರ ಆ ಉಪದೇಶಗಳಲ್ಲಿ ಅಡಗಿರುವ ಕೆಲವು ಹೊಸ ಅರ್ಥಗಳು ಕಾಲಕ್ರಮದಲ್ಲಿ ಮನಸ್ಸಿಗೆ ಹೊಳೆಯುವವು. ಕಾಲಕಾಲಕ್ಕೆ ಗುರುಗಳು ಹೇಳಿಕೊಟ್ಟಿರುವ ಅರ್ಚನೆ, ಸ್ತೋತ್ರ, ಪ್ರಾರ್ಥನೆ–ಮುಂತಾದವುಗಳು ಬರುಬರುತ್ತಾ ಧನಲಾಭ, ಅಥವಾ ಮಿತ್ರಲಾಭ, ಅಥವಾ ಯಾವದಾದರೊಂದು ಅನರ್ಥದ ನಿವಾರಣೆ–ಇವುಗಳು ಫಲಿಸಿದವೆಂಬ ನಂಬಿಕೆಯುಂಟಾಗುತ್ತದೆ. ತಮಗೆ ಬೇಕಾದದ್ದನ್ನು ಈಡೇರಿಸುವಂತೆಯೂ ಬೇಡದ್ದನ್ನು ನಿವಾರಿಸುವಂತೆಯೂ ಭಗವಂತನನ್ನು ಪ್ರಾರ್ಥಿಸಿಕೊಳ್ಳಬೇಕೆಂಬ ಇಚ್ಛೆಯು ಉತ್ಕಟವಾಗುತ್ತದೆ. ಆ ಪ್ರಾರ್ಥನೆಯನ್ನು ಭಗವಂತನು ಆಗಾಗ್ಗೆ ನೆರವೇರಿಸಿಕೊಟ್ಟನೆಂಬ ಭಾವನೆಯೂ ಬರುತ್ತದೆ. ಆದರೆ ಕೆಲವು ಕಾಲದ ಬಳಿಕ, ಇದೇ ಫಲಗಳು ಕಾಣಿಸದೆ ಹೋಗುತ್ತವೆ; ಆಗ ಇದುವರೆಗೆ ಆಗಿದ್ದ ಫಲಗಳು ಸಾಧನಗಳಿಂದಾದವೊ, ಕಾಕತಾಳೀಯವಾಗಿ ಅದೃಷ್ಟವಿಶೇಷದಿಂದ ಆದವೊ?– ಎಂಬ ಸಂಶಯವೂ ಉಂಟಾಗಬಹುದು. ಆಗ ಏನು ಮಾಡಬೇಕು?

ಈ ಪ್ರಶ್ನೆಗೆ ಉತ್ತರವನ್ನು ಹುಡುಕುತ್ತಿರುವವರಿಗೆ ಸಾಧನದಲ್ಲಿ ಬೇರೆಬೇರೆಯ ಭೂಮಿಕೆಗಳಿವೆ ಎಂಬುದು ತಿಳಿಯಬೇಕು. ಒಂದು ಮಹಡಿಯ ಮನೆಯಲ್ಲಿ ಐದಾರು ಅಂತಸ್ತುಗಳಿರಬಹುದಷ್ಟೆ. ಬೊಂಬಾಯಿಯಂಥ ನಗರಗಳಲ್ಲಿ ಒಂದೇ ಮನೆಯ ಒಂದೊಂದು ಅಂತಸ್ತಿನಲ್ಲಿ ಒಂದೊಂದು ಕುಟುಂಬದವರು ವಾಸಮಾಡುತ್ತಿರುತ್ತಾರೆ. ಅಂಥ ಸಂದರ್ಭಗಳಲ್ಲಿ ಮೇಲಿನ ಅಂತಸ್ತಿನವರಿಗೆ ಕೆಳಗಿನ ಅಂತಸ್ತನ್ನು ಮೀರಿ ಕೆಲವು ಮೆಟ್ಟಿಲುಗಳನ್ನು ಹತ್ತುವ ಆವಶ್ಯಕತೆ ಬರಬಹುದು. ಅಥವಾ ವಿದ್ಯುಚ್ಛಕ್ತಿಯೇ ಮುಂತಾದವುಗಳನ್ನು ಉಪಯೋಗಿಸಿಕೊಂಡು ಏರುದೊಟ್ಟಿಲುಗಳಲ್ಲಿ ಕುಳಿತುಕೊಂಡು ಮೇಲಕ್ಕೇರಬೇಕಾಗಬಹುದು. ಹೀಗಿರುವಲ್ಲಿ ನಾಲ್ಕನೆಯ ಅಂತಸ್ತಿನವರು ಮೂರನೆಯ ಅಂತಸ್ತನ್ನು ದಾಟುವದು ಅತ್ಯವಶ್ಯಕವಾಗಿರುವದರಿಂದ, ಆ ಅಂತಸ್ತನ್ನು ಕಂಡಾಗ ಅದರ ವಿಷಯದಲ್ಲಿ ಔದಾಸೀನ್ಯವಿರಬೇಕಾದದ್ದು ಸಹಜವಾಗಿದೆ. ಹಾಗಿಲ್ಲದೆ, ಅವರು ಎಷ್ಟುಕಾಲ ಮೂರನೆಯ ಅಂತಸ್ತಿನಲ್ಲಿಯೇ ನಿಲ್ಲುವರೋ, ಅಷ್ಟು ಕಾಲವೂ ತಮ್ಮ ಅಂತಸ್ತಿನ ವಾಸಕ್ಕೆ ಹೋಗಲು ಅಡ್ಡಿಯಾಗುತ್ತದೆ. ಅಲ್ಲವೆ? ಇದರಂತೆ ಯಾರಿಗೆ ಮೇಲಿನ ಅಂತಸ್ತಿನ ಸಾಧನವು ಬೇಕಾಗಿರುವದೋ ಅವರಿಗೆ ಕೆಳಗಿನ ಅಂತಸ್ತಿನಲ್ಲಿರುವದೇ ಅಡ್ಡಿಯಾಗಿರುತ್ತದೆ. ವಿದ್ಯಾರ್ಥಿಗಳು ವರ್ಷವರ್ಷಕ್ಕೂ ಮೇಲಿನ ತರಗತಿಗೆ ಹೋಗುತ್ತಿರುವಲ್ಲಿ ಏನಾದರೂ

ಕಾರಣದಿಂದ ಒಂದು ವರ್ಷ ಅದೇ ತರಗತಿಯಲ್ಲಿ ಓದಬೇಕಾಗಿ ಬಂದರೆ, ಅದೇ ಪಾಠವನ್ನೇ ಮಾಡುವದು ಹೇಗೆ ಅವರಿಗೆ ಬೇಸರವಾಗಿರುವದೋ, ಹಾಗೆಯೇ ಒಂದು ಭೂಮಿಕೆಯ ಸಾಧನದಿಂದಾಗುವ ಪ್ರಯೋಜನವು ಮುಗಿದಮೇಲೆ, ಆ ಭೂಮಿಕೆಯ ಸಾಧನದಿಂದಾಗಬೇಕಾದ ಅನುಭವವಿಶೇಷವು ಅಳವಟ್ಟು ಸಾಧಕನು ಮೇಲಿನ ಭೂಮಿಕೆಗೆ ಸಿದ್ಧನಾಗಿರುವಾಗ ಕೆಳಗಿನ ಭೂಮಿಕೆಯಲ್ಲಿ ನಿಲ್ಲದಂತೆ ಈಶ್ವರನು ಏರ್ಪಡಿಸಿರುತ್ತಾನೆ. ಆದ್ದರಿಂದ ಸಾಧನಗಳಿಂದ ಆಗುತ್ತಿದ್ದ ತತ್ಕಾಲದ ಪ್ರಯೋಜನಗಳು ಆಗದಿದ್ದರೆ, ಅದಕ್ಕಾಗಿ ಸಾಧಕನು ಬೇಸರಪಡಬಾರದು; ಸಾಧನವನ್ನು ಮುಂದುವರಿಸುತ್ತಾ ಹೋಗಬೇಕು; ಅಷ್ಟೆ. ಕೆಲವು ದಿನಗಳಲ್ಲಿಯೇ ಅವನ ಯೋಗ್ಯತೆಗೆ ತಕ್ಕ ಭೂಮಿಕೆಯ ಸಾಧನವು ತಾನೇ ತೋರಿಕೊಳ್ಳುವದು. ಅದೇ ಈಶ್ವರನ ಅಥವಾ ಸದ್ಗುರುವಿನ ಅನುಗ್ರಹವು.

ಜೀವನದಲ್ಲಿ ಮನುಷ್ಯನಿಗೆ ಬರುವ ಕಷ್ಟಪರಂಪರೆಗಳು ಹೊಸ ಅನುಭವವಿಶೇಷಗಳನ್ನು ಕೊಡುವದಕ್ಕೆ ಬಂದಿರುತ್ತವೆ–ಎಂದು ಹಿಂದೆ ಒಂದು ಲೇಖನದಲ್ಲಿ ತಿಳಿಸಿದ್ದೆನು. ಆ ಕಷ್ಟಗಳು ಬಂದಾಗ, ಕಷ್ಟಗಳನ್ನು ತಿತಿಕ್ಷೆಯಿಂದ ಸ್ವಾಗತಿಸುವದು, ನಮ್ಮ ದಿನದಿನದ ಕರ್ತವ್ಯದಲ್ಲಿ ನಿರತರಾಗಿಯೇ ಇರುವದು, 'ಈ ಕಷ್ಟವನ್ನು ಪರಿಹರಿಸಿಕೊಳ್ಳುವ ಶಕ್ತಿಯನ್ನು ಕೊಡು' ಎಂದು ಭಗವಂತನಲ್ಲಿ ಮೊರೆಯಿಡುತ್ತಿರುವದು–ಎಂಬ ಉಪಾಯಗಳಿಂದ ಕಷ್ಟಗಳನ್ನೇ ನಮ್ಮ ಚಿತ್ತಸಮಾಧಾನಕ್ಕೆ ಸಾಧನವಾಗಿ ಮಾಡಿಕೊಳ್ಳಬಹುದು ಎಂದು ಅಲ್ಲಿ ವರ್ಣಿಸಿ ತಿಳಿಸಿದ್ದೆನು. ಅಧ್ಯಾತ್ಮಸಾಧನವನ್ನು ಮಾಡುತ್ತಿರುವಾಗ ಅದಕ್ಕೆ ಬರುವ ಎಡರುಗಳನ್ನು ತಪ್ಪಿಸಿಕೊಳ್ಳುವದಕ್ಕೂ ಅದೇ ಉಪಾಯವನ್ನು ಅವಲಂಬಿಸಬೇಕು. ಅಂದರೆ ಸಾಧನಕ್ಕೆ ಎಡರು ಬಂದರೆ ಅದನ್ನು ತಿತಿಕ್ಷೆಯಿಂದ ಸ್ವಾಗತಿಸಿ ಮತ್ತೆ ಸಾಧನವನ್ನು ಮಾಡುವದಕ್ಕೆ ಮೊದಲುಮಾಡಬೇಕು. 'ಈ ಸಾಧನವನ್ನು ಪೂರ್ತಿಮಾಡಿಕೊಳ್ಳುವ ಶಕ್ತಿಯನ್ನು ಕೊಡು' ಎಂದು ಭಗವಂತನನ್ನು ಬೇಡಿಕೊಳ್ಳುವದು–ಈ ಉಪಾಯವನ್ನೇ ಉಪಯೋಗಿಸಿಕೊಳ್ಳಬೇಕು.

ಈಗ ಇನ್ನೊಂದು ಪ್ರಶ್ನೆ ಎದ್ದುಕೊಳ್ಳುವದು : ನಾವು ಎಷ್ಟೋ ವರ್ಷಗಳಿಂದ ಸಾಧನಗಳನ್ನು ಮಾಡುತ್ತಲೇ ಬಂದಿದೇವೆ. ಆದರೆ ನಮಗೇಕೆ ಪರಮಾತ್ಮನ ಸಾಕ್ಷಾತ್ಕಾರವಾಗಿರುವದಿಲ್ಲ? ನಮಗೆ ಆತ್ಮಸಾಕ್ಷಾತ್ಕಾರದಿಂದ ದೊರೆಯಬೇಕಾದ ಶಾಂತಿ ಸುಖಗಳು ಏಕೆ ಕೈವಶವಾಗಿಲ್ಲ?–ಎಂದು ಕೆಲವರು ಕೇಳುವರು. ಈ ಸಾಧಕರಲ್ಲಿ ನಾಸ್ತಿಕ್ಯವಿಲ್ಲ, ಸಾಧನಗಳನ್ನು ಬಿಟ್ಟುಬಿಡುವ ಚಾಪಲ್ಯವೂ ಇಲ್ಲ. ಆದರೂ ಫಲವು ಕಂಡಿಲ್ಲವಲ್ಲ! ಅದೇಕೆ?

ಈ ಅಂತಸ್ತಿನಲ್ಲಿರುವ ಸಾಧಕರಿಗೆ ಭಗವಂತನು ಕೊಟ್ಟಿರುವ ಒಂದು ಉತ್ತರವನ್ನು ನೆನಪಿಗೆ ತರಬೇಕಾಗಿದೆ:

**ನಾಹಂ ಪ್ರಕಾಶಃ ಸರ್ವಸ್ಯ ಯೋಗಮಾಯಾಸಮಾವೃತಃ ।**
**ಮೂಢೋಽಯಂ ನಾಭಿಜಾನಾತಿ ಲೋಕೋ ಮಾಮಜಮವ್ಯಯಮ್ ॥**

"ನಾನು ಎಲ್ಲರಿಗೂ ತೋರುವಹಾಗಿಲ್ಲ; ಏಕೆಂದರೆ ಯೋಗಮಾಯೆಯಿಂದ ಮರೆಮಾಡಿಕೊಂಡಿರುವೆನು. ಈ ಮೂಢರಾದ ಜನರು ಅಜನೂ ಅವ್ಯಯನೂ ಆಗಿರುವ ನನ್ನನ್ನು ಗೊತ್ತುಮಾಡಿಕೊಂಡು ಅರಿತುಕೊಳ್ಳಲಾರದೆ ಇರುವರು." ಪರಮೇಶ್ವರನನ್ನು ನಾವು ಕಂಡುಕೊಳ್ಳದೆ ಇರುವದಕ್ಕೆ ಅವನಿಗೆ ಮರೆಯಾಗಿರುವ ಮಾಯೆಯೇ ಕಾರಣವು; ಮಾಯೆಯಿಂದಲೇ ನಾವು ಏನೂ ತೋಚದೆ, ಆ ಭಗವಂತನನ್ನು ಗುರುತಿಸಲಾರದೆ ಇರುವೆವು.

ಮಾಯೆ ಎಂದರೇನು? ನಮ್ಮ ಸಾಧನಕ್ಕೆ ಅದು ಹೇಗೆ ಅಡ್ಡಿಯಾಗಿರುವದು? ಭಗವಂತನು ನಮ್ಮ ಸಾಧನವು ಸಫಲವಾಗದಂತೆ ಈ ಮಾಯೆಯನ್ನೇಕೆ ತನ್ನ ಸೃಷ್ಟಿಯಲ್ಲಿಟ್ಟಿರುವನು?–ಎಂದು ಕೆಲವರು ಕೇಳುವದುಂಟು. ಒಬ್ಬ ವಿದ್ಯಾರ್ಥಿಯು ವರ್ಷದ ಪಾಠವು ಮುಗಿದಬಳಿಕ ಅವನ ವಿದ್ಯಾಭಿವೃದ್ಧಿಯು ಎಷ್ಟರಮಟ್ಟಿಗೆ ಆಗಿರುವದೆಂದು ನೋಡುವದಕ್ಕಾಗಿ ಉಪಾಧ್ಯಾಯರು ಕೊಟ್ಟಿರುವ ಪ್ರಶ್ನಪತ್ರಿಕೆಯನ್ನು ನೋಡಿ "ಉಪಾಧ್ಯಾಯರೆಂದರೆ ಹುಡುಗರಿಗೆ ಪಾಠವನ್ನು ಹೇಳಿಕೊಡತಕ್ಕವರು. ಅವರೇಕೆ ಹುಡುಗರಿಗೆ ಇಂಥ ಕಷ್ಟವಾದ ಪ್ರಶ್ನೆಗಳನ್ನು ಹಾಕಬೇಕು? ಇದಲ್ಲದೆ ಉಪಾಧ್ಯಾಯರಿಗೆ ಈ ಪ್ರಶ್ನೆಗಳಿಗೆ ಉತ್ತರಗಳು ತಿಳಿದೇ ಇವೆಯಷ್ಟೆ; ಅವರೇಕೆ ನಮ್ಮನ್ನು ಇದನ್ನೆಲ್ಲ ಕೇಳಬೇಕು? ಸುಮ್ಮನೆ ಮುಂದಿನ ತರಗತಿಗೆ ಕಳುಹಿಸಿದರಾಗದೆ?" ಎಂದು ಕೇಳಿದರೆ ನೀವೇನೆನ್ನುವಿರಿ? ಹುಡುಗನಿಗೆ ಹೇಳಿಕೊಟ್ಟದ್ದು ಅರಿವಾಯಿತೋ ಇಲ್ಲವೋ ಎಂಬುದನ್ನು ಗೊತ್ತುಮಾಡುವದಕ್ಕೆ ಪ್ರಶ್ನೆಗಳೇ ಉಪಾಯವು. ಪ್ರಶ್ನೆಗಳ ಕಷ್ಟವನ್ನು ಸಂತೋಷಚಿತ್ತದಿಂದ ಬಗೆಹರಿಸಿಕೊಳ್ಳುವವನೇ ಮುಂದಕ್ಕೆ ಹೋಗುವದಕ್ಕೆ ತಕ್ಕವನು. ಅಲ್ಲವೆ? ಇದರಂತೆ ನಮ್ಮ ಮುಂದೆ ಹರಡಿರುವ ತ್ರಿಗುಣಾತ್ಮಕವಾದ ಮಾಯೆಯೇ ನಮ್ಮ ಸತ್ತ್ವಪರೀಕ್ಷೆಗೆ ತಕ್ಕದ್ದು. ನಾವು ಮಾಯೆಯನ್ನು ಎದುರಿಸಿ ಸಲೀಸಾಗಿ ಮುಂದುವರಿಯಲಿ ಎಂದು ಸದುದ್ದೇಶದಿಂದಲೇ ಭಗವಂತನು ಈ ಮಾಯೆಯನ್ನು ನಮ್ಮ ಮುಂದೆ ಇಟ್ಟಿರುವನು.

ಮಾಯೆಯೆಂದರೆ ಸತ್ತ್ವರಜಸ್ತಮೋಗುಣಗಳ ಬೇರೆಬೇರೆಯ ಜೋಡಣೆಗಳಿಂದಾಗಿರುವ ಜಗತ್ತಿನ ತೋರಿಕೆಗಳು. ಇವುಗಳೇ ನಮ್ಮ ಮುಂದೆ ಕಾಣುತ್ತಿರುವ ಬಗೆಬಗೆಯ ಪದಾರ್ಥಗಳು. ಇವುಗಳಲ್ಲಿ ನಮಗೆ ಕೆಲವು ಬೇಕೆನಿಸುತ್ತವೆ, ಕೆಲವು ಬೇಡವೆನಿಸುತ್ತವೆ. ಬೇಕುಗಳನ್ನು ಸಂಪಾದಿಸಿಕೊಳ್ಳುವದು, ಬೇಡಗಳನ್ನು ದೂರವಿರಿಸಿಕೊಳ್ಳುವದು–ಇದಕ್ಕಾಗಿಯೇ ನಮ್ಮ ನಿತ್ಯದ ವ್ಯವಹಾರವು ಸಾಗಿರುತ್ತದೆ.

ಈ ಯತ್ನವು ಯಾವ ಅಡ್ಡಿಯೂ ಇಲ್ಲದೆ ಸಾಗಿದರೆ ಅದನ್ನು ನಾವು 'ಸುಖಜೀವನ' ಎನ್ನುವೆವು. ಆದರೆ ಸಾಮಾನ್ಯವಾಗಿ ಯಾವ ಜೀವನವೂ ಈ ಅರ್ಥದಲ್ಲಿ ಸುಖಜೀವನವಲ್ಲ; ಅಡ್ಡಿಗಳು ಮೇಲಿಂದ ಮೇಲೆ ಕಾಣಿಸಿಕೊಳ್ಳುತ್ತಿರುವದೇ ನಮ್ಮೆಲ್ಲರ ಅನುಭವದಲ್ಲಿರುತ್ತದೆ. ಇದನ್ನೇ ನಾವು 'ಕಷ್ಟ' ಎಂದು ಕರೆಯುತ್ತಿರುವದು.

ಮನುಷ್ಯನಿಗೆ ಬೇಕುಬೇಡಗಳ ಜೀವನವೇ ವಾಸ್ತವಿಕಜೀವನವೆಂದು ಕಾಣಿಸುತ್ತಿರುತ್ತದೆ. ಅವನು ಬೇಕುಗಳನ್ನು ಸಂಪಾದಿಸಿಕೊಳ್ಳುವದಕ್ಕೂ ಬೇಡಗಳನ್ನು ತೊಲಗಿಸಿಕೊಳ್ಳುವದಕ್ಕೂ ಹವಣಿಸುತ್ತಿರುವನು. ಈ ಪ್ರಯತ್ನದಲ್ಲಿ ನೆರವಾಗಿರೆಂದು ತನ್ನ ಇಷ್ಟಬಂಧುಗಳನ್ನು ಕೇಳಿಕೊಳ್ಳುತ್ತಿರುವನು. ಇಷ್ಟೇ ಅಲ್ಲ. ಪುಣ್ಯವಿಶೇಷದಿಂದ ಸಾಧುಸಂತರ ಸಂಗವು ದೊರಕಿದರೆ ಅವರನ್ನೂ ತನ್ನ ಇಷ್ಟಾರ್ಥವನ್ನು ನೆರವೇರಿಸಿಕೊಡಿರೆಂದು, ಅಥವಾ ಅನಿಷ್ಟವನ್ನು ತೊಲಗಿಸಿಕೊಡಿರೆಂದು, ಕೇಳುವದೇ ಅವನಿಗೆ ಸ್ವಾಭಾವಿಕವಾಗಿರುತ್ತದೆ. ಆದ್ದರಿಂದಲೇ "ಭಗವಂತನಿಗೆ ಶರಣುಹೋಗಿರಿ: ಆ ದಯಾನಿಧಿಯು ನಿಮ್ಮ ಇಷ್ಟಾರ್ಥಗಳನ್ನು ನೆರವೇರಿಸಿ ಕೊಡುವನು" ಎಂದು ಸಾಧುಗಳು ಉಪದೇಶಿಸಿದರೆ ಆಗಲೂ ನಾವು ಆ ಭಗವಂತನನ್ನು "ದೇವ, ಇಂಥಿಂಥ ಇಷ್ಟಾರ್ಥವನ್ನು ಕೈಗೂಡಿಸು; ಇಂಥಿಂಥ ಅನಿಷ್ಟಗಳನ್ನು ನಿವಾರಿಸಿಕೊಡು" ಎಂದ ಅರ್ಜಿಹಾಕಿಕೊಳ್ಳುತ್ತಿರುವೆವು. ಇದೇ ನಮ್ಮ ಪ್ರಾರಂಭಸ್ಥಿತಿಯ ಅಧ್ಯಾತ್ಮಸಾಧನವು.

ಹೀಗೆ ಭಗವಂತನನ್ನು ಬೇಡಿಕೊಳ್ಳುವದೇನೂ ತಪ್ಪಲ್ಲ. ಏಕೆಂದರೆ ಅರ್ಥಾರ್ಥಿಗಳಿಗೆ ಇಷ್ಟವಾದದ್ದನ್ನು ಕೈಗೂಡಿಸುವದು, ಆರ್ತರಾದವರಿಗೆ ಅನಿಷ್ಟವಾದದ್ದನ್ನು ತೊಲಗಿಸುವದು– ಇವುಗಳು ಭಗವಂತನ ಅನುಗ್ರಹದಿಂದಲೇ ಆಗುವವು. ನಾವು ಲೌಕಿಕಪ್ರಯತ್ನಗಳಿಂದ ಇಷ್ಟಾನಿಷ್ಟಗಳ ಪ್ರಾಪ್ತಿಪರಿಹಾರಗಳನ್ನು ಮಾಡಿಕೊಂಡೆವೆಂದು ಹೇಳಿಕೊಳ್ಳುವಾಗಲೂ ಭಗವಂತನ ನಿಯಮದಂತೆಯೇ ಆತನ ಸಂಕಲ್ಪಕ್ಕೆ ಅನುಗುಣವಾಗಿಯೇ ಆಯಾ ಫಲಗಳು ನಮಗೆ ದೊರಕಿರುವವು. ಆದರೆ ಈ ಫಲಗಳೆಲ್ಲ ಮಾಯೆಯೇ. ನಮ್ಮ ರಾಗದ್ವೇಷಗಳಿಂದ ಆಗಿರುವ ಬೇಕುಬೇಡಗಳ ಸಂತೆಯಲ್ಲಿಯೇ ಈ ಫಲಗಳೂ ಆಗಿರುತ್ತವೆ. ನಾವು ಎಲ್ಲಿಯವರೆಗೆ ಈ ಮಾಯಾಬಜಾರಿನಲ್ಲಿ ವ್ಯಾಪಾರ ಮಾಡುತ್ತಿರುವೆವೋ ಅಲ್ಲಿಯವರೆಗೆ ನಮಗೆ ಪರಮಾರ್ಥವಾದ ಅಧ್ಯಾತ್ಮಸಾಧನೆಯ ಮರ್ಮವು ಸಿಕ್ಕಿರುವದೇ ಇಲ್ಲ. ಎಲ್ಲಿಯವರೆಗೆ ಪರಮಾತ್ಮನನ್ನು ಬಿಟ್ಟು ಮತ್ತೊಂದರ ಬಯಕೆಯಿಂದ ನಾವು ಅಡ್ಡಾಡುತ್ತಿರುವೆವೋ, ಅಲ್ಲಿಯವರೆಗೆ ಪರಮಾತ್ಮನ ಸಾಕ್ಷಾತ್ಕಾರವಾಗಿಲ್ಲವೆಂದು ಗೊಣಗಿಕೊಳ್ಳುವದಕ್ಕೆ ಕಾರಣವೇ ಇರುವದಿಲ್ಲ. ನಾವು ಪರಮಾತ್ಮನೇ ಬೇಕೆಂದು ಕೇಳಿಕೊಂಡಿರುವದೂ ಇಲ್ಲ; ಆತನು ನಮಗೆ ಮೈದೋರಿಕೊಂಡೂ ಇರುವದಿಲ್ಲ. ಇದರಲ್ಲಿ ಆಶ್ಚರ್ಯವೇನಿದೆ?

ಎಷ್ಟೋ ವರ್ಷಗಳಿಂದ ಭಗವಂತನ ಪ್ರಾರ್ಥನೆಯನ್ನು ಮಾಡಿಕೊಂಡು ಬಂದಿದ್ದರೂ, ಎಡೆಬಿಡದೆ ಅಧ್ಯಾತ್ಮಸಾಧನಗಳನ್ನು ಮಾಡಿಕೊಂಡು ಬಂದಿದ್ದರೂ, ಆತ್ಮಸಾಕ್ಷಾತ್ಕಾರ ವಾಗಿರುವದಿಲ್ಲವೇಕೆ?–ಎಂಬ ಪ್ರಶ್ನೆಗೆ ಈಗ ಉತ್ತರವು ದೊರೆಯುತ್ತದೆ. ನಾವು ಭಗವಂತನೇ ನಮಗೆ ಬೇಕೆಂದು ಹವಣಿಸಿ ಸಾಧನವನ್ನು ಮಾಡಿರುವದಿಲ್ಲ. ನಮಗೆ ಭಗವಂತನಿಗಾಗಿ ಭಗವಂತನು ಬೇಕಾಗಿರುವದಿಲ್ಲ; ಮಾಯೆಯ ಕೆಲವು ಪದಾರ್ಥಗಳಿಗಾಗಿ–ಕೆಲವು ಇಷ್ಟಾನಿಷ್ಟಗಳ ಪ್ರಾಪ್ತಿಪರಿಹಾರಗಳಿಗಾಗಿ–ಆತನನ್ನು ಬೇಡಿಕೊಂಡು ಬಂದಿರುತ್ತೇವೆ.

ಭಗವತ್ಪ್ರಾಪ್ತಿಯು ನಿಮಗೆ ಅವಶ್ಯವಾಗಿ ಆಗಬೇಕೆ? ಹಾಗಾದರೆ ಅನನ್ಯ ಪ್ರೇಮದಿಂದ ಭಗವಂತನನ್ನೇ ಧ್ಯಾನಿಸಿರಿ, ಆತನನ್ನೇ ಬೇಡಿಕೊಳ್ಳಿರಿ. ಅದರಿಂದ ನಿಮಗೆ ಆತನ ಸಾಕ್ಷಾತ್ಕಾರವೂ ಆಗುವದು, ನಿಮ್ಮ ಸಕಲಪುರುಷಾರ್ಥಗಳೂ ಕೈಗೂಡುವವು.

ಇಷ್ಟಾರ್ಥಗಳೆಂದು ನೀವು ಕರೆದುಕೊಳ್ಳುತ್ತಿರುವವು ನಿಜವಾಗಿ ಇಷ್ಟಾರ್ಥಗಳೇ ಅಲ್ಲದೆ ಇರಬಹುದು. ಆದ್ದರಿಂದ ಜೀವನದಲ್ಲಿ ಯಾವಯಾವ ಇಷ್ಟಾರ್ಥಗಳು ಬೇಕೋ ಅದನ್ನು ಅನುಗ್ರಹಿಸುವ ಭಾರವನ್ನು ಭಗವಂತನ ಮೇಲೆ ಹಾಕಿರಿ. ನೀವು ಮಾತ್ರ ಆತನ ಚಿಂತನೆಯಲ್ಲಿಯೇ ಕಾಲವನ್ನು ಕಳೆಯುವ ಪ್ರಯತ್ನವನ್ನು ಮಾಡಿರಿ. ನೀವು ಮಾಡುತ್ತಿರುವ ಅಧ್ಯಾತ್ಮಸಾಧನೆಗೆ ಯಾವದಾದರೂ ತಾತ್ಕಾಲಿಕ ಫಲಗಳು ಕಂಡರೆ ಹಿಗ್ಗಬೇಡಿರಿ; ಕಾಣದೆ ಮರೆಯಾದರೆ ಉತ್ಸಾಹಶೂನ್ಯರೂ ಆಗಬೇಡಿರಿ. "ನಾನು ಮುಟ್ಟಬೇಕಾಗಿರುವದು ಭಗವಂತನನ್ನೇ; ನಡುವೆ ಕಾಣುವ ಅಥವಾ ಕಾಣಧಿರುವ ಈ ಸಿದ್ಧಿಗಳನ್ನು ಕಟ್ಟಿಕೊಂಡು ಏನು ಮಾಡಲಿ?" ಎಂದುಕೊಳ್ಳುತ್ತಿರಿ. ಭಗವಂತನ ಚಿಂತನೆಯನ್ನು ಮಾಡುವ ಕ್ರಮವನ್ನೂ ಅದಕ್ಕೆ ಬೇಕಾಗುವ ಅಂಗಭೂತವಾದ ಸಾಧನಗಳನ್ನೂ ಸತ್ಪುರುಷರ ಸಂಗದಿಂದಲೇ ತಿಳಿದುಕೊಳ್ಳುವದಕ್ಕೆ ಯತ್ನಿಸಿರಿ. ಸತ್ಪುರುಷರ ಬೋಧೆಯಲ್ಲಿ ಹೊಸದೇನಿದೆ?–ಎಂದು ಕೇಳಬೇಡಿರಿ. ನಮಗೆ ಅಳವಡದೆ ಇರುವ, ಈ ಮಹಾತ್ಮರು ಸುಲಭವಾಗಿ ವಶಗೊಳಿಸಿಕೊಂಡಿರುವ, ಸಾಧನವು ಯಾವದು?–ಎಂಬುದನ್ನು ವಿಚಾರಮಾಡಿ ತಿಳಿದುಕೊಳ್ಳಿರಿ. ಹೀಗೆ ಬೇಸರವಿಲ್ಲದೆ, ಅವಸರಪಡದೆ, ಆದರದಿಂದ ಮಾಡುವ ಅಧ್ಯಾತ್ಮಸಾಧನವು ಯಾವ ಪ್ರತಿಬಂಧವೂ ಇಲ್ಲದೆ ಅವಶ್ಯವಾಗಿ ನೆರವೇರುವದು. ಭಗವಂತನ ಅನುಗ್ರಹದ ಆನಂದವು ಅವಶ್ಯವಾಗಿ ನಿಮಗೆ ಕೈವಶವಾಗುವದು.

**4. ವೇದಾಂತ ಸಂದೇಶಗಳು : ಸಂಪುಟ 3 ಅಧ್ಯಾತ್ಮ ಬೆಳಕು) :** 1923 ರಿಂದ 1974ರವರೆಗೂ ಕೆಲವೊಮ್ಮೆ ಪ್ರತಿತಿಂಗಳೂ ಮತ್ತು ಕೆಲವು ಒಂದೆರಡು ವರ್ಷಗಳ ಅಂತರದಲ್ಲಿ ಬರೆದು ಪ್ರಕಟಿಸಿದ್ದ 210 ಲೇಖನಗಳ ಸಂಗ್ರಹ. ಸ್ಥೂಲವಾಗಿ (1) ಅಧ್ಯಾತ್ಮವಿದ್ಯೆ (2) ಅಧ್ಯಾತ್ಮದ ಮೊದಲ ಸೋಪಾನ (3) ಅಧ್ಯಾತ್ಮ ಸಾಧನೆಗಳು (4) ಅಧ್ಯಾತ್ಮ ಪ್ರಕಾಶ (5) ಅಧ್ಯಾತ್ಮ ಚಿಂತನೆ ಮತ್ತು (6) ಅಧ್ಯಾತ್ಮ ಜ್ಞಾನ ಎಂಬ ಆರು ಅಧ್ಯಾಯಗಳಲ್ಲಿ ಲೇಖನಗಳನ್ನು ಅಳವಡಿಸಿದೆ. ವೇದಾಂತ ಆರಂಭದಲ್ಲಿರುವ ವರಿಗೂ ಮತ್ತು ಜಿಜ್ಞಾಸುಗಳಿಗೂ ಉಪಯುಕ್ತವಾದ ಗ್ರಂಥ.

**(1ನೆಯ ಮುದ್ರಣ 2010, ಡೆಮ್ಮಿ 1/8, ಪುಟ –356, ಬೆಲೆ ರೂ. 60)**

**5. ವೇದಾಂತ ಸಂದೇಶಗಳು : ಸಂಪುಟ 4 (ಅಧ್ಯಾತ್ಮ ಔನ್ನತ್ಯದೆಡೆಗೆ) :** 19,20, 22, 23 ಸಂಪುಟಗಳಲ್ಲಿ "**ಈ ತಿಂಗಳ ಸಂದೇಶಗಳು**" ಎಂಬ ಶೀರ್ಷಿಕೆಯಲ್ಲಿ ಕ್ರಮ ಕ್ರಮವಾಗಿ ಪ್ರಕಟಿಸಿದ್ದ 48 ಲೇಖನಗಳ ಸಂಗ್ರಹ. (1) ಮಾಯೆಯಿಂದ ಮಾಯಾತೀತ ನೆಡೆಗೆ (2) ಸತ್ಯಜ್ಞಾನಾನಂತನ ದರ್ಶನದದಾರಿ (3) ಅಧ್ಯಾತ್ಮ ಪ್ರಗತಿಯ ಮಾರ್ಗಗಳು (4) ಸಾಧನೆಗಳಿಂದ ಪರಮಾತ್ಮನ ಆನಂದ ಎಂಬ ನಾಲ್ಕು ಅಧ್ಯಾಯಗಳಲ್ಲಿ ಲೇಖನಗಳನ್ನು ಅಳವಡಿಸಲಾಗಿದೆ.

**(1ನೆಯ ಮುದ್ರಣ 2011, ಡೆಮ್ಮಿ 1/8, ಪುಟ–334, ಬೆಲೆ 60 ರೂ.)**

**6. ಮುಂದೆ ಬರಲಿರುವ 5ನೆಯ ಸಂಪುಟ : ಸಂಪುಟ 14 (ಜನವರಿ 1943– ಫೆಬ್ರವರಿ 1975) :** ರಿಂದ ಸಂ. 44ರವರೆಗೆ "**ಶಂಕರನ ಪತ್ರಗಳು**" ಎಂಬ ಶೀರ್ಷಿಕೆ ಯಲ್ಲಿ ಒಂದು ಮತ್ತು 2 ಪುಟಗಳಂತೆ ಪ್ರಶ್ನೋತ್ತರ ರೂಪದಲ್ಲಿ ಪ್ರಕಟಿಸಿದ್ದ 337 ಲೇಖನಗಳ ಸಂಗ್ರಹ. ಸುಮಾರು 600 ಪುಟಗಳು, 4 ಭಾಗಗಳಲ್ಲಿ ಪ್ರಕಾಶನವಾಗಲಿದೆ. ಬಹಳ ಉತ್ತಮ ಲೇಖನಗಳನ್ನೊಳಗೊಂಡಿರುವ ಉಪಯುಕ್ತವಾದ ಗ್ರಂಥ. **ಡಿಸೆಂಬರ್‌ನಲ್ಲಿ ಸದ್ಗುರುಗಳ ಜಯಂತಿ ಸಪ್ತಾಹದಲ್ಲಿ ಬಿಡುಗಡೆ.**

**ಮೇಲ್ಕಂಡ ಪುಸ್ತಕಗಳಲ್ಲದೆ ಇತರ ಪುಸ್ತಕಗಳು ಮತ್ತು ಸಿಡಿಗಳು (DVD-MP3 Format ನಲ್ಲಿ) ರಿಯಾಯಿತಿ ದರದಲ್ಲಿ ದೊರಕುತ್ತವೆ. ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ.**

**ಅಧ್ಯಾತ್ಮ ಪ್ರಕಾಶ ಕಾರ್ಯಾಲಯ**
ಎ.ಪಿ.ಕೆ. ರಸ್ತೆ, ತ್ಯಾಗರಾಜನಗರ 2ನೇ ಬ್ಲಾಕ್
ಬೆಂಗಳೂರು–560 028.
ದೂರವಾಣಿ : 2676 5548

**ಅಧ್ಯಾತ್ಮ ಪ್ರಕಾಶ ಕಾರ್ಯಾಲಯ**
ಹೊಳೆನರಸೀಪುರ–573211
ದೂರವಾಣಿ : 01875–273820
www.adhyatmaprakasha.org.



ಶ್ರೀ ಶ್ರೀಸಚ್ಚಿದಾನಂದೇಂದ್ರ ಸರಸ್ವತೀ ಸ್ವಾಮಿಗಳವರ ಜೀವನ ಮತ್ತು ಅವರ ಅಸಾಧಾರಣ ಶ್ರೇಷ್ಠ ಸಾಧನೆಯನ್ನು ಅವಲೋಕಿಸಿದಾಗ, ಅವರ ಜನ್ಮ ಮತ್ತು ಬಾಳು ಎಲ್ಲವೂ ವೇದಾಂತಾಧ್ಯಯನ ಮತ್ತು ವೇದಾಂತ ಪ್ರಸಾರಕ್ಕೇ ಮೀಸಲಾಗಿರಬೇಕೆಂಬುದು ಭಗವಂತನ ಇಚ್ಛೆ ಮತ್ತು ನಿಯಾಮಕವಾಗಿತ್ತೆಂದು ತೋರುತ್ತದೆ. ಇದೇನೂ ಉತ್ಪ್ರೇಕ್ಷೆಯಲ್ಲ, ಏಕೆಂದರೆ ಇನ್ನೂ ಅವರ ವಿದ್ಯಾರ್ಥಿದೆಶೆಯಲ್ಲಿಯೇ ತರಗತಿಯ ಸಂಸ್ಕೃತ ಪಾಠ ಪುಸ್ತಕವನ್ನು ಕೇಳಿದಾಗ ಅಂಗಡಿಯವನು ಕೊಟ್ಟಿದ್ದು "ಭಗವದ್ಗೀತಾ ಭಾಷ್ಯ" ("ಅತ್ಯಂತ ಅನಿರೀಕ್ಷಿತವಾದ ಘಟನೆಯಿಂದ ನನಗೆ ಅರಿವಿಲ್ಲದೆಯೇ ಭಗವದ್ಗೀತಾ ಭಾಷ್ಯದಲ್ಲಿ ಪ್ರವೇಶವಾಯಿತು"–ಶ್ರೀಗಳು,) ಮತ್ತೊಮ್ಮೆ ಅಗ್ಗದ ಸಣ್ಣ ಪುಸ್ತಕ ಕೋರಿದಾಗ ಕೈಗೆ ಬಂದದ್ದು "ವಿವೇಕ ಚೂಡಾಮಣಿ", ಸೆಂಟ್ರಲ್ ಕಾಲೇಜಿನ ಎಫ್ಎ ತರಗತಿಯಲ್ಲಿದ್ದಾಗ ಶ್ರೀ ಕೃಷ್ಣಸ್ವಾಮಿ ಅಯ್ಯರ್ ರವರ ಮನೆಯಲ್ಲಿ ಅವರಿಂದ ಕೆಲವು ವೇದಾಂತ ಪಾಠಗಳು ಹಾಗೂ ಸೂತಸಂಹಿತೆಯನ್ನು ಓದಲು ಅವರ ಪ್ರೋತ್ಸಾಹ,... ಹೀಗೆ ಪ್ರವೃತ್ತಿ, ಉತ್ಸುಕತೆ, ಕ್ರಿಯಾಪ್ರಯತ್ನ ಹರಿದದ್ದೇ ವೇದಾಂತ ಮಾರ್ಗದಲ್ಲಿ.

"ಸಾಮಾನ್ಯವಾಗಿ ಒಬ್ಬ ಮನುಷ್ಯನ ಜೀವಿತದಲ್ಲಿ ಸಂಭವಿಸಬಹುದಾದ ಸಾಧಾರಣ .... ಘಟನೆಗಳ ನಡುವೆ ಶ್ರೀ ಸುಬ್ಬರಾಯರು (ಶ್ರೀಗಳವರ ಪೂರ್ವಾಶ್ರಮದ ಹೆಸರು) ಸಾಧಿಸಿದ ಅಪೂರ್ವ ಸಿದ್ಧಿಗಳು ತೆರೆದು ನಿಲ್ಲುತ್ತವೆ. ಶ್ರೀ ಶ್ರೀ ಶಿವಾಭಿನವ ನೃಸಿಂಹ ಭಾರತೀ ಸ್ವಾಮಿಗಳಿಂದ ಶ್ರೀ ಶಾಂಕರ ಭಾಷ್ಯ, ಶಾಂತಿಪಾಠ, ವಿದ್ವದಗ್ರೇಸರರಾದ ಹಾನಗಲ್ಲು ವಿರೂಪಾಕ್ಷ ಶಾಸ್ತ್ರಿಗಳ (ಮಾರ್ಗದರ್ಶನ), ಕೃಷ್ಣಸ್ವಾಮಿ ಅಯ್ಯರ್, ಕುರ್ತುಕೋಟಿ ಮಹಾಭಾಗವತರು, ಹೊಸಕೆರೆ ಚಿದಂಬರಯ್ಯನವರು ಮುಂತಾದವರ ಸಹವಾಸ ಸುಬ್ಬರಾಯರಿಗೆ ದೇವದತ್ತವರಗಳಾಗಿ ಪರಿಣಮಿಸಿದವು... ಮನುಷ್ಯನಲ್ಲಿ ಪ್ರಬಲವಾದ ಉತ್ಸಾಹವೂ, ಕರ್ತೃತ್ವ ಶಕ್ತಿಯೂ ಇದ್ದಲ್ಲಿ ಆತನು ಯಾವ ಮಟ್ಟಕ್ಕೆ ಏರುತ್ತಾನೆ ಎಂಬುದಕ್ಕೆ ಶ್ರೀಗಳೇ ನಿದರ್ಶನ. ಕನ್ನಡ, ಇಂಗ್ಲೀಷ್, ಸಂಸ್ಕೃತ ಭಾಷೆಗಳಲ್ಲಿ ಅವರು ಗಳಿಸಿದ, ಬಳಸಿದ ಪ್ರೌಢಪಾಂಡಿತ್ಯ, ಶೈಲಿ ವಿಸ್ಮಯಕಾರಿಯಾದದ್ದು. ಶ್ರೀಗಳವರ ಅಧ್ಯಯನ ಆಳ, ಜನೋಪಯೋಗವಾಗಲೆಂಬ ಹೃದಯದ ಕಳಕಳಿ ಗಮನೀಯ.

ಅಧ್ಯಾತ್ಮ ಪ್ರಕಾಶ ಪತ್ರಿಕೆಯಲ್ಲಿ ಅವರು ಬರೆಯುತ್ತಿದ್ದ ಲೇಖನಗಳೂ ಗಂಭೀರವಾದವು, ಮತ್ತೆ ಮತ್ತೆ ಓದಬೇಕಾದವು. ಆ ಲೇಖನಗಳನ್ನು ಸಂಗ್ರಹಿಸಿ, ಪ್ರಕಟಿಸಿದರೆ ಜಿಜ್ಞಾಸುಗಳಿಗೆ ಮಹೋಪಕಾರವಾಗುತ್ತದೆ."– ಶ್ರೀ ಎನ್. ರಂಗನಾಥ ಶರ್ಮಾ (ಶ್ರೀಗಳವರ ಆತ್ಮಚರಿತ್ರೆಯ 2006 ಮುನ್ನುಡಿಯಲ್ಲಿ). ಪಂಡಿತರಾಗಿದ್ದ ಶೀ ಲಕ್ಷ್ಮೀನರಸಿಂಹ ಮೂರ್ತಿಯವರು ಸಂಗ್ರಹಿಸಿ ಪ್ರಕಟಿಸಿದ 15, 18 ಗ್ರಂಥಗಳು ಈ ಮೊದಲೇ ಪ್ರಕಟವಾಗಿವೆ. ಈಗಾಗಲೇ 4 ಸಂಪುಟಗಳು ಹೊರಬಂದಿವೆ. 5ನೇ ಸಂಪುಟ (337 ಲೇಖನಗಳ ಸಂಗ್ರಹ–600 ಪುಟ). ಶ್ರೀಘ್ರದಲ್ಲೇ ಹೊರಬರಲಿದೆ. ಇನ್ನೂ 3–4 ಸಂಪುಟಗಳ ಮುಂದುವರಿಕೆ ಪ್ರಯತ್ನ ನಡೆಯುತ್ತಿದೆ.

₹ 50/-